ಸದಾಚಾರ ಸಂಗ್ರಹ

ಭಾಗ — ೨

ಶ್ರೀಧರ ರಾಜಾರಾವ್

ಶ್ರೀಧರ್ ಗೋ. ಬಿನಾಥ ಅ
ಗ್ರಂಥದಾನ

ಮೈಸೂರು :
ಶ್ರೀ ಪಂಚಾಚಾರ್ಯ ಎಲಿಕ್ಟ್ರಿಕ್ ಪ್ರೆಸ್
೧೯೩೦

॥ ಶ್ರೀಃ ॥

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯನಮಃ.

ನರಸಿಹ್ಮೋಽಖಿಲಾಜ್ಞಾನಮತಧ್ವಾಂತದಿವಾಕರಃ ।
ಜಯತ್ಯಮಿತಸದ್ಜ್ಞಾನಸುಖಶಕ್ತಿಪಯೋನಿಧಿಃ ॥



ಸಭಾಸಾರಸಂಗ್ರಹ

(Volume II)

ಗೀತೋಪನ್ಯಾಸಗಳು (Part-1)

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯತ್ವಾದ್ಯನೇಕ ಗುಣಸಂಪನ್ನ
ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯರಾದ

ಶ್ರೀಮದುತ್ತರಾದಿಮಠದ ಶ್ರೀ ಶ್ರೀ ಪಾದಂಗಳವರ
ಮಹಾಸನ್ನಿಧಾನದಲ್ಲಿ

ಮೈಸೂರು ರಾಜಧಾನಿಯ ಸೀತಾವಿಲಾಸ ಛತ್ರದಲ್ಲಿ ನಡೆದ

ವೇದಾಂತವಿಮರ್ಶಿನೀ ಮಹಾಸಭೆಯಲ್ಲಿ

ಚರ್ಚಿಸಿದ ವಿಷಯಗಳ ಮುಖ್ಯ ಸಾರಾಂಶವು

EDITED AND PUBLISHED BY
H. SUBBA RAO, M.A.

ಮುನ್ನುಡಿಯು.

ಈ ಗ್ರಂಥದಲ್ಲಿರುವ ಪ್ರಮೇಯಗಳ ಪ್ರತಿಪಾದನೆಗೆ ಮಹಾಸಭೆಯಲ್ಲಿ ಶ್ರೀಪಾದಒಡೆಯರ ಸನ್ನಿಧಾನದಲ್ಲಿ ನಡೆದ ಚರ್ಚೆಯು ಬೀಜಭೂತವಾದುದು. ಕೆಲವು ವಿಷಯಗಳು ಸಭೆಯಲ್ಲಿಯೂ, ಕೆಲವು ವಿಷಯಗಳು ಚಾತುರ್ಮಾಸ್ಯದಲ್ಲಿ ಸಂಸ್ಥಾನದವರ ನಿವಾಸವಾದ ' ಚಿತ್ರರಂಜನ ' ದಲ್ಲಿ ವಿದ್ವಜ್ಜನಗೋಷ್ಠಿಯಲ್ಲಿಯೂ ಚರ್ಚಿಸಲ್ಪಟ್ಟಿರುವುವು. ಮತ್ತು ಕೆಲವು ಪ್ರಶ್ನೆಗಳು ಬೇರೆಬೇರೆ ತಾರೀಖುಗಳಲ್ಲಿ ಮಾಡಲ್ಪಟ್ಟಿರುವುವು. ವಿಭಿನ್ನದೇಶಕಾಲಗಳಲ್ಲಿ ಚರ್ಚಿಸಿದ ವಿಷಯಗಳು ಸಂಗತವಾಗುವಂತೆ ಪ್ರಕರಣೋಚಿತವಾಗಿ ಅಲ್ಲಿ ಅಲ್ಲಿ ನಿರೂಪಿತವಾಗಿರುವುವು. ಮತ್ತು ಕೆಲವು ವಿಷಯಗಳು ಸಭೆಯಲ್ಲಿ ಸಂಕ್ಷೇಪವಾಗಿ ಚರ್ಚಿಸಲ್ಪಟ್ಟಿದ್ದರೂ ಗ್ರಂಥದಲ್ಲಿ ವಿಸ್ತಾರವಾಗಿಯೇ ಉಪಪಾದಿಸಲ್ಪಟ್ಟಿರುವುವು. ಪ್ರಾಶ್ನಿಕರ ನಾಮನಿರ್ದೇಶವು ಉದ್ವೇಗಕರವಾಗಬಹುದೆಂದು ನಾನೇ ಸ್ವಂತವಾಗಿ ಶಂಕಿಸಿಕೊಂಡು ಹೆಸರುಗಳನ್ನು ಹೇಳುವುದನ್ನು ಬಿಟ್ಟು ಸಾಮಾನ್ಯವಾಗಿ ಉಪನ್ಯಾಸರೂಪದಿಂದಲೂ, ಕಠಿಣಸ್ಥಳಗಳಲ್ಲಿ ಪ್ರಶ್ನೋತ್ತರರೂಪದಿಂದಲೂ, ಶ್ರೀಪಾದಂಗಳವರ ಅಭಿಪ್ರಾಯಗಳನ್ನು ಓದುವವರ ಅನುಕೂಲವನ್ನನುಸರಿಸಿ—ನಾನು ತಿಳಿದುಕೊಂಡಂತೆ—ನಿರೂಪಿಸಿರುತ್ತೇನೆ. ಆದುದರಿಂದ ಕೆಲವು ವಿಷಯಗಳು ಸೀತಾವಿಲಾಸದಲ್ಲಿ ಚರ್ಚಿಸಲ್ಪಡಲಿಲ್ಲವೆಂದಾಗಲೀ, ಕೆಲವು ವಿಷಯಗಳು ಗ್ರಂಥದಲ್ಲಿ ನಮೂದಿಸಲ್ಪಟ್ಟಿರುವ ತಾರೀಖಿನಲ್ಲಿ ವಿಚಾರಿತವಾಗಲಿಲ್ಲವೆಂದಾಗಲೀ ಯಾವ ವಿಧವಾದ ಶಂಕೆಯನ್ನೂ ಹೊಂದಬೇಕಾದುದಿಲ್ಲ. ರಾಮದೇವರ ನಿವಾಸವು ಅಯೋಧ್ಯೆಯು, ಕೃಷ್ಣನ ವಸತಿಯು ವೈಕುಂಠವು. ಇದೇ ನ್ಯಾಯದಿಂದ ಶ್ರೀಪಾದಒಡೆಯರು ತತ್ವವಿಮರ್ಶಾರ್ಥವಾಗಿ ಕುಳಿತ ಸ್ಥಳವೇ ಮಹಾಸಭೆಯು. ಅವರು ಸಾಭಿಪ್ರಾಯವಾಗಿ ಮಾತಾಡಿದ ಮಾತುಗಳೇ ತತ್ವಗಳು. ಅವುಗಳೆಲ್ಲಾ ಪ್ರಾಯೇಣ ನನ್ನ ನಿರೂಪಣೆಗೆ ವಿಷಯಗಳು. ಈ ನ್ಯಾಯವನ್ನು ಅನುಸರಿಸಿಯೇ ಇನ್ನೂ ಅನೇಕ ಗ್ರಂಥಗಳನ್ನು ಮುಂದೆ ಬರೆಯಬೇಕೆಂದಿರುತ್ತೇನೆ. ಆದುದರಿಂದ ಮಹಾಪುರುಷರಾದ ಶ್ರೀ ಶ್ರೀಗಳವರು ಅಭಿಪ್ರಾಯಪುರಸ್ಸರವಾಗಿ ನಿರೂಪಿಸಿರುವ ತತ್ವವಿಷಯಗಳಿಂದಲೇ ಪೂರ್ಣವಾಗಿರುವುದರಿಂದ ಈ ಗ್ರಂಥವೂ, ಇನ್ನು ಮೇಲೆ ಇದೇ ನ್ಯಾಯವನ್ನವಲಂಬಿಸಿ ಬರೆಯಲ್ಪಡುವ ಇತರ ಗ್ರಂಥಗಳೂ ಸಹ, ವಿದ್ವಜ್ಜನಮನೋರಂಜಕ

ವಾಗಿ, ಸಜ್ಜನರಿಗೆ ಸಂಸಾರತಾರಕವಾದ ಶ್ರೀಕೃಷ್ಣನ ಬ್ರಹ್ಮವಿದ್ಯೆಯ ಯಥಾರ್ಥವಾದ ರಹಸ್ಯವನ್ನು ತಿಳಿದುಕೊಳ್ಳುವುದರಲ್ಲಿ ಸಹಾಯಕವಾಗಿರುತ್ತದೆ ಎಂದು ನಂಬಿರುತ್ತೇನೆ.

ಮೈಸೂರು,
ತಾ|| 24—9—30.

H. Subba Rao.

ವಿಷಯಾನುಕ್ರಮಣಿಕೆಯು.

ಅಧ್ಯಾಯ ವಿಷಯಗಳು ಪುಟ

ಅಧ್ಯಾಯ ಅಧ್ಯಾಯ ಪುಟ

|| ಶ್ರೀಃ ||

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣ ವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯನಮಃ.

ಶ್ರೀ ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತರಾದ

ಶ್ರೀಮದುತ್ತರಾದಿಮಠದ ಸಂಸ್ಥಾನದ ಶ್ರೀಪಾದಂಗಳವರ
ಮಹಾಸನ್ನಿಧಾನದಲ್ಲಿ
ಮೈಸೂರಿನಲ್ಲಿ ಸೀತಾವಿಲಾಸ ಛತ್ರದಲ್ಲಿ ನಡೆದ
ಶ್ರೀ ವೇದಾಂತವಿಮರ್ಶಿನೀ ಮಹಾಸಭೆಯಲ್ಲಿ ಚರ್ಚಿಸಿದ

ವಿಷಯಗಳ ಮುಖ್ಯ ಸಾರಾಂಶ.

I

18-19-20—7—1930 ರಲ್ಲಿ

ಪ್ರಾಶ್ನಿಕರು—ಮಹಾವಿದ್ವಾಂಸರು ಮತ್ತು ವಿದ್ಯಾರ್ಥಿಗಳು.

———

೧ **ಪ್ರಶ್ನೆ**—ಮಹಾಸ್ವಾಮಿ! ಮಧ್ವಮತದ ಸರ್ವೋತ್ತಮತ್ವವನ್ನು ಶ್ರೀಮದ್ಭಗವದ್ಗೀತೆಯ ಶ್ರೀಕೃಷ್ಣನ ವಾಕ್ಯಗಳ ಆಧಾರದಿಂದಲೇ ದಯಮಾಡಿ ಪ್ರದರ್ಶನೆ ಮಾಡಬೇಕು.

ಶ್ರೀ ಶ್ರೀಗಳವರು—ಓಂ! ನಮ್ಮ ಮತದ ಸರ್ವಸ್ವವನ್ನೂ ವ್ಯಾಸರಾಯರು ಒಂದು ಶ್ಲೋಕದಲ್ಲಿ ಸಂಗ್ರಹಿಸಿರುತ್ತಾರೆ.

ಶ್ರೀಮನ್ಮಧ್ವಮತೇಹರಿಃ ಪರತರಃ ।
ಸತ್ಯಂಜಗತ್ತತ್ವತೋಭಿನ್ನಾಜೀವಗಣಾಃ ।
ಹರೇರನುಚರಾನೀಚೋಚ್ಚಭಾವಂಗತಾಃ ।
ಮುಕ್ತಿರ್ನೈಜಸುಖಾನುಭೂತಿರಮಲಾ ।
ಭಕ್ತಿಶ್ಚತತ್ಸಾಧನಂಹ್ಯಕ್ಷಾದಿತ್ರಿತಯಂ ।
ಪ್ರಮಾಣಮಖಿಲಾಮ್ನಾಯೈಕವೇದ್ಯೋಹರಿಃ ॥

1. ಹರಿಸರ್ವೋತ್ತಮತ್ವವು, 2. ಜಗತ್ಸತ್ಯತ್ವವು; 3. ಪಾರಮಾರ್ಥಿಕ ಪಂಚಭೇದವು; 4. ಜೀವರುಗಳಿಗೆ ವಿಷ್ಣು ಭೃತ್ಯತ್ವವು; 5. ಜೀವರುಗಳಲ್ಲಿ ಪರಸ್ಪರ ತಾರತಮ್ಯವು; 6. ಸ್ವರೂಪಾನಂದಾಭಿವ್ಯಕ್ತಿರೂಪವಾದ ಮುಕ್ತಿಯು; 7. ಭಕ್ತಿಗೇ ಮೋಕ್ಷಸಾಧನತ್ವವು; 8. ಪ್ರತ್ಯಕ್ಷಾನುಮಾನಾಗಮಗಳಿಗೆ ಪ್ರಾಮಾಣ್ಯವು. 9. ಹರಿಗೆ ಸರ್ವವೇದ ಪ್ರತಿಪಾದ್ಯತ್ವವು; ಹೀಗೆ ಒಂಭತ್ತು ಪ್ರಮೇಯಗಳು ಮಧ್ವಮತದಲ್ಲಿ ಬಹು ಮುಖ್ಯವಾದುವುಗಳು. ಈ ಒಂಭತ್ತು ವಿಷಯಗಳನ್ನೂ ಒಂದೊಂದು ದಿನ ಒಂದೊಂದು ವಿಷಯದಂತೆ ಕ್ರಮವಾಗಿ ಉಪನ್ಯಾಸ ಮಾಡಿದರೆ **ಪ್ರಮೇಯನವಮಾಲಿಕೆಯೇ** ಆಗುವುದು. ಈ ದಿವಸ ವಿಷ್ಣು ಸರ್ವೋತ್ತಮತ್ವವನ್ನು ಶ್ರೀ ಕೃಷ್ಣನ ವಾಕ್ಯಗಳಿಂದಲೇ ಉಪಪಾದನೆಮಾಡಿ ತೋರಿಸುತ್ತೇವೆ. ತಥಾಹಿ—

ಭಗವದ್ಗೀತೆಯಲ್ಲಿ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡುವ ವಾಕ್ಯಗಳು ಎರಡು ವಿಧವಾಗಿರುತ್ತವೆ. ಕೆಲವು ವಾಕ್ಯಗಳಲ್ಲಿ ನಾನೇ ಸರ್ವೋತ್ತಮನು ಎಂದು ಶ್ರೀ ಕೃಷ್ಣನು ಸಾಕ್ಷಾತ್ತಾಗಿ ಹೇಳಿಕೊಂಡಿರುತ್ತಾನೆ. ಮತ್ತೆ ಕೆಲವು ವಾಕ್ಯಗಳಲ್ಲಿ ಸರ್ವೋತ್ತಮತ್ವ ಜ್ಞಾಪಕಗಳಾದ ಯುಕ್ತಿಗಳನ್ನು ಉಪನ್ಯಾಸ ಮಾಡಿರುತ್ತಾನೆ. ಇದೂ ಅಲ್ಲದೆ ಹನ್ನೊಂದನೆಯ ಅಧ್ಯಾಯದಲ್ಲಿ ವಿಷ್ಣುಸರ್ವೋತ್ತಮತ್ವದಲ್ಲಿ ಜ್ಞಾನಿಗಳ ಪ್ರತ್ಯಕ್ಷವೂ ಪ್ರಮಾಣವೆಂದು ತೋರಿಸುವುದಕ್ಕಾಗಿ ಭಗವದ್ಗೀತೆಯಲ್ಲಿ ಅರ್ಜುನನ ವಿಶ್ವರೂಪ ದರ್ಶನವು ಮತ್ತು ಅವನು ಮಾಡಿದ ಭಗವಂತನ ಸ್ತುತಿಪ್ರಕಾರವೂ ನಿರೂಪಣೆಮಾಡಲ್ಪಟ್ಟಿರುತ್ತವೆ.

೨ **ಪ್ರಶ್ನೆ**—ವಿಷ್ಣುವೇ ಸರ್ವೋತ್ತಮನೆಂದು ಬೋಧಿಸುವ ಸಾಕ್ಷಾತ್ ಶ್ರೀಕೃಷ್ಣನ ವಾಕ್ಯಗಳು ಯಾವುವು?

ಶ್ರೀ ಶ್ರೀಗಳವರು—ವಿಷ್ಣುವೇ ಶ್ರೀಕೃಷ್ಣನೆಂಬುದನ್ನು ನೀವು ಒಪ್ಪಿರುತ್ತೀರಿ. ಅಥವಾ "**ಹೃಷೀಕೇಶಂ** ತದಾ ವಾಕ್ಯಮಿದಮಾಹ"; "ಕಿಂನೋ ರಾಜ್ಯೇನ**ಗೋವಿಂದ**"; "ಕಾಪ್ರೀತಿಸ್ಸ್ಯಾಜ್ಜ**ನಾರ್ದನ**"; "ಧೃತಿಂನ ವಿಂದಾಮಿಶಮಂಚ **ವಿಷ್ಣೋ**" ಇತ್ಯಾದಿ ಅನೇಕ ವಾಕ್ಯಗಳಿಂದ ಕೃಷ್ಣನು ವಿಷ್ಣುವೇ ಎಂಬುದು ಸಿದ್ಧವಾಗುವುದು. ಇಂಥಾ ಕೃಷ್ಣನೇ ಸರ್ವೋತ್ತಮನೆಂಬುದು ಅನೇಕ ಗೀತಾವಾಕ್ಯಗಳಲ್ಲಿ ಸ್ಪಷ್ಟವಾಗಿರುವುದು.

1. ....**ಸರ್ವಲೋಕಮಹೇಶ್ವರಂ**........**ಜ್ಞಾತ್ವಾಮಾಂ ಶಾಂತಿಮೃಚ್ಛತಿ** [5. 29.]

ಅರ್ಥವು—ಚೇತನಾಚೇತನಾತ್ಮಕವಾದ **ಸರ್ವ ಜಗತ್ತಿಗೂ ಒಡೆಯನಾದ** ನನ್ನನ್ನು ಧ್ಯಾನಮಾಡಿ ಮುಕ್ತಿಯನ್ನು ಹೊಂದುತ್ತಾನೆ.

2. **ಭೂಮಿರಾಪೋಽನಲೋವಾಯುಃ ಖಂಮನೋಬುದ್ಧಿರೇವಚ ।**
ಅಹಂಕಾರಇತೀಯಂಮೇ ಭಿನ್ನಾಪ್ರಕೃತಿರಷ್ಟಧಾ ।
ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿಮೇಪರಾಂ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್।
ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂಕೃತ್ಸ್ನಸ್ಯಜಗತಃ ಪ್ರಭವಃ ಪ್ರಲಯಸ್ತಥಾ ।
ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿಧನಂ ಜಯ ।"—[7. 4-7.]

ಇದರ ತಾತ್ಪರ್ಯವು—ಪೃಥಿವಿಯು, ಜಲವು, ಅಗ್ನಿಯು, ವಾಯುವು, ಆಕಾಶವು, ಮನಸ್ತತ್ವವು, ಬುದ್ಧಿತತ್ವವು, (ಮಹತ್ತತ್ವದಿಂದ ಸಹಿತವಾದ) ಅಹಂಕಾರತತ್ವವು ಈ ಪ್ರಕಾರ **ನನ್ನ ಅಧೀನವಾದ ಪ್ರಕೃತಿಯು** ಎಂಟು ಪ್ರಕಾರವಾಗಿರುತ್ತದೆ. ಈ ಜಡಪ್ರಕೃತಿಯು ಅಧಮವು. ಇವುಗಳಿಂದ ಭಿನ್ನಳಾದ ಯಾವ ದೇವಿಯಿಂದ ಈ ಚರಾಚರ ಜಗತ್ತು ಧರಿಸಲ್ಪಡುವುದೋ ಅಂಥಾ ಸರ್ವ ದೇಹಿಗಳ ಪ್ರಾಣಧಾರಣೆಯನ್ನು ಮಾಡಿ ನಿತ್ಯಳಾಗಿರುವ ಮಹಾಲಕ್ಷ್ಮಿಯನ್ನು ಉತ್ತಮಳನ್ನಾಗಿಯೂ **ನನ್ನ ಅಧೀನಳನ್ನಾಗಿಯೂ** ತಿಳಿ. ಉತ್ಪನ್ನರಾದ ಸರ್ವ ಪ್ರಾಣಿಗಳೂ ಈ ಪೂರ್ವೋಕ್ತ ನನ್ನ ಅಧೀನವಾದ ಚೇತನಾಚೇತನ ಪ್ರಕೃತಿಗಳಿಂದ (ಯಥಾಯೋಗ್ಯವಾದ) ಉತ್ಪತ್ತಿಯುಳ್ಳವುಗಳೆಂದು ನಿಶ್ಚಯವಾಗಿ ತಿಳಿಯುವವನಾಗು. ಸಕಲ ಪ್ರಪಂಚಕ್ಕೂ ನಾನು ಸೃಷ್ಟಿಮಾಡುವವನು ಮತ್ತು ಸಂಹಾರಮಾಡುವವನು. **ಎಲೈ ಧನಂಜಯನೇ! ನನಗಿಂತ ಬೇರೆ ಸರ್ವೋತ್ತಮ ವಸ್ತುವು ಯಾವುದೂ ಇಲ್ಲ.**

ಈ ವಾಕ್ಯದಲ್ಲಿ ಶ್ರೀ ಕೃಷ್ಣನು ತನ್ನ ಅಧೀನವಾದ ಚೇತನಾಚೇತನಾತ್ಮಕವಾದ ಉಭಯ ವಿಧ ಪ್ರಕೃತಿಗಳಿಂದಲೇ ಸರ್ವ ಜಗದುತ್ಪತ್ತಿಯಾಗುವುದು ಮತ್ತು ತಾನೇ ಜಗತ್ತಿಗೆ ಸೃಷ್ಟಿಸಂಹಾರಗಳನ್ನು ಮಾಡುವವನೆಂದು ಯುಕ್ತಿಗಳಿಂದ ತನ್ನ ಉತ್ತಮತ್ವವನ್ನು ಸ್ಥಾಪಿಸಿ ತನಗಿಂತ ಉತ್ತಮ ವಸ್ತುವು ಯಾವುದೂ ಇಲ್ಲವೆಂದು ಘಂಟಾಘೋಷವಾಗಿ ನುಡಿದಿರುತ್ತಾನೆ.

3. **ಪರಂಭಾವಮಜಾನಂತಃ ಮಮಾವ್ಯಯಮನುತ್ತಮಂ**—[7-24.]

ಅರ್ಥವು—(ಅಜ್ಞಾನಿಗಳು) ನನ್ನ ನಾಶರಹಿತನಾದ ಉತ್ಪತ್ತಿನಾಶರಹಿತನಾದ (ಬೇರೆ ಉತ್ತಮವಸ್ತುವಿನಿಂದ ರಹಿತನಾದ) ಪರಿಪೂರ್ಣನಾದ ಇತರ ವಿಲಕ್ಷಣನಾದ ನನ್ನ ಯಥಾರ್ಥಸ್ವರೂಪವನ್ನು ತಿಳಿಯಲಾರರು.

4. **ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ।**
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ ॥

[9. 11.]

ಇದರ ತಾತ್ಪರ್ಯವು—ಮೂಢರು ಮನುಷ್ಯದೇಹಕ್ಕೆ ಸದೃಶನಾದ ದೇಹವನ್ನು ತಾಳಿರುವ ನನ್ನನ್ನು ನೋಡಿ ನಾನೂ ಒಬ್ಬ ಮನುಷ್ಯನೆಂದು ಭ್ರಮಿಸಿ, ನಿತ್ಯನಾದ ಗುಣಪರಿಪೂರ್ಣನಾದ ಅತ್ಯುತ್ತಮನಾದ ನನ್ನ ಯಥಾರ್ಥ ಸ್ವರೂಪವನ್ನು ತಿಳಿಯಲಾರದೆ ನನ್ನನ್ನು ಅವಮಾನ ಮಾಡುತ್ತಾರೆ.

5. **ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।**
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಂ ।
ಆಹುಸ್ತ್ವಾಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ ।
ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ ॥

—(10. 12—14.)

ಭೂತಭಾವನ ಭೂತೇಶ ದೇವದೇವ ಜಗತ್ಪತೇ ॥ (10. 15.)

ತಾತ್ಪರ್ಯವು—ಅರ್ಜುನನು ಸ್ತುತಿಸುತ್ತಾನೆ—ಹೇ ಕೇಶವ! ನೀನೇ ಪರಬ್ರಹ್ಮನು (ಸರ್ವೋತ್ತಮನಾದ ಪೂರ್ಣವಸ್ತುವು.) ಅತ್ಯುತ್ತಮನಾದ ಆಶ್ರಯನು; ಪರಮಪವಿತ್ರನು; ಸರ್ವೋತ್ತಮನು. ಎಲ್ಲಾ ಋಷಿಗಳೂ ದೇವರ್ಷಿಗಳಾದ ನಾರದರೂ, ಅಸಿತರೂ, ದೇವಲರೂ ಮತ್ತು ವೇದವ್ಯಾಸರೂ ಕೂಡ ನಿನ್ನನ್ನು ಪೂರ್ಣ ಷಡ್ಗುಣವುಳ್ಳವನು, ನಿರ್ವಿಕಾರನು, ಲೋಕವಿಲಕ್ಷಣನು, ಆದಿದೇವನು, ಅಜನು, ವಿಭುವು ಎಂದು ಹೇಳುತ್ತಾರೆ. ನೀನು ನನಗೆ ಉಪದೇಶಿಸುವ ನಿನ್ನ ಮಾಹಾತ್ಮ್ಯವು ಎಲ್ಲಾ ಸತ್ಯವಾದುದೇ ಎಂದು ತಿಳಿದಿರುತ್ತೇನೆ..... ಹೇ ಜಗತ್ತಿನಲ್ಲಿರುವ ಸರ್ವಪ್ರಾಣಿಗಳ ಉತ್ಪಾದಕನೇ! ಹೇ ಭೂತನಿಯಾಮಕ! ಹೇ ದೇವತೆಗಳಿಗೂ ದೇವನೇ! ಜಗತ್ಪತೇ!

ಈ ವಾಕ್ಯಗಳಲ್ಲಿ ಅರ್ಜುನನು ಕೃಷ್ಣನನ್ನು **ಪರಬ್ರಹ್ಮ**ನೆಂದು ಕರೆದು ತನ್ನ ಅಭಿಪ್ರಾಯವು ಸರ್ವಮಹರ್ಷಿಗಳಿಗೂ ವೇದಾಂತ ಸೂತ್ರಕರ್ತರಾದ ವೇದವ್ಯಾಸರಿಗೂ ಸಮ್ಮತವಾದುದೆಂದು ಯುಕ್ತಿಯನ್ನೂ ನಿರೂಪಿಸಿರುತ್ತಾನೆ.

ಹೀಗೆ ಶ್ರೀ ಕೃಷ್ಣನು ಹನ್ನೊಂದನೆಯ ಅಧ್ಯಾಯದವರೆಗೆ ವಕ್ಷ್ಯಮಾಣ ಅನೇಕ ಯುಕ್ತಿಗಳನ್ನೂ ಪ್ರದರ್ಶನೆಮಾಡಿ ನಾಲ್ಕೈದು ವೇಳೆ ಕಂಠತಃ ನಾನೇ ಸರ್ವೋತ್ತಮನೆಂದು ಶಿಷ್ಯನಾದ ಅರ್ಜುನನಿಗೆ ಬೋಧಿಸಿ ತನ್ನಿಂದ ಉಪದಿಷ್ಟನಾದ ತನ್ನ ಉತ್ತಮಸ್ವರೂಪವನ್ನು ತಿಳಿಯುವದಕ್ಕೆ ಸಾಧಕವಾದ ದಿವ್ಯದೃಷ್ಟಿಯನ್ನೂ ಕೊಟ್ಟಿರುತ್ತಾನೆ. ದಿವ್ಯಚಕ್ಷುಸ್ಸಿನಿಂದ ಪರಬ್ರಹ್ಮನ ಸಾಕ್ಷಾತ್ಕಾರವನ್ನು ಹೊಂದಿರುವ ಬ್ರಹ್ಮಜ್ಞಾನಿಯಾದ ಅರ್ಜುನನೂ ಸ್ಪಷ್ಟವಾಗಿ ವಿಷ್ಣು ಸರ್ವೋತ್ತಮತ್ವವನ್ನೇ ಉದ್ಘೋಷಿಸಿರುತ್ತಾನೆ. ಜ್ಞಾನಿಚಕ್ಷುಸ್ಸಿಗೆ ವಿಷಯವಾದುದರಿಂದ ಈ ಸರ್ವೋತ್ತಮತ್ವವು ಅತ್ಯಂತ ಪಾರಮಾರ್ಥಿಕವೆಂದು ಹೇಳಬೇಕು.

6. **ಪಿತಾಸಿಲೋಕಸ್ಯ ಚರಾಚರಸ್ಯ ತ್ವಮಸ್ಯಪೂಜ್ಯಶ್ಚ ಗುರುರ್ಗರೀಯಾನ್ |**
ನತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋಲೋಕತ್ರಯೇಽಪ್ಯಪ್ರತಿಮಪ್ರಭಾವ ||. (11. 43.)

ಅರ್ಥವು :—ನೀನು ಈ ಸ್ಥಾವರ ಜಂಗಮಾತ್ಮಕವಾದ ಪ್ರಪಂಚಕ್ಕೆ ತಂದೆಯಾಗಿರುತ್ತೀಯೆ. ಮತ್ತು ಪೂಜ್ಯನೂ, ಗುರುವೂ, ಶ್ರೇಷ್ಠರಿಗಿಂತಲೂ ಶ್ರೇಷ್ಠನೂ ಆಗಿರುತ್ತೀಯೆ. ಅಸದೃಶವಾದ ಪ್ರಭಾವವುಳ್ಳ ಎಲೈ ಸ್ವಾಮಿಯೇ! ನಿನಗೆ ಸಮಾನನು ಮೂರು ಲೋಕಗಳಲ್ಲಿ ಎಲ್ಲಿಯೂ ಇಲ್ಲ; ಇನ್ನು ನಿನಗಿಂತಲೂ ಅಧಿಕನಾದವನು ಎಲ್ಲಿಂದ ಬಂದಾನು ?

7. **ಮತ್ಕರ್ಮಕೃನ್ಮತ್ಪರಮಃ....ಯಃಸಮಾಮೇತಿಪಾಂಡವ |**
(11. 43.)

ಅರ್ಥವು :—ಅರ್ಜುನ! ನನ್ನ ಪ್ರೀತ್ಯರ್ಥವಾಗಿ ವಿಹಿತಕರ್ಮಗಳನ್ನು ಮಾಡುವವನಾಗಿ ನಾನೇ ಸರ್ವೋತ್ತಮನೆಂಬ ಜ್ಞಾನವುಳ್ಳವನು.......ನನ್ನನ್ನು ಹೊಂದುತ್ತಾನೆ.

8. **ಶ್ರದ್ದಧಾನಾಮತ್ಪರಮಾಭಕ್ತಾಸ್ತೇಽತೀವಮೇಪ್ರಿಯಾಃ |**
—(12. 20.)

ಅರ್ಥವು :—ಆಸ್ತಿಕ್ಯಬುದ್ಧಿಯುಳ್ಳವರಾಗಿ ನಾನೇ (ಕೃಷ್ಣನೇ) ಸರ್ವೋತ್ತಮನೆಂಬ ಜ್ಞಾನವುಳ್ಳ ಭಕ್ತರು ನನಗೆ ಅತ್ಯಂತ ಪ್ರಿಯರು.

9. **ದ್ವಾವಿಮೌಪುರುಷೌ ಲೋಕೇಕ್ಷರಶ್ಚಾಕ್ಷರ ಏವ ಚ |**
ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ |
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ |

ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ।
ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ।
ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಂ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ।
ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ।
ಏತದ್ಬುದ್ಧ್ವಾ ಬುದ್ಧಿಮಾನ್ಸ್ಯಾತ್ ಕೃತಕೃತ್ಯಶ್ಚ ಭಾರತ ॥

—(15. 16-20.)

ಇದರ ತಾತ್ಪರ್ಯವು :—ಪ್ರಪಂಚದಲ್ಲಿ ಕ್ಷರವೆಂತಲೂ ಅಕ್ಷರವೆಂತಲೂ ಎರಡು ವಿಧವಾದ ಪ್ರಮಾಣಪ್ರಸಿದ್ಧರಾದ ಚೇತನರುಂಟು. ಬ್ರಹ್ಮಾದಿ ಸರ್ವ ಜೀವರಾಶಿಯೂ (ಶರೀರನಾಶವುಳ್ಳವರಾದ ಕಾರಣ) ಕ್ಷರಪುರುಷರೆನ್ನಿಸುವರು; (ನಿರ್ವಿಕಾರಳಾದುದರಿಂದ) ಶುದ್ಧಸ್ವರೂಪಳಾದ ಲಕ್ಷ್ಮೀದೇವಿಯು (ದೇಹನಾಶ ರಹಿತಳಾದುದರಿಂದ) ಅಕ್ಷರ ಪುರುಷನೆನ್ನಿಸುತ್ತಾಳೆ. ಉತ್ತಮ ಪುರುಷನಾದರೋ ಪೂರ್ವೋಕ್ತ ಕ್ಷರಾಕ್ಷರ ಪುರುಷರಿಗಿಂತ ಭಿನ್ನನು; ಆದುದರಿಂದಲೇ ಪರಮಾತ್ಮನೆಂದು (ಪರಮ-ಉತ್ತಮ, ಆತ್ಮ-ಚೇತನನು) ಚೇತನಶ್ರೇಷ್ಠನಾದ ನಾನು ಶ್ರುತ್ಯಾದಿ ಸ್ಮೃತಿಗಳಲ್ಲಿ ಪ್ರತಿಪಾದಿತನಾಗಿರುವೆನು. (ಪರಮಾತ್ಮನು ಪುರುಷೋತ್ತಮನೆಂಬಲ್ಲಿ ಯುಕ್ತಿಯನ್ನು ಕೂಡ ಹೇಳುತ್ತಾನೆ) ಪುರುಷೋತ್ತಮನು ಮೂರು ಲೋಕವನ್ನೂ ಪ್ರವೇಶಿಸಿ ಧಾರಣವನ್ನೂ ಪಾಲನವನ್ನೂ ಮಾಡುತ್ತಾನೆ. ಲೋಕತ್ರಯಗಳು ನಾಶಹೊಂದಿದರೂ ತಾನು ನಾಶಹೊಂದುವುದಿಲ್ಲವಾದುದರಿಂದ ಅವನು ಅವ್ಯಯನು. ತಾನು ಪ್ರವೇಶಮಾಡಿರುವ ಜಗತ್ತು ನಾಶಹೊಂದಿದರೂ ತನಗೆ ನಾಶವು ಇಲ್ಲದಿರುವುದು ಹೇಗೆಂದರೆ "ಈಶ್ವರಃ" ನಿಯಂತೃಶಕ್ತಿಯುಳ್ಳವನು. (ಆ ಉತ್ತಮ ಪುರುಷನು ನಾನೇ ಎಂದು ಶ್ರೀ ಕೃಷ್ಣನು ಹೇಳುತ್ತಾನೆ) ಯಾವ ಕಾರಣದಿಂದ ನಾನು ಕ್ಷರಪುರುಷ ಸಮೂಹವನ್ನು ಮೀರಿ ಅದಕ್ಕಿಂತ ಅಧಿಕನಾಗಿ ಇದ್ದೇನೆಯೋ ಮತ್ತು ಅಕ್ಷರಳಾದ ಲಕ್ಷ್ಮಿಗಿಂತಲೂ ಉತ್ತಮನೋ ಆ ಕಾರಣದಿಂದಲೇ ಭಾರತಾದಿ ಪೌರುಷೇಯ ಗ್ರಂಥಗಳಲ್ಲಿಯೂ ಮತ್ತು ವೇದದಲ್ಲಿಯೂ ನಾನೇ ಪುರುಷೋತ್ತಮನೆಂದು ಪ್ರಸಿದ್ಧನಾಗಿರುವೆನು. ಎಲೈ ಭರತಕುಲೋತ್ಪನ್ನನಾದ ಅರ್ಜುನನೇ! ಈ ಪ್ರಕಾರ (ಶ್ರೀ ಕೃಷ್ಣನು ಕ್ಷರಾಕ್ಷರ ಪುರುಷರಿಗಿಂತ ಉತ್ತಮನು. ವೇದಾದಿಗಳಲ್ಲಿ ಈ ರೀತಿ ಪ್ರತಿಪಾದಿತನು ಎಂಬುದಾಗಿ) ಯಾವ ಅಧಿಕಾರಿಯು **ಅಸಮ್ಮೂಢಃ** ಜಾನಾತಿ ಪುರು

1. **ಪಶ್ಯಾಮಿದೇವಾಂಸ್ತವ ದೇವದೇಹೇ ಸರ್ವಾಂ ಸ್ತಥಾಭೂತವಿಶೇಶ ಸಂಘಾರ್ |**
ಬ್ರಹ್ಮಾಣಮೀಶಂಕಮಲಾಸನಸ್ಥಂ ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾರ್ ||—(11. 15.)

ಅರ್ಥವು :—ಎಲೈ ಸ್ವಾಮಿಯೇ! ನಿನ್ನ ದೇಹದಲ್ಲಿ ಸಮಸ್ತ ದೇವತೆಗಳನ್ನೂ ಮತ್ತು ಸಮಸ್ತ ಪ್ರಾಣಿವಿಶೇಷಗಳ ಸಮೂಹಗಳನ್ನೂ, ಕಮಲಾಸನದಲ್ಲಿರುವ **ಬ್ರಹ್ಮದೇವರನ್ನೂ,** ಬ್ರಹ್ಮದೇವರ ತೊಡೆಯ ಮೇಲೆ ಕುಳಿತಿರುವ **ರುದ್ರದೇವರನ್ನೂ,** ಸಮಸ್ತ ಋಷಿಗಳನ್ನೂ, ಅದ್ಭುತವಾದ ಸರ್ಪಗಳನ್ನೂ ನೋಡುತ್ತೇನೆ. ಅಪರಿಚ್ಛಿನ್ನವಾದ ಭಗವಂತನ ರೂಪದ ಏಕದೇಶದಲ್ಲಿ ಅವನನ್ನು ಆಶ್ರಯಿಸಿಕೊಂಡು ಬ್ರಹ್ಮ ರುದ್ರರುಗಳು ಇರುತ್ತಾರೆಂದು ತಾತ್ಪರ್ಯವು.

2. **ರುದ್ರಾದಿತ್ಯಾವಸವೋಯೇ ಚ ಸಾಧ್ಯಾವಿಶ್ವೇಶ್ವಿನೌಮರು ತಶ್ಚೋಷ್ಮಪಾಶ್ಚ |**
ಗಂಧರ್ವಯಕ್ಷಾಸುರ ಸಿದ್ಧಸಂಘಾವೀಕ್ಷಂತೇತ್ವಾಂ ವಿಸ್ಮಿತಾ ಶ್ಚೈವಸರ್ವೇ||—(11. 22.)

ಅರ್ಥವು :—**ಏಕಾದಶರುದ್ರರೂ,** ದ್ವಾದಶಾದಿತ್ಯರೂ, ಅಷ್ಟವಸುಗಳೂ, ಸಾಧ್ಯರೂ, ವಿಶ್ವೇದೇವತೆಗಳೂ, ಅಶ್ವಿನೀದೇವತೆಗಳೂ, ನಲವತ್ತೊಂಭತ್ತು ಜನ ಮರುತ್ತುಗಳೂ, ಪಿತೃದೇವತೆಗಳೂ, ಗಂಧರ್ವರು, ಯಕ್ಷರು, ಅಸುರರು, ಸಿದ್ಧರು ಇವರ ಸಮೂಹವೂ ಇವರೇ ಮೊದಲಾದ ಸರ್ವರೂ ಆಶ್ಚರ್ಯಭರಿತರಾಗಿ ನಿನ್ನನ್ನು ನೋಡುತ್ತಾರೆ.

2. **ಕಸ್ಮಾಚ್ಚತೇ ನ ನಮೇರರ್ ಮಹಾತ್ಮರ್ ಗರೀಯಸೇ ಬ್ರಹ್ಮ ಣೋಪ್ಯಾದಿಕರ್ತ್ರೇ ||**—(11-37)

ಎಲೈ ಪರಿಪೂರ್ಣಸ್ವಾಮಿಯೇ! ಗುರುಶ್ರೇಷ್ಠನಾದ ಲೋಕಕರ್ತನಾದ **ಚತುರ್ಮುಖಬ್ರಹ್ಮದೇವರಿಗೂ ಸೃಷ್ಟಿಕರ್ತನಾದ ನಿನಗೆ** (ಸಕಲ ಲೋಕದವರೂ) ಏತಕ್ಕೆ ನಮಸ್ಕಾರಮಾಡದೆ ಇದ್ದಾರು? ಮಾಡಿಯೇ ಮಾಡುತ್ತಾರೆಂದು ಭಾವವು.

4. **ಬ್ರಹ್ಮಣೋಹಿ ಪ್ರತಿಷ್ಠಾಹ ಮಮೃತಸ್ಯಾ ವ್ಯಯಸ್ಯಚ |**
ಶಾಶ್ವತಸ್ಯ ಚಧರ್ಮಸ್ಯಸುಖಸ್ಯೈಕಾಂತಿಕಸ್ಯಚ ||—(14. 27)

ನಾನು **ಮಹಾಲಕ್ಷ್ಮಿಗೂ,** (ಬ್ರಹ್ಮದೇವರಿಗೂ) ನಾಶರಹಿತವಾದ ಮುಕ್ತವರ್ಗಕ್ಕೂ, ಅಕ್ಷಯಫಲಪ್ರದವಾದ ನಿಷ್ಕಾಮಧರ್ಮಕ್ಕೂ, ಆತ್ಯಂತಿಕ

ವಾದ (ಅತ್ಯುತ್ತಮವಾದ) ದುಃಖಸಂಪರ್ಕರಹಿತವಾದ ಮುಕ್ತಿಸುಖಕ್ಕೂ ಸ್ಥಿತಿಕಾರಣನು.

5. **ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂವಿದ್ಧಿಮೇಪರಾಂ |**
ಜೀವಭೂತಾಂ ಮಹಾಬಾಹೋ....||—(7-5)

ಅರ್ಥವು :—ಜಡಪ್ರಕೃತಿಗಿಂದ ಭಿನ್ನಳಾಗಿ ಸರ್ವದೇಹಿಗಳ ಪ್ರಾಣ ಧಾರಣೆಗೆ ಕಾರಣಳಾದ ಚೇತನ ಪ್ರಕೃತಿಯನ್ನು (ಲಕ್ಷ್ಮೀದೇವಿಯನ್ನು) (ಚೇತನಾಚೇತನ ಸರ್ವ ಜಗತ್ತಿಗಿಂತಲೂ) ಉತ್ತಮಳನ್ನಾಗಿಯೂ ನನ್ನ ಅಧೀನಳನ್ನಾಗಿಯೂ ತಿಳಿ. ಈ ವಾಕ್ಯಗಳಿಂದ ಲಕ್ಷ್ಮಿ ಬ್ರಹ್ಮರುದ್ರಾದಿಗಳು ವಿಷ್ಣುವಿನ ಅಧೀನರೇ ಹೊರತು ಸರ್ವೋತ್ತಮರಲ್ಲವೆಂದು ಸಿದ್ಧವಾಗುವುದು.

೪. **ಪ್ರಶ್ನೆ**—ವೇದಾರ್ಥ ನಿರ್ಣಯಕವಾದ ಬ್ರಹ್ಮಸೂತ್ರದಲ್ಲಿ ವಿಷ್ಣುವು ಪರಬ್ರಹ್ಮನು ಅಂದರೆ ಸರ್ವೋತ್ತಮ ವಸ್ತುವು ಎಂಬುದನ್ನು ಯಾವ ಯಾವ ಯುಕ್ತಿಗಳಿಂದ ವೇದಾಂತ ಸೂತ್ರಕಾರರಾದ ವೇದವ್ಯಾಸರು ತೋರಿಸಿರುತ್ತಾರೆ? ಭಗವದ್ಗೀತೆಯಲ್ಲಿ ವಿಷ್ಣು ಸರ್ವೋತ್ತಮತ್ವವು ಅದೇ ಯುಕ್ತಿಗಳಿಂದ ಸ್ಥಾಪಿತವಾಗಿದ್ದರೆ ಬ್ರಹ್ಮಸೂತ್ರಗಳಿಗೂ ಕೃಷ್ಣನ ಮಾತುಗಳಿಗೂ ಏಕವಾಕ್ಯತೆಯು ಬರುವುದು

ಉತ್ತರ—ಕಂಠತಃ ಅನೇಕ ಯುಕ್ತಿಗಳಿಂದಲೂ ಸೂಚಿತವಾದ ಅನಂತ ಯುಕ್ತಿಗಳಿಂದಲೂ ವಿಷ್ಣುವಿಗೆ ಬ್ರಹ್ಮತ್ವವು (ಸರ್ವೋತ್ತಮತ್ವವು) ವೇದಾಂತ ಸೂತ್ರಗಳಲ್ಲಿ ನಿರ್ಣೀತವಾಗಿದೆ. ಮುಖ್ಯವಾದ ಯುಕ್ತಿಗಳು ಉದಾಹರಿಸಲ್ಪಡುವುವು. ಪೂರ್ಣಾನಂದತ್ವ, ಸ್ವಾತಂತ್ರ್ಯ, ಸರ್ವಜ್ಞತ್ವ, ಜನ್ಮ (ಸೃಷ್ಟಿ), ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಇವುಗಳ ಕರ್ತೃತ್ವ ; ಅಂತರ್ಬಹಿರ್ವ್ಯಾಪ್ತತ್ವ ; ಪುರುಷಸೂಕ್ತ ಪ್ರತಿಪಾದ್ಯತ್ವ ; ನಿಖಿಲವೇದ ವೇದಾಂತ ಪ್ರತಿಪಾದ್ಯತ್ವ ; ಪ್ರಣವಪ್ರತಿಪಾದ್ಯತ್ವ ; ಸತ್ವಾದಿಗುಣರಾಹಿತ್ಯ ; ಕರ್ಮಬಂಧ ರಾಹಿತ್ಯ ; ಸರ್ವಸತ್ಕರ್ಮಫಲಭೋಕ್ತೃತ್ವ ; ಸರ್ವತ್ರ ಸನುತ್ವ ; ಪ್ರತ್ಯೇಕಂ ಸರ್ವೇಂದ್ರಿಯಕಾರ್ಯಕಾರಿವಿಲಕ್ಷಣೇಂದ್ರಿಯವತ್ವ ; ಮುಕ್ತಿಹೇತುಭೂತಜ್ಞಾನ ವಿಷಯತ್ವ ; ಪರಮಾಕ್ಷರತ್ವ ; ಅವ್ಯಕ್ತತ್ವ ; ಅಚಿಂತ್ಯ ಶಕ್ತಿಮತ್ವ ; ಇವೇ ಮುಂತಾದ ಅನೇಕ ಲಕ್ಷಣ* (ಅಸಾಧಾರಣ ಧರ್ಮ) ಗಳಿಂದ ವಿಷ್ಣುವೇ ಬ್ರಹ್ಮನು ಎಂದು ನಿರ್ಣಯಮಾಡಿರುವರು.

---

*ಲಕ್ಷಣವೆಂದರೆ ಅಸಾಧಾರಣಧರ್ಮವು. ಯಾವ ವಸ್ತುವಿಗೆ ಲಕ್ಷಣವನ್ನು ನಾವು ಹೇಳಬೇಕೋ ಅದು ಲಕ್ಷ್ಯವೆನ್ನಿಸುವುದು. ಲಕ್ಷ್ಯಭಿನ್ನನಾದ ಯಾವ ವಸ್ತುವಿನಲ್ಲಿಯೂ ಇಲ್ಲದೆ ಲಕ್ಷ್ಯ

ಇನ್ನು ಈ ವಿವಕ್ಷೆಯಿಂದ ಭಗವದ್ಗೀತೆಯನ್ನು ಆಲೋಡನೆಮಾಡೋಣ.

(1) **ಪೂರ್ಣಾನಂದತ್ವವು** ವಿಷ್ಣುಧರ್ಮವೆಂದು "ಆನಂದಮಯೋಽಭ್ಯಾಸಾತ್" ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ನಿಶ್ಚಿತವಾಗಿರುವುದು. ಪೂರ್ಣಾನಂದಸ್ವರೂಪನಾದುದರಿಂದ ಶ್ರೀ ಕೃಷ್ಣನು ಸರ್ವೋತ್ತಮನು ಎಂದು ನಿಶ್ಚಯಿಸಬಹುದು. ಸುಖವು ಸ್ವತಃ ಪುರುಷಾರ್ಥವು. ಮನುಷ್ಯರಿಗೆ ಧನ, ಕನಕ, ವಸ್ತ್ರ ವಾಹನಾದಿ ಸರ್ವಭೋಗ್ಯ ದ್ರವ್ಯಗಳೂ ಸುಖಾರ್ಥವಾಗಿ ಅಪೇಕ್ಷಿತವಾಗಿವೆ. ಸುಖವು ಯಾತಕ್ಕೆಂದರೆ ಆ ಪ್ರಶ್ನೆಗೆ ಉತ್ತರವಿಲ್ಲ. ಆದುದರಿಂದ ಸುಖವು ಸ್ವತಃ ಪುರುಷಾರ್ಥವೆನ್ನಿಸುವುದು. ಅಂಥಾ ಸುಖದಿಂದ ಪೂರ್ಣನಾದವನಿಗೆ ಮೂರು ಲೋಕದಲ್ಲೂ ಅಪೇಕ್ಷಿತವಾದ ದ್ರವ್ಯವು ಯಾವುದೂ ಇರುವುದಿಲ್ಲ. ಆದುದರಿಂದ ಪೂರ್ಣಸುಖವುಳ್ಳವನು ನಿರಪೇಕ್ಷನಾದುದರಿಂದ ಸರ್ವೋತ್ತಮನೆನಿಸುವನು. ಶ್ರೀ ಕೃಷ್ಣನು ಹೇಳುತ್ತಾನೆ.

ನಮೇಪಾರ್ಥಾಽಸ್ತಿ ಕರ್ತವ್ಯಂ ತ್ರಿಷುಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ.... ॥—(3. 22.)

ಅರ್ಥವು :—ಎಲೈ ಅರ್ಜುನನೇ ! ತ್ರಿಲೋಕದಲ್ಲಿಯೂ ನನಗೆ ಪೂರ್ವದಲ್ಲಿ ಲಬ್ಧವಾಗದೆ ಉತ್ತರಕಾಲದಲ್ಲಿ ಹೊಂದಬೇಕಾದ ಅಪೇಕ್ಷಿತವಸ್ತುವು ಯಾವುದೂ ಇಲ್ಲವಾದುದರಿಂದ ತದರ್ಥವಾಗಿ ನನ್ನಿಂದ ಕರ್ತವ್ಯವಾದ ಯಾವ ಕರ್ಮವೂ ಇಲ್ಲ.

ಬ್ರಹ್ಮರುದ್ರಾದಿ ಸರ್ವಜೀವರುಗಳೂ ಮೋಕ್ಷಾರ್ಥವಾಗಿ ಅಥವಾ ಕೇವಲ ಪರಮಾತ್ಮನ ಪ್ರಸಾದವನ್ನು ಇಚ್ಛಿಸುವವರಾಗಿ ಅವನ ಆರಾಧನೆಯಲ್ಲಿ

ವಸ್ತುವಿನಲ್ಲಿ ಮಾತ್ರ ಇರುವ ಧರ್ಮವು ಲಕ್ಷಣವೆನ್ನಿಸುವುದು. ಗೋವಿಗೆ ಸಾಸ್ನಾದಿಮತ್ತ್ವವು ಅಂದರೆ ಗಳಗಂಬಳವೇ ಮೊದಲಾದುವನ್ನು ಹೊಂದಿರೋಣವು ಲಕ್ಷಣವೆನ್ನಿಸುವುದು. ಗಳಕಂಬಳವು ಗೋಭಿನ್ನವಾದ ಯಾವ ಪ್ರಾಣಿಗೂ ಇಲ್ಲ. ಗೋವಿಗೆ ಮಾತ್ರ ಇರುತ್ತದೆ. ಆದುದರಿಂದ ಅದು ಗೋವಿನ ಲಕ್ಷಣವು (ಅಸಾಧಾರಣ ಧರ್ಮವು) ಎನ್ನಿಸುವುದು. ಯಾವುದು 'ಸಾಸ್ನಾದಿ'ಗಳನ್ನು ಉಳ್ಳದ್ದೋ ಅದು ಗೋವು ಎಂದು ವಸ್ತುನಿರ್ದೇಶವನ್ನು ಮಾಡುವುದು ಲಕ್ಷಣಜ್ಞಾನದ ಮುಖ್ಯ ಪ್ರಯೋಜನವು. ಪ್ರಕೃತದಲ್ಲಿ ಸರ್ವೋತ್ತಮತ್ವಪ್ರಯೋಜಕವಾದ ಸಕಲ ಜಗತ್ಸೃಷ್ಟಿಕರ್ತೃತ್ವವೇ ಮೊದಲಾದ ಧರ್ಮಗಳು ಬ್ರಹ್ಮರುದ್ರಾದಿಗಳಲ್ಲಿ ಎಲ್ಲಿಯೂ ಇಲ್ಲದೆ ವಿಷ್ಣುವಿನಲ್ಲಿ ಮಾತ್ರ ಇರುವುದರಿಂದ ವಿಷ್ಣುವು ಸರ್ವೋತ್ತಮನು ಎಂದು ಸೂತ್ರಕಾರರು ನಿರ್ಣಯಮಾಡಿರುತ್ತಾರೆ. ಭಗವದ್ಗೀತೆಯಲ್ಲಿಯೂ ಕೂಡ ವೇದಾಂತಸೂತ್ರಗಳಲ್ಲಿ ಪ್ರದರ್ಶಿತವಾದ ಅನೇಕ ಲಕ್ಷಣಗಳನ್ನು ಹೊಂದಿರುವುದರಿಂದ ನಾನು ಸರ್ವೋತ್ತಮನು ಎಂದು ಸ್ಪಷ್ಟವಾಗಿ ಶ್ರೀ ಕೃಷ್ಣನೇ ಉಪಪಾದನೆಮಾಡಿ ತೋರಿಸಿರುತ್ತಾನೆ.

ತತ್ಪರರಾಗಿರುವುದರಿಂದ ಈ ಲಕ್ಷಣವು ಕೃಷ್ಣನೊಬ್ಬನಲ್ಲಿಯೇ ಇರುವುದರಿಂದ ಇವನು ಸರ್ವೋತ್ತಮನೆನ್ನಿಸುವನು. ಯದ್ಯಪಿ ಲಕ್ಷ್ಮೀದೇವಿಯು ನಿತ್ಯಮುಕ್ತಳು. ಆದರೂ ಆಕೆಯು ವಿಷ್ಣುವಿನ ಅಧೀನಳಾಗಿ ತನ್ನ ಸುಖಾನುಭವವನ್ನು ಮಾಡುತ್ತಿರುವಳು. **"ಬ್ರಹ್ಮಣೋಹಿ ಪ್ರತಿಷ್ಠಾಹಂ"** ಎಂದರೆ ಲಕ್ಷ್ಮೀ ದೇವಿಗೂ ನಾನು ಆಧಾರನು ಎಂದು ಶ್ರೀ ಕೃಷ್ಣನು ಹೇಳಿರುತ್ತಾನಷ್ಟೆ!

2. **ಸ್ವಾತಂತ್ರ್ಯವು** ಸರ್ವೋತ್ತಮತ್ವವನ್ನು ನಿರ್ಣಯಿಸುವ ಲಕ್ಷಣವು ಎಂಬುದು "ತದನನ್ಯತ್ವಮಾರಂಭಣಶಬ್ದಾದಿಭ್ಯಃ" ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ನಿರ್ಣೀತವಾಗಿರುತ್ತದೆ. ಶ್ರೀ ಕೃಷ್ಣನು ಈ ಲಕ್ಷಣವು ತನ್ನಲ್ಲಿರುವುದೆಂದು ಹೇಳುತ್ತಾನೆ.

(1) **ಮಾಂ ವಿದ್ಧ್ಯಕರ್ತಾರಮವ್ಯಯಂ ।**—(4. 13.)

ಬ್ರಾಹ್ಮಣಾದಿ ಚತುರ್ವರ್ಣಕ್ಕೂ ನಾನೇ ಕರ್ತನು. ಆದರೆ ನನಗೆ ಬೇರೆ ಒಬ್ಬ ಕರ್ತನು ಇಲ್ಲವು; ನಾನು ಸ್ವತಂತ್ರನು ಎಂದು ನೀನು ತಿಳಿಯುವವನಾಗು.

(2) **ಮತ್ತಃಸರ್ವಂಪ್ರವರ್ತತೇ ।**—(10. 8.)

ನನ್ನಿಂದಲೇ ಸಕಲ ಪ್ರಾಣಿಗಳೂ ತಮ್ಮ ತಮ್ಮ ವ್ಯಾಪಾರದಲ್ಲಿ ಪ್ರವರ್ತವಾಗುತ್ತವೆ. "ನಋತೇತ್ವತ್ಕ್ರಿಯತೇ ಕಿಂಚನಾರೇ" ಇತ್ಯಾದಿ ಶ್ರುತ್ಯರ್ಥವನ್ನೇ ಶ್ರೀ ಕೃಷ್ಣನು ನಿರೂಪಣೆಮಾಡಿ ಸರ್ವವೂ ತನ್ನ ಅಧೀನನೆಂದು ಹೇಳಿರುತ್ತಾನೆ.

3. **ಸರ್ವಜ್ಞತ್ವವು.** ಸರ್ವಾರ್ಥವಿಷಯಕಜ್ಞಾನವು ಸರ್ವಜ್ಞತ್ವವು. ಇದರಲ್ಲಿ ಸ್ವ (ತನ್ನ) ವಿಷಯಕಜ್ಞಾನವೂ ಮತ್ತು ತನಗಿಂತ ಭಿನ್ನವಾದ ನಿಖಿಲಜಗತ್ತಿನಲ್ಲಿರುವ ಸರ್ವಪದಾರ್ಥವಿಷಯಕಜ್ಞಾನವೂ ಅಂತರ್ಭಾವವನ್ನು ಹೊಂದಿವೆ. ಅದೃಶ್ಯತ್ವಾಧಿಕರಣದಲ್ಲಿ ಇದು ಸರ್ವೋತ್ತಮತ್ವಸಾಧಕವಾದ ಯುಕ್ತಿಯೆಂದು ಹೇಳಲ್ಪಟ್ಟಿರುತ್ತದೆ. ಇಂಥಾ ಧರ್ಮವು ಒಬ್ಬ ವಿಷ್ಣುವಿಗೆ ಹೊರತು ಬ್ರಹ್ಮಾದಿದೇವತೆಗಳಿಗೂ ಇರುವುದಿಲ್ಲವೆಂದು ಶ್ರೀ ಕೃಷ್ಣನು ಹೇಳಿರುತ್ತಾನೆ.

(1) **ಬಹೂನಿಮೇವ್ಯತೀತಾನಿ ಜನ್ಮಾನಿತವಚಾರ್ಜುನ ।**
ತಾನ್ಯಹಂವೇದಸರ್ವಾಣಿ ನತ್ವಂ ವೇತ್ಥಪರಂತಪ ॥ —(4. 5.)

ಅರ್ಥವು—ಎಲೈ ಅರ್ಜುನನೇ! ನನಗೂ ನನ್ನ ಅಧೀನನಾದ ನಿನಗೂ ಅನಂತ ಜನ್ಮಗಳು ಕಳೆದು ಹೋದವು. ಅವುಗಳನ್ನು ನಾನು ತಿಳಿದನನು. ನೀನು

(ಪರಂತಪನಾದರೂ) ಅವುಗಳನ್ನು ತಿಳಿದವನಲ್ಲ. ಇದರಿಂದ ಶ್ರೀಕೃಷ್ಣನು ಸರ್ವಜ್ಞನು ಮತ್ತು ಪಾರ್ಥಾದಿ ಜೀವರು ಅಲ್ಪಜ್ಞರು ಎಂದು ಸಿದ್ಧವಾಗುವುದು.

(2) **ವೇದಾಹಂಸಮತೀತಾನಿ ವರ್ತಮಾನಾನಿಚಾರ್ಜುನ ।**
ಭವಿಷ್ಯಾಣಿ ಚ ಭೂತಾನಿಮಾಂತುವೇದ ನಕಶ್ಚನ ॥

ಅರ್ಥವು—ಎಲೈ ಅರ್ಜುನನೇ ! ನಾನು ಪೂರ್ವದಲ್ಲಿದ್ದ, ಈಗ ಇರುವ ಮತ್ತು ಮುಂದೆ ಬರುವ ಸಕಲ ಪದಾರ್ಥಗಳನ್ನೂ ತಿಳಿದಿರುತ್ತೇನೆ. ನನ್ನನ್ನಾದರೋ ಯಾವನೂ ತಿಳಿದವನಿಲ್ಲ. (ಸರ್ವಜ್ಞನೆಂದು ಪ್ರಸಿದ್ಧನಾಗಿರುವ) ಚತುರ್ಮುಖ ಬ್ರಹ್ಮನೂ ತಿಳಿದವನಲ್ಲ. (ಕಃ ಎಂದು ಚತುರ್ಮುಖ ಬ್ರಹ್ಮದೇವರಿಗೆ ಹೆಸರು.)

ಈ ರೀತಿಯಾಗಿ ಕೃಷ್ಣನು ತನಗೆ ಸರ್ವ ವಿಷಯಕ ಜ್ಞಾನವು ಉಂಟೆಂದು ಹೇಳಿ ಬಹ್ಮಾದಿಗಳಿಗೆ ಇಲ್ಲವೆಂದೂ ಹೇಳಿರುತ್ತಾನೆ.

(3) **ವೇದಾಂತಕೃದ್ವೇದ ವಿದೇವ ಚಾಹಂ ।**—(15. 15.)

ಅರ್ಥವು—ವೇದಾಂತ ಸೂತ್ರಗಳನ್ನು ರಚಿಸಿದವನೂ ಮತ್ತು ನಿಖಿಲವೇದಗಳನ್ನೂ ಸಾಕಲ್ಯೇನ ತಿಳಿಯುವವನೂ ನಾನೇ.

(4) **ನಮೇವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।**
(10. 2.)

ಅರ್ಥವು—ನನ್ನ ಮಹಿಮೆಯನ್ನು ದೇವತೆಗಳ ಸಮೂಹವೂ, ಮಹರ್ಷಿಗಳೂ ಕೂಡ ತಿಳಿಯಲಾರರು. ಇದರಿಂದ ದೇವಾದಿಗಳ ಜ್ಞಾನವು ಅಲ್ಪವೆಂದು ನಿಶ್ಚಿತವಾಗುತ್ತದೆ. ಶಿಷ್ಯನಾದ ಅರ್ಜುನನೂ ಕೂಡ ಹೀಗೆಯೇ ಹೇಳುತ್ತಾನೆ.

(5) **ಸರ್ವಮೇತದೃತಂ ಮನ್ಯೇಯನ್ಮಾಂವದಸಿಕೇಶವ ।**
ನಹಿತೇ ಭಗವನ್ವ್ಯಕ್ತಿಂ ವಿದುರ್ದೇವಾನದಾನವಾಃ ।
ಸ್ವಯಮೇವಾತ್ಮನಾತ್ಮಾನಂ ವೇತ್ಥತ್ವಂ ಪುರುಷೋತ್ತಮ ॥
—(10. 14-15.)

ಅರ್ಥವು—ಎಲೈ ಕೇಶವನೇ ! (ಬ್ರಹ್ಮರುದ್ರಾದಿಪ್ರವರ್ತಕನಾದ ಸ್ವಾಮಿಯೇ !) ನೀನು ನನ್ನನ್ನು ಕುರಿತು ಹೇಳಿದ ನಿನ್ನ ಮಾಹಾತ್ಮ್ಯೆಯೆಲ್ಲವೂ ಯಥಾರ್ಥವೇ ! ಎಲೈ ಭಗವಂತನೇ ! ನಿನ್ನ ಸಾಮರ್ಥ್ಯಾತಿಶಯವನ್ನು ದೇವತೆಗಳಾಗಲೀ, ದಾನವರಾಗಲೀ ತಿಳಿದವರಲ್ಲ. ಹೇ ಪುರುಷೋತ್ತಮ ! ಇತರರ ಅಪೇಕ್ಷೆಯಿಲ್ಲದೆ ಸ್ವಸಾಮರ್ಥ್ಯದಿಂದ ನೀನೇ ನಿನ್ನನ್ನು ತಿಳಿದುಕೊಂಡಿರುತ್ತೀಯೆ ! ಇದರಿಂದ

ಬ್ರಹ್ಮಾದಿಗಳು ಸರ್ವಜ್ಞರಾದರೂ ಭಗವಂತನ ಸಾಮರ್ಥ್ಯಾತಿಶಯವನ್ನು ಸಾಕಲ್ಯವಾಗಿ ತಿಳಿಯಲಾರರೆಂದು ಸಿದ್ಧವಾಯಿತು. ಭಗವಂತನು ಸಾಕಲ್ಯೇನ ಜ್ಞೇಯನೆಂದು ತಿಳಿಯುವವರು ಮೂಢರೆಂದೂ ಹೇಳುತ್ತಾನೆ.

(6) **ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇಮಾಮಬುದ್ಧಯಃ ।**
—(7. 44.)

ಸಾಕಲ್ಯೇನ ಮತ್ತು ನನ್ನ ಅನುಗ್ರಹವಿಲ್ಲದೆ ಅಜ್ಞೇಯನಾದ ನನ್ನನ್ನು ಸಾಕಲ್ಯೇನ ಜ್ಞೇಯನು ಎಂದು ಮೂಢರು ತಿಳಿಯುವರು.

4. **ಜನ್ಮಾದ್ಯಷ್ಟಕರ್ತೃತ್ವವು** ಸರ್ವೋತ್ತಮತ್ವವನ್ನು ಸ್ಥಾಪಿಸುವುದರಲ್ಲಿ ಸಮರ್ಥವಾದ ಯುಕ್ತಿಯೆಂದು "**ಜನ್ಮಾದ್ಯಸ್ಯಯತಃ**" ಮುಂತಾದ ವೇದಾಂತಸೂತ್ರಗಳಲ್ಲಿ ಸುಪ್ರಸಿದ್ಧವಾಗಿರುತ್ತದೆ. ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಶ್ರೀ ಕೃಷ್ಣನಿಗೇ ಅಷ್ಟಕರ್ತೃತ್ವವು ಪ್ರಸಿತವಾಗಿದೆ.

ಸೃಷ್ಟಿಕರ್ತೃತ್ವವು—

(1) **ಅಹಂಕೃತ್ಸ್ನಸ್ಯಜಗತಃ ಪ್ರಭವಃ ।** —(7. 6.)

ನಾನು ಸರ್ವ ಜಗತ್ತಿಗೂ ಸೃಷ್ಟಿಕರ್ತನು.

(2) **ಅಹಂಸರ್ವಸ್ಯಪ್ರಭವಃ ।** —(10. 8.)

ನಾನು ಸರ್ವಜಗತ್ತಿಗೂ ಉತ್ಪಾದಕನು.

(3) **ಯೇಚೈವಸಾತ್ವಿಕಾಭಾವಾರಾಜಸಾಸ್ತಾಮಸಾಶ್ಚಯೇ ।**
ಮತ್ತ ಏವೇತಿತಾನ್ವಿದ್ಧಿ.... ॥—(7. 12.)

ಲೋಕದಲ್ಲಿರುವ ಸಾತ್ವಿಕರಾಜಸ ತಾಮಸಗಳೆಂಬ ತ್ರಿವಿಧಪದಾರ್ಥಗಳೂ ನನ್ನಿಂದಲೇ ಹುಟ್ಟಿರುವುವು ಎಂದು ತಿಳಿ.

(4) **ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।**
(8. 18.)

ಅವ್ಯಕ್ತನಾಮಕಪರಮಾತ್ಮನಿಂದ ಸಕಲ ಕಾರ್ಯ ಪದಾರ್ಥಗಳೂ ಸೃಷ್ಟಿಕಾಲದಲ್ಲಿ ಹುಟ್ಟುತ್ತವೆ.

(5) **ಭವಾಪ್ಯಯೌಹಿಭೂತಾನಾಂಶ್ರುತೌ ವಿಸ್ತರಶೋಮಯಾ ।**
ತ್ವತ್ತಃಕಮಲಪತ್ರಾಕ್ಷ.... ॥ —(11. 2.)

ಹೇ ಕಮಲಪತ್ರಾಕ್ಷ ! ಸರ್ವಪದಾರ್ಥಗಳಿಗೂ ನಿನ್ನಿಂದಲೇ **ಉತ್ಪತ್ತಿ** ಲಯಗಳಾಗುವುವೆಂದು ನನ್ನಿಂದ ವಿಸ್ತಾರವಾಗಿ ಕೇಳಲ್ಪಟ್ಟಿತು.

(6) **ಪಿತಾಸಿಲೋಕಸ್ಯ ಚರಾಚರಸ್ಯ ।** —(11. 43.)

ಚರಾಚರವಾದ ನಿಖಿಲಜಗತ್ತಿಗೂ ನೀನು ತಂದೆಯು.

(7) **ಚಾತುರ್ವರ್ಣ್ಯಂ ಮಯಾಸೃಷ್ಟಂ ।** — (4. 13.)

ಚತುರ್ವರ್ಣಸಮೂಹವು ನನ್ನಿಂದಲೇ ಸೃಷ್ಟಿಸಲ್ಪಟ್ಟಿತು.

(8) **ಅಹಮಾದಿರ್ಹಿದೇವಾನಾಂ ಮಹರ್ಷೀಣಾಂಚ ಸರ್ವಶಃ ।**
—(10. 2.)

ನಾನು ಸಮಸ್ತ ದೇವತೆಗಳಿಗೂ ಮತ್ತು ಮಹರ್ಷಿಗಳಿಗೂ ಕಾರಣನು.

(9) **ಪುನಸ್ತಾನಿಕಲ್ಪಾದೌವಿಸೃಜಾಮ್ಯಹಂ ।**—(9. 7.)

ಪ್ರಳಯದಲ್ಲಿ ನಷ್ಟವಾದ ಜಗತ್ತನ್ನು ಪುನಃ ಕಲ್ಪದ ಆದಿಯಲ್ಲಿ ಸೃಷ್ಟಿ ಮಾಡುತ್ತೇನೆ.

(10) **ಪ್ರಭವಃ ।**—(9. 18.)

ನಾನು ಸೃಷ್ಟಿಕರ್ತನು.

(11) **ಪ್ರಭವಿಷ್ಣುಚ ।**—(13. 17.)

ಪರಬ್ರಹ್ಮನು (ಶ್ರೀಕೃಷ್ಣನು) ಸೃಷ್ಟಿಕಾಲದಲ್ಲಿ ಸರ್ವೋತ್ಪಾದಕನು.

(12) **ಸರ್ವಯೋನಿಷುಕೌಂತೇಯಮೂರ್ತಯಃ ಸಂಭವಂತಿಯಾಃ।**
ತಾಸಾಂಬ್ರಹ್ಮಮಹದ್ಯೋನಿರಹಂ ಬೀಜಪ್ರದಃಪಿತಾ ॥
—(14. 4.)

ಅರ್ಥವು :—ಆದಿಸೃಷ್ಟಿಯಲ್ಲಿ ಮಾತ್ರವೇ ನಾನು ಜಗದುತ್ಪಾದಕನೆಂದಲ್ಲ. ದೇವ, ಮನುಷ್ಯ, ಪಶು, ಪಕ್ಷ್ಯಾದಿಯೋನಿಗಳಲ್ಲಿ ಯಾವ ಯಾವ ಪ್ರಾಣಿಗಳು ಹುಟ್ಟುತ್ತವೆಯೋ ಅವುಗಳಿಗೆಲ್ಲಾ ಲಕ್ಷ್ಮಿಯು ಕ್ಷೇತ್ರರೂಪವಾದ ಕಾರಣಳು (ತಾಯಿಯಂತೆ). ನಾನು ಗರ್ಭಾದಾನಮಾಡುವ ತಂದೆಯು. ಇದರಿಂದ ಲೋಕದಲ್ಲಿರುವ ಪಿತ್ರಾದಿಗಳಲ್ಲಿ ಸ್ಥಿತನಾಗಿ ಪುತ್ರಾದಿಗಳನ್ನು ಉತ್ಪತ್ತಿಮಾಡುವವನು ಪರಮಾತ್ಮನು ಎಂದು ಸಿದ್ಧವಾದುದರಿಂದ ವಿಷ್ಣುವಿನ ಸರ್ವೋತ್ತಮತ್ವವು ನಿಸ್ಸಂಶಯವಾಯಿತು. ಶ್ರೀ ಕೃಷ್ಣನು ನಿಖಿಲಜಗತ್ತಿಗೂ ತಾನೇ ಉತ್ಪಾದಕನೆಂದು ಹೇಳಿ ಮತ್ತೊಬ್ಬರಿಗೆ ಆ ಸಾಮರ್ಥ್ಯವು ಇಲ್ಲವೆಂದೂ ತಿಳಿಸುತ್ತಾನೆ.

13. **ಮಯಾಧ್ಯಕ್ಷೇಣಪ್ರಕೃತಿಃ ಸೂಯತೇ ಸಚರಾಚರಂ।**—(9.10.)

ಅಧಿಪತಿಯಾದ ನನ್ನಿಂದ ಪ್ರೇರಿತವಾಗಿ ಚೇತನ ಪ್ರಕೃತಿಯು ಚೇತನಾಚೇತನಾತ್ಮಕವಾದ ಜಗತ್ತನ್ನು ಹುಟ್ಟಿಸುತ್ತದೆ.

14. **ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ।**—(9. 8.)

ನನ್ನ ಅಧೀನವಾದ ಪ್ರಕೃತಿಯನ್ನು ಕಾರಣತ್ವೇನ ಸ್ವೀಕರಿಸಿ ಪುನಃ ಪುನಃ ಸಕಲ ಚೇತನಾಚೇತನರೂಪಪ್ರಪಂಚವನ್ನು ಹುಟ್ಟಿಸುತ್ತೇನೆ. ಇದರಿಂದ ಪರಮಾತ್ಮನು ಸ್ವತಂತ್ರಸೃಷ್ಟಿಕರ್ತನು; ಲಕ್ಷ್ಮ್ಯಾದಿಗಳು ಅವನ ಅಧೀನರಾಗಿ ಅವನ ಅನುಗ್ರಹದಿಂದಲೇ ಸೃಷ್ಟಿಮಾಡುವವರು ಎಂದು ನಿಶ್ಚಿತವಾಗುವುದು.

ಭಗವಂತನು ತನಗೆ ಮತ್ತೊಬ್ಬ ಸೃಷ್ಟಿಕರ್ತನು ಇಲ್ಲವೆಂದು ಹೇಳುತ್ತಾನೆ.

(15) **ವಿದ್ಧ್ಯಕರ್ತಾರಮವ್ಯಯಂ**—(4. 13.)

(16) **ನಮೇವಿದುಃಸುರಗಣಾಃ ಪ್ರಭವಂ**—(10. 2.)

ನನಗೆ ಬೇರೆ ಕರ್ತೃಗಳು ಇಲ್ಲ; ನಾನು ಅವ್ಯಯನೆಂದು ತಿಳಿ. ದೇವತೆಗಳೂ ಋಷಿಗಳೂ ನನಗೆ ಉತ್ಪತ್ತಿ ಇಲ್ಲವೆಂದೇ ತಿಳಿದಿರುವರು.

ಹಾಗಾದರೆ "ಬಹೂನಿಮೇವ್ಯತೀತಾನಿ ಜನ್ಮಾನಿ" ಎಂಬ ಶ್ಲೋಕದಲ್ಲಿ ನನಗೂ ಅನೇಕ ಜನ್ಮಗಳು ಕಳೆದು ಹೋಗಿವೆ; ಎಂದು ಹೇಳಿದುದು ಹ್ಯಾಗೆಂದರೆ ತನ್ನ ಮಾತಿನ ತಾತ್ಪರ್ಯವನ್ನು ಶ್ರೀ ಕೃಷ್ಣನು ಮುಂದಿನ ಶ್ಲೋಕದಲ್ಲಿ ತಾನೇ ನಿರೂಪಣೆ ಮಾಡಿರುತ್ತಾನೆ.

(18) **ಅಜೋಽಪಿಸನ್ನವ್ಯಯಾತ್ಮಾಭೂತಾನಾಮೀಶ್ವರೋಽಪಿಸನ್ ।**
ಪ್ರಕೃತಿಂಸ್ವಾಮವಷ್ಟಭ್ಯ ಸಂಭವಾಮ್ಯಾತ್ಮಮಾಯಯಾ ॥—(4. 6.)
(19) **ಜನ್ಮಕರ್ಮ ಚ ಮೇದಿವ್ಯಂ** —(4 9.)

ಅರ್ಥವು—ನಾನು ದೇಹೋತ್ಪತ್ತಿರಹಿತನಾದರೂ, ನಾಶರಹಿತವಾದ ಸ್ವರೂಪ ಮತ್ತು ದೇಹವುಳ್ಳವನಾದರೂ, ಸರ್ವ ಪ್ರಾಣಿಗಳಿಗೂ ನಿಯಾಮಕನಾಗಿದ್ದರೂ ಕೂಡ ನನ್ನ ಇಚ್ಛೆಯಿಂದ ನನ್ನ ಅಧೀನವಾದ ವಸುದೇವಾದಿಗಳನ್ನು (ನರಸಿಂಹಾವತಾರದಲ್ಲಿ ಸ್ತಂಭಾದಿಗಳಂತೆ) ನಿಮಿತ್ತಮಾಡಿಕೊಂಡು ಆವಿರ್ಭವಿಸುತ್ತೇನೆ. ಹೀಗೆ ಲೋಕವಿಲಕ್ಷಣವಾದ ನನ್ನ ಅವತಾರ ಮತ್ತು ಕರ್ಮಗಳನ್ನು (ತಿಳಿದವರು ಮುಕ್ತರಾಗುತ್ತಾರೆ).

ಈ ರೀತಿಯಲ್ಲಿ ಶ್ರೀ ಕೃಷ್ಣನು ತಾನೇ ನಿಖಿಲಜಗತ್ತಿಗೂ ಸ್ಥೂಲ ಸೂಕ್ಷ್ಮಾದಿ ಸರ್ವ ಸೃಷ್ಟಿಗಳನ್ನೂ ಮಾಡುವವನೆಂದೂ, ಲಕ್ಷ್ಮ್ಯಾದಿಗಳು ಸ್ವತಂತ್ರರಾಗಿ ಸೃಷ್ಟಿಕರ್ತರಲ್ಲವೆಂದೂ, ತನಗೆ ಸೃಷ್ಟಿಯು ಯಾರಿಂದಲೂ ಯಾವ ಕಾರಣದಿಂದಲೂ ಇಲ್ಲವೆಂತಲೂ ಹೇಳಿರುವುದರಿಂದ ಸ್ವಾತಂತ್ರ್ಯೇಣ ಸರ್ವ ಸೃಷ್ಟಿಕರ್ತೃ

ತ್ವರೂಪ ಲಕ್ಷಣವು ಆತನಿಗೇ ಪ್ರಾಪ್ತವಾಯಿತು. ಆದುದರಿಂದ ಆತನೇ ಸರ್ವೋತ್ತಮನು.

5. **ಸ್ಥಿತಿಕರ್ತೃತ್ವ**—ಸ್ವತಂತ್ರವಾಗಿ ನಿಖಿಲಜಗತ್ತನ್ನೂ ರಕ್ಷಿಸುವ ಸಾಮರ್ಥ್ಯವು ಬ್ರಹ್ಮಾದಿಗಳಿಗೆ ಯಾರಿಗೂ ಇಲ್ಲ. ವಿಷ್ಣುವಿಗೆ ಉಂಟು. ಆದುದರಿಂದ ಆತನು ಸರ್ವೋತ್ತಮನು. ವಿಷ್ಣುವಿನ ಪಾಲನವ್ಯಾಪಾರವು ಮೂರು ವಿಧವಾಗಿರುವುದು. 1. ಅಂತರ್ಯಾಮಿಃ ಚರಾಚರ ಜಗತ್ತನ್ನು ಅನುಪ್ರವೇಶಿಸಿ ಅದರ ಸ್ವರೂಪವು ನಾಶಹೊಂದದಂತೆ ಆಧಾರನಾಗಿರುತ್ತಾನೆ. 2. ಚೇತನಾಚೇತನಾತ್ಮಕವಾದ ನಾನಾ ವ್ಯಕ್ತಿಗಳಲ್ಲಿ ಅಂತರ್ಗತನಾಗಿ ಜೀವರುಗಳಿಗೆ ಆಹಾರಾದಿಪ್ರದನಾಗಿ ಪಾಲಿಸುತ್ತಾನೆ. 3. ಮತ್ತು ಸಾಕ್ಷಾತ್ತಾಗಿ ಅವತಾರಗಳನ್ನು ಮಾಡಿ ತಂದೆಯು ಸ್ವಹಸ್ತದಿಂದ ಶಿಶುವನ್ನು ರಕ್ಷಿಸುವಂತೆ ಭಕ್ತರುಗಳನ್ನು ರಕ್ಷಿಸುತ್ತಾನೆ. ಈ ಮೂರು ವಿಧವಾಗಿಯೂ ಸ್ವಾತಂತ್ರ್ಯೇಣ ನಿಖಿಲಜಗದ್ರಕ್ಷಣೆಯು ವಿಷ್ಣುವಿಗೆ ಮಾತ್ರ ಇರುವುದು.

(1) **ಮಯಿಸರ್ವಮಿದಂಪ್ರೋತಂ ಸೂತ್ರೇಮಣಿಗಣಾ ಇವ ।**—(7.7.)

ಅರ್ಥವು—ಮುತ್ತು ಕೆಂಪು ಮುಂತಾದ ರತ್ನಗಳು ಪೋಣಿಸುವ ದಾರದ ಆಧಾರದಿಂದ ಹೇಗೆ ನಿಂತಿರುವುವೋ ಹಾಗೆಯೇ ಈ ಚರಾಚರಾತ್ಮಕವಾದ ಸರ್ವಪ್ರಪಂಚವೂ ನನ್ನ ಆಧಾರದಲ್ಲಿ ನಿಂತಿರುತ್ತದೆ. ಪರಮಾತ್ಮನ ಆಶ್ರಯರಹಿತವಾದರೆ ಈ ಜಗತ್ತು ಪುಡಿಪುಡಿಯಾಗಿ ಹೋಗುವುದು ಎಂದು ಭಾವವು.

(2) **ಸರ್ವಸ್ಯಧಾತಾರಂ ।**—(8. 9.)

ಪರಮಾತ್ಮನು ಸರ್ವ ಪ್ರಪಂಚಕ್ಕೂ ಧಾರಣ ಪೋಷಣ ಕರ್ತನು.

(3) **ಮತ್ಸ್ಥಾನಿ ಸರ್ವಭೂತಾನಿ ।**—(9. 4.)

ಸರ್ವ ಭೂತಗಳೂ ನನ್ನ ಆಧಾರದಿಂದಲೇ ಇರುತ್ತವೆ.

(4) **ಪಿತಾಹಮಸ್ಯ ಜಗತೋ ಮಾತಾ ಧಾತಾ ।**—(9. 16.)

ಈ ಜಗತ್ತಿಗೆ ನಾನು....ಪೋಷಕನು.

(5) **ಸ್ಥಾನಂ ನಿಧಾನಂ ।**—(9. 18.)

ನಾನು ಸರ್ವಾಧಾರನು ಮತ್ತು ಅತ್ಯಂತವಾಗಿ ಧಾರಕನು.

ಅರ್ಜುನನೂ ಹಾಗೆಯೇ ಹೇಳುತ್ತಾನೆ.

(6) **ತ್ವಮಸ್ಯವಿಶ್ವಸ್ಯಪರಂ ನಿಧಾನಂ ।**—(11. 38.)

ನೀನು ಈ ಪ್ರಪಂಚಕ್ಕೆ ಅತ್ಯುತ್ತಮವಾದ ಆಶ್ರಯನು.

(7) **ಪಶ್ಯಾಮಿದೇವಾಂಸ್ತವ ದೇವದೇಹೇ ಸರ್ವಾಂಸ್ತಥಾ ಭೂತ ವಿಶೇಷಸಂಘಾನ್ ।**
ಬ್ರಹ್ಮಾಣ ಮೀಶಂ ಕಮಲಾಸನಸ್ಥಂ ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥—(11. 15.)

ಹೇ ದೇವ! ನಿನ್ನ ದೇಹದಲ್ಲಿ (ನಿನ್ನನ್ನು ಆಶ್ರಯಿಸಿಕೊಂಡು) ಸರ್ವ ದೇವತೆಗಳೂ, ಪ್ರಾಣಿಗಳ ಸಮೂಹವೂ, ಬ್ರಹ್ಮದೇವರೂ, ಬ್ರಹ್ಮದೇವರ ತೊಡೆಯ ಮೇಲಿರುವ ರುದ್ರದೇವರೂ, ಸರ್ವ ಋಷಿಗಳೂ ಮತ್ತು ಅದ್ಭುತವಾದ ಸರ್ಪಗಳೂ ಇರುವುದನ್ನು ನಾನು ನೋಡುತ್ತೇನೆ.

(8) **ಸರ್ವಭೃಚ್ಚೈವ ।**—(13. 15.)

ಪರಬ್ರಹ್ಮನು ಸರ್ವಧಾರಕನು.

(9) **ಭೂತಭರ್ತೃಚತತ್ ಜ್ಞೇಯಂ ।**—(13. 17.)

ಪರಬ್ರಹ್ಮನು (ಶ್ರೀಕೃಷ್ಣನು) ಸರ್ವಪ್ರಾಣಿಗಳಿಗೂ ಧಾರಣ ಪೋಷಣ ಕರ್ತನು.

(10) **ಭರ್ತಾ........ದೇಹೇಸ್ಮಿನ್ ಪುರುಷಃ ಪರಃ ।**—(13. 22.)

ಪ್ರಕೃತಿವಿಲಕ್ಷಣನಾದ ಪುರುಷನು (ಶ್ರೀಕೃಷ್ಣನು) ಈ ದೇಹದಲ್ಲಿ ನಿಂತು ಪ್ರಾಣಿಗಳನ್ನು ಧರಿಸಿರುವನು.

(11) **ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ।**
—(15. 17.)

ನಾಶರಹಿತನೂ ಅಚಿಂತ್ಯಶಕ್ತಿಯುಳ್ಳವನೂ ಆದ ಪರಮಾತ್ಮನು ಮೂರು ಲೋಕಗಳನ್ನೂ ಪ್ರವೇಶಮಾಡಿ ಧಾರಣಮಾಡುವವನಾಗಿದ್ದಾನೆ. ಯಾರಿಗೆ ಯಾವಾತನು ಧಾರಣಪೋಷಣ ಕರ್ತನೋ ಅವನು ಅವರಿಗಿಂತ ಉತ್ತಮನು ಎಂದು ಲೋಕದಲ್ಲಿ ವ್ಯಾಪ್ತಿಯಿರುವುದು. ಪರಮಾತ್ಮನು ನಿಖಿಲಜಗತ್ತಿಗೂ ಧಾರಣ ಪೋಷಣಕರ್ತನಾದುದರಿಂದ ಜಗತ್ತಿಗಿಂತ ಉತ್ತಮನೆನಿಸುವನು. ತನ್ನಿಂದ ಭಿನ್ನರಾದವರಿಗೆ ಇರುವ ಲೋಕಧಾರಕತ್ವ ಶಕ್ತಿಯು ಪರಮಾತ್ಮನ ಅಧೀನವೆಂದೂ, ತನಗೆ ಮತ್ತೊಬ್ಬನ ಆಧಾರವು ಇಲ್ಲವೆಂದೂ ಹೇಳಿ ಶ್ರೀಕೃಷ್ಣನು ತನ್ನ ಸರ್ವೋತ್ತಮತ್ವವನ್ನು ದೃಢೀಕರಿಸುತ್ತಾನೆ.

(12) **ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ ।**
ಪುಷ್ಣಾಮಿಚೌಷಧೀಃ ಸರ್ವಾಃ ಸೋಮೋಭೂತ್ವಾರಸಾತ್ಮಕಃ ॥

ಅಹಂವೈಶ್ವಾನರೋ ಭೂತ್ವಾಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ॥

—(15. 13-14.)

ಅರ್ಥವು—ನಾನು ಭೂಮಿಯನ್ನು ಪ್ರವೇಶಮಾಡಿ ನನ್ನ ಸ್ವಶಕ್ತಿಯಿಂದ ಸರ್ವ ಪ್ರಾಣಿಗಳನ್ನೂ ಧರಿಸುತ್ತೇನೆ. (ಭೂಮಿಯಲ್ಲಿರುವ ಧಾರಕತ್ವಶಕ್ತಿಯು ನನ್ನ ಅಧೀನವೆಂದು ಅರ್ಥವು.) ಅಮೃತರಸರೂಪನಾದ ಚಂದ್ರನಲ್ಲಿದ್ದು ಸಕಲ ಸಸ್ಯಾದಿಗಳನ್ನೂ ಅಭಿವೃದ್ಧಿ ಹೊಂದಿಸುತ್ತೇನೆ. (ಚಂದ್ರನಲ್ಲಿರುವ ತನ್ನ ಅಮೃತ ರಸಾತ್ಮಕವಾದ ಕಿರಣಗಳಿಂದ ಸಸ್ಯಾದಿಗಳನ್ನು ಪೋಷಿಸುವ ಶಕ್ತಿಯು ನನ್ನ ಅಧೀನವು ಎಂದರ್ಥವು.) ನಾನು ವೈಶ್ವಾನರ ನಾಮಕನಾಗಿ ಪ್ರಾಣಿಗಳ ದೇಹವನ್ನು ಪ್ರವೇಶಮಾಡಿ ಜಾಠರಾಗ್ನಿಯಲ್ಲಿ ಸ್ಥಿತನಾಗಿ ಪ್ರಾಣಾಪಾನಗಳಿಂದ ಸಹಿತನಾಗಿ ಭಕ್ಷ್ಯ, ಭೋಜ್ಯ, ಲೇಹ್ಯ, ಪೇಯಗಳೆಂಬ ಚತುರ್ವಿಧ ಅನ್ನವನ್ನು ಪಚನ ಮಾಡುತ್ತೇನೆ. (ಜಾಠರಾಗ್ನಿಗೆ ಇರುವ ಚತುರ್ವಿಧ ಅನ್ನವನ್ನು ಜೀರ್ಣಿಸುವ ಶಕ್ತಿಯು ನನ್ನ ಅಧೀನವು ಎಂದರ್ಥವು.)

(13) **ಯೇ ಚೈವಸಾತ್ವಿಕಾಭಾವಾರಾಜಸಾಸ್ತಾಮಸಾಶ್ಚಯೇ ।**
ಮತ್ತ ಏವೇತಿತಾನ್ವಿದ್ಧಿ ನತ್ವಹಂ ತೇಷುತೇಮಯಿ ॥—(7-12.)

ಲೋಕದಲ್ಲಿರುವ ಸಾತ್ವಿಕ, ರಾಜಸ, ತಾಮಸಗಳಾದ ಸರ್ವ ಪದಾರ್ಥಗಳೂ ನನ್ನಿಂದಲೇ ಹುಟ್ಟಿರುವುವು. ನಾನು ಅವುಗಳಲ್ಲಿ ಆಶ್ರಿತನಾಗಿ ಇಲ್ಲ. ಅವುಗಳು ನನ್ನಲ್ಲಿ ಆಶ್ರಿತವಾಗಿವೆ.

(14) **ಮತ್ಸ್ಥಾನಿ ಸರ್ವಭೂತಾನಿ ನ ಚಾಹಂತೇಷ್ವವಸ್ಥಿತಃ ।**

—(9. 5.)

ಸರ್ವ ಪ್ರಾಣಿಗಳೂ ನನ್ನ ಆಧಾರದಲ್ಲಿ ಇರುತ್ತವೆ. ನಾನು ಅವುಗಳನ್ನು ಆಶ್ರಯಿಸಿಕೊಂಡು ಅವುಗಳಲ್ಲಿಲ್ಲ. ಇದಲ್ಲದೆ ಶ್ರೀಕೃಷ್ಣನು ಅವತಾರಾದಿ ನಾನಾ ರೂಪಗಳಿಂದ ಬ್ರಹ್ಮರುದ್ರಾದಿಗಳಿಗೆ ಅಶಕ್ಯವಾದ ದುಷ್ಟನಿಗ್ರಹ ಶಿಷ್ಟಪರಿಪಾಲನ ರೂಪ ವ್ಯಾಪಾರವನ್ನೂ ಮಾಡುತ್ತಾನೆ.

(15) **ಯದಾಯದಾ ಹಿ ಧರ್ಮಸ್ಯಗ್ಲಾನಿರ್ಭವತಿಭಾರತ ।**
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥
ಪರಿತ್ರಾಣಾಯಸಾಧೂನಾಂ ವಿನಾಶಾಯಚದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿಯುಗೇಯುಗೇ ॥

—(4. 7-8.)

ಅರ್ಥವು—ಯಾವ ಯಾವ ಕಾಲದಲ್ಲಿ ಧರ್ಮಕ್ಕೆ ಹ್ರಾಸವೂ ಅಧರ್ಮಕ್ಕೆ ವೃದ್ಧಿಯೂ ಆಗುವುದೋ ಆಗ ನಾನು ಅವತಾರ ಮಾಡುತ್ತೇನೆ. ಸಾಧುಗಳ ರಕ್ಷಣಾರ್ಥವಾಗಿಯೂ ಪಾಪಿಗಳ ವಿನಾಶಾರ್ಥವಾಗಿಯೂ, ಧರ್ಮಸಂಸ್ಥಾಪನೆ ಮಾಡುವುದಕ್ಕೂ ಆಯಾ ಕಾಲಗಳಲ್ಲಿ ಅವತರಿಸುತ್ತೇನೆ.

(16) **ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ** ।—(11. 18.)

ನೀನು (ಶ್ರೀಕೃಷ್ಣನು) ಸನಾತನಧರ್ಮವನ್ನು ರಕ್ಷಿಸುವವನು.

(17) **ಅನನ್ಯಾಶ್ಚಿಂತಯಂತೋಮಾಂಯೇಜನಾಃ ಪರ್ಯುಪಾಸತೇ ।**
ತೇಷಾಂನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ॥
—(9. 22.)

ಅರ್ಥವು—ಯಾರು ನನ್ನನ್ನು ಅನನ್ಯಮನಸ್ಕರಾಗಿ ಭಕ್ತ್ಯುದ್ರೇಕದಿಂದ ಧ್ಯಾನಮಾಡುತ್ತಾರೆಯೋ ಅಂಥಾ ನನ್ನ ನಿತ್ಯಸೇವೆಯಲ್ಲಿ ನಿರತರಾದ ಭಗವದ್ಭಕ್ತರ ಯೋಗಕ್ಷೇಮವನ್ನು ನಾನು ನಿರ್ವಹಿಸುತ್ತೇನೆ. ಅವರಿಗೆ ಇರತಕ್ಕ ಜ್ಞಾನಾದಿಗಳ ರಕ್ಷಣೆಯು ಮತ್ತು ಪ್ರಾಪ್ತವಾಗತಕ್ಕ ಮುಕ್ತಿಯೇ ಮುಂತಾದ ಫಲಗಳು ಇವೆರಡನ್ನೂ ನೋಡಿಕೊಳ್ಳುತ್ತೇನೆಂದರ್ಥವು.

(18) **ನಮೇಭಕ್ತಃಪ್ರಣಶ್ಯತಿ** ।—(9. 22.)

ನನ್ನ ಭಕ್ತನಿಗೆ ಯಾವಕಾಲದಲ್ಲೂ ಅನರ್ಥವಾಗಲಾರದು. ರುದ್ರಾದಿಗಳ ಭಕ್ತರು ರಾವಣ, ಬಾಣ, ಭಸ್ಮಾಸುರಾದಿಗಳು ನಷ್ಟರಾಗಿರುವುದು ಸುಪ್ರಸಿದ್ಧವು.

6. ಸಂಹಾರಕರ್ತೃತ್ವವು ಬ್ರಹ್ಮರುದ್ರೇಂದ್ರಾದಿ ಸಮಸ್ತ ಚೇತನವರ್ಗಕ್ಕೂ ಮತ್ತು ಅವ್ಯಕ್ತಾಂತವಾದ ಅಚೇತನತತ್ವಗಳಿಗೂ ಪ್ರಳಯಕಾಲದಲ್ಲಿ ಸ್ವಾತಂತ್ರ್ಯೇಣ ಸಂಹಾರಮಾಡಿ ತನ್ನ ಉದರದಲ್ಲಿಟ್ಟುಕೊಂಡು ವಟಪತ್ರಶಾಯಿಯಾಗಿ ಶ್ರೀ ಹರಿಯು ಮಲಗುವನು. ಇದರಿಂದಲೂ ಅವನು ಸರ್ವಜಗತ್ತಿಗಿಂತಲೂ ಉತ್ತಮನೆಂದು ಸಿದ್ಧವಾಗುವುದು.

(1) **ಅಹಂಕೃತ್ಸ್ನಸ್ಯಜಗತಃ ಪ್ರಭವಃ ಪ್ರಳಯಸ್ತಥಾ** ।—(7. 6.)

ಸಕಲ ಪ್ರಪಂಚಕ್ಕೂ ನಾನು ಸೃಷ್ಟಿಕರ್ತನು; ಹಾಗೆಯೇ **ಸಂಹಾರಕರ್ತನು.**

(2) **ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ** ।
—(8. 18.)

ಅರ್ಥವು—ಮಹಾಪ್ರಳಯಕಾಲವು ಪ್ರಾಪ್ತವಾದಾಗ ಅವ್ಯಕ್ತನಾಮಕ ಪರಮಾತ್ಮನಲ್ಲಿಯೇ ಸಕಲಕಾರ್ಯಪ್ರಪಂಚವೂ ಲೀನವಾಗುತ್ತದೆ.

(3) **ಪ್ರಲಯಃ ।**—(9. 18.)

ನಾನು ಸಂಹಾರಕರ್ತನು.

(4) **ಗ್ರಸಿಷ್ಣು ।**—(13. 17.)

ಪರಬ್ರಹ್ಮನು (ನಾನು) ಸರ್ವಸಂಹಾರಕನು. ಇತರರು ಮಾಡತಕ್ಕ ಸಂಹಾರವ್ಯಾಪಾರವು ನನ್ನ ಅಧೀನವಾದುದರಿಂದ ಸ್ವತಂತ್ರ ಸಂಹಾರಕರ್ತೃತ್ವವು ನನಗೇ ಹೊರತು ಇತರರಿಗೆ ಬರಲಾರದೆಂದು ಶ್ರೀ ಕೃಷ್ಣನು ತೋರಿಸುತ್ತಾನೆ.

(5) **ಸರ್ವಭೂತಾನಿಕೌಂತೇಯ ಪ್ರಕೃತಿಂಯಾಂತಿಮಾಮಿಕಾಂ ।
ಕಲ್ಪಕ್ಷಯೇ....॥**—(9. 7.)

ಹೇ ಕೌಂತೇಯ! ಚರಾಚರಜಗತ್ತೂ ನನ್ನ ಅಧೀನವಾದ ಪ್ರಕೃತಿಯಲ್ಲಿ ಕಲ್ಪಾಂತದಲ್ಲಿ ಲಯಹೊಂದುತ್ತದೆ. ನಾನೇ ಸಂಹಾರಮಾಡಿ ಸೂಕ್ಷ್ಮರೂಪೇಣ ಮೂಲಪ್ರಕೃತಿಯಲ್ಲಿ ಸೇರಿಸಿಬಿಡುತ್ತೇನೆಂದು ಭಾವವು.

(6) **ಮೃತ್ಯುಸ್ಸರ್ವಹರಶ್ಚಾಹಂ ।**

ಮಾರಕನಾದುದರಿಂದ ಮೃತ್ಯುವೆಂಬ ಹೆಸರಿನಿಂದ ಮೃತ್ಯುನಾಮಕದೇವತೆಯಲ್ಲಿ ಸ್ಥಿತನಾಗಿ ಸರ್ವವನ್ನೂ ಸಂಹಾರಮಾಡುವವನು ನಾನೇ.

(7) **ಕಾಲೋಽಸ್ಮಿಲೋಕಕ್ಷಯಕೃತ್ಪ್ರವೃದ್ಧೋಲೋಕಾನ್ಸಮಾ
ಹರ್ತುಮಿಹ ಪ್ರವೃತ್ತಃ** ।—(11, 32.)

ಸಕಲ ಸಂಹಾರಕನಾದುದರಿಂದ ನಾನು ಕಾಲನಾಮಕನು. ಭೂಭಾರ ಪರಿಹಾರಾರ್ಥವಾಗಿ ಪರಿಪೂರ್ಣನಾದ ನಾನು ಉಭಯಸೈನ್ಯದಲ್ಲಿರುವ ಜನರನ್ನೂ ನಿನ್ನ ಪ್ರತ್ಯಕ್ಷದಲ್ಲಿಯೇ ಸಂಹಾರಮಾಡುವ ಕಾರ್ಯದಲ್ಲಿ ಉದ್ಯುಕ್ತನಾಗಿದ್ದೇನೆ. ಹೀಗೆ ಭೀಮಾರ್ಜುನ ದ್ರೋಣಾಶ್ವತ್ಥಾಮಾದಿಗಳಿಂದ ನಡೆಯುವ ಸಂಹಾರವೂ ತಾನು ಅವರೊಳಗೆ ನಿಂತು ನಡೆಯಿಸುವುದರಿಂದಲೇ ನೆರವೇರುವುದೆಂದು ಸೂಚಿಸಿರುತ್ತಾನೆ. ಈ ಅರ್ಥವನ್ನೇ—

(8) **ನಿಮಿತ್ತಮಾತ್ರಂ ಭವಸವ್ಯಸಾಚಿನ್ ।
ಮಯಾಹತಾಂಸ್ತ್ವಂ ಜಹಿಮಾವ್ಯಥಿಷ್ಠಾಃ ॥**—(11. 33-34.)

ಎಂಬ ವಾಕ್ಯಗಳಲ್ಲಿ ನಿರೂಪಿಸಿರುತ್ತಾನೆ.

ಅರ್ಥವು—ಹೇ ಅರ್ಜುನ ನೀನೇ ಮೊದಲಾದ ಯೋಧರಲ್ಲಿ ನಿಂತು ನನ್ನ ಇಚ್ಛೆಯಿಂದ ನಾನೇ ಮಾಡುವ ಈ ಉಭಯ ಸೇನಾಸಂಹಾರ ಕಾರ್ಯದಲ್ಲಿ ನೀನು ನಿಮಿತ್ತಮಾತ್ರನು. ನನ್ನಿಂದ ಸಂಹೃತರಾದವರನ್ನು ನೀನು ಯುದ್ಧದಲ್ಲಿ

ಸಂಹಾರ ಮಾಡು. ಅಂದರೆ ಶತ್ರುಸಂಹಾರ ಕಾರ್ಯವು ಮುಖ್ಯತಃ ನನ್ನಿಂದ ನಡೆಯತಕ್ಕದ್ದು. ಮುಖ್ಯಕಾರಣನಾದ ನಾನು ಇವರ ಸಂಹಾರದಲ್ಲಿ ಇಚ್ಛೆಯನ್ನು ಮಾಡಿರುವೆನಾದುದರಿಂದ ಇವರು ಸತ್ತ ಪ್ರಾಯರೇ. ನಿನ್ನಲ್ಲಿ ನಿಂತು ಅವರನ್ನು ಸಂಹಾರಮಾಡುವವನು ನಾನೇ. ನೀನು ನಿಮಿತ್ತನು; ನೆಪಮಾತ್ರವು.

7. ನಿಯಮನಕರ್ತೃತ್ವವು ಚೇತನಾಚೇತನಾತ್ಮಕ ಸಕಲ ಜಗತ್ತನ್ನೂ ಸ್ವತಂತ್ರವಾಗಿ ವ್ಯಾಪಾರಗಳಲ್ಲಿ ಪ್ರೇರಿಸುವ ಕಾರ್ಯವು ಶ್ರೀಕೃಷ್ಣನಿಗೆ ಒಬ್ಬನಿಗೇ ಇರುವುದರಿಂದ ಅವನು ಸರ್ವೋತ್ತಮನೆಂದು ಸಿದ್ಧವಾಗುವುದು.

(1) **ಮತ್ತಃಸರ್ವಂಪ್ರವರ್ತತೇ** —(10. 8.)

ನನ್ನಿಂದಲೇ ಸಕಲ ಪ್ರಾಣಿಗಳೂ ಸ್ವಸ್ವವ್ಯಾಪಾರಗಳಲ್ಲಿ ಪ್ರವರ್ತಿಸುತ್ತವೆ.

(2) **ಈಶ್ವರಃ ಸರ್ವಭೂತಾನಾಂ ಹೃದ್ದೇಶೇ ಅರ್ಜುನತಿಷ್ಠತಿ ।**
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿಮಾಯಯಾ॥
—(18. 61.)

ಅರ್ಥವು—ಸರ್ವನಿಯಾಮಕನಾದ ನಾನು ಶರೀರಯುಕ್ತರಾದ ಸಕಲ ಪ್ರಾಣಿಗಳನ್ನೂ ನನ್ನ ಸ್ವೇಚ್ಛೆಯಿಂದ ನಾನಾ ಪ್ರಕಾರವಾದ ಕರ್ಮಗಳಲ್ಲಿ ಪ್ರೇರಿಸುವವನಾಗಿ ಸರ್ವ ಪ್ರಾಣಿಗಳ ಹೃದಯಪ್ರದೇಶದಲ್ಲಿ ಸ್ಥಿತನಾಗಿರುತ್ತೇನೆ.

ಈ ರೀತಿಯಾಗಿ ತನ್ನ ನಿಯಾಮಕತ್ವವನ್ನು ಹೇಳಿ ಶ್ರೀ ಕೃಷ್ಣನು ಸಪ್ತಮಾಧ್ಯಾಯದಲ್ಲಿಯೂ, ದಶಮಾಧ್ಯಾಯದಲ್ಲಿಯೂ ವಿಶೇಷ ನಿಯಮನಾರ್ಥವಾಗಿ ತಾನು ತೆಗೆದುಕೊಂಡಿರುವ ರೂಪವಿಶೇಷಗಳನ್ನು ಉಪದೇಶಮಾಡಿರುತ್ತಾನೆ.

(3) **ರಸೋಽಹ ಮಪ್ಸು ಕೌಂತೇಯ ಪ್ರಭಾಸ್ಮಿಶಶಿಸೂರ್ಯಯೋಃ ।**
ಪ್ರಣವಃ ಸರ್ವವೇದೇಷು ಶಬ್ದಃಖೇಪೌರುಷಂ ನೃಷು ॥
ಪುಣ್ಯೋಗಂಧಃ ಪೃಥಿವ್ಯಾಂಚತೇಜಶ್ಚಾಸ್ಮಿವಿಭಾವಸೌ ।
ಜೀವನಂಸರ್ವಭೂತೇಷು ತಪಶ್ಚಾಸ್ಮಿತಪಸ್ವಿಷು ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಂ ॥
ಬಲಂ ಬಲವತಾಂಚಾಹಂ ಕಾಮರಾಗವಿವರ್ಜಿತಂ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿಭರತರ್ಷಭ ॥
—(7. 8-11.)

ಅರ್ಥವು—ಹೇ ಕೌಂತೇಯ! ಜಲದಲ್ಲಿ ಸಾರಭೂತವಾದ ರಸವೆಂಬ ಗುಣಕ್ಕೆ ನಾನು ನಿಯಾಮಕನು; ಚಂದ್ರಸೂರ್ಯರಲ್ಲಿರುವ ಪ್ರಭೆಗೆ (ಪ್ರಕಾಶ

ಗಳಿಗೆ) ನಾನು ನಿಯಾಮಕನು; ಸಕಲವೇದಗಳಲ್ಲಿ ಓಂಕಾರವು ಮುಖ್ಯವಾಗುವುದಕ್ಕೆ ನಾನು ಕಾರಣನು; ಆಕಾಶದಲ್ಲಿರುವ ಶಬ್ದವೆಂಬ ಸ್ವಾಭಾವಿಕಧರ್ಮಕ್ಕೆ ನಾನು ನಿಯಾಮಕನು. ಗಂಡಸರಲ್ಲಿರುವ ಪೌರುಷಕ್ಕೆ ನಾನು ನಿಯಾಮಕನು. ಭೂಮಿಯಲ್ಲಿರುವ ಶುಭಗಂಧವೆಂಬ ಸ್ವಾಭಾವಿಕಧರ್ಮಕ್ಕೂ ನಾನು ನಿಯಾಮಕನು. ಅಗ್ನಿಯಲ್ಲಿರುವ ದಾಹಕತ್ವಸಾಮರ್ಥ್ಯಕ್ಕೆ ನಾನು ನಿಯಾಮಕನು. ಸಕಲ ಪ್ರಾಣಿಗಳಲ್ಲಿರುವ ಪ್ರಾಣಧಾರಣಶಕ್ತಿಗೂ ನಾನು ನಿಯಾಮಕನು. ತಪಸ್ವಿಗಳಲ್ಲಿರುವ ಸಾರಭೂತವಾದ ತಪಸ್ಸೆಂಬ ಧರ್ಮಕ್ಕೆ ನಾನು ನಿಯಾಮಕನು. ಬುದ್ಧಿವಂತರಲ್ಲಿರುವ ಬುದ್ಧಿ ಎಂಬ ಸಾರಭೂತವಾದ ಧರ್ಮಕ್ಕೆ ನಾನು ನಿಯಾಮಕನು; ತೇಜಸ್ವಿಗಳಲ್ಲಿರುವ ತೇಜಸ್ಸೆಂಬ ಮುಖ್ಯ ಧರ್ಮಕ್ಕೆ ನಾನು ಕಾರಣನು. ಬಲಿಷ್ಠರಲ್ಲಿರುವ ಫಲಾಪೇಕ್ಷೆಯಿಲ್ಲದೆ ಯೋಗ್ಯಸ್ಥಳದಲ್ಲಿ ಉಪಯೋಗಿಸಲ್ಪಡುವ ಬಲಕ್ಕೆ ನಾನು ಪ್ರವರ್ತಕನು. (ದುಷ್ಟಬಲಕ್ಕೂ ಪರಮಾತ್ಮನು ನಿಯಾಮಕನಾದರೂ ಅದು ಉಪಾಸನಾರ್ಹವಲ್ಲ.) ಮತ್ತು ಸರ್ವಪ್ರಾಣಿಗಳಲ್ಲಿರುವ ಧರ್ಮಾವಿರುದ್ಧ ಕಾಮಗಳಿಗೂ ನಾನೇ ನಿಯಾಮಕನು.

(4) **ಅಹಂಕ್ರತುರಹಂಯಜ್ಞಃ ಸ್ವಧಾಹಮಹಮೌಷಧಂ ।**
ಮಂತ್ರೋಽಹಮಹಮೇವಾಜ್ಯ ಮಹಮಗ್ನಿರಹಂಹುತಂ ॥

—(9. 16.)

ನಾನೇ ಕ್ರತುವಿನಲ್ಲಿ, ಯಜ್ಞದಲ್ಲಿ, ಸ್ವಧಾದಲ್ಲಿ, ಔಷಧಂ ಎಂದರೆ ಯಜ್ಞದಲ್ಲಿ ಉಪಯುಕ್ತವಾದ ವನಸ್ಪತಿಗಳಲ್ಲಿ, ಯಜ್ಞದ ಮಂತ್ರಗಳಲ್ಲಿ, ಆಜ್ಯ, ಅಗ್ನಿ ಮತ್ತು ಹೋಮ ಇವುಗಳಲ್ಲೆಲ್ಲಾ **ನಿಯಾಮಕನಾಗಿ** ಕ್ರತು, ಯಜ್ಞ ಇತ್ಯಾದಿ ಹೆಸರುಗಳುಳ್ಳವನಾಗಿ ಆಯಾಯ ಪದಾರ್ಥಗಳಲ್ಲಿ ಇರುತ್ತೇನೆ. ಇದರಿಂದ ವಿಶಿಷ್ಟ ಯಜ್ಞನಿಯಾಮಕತ್ವವು ವರ್ಣಿತವಾಯಿತು.

(5) **ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂಚಯೇವಿದುಃ ।**
ಪ್ರಯಾಣಕಾಲೇಽಪಿಚಮಾಂತೇ ವಿದುರ್ಯುಕ್ತಚೇತಸಃ ॥

ಅಧಿಭೂತಗಳಲ್ಲಿ (ದೇಹವೇ ಮೊದಲಾದ ಪೃಥಿವ್ಯಾದಿ ಸಮಸ್ತ ವಿನಾಶವುಳ್ಳ ಪದಾರ್ಥಗಳಲ್ಲಿ) ನಿಯಾಮಕನಾಗಿರುವ, ಅಧಿದೈವನಾದ (ಹಿರಣ್ಯಗರ್ಭಾದಿ ಸಮಸ್ತ ದೇವತೆಗಳಲ್ಲಿ ಅಂತರ್ಗತನಾಗಿ ನಿಯಾಮಕನಾಗಿರುವ), ಮತ್ತು ಅಧಿಯಜ್ಞನಾದ (ಯಜ್ಞಕ್ರಿಯಾ, ಯಜ್ಞಕರ್ತೃ, ಯಜ್ಞೋಪಕರಣದ್ರವ್ಯಗಳು ಮತ್ತು ಯಜ್ಞಜನ್ಯಫಲಗಳಿಗೆ ನಿಯಾಮಕನಾಗಿರುವ) ನನ್ನ ರೂಪವಿಶೇಷಗಳನ್ನು

ತಿಳಿದು ಮರಣಕಾಲದಲ್ಲಿಯೂ ಕೂಡ ನನ್ನನ್ನು ಯಾರು ತಿಳಿಯುವರೋ ಅವರೇ ಸಮಾಧಿಯುಕ್ತವಾದ ಮನಸ್ಸುಳ್ಳವರು.

(6) **ಯದಾದಿತ್ಯಗತಂತೇಜೋಜಗದ್ಭಾಸಯತೇಽಖಿಲಂ ।**
ಯಚ್ಚಂದ್ರಮಸಿಯಚ್ಚಾಗ್ನೌತತ್ತೇಜೋವಿದ್ಧಿಮಾಮಕಂ ॥
—(15. 12.)

ಸರ್ವ ಪ್ರಪಂಚವನ್ನೂ ಬೆಳಗುವ ಸೂರ್ಯನಲ್ಲಿರುವ ಪ್ರಕಾಶನ ಶಕ್ತಿಯೂ ಮತ್ತು ಚಂದ್ರನಲ್ಲಿರುವ ಮತ್ತು ಅಗ್ನಿಯಲ್ಲಿರುವ ಪ್ರಕಾಶನ ಶಕ್ತಿಯೂ ನನ್ನ ಅಧೀನವು.

(7) **ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।**
ವೇದಾನಾಂಸಾಮವೇದೋಽಸ್ಮಿ ದೇವಾನಾಮಸ್ಮಿವಾಸವಃ ।
ಇಂದ್ರಿಯಾಣಾಂಮನಶ್ಚಾಸ್ಮಿಭೂತಾನಾಮಸ್ಮಿಚೇತನಾ ॥
ಇತ್ಯಾದಿ (10. 22-40.)

* ಎಲೈ ಜಿತನಿದ್ರನಾದ ಪಾರ್ಥನೆ! ನಾನು ಸರ್ವತ್ರ ವ್ಯಾಪ್ತನಾಗಿಯೂ ಸಕಲ ಪ್ರಾಣಿಗಳ ಅಂತಃಕರಣದಲ್ಲಿಯೂ (ತತ್ತದ್ಯೋಗ್ಯತಾನುಸಾರ ನಿಯಮನಾರ್ಥವಾಗಿ)ಸ್ಥಿತನಾಗಿರುತ್ತೇನೆ. ಇಂಥಾ ನಿಯಾಮಕಭಗವದ್ರೂಪಗಳಿಗೆ ವಿಭೂತಿ ರೂಪಗಳೆಂದು ಹೆಸರು. ಅಂಥಾ ವಿಭೂತಿರೂಪಗಳನ್ನು ಹದಿನೆಂಟು ಶ್ಲೋಕಗಳಲ್ಲಿ ನಿರೂಪಣೆಮಾಡಿರುತ್ತಾನೆ. (ವಿಸ್ತರಭಯದಿಂದ ಇಲ್ಲಿ ಉದಾಹರಿಸಲಿಲ್ಲ.) ವೇದಗಳಲ್ಲಿ ಸಾಮವೇದಕ್ಕೆ (ಋಗ್ವೇದವನ್ನು ಬಿಟ್ಟು) ಆಧಿಕ್ಯಪ್ರದನು; ದೇವತೆಗಳಲ್ಲಿ ಇಂದ್ರನಿಗೆ ಆಧಿಕ್ಯಪ್ರದನು; ಇಂದ್ರಿಯಗಳಲ್ಲಿ ಮನಸ್ಸಿಗೆ ಆಧಿಕ್ಯಪ್ರದನು ; ಜಡಗಳಲ್ಲಿ ಚಿತ್ತಕ್ಕೆ ಆಧಿಕ್ಯಪ್ರದನೂ ಆಗಿ ನಾನೇ ನಾನಾನಿಯಾಮಕ ರೂಪಗಳಿಂದ ಆಯಾ ಪದಾರ್ಥಗಳಲ್ಲಿ ಇರುತ್ತೇನೆ. **"ರುದ್ರಾಣಾಂಶಂಕರಶ್ಚಾಸ್ಮಿ"** ಎಂದು ಏಕಾದಶರುದ್ರರುಗಳಲ್ಲಿ ಮಹಾದೇವರಿಗೆ ಆಧಿಕ್ಯಪ್ರದನಾಗಿ ಶಂಕರನಾಮಕನಾಗಿ ನಾನೇ ಅವನಲ್ಲಿ ಸನ್ನಿಹಿತನಾಗಿರುತ್ತೇನೆಂದು ಹೇಳಿರುತ್ತಾನಾದ್ದರಿಂದ ರುದ್ರದೇವರು ನಿಯಮ್ಯರು; ನಾರಾಯಣನು ನಿಯಾಮಕನು ಎಂಬುದು ಸಿದ್ಧವಾಯಿತು.

(೮) **ನತದಸ್ತಿವಿನಾಯತ್ಸ್ಯಾನ್ಮಯಾಭೂತಂ ಚರಾ ಚರಂ ।**
ನಾಂತೋಽಸ್ತಿ ಮಮದಿವ್ಯಾನಾಂ ವಿಭೂತೀನಾಂಪರಂತಪ ।

* ಈ ಭಾಗಗಳಲ್ಲಿ ಉಪದೇಶಗಮ್ಯವಾದ ಬಹು ಸೂಕ್ಷ್ಮ ವಿಷಯಗಳು ಅಡಗಿರುತ್ತವೆ.

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವವಾ ।
ತತ್ತದೇವಾವಗಚ್ಛತ್ವಂ ಮಮತೇಜೋಂಶಸಂಭವಂ॥—(10. 41.)

ಇದರ ಅರ್ಥವು :—ಸ್ಥಾವರಜಂಗಮಾತ್ಮಕವಾದ ಪ್ರಪಂಚದಲ್ಲಿ ನನ್ನ ಅಧೀನವಲ್ಲದ ಯಾವುದೊಂದು ವಸ್ತುವೂ ಇರುವುದಿಲ್ಲ.* (ಎಲ್ಲವೂ ನನ್ನ ಅಧೀನವೆಂದು ಭಾವವು.) ಎಲೈ ಪರಂತಪನೇ! ನನ್ನ **ದಿವ್ಯವಾದ** ಎಂದರೆ ಲೋಕವಿಲಕ್ಷಣವಾದ ಮತ್ತು ಅದ್ಭುತವಾದ ವಿಭೂತಿರೂಪಗಳಿಗೆ ಪರ್ಯವಸಾನವಿಲ್ಲ. ಯಾವ ಯಾವ ವಸ್ತುವು ಸ್ವಸಜಾತೀಯ ವಸ್ತುಗಳಲ್ಲಿ ಆಧಿಕ್ಯವನ್ನು ಹೊಂದಿರುವುದೋ, ಸಂಪತ್ತಿನಿಂದ ಯುಕ್ತವಾಗಿರುವುದೋ ಅಥವಾ ಅತಿ ಅಭಿವೃದ್ಧವಾದ ಸ್ಥಿತಿಯಲ್ಲಿರುವುದೋ ಅದೆಲ್ಲಾ ನನ್ನ ತೇಜಸ್ಸಿನ ಒಂದು ಅಂಶವಿಶೇಷದಿಂದ ಸಹಕೃತವಾಗಿರುವುದೆಂದು ತಿಳಿಯುವವನಾಗು.

8-9. ಜ್ಞಾನಪ್ರದತ್ವ ಮತ್ತು ಅಜ್ಞಾನಪ್ರದತ್ವವು. ನಿಖಿಲಜಗತ್ತಿಗೂ ಜ್ಞಾನ ಮತ್ತು ಅಜ್ಞಾನ ಇವೇ ಮೊದಲಾದ ಸಕಲ ಮನೋಧರ್ಮಗಳನ್ನು ಸ್ವಾತಂತ್ರ್ಯೇಣ ಪ್ರೇರಿಸುವ ಸಾಮರ್ಥ್ಯವು ವಿಷ್ಣುವಿಗೇ ಹೊರತು ಇತರರಿಗಿಲ್ಲ. ಮನಆದಿ ಸರ್ವೇಂದ್ರಿಯಗಳಿಗೂ ನಿಯಾಮಕನೆಂದು ಅರ್ಥವುಳ್ಳ ಹೃಷೀಕೇಶನೆಂಬ ಶ್ರೀಕೃಷ್ಣನ ಹೆಸರೇ ಈ ಅರ್ಥವನ್ನು ಸೂಚಿಸುವುದು. ಬ್ರಹ್ಮರು

---

*"ಪ್ರಕೃತಿಸ್ತ್ವಾಂನಿಯೋಕ್ಷ್ಯತಿ" ಮತ್ತು "ಕರಿಷ್ಯಸ್ಯವಶೋಽಪಿತತ್" ಎಂಬಲ್ಲಿ ಪ್ರಕೃತಿಯು ಬಲಾತ್ಕಾರದಿಂದ ಜೀವರಲ್ಲಿ ನಿಂತು ಸ್ವತಂತ್ರವಾಗಿ ವ್ಯಾಪಾರದಲ್ಲಿ ಪ್ರೇರಿಸುವುದರಲ್ಲಿ ಸಮರ್ಥಳೆಂದು ಅರ್ಥವು ತೋರುವುದು. ಆದರೆ ಇದು ದುರರ್ಥವು. ಯಾತಕ್ಕೆಂದರೆ 1. ಶ್ರೀಕೃಷ್ಣನ ಈ ವಾಕ್ಯಗಳಿಂದ ಪರಮಾತ್ಮನ ಸನ್ನಿಧಾನವೇ ಆಕೆಯ ವಿಶೇಷ ಸಾಮರ್ಥ್ಯಕ್ಕೆ ಕಾರಣವೆಂದು ನಿಶ್ಚಿತವಾಗುವುದು. ಮತ್ತು 2. "ಪ್ರಕೃತಿಂ ವಿದ್ಧಿ **ಮೇ**ಪರಾಂ" "ಪ್ರಕೃತಿಂಯಾಂತಿ **ಮಾಮಿಕಾಂ**" "ಬ್ರಹ್ಮಣೋಹಿ ಪ್ರತಿಷ್ಠಾಹಂ" ಇತ್ಯಾದಿ ವಾಕ್ಯಗಳಲ್ಲಿ ಪ್ರಕೃತಿಯು ನನ್ನ ಅಧೀನಳೆಂದು ಸ್ಪಷ್ಟವಾಗಿ ಶ್ರೀ ಕೃಷ್ಣನೇ ಹೇಳಿರುತ್ತಾನೆ. 3. ಮತ್ತು ಅದೇ ಹದಿನೆಂಟನೆಯ ಅಧ್ಯಾಯದಲ್ಲಿ ಮುಂದಿನ ಶ್ಲೋಕದಲ್ಲಿಯೇ "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿಮಾಯಯಾ॥" ಎಂದರೆ ಶರೀರಿಗಳಾದ ಸರ್ವಜೀವರ ಹೃದಯಪ್ರದೇಶದಲ್ಲಿಯೂ ನಾನು ಕುಳಿತುಕೊಂಡು ನಾನಾ ವ್ಯಾಪಾರಗಳಲ್ಲಿ ಪ್ರೇರಿಸುತ್ತೇನೆಂದು ಹೇಳಿರುವುದರಿಂದ ಶ್ರೀ ಕೃಷ್ಣನೇ ಮುಖ್ಯ ಪ್ರೇರಕನು ; ಲಕ್ಷ್ಮಿಯೇ ಮೊದಲಾದವರು ಪರಮಾತ್ಮನ ಪ್ರೇರಣಾಕಾರ್ಯದಲ್ಲಿ ಅಂಗಭೂತರಾಗಿರುವರು ; ಮತ್ತು ಅವನ ಅಧೀನವಾದ ವ್ಯಾಪಾರವುಳ್ಳವರು. ಇಲ್ಲಿ ಈಶ್ವರಶಬ್ದವು ಕೃಷ್ಣಭಿನ್ನನನ್ನು ಬೋಧಿಸುವುದೆಂದು ತಿಳಿಯಬಾರದು. "ಮಾಮೇಕಂಶರಣಂ ವ್ರಜ" ಎಂಬ ಮುಂದಿನ ಶ್ಲೋಕಾನುಸಾರವಾಗಿ ಇಲ್ಲಿ ಈಶ್ವರಶಬ್ದವಾಚ್ಯನು ಶ್ರೀ ಕೃಷ್ಣನೇ ಆಗುವನು.

ದ್ರಾದಿ ಸಕಲ ದೇವತೆಗಳಿಗೂ ಜ್ಞಾನಪ್ರದನು ವಿಷ್ಣುವು. ವಿಷ್ಣುವಿನ ಜ್ಞಾನಕ್ಕೆ ನಿಯಾಮಕರು ಬೇರೊಬ್ಬರಿಲ್ಲ. ಅವನು ಸ್ವತಃ ಸರ್ವಜ್ಞನು. ಬ್ರಹ್ಮಾದಿಗಳು ವಿಷ್ಣುವಿನ ಅನುಗ್ರಹದಿಂದ ವಿಷ್ಣುವನ್ನು ತಿಳಿಯುವುದಕ್ಕೆ ಸಮರ್ಥರಾಗುವರು. ತಥಾಹಿ :—

(1) **ಬುದ್ಧಿರ್ಬುದ್ಧಿಮತಾಮಸ್ಮಿ।**—(7. 10.)

ಜ್ಞಾನಿಗಳಲ್ಲಿರುವ ಜ್ಞಾನಕ್ಕೆ ನಾನು ಕಾರಣನು.

(2) **ಯೋ ಯೋ ಯಾಂ ಯಾಂ ತನುಂಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।**
ತಸ್ಯತಸ್ಯಾಚಲಾಂ ಶ್ರದ್ಧಾಂ ತಾಮೇವಿದಧಾಮ್ಯಹಂ ||—(7-21.)

ಯಾವಯಾವನು ಯಾವ ಯಾವ ದೇವತೆಗಳಲ್ಲಿ ಭಕ್ತಿವುಳ್ಳವನಾಗಿ ಶ್ರದ್ಧೆಯಿಂದ ಪೂಜಿಸಬೇಕೆಂದು ಅಪೇಕ್ಷಿಸುತ್ತಾನೆಯೋ ಅವರವರಿಗೆ ನಾನು ಆ ಶ್ರದ್ಧೆಯನ್ನು ದೃಢವಾಗುವಂತೆ ಮಾಡುತ್ತೇನೆ. ಇದರಲ್ಲಿ ಶ್ರೀಕೃಷ್ಣನಿಗೆ ಶ್ರದ್ಧಾ (ಆಸಕ್ಯಬುದ್ಧಿ) ಎಂಬ ಜ್ಞಾನವಿಶೇಷಪ್ರದತ್ವರೂಪ ಮಹಿಮೆಯು ಹೇಳಿರುತ್ತದೆ.

(3) **ಬುದ್ಧಿರ್ಜ್ಞಾನಮಸಂಮೋಹಃ ಕ್ಷಮಾಸತ್ಯಂ ದಮಶ್ಶಮಃ ।**
ಸುಖಂದುಃಖಂ ಭವೋಽಭಾವೋ ಭಯಂಚಾಭಯಮೇವಚ ।
ಅಹಿಂಸಾಸಮತಾತುಷ್ಟಿಸ್ತಪೋ ದಾನಂ ಯಶೋಽಯಶಃ ।
ಭವಂತಿಭಾವಾಭೂತಾನಾಂ ಮತ್ತಏವ ಪೃಥಗ್ವಿಧಾಃ || (10. 4-5.)

ಇದರ ಅರ್ಥವು—ನಿಶ್ಚಯಜ್ಞಾನವು, ಸಂಶಯಾದಿಸಾಮಾನ್ಯಜ್ಞಾನವು, ಅಕಾರ್ಯದಲ್ಲಿ ಇಚ್ಛಾತ್ಯಾಗವು, ಕ್ಷಮೆಯು, ಸತ್ಯವು, ಶಮ, ದಮ, ಸುಖ, ದುಃಖ, ಭವು, ಅಭಯ, ಅಹಿಂಸೆಯು, ಸಮತ್ವವು (ದ್ವಂದ್ವಸಹಿಷ್ಣುತೆಯು), ತುಷ್ಟಿಯು (ವಿಷಯಗಳಲ್ಲಿ ಅಲಂಬುದ್ಧಿಯು), ತಪಸ್ಸು, ದಾನವು, ಕೀರ್ತಿಯು, ಅಪಕೀರ್ತಿಯು ಹೀಗೆ ಅನೇಕ ಪ್ರಕಾರವುಳ್ಳ ನಾನಾ ಧರ್ಮಗಳು ಪ್ರಾಣಿಗಳಿಗೆ ನನ್ನ ದೆಸೆಯಿಂದಲೇ ಹುಟ್ಟುತ್ತವೆ.

(4) **ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ ।**
ದದಾಮಿಬುದ್ಧಿಯೋಗಂತಂ ಯೇನಮಾಮುಪಯಾಂತಿತೇ ||
ತೇಷಾಮೇವಾನುಕಂಪಾರ್ಥ ಮಹಮಜ್ಞಾನಜಂತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನಭಾಸ್ವತಾ ||

ನಿರಂತರ ಪ್ರೀತಿಪೂರ್ವಕವಾಗಿ ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸಿನಿಂದ ಭಜನೆಮಾಡುವವರಿಗೆ ಯಾವ ಜ್ಞಾನದಿಂದ ನನ್ನನ್ನು ಹೊಂದುತ್ತಾರೆಯೋ ಅಂಥಾ

ಜ್ಞಾನೋಪಾಯವನ್ನು ಕೊಡುತ್ತೇನೆ. ಅವರಲ್ಲಿ ದಯೆಯಿಂದ ಅನುಗ್ರಹಾರ್ಥವಾಗಿ ಅವರ ಅಂತಃಕರಣದಲ್ಲಿ ಸ್ಥಿತನಾಗಿ ಪ್ರಕಾಶನಾಸವಾದ ಜ್ಞಾನವೆಂಬ ದೀಪದಿಂದ ಅವರ ಅಜ್ಞಾನಜನ್ಯ ತಮಸ್ಸನ್ನು ಅಂದರೆ ಮನಃಕ್ಲೇಶಗಳನ್ನು ನಾಶ ಮಾಡುತ್ತೇನೆ.

ಶ್ರೀಕೃಷ್ಣನು ವೃಕ್ಷಸಾಮ್ಯದಿಂದ ಪರಾಪರ ತತ್ವವನ್ನು ನಿರೂಪಣೆಮಾಡಿ ಈ ರೀತಿಯಾದ ತತ್ವಜ್ಞಾನವನ್ನು ಹೊಂದುವುದಕ್ಕೆ ಉಪಾಯವೇನೆಂದರೆ ಹೇಳುತ್ತಾನೆ.

(5) **ತಮೇವಚಾದ್ಯಂಪುರುಷಂ ಪ್ರಪದ್ಯೇಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ||**

ಪುರಾತನವಾದ ಜನನಮರಣ ರೂಪವಾದ ಸಂಸಾರ ಪ್ರವಾಹವು ಯಾರಿಂದ ಉಂಟಾಯಿತೋ ಅಂಥಾ ಪುರಾತನನಾದ ಪರಮಾತ್ಮನನ್ನೇ ಶರಣು ಹೊಂದಬೇಕು. ಇದರಿಂದ ಪರಾಪರ ತತ್ವಜ್ಞಾನವು ಪರಮಾತ್ಮನ ಅನುಗ್ರಹದಿಂದಲೇ ಬರಬೇಕೆಂದು ಸಿದ್ಧವಾಗುವುದು.

ಬ್ರಹ್ಮರುದ್ರೇಂದ್ರಾದಿ ದೇವತೆಗಳೂ ಕೆಲವು ವೇಳೆ ತಮ್ಮ ತಮ್ಮ ಭಕ್ತರಿಗೆ ಜ್ಞಾನವನ್ನೂ ತಮ್ಮ ದ್ವೇಷಿಗಳಿಗೆ ಅಜ್ಞಾನಾದಿಗಳನ್ನೂ ಕೊಡುತ್ತಿರುವುದು ಪ್ರಮಿತವಾಗಿರುವುದರಿಂದ (ಅತಿವ್ಯಾಪ್ತವಾದ) ಈ ಲಕ್ಷಣದಿಂದ ಕೃಷ್ಣನು ಸರ್ವೋತ್ತಮನೆಂದು ಹೇಗೆ ನಿಶ್ಚಯಿಸುವುದು ಎಂಬ ಪ್ರಶ್ನೆಗೆ ಶ್ರೀಕೃಷ್ಣನೇ ಉತ್ತರವನ್ನು ಹೇಳಿರುತ್ತಾನೆ.

(6) **ಯೋಯೋ ಯಾಂಯಾಂ ತನುಭಕ್ತಃ ಶ್ರದ್ಧಯಾಽರ್ಚಿತು ಮಿಚ್ಛತಿ ।**
ತಸ್ಯತಸ್ಯಾಚಲಾಂ ಶ್ರದ್ಧಾಂ ತಾಮೇವವಿದಧಾಮ್ಯಹಂ ।
ಸ ತಯಾಶ್ರದ್ಧಯಾಯುಕ್ತಸ್ತಸ್ಯಾರಾಧನಮೀಹತೇ ।
ಲಭತೇಚತತಃ ಕಾಮಾನ್ ಮಯೈವವಿಹಿತಾನ್ಹಿತಾನ್।(7. 21-22.)

ಅರ್ಥವು—ಯಾರು ಯಾರು ಯಾವ ಯಾವ ದೇವತೆಗಳಲ್ಲಿ ಭಕ್ತಿಹೊಂದಿ ಶ್ರದ್ಧೆಯಿಂದ ಪೂಜಿಸುವುದಕ್ಕೆ ಅಪೇಕ್ಷಿಸುತ್ತಾರೆಯೋ ಅಂಥಾ ಅಧಿಕಾರಿಗಳಿಗೆ ಆ ದೇವತೆಗಳಲ್ಲಿ ಇರುವ ಶ್ರದ್ಧೆಯನ್ನೇ ನಾನು ಸ್ಥಿರಮಾಡಿಬಿಡುತ್ತೇನೆ. ಅವನು ಅಂಥಾ ಅಚಲಶ್ರದ್ಧೆಯಿಂದ ಆ ದೇವತೆಯನ್ನು ಆರಾಧನೆ ಮಾಡಿ **ತನ್ನ ಅಭೀಷ್ಟಗಳನ್ನು ಆ ದೇವತೆಗಳಲ್ಲಿ ಅಂತರ್ಗತನಾದ ನನ್ನಿಂದಲೇ ಹೊಂದುತ್ತಾನೆ.**

(7) **ಯೇ ಪ್ಯನ್ಯದೇವತಾಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ ।**
ತೇಪಿಮಾಮೇವಕೌಂತೇಯ ಯಜಂತ್ಯವಿಧಿಪೂರ್ವಕಂ ॥

(9. 23.)

ಅನ್ಯದೇವತೆಗಳನ್ನು ಪೂಜಿಸಿದರೂ ಅನ್ಯದೇವತಾಂತರ್ಗತನಾದ ನನ್ನ ಪೂಜೆಯೇ ಆಗುವುದು. ಇದನ್ನು ತಿಳಿಯದೆ ಅನ್ಯದೇವತೆಗಳನ್ನು ಪೂಜಿಸುವವರು ಅವಿಧಿಪೂರ್ವಕವಾಗಿ ನನ್ನನ್ನೇ ಪೂಜಿಸುತ್ತಾರೆ. ಇವುಗಳಿಂದ ದೇವತೆಗಳು ಫಲ ಕೊಡುವುದರಲ್ಲಿ ಸ್ವತಂತ್ರರಲ್ಲವೆಂದೂ ಅವರ ಅಂತರ್ಗತನಾದ ಪರಮಾತ್ಮನೇ ಅವರ ಫಲದಾನಶಕ್ತಿಗೆ ಪ್ರೇರಕನೆಂದೂ ಗೊತ್ತಾಗುವುದು. ಮತ್ತು ಬ್ರಹ್ಮಾದಿಗಳ ಜ್ಞಾನವು ಅತ್ಯಲ್ಪವೆಂದು ವಿಶ್ವರೂಪಾಧ್ಯಾಯದಲ್ಲಿ ಅರ್ಜುನನು ನಿರೂಪಿಸಿರುವ ಅವರ ನಡೆವಳಿಕೆಯಿಂದಲೇ ನಿಶ್ಚಯಿಸಬಹುದು. ಅಲೌಕಿಕವಾದ ಭಗವಂತನ ವಿರಾಡ್ರೂಪವನ್ನು ನೋಡಿ ವಿಸ್ಮಿತರಾದರೆಂದು ಹೇಳಿರುತ್ತಾನೆ.

(8) **ರುದ್ರಾದಿತ್ಯಾವಸವೋಯೇಚಸಾಧ್ಯಾ.........ವೀಕ್ಷಂತೇತ್ವಾಂ ವಿಸ್ಮಿತಾಶ್ಚೈವ ಸರ್ವೇ ।**—(11. 22.)

ರುದ್ರರೂ, ಆದಿತ್ಯರೂ, ವಸುಗಳೂ, ಸಾಧ್ಯರೂ ಇವರೇ ಮುಂತಾದ ಸರ್ವರೂ ವಿಸ್ಮಿತರಾಗಿ ನಿನ್ನನ್ನು ನೋಡುತ್ತಾರೆ. ಅದ್ಭುತವಾದ ಅಥವಾ ಅಪೂರ್ವವಸ್ತು ದರ್ಶನದಿಂದ ವಿಸ್ಮಯವುಂಟಾಗುವುದು. ಸಕಲ ದೇವತೆಗಳಿಗೂ ವಿಷ್ಣುವಿನ ರೂಪವು ಆಶ್ಚರ್ಯವನ್ನುಂಟುಮಾಡಿರುವುದರಿಂದ ಅವರ ಜ್ಞಾನವು ಅತ್ಯಲ್ಪವೆಂದೂ ಅತಏವ ಶ್ರೀಕೃಷ್ಣನಿಗೆ ಅಧೀನವಾಗಿಯೇ ಇರುವುದೇ ಹೊರತು ಶ್ರೀಕೃಷ್ಣನ ಜ್ಞಾನವನ್ನು ನಿಯಮಿಸಲಾರದೆಂದೂ ಸಿದ್ಧವಾಗುವುದು. ಕೃಷ್ಣನ ಜ್ಞಾನವು ಇನ್ನೊಬ್ಬರಿಂದ ಪ್ರೇರ್ಯವಾದುದಲ್ಲ.

(9) **ಸ್ವಯಮೇವಾತ್ಮನಾತ್ಮಾನಂ ವೇತ್ಥ ತ್ವಂ ಪುರುಷೋತ್ತಮ ॥**

(10. 15.)

ಇದರ ಅರ್ಥವು—(ನಿನ್ನ ಸ್ವರೂಪವನ್ನು ದೇವತೆಗಳಾಗಲೀ ದಾನವರಾಗಲೀ ತಿಳಿಯಲಾರರು.) ಹಾಗಿದ್ದರೂ ನೀನೇ ನಿನ್ನ ಸ್ವರೂಪವನ್ನು ತಿಳಿದಿರುತ್ತೀಯೆ. ದೇವತೆಗಳಿಗೂ ಅಗಮ್ಯನಾದ ತನ್ನ ಸ್ವರೂಪವನ್ನು ವಿಷ್ಣುವು ನಿರಪೇಕ್ಷೆಯಾಗಿ ತಿಳಿಯುತ್ತಾನೆ ಎಂದು ನಿಶ್ಚಿತವಾಯಿತು. "ವೇದವಿದೇವಚಾಹಂ" ಎಂದರೆ ನಾನೊಬ್ಬನೇ ಸ್ವತಂತ್ರನಾಗಿ ವೇದಾರ್ಥವನ್ನು ತಿಳಿಯುವವನು ಎಂದು ಅರ್ಥವಾಗುವುದರಿಂದ ಬ್ರಹ್ಮಾದಿ ದೇವತೆಗಳಿಗೆ ವೇದಾರ್ಥಜ್ಞಾನವು ಪರಮಾತ್ಮನ ಅನುಗ್ರಹದಿಂದ ಬರುವುದೆಂದು ಸಿದ್ಧವಾಗುತ್ತದೆ. ಸ್ಪಷ್ಟವಚನವೂ ಉಂಟು.

(10) **ಮತ್ತಃ ಸ್ಮೃತಿಜ್ಞಾನಮಪೋಹನಂಚ ।**—(15. 15.)

ನನ್ನಿಂದಲೇ ಸ್ಮರಣೆಯು, ಜ್ಞಾನವು, ವಿಪರ್ಯಯಜ್ಞಾನವೂ ಉಂಟಾಗುವುವು.

10-11. ಬಂಧ-ಮೋಕ್ಷಪ್ರದತ್ವ. ಯಾರಿಗೆ ಯಾರು ಬಂಧಕನೋ ಅವನು ಅವರಿಗಿಂತ ಉತ್ತಮನು; ಬದ್ಧರನ್ನು ಬಿಡುಗಡೆಮಾಡುವವನು ಬದ್ಧರಿಗಿಂತ ಸುತರಾಂ ಉತ್ತಮನು ಎಂದು ಲೋಕಸಿದ್ಧವಾಗಿರುವುದು. ಇದು ವಿಷ್ಣುಮಾತ್ರ ನಿಷ್ಠವಾದ ಲಕ್ಷಣವಾದುದರಿಂದ ವಿಷ್ಣು ಸರ್ವೋತ್ತಮತ್ವವು ಸಿದ್ಧಿಸುವುದು.

(1) **ದೈವೀಹ್ಯೇಷಾಗುಣಮಯೀ ಮಮಮಾಯಾದುರತ್ಯಯಾ ।**
(71. 4.)

ದೇವನಾದ ನಾರಾಯಣನಿಗೆ ಅಧೀನವಾದ ಮತ್ತು ಅತ್ಯದ್ಭುತವಾದ ಶಕ್ತಿಯುಳ್ಳ ತ್ರಿಗುಣಾತ್ಮಕವಾದ ನನ್ನಿಂದ ನಿಯಮ್ಯವಾದ ಲಕ್ಷ್ಮಿಯಿಂದ ಅಭಿಮನ್ಯವಾದ ಅವಿದ್ಯೆಯು ದಾಟುವುದಕ್ಕೆ ಅಶಕ್ಯವು.

ಹೀಗೆ ನನ್ನ ಮಾಯೆಯನ್ನು ದಾಟುವುದು ಅಶಕ್ಯವೆಂದು ಹೇಳಿರುವುದರಿಂದ ಬಂಧಕರ್ತೃತ್ವವು ವಿಷ್ಣುವಿಗೇ ಎಂಬುದು ಸಿದ್ಧವಾಯಿತು. ಮೋಕ್ಷಕರ್ತೃತ್ವವು ವಿಷ್ಣುವಿಗೇ ಎಂಬುವುದರಲ್ಲಿ ಅನೇಕ ಪ್ರಮಾಣಗಳುಂಟು.

(2) **ಮಾಮೇವಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿತೇ ।**
—(7. 14.)

ಯಾರು ನನ್ನನ್ನೇ ಆಶ್ರಯಿಸುತ್ತಾರೆಯೋ ಅವರೇ ಈ (ಪೂರ್ವೋಕ್ತ ಲಕ್ಷ್ಮಿಯಿಂದ ಅಭಿಮನ್ಯವಾದ ನನ್ನ ಅಧೀನವಾದ) ಪ್ರಕೃತಿಬಂಧವನ್ನು ದಾಟುತ್ತಾರೆ (ಪರಿಹರಿಸಿಕೊಳ್ಳುತ್ತಾರೆ.) ಪ್ರಕೃತಿಬಂಧ ನಿವೃತ್ತಿರೂಪ ಮುಕ್ತಿಯು ನನ್ನಿಂದಲೇ ಆಗಬೇಕೆಂದು ಕಂಠತಃ ಹೇಳಿರುತ್ತಾನೆ.

(3) **ಮತ್ಕರ್ಮಕೃನ್ಮತ್ಪರಮೋಮದ್ಭಕ್ತಸ್ಸಂಗವರ್ಜಿತಃ ।**
ನಿರ್ವೈರಃ ಸರ್ವಭೂತೇಷು ಯಸ್ಸಮಾಮೇತಿಪಾಂಡವ ॥
(11. 55.)

ಅರ್ಥವು—ನನ್ನ ಪ್ರೀತ್ಯರ್ಥವಾಗಿ ವಿಹಿತಕರ್ಮಗಳನ್ನು ಮಾಡುವವನಾಗಿ, ನಾನೇ (ಕೃಷ್ಣನೇ) ಸರ್ವೋತ್ತಮನೆಂಬ ಜ್ಞಾನವುಳ್ಳವನಾಗಿ, ನನ್ನಲ್ಲಿ ಭಕ್ತಿಯುಳ್ಳವನಾಗಿ, ವಿಷಯಗಳಲ್ಲಿ ಸ್ನೇಹವರ್ಜಿತನಾಗಿ, ಸಕಲ ಸಜ್ಜನರಲ್ಲಿಯೂ ವಿರೋಧರಹಿತನಾಗಿರುವವನು ನನ್ನನ್ನು ಹೊಂದುತ್ತಾನೆ ಎಂದರೆ ಮುಕ್ತನಾಗುತ್ತಾನೆ. (ಪರಮಾತ್ಮನನ್ನು ಹೊಂದುವುದು, ಎಂದರೆ ಅವನ ನಿತ್ಯವಾದ ಲೋಕಗ

ಳಲ್ಲಿ ಅವನ ಪೂರ್ಣಾನುಗ್ರಹದಿಂದ ವಾಸಮಾಡುವುದೇ ಮುಕ್ತಿಯು. ಇದು ಮುಂದೆ ವಿಶದವಾಗುವುದು.)

(4) **ಮಚ್ಚಿತ್ತಸ್ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ।**

—(18. 58.)

ನನ್ನಲ್ಲಿಯೇ ಲಗ್ನವಾದ ಚಿತ್ತವುಳ್ಳವನಾಗಿ ನೀನು ಪ್ರಕೃತಿ, ಅವಿದ್ಯಾದಿ ಕೃತಸರ್ವ ಕ್ಲೇಶಗಳನ್ನೂ ನನ್ನ ಅನುಗ್ರಹದಿಂದ ದಾಟುತ್ತೀಯೆ (ಮುಕ್ತನಾಗುತ್ತೀಯೆ) ಎಂದರ್ಥವು.

(5) **ಸರ್ವಧರ್ಮಾನ್ಪರಿತ್ಯಜ್ಯಮಾಮೇಕಂ ಶರಣಂವ್ರಜ ।**
ಅಹಂತ್ವಾಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿಮಾಶುಚಃ ॥

—(18. 66.)

ಸರ್ವ ಧರ್ಮಫಲಗಳನ್ನೂ ನನ್ನಲ್ಲಿ ಸಮರ್ಪಿಸಿ, ಸರ್ವ ಅವೈಷ್ಣವ ಧರ್ಮಗಳನ್ನೂ ಪರಿತ್ಯಾಗಮಾಡಿ ಅಥವಾ ಭಗವಂತನ ಶರಣಾಗತಿಯೇ ಎಲ್ಲಾ ಧರ್ಮಗಳಿಗಿಂತಲೂ ಶ್ರೇಷ್ಠವೆಂದು ತಿಳಿದು, ನನ್ನನ್ನು ಸರ್ವೋತ್ತಮನನ್ನಾಗಿ ತಿಳಿದು ನನ್ನಲ್ಲಿ ಶರಣಾಗತನಾಗು. ನಾನು ನಿನ್ನನ್ನು ಸರ್ವ ಪಾಪಗಳಿಂದಲೂ ಬಿಡಿಸಿಬಿಡುತ್ತೇನೆ. ನೀನು ದುಃಖಪಡಬೇಡ. (ಸಂಸಾರದಿಂದ ಮುಕ್ತನನ್ನಾಗಿ ಮಾಡುತ್ತೇನೆಂದು ಅರ್ಥವು.)

ಹೀಗೆ ಬಂಧಕರ್ತೃತ್ವವೂ ಮೋಕ್ಷದಾನ ಶಕ್ತಿಯೂ ಶ್ರೀಕೃಷ್ಣನಿಗೇ ಇರುತ್ತವೆ. ಬ್ರಹ್ಮಾದಿ ಚೇತನರಿಗೆ ಈ ಸಾಮರ್ಥ್ಯವು ಇರುವುದಿಲ್ಲವೆಂಬುದನ್ನು ಅವರುಗಳ ವಾಸಸ್ಥಾನದ ವೈಲಕ್ಷಣ್ಯ ಮತ್ತು ಅವರ ಪೂಜಾದಿಂದ ಪ್ರಾಪ್ತವಾಗುವ ಫಲವೈಲಕ್ಷಣ್ಯವೆಂಬ ಎರಡು ಯುಕ್ತಿಗಳಿಂದಲೂ ತೋರಿಸಿರುತ್ತಾನೆ.

(6) **ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।**
ಮಾಮುಪೇತ್ಯತುಕೌಂತೇಯ ಪುನರ್ಜನ್ಮನವಿದ್ಯತೇ ॥--(8. 16.)

ಅರ್ಥವು—ಬ್ರಹ್ಮಸದನವನ್ನು ಆರಂಭಿಸಿ ಕೆಳಗಿನ ಸರ್ವ ಲೋಕಗಳೂ ಪುನಃ ಪುನಃ ಸಂಸಾರಕ್ಕೆ ಕಾರಣವಾಗುತ್ತವೆ. ನನ್ನನ್ನು ಹೊಂದಿದರೆ ಪುನರ್ಜನ್ಮವು ಇರುವುದಿಲ್ಲ. ಜನ ಆದಿಲೋಕಸ್ಥನಾದ ಶ್ರೀಕೃಷ್ಣನನ್ನು ಹೊಂದಿದವರಿಗೇ ಪುನರ್ಜನ್ಮಾಭಾವವೂ, ಕೃಷ್ಣನನ್ನು ಹೊಂದದವರಿಗೆ ಸರ್ವಥಾ ಪುನರಾವರ್ತಿ ರೂಪಸಂಸಾರವೂ ಹೇಳಲ್ಪಟ್ಟಿರುವುದರಿಂದ ಬ್ರಹ್ಮರುದ್ರಾದಿಗಳ ಪ್ರಾಪ್ತಿಯು ಮೋಕ್ಷಕ್ಕೆ ಕಾರಣವಲ್ಲವೆಂದೂ ವಿಷ್ಣುವಿನ ಪ್ರಾಪ್ತಿಯು ಮೋಕ್ಷಕ್ಕೆ ಕಾರಣವೆಂದೂ ಸಿದ್ಧವಾಗುವುದು.

(7) **ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ ।**

—(18. 53.)

ನನ್ನ ಅನುಗ್ರಹದಿಂದ ಶಾಶ್ವತವಾದ ನಾಶರಹಿತವಾದ ಸ್ಥಾನವನ್ನು ಹೊಂದುತ್ತಾನೆ.

(8) **ಮಾಮುಪೇತ್ಯ ಪುನರ್ಜನ್ಮದುಃಖಾಲಯಮಶಾಶ್ವತಂ ।**
ನಾಪ್ನುವಂತಿಮಹಾತ್ಮಾನಸ್ಸಂಸಿದ್ಧಿಂ ಪರಮಾಂಗತಾಃ ॥

—(8. 15.)

ನನ್ನ ಪ್ರಾಪ್ತಿಯೇ ಪರಮಗತಿಯೆಂದು ಶ್ರೀಕೃಷ್ಣನು ಹೇಳುತ್ತಾನೆ. ನನ್ನನ್ನು ಹೊಂದಿದ ಮಹಾತ್ಮರು (ನನ್ನ ಪ್ರಾಪ್ತಿಯೇ ಪರಮಗತಿಯಾದುದ ರಿಂದ) ಮೋಕ್ಷರೂಪವಾದ ಅತ್ಯುತ್ತಮವಾದ ಸಿದ್ಧಿಯನ್ನು ಹೊಂದಿದವರಾಗಿ ಅಶಾಶ್ವತವಾದ ದುಃಖಪೂರ್ಣವಾದ ಪುನಃ ಪುನಃ ದೇಹಸಂಬಂಧರೂಪ ಸಂಸಾ ರವನ್ನು ಹೊಂದುವುದಿಲ್ಲ.

(9) **ಯಂಪ್ರಾಪ್ಯನನಿವರ್ತಂತೇ ತದ್ಧಾಮಪರಮಂಮಮ ।**

—(8. 21.)

ಅಧಿಕಾರಿಗಳು ಯಾರನ್ನು ಹೊಂದಿದಮೇಲೆ ಪುನಃ ಜನ್ಮಮರಣರೂಪವಾದ ಸಂಸಾರವನ್ನು ಹೊಂದುವುದಿಲ್ಲವೋ ಅಂಥಾ (ಪರಮಪ್ರಾಪ್ಯವಾದ)ದ್ದು ನನ್ನ ಸ್ವರೂಪವು ಅಥವಾ ನಿತ್ಯವಾದ ನನ್ನ ವೈಕುಂಠಾದಿಲೋಕವು. ಮಹಾ ಪ್ರಳಯ ಕಾಲದಲ್ಲಿ ಬ್ರಹ್ಮಾದಿ ಸರ್ವಜಗತ್ತೂ ನಾಶಹೊಂದಿದರೂ ನನಗೆ ನಾಶವಿಲ್ಲವೆಂದು ಶ್ರೀಕೃಷ್ಣನು ಹೇಳುತ್ತಾನೆ.

(10) **ಪರಸ್ತಸ್ಮಾತ್ತುಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।**
ಯಸ್ಸಸರ್ವೇಷುಭೂತೇಷು ನಶ್ಯತ್ಸು ನವಿನಶ್ಯತಿ ॥ —(8. 20.)

ಅವ್ಯಕ್ತನಾಮಕ ಭಗವಂತನಾದರೋ ಸ್ವತಂತ್ರನು, ಉತ್ತಮನು ಮತ್ತು ಸನಾತನನು (ಅನಾದಿನಿತ್ಯನು); ಅವನು ವ್ಯಕ್ತವಾದ (ಉತ್ಪನ್ನವಾದ) ಪ್ರಾಣಿ ಸಮೂಹಗಳೆಲ್ಲಕ್ಕಿಂತಲೂ ಅನ್ಯಃ ಎಂದರೆ ವಿಲಕ್ಷಣನು. ಸರ್ವಪ್ರಾಣಿಗಳೂ ನಷ್ಟ ವಾದರೂ (ಪ್ರಳಯದಲ್ಲಿ) ಆತನು ನಾಶವನ್ನು ಹೊಂದುವುದಿಲ್ಲ.

(11) **ನತದ್ಭಾಸಯತೇಸೂರ್ಯೋ ನಶಶಾಂಕೋನಪಾವಕಃ।**
ಯದ್ಗತ್ವಾನನಿವರ್ತಂತೇ ತದ್ಧಾಮಪರಮಂಮಮ ॥—(15. 6.)

ಯಾವ ಪರಬ್ರಹ್ಮನ ಲೋಕವನ್ನು ಈ ಸೂರ್ಯನೂ, ಚಂದ್ರನೂ, ಅಗ್ನಿ ಯೂ ಪ್ರಕಾಶಪಡಿಸುವುದಿಲ್ಲವೋ, ಮತ್ತು ಯಾವುದನ್ನು ಹೊಂದಿದಮೇಲೆ ಪುನ

ರಾವರ್ತಿಯಿಲ್ಲವೋ ಅಂಥಾ ಪರಮಧಾಮವು (ಪರಮಪ್ರಾಪ್ಯವಾದ ಸ್ಥಾನವು) ನನ್ನದು.

(12) **ತಮೇವಶರಣಂಗಚ್ಛಸರ್ವಭಾವೇನಭಾರತ ।**
ತತ್ಪ್ರಸಾದಾತ್ಪರಾಂ ಶಾಂತಿಂಸ್ಥಾನಂ ಪ್ರಾಪ್ಸ್ಯಸಿಶಾಶ್ವತಂ ॥
—(18. 62.)

ಓ ಭಾರತ! ಈಶ್ವರನನ್ನು (ನನ್ನನ್ನು) ಸರ್ವಪ್ರಕಾರದಿಂದಲೂ ಶರಣು ಹೊಂದು. ಈಶ್ವರನಾದ ನನ್ನ ಅನುಗ್ರಹದಿಂದ ಉತ್ಕೃಷ್ಟಶಾಂತಿಯನ್ನು (ಶಾಶ್ವತವಾದ ವೈಕುಂಠಾದಿ ಲೋಕವನ್ನು) ಹೊಂದುತ್ತೀಯೆ. ಬ್ರಹ್ಮಾದಿ ದೇವತೆಗಳು ಶಾಶ್ವತವಾದ ಫಲವನ್ನು ಕೊಡಲಾರರು. ದೇವತೆಗಳ ಸೇವೆಯಿಂದಾಗುವ ಫಲವು ಅತ್ಯಲ್ಪವಾದುದು ಮತ್ತು ಅಶಾಶ್ವತವಾದುದು. ಶ್ರೀಕೃಷ್ಣನ ಸೇವೆಯಿಂದಾಗುವ ಫಲವು ಸ್ಥಿರವಾದುದು ಮತ್ತು ನಿರವಧಿಕವಾದುದು ಎಂದು ಹೇಳುತ್ತಾನೆ.

(13) **ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇನ್ಯದೇವತಾಃ ।**
ಅಂತವತ್ತುಫಲಂತೇಷಾಂ ತದ್ಭವತ್ಯಲ್ಪಮೇಧಸಾಂ ।-(7. 20-23.)
ಮಾಮುಪೇತ್ಯಪುನರ್ಜನ್ಮದುಃಖಾಲಯಮಶಾಶ್ವತಂ ।
ನಾಪ್ನುವಂತಿಮಹಾತ್ಮಾನಃ ಸಂಸಿದ್ಧಿಂಪರಮಾಂಗತಾಃ ॥ —(8. 15.)

ಅಧಿಕಾರಿಗಳು ನಾನಾ ವಿಧವಾದ ಅಭೀಷ್ಟಗಳನ್ನು ಕೋರುವವರಾಗಿ ಅನ್ಯದೇವತೆಗಳನ್ನು ಶರಣುಹೊಂದುತ್ತಾರೆ. ಅಲ್ಪಬುದ್ಧಿಗಳಾದ ಇಂಥವರಿಗಾಗುವ ಫಲವು ಬಹು ಬೇಗ ನಾಶಹೊಂದತಕ್ಕದ್ದು. (ನನ್ನಲ್ಲಿ ಶರಣಾಗತನಾದರೆ ಅನಂತವಾದ ಫಲವುಂಟು ಎಂದು ಸೂಚಿಸಿರುತ್ತಾನೆ.) ನನ್ನಲ್ಲಿ ಶರಣಾಗತರಾದ ಮಹಾತ್ಮರು ಪರಮಸಂಸಿದ್ಧಿಯನ್ನು (ಮೋಕ್ಷವನ್ನು) ಹೊಂದಿದವರಾಗಿ ದುಃಖ ಪ್ರಚುರವಾದ ಅಶಾಶ್ವತವಾದ ಸಂಸಾರವನ್ನು ಹೊಂದುವುದಿಲ್ಲ.

ಹನ್ನೆರಡನೆಯ ಅಧ್ಯಾಯದಲ್ಲಿ ನಿತ್ಯಮುಕ್ತಳಾದ ಲಕ್ಷ್ಮೀದೇವಿಯ ಉಪಾಸನೆಗೂ ನಿನ್ನ ಉಪಾಸನೆಗೂ ವ್ಯತ್ಯಾಸವೇನು ಎಂದು ಅರ್ಜುನನು ಕೇಳಿದ ಪ್ರಶ್ನೆಗೆ ಶ್ರೀಕೃಷ್ಣನು ಕೊಟ್ಟಿರುವ ಉತ್ತರವನ್ನು ಪರಾಮರ್ಶೆ ಮಾಡಿದರೆ ಲಕ್ಷ್ಮಿಗೂ ನಾರಾಯಣನಿಗೂ ಇರುವ ತಾರತಮ್ಯವು ವಿದಿತವಾಗುವುದು. ಲಕ್ಷ್ಮೀ ಉಪಾಸನೆಯು ಅತಿ ಕ್ಲೇಶಕರವಾದುದು; ಮತ್ತು ಬಹುಕಾಲದಮೇಲೆ ವಿಷ್ಣುವಿನ ಪ್ರಸಾದಕ್ಕೆ ಕಾರಣವಾಗಿಯೇ ಫಲವನ್ನು ಕೊಡತಕ್ಕದ್ದು. ಲಕ್ಷ್ಮಿಯು ಸಾಕ್ಷಾತ್ತಾಗಿ ಸ್ವತಂತ್ರಳಾಗಿ ಫಲವನ್ನು ಕೊಡಲಾರಳು. ತನ್ನ ಉಪಾಸಕರ ವಿಷ

ಯದಲ್ಲಿ ಶಿಫಾರಸು ಮಾಡಿ ತನ್ನ ಪತಿಯ ಕಡೆಯಿಂದ ವಿಶಿಷ್ಟ ಫಲವನ್ನು ಕೊಡಿಸುವಳು. ನಾರಾಯಣನ ಉಪಾಸನೆಯು ಹೆಚ್ಚು ಕಷ್ಟಕರವಲ್ಲ; ಹೆಚ್ಚು ವಿಳಂಬವಿಲ್ಲದೆ ಪೂರ್ಣಫಲವನ್ನು ನಾರಾಯಣನಿಂದಲೇ ಕೊಡಿಸುವುದು ಎಂದು ಹೇಳುತ್ತಾನೆ.

(14) **ಅರ್ಜುನಉವಾಚ॥ ಏವಂ ಸತತಯುಕ್ತಾಯೇ ಭಕ್ತಾಸ್ತ್ವಾಂ ಪರ್ಯುಪಾಸತೇ । ಯೇ ಚಾಪ್ಯಕ್ಷರಮವ್ಯಕ್ತಂತೇಷಾಂ ಕೇ ಯೋಗವಿತ್ತಮಾಃ ॥**

ಶ್ರೀಭಗವಾನುವಾಚ ॥ ಮಯ್ಯಾವೇಶ್ಯಮನೋ ಯೇಮಾಂ ನಿತ್ಯಯುಕ್ತಾ ಉಪಾಸತೇ ।

ಶ್ರದ್ಧಯಾಪರಯೋಪೇತಾಸ್ತೇಮೇಯುಕ್ತತಮಾಮತಾಃ ।
ಯೇತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ತೇಪ್ರಾಪ್ನುವಂತಿಮಾಮೇವ ಸರ್ವಭೂತಹಿತೇರತಾಃ ।
ಕ್ಲೇಶೋಧಿಕತರಸ್ತೇಷಾಮವ್ಯಕ್ತಾಸಕ್ತ ಚೇತಸಾಂ ।
ಅವ್ಯಕ್ತಾಹಿಗತಿರ್ದುಃಖಂದೇಹವದ್ಭಿರವಾಪ್ಯತೇ ।
ಯೇತುಸರ್ವಾಣಿ ಕರ್ಮಾಣಿ ಮಯಿಸನ್ನ್ಯಸ್ಯಮತ್ಪರಾಃ ।
ಅನನ್ಯೇನೈವಯೋಗೇನ ಮಾಂ ಧ್ಯಾಯಂತಉಪಾಸತೇ ।
ತೇಷಾಮಹಂ ಸಮುದ್ಧರ್ತಾಮೃತ್ಯುಸಂಸಾರಸಾಗರಾತ್ ।
ಭವಾಮಿನಚಿರಾತ್ಪಾರ್ಥಮಯ್ಯಾವೇಶಿತ ಚೇತಸಾಂ ॥ —(12. 1-7.)

ಅರ್ಜುನನು ಪ್ರಶ್ನೆಮಾಡುತ್ತಾನೆ—ಹೇ ಸ್ವಾಮಿ! ಪೂರ್ವೋಕ್ತರೀತಿಯಲ್ಲಿ ನಿನ್ನನ್ನು ಯಾರು ಭಕ್ತಿಪೂರ್ವಕವಾಗಿ ಉಪಾಸನೆ ಮಾಡುತ್ತಾರೆಯೋ ಮತ್ತು ಯಾರು ಅಕ್ಷರನಾಮಕಳಾದ ಚೇತನಪ್ರಕೃತಿಯನ್ನು (ಲಕ್ಷ್ಮೀದೇವಿಯನ್ನು) ಭಕ್ತಿಪೂರ್ವಕವಾಗಿ ಉಪಾಸನೆ ಮಾಡುತ್ತಾರೆಯೋ ಅವರಿಬ್ಬರ ಮಧ್ಯದಲ್ಲಿ ಯಾರು ಅಧಿಕವಾಗಿ ಮೋಕ್ಷೋಪಾಯವನ್ನು ಬಲ್ಲವರು?

ಶ್ರೀಕೃಷ್ಣನು ಹೇಳುತ್ತಾನೆ—ಯಾರು ನನ್ನಲ್ಲಿ ಮನಸ್ಸನ್ನಿಟ್ಟು ನಿರಂತರ ಕರ್ಮಧ್ಯಾನಾದಿಗಳಿಂದ ಉತ್ಕೃಷ್ಟಶ್ರದ್ಧೆಯಿಂದ **ನನ್ನನ್ನು ಉಪಾಸನೆಮಾಡುತ್ತಾರೆಯೋ ಅವರೇ ಅಧಿಕವಾಗಿ ಮೋಕ್ಷೋಪಾಯವನ್ನು ಬಲ್ಲವರು.** ಯಾರು ಅಕ್ಷರಳೂ, ಅನಿರ್ದೇಶ್ಯಳೂ, ಅವ್ಯಕ್ತಳೂ ಆದ ಲಕ್ಷ್ಮೀದೇವಿಯನ್ನು ಉಪಾಸನೆಮಾಡುತ್ತಾರೆಯೋ ಅವರು ಸರ್ವ ಪ್ರಾಣಿಗಳ ಸುಖವನ್ನು ಕೋರುವುದೇ ಮೊದಲಾದ ಗುಣಗಳುಳ್ಳವರಾಗಿ ನನ್ನನ್ನೇ ಹೊಂದುತ್ತಾರೆ.

(ಭಕ್ತ್ಯೋದ್ಧರಿತ ನನ್ನಿಂದಲೇ ಮುಕ್ತಿಫಲವನ್ನು ಹೊಂದುತ್ತಾರೆ ಎಂದರ್ಥವು.)

ಹೀಗೆ ಅವ್ಯಕ್ತೋಪಾಸಕರಿಗೂ ಮುಕ್ತಿಯೂ, ವಿಷ್ಣುವಿನ ಉಪಾಸಕರಿಗೂ ಮುಕ್ತಿಯೂ ಎಂದು ಫಲಸಾಮ್ಯವು ಬರುವುದರಿಂದ ಭಿನ್ನ ಉಪಾಸನೆಯು ಹೇಗೆ ಉಕ್ತವೆಂದರೆ ಹೇಳುತ್ತಾನೆ.—ಅವ್ಯಕ್ತೋಪಾಸನೆಯನ್ನು ಮಾಡುವ ಅಧಿಕಾರಿಗಳಿಗೆ ಅತ್ಯಂತ ಅಧಿಕವಾದ ಕ್ಲೇಶವುಂಟು. ಭಕ್ತಿಯೋಗದ ಉಪಾಸನೆಯೋದ್ಧಾರವಾಗಿ ಉಳ್ಳ ಭಗವತ್ಪ್ರೀತಿಮಾರ್ಗವು ಪಾತ್ರರಿಗೆ ಬಹು ಶ್ರಮದಿಂದ ಸುಲಭವಾಗಿ ಹೊಂದಲ್ಪಡುವುದು. ಯಾರು ಸರ್ವವಿಧ್ಯುಕ್ತ ಕರ್ಮಗಳನ್ನು ಮಾಡಿ ನನ್ನಲ್ಲಿಯೇ ಅರ್ಪಿಸಿ ನಾನೇ ಸರ್ವೋತ್ತಮನೆಂದು ತಿಳಿದು ಅನನ್ಯವಾದ ಮನಸ್ಸಿನಿಂದ ನನ್ನನ್ನು ಧ್ಯಾನಮಾಡುತ್ತಾ ಉಪಾಸನೆ ಮಾಡುತ್ತಾರೆಯೋ ಅಂಥಾ ನನ್ನಲ್ಲಿಯೇ ಆಸಕ್ತವಾದ ಮನಸ್ಸುಳ್ಳವರನ್ನು ನಾನು ಶೀಘ್ರವಾಗಿ ಮೃತ್ಯುರೂಪ ಈ ಸಂಸಾರದ ದೆಸೆಯಿಂದ ಉದ್ಧರಿಸುತ್ತೇನೆ.

ಭಕ್ತಿಯಲ್ಲಿರುವ ಮೋಕ್ಷದಾನಶಕ್ತಿಯೂ ಕೂಡ ಪರಮಾತ್ಮನ ಅಧೀನವೇ ಎಂಬುದು ಈ ಶ್ಲೋಕಗಳಿಂದಲೇ ತಿಳಿಯುತ್ತಿರುವುದು. ಶ್ರೀಕೃಷ್ಣನೂ ಅನ್ಯತ್ರ ಹೇಳುತ್ತಾನೆ.

(15) ಬ್ರಹ್ಮಣೋಹಿಪ್ರತಿಷ್ಠಾಹ ಮಮೃತಸ್ಯಾವ್ಯಯಸ್ಯಚ |
ಶಾಶ್ವತಸ್ಯಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯಚ ||—(14.27.)

ನಾನು ಭಕ್ತಿಯೋಗಿಗೂ ನಾಶರಹಿತವಾದ ಮುಕ್ತಿವರ್ಗಕ್ಕೂ ಸನಾತನವಾದ ಧರ್ಮಕ್ಕೂ ಮತ್ತು ಮೋಕ್ಷಸುಖಕ್ಕೂ ನಿಯಾಮಕನು.

ಈರೀತಿಯಲ್ಲಿ ಶ್ರೀಕೃಷ್ಣನು ವೇದಾಂತಸೂತ್ರಗಳಲ್ಲಿ ಯಾವ ಲಕ್ಷಣಗಳಿಂದ ವಿಷ್ಣುವೇ ಪರಬ್ರಹ್ಮನೆಂದು ನಿರ್ಣಯ ಮಾಡಿರುವರೋ ಅದೇ ಅಸಾಧಾರಣ ಧರ್ಮಗಳನ್ನು ತನ್ನಲ್ಲಿರುವುದೆಂದು ಪ್ರತಿಪಾದನೆಮಾಡಿ ತೋರಿಸಿ ತನ್ನ ಸರ್ವೋತ್ತಮತ್ವವನ್ನು ಸ್ಥಾಪಿಸುತ್ತಾನೆ. ಅಷ್ಟದಿಗ್ಗಜಗಳ ಆಧಾರದಿಂದ ಸಪ್ತಸಮುದ್ರವಲಯಾಂಕಿತವಾದ ಈ ಯಾವತ್ತೂ ಪೃಥ್ವಿಯು ಸುಪ್ರತಿಷ್ಠಿತವಾಗಿರುವಂತೆ ಪರಬ್ರಹ್ಮನ ಸರ್ವೋತ್ತಮತ್ವವು ಅಷ್ಟಕರ್ತೃತ್ವರೂಪ ಅಸಾಧಾರಣ ಧರ್ಮಗಳಿಂದ ಶಾಸ್ತ್ರದಲ್ಲಿ ಸ್ಥಾಪಿಸಲ್ಪಟ್ಟಿರುವುದು.

ಇವುಗಳಹೊರತು ಇತರ ದೇವತೆಗಳಲ್ಲಿಲ್ಲದ ಅನೇಕ ಅಸಾಧಾರಣ ಧರ್ಮಗಳು ಶ್ರೀಕೃಷ್ಣನಲ್ಲಿ ವ್ಯಕ್ತವಾಗಿರುವುವು. ಇವು ಒಂದೊಂದೂ ಸರ್ವೋತ್ತಮತ್ವಕ್ಕೆ ಸಾಧಕವಾದ ಧರ್ಮಗಳು.

12. ನಿಯಾಮಕರೂಪೇಣ ಅಂತರ್ಬಹಿರ್ವ್ಯಾಪ್ತತ್ವವು ವಿಷ್ಣುವಿಗೆ ಸರ್ವೋತ್ತಮತ್ವಸಾಧಕವಾದ ಲಕ್ಷಣವೆಂದು "ಸರ್ವತ್ರಪ್ರಸಿದ್ಧೋಪದೇಶಾತ್" ಇತ್ಯಾದಿ ವೇದಾಂತಸೂತ್ರಗಳಲ್ಲಿ ನಿರ್ಣೀತವಾಗಿರುವುದು. ಅದು ಶ್ರೀಕೃಷ್ಣನಲ್ಲಿರುತ್ತದೆ.

(1) **ವಾಸುದೇವಃ ಸರ್ವಮಿತಿಸಮಹಾತ್ಮಾ ಸುದುರ್ಲಭಃ ।**—(7. 19.)

ವಾಸುದೇವನು ಸರ್ವತ್ರ ವ್ಯಾಪ್ತನೆಂದು ತಿಳಿಯುವ ಮಹಾತ್ಮನು ಅತಿ ದುರ್ಲಭನು. ಈ ಶ್ಲೋಕದಲ್ಲಿ ವಾಸುದೇವನೇ "ಸರ್ವ" ವೂ ಎಂಬ ದುರರ್ಥವು ಆಪಾತತಃ ತೋರುವುದು. ಅರ್ಜುನನು ಬುದ್ಧಿವಂತನಾದ ಶಿಷ್ಯನು. ಶ್ರೀಕೃಷ್ಣನ ಅಭಿಪ್ರಾಯವನ್ನು ತಾನು ಹೇಳಿರುತ್ತಾನೆ.

ಸರ್ವಂ ಸಮಾಪ್ನೋಷಿತತೋಽಸಿಸರ್ವಃ ।—(11.)

ನೀನು ಸರ್ವವನ್ನೂ ವ್ಯಾಪಿಸಿಕೊಂಡಿರುವುದರಿಂದ ನೀನೇ ಸರ್ವವು ಎನ್ನಿಸಿಕೊಳ್ಳುತ್ತೀಯೆ. ಇದರಿಂದ **"ಸರ್ವಂಖಲ್ವಿದಂ ಬ್ರಹ್ಮ"** ಎಂಬ ಶ್ರುತಿಯನ್ನೂ ಅರ್ಜುನನು ವ್ಯಾಖ್ಯಾನಮಾಡಿದ ಹಾಗಾಯಿತು.

(2) **ಮಯಾತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ॥**—(9. 4.)

ಚರಾಚರಾತ್ಮಕವಾದ ಈ ಸರ್ವ ಪ್ರಪಂಚವೂ ಸೂಕ್ಷ್ಮರೂಪಿಯಾದ ನನ್ನಿಂದ ವ್ಯಾಪ್ತವಾಗಿದೆ.

(3) **ಅಹಮಾತ್ಮಾ ಗುಡಾಕೇಶಸರ್ವಭೂತಾಶಯಸ್ಥಿತಃ ।**—(10. 20)

ನಾನು ಸರ್ವತ್ರವ್ಯಾಪ್ತನಾಗಿ ಸರ್ವ ದೇಹಿಗಳ ಅಂತಃಕರಣದಲ್ಲಿಯೂ ಸ್ಥಿತನಾಗಿರುವೆನು.

(4) **ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನಸ್ಥಿತೋಜಗತ್ ।**

—(10. 42)

ನಾನು ಈ ಪ್ರಮಾಣಪ್ರಮಿತವಾದ ಸರ್ವ ಜಗತ್ತನ್ನೂ ನನ್ನ ಅನಂತಾಂಶಗಳಲ್ಲಿ ಏಕಾಂಶದಿಂದಲೇ ವ್ಯಾಪಿಸಿಕೊಂಡು ಇರುತ್ತೇನೆ.

(5) **ನಾಂತಂನಮಧ್ಯಂನಪುನಸ್ತವಾದಿಂಪಶ್ಯಾಮಿವಿಶ್ವೇಶ್ವರವಿಶ್ವರೂಪ।**

—(11. 16.)

ಹೇ ವಿಶ್ವೇಶ್ವರ! ವಿಶ್ವರೂಪ (ವ್ಯಾಪ್ತವಾದ ರೂಪವುಳ್ಳವನೇ)! ನಿನ್ನ ವ್ಯಾಪ್ತಿಗೆ ಆದಿಯನ್ನೂ ಮಧ್ಯವನ್ನೂ ಅಂತವನ್ನೂ ತಿಳಿಯಲಾರೆನು. ನೀನು ಅಪರಿಚ್ಛಿನ್ನವ್ಯಾಪ್ತಿಯುಳ್ಳವನೆಂದರ್ಥವು.

(6) **ದ್ಯಾವಾಪೃಥಿವ್ಯೋರಿದಮಂತರಂಹಿವ್ಯಾಪ್ತಂ ತ್ವಯೈಕೇನದಿಶಶ್ಚ ಸರ್ವಾಃ ।**—(11. 20.)

ಭೂಲೋಕ ಮತ್ತು ಅಂತರಿಕ್ಷಲೋಕಗಳ ಮಧ್ಯಭಾಗವು ಮತ್ತು ಸರ್ವ ದಿಕ್ಕುಗಳೂ ಕೂಡ ನಿನ್ನಿಂದಲೇ ವ್ಯಾಪಿಸಲ್ಪಟ್ಟಿವೆ.

(7) **ಸರ್ವಂಸಮಾಪ್ನೋಷಿತತೋಽಸಿಸರ್ವಃ** ।—(11. 40.)

ನೀನು ಸರ್ವತ್ರ ವ್ಯಾಪ್ತನಾದುದರಿಂದ ಸರ್ವನಾಗಿರುತ್ತೀ.

(8) ....**ಲೋಕೇಸರ್ವಮಾವೃತ್ಯತಿಷ್ಠತಿ** ।—(13. 14.)

ಪರಬ್ರಹ್ಮನು ಸರ್ವವನ್ನೂ ವ್ಯಾಪಿಸಿಕೊಂಡು ಇರುತ್ತಾನೆ,

(9) **ಬಹಿರಂತಶ್ಚಭೂತಾನಾಂ** ।—(13, 16.)

ಪರಬ್ರಹ್ಮನು ಪ್ರಾಣಿಗಳ ಹೊರಗೂ ಒಳಗೂ ವ್ಯಾಪ್ತನಾಗಿದ್ದಾನೆ.

(10) **ದೂರಸ್ಥಂ ಚಾಂತಿಕೇಚತತ್** ।—(13. 16.)

ಪರಬ್ರಹ್ಮನು (ಶ್ರೀ ಕೃಷ್ಣನು) ಸರ್ವಗತನಾದುದರಿಂದ ದೂರದಲ್ಲಿಯೂ ಸಮೀಪದಲ್ಲಿಯೂ ಇರತಕ್ಕವನು.

(11) **ಹೃದಿಸರ್ವಸ್ಯವಿಷ್ಠಿತಂ** ।—(13. 18.)

ಪರಬ್ರಹ್ಮನು ಸರ್ವ ಪ್ರಾಣಿಗಳ ಹೃದಯಪ್ರದೇಶದಲ್ಲಿ ವಿಶೇಷವಾಗಿರುವವನು.

(12) **ಸರ್ವಸ್ಯಚಾಹಂ ಹೃದಿಸನ್ನಿವಿಷ್ಟಃ** ।—(15. 15.)

ನಾನು ಸರ್ವರ ಹೃದಯದಲ್ಲಿಯೂ ಸನ್ನಿಹಿತನಾಗಿರುತ್ತೇನೆ.

(13) **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ** ।
—(18. 61.)

ಅರ್ಜುನ! ಈಶ್ವರನು (ನಾನು) ಸರ್ವ ಪ್ರಾಣಿಗಳ ಹೃದಯ ಪ್ರದೇಶದಲ್ಲಿಯೂ ಸ್ಥಿತನಾಗಿರುತ್ತಾನೆ.

ಪೂರ್ವೋಕ್ತವಾದ ಸರ್ವಗತತ್ವವು ಬ್ರಹ್ಮಾದಿದೇವತೆಗಳಿಗಿರುವುದಿಲ್ಲ.

(14) **ಪಶ್ಯಾದಿತ್ಯಾನ್ ವಸೂನ್ ರುದ್ರಾನಶ್ವಿನೌಮರುತಸ್ತಥಾ** ।
ಬಹೂನ್ಯದೃಷ್ಟಪೂರ್ವಾಣಿ ಪಶ್ಯಾಶ್ಚರ್ಯಾಣಿಭಾರತ ॥
ಇಹೈಕಸ್ಥಂಜಗತ್ಕೃತ್ಸ್ನಂ ಪಶ್ಯಾದ್ಯಸಚರಾಚರಂ ।
ಮಮದೇಹೇಗುಡಾಕೇಶ ಯಚ್ಚಾನ್ಯದ್ದ್ರಷ್ಟುಮಿಚ್ಛಸಿ ॥
—(11. 6—7.)

ಹೇ ಭಾರತ! ಆದಿತ್ಯರು, ವಸುಗಳು, ರುದ್ರರು, ಅಶ್ವಿನೀದೇವತೆಗಳು, ಮರುದ್ಗಣಗಳು, ಇನ್ನೂ ಪೂರ್ವದಲ್ಲಿ ನೋಡದಿರುವ ಸಕಲ ಅದ್ಭುತಪದಾರ್ಥಗಳು ;

ಮತ್ತು ಸ್ಥಾವರ ಜಂಗಮಾತ್ಮಕವಾದ ಸಕಲ ಪ್ರಪಂಚವನ್ನೂ ಈ ವಿಶ್ವರೂಪಿಯಾದ ನನ್ನ ದೇಹದಲ್ಲಿ **ಏಕದೇಶದಲ್ಲಿರುವುದನ್ನು** ನೋಡು. ಅರ್ಜುನನೂ ಹಾಗೆಯೇ ನೋಡಿರುತ್ತಾನೆ.

(15) **ತತ್ರೈಕಸ್ಥಂ ಜಗತ್ಕೃತ್ಸ್ನಂಪ್ರವಿಭಕ್ತಮನೇಕಧಾ ।**
ಅಪಶ್ಯದ್ದೇವದೇವಸ್ಯಶರೀರೇ ಪಾಂಡವಸ್ತದಾ ॥—(11. 13)

ಪಾಂಡು ಪುತ್ರನಾದ ಅರ್ಜುನನು ಆಗ ದೇವದೇವನಾದ ಕೃಷ್ಣನ ಶರೀರದಲ್ಲಿ ಬಹು ಭೇದಭಿನ್ನವಾದ ಈ ನಿಖಿಲಜಗತ್ತನ್ನೂ **ಏಕದೇಶದಲ್ಲಿ** ಸ್ಥಿತವಾಗಿರುವುದನ್ನಾಗಿ (ವ್ಯಾಪ್ತವಾದ ಗಗನದಲ್ಲಿ ಒಂದು ಇರುವೆ ಇದ್ದಂತೆ) ನೋಡಿದನು.

(16) **ಪಶ್ಯಾಮಿದೇವಾಂಸ್ತವದೇವದೇಹೇಸರ್ವಾಂಸ್ತಥಾಭೂತ**
ವಿಶೇಷಸಂಘಾನ್ ।
ಬ್ರಹ್ಮಾಣಮೀಶಂಕಮಲಾಸನಸ್ಥಂ ಋಷೀಂಶ್ಚಸರ್ವಾನುರಗಾಂಶ್ಚದಿವ್ಯಾನ್ ॥—(11. 15)

ಹೇ ದೇವ! ನಿನ್ನ **ದೇಹದಲ್ಲಿ** ನಾನು ಸಕಲ ದೇವತೆಗಳನ್ನೂ, ಪ್ರಾಣಿಸಮೂಹಗಳನ್ನೂ, **ಬ್ರಹ್ಮದೇವರನ್ನೂ, ರುದ್ರದೇವರನ್ನೂ** ಸರ್ವ ಋಷಿಗಳನ್ನೂ, ಉರಗಗಳನ್ನೂ ನೋಡುತ್ತೇನೆ.

ಯದ್ಯಪಿ **ಸರ್ವತ್ರಗಂ** (12. 3.) ಎಂಬ ಶ್ಲೋಕಭಾಗದಿಂದ ಲಕ್ಷ್ಮೀದೇವಿಯು ಸರ್ವತ್ರ ವ್ಯಾಪ್ತಳೆಂದು ನಿಶ್ಚಿತವಾಗುವುದು. ಆದರೆ ಆಕೆಯು ಸರ್ವಗತತ್ವ, ಅಕ್ಷರತ್ವ, ಅವ್ಯಕ್ತತ್ವ, ಅಚಿಂತ್ಯತ್ವ, ಅನಿರ್ದೇಶ್ಯತ್ವ ಮೊದಲಾದ ಬ್ರಹ್ಮಾದಿದೇವತೆಗಳಲ್ಲಿಯೂ ಇಲ್ಲದ ಗುಣಗಳೂ ಕೂಡ ಪತಿಯಾದ ಪರಮಾತ್ಮನಿಂದ ನಿಯಮ್ಯವಾಗಿವೆ. ಈ ವಿಷಯದಲ್ಲಿ ಅನೇಕ ಪ್ರಮಾಣವಾಕ್ಯಗಳಿರುತ್ತವೆ.

(17) **ಬ್ರಹ್ಮಣೋಹಿ ಪ್ರತಿಷ್ಠಾಹಂ ।**

ನಾನು ಲಕ್ಷ್ಮಿಗೂ ಆಧಾರನು.

ಮಯಾಧ್ಯಕ್ಷೇಣಪ್ರಕೃತಿಃ ಸೂಯತೇಸಚರಾಚರಂ ।

ಅಧಿಪತಿಯಾದ ನನ್ನಿಂದ ಪ್ರೇರಿತವಾಗಿ ಚೇತನಪ್ರಕೃತಿಯು ಚರಾಚರ ಜಗತ್ತನ್ನು ಸೃಷ್ಟಿಸುವಳು.

ಮಮಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂದಧಾಮ್ಯಹಂ ॥

ಲಕ್ಷ್ಮೀದೇವಿಯು ನನ್ನ ಭಾರ್ಯೆಯು (ಕ್ಷೇತ್ರರೂಪಳು.) ಅವಳಲ್ಲಿ ನಾನು ಗರ್ಭವನ್ನು ಇಡುತ್ತೇನೆ.

ಮತ್ತಃ ಸರ್ವಂ ಪ್ರವರ್ತತೇ ||

ನನ್ನಿಂದ ಸರ್ವವೂ ಪ್ರವರ್ತಿಸುತ್ತದೆ. ಹೀಗಿರುವುದರಿಂದ ಸ್ವಾತಂತ್ರ್ಯೇಣ ಸರ್ವತ್ರ ವ್ಯಾಪ್ತನಾಗಿರುವನು ನಾರಾಯಣನೊಬ್ಬನೇ ; ಆದುದರಿಂದ ಅವನೇ ಸರ್ವೋತ್ತಮನು ಎಂದು ನಿರ್ಣೀತವಾಗುವುದು.

ಸರ್ವಗತನಾದ ಪರಮಾತ್ಮನಿಗೆ ನಾನಾ ಪದಾರ್ಥಗಳ ಸಂಬಂಧದಿಂದ ಗುಣದೋಷ ಲೇಪವು ಇರುವುದಿಲ್ಲವೆಂದೂ ಶ್ರೀ ಕೃಷ್ಣನೇ ಹೇಳುತ್ತಾನೆ.

(18) **ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ ।**
ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।
ಸರ್ವತ್ರಾವಸ್ಥಿತೋ ದೇಹೇ ತಥಾತ್ಮಾ ನೋಪಲಿಪ್ಯತೇ ||—(13. 32.)

ಪರಮಾತ್ಮನು (ನಾನು) ದೇಹಿಗಳ ಶರೀರದಲ್ಲೇ ಇದ್ದರೂ ಫಲಾಪೇಕ್ಷೆಯಿಂದ ಕರ್ಮವನ್ನು ಮಾಡುವುದಿಲ್ಲ. ಜೀವಕೃತಕರ್ಮದ ಲೇಪವು ಅವನಿಗಿಲ್ಲ. ಜೀವದೇಹದಲ್ಲಿರುವ ದೋಷಗಳ ಲೇಪವೂ ಅವನಿಗಿಲ್ಲ. ಅಶುದ್ಧ ಪ್ರದೇಶಗಳಲ್ಲಿ ಸಂಬದ್ಧವಾದರೂ ಆಕಾಶವು ಬಹು ಸೂಕ್ಷ್ಮದ್ರವ್ಯವಾದುದರಿಂದ ಹೇಗೆ ಆಯಾಯ ವಸ್ತುಗಳ ಗುಣದೋಷ ಲೇಪವಿಲ್ಲದೆ ಇರುವುದೋ ಹಾಗೆಯೇ ಸರ್ವತ್ರವ್ಯಾಪ್ತನಾಗಿ ಜೀವರ ದೇಹಗಳಲ್ಲಿಯೂ ವ್ಯಾಪ್ತನಾದ ಪರಮಾತ್ಮನೂ ಕೂಡ ಅವುಗಳ ಸಂಬಂಧದಿಂದ ಲೇಪರಹಿತನಾಗಿರುವನು (ಸುಖದುಃಖಾದಿಗಳನ್ನು ಹೊಂದುವುದಿಲ್ಲ).

13. ಪುರುಷಸೂಕ್ತಪ್ರತಿಪಾದ್ಯತ್ವವು ಸರ್ವ ವೇದಪ್ರತಿಪಾದ್ಯನಾದ ಪರಬ್ರಹ್ಮನಿಗೇ ಸಲ್ಲುವುದು. ಆ ಧರ್ಮವು ಶ್ರೀ ಕೃಷ್ಣನಲ್ಲಿ ಕಂಡುಬರುವುದರಿಂದ ಶ್ರೀ ಕೃಷ್ಣನೇ ಪರಬ್ರಹ್ಮನು ; ಆತನೇ ಸರ್ವೋತ್ತಮ ವಸ್ತುವು ಎಂದು ನಿಶ್ಚಯಿಸಬಹುದು. ಪುರುಷಸೂಕ್ತಪ್ರತಿಪಾದ್ಯವಾದ ಭಗವದ್ರೂಪವೇ ಶ್ರೀ ಕೃಷ್ಣನಿಂದ ಪ್ರದರ್ಶಿತವಾದ "ವಿಶ್ವರೂಪ"ವಾಗಿರುವದು.

(1) **ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।**
ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ||—(11. 5.)

ಎಲೈ ಅರ್ಜುನನೇ! ಅಪ್ರಾಕೃತವಾದ ನಾನಾ ಪ್ರಕಾರವುಳ್ಳ ನಾನಾ ವರ್ಣಗಳು ಮತ್ತು ಆಕಾರವಿಶೇಷಗಳನ್ನುಳ್ಳ ಬಹು ಸಂಖ್ಯಾಕವಾದ ನನ್ನ ರೂಪಗಳನ್ನು ನೋಡು.

(2) **ದರ್ಶಯಾಮಾಸಪಾರ್ಥಾಯ ಪರಮಂರೂಪಮೈಶ್ವರಂ ।**
ಅನೇಕವಕ್ತ್ರನಯನಂ ಅನೇಕಾದ್ಭುತದರ್ಶನಂ ॥
ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಂ ।
—(11. 9-11.)

ಶ್ರೀ ಹರಿಯು ಪಾರ್ಥನಿಗೆ ಯಥಾರ್ಥವಾದ ಅಚಿಂತ್ಯವಾದ ಈಶ್ವರಸಂಬಂಧಿಯಾದ ತನ್ನ ವಿಶ್ವರೂಪವನ್ನು ತೋರಿಸಿದನು. ಅದು ಅನಂತಮುಖಗಳುಳ್ಳದ್ದು; ಅನಂತ ಕಣ್ಣುಗಳುಳ್ಳದ್ದು; ಅನಂತ ಆಶ್ಚರ್ಯಗಳುಳ್ಳದ್ದು; ಸರ್ವಾಶ್ಚರ್ಯಮಯವಾದುದು; ಕ್ರೀಡಾದಿಗುಣಗಳಿಂದ ಸಹಿತವಾದುದು; ಅಪರಿಚ್ಛಿನ್ನವಾದುದು (ದೇಶತಃ ಕಾಲತಃ ಗುಣತಃ); ಮತ್ತು ಅನಂತಮುಖಗಳಿಂದ ಯುಕ್ತವಾದುದು.

(3) **ಅನೇಕಬಾಹೂದರ ವಕ್ತ್ರನೇತ್ರಂ ಪಶ್ಯಾಮಿತ್ವಾಂ ಸರ್ವತೋ-**
ನಂತರೂಪಂ ।

(4) **ನಾಂತಂನಮಧ್ಯಂನ ಪುನಸ್ತವಾದಿಂ ಪಶ್ಯಾಮಿವಿಶ್ವೇಶ್ವರ**
ವಿಶ್ವರೂಪಂ ॥

(5) **ಅನಾದಿಮಧ್ಯಾಂತ ಮನಂತವೀರ್ಯ ಮನಂತಬಾಹುಂಶಶಿ**
ಸೂರ್ಯನೇತ್ರಂ ।
ಪಶ್ಯಾಮಿತ್ವಾಂದೀಪ್ತಹುತಾಶವಕ್ತ್ರಂ ಸ್ವತೇಜಸಾವಿಶ್ವಮಿದಂ
ತಪಂತಂ ॥

(6) **ರೂಪಂಮಹತ್ತೇ ಬಹುವಕ್ತ್ರನೇತ್ರಂ ಮಹಾಬಾಹೋ ಬಹು**
ಬಾಹೂರುಪಾದಂ ।
ಬಹೂದರಂ ಬಹುದಂಷ್ಟ್ರಾಕರಾಲಂ ದೃಷ್ಟ್ವಾಲೋಕಾಃ
ಪ್ರವ್ಯಥಿತಾಸ್ತಥಾಹಂ ॥—(11. 16-23.)

ಅನೇಕ ಬಾಹುಗಳು, ಉದರಗಳು, ಮುಖಗಳು ಮತ್ತು ಕಣ್ಣುಗಳನ್ನುಳ್ಳ ವ್ಯಾಪ್ತವಾದ ಅಪರಿಮಿತ ರೂಪಗಳುಳ್ಳ ನಿನ್ನನ್ನು ನೋಡುತ್ತೇನೆ. ಹೇ ವಿಶ್ವರೂಪ! ನೀನು ದೇಶತಃ ಆದಿಮಧ್ಯಾಂತರಹಿತನು. (ಸರ್ವತ್ರವ್ಯಾಪ್ತನೆಂದರ್ಥವು) ಆದಿಮಧ್ಯಾಂತರಹಿತನಾದ (ನಿತ್ಯನಾದ) ಅಪರಿಮಿತ ವೀರ್ಯವುಳ್ಳ, ಅನಂತಬಾಹುಗಳುಳ್ಳ, ಸೂರ್ಯಚಂದ್ರರುಗಳನ್ನೇ ನೇತ್ರಸ್ಥಾನದಲ್ಲಿ ಉಳ್ಳ, (ಸೂರ್ಯಚಂದ್ರರು ಪರಮಪುರುಷನ ನೇತ್ರದಿಂದ ಉತ್ಪನ್ನರಾದವರು ಮತ್ತು ನೇತ್ರವನ್ನು ಆಶ್ರಯಿಸಿಕೊಂಡಿರುವರು.) ತೇಜಸ್ವಿಯಾದ ಅಗ್ನಿದೇವನಿಗೆ ಜನಕವಾದ ಮತ್ತು ಆಶ್ರಯವಾದ ಮುಖಗಳುಳ್ಳ ಸ್ವತೇಜಸ್ಸಿನಿಂದ ಸಕಲ ಜಗತ್ತನ್ನೂ ತಪಿಸುತ್ತಿರುವ ನಿನ್ನನ್ನು ನೋಡುತ್ತೇನೆ. ಹೇ ಪರಾಕ್ರಮಶಾಲಿಯಾದ ಸ್ವಾಮಿಯೇ! ನಿನ್ನ

ಅನಂತಮುಖಗಳು, ಅನಂತ ನೇತ್ರಗಳು, ಅನಂತ ಬಾಹುಗಳು, ಅನಂತ ಊರುಗಳು, ಅನಂತ ಪಾದಗಳು, ಅನಂತ ಉದರಗಳು ಮತ್ತು ಭಯಂಕರವಾದ ಅನಂತ ಕೋರೆ ದಾಡೆಗಳುಳ್ಳ ನಿನ್ನ ಮಹದ್ರೂಪವನ್ನು ನೋಡಿ ಸಕಲ ಲೋಕದವರೂ ಭಯಪಟ್ಟಿರುವರು. ನಾನೂ ಭಯಹೊಂದಿರುವೆನು.

(7) **ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿ ಶಿರೋಮುಖಂ ।**
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥—(13. 14.)

ಪರಬ್ರಹ್ಮನು (ಶ್ರೀಕೃಷ್ಣನು) ಒಂದೊಂದು ರೂಪಿನಲ್ಲಿಯೂ ಅನಂತಪಾಣಿಗಳು, ಪಾದಗಳು, ಅನಂತನೇತ್ರಗಳು, ಅನಂತಶಿರಸ್ಸುಗಳು, ಅನಂತಮುಖಗಳು ಮತ್ತು ಅನಂತ ಶ್ರೋತ್ರಗಳುಳ್ಳವನು.

14. ಸರ್ವವೇದ ಮತ್ತು ವೇದಾಂತ ಪ್ರತಿಪಾದ್ಯತ್ವವು ಸರ್ವೋತ್ತಮ ವಸ್ತುವಾದ ಪರಬ್ರಹ್ಮನ ಲಕ್ಷಣವೆಂದು "ಸರ್ವೇವೇದಾಯತ್ಪದಮಾಮನಂತಿ" ಇತ್ಯಾದಿ ಶ್ರುತಿಗಳಲ್ಲಿಯೂ, "ತತ್ತು ಸಮನ್ವಯಾತ್" ಇತ್ಯಾದಿ ಬ್ರಹ್ಮಸೂತ್ರಗಳಲ್ಲಿಯೂ ಪ್ರಸಿದ್ಧವಾಗಿರುವುದು ಶ್ರೀ ಕೃಷ್ಣನು ತನಗೇ ಆ ಲಕ್ಷಣವು ಉಂಟೆಂದು ಹೇಳಿಕೊಂಡಿರುವುದರಿಂದ ಅವನೇ ಪರಬ್ರಹ್ಮನು (ಸರ್ವೋತ್ತಮನು) ಎಂದು ಸಿದ್ಧವಾಗುವುದು.

(1) **ವೇದೈಶ್ಚಸರ್ವೈರಹಮೇವವೇದ್ಯಃ ।**—(15. 15.)

ಬ್ರಾಹ್ಮಣ, ಉಪನಿಷತ್, ಮಂತ್ರರೂಪವಾದ ಸಕಲ ವೇದಗಳಿಂದಲೂ ನಾನೇ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನು.

(2) **ಅತೋಽಸ್ಮಿಲೋಕೇವೇದೇ ಚ ಪ್ರಥಿತಃ ಪುರುಷೋತ್ತಮಃ ।**
—(15. 18.)

ನಾನು ಸಕಲ ಭಾರತಾದಿ ಪೌರುಷೇಯ ಗ್ರಂಥಗಳಲ್ಲಿಯೂ ಮತ್ತು ವೇದಗಳಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನು.

(3) **ಋಷಿಭಿರ್ಬಹುಧಾಗೀತಂ ಛಂದೋಭಿರ್ವಿವಿಧೈಃ ಪೃಥಕ್ ।**
ಬ್ರಹ್ಮಸೂತ್ರಪದೈಶ್ಚೈವಹೇತುಮದ್ಭಿರ್ವಿನಿಶ್ಚಿತೈಃ ॥—(13. 5.)

(ಕ್ಷೇತ್ರ ಮತ್ತು ಅವುಗಳ ವಿಕಾರಗಳು ಅವುಗಳನ್ನು ಪ್ರೇರಿಸುವ ಭಗವಂತನು ಮತ್ತು ಅವನ ಪ್ರಭಾವವು) ಋಷಿಗಳಿಂದ (ಪರಸ್ಪರ ವಿರುದ್ಧವಾಗಿ) ಬಹು ಪ್ರಕಾರವಾಗಿ ಹೇಳಲ್ಪಟ್ಟಿರುತ್ತದೆ. ಭಗವತ್ಸ್ವರೂಪವು ವೇದಾರ್ಥನಿಶ್ಚಾಯಕ ಯುಕ್ತಿಗಳಿಂದ ಸಹಿತವಾದ ಬ್ರಹ್ಮಸೂತ್ರಗಳಿಂದ ನಿರ್ಣೀತವಾದ ಅರ್ಥವುಳ್ಳ

ಅನೇಕ ವೇದಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ಪ್ರತಿಪಾದಿತವಾಗಿದೆ. ವೇದ ವೇದಾಂತ ಪ್ರತಿಪಾದ್ಯನೆಂಬ ಅರ್ಥವುಳ್ಳ ಗೋವಿಂದನೆಂಬ ಶ್ರೀ ಕೃಷ್ಣನ ಹೆಸರೂ ಕೂಡ ಈ ವಿಷಯದಲ್ಲಿ ಪ್ರಮಾಣವಾಗಿರುತ್ತದೆ.

15. ಪ್ರಣವಪ್ರತಿಪಾದ್ಯತ್ವವು ಸರ್ವೋತ್ತಮವಸ್ತುವಾದ ಪರಬ್ರಹ್ಮನ ಲಕ್ಷಣವೆಂದು ವೇದದಲ್ಲಿ ಸುಪ್ರಸಿದ್ಧವಾಗಿರುವುದು. ಶ್ರೀ ಕೃಷ್ಣನು ನಾನೇ ಪ್ರಣವಪ್ರತಿಪಾದ್ಯನೆಂದು ಹೇಳುತ್ತಾನೆ. "ಪ್ರಣವಃ ಸರ್ವವೇದೇಷು" ಎಂದರೆ ಪ್ರಣವವು ಸರ್ವವೇದಗಳ ಸಾರಭೂತವಾದುದು: ಸರ್ವ ವೇದಾರ್ಥವನ್ನೂ ಒಳಗೊಂಡಿರುವುದೆಂದು ಅರ್ಥವು. ಇಂಥಾ ಸರ್ವ ವೇದವ್ಯಾಪ್ತಿಯ ರೂಪವಾದ ಪ್ರಣವದಿಂದ ಶ್ರೀ ಕೃಷ್ಣನು ಪ್ರತಿಪಾದ್ಯನಾದರೆ ವೇದಪ್ರತಿಪಾದ್ಯತ್ವವೂ ಅವನಿಗೇ ನಿಯತವಾಗಿ ಬಂದೇ ಬರುವುದು. ಶ್ರೀ ಕೃಷ್ಣನು ಹೇಳುತ್ತಾನೆ—

(1) **ಓಮಿತ್ಯೇಕಾಕ್ಷರಂ ಬ್ರಹ್ಮವ್ಯಾಹರನ್ ಮಾಮನುಸ್ಮರನ್ ।**
ಯಃಪ್ರಯಾತಿತ್ಯಜನ್‌ದೇಹಂ ಸಯಾತಿಪರಮಾಂಗತಿಂ ॥

—(8. 13.)

ಓಂ ಎಂದು ಒಂದೇ ಅಕ್ಷರದಲ್ಲಿ ಅಡಗಿರುವ ಸರ್ವವೇದವನ್ನೂ (ಅನಂತ ವೇದದ ಅತ್ಯಂತ ಸಂಗ್ರಹರೂಪವಾದ ಓಂ ಎಂಬ ಅಕ್ಷರವನ್ನು) ಉಚ್ಚಾರಣೆ ಮಾಡುತ್ತಾ ಅದೇ ಕಾಲದಲ್ಲಿಯೇ ಮನಸ್ಸಿನಲ್ಲಿ ನನ್ನನ್ನು (ಶ್ರೀ ಕೃಷ್ಣನನ್ನು) ಧ್ಯಾನಮಾಡುತ್ತಾ ಯಾರು ದೇಹವನ್ನು ಬಿಡುವರೋ ಅವರು ಮುಕ್ತರಾಗುವರು. ಇಲ್ಲಿ ನನ್ನ ರೂಪವನ್ನು ಧ್ಯಾನಮಾಡುತ್ತಾ ಓಂ ಎಂದು ಜಪಮಾಡಬೇಕು ಎಂದು ಹೇಳಿರುವುದರಿಂದ ಶ್ರೀ ಕೃಷ್ಣನು ಓಂಕಾರ ಪ್ರತಿಪಾದ್ಯನು ಎಂಬುದು ಸಿದ್ಧವಾಯಿತು. ಕೃಷ್ಣನನ್ನು ನೋಡುತ್ತಾ ಮತ್ತೊಬ್ಬನ ನಾಮದಿಂದ ಕೂಗಿದರೆ ಅವನು ಹೇಗೆ ಬಂದು ಮುಕ್ತಿಪ್ರದನಾಗುವನು?

(2) **ವೇದ್ಯಂಪವಿತ್ರಮೋಂಕಾರ ಋಕ್ಸಾಮಯಜುರೇವಚ ।**

—(9. 17.)

ನಾನು ಜ್ಞೇಯನಾದ ವಸ್ತುವು; ಜಗತ್ತಿಗೆ ಪಾವನನು; ಪ್ರಣವಪ್ರತಿಪಾದ್ಯನು; ಋಗ್ವೇದ, ಸಾಮವೇದ, ಯಜುರ್ವೇದಗಳಿಗೆ ನಿಯಾಮಕನಾಗಿಯೂ ಅವುಗಳಿಂದ ಪ್ರತಿಪಾದ್ಯನಾಗಿಯೂ ಇರುವವನು.

(3) **ಓಂತತ್ಸದಿತಿನಿರ್ದೇಶೋ ಬ್ರಹ್ಮಣಸ್ತ್ರಿವಿಧಃಸ್ಮೃತಃ ।**—(17. 23.)

ಪರಬ್ರಹ್ಮನಿಗೆ ಓಂ ಎಂತಲೂ, ತತ್ ಎಂತಲೂ, ಸತ್ ಎಂತಲೂ ಮೂರು ವಿಧವಾದ ಹೆಸರುಂಟು.

16. ನಿರ್ಗುಣತ್ವವು (ಪ್ರಕೃತಿಸಂಬಂಧರಾಹಿತ್ಯವು) "ಅರೂಪವದೇವಹಿತತ್ಪ್ರಧಾನತ್ವಾತ್" ಇತ್ಯಾದಿ ಸೂತ್ರಗಳಲ್ಲಿ ಸರ್ವೋತ್ತಮನಾದ ಪರಬ್ರಹ್ಮನಿಗೇ ಇರುವ ಲಕ್ಷಣವೆಂದು ನಿರ್ಣಯಿಸಲ್ಪಟ್ಟಿದೆ. ಅಂಥ ಅಸಾಧಾರಣ ಧರ್ಮವು ನನ್ನಲ್ಲಿರುವುದೆಂದು ಶ್ರೀಕೃಷ್ಣನು ಹೇಳುತ್ತಾನೆ.

(1) ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ।

—(2. 67.)

ದೇಹತ್ಯಾಗಕಾಲದಲ್ಲಿ ಜ್ಞಾನಯುಕ್ತನಾಗಿ ಭಗವಂತನ ಸ್ಮರಣೆಯು ಇದ್ದರೆ ಪ್ರಾಕೃತಶರೀರರಹಿತನಾದ ಪರಬ್ರಹ್ಮನನ್ನು (ನನ್ನನ್ನು) ಹೊಂದುತ್ತಾನೆ. "ಮಾಮನುಸ್ಮರನ್ಯಃ ಪ್ರಯಾತಿ ತ್ಯಜನ್ ದೇಹಂ ಸಯಾತಿ ಪರಮಾಂಗತಿಂ" ಎಂಬ ಎಂಟನೆಯ ಅಧ್ಯಾಯದ ಶ್ಲೋಕದ ರೀತ್ಯಾ ಇಲ್ಲಿ ಹೇಳಿರುವ ನಿರ್ವಾಣ ಬ್ರಹ್ಮನು ಶ್ರೀಕೃಷ್ಣನೇ.

ಪ್ರಶ್ನೆ—'ನಿರ್ವಾಣಂ' ಎಂದರೆ ದೇಹರಹಿತನೆಂದರ್ಥವು. ಸರ್ವಥಾ ದೇಹಶೂನ್ಯನೆಂದು ಹೇಳದೆ ಪ್ರಾಕೃತದೇಹರಹಿತನೆಂದು ಅರ್ಥಸಂಕೋಚವನ್ನು ಯಾತಕ್ಕೆ ಕಲ್ಪಿಸಬೇಕು?

ಉತ್ತರ—ಸರ್ವಥಾ ದೇಹರಹಿತವಾದ ವಸ್ತುವು ಶಶವಿಷಾಣದಂತೆ ಅಪ್ರಸಿದ್ಧವು. ದೇಹರಹಿತನು ಪರಿದೃಶ್ಯಮಾನನಾಗಲಾರನು. ಕೃಷ್ಣನು ಅರ್ಜುನನ ದೃಷ್ಟಿಗೆ ಗೋಚರನಾಗಿರುತ್ತಾನೆ. ಮತ್ತು **ದಿವ್ಯಚಕ್ಷುಸ್ಸಿನಿಂದ** ಆತನನ್ನು ನೋಡುವಾಗಲೂ ದೇಹವುಳ್ಳವನಾಗಿಯೇ ಗೋಚರನಾಗಿರುತ್ತಾನೆ. "ಪಶ್ಯಾಮಿದೇವಾಂಸ್ತವದೇವ**ದೇಹೇ**ಸರ್ವಾನ್" ಎಂದರೆ ಎಲೈ ಸ್ವಾಮಿಯೇ! ನಿನ್ನ **ದೇಹದಲ್ಲಿ** ಸಮಸ್ತ ದೇವತೆಗಳನ್ನೂ ನೋಡುತ್ತೇನೆ ಎಂದು ಹೇಳಿರುತ್ತಾನೆ ಮತ್ತು "ಅನಂತಬಾಹೂದರವಕ್ತ್ರನೇತ್ರಂ" "ಸರ್ವತಃ ಪಾಣಿಪಾದಂ" ಇತ್ಯಾದಿ ವಾಕ್ಯಗಳಿಂದ ಪರಬ್ರಹ್ಮನಾದ ಶ್ರೀಕೃಷ್ಣನು ಬಾಹು ಉದರ ಪಾಣಿ ಪಾದಾದಿ ಅವಯವಗಳುಳ್ಳವನೆಂದೇ ಸಿದ್ಧವಾಗುವುದು.

ಪ್ರಶ್ನೆ—ಸ್ವಾಮಿ! ಪರಮಾತ್ಮನಿಗೂ ನಮ್ಮಂತೆ ಶರೀರವಿದ್ದರೆ ನಮ್ಮಂತೆ ದುಃಖಾದಿಗಳು ಪ್ರಾಪ್ತವಾಗಬೇಕು.

ಉತ್ತರ—ನಮಗಿರುವಂಥ ಶರೀರವು ಪರಮಾತ್ಮನಿಗಿದ್ದರೆ ನಮಗಿರುವಂತೆ ಪರಮಾತ್ಮನಿಗೆ ದುಃಖಾದಿಗಳು ಬರಬಹುದಾಗಿತ್ತು. ಆದರೆ ಪರಮಾತ್ಮನ ದೇಹವು **ದಿವ್ಯವು** ಎಂದರೆ ಲೋಕವಿಲಕ್ಷಣವು. 1. **ಪಶ್ಯಮೇ ಪಾರ್ಥರೂ**

ಪಾಣಿ.........ನಾನಾವಿಧಾನಿ ದಿವ್ಯಾನಿ ; ಜನ್ಮ ಕರ್ಮ ಚ ಮೇ ದಿವ್ಯಂ ಇತ್ಯಾದಿ ಪ್ರಮಾಣಗಳಿಂದ ಈ ವಿಷಯವು ಸಿದ್ಧವಾಗುವದು. 2. ನನ್ನನ್ನು ಮನುಷ್ಯನಂತೆ ದೇಹವುಳ್ಳವನೆಂದು ತಿಳಿಯುವವರು ಮೂರ್ಖರೆಂದು "ಅವಜಾನಂತಿ ಮಾಂ **ಮೂಢಾಃ**" ಇತ್ಯಾದಿ ಶ್ಲೋಕಗಳಲ್ಲಿ ಹೇಳಿಯುತ್ತಾನೆ. 3. ಮತ್ತು ದುಃಖಕಾರಣಗಳಾದ ಅಪೂರ್ಣತೆಯು, ಅಲ್ಪಶಕ್ತಿಯು, ಗುಣಸಂಬಂಧವು ಕರ್ಮಬಂಧವು ಇತ್ಯಾದಿಗಳು ಪರಮಾತ್ಮನಲ್ಲಿಲ್ಲವೆಂದು **ನಾನವಾಪ್ತಮವಾಪ್ತವ್ಯಂ ; ಅನಂತವೀರ್ಯಾಮಿತವಿಕ್ರಮಸ್ತ್ವಂ ; ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ; ನ ಮಾಂ ಕರ್ಮಾಣಿ ಲಿಂಪಂತಿ** ಇತ್ಯಾದಿ ಅನೇಕ ವಾಕ್ಯಗಳಿಂದ ಸಿದ್ಧವಾಗುವದು. ಇದೇ ರೀತಿಯಲ್ಲಿ ಪರಮಾತ್ಮನಿಗೆ ಗಮನಾಗಮನಾದಿ **ಕ್ರಿಯೆಗಳು** ಉಂಟೋ ಇಲ್ಲವೋ ? ಉಂಟಾದರೆ ಆತನಿಗೆ ವಿಕಾರವನ್ನು ಒಪ್ಪಬೇಕಾಗುವದು. ಇಲ್ಲವೆಂದರೆ ಸೃಷ್ಟ್ಯಾದಿ ಕರ್ತೃತ್ವವು ಆತನಿಗೆ ಸಂಘಟಿಸಲಾರವು ; ಇತ್ಯಾದಿ ರೀತಿಯಲ್ಲಿ ಮಾಡುವ ದುಸ್ತರ್ಕಗಳೂ ಪರಾಹತವಾಗುವವು. "ಜನ್ಮಕರ್ಮಚಮೇದಿವ್ಯಂ" ಎಂಬ ಶ್ರೀಕೃಷ್ಣನ ವಾಙ್ಮಯವಾದ ಅಸ್ತ್ರವು ಸಕಲ ವಿಕಲ್ಪಸೈನ್ಯಗಳನ್ನೂ ನಿವಾರಣೆಮಾಡಿ ತನ್ನ ಪೂರ್ಣತ್ವವನ್ನು ರಕ್ಷಿಸಿಕೊಳ್ಳುವದರಲ್ಲಿ ಸಮರ್ಥವಾಗಿರುವದು. ಆದುದರಿಂದ ಪರಮಾತ್ಮನು ನಿಷ್ಕ್ರಿಯನು, ನಿರ್ಗುಣನು ಎಂದು ಹೇಳುವ ಶ್ರುತಿಗಳಿಗೆ ಪ್ರಾಕೃತಕ್ರಿಯಾರಹಿತನು ; ಪ್ರಾಕೃತಗುಣಶೂನ್ಯನು ಎಂದೇ ಅರ್ಥ ಮಾಡಬೇಕು. ಶ್ರೀಕೃಷ್ಣನು ಹೇಳುತ್ತಾನೆ

(2) **ಸಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ।**

—(5. 25.)

ಆ ಯೋಗಿಯು ಬ್ರಹ್ಮನಲ್ಲಿ ಸದಾ ಸ್ಥಿತನಾಗಿ (ಸದಾ ಆತನ ಜ್ಞಾನವುಳ್ಳವನಾಗಿ) ಅಂತ್ಯದಲ್ಲಿ ನಿರ್ವಾಣಬ್ರಹ್ಮನನ್ನು ಅಂದರೆ ಪ್ರಾಕೃತಶರೀರರಹಿತನಾದ ಬ್ರಹ್ಮನನ್ನು (ಶ್ರೀಕೃಷ್ಣನನ್ನು) ಹೊಂದುತ್ತಾನೆ.

(3) **ಲಭಂತೇ ಬ್ರಹ್ಮನಿರ್ವಾಣಂ ಋಷಯಃ ಕ್ಷೀಣಕಲ್ಮಷಾಃ ।**

—(5. 25.)

ಜ್ಞಾನಿಗಳು ಸರ್ವಸಂಶಯ ವಿಪರ್ಯಯಗಳಿಂದ ರಹಿತರಾಗಿ ದೇಹತ್ಯಾಗಾನಂತರದಲ್ಲಿ ಪ್ರಾಕೃತಶರೀರರಹಿತನಾದ ಬ್ರಹ್ಮನನ್ನು (ನನ್ನನ್ನು) ಹೊಂದುತ್ತಾರೆ. (ಬ್ರಹ್ಮನು ಸರ್ವಥಾ ಅಶರೀರನಾದರೆ ಅವನನ್ನು ಭಕ್ತರು ಹೊಂದುವದು ಹೇಗೆ? ಅಶರೀರಿಗೆ ಪ್ರಾಪ್ಯತ್ವವು ಕೂಡುವದಿಲ್ಲ.) ಪುನಃ ಕೃಷ್ಣನು ಹೇಳುತ್ತಾನೆ—

(4) **ಆದಿತ್ಯವರ್ಣಂ ತಮಸಃ ಪರಸ್ತಾತ್ ।**—(8. 9.)

ಸೂರ್ಯನಂತೆ **ವರ್ಣವುಳ್ಳ** ತಮಸ್ಸಿಗೆ ಬಾಹ್ಯನಾದ, ಪ್ರಕೃತಿಯಿಂದ ಬಹು ವಿಲಕ್ಷಣನಾದ, ಪ್ರಕೃತಿಸಂಬಂಧರಹಿತನಾದ ಪರಮಪುರುಷನನ್ನು (ನನ್ನನ್ನು) ಮರಣಕಾಲದಲ್ಲಿ ಧ್ಯಾನಮಾಡುವವರು ಮುಕ್ತರಾಗುತ್ತಾರೆ. (ಸರ್ವಥಾ ಅಶರೀರಿಗೆ ವರ್ಣಗಳು ಎಲ್ಲಿಂದ ಬಂದವು? ಆದುದರಿಂದ ಜಡಸಂಬಂಧರಹಿತನಾದರೂ ವಿಲಕ್ಷಣತೇಜೋರೂಪಿಯು ಎಂದು ಸಿದ್ಧವಾಗುವುದು. ಹನ್ನೊಂದನೆಯ ಅಧ್ಯಾಯದಲ್ಲಿಯೂ ಕೂಡ "ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ । ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ" ಎಂದರೆ ಎಲೈ ಅರ್ಜುನನೇ! ನಾನಾ ವಿಧವಾದ ಅಪ್ರಾಕೃತವಾದ ಲೋಕವಿಲಕ್ಷಣವಾದ ನಾನಾ ವರ್ಣಗಳು ಮತ್ತು ನಾನಾ ಆಕಾರಗಳುಳ್ಳ ನನ್ನ ಅನಂತರೂಪಗಳನ್ನು ನೋಡು ಎಂದು ಹೇಳಿರುತ್ತಾನೆ.)

(5) **ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥** (13. 12.)

ಪರಬ್ರಹ್ಮನು (ಶ್ರೀ ಕೃಷ್ಣನು) ಉತ್ಪತ್ತಿಯುಳ್ಳ ಪ್ರಾಕೃತದೇಹೇಂದ್ರಿಯಗುಣಕರ್ಮವಿಹೀನನು; ಅವನು ಕಾರ್ಯರೂಪ ಪ್ರಪಂಚದಲ್ಲೂ ಕಾರಣ (ಅವ್ಯಕ್ತಾದಿ) ರೂಪಪ್ರಪಂಚದಲ್ಲೂ ಸೇರಿದವನಲ್ಲ. ಅಂದರೆ ಸರ್ವಥಾ ಪ್ರಕೃತಿನಿರ್ಮಿತವಲ್ಲದ ದೇಹ, ಇಂದ್ರಿಯ, ಗುಣ, ಕರ್ಮಾದಿಗಳುಳ್ಳವನೆಂದರ್ಥವು.

(6) **ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಂ ।**
ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ* ಗುಣಭೋಕ್ತೃ ಚ ॥
—(13. 14.)

ಪರಬ್ರಹ್ಮನು ಸಕಲ ಇಂದ್ರಿಯಗಳನ್ನೂ ಇಂದ್ರಿಯ ವಿಷಯಗಳನ್ನೂ ತಿಳಿದವನು (ಇದರಿಂದ ಅವನಿಗೂ ಇಂದ್ರಿಯಗಳಿರಬೇಕೆಂದು ಸಿದ್ಧವಾಯಿತು). ಅವನು ಸರ್ವೇಂದ್ರಿಯ ವಿವರ್ಜಿತನು. ಅವನು ನಿಸ್ಸಂಗನು; ಯಾವುದರ ಸಂಬಂಧವೂ ಇಲ್ಲದವನು; ಅವನು ಸರ್ವವನ್ನೂ ಧರಿಸಿದವನು (ಇದರಿಂದ ಸರ್ವವಸ್ತುಗಳ ಸಂಬಂಧವುಂಟೆಂದು ಹೇಳಿದಹಾಗಾಯಿತು); ಅವನು ನಿರ್ಗುಣನು ಮತ್ತು **ಅವನೇ** (ಚ ಶಬ್ದಾರ್ಥವು) ಗುಣಪೂರ್ಣನು.

---

* ಈ ಶ್ಲೋಕ ವ್ಯಾಖ್ಯಾನದಲ್ಲಿ **ಗುಣಾಃ ಸತ್ವರಜಸ್ತಮಾಂಸಿ ತೈಃ ರಹಿತಂ ನಿರ್ಗುಣಂ** ಎಂದರೆ ಸತ್ವರಜಸ್ತಮೋಗುಣ ಶೂನ್ಯನಾದುದರಿಂದ ಪರಮಾತ್ಮನು ನಿರ್ಗುಣನು ಎಂದು **ಶಂಕರಾಚಾರ್ಯರೂ ಕೂಡ** ಅರ್ಥಮಾಡಿರುತ್ತಾರೆ. ಸರ್ವತ್ರ ಹೀಗೆಯೇ ತತ್ವ**ವಿಮರ್ಶೆ ಮಾಡಿದ್ದರೆ ಬಹಳ ಚೆನ್ನಾಗಿತ್ತು.**

ಈ ವಾಕ್ಯದಲ್ಲಿ ನಾನು ಇಂದ್ರಿಯರಹಿತನು, ಇಂದ್ರಿಯವುಳ್ಳವನು; ನಾನು ಯಾವುದರ ಸಂಬಂಧವೂ ಇಲ್ಲದವನು, ಎಲ್ಲದರ ಸಂಬಂಧವನ್ನೂ ಉಳ್ಳವನು; ಸರ್ವಗುಣರಹಿತನು ಮತ್ತು ಗುಣಪೂರ್ಣನು ಎಂದು ಒಬ್ಬನಿಗೇ ವಿರುದ್ಧ ಧರ್ಮಗಳು ಹೇಳಲ್ಪಟ್ಟಿರುತ್ತವೆ. ಆದುದರಿಂದ ಲೋಕಪ್ರಸಿದ್ಧವಾದ ದುಷ್ಟ ಇಂದ್ರಿಯಗಳಿಂದ ರಹಿತನು; ಲೋಕದಲ್ಲಿ ಜನರಿಗಿರುವಂತೆ ಆಯಾಸವನ್ನೂ ದೋಷವನ್ನೂ ಹೊಂದಿಸುವ ಸಂಬಂಧವುಳ್ಳವನಲ್ಲ; ಲೋಕದಲ್ಲಿರುವ ಪ್ರಕೃತಿನಿರ್ಮಿತ ಗುಣರಹಿತನು ಎಂದು ಇಷ್ಟೇ ಅರ್ಥಮಾಡಬೇಕು. ಹಾಗೆ ಮಾಡದಿದ್ದರೆ ಸರ್ವಜ್ಞನಾದ ಶ್ರೀ ಕೃಷ್ಣನ ವಾಕ್ಯಗಳು ವ್ಯಾಹತೋಕ್ತಿಗಳಾಗಿ ಉನ್ಮತ್ತಪ್ರಲಾಪಕ್ಕೆ ಸದೃಶವಾಗುವುವು.

ಪ್ರಶ್ನೆ—ಸ್ವರೂಪೇಣ ನಿರ್ಗುಣನು, ಈಗ ಸಗುಣಬ್ರಹ್ಮನು ಎಂದು ಯಾತಕ್ಕೆ ಅರ್ಥಮಾಡಬಾರದು?

ಉತ್ತರ—ಈಗಲೂ ನಾನೇ ನಿರ್ಗುಣನು ನಾನೇ ಸಗುಣನು ಎಂದು ತೋರಿಸುವುದಕ್ಕೆ ಕೃಷ್ಣನು "ಚ" ಎಂಬ ಸಮುಚ್ಚಯಾರ್ಥಕ ಶಬ್ದವನ್ನು ಪ್ರಯೋಗಮಾಡಿರುತ್ತಾನೆ, ಮತ್ತು ನಿರ್ಗುಣ ಬ್ರಹ್ಮನು ಇದ್ದಾನೆ ಎಂದರೆ "**ಇರೋಣ**" ಎಂಬ ಗುಣವನ್ನು ಒಪ್ಪಿದಂತಾಗುವುದರಿಂದ ನಾನು ವಂಧ್ಯಾಪುತ್ರನು ಎಂಬ ಮಾತಿನಂತೆ ವಿರುದ್ಧೋಕ್ತಿಯಾಗುವುದು. ಮತ್ತು ಅದು ಅಪ್ರಾಮಾಣಿಕಕಲ್ಪನೆಯೆನ್ನಿಸುವುದು. ಆದುದರಿಂದ ವಿರೋಧಶಾಂತಿಯನ್ನು ನಿರವಕಾಶವಾದ ಪ್ರಮಾಣಾಂತರಾನುಸಾರವಾಗಿ ಮಾಡಬೇಕು. ಕೃಷ್ಣನೇ ಪರಬ್ರಹ್ಮನೆಂಬಲ್ಲಿ ಸ್ವಾತಂತ್ರ್ಯ ಮತ್ತು ಸರ್ವಕರ್ತೃತ್ವಾದಿ ಯುಕ್ತಿಗಳಿರುತ್ತವೆ. ಶ್ರೀ ಕೃಷ್ಣನು ಪ್ರಕೃತಿನಿರ್ಮಿತಶರೀರ, ಮತ್ತು ಗುಣಗಳಿಂದ ರಹಿತನು ಎಂಬಲ್ಲಿ ಅನೇಕ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳ ವಾಕ್ಯಗಳಿರುತ್ತವೆ. ಗೀತೆಯಲ್ಲಿಯೂ ಕೂಡ ತನ್ನ ಲೋಕವಿಲಕ್ಷಣತ್ವವನ್ನು ತಾನೇ ಹೇಳಿಕೊಂಡಿರುತ್ತಾನೆ.

ಜನ್ಮಕರ್ಮ ಚ ಮೇ ದಿವ್ಯಮೇವಂಯೋವೇತ್ತಿತತ್ವತಃ ।

.................................ಮಾಮೇತಿಸೋಽರ್ಜುನ॥ ನನ್ನ ಜನ್ಮಕರ್ಮಗಳು ಲೋಕವಿಲಕ್ಷಣಗಳೆಂದು ತಿಳಿಯುವವನೇ ಮುಕ್ತನಾಗುತ್ತಾನೆ.

ಅವಜಾನಂತಿ ಮಾಂಮೂಢಾ ಮಾನುಷೀಂತನುಮಾಶ್ರಿತಂ ।
ಪರಂಭಾವಮಜಾನಂತೋ ಮಮಭೂತ ಮಹೇಶ್ವರಂ ॥

ಮೂಢರು ನಾನು ಮನುಷ್ಯಶರೀರದಂತೆ ಲೌಕಿಕಶರೀರವುಳ್ಳವನೆಂದು ತಿಳಿದು ನನ್ನನ್ನು ಅವಮಾನಮಾಡುತ್ತಾರೆ. (ಅಂದರೆ ಎಲ್ಲರಂತೆ ಒಬ್ಬ ಸಾಮಾನ್ಯ ಪುರು

ಷನೆಂದು ತಿಳಿಯುತ್ತಾರೆ). ಅವರು ಅನಾದಿನಿತ್ಯವಾದ ಪೂರ್ಣಗುಣಭರಿತವಾದ ಸರ್ವೋತ್ತಮವಾದ ನನ್ನ ಸ್ವರೂಪವನ್ನು ತಿಳಿದವರಲ್ಲ. ಹನ್ನೊಂದನೆಯ ಅಧ್ಯಾಯದಲ್ಲಿಯೂ ಇಂಥಾ ದಿವ್ಯರೂಪಗಳನ್ನೇ ಅರ್ಜುನನು ನೋಡಿರುತ್ತಾನೆ.

(7) **ಅನಾದಿತ್ವಾನ್ನಿರ್ಗುಣತ್ವಾತ್ಪರಮಾತ್ಮಾಯಮವ್ಯಯಃ ।**

—(13. 32.)

ಹೇ ಕೌಂತೇಯ ! ಉತ್ಪತ್ತಿರಹಿತನಾದುದರಿಂದ (ನಾಶಕ್ಕೆ ಕಾರಣವಾದ) **ಪ್ರಾಕೃತಗುಣರಹಿತನಾದುದರಿಂದ** ಪರಮಾತ್ಮನು (ನಾನು) ಅವ್ಯಯನು ಎಂದರೆ ಚತುರ್ವಿಧನಾಶರಹಿತನು.

(8) 1. **ಸತ್ವಂ ರಜಸ್ತಮ ಇತಿಗುಣಾಃ ಪ್ರಕೃತಿಸಂಭವಾಃ ।**
ನಿಬಧ್ನಂತಿ ಮಹಾಬಾಹೋದೇಹೇದೇಹಿನಮವ್ಯಯಂ ॥

—(14. 5.)

ಸತ್ವರಜಸ್ತಮಗಳೆಂಬ ಮೂರು ಗುಣಗಳೂ ಪ್ರಕೃತಿ ಜನ್ಯವಾದುವುಗಳು. ಇವು ಸ್ವರೂಪೇಣ ಅವ್ಯಯನಾದ **ದೇಹಿಯನ್ನು** (ಪ್ರಾಕೃತದೇಹವುಳ್ಳ ಜೀವನನ್ನು) ದೇಹದಲ್ಲಿ ಬಂಧಿಸುತ್ತವೆ.

2. **ಪುರುಷಃಪ್ರಕೃತಿಸ್ಥೋಹಿ ಭುಂಕ್ತೇ ಪ್ರಕೃತಿಜಾನ್ಗುಣಾನ್ ।**
ಕಾರಣಂಗುಣಸಂಗೋಸ್ಯ ಸದಸದ್ಯೋನಿಜನ್ಮಸು ॥

—(13. 22.)

ಜೀವನು ಪ್ರಕೃತಿನಿರ್ಮಿತಶರೀರದಲ್ಲಿ ಸ್ಥಿತನಾಗಿ ಪ್ರಕೃತಿಜನ್ಯವಾದ ಸುಖ ದುಃಖಾದಿಗಳನ್ನು ಭೋಗಮಾಡುತ್ತಾನೆ. ಈ ಜೀವನಿಗೆ (ದೇವಮನುಷ್ಯಾದಿ) ಉತ್ತಮ, ಅಥವಾ (ರಾಕ್ಷಸ, ಪೈಶಾಚ, ನಾಯಿ, ಕುರಿ, ಕೋಳಿ ಮುಂತಾದ) ಅಧಮಯೋನಿಗಳು ಪ್ರಾಪ್ತವಾಗುವುದಕ್ಕೆ ಗುಣಸಂಗವೇ ಕಾರಣವು.

ಕೃಷ್ಣೋಪಾಸನೆಯ ಪ್ರಭಾವದಿಂದ ಗುಣಸಂಗದಿಂದ ಬಿಡಲ್ಪಟ್ಟರೆ ಜೀವನು ಮುಕ್ತನಾಗುವನೆಂದೂ ಹೇಳುತ್ತಾನೆ—

3. **ಗುಣಾನೇತಾನತೀತ್ಯತ್ರೀನ್ದೇಹೀದೇಹಸಮುದ್ಭವಾನ್ ।**
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತ
ಮಶ್ನುತೇ ॥—(14. 20.)

ಶರೀರಯನಾದ ಜೀವನು ದೇಹೋತ್ಪತ್ತಿಗೆ ಕಾರಣವಾದ ತ್ರಿಗುಣಗಳನ್ನು ಅತಿಕ್ರಮಿಸಿದರೇನೇ ಜನ್ಮಮೃತ್ಯುಜರಾ ದುಃಖರೂಪವಾದ ಸಂಸಾರದಿಂದ

ಮುಕ್ತನಾಗಿ ಪರಬ್ರಸನ್ನು ಹೊಂದುತ್ತಾನೆ. ಹೀಗೆ **ಸರ್ವಜೀವರೂ** ಗುಣ ಒದ್ಧರೆಂದು ಹೇಳಿ ಪರಮಾತ್ಮನು (ಶ್ರೀ ಕೃಷ್ಣನು) ಮಾತ್ರ ಗುಣಸಂಬಂಧರಹಿತ ನೆಂದು ಹೇಳುತ್ತಾನೆ.—

4. **ನಾನ್ಯಂಗುಣೇಭ್ಯಃಕರ್ತಾರಂಯದಾದ್ರಷ್ಟಾನುಪಶ್ಯತಿ ।**
ಗುಣೇಭ್ಯಶ್ಚಪರಂವೇತ್ತಿಮದ್ಭಾವಂಸೋಽಧಿಗಚ್ಛತಿ ॥
—(14. 19.)

ಜೀವನು ಯಾವಾಗ ಗುಣಗಳಿಗಿಂತ ಬೇರೆ ಪರಿಣಾಮಕಾರಣಗಳನ್ನು ತಿಳಿಯುವುದಿಲ್ಲವೋ ಮತ್ತು ಗುಣಗಳಿಗಿಂತ ಅನ್ಯನಾದ ವಿಲಕ್ಷಣನೂ ಸ್ವತಂತ್ರ ನೂ ಆದ ಪರಮಾತ್ಮನನ್ನು ತಿಳಿಯುತ್ತಾನೆಯೋ ಆಗ ಆ ಜೀವನು ನನ್ನನ್ನು ಹೊಂ ದುತ್ತಾನೆ (ಮುಕ್ತನಾಗುತ್ತಾನೆ); ಎಂದು ಹೇಳಿರುತ್ತಾನೆ. ಇದರಿಂದ ಗುಣ **ಸಂಬಂಧರಾಹಿತ್ಯವು** ಶ್ರೀಕೃಷ್ಣನಿಗೆ ಒಬ್ಬನಿಗೇ ಎಂದು ಸಿದ್ಧವಾಗುವುದು. ಕಿಂಚ ಯಾವನ ಭಜಕರಿಗೇ ಗುಣತ್ರಯಗಳು ನಿವೃತ್ತವಾಗುವವೋ ಅಂಥಾ ಪರಮ ಪುರುಷನು ಸ್ವತಃ ಗುಣಸಂಬಂಧರಹಿತನೆಂದು ಕೈಮುತ್ಯನ್ಯಾಯದಿಂದ ಸಿದ್ಧವಾ ಗುವುದು.

(9) **ಮಾಂಚಯೋಽವ್ಯಭಿಚಾರೇಣ ಭಕ್ತಿಯೋಗೇನಸೇವತೇ ।**
ಸಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯಕಲ್ಪತೇ॥—(14.)

ಯಾವಾತನು ನಿರಂತರ ಭಕ್ತಿಯಿಂದ ನನ್ನನ್ನು ಉಪಾಸನೆಮಾಡುತ್ತಾನೆ ಯೋ ಅವನು ಈ ಗುಣತ್ರಯಗಳಿಂದ ರಹಿತನಾಗಿ ಮುಕ್ತನಾಗುವುದಕ್ಕೆ ಶಕ್ತ ನಾಗುತ್ತಾನೆ.

17. ನಿರ್ಗುಣತ್ವವೆಂಬ ಧರ್ಮವು ಹೇಗೆ ಸರ್ವೋತ್ತಮತ್ವಕ್ಕೆ ಸಾಧಕ ವೋ ಹಾಗೆಯೇ **ಕರ್ಮಬಂಧರಾಹಿತ್ಯವೂ** "ಸಂಭೋಗಪ್ರಾಪ್ತಿರಿತಿಚೇನ್ನ ವೈಶೇಷ್ಯಾತ್" ಇತ್ಯಾದಿ ಸೂತ್ರಗಳಲ್ಲಿ ಹೇಳಿರುವಂತೆ ಶ್ರೀ ಕೃಷ್ಣನ ಸರ್ವೋತ್ತ ಮತ್ವವನ್ನು ಸ್ಥಾಪಿಸುವುದರಲ್ಲಿ ಸಮರ್ಥವಾದುದು. ಬ್ರಹ್ಮಾದಿ ಸರ್ವಜೀವರೂ ಸತ್ಕರ್ಮದಿಂದ ಪುಣ್ಯವನ್ನೂ ದುಷ್ಕರ್ಮದಿಂದ ಪಾಪವನ್ನೂ ಹೊಂದುತ್ತಿರು ತ್ತಾರೆ. ಶ್ರೀ ಕೃಷ್ಣನು ಸ್ವತಂತ್ರನು ಮತ್ತು ಕರ್ಮಾಧ್ಯಕ್ಷನು. ಆತನಿಗೆ ಪುಣ್ಯ ಪಾಪಗಳ ಲೇಪವಿಲ್ಲ. ಇತರರು ಕರ್ಮದಲ್ಲಿ ಅಧಿಕಾರಿಗಳು.

(1) 1. **ಕರ್ಮಣ್ಯೇವಾಧಿಕಾರಸ್ತೇಮಾಫಲೇಷು ಕದಾಚನ ।**
ಮಾಕರ್ಮಫಲ ಹೇತುರ್ಭೂರ್ಮಾತೇ ಸಂಗೋಽಸ್ತ್ವ
ಕರ್ಮಣಿ ॥—(2. 47.)

ಎಲೈ ಅರ್ಜುನನೇ ! ನಿನಗೂ ಮತ್ತು ನಿನ್ನಂತಹ ಜ್ಞಾನಿಗಳಿಗೂ ಕರ್ಮಾಚರಣೆಯಲ್ಲಿಯೇ ಅಧಿಕಾರವು. ಕರ್ಮಫಲವನ್ನು ಕೋರುವುದರಲ್ಲಿ ನಿನಗೆ ಅಧಿಕಾರವಿಲ್ಲ (ಸ್ವಾತಂತ್ರ್ಯವಿಲ್ಲದಿರುವುದರಿಂದ). ಕರ್ಮಫಲವನ್ನು ಉದ್ದೇಶಮಾಡಿ ನೀನು ಕರ್ಮ ಮಾಡಬೇಡ. ನಿನಗೆ ಕರ್ಮಪರಿತ್ಯಾಗದಲ್ಲಿ ಸ್ನೇಹಬೇಡ.

2. **ನಿಯತಂಕುರುಕರ್ಮತ್ವಂ ಕರ್ಮಜ್ಯಾಯೋಹ್ಯಕರ್ಮಣಃ ।**

ನೀನು ವಿಧ್ಯುಕ್ತಕರ್ಮವನ್ನು ಮಾಡು. ಕರ್ಮಾಚರಣೆಯು ಕರ್ಮಬಿಡುವುದಕ್ಕಿಂತ ಶ್ರೇಷ್ಠವು.

3. **ಜ್ಞಾತ್ವಾಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ।**

ಶಾಸ್ತ್ರವಿಧಿಯನ್ನು ತಿಳಿದು ನೀನು ಸತ್ಕರ್ಮವನ್ನು ಆಚರಿಸು.

4. **ಯಜ್ಞದಾನತಪಃ ಕರ್ಮನತ್ಯಾಜ್ಯಂ ಕಾರ್ಯಮೇವತತ್ ।**
ಯಜ್ಞೋದಾನಂತಪಶ್ಚೈವಪಾವನಾನಿಮನೀಷಿಣಾಂ ॥

ಯಜ್ಞದಾನತಪೋರೂಪವಾದ ಸತ್ಕರ್ಮವು ಅವಶ್ಯವಾಗಿ ಅನುಷ್ಠೇಯವು. ಯಜ್ಞದಾನತಪಸ್ಸುಗಳು ಜ್ಞಾನಿಗಳಿಗೂ ಶೋಧಕಗಳಾಗಿವೆ; ಎಂದು ಅರ್ಜುನನೇ ಮೊದಲಾದ ಸಕಲ ಜ್ಞಾನಿಗಳೂ ಮತ್ತು ಅಜ್ಞಾನಿಗಳೂ ಸಹ ಕರ್ಮವನ್ನು ಮಾಡಬೇಕೆಂದು ಹೇಳಿರುತ್ತಾನೆ.

5. **ಯದಹಂಕಾರಮಾಶ್ರಿತ್ಯನಯೋತ್ಸ್ಯ ಇತಿಮನ್ಯಸೇ ।**
ಮಿಥ್ಯೈಷವ್ಯವಸಾಯಸ್ತೇ ಪ್ರಕೃತಿಸ್ತ್ವಾಂನಿಯೋಕ್ಷ್ಯತಿ ।
ಸ್ವಭಾವಜೇನಕೌಂತೇಯನಿಬದ್ಧಸ್ಸ್ವೇನಕರ್ಮಣಾ ।
ಕರ್ತುಂನೇಚ್ಛಸಿಯನ್ಮೋಹಾತ್ಕರಿಷ್ಯಸ್ಯವಶೋಪಿತತ್ ।

—(18. 59—60.)

ನೀನು ಸ್ವಾತಂತ್ರ್ಯಾಭಿಮಾನದಿಂದ ಯುದ್ಧಮಾಡುವುದಿಲ್ಲವೆಂದು ತಿಳಿದರೆ ನಿನ್ನ ನಿಶ್ಚಯವು ವ್ಯರ್ಥವೇ ಆಗುವುದು. ಯಾತಕ್ಕೆಂದರೆ ಪ್ರಕೃತಿಯು (ಈಶ್ವರೇಚ್ಛೆಯು ; ಸತ್ವಾದಿಗುಣನಿಯಾಮಕಳಾದ ಚೇತನಪ್ರಕೃತಿಯು) ನಿನ್ನನ್ನು ಬಲಾತ್ಕಾರವಾಗಿ **ಯುದ್ಧಕರ್ಮ**ದಲ್ಲಿ ಪ್ರೇರಿಸುತ್ತದೆ.

ಹೇ ಕೌಂತೇಯ ! ಪೂರ್ವಾರ್ಜಿತ ಕರ್ಮರೂಪವಾದ ಬಂಧದಿಂದ ಯುಕ್ತನಾದ ನೀನು ಯುದ್ಧಕರ್ಮವನ್ನು ಮಾಡುವುದಿಲ್ಲವೆಂದು ಬಂಧುಗಳಲ್ಲಿ ಮೋಹದಿಂದ ಇಚ್ಛಿಸಿದರೂ ಬಲಾತ್ಕಾರವಾಗಿ ಅವಶನಾಗಿ (ಅಂದರೆ ಈಶ್ವರಾಧೀನನಾಗಿ) ಅದೇ ಕರ್ಮವನ್ನು ಮಾಡುವವನಾಗುತ್ತೀಯೆ.

ಇದರಿಂದ ಸರ್ವಚೇತನರೂ ಕರ್ಮಬಂಧದಿಂದ ಮುಕ್ತರಾಗಿ ಸ್ವತಂತ್ರನಾದ ಪರಮಾತ್ಮನ ನಿಯಮನವ್ಯಾಪಾರಕ್ಕೆ ಅಧೀನರಾಗಿರುವರೆಂದು ಸಿಶ್ಚಿತವಾಗುವುದು.

ಪರಮಾತ್ಮನಿಗೆ ಹೀಗೆ ಅವಶ್ಯವಾಗಿ ಮಾಡಲ್ಪಡಬೇಕಾದ ಕರ್ಮವಿಲ್ಲ. ಅವನು ಸ್ವತಂತ್ರನು. ಅವನ ಜಗತ್ಸರ್ಜನಾದಿ ವ್ಯಾಪಾರಗಳು ಅವನ ಸ್ವಭಾವದಿಂದಲೇ ನಡೆದಿರುತ್ತವೆ. ಆದುದರಿಂದ ಅವನು ಕರ್ಮಬಂಧನಕ್ಕೆ ಸಿಕ್ಕುವವನಲ್ಲ.

(2) **ನಮೇಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋಕೇಷುಕಿಂಚನ ।**
ನಾನವಾಪ್ತಮವಾಪ್ತವ್ಯಂ................. (3. 22.)

ಅರ್ಜುನ! ನಾನು ಮತ್ತೊಬ್ಬರ ನಿರ್ಬಂಧಕ್ಕೆ ವಶನಾಗಿ ಯಾವುದಾದರೂ ಪ್ರಯೋಜನವನ್ನು ಉದ್ದೇಶಮಾಡಿ ಮಾಡಬೇಕಾದ ಒಂದು ಕರ್ಮವು ಮೂರು ಲೋಕದಲ್ಲೂ ಇಲ್ಲ. ಯಾತಕ್ಕೆಂದರೆ ನಾನು ಹೊಂದದೆ ಇರತಕ್ಕ ಪ್ರಯೋಜನಗಳು ಯಾವುವೂ ಇಲ್ಲ. ನಾನು ಪೂರ್ಣಲಾಭನು ಎಂದು ಭಾವವು. ಹೀಗೆ ತನಗೆ ಕರ್ಮಬಂಧರಾಹಿತ್ಯದಲ್ಲಿ ತಾನು ಪೂರ್ಣಸುಖನಾಗಿರುವುದೇ ಒಂದು ಕಾರಣವೆಂದು ಯುಕ್ತಿಯನ್ನೂ ಹೇಳಿರುತ್ತಾನೆ.

ಯುಕ್ತ್ಯಂತರದಿಂದಲೂ ಭಗವಂತನಿಗೆ ಕರ್ಮಬಂಧವು ಇಲ್ಲವೆಂದು ಸಿದ್ಧವಾಗುವದು.

(3) **ಯೇಮೇಮತಮಿದಂ ನಿತ್ಯಮನುತಿಷ್ಠಂತಿಮಾನವಾಃ ।**
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೆತೇಪಿಕರ್ಮಭಿಃ ॥
(3-31.)

ಸರ್ವ ಸತ್ಕರ್ಮಗಳನ್ನೂ ಆಚರಿಸಿ ನನ್ನಲ್ಲಿಯೇ ಅರ್ಪಿಸಬೇಕೆಂಬ ನನ್ನ ಮತವನ್ನು ಯಾರು ಸರ್ವದಾ ಆಚರಿಸುತ್ತಾರೆಯೋ ಅವರು (ಜ್ಞಾನದ್ವಾರಾ) ಕರ್ಮಗಳಿಂದ ಮುಕ್ತರಾಗುವರು. ಯಾವನಲ್ಲಿ ಕರ್ಮಸಮರ್ಪಣೆಮಾಡುವವರೂ ಸಹ ಮುಕ್ತರಾಗುವರೋ ಅಂಥಾ ಕರ್ಮಬಂಧವನ್ನು ಪರಿಹರಿಸುವ ಪರಮಪುರುಷನು ಕರ್ಮಬಂಧನಕ್ಕೆ ಸಿಕ್ಕಿದವನಲ್ಲವೆಂದು ಹೇಳಬೇಕಾದುದೇನು?

(4) **ನಮಾಂ ಕರ್ಮಾಣಿಲಿಂಪಂತಿ ನಮೇಕರ್ಮಫಲೇಸ್ಪೃಹಾ ।**
ಇತಿಮಾಂ ಯೋಭಿಜಾನಾತಿ ಕರ್ಮಭಿರ್ನಸಬಧ್ಯತೇ ।—(4. 14.)

ಕರ್ಮಗಳು ನನಗೆ ಬಂಧಕವಾಗಲಾರವು; (ನಾನು ಮಾಡುವ ಜಗತ್ಸೃಷ್ಟಿಸಂಹಾರಾದಿ ಕರ್ಮಗಳಿಂದ ಪುಣ್ಯಪಾಪಗಳುಂಟಾಗಿ ನನಗೆ ಸುಖದುಃಖಗಳು

ಪ್ರಾಪ್ತವಾಗಲಾರವು ಎಂದರ್ಥವು ;) ನಾನು ಕರ್ಮಫಲದಲ್ಲಿ ಅಪೇಕ್ಷಾರಹಿತನಾಗಿಯೂ, ಸ್ವತಂತ್ರನಾಗಿಯೂ, ಪೂರ್ಣಾನಂದನಾಗಿಯೂ ಇರುವೆನು. ಹೀಗೆ (ನಾನು ಕರ್ಮಬದ್ಧನಲ್ಲವೆಂದು) ತಿಳಿದವನೂ ಕೂಡ (ಜ್ಞಾನವನ್ನು ಹೊಂದಿ) ಕರ್ಮಗಳಿಂದ ಮುಕ್ತನಾಗುತ್ತಾನೆ.

(5) **ನಚಮಾಂತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।**
ಉದಾಸೀನವದಾಸೀನ ಮಸಕ್ತಂತೇಷು ಕರ್ಮಸು ॥—(9. 9.)

ಹೇ ಧನಂಜಯ ! ನನ್ನ ಜಗತ್ಸರ್ಜನಾದಿ ಕರ್ಮಗಳು ನನ್ನನ್ನು ಬಂಧನ ಮಾಡುವುದಿಲ್ಲ. ಯಾತಕ್ಕೆಂದರೆ ಆ ಕರ್ಮಗಳಲ್ಲಿ ಯಾವ ಫಲಾಪೇಕ್ಷೆಯೂ ಇಲ್ಲದೆ ಆಸಕ್ತಿರಹಿತನಾಗಿ ವಸ್ತುತಃ ಉದಾಸೀನನಲ್ಲದಿದ್ದರೂ ಉದಾಸೀನನೋಪಾದಿಯಲ್ಲಿ ಇರುತ್ತೇನೆ.

18. ಸರ್ವಸತ್ಕರ್ಮಫಲಭೋಕ್ತೃತ್ವವು ಪರಬ್ರಹ್ಮನ ಅಸಾಧಾರಣ ಧರ್ಮವೆಂದು ವೇದದಲ್ಲಿಯೂ "ಗುಹಾಂ ಪ್ರವಿಷ್ಟಾವಾತ್ಮಾನೌಹಿತದ್ದರ್ಶನಾತ್" ಇತ್ಯಾದಿ ಬ್ರಹ್ಮಸೂತ್ರಗಳಲ್ಲಿಯೂ ನಿರ್ಣೀತವಾಗಿರುವುದು. ಶ್ರೀಕೃಷ್ಣನು ಆ ಲಕ್ಷಣವು ತನ್ನಲ್ಲಿಯೇ ಉಂಟೆಂದು ಹೇಳುತ್ತಾನೆ.

(1) **ಮಯಿ ಸರ್ವಾಣಿಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।**
ನಿರಾಶೀ ರ್ನಿರ್ಮಮೋ ಭೂತ್ವಾ ಯುಧ್ಯಸ್ವವಿಗತಜ್ವರಃ ॥
—(3. 30.)

ಸಕಲ ವಿಧ್ಯುಕ್ತಕರ್ಮಗಳನ್ನೂ ನನ್ನಲ್ಲಿ ಅರ್ಪಿಸಿ ನಾನೇ ಸರ್ವೋತ್ತಮನೆಂದು ತಿಳಿದು ನಿರ್ಭಯನಾಗಿ ಯುದ್ಧಮಾಡು.

(2) **ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್ ।**
ಯತ್ತಪಸ್ಯಸಿ ಕೌಂತೇಯತತ್ಕುರುಷ್ವಮದರ್ಪಣಂ ।—(9. 27.)

ಸರ್ವ ಕರ್ಮಗಳನ್ನೂ ನನ್ನಲ್ಲಿ ಅರ್ಪಿಸು ಎಂಬ ಈ ವಿಧಿ ವಾಕ್ಯಗಳ ಬಲದಿಂದ ಶ್ರೀ ಕೃಷ್ಣನು ಸರ್ವ ಕರ್ಮಫಲಗಳನ್ನೂ ಸ್ವೀಕಾರ ಮಾಡುವವನೆಂದು ಸಿದ್ಧಿತವಾಗುವುದು. ಮತ್ತು ಕಂಠತಃ ಹಾಗೆಯೇ ಹೇಳುತ್ತಾನೆ :—

(3) **ಭೋಕ್ತಾರಂ ಯಜ್ಞತಪಸಾಂ....ಜ್ಞಾತ್ವಾಮಾಂಶಾಂತಿ**
ಮೃಚ್ಛತಿ ॥—(5. 29.)

ಅಧಿಕಾರಿಯು ಜ್ಯೋತಿಷ್ಟೋಮಾದಿ ಯಾಗಗಳು ಮತ್ತು ಕೃಚ್ಛ್ರಚಾಂದ್ರಾಯಣಾದಿತಪಸ್ಸು ಇವುಗಳ ಫಲಭೋಕ್ತೃವಾದ ನನ್ನನ್ನು (ಶ್ರೀ ಕೃಷ್ಣನನ್ನು) ಉಪಾಸನೆಮಾಡಿ ಮುಕ್ತಿಯನ್ನು ಹೊಂದುತ್ತಾನೆ.

(4) **ಅಧಿಯಜ್ಞೋಽಹಮೇವಾತ್ರದೇಹೇ ।**—(8. 4.)

ಸಕಲ ಜೀವರುಗಳ ದೇಹದಲ್ಲಿದ್ದು ಯಜ್ಞಕ್ಕೆ ಪ್ರವರ್ತಕನಾಗಿ ಯಜ್ಞಫಲ ಭೋಕ್ತೃವೂ ಆಗಿರುವವನು ನಾನೇ.

(5) **ಅಹಂಹಿಸರ್ವಯಜ್ಞಾನಾಂ ಭೋಕ್ತಾಚಪ್ರಭುರೇವಚ ।**
—(9. 24.)

ದ್ರವ್ಯಯಜ್ಞ, ತಪೋಯಜ್ಞ, ಮತ್ತು ಯೋಗಯಜ್ಞರೂಪವಾದ ಸರ್ವ ಯಜ್ಞಗಳ ಫಲಭೋಕ್ತೃವೂ ಯಜ್ಞಗಳಿಗೆ ಪ್ರವರ್ತಕನೂ ನಾನೇ.

ಇಂಥಾ ಕರ್ಮಫಲಭೋಗದಿಂದ ಪರಮಾತ್ಮನಿಗೆ ಯಾವ ಆನಂದಾತಿಶಯವೂ ಇರುವುದಿಲ್ಲ. ಆತನು ಪೂರ್ಣಾನಂದನು.

19. ಸರ್ವತ್ರಸಮತ್ವ ವೆಂಬ ಧರ್ಮವು ಪರಬ್ರಹ್ಮನಿಗೆ ಮಾತ್ರವೇ ಇರುವುದೆಂದು "ನಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರಹಿ" ಇತ್ಯಾದಿ ಸೂತ್ರಗಳಲ್ಲಿ ಸೂತ್ರಕಾರರು ನಿರ್ಣಯಮಾಡಿರುತ್ತಾರೆ. ಶ್ರೀ ಕೃಷ್ಣನು ತನ್ನಲ್ಲಿ ಈ ಅಸಾಧಾರಣಧರ್ಮವಿರುವುದೆಂದು ನಿರೂಪಿಸುತ್ತಾನೆ.

(1) **ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿಹಸ್ತಿನಿ ।**
ಶುನಿಚೈವ ಶ್ವಪಾಕೇಚ ಪಂಡಿತಾಃಸಮದರ್ಶಿನಃ ॥—(5. 18.)
ನಿರ್ದೋಷಂಹಿಸಮಂ ಬ್ರಹ್ಮ.—(5. 19.)

ಪಂಡಿತರು ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಗಜದಲ್ಲಿ, ನಾಯಿನಲ್ಲಿ, ಚಂಡಾಲನಲ್ಲಿ ಈ ರೀತಿ ವಿಷಮಸ್ಥಳಗಳಲ್ಲಿರುವ ಪರಮಾತ್ಮನು (ಶ್ರೀ ಕೃಷ್ಣನು) ನಿರ್ದೋಷತ್ವವಿಷಯದಲ್ಲಿ ತಾರತಮ್ಯರಹಿತನು; ಎಂದರೆ ಈ ವಿಷಮಾಧಿಷ್ಠಾನಗಳಲ್ಲಿರುವ ಪರಮಾತ್ಮನಿಗೆ ಸ್ಥಾನಭೇದಪ್ರಯುಕ್ತವಾಗಿ ಗುಣಭೇದವು ಇರುವುದಿಲ್ಲ; ಸರ್ವತ್ರ ನಿರ್ದೋಷನಾಗಿಯೇ ಇರುವನು ಎಂದು ತಿಳಿಯುತ್ತಾರೆ.

(2) **ಸಮಬುದ್ಧಿರ್ವಿಶಿಷ್ಯತೇ ।**—(6 9.)

ಸುಹೃದಾದಿ ಅನೇಕ ಅಧಿಷ್ಠಾನಗಳಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನು (ಶ್ರೀ ಕೃಷ್ಣನು) ಸ್ವಲ್ಪವೂ ಭೇದವಿಲ್ಲದೆ ಆನಂದಪರಿಪೂರ್ಣನಾಗಿಯೇ ಇರುವನು ಎಂದು ತಿಳಿಯುವವನು ಜ್ಞಾನಿಯು.

(3) **ಸರ್ವಭೂತಸ್ಥಿತಂಯೋಮಾಂಭಜತ್ಯೇಕತ್ವಮಾಸ್ಥಿತಃ ।**
........**ಸಯೋಗೀಮಯಿವರ್ತತೇ** ॥—(6. 30.)

ಸರ್ವಭೂತಗಳಲ್ಲಿಯೂ ಸ್ಥಿತನಾಗಿರುವ ನನ್ನನ್ನು ಸರ್ವಥಾ (ಜ್ಞಾನಾನಂದ ಗುಣಕ್ರಿಯಾದಿಗಳಲ್ಲಿ) ಅಭಿನ್ನನಾಗಿರುವನೆಂದು ಧ್ಯಾನಮಾಡುವ ಯೋಗಿಯು ನನ್ನ ಭಕ್ತನು.

(4) **ಈಕ್ಷತೇ ಯೋಗಯುಕ್ತಾತ್ಮಾಸರ್ವತ್ರಸಮದರ್ಶನಃ ।**
—(6. 29.)

ಧ್ಯಾನೋಪಾಯದಲ್ಲಿ ನಿರತನಾದವನು ಬ್ರಹ್ಮಾದಿ ತೃಣಾಂತ ಜೀವರಲ್ಲಿರುವ ಭಗವಂತನನ್ನು (ಶ್ರೀ ಕೃಷ್ಣನನ್ನು) ಐಶ್ವರ್ಯಾದಿ ಗುಣಗಳಿಂದ ಸಮನೆಂದು ತಿಳಿಯುವನು.

(5) **ಅವಿಭಕ್ತಂಚಭೂತೇಷು ವಿಭಕ್ತಮಿವಚಸ್ಥಿತಂ ।**—(13. 17.)

ಪರಬ್ರಹ್ಮನು (ಶ್ರೀ ಕೃಷ್ಣನು) ನಾನಾ ವಿಧವಾದ ಪ್ರಾಣಿಗಳಲ್ಲಿ ಅಭಿನ್ನನಾಗಿಯೇ ಇದ್ದು ಅಜ್ಞಾನಿಗಳಿಗೆ ಮಾತ್ರ ಭೇದವುಳ್ಳವನಂತೆ ತೋರುವನು.

(6) **ಸಮಂಹಿ ಸರ್ವಭೂತೇಷು ತಿಷ್ಠಂತಂಪರಮೇಶ್ವರಂ ।**
ವಿನಶ್ಯತ್ಸ್ವವಿನಶ್ಯಂತಂ ಯಃಪಶ್ಯತಿ ಸಪಶ್ಯತಿ ॥—(13. 28.)

ನ್ಯೂನಾಧಿಕಭಾವದಿಂದ ಇರುವ ಬ್ರಹ್ಮಾದಿತೃಣಾಂತರಾದ ನಾನಾ ವಿಧ ಪ್ರಾಣಿಗಳಲ್ಲಿ ಸ್ಥಿತನಾಗಿರುವ ಅಚಿಂತ್ಯಶಕ್ತಿಯುಳ್ಳ ಶ್ರೀ ಪರಮಾತ್ಮನನ್ನು (ನನ್ನನ್ನು) ಸರ್ವಥಾ ಭೇದರಹಿತನು (ನ್ಯೂನಾಧಿಕಭಾವರಹಿತನು; ಸರ್ವತ್ರ ನಿರ್ದೋಷಗುಣಪೂರ್ಣನಾಗಿರುವವನು); ಮತ್ತು ಜನನಮರಣಾದಿ ನಾನಾ ದುಃಖವುಳ್ಳ ಪ್ರಾಣಿಗಳಲ್ಲಿದ್ದರೂ ದುಃಖಾದಿದೋಷಶೂನ್ಯನು ಎಂದು ತಿಳಿಯುವವನು ಜ್ಞಾನಿಯು.

(7) **ಸಮಂಪಶ್ಯನ್ಹಿ ಸರ್ವತ್ರಸಮವಸ್ಥಿತಮೀಶ್ವರಂ ।**
ನ ಹಿನಸ್ತ್ಯಾತ್ಮನಾತ್ಮಾನಂ ತತೋಯಾತಿಪರಾಂಗತಿಂ ॥
—(13. 29.)

ಬ್ರಹ್ಮಾದಿ ತೃಣಾಂತ ಸರ್ವ ಪ್ರಾಣಿಗಳಲ್ಲಿ ನಿರ್ದೋಷನಾಗಿಯೂ ಜ್ಞಾನಾನಂದಪೂರ್ಣನಾಗಿಯೂ ಸ್ಥಿತನಾಗಿರುವ ಪರಮಾತ್ಮನನ್ನು (ಶ್ರೀ ಕೃಷ್ಣನನ್ನು) ಸಮನಾಗಿ (ತಾರತಮ್ಯರಹಿತನು, ಸರ್ವಥಾ ಅಭಿನ್ನನು ಎಂದು) ತಿಳಿಯುವವನು ತನ್ನನ್ನು ನರಕಾದ್ಯನರ್ಥಗಳಿಗೆ ಭಾಗಿಯಾಗಿ ಮಾಡಿಕೊಳ್ಳುವದಿಲ್ಲ. ಮತ್ತು ಮುಕ್ತಿಯನ್ನು ಹೊಂದುತ್ತಾನೆ.

(8) **ಯದಾಭೂತಪೃಥಗ್ಭಾವಮೇಕಸ್ಥಮನುಪಶ್ಯತಿ ।**
ಬ್ರಹ್ಮಸಂಪದ್ಯತೇ ತದಾ ॥—(13. 31.)

ದೇವದಾನವಾದಿ ರೂಪೇಣ ನಾನಾಪ್ರಕಾರವಾಗಿ ವಿಭಿನ್ನರಾದ ಪ್ರಾಣಿಗಳು ಸರ್ವತ್ರ ಭೇದರಹಿತನಾದ ಒಬ್ಬನೇ ಪರಮಾತ್ಮನಲ್ಲಿ (ಶ್ರೀಕೃಷ್ಣನಲ್ಲಿ) ಆಶ್ರಿತವಾಗಿರುವುವೆಂದು ತಿಳಿದರೆ ಆಗ ಅಧಿಕಾರಿಯು ಪರಬ್ರಹ್ಮನನ್ನು ಹೊಂದುವನು.

20. ಪ್ರತ್ಯೇಕಂ ಸರ್ವೇಂದ್ರಿಯಕಾರ್ಯಕಾರಿ ವಿಲಕ್ಷಣ ದೇಹೇಂದ್ರಿಯಾದಿಮತ್ವವು ಬ್ರಹ್ಮಾದಿಗಳಲ್ಲಿ ಅನತಿವ್ಯಾಪ್ತವಾದ ಪರಬ್ರಹ್ಮಮಾತ್ರ ವೃತ್ತಿಯಾದ ಧರ್ಮವು. ಪರಮಾತ್ಮನ ಯಾವ ಒಂದು ಇಂದ್ರಿಯವೂ ಇತರ ಸರ್ವೇಂದ್ರಿಯಾದಿಗಳ ಕಾರ್ಯವನ್ನು ಮಾಡುವುದರಲ್ಲಿ ಸಮರ್ಥವಾಗಿರುವುದೆಂದರ್ಥವು. ಇದೂ ಶ್ರೀಕೃಷ್ಣನಲ್ಲಿ ಕಂಡುಬರುವುದು. ಕೃಷ್ಣನು ಹೇಳುತ್ತಾನೆ—

(1) **ಮಮಾತ್ಮಾ ಭೂತಭಾವನಃ ।**—(9. 5.)

ನನ್ನ ದೇಹವು ಪ್ರಾಣಿಗಳ ಸೃಷ್ಟಿಮಾಡುವುದರಲ್ಲಿ ಸಮರ್ಥವಾದುದು.

(2) **ಅನೇಕಬಾಹೂದರ ವಕ್ತ್ರನೇತ್ರಂ ಪಶ್ಯಾಮಿತ್ವಾಂ ಸರ್ವತೋಽನಂತರೂಪಂ ॥**—(11. 16.)

ಇದು ಅರ್ಜುನನ ಸ್ತುತಿಯು. ಅನಂತ ಬಾಹುಗಳು, ಉದರಗಳು, ಮುಖಗಳು ಮತ್ತು ನೇತ್ರಗಳುಳ್ಳ ಮತ್ತು ಒಂದೊಂದು ರೂಪದಲ್ಲೂ ಅನಂತರೂಪಗಳುಳ್ಳಂಥಾ ಅನಂತರೂಪಗಳನ್ನು ಉಳ್ಳ ನಿನ್ನನ್ನು ನೋಡುತ್ತೇನೆ.

(3) **ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿ ಶಿರೋಮುಖಂ ।**
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯತಿಷ್ಠತಿ ॥–(3. 14.)

ಪರಬ್ರಹ್ಮನು (ಶ್ರೀ ಕೃಷ್ಣನು) ಸರ್ವಾವಯವಗಳಲ್ಲಿಯೂ ಹಸ್ತಪಾದಗಳ ಶಕ್ತಿಯುಳ್ಳವನು; ಸರ್ವಾಯವಗಳಿಂದಲೂ ಚಕ್ಷುಸ್ಸು, ಶಿರಸ್ಸು, ಮುಖವು ಇವುಗಳು ಮಾಡುವ ವ್ಯಾಪಾರಗಳನ್ನು ಮಾಡುವವನು; ಸರ್ವಾವಯವಗಳಲ್ಲಿ ಶ್ರೋತ್ರೇಂದ್ರಿಯಶಕ್ತಿಯುಳ್ಳವನು. ಸರ್ವವನ್ನೂ ವ್ಯಾಪಿಸಿಕೊಂಡು ಇರುತ್ತಾನೆ.

21· ಮುಕ್ತಿಹೇತುಭೂತ ಅಂತ್ಯಕಾಲೀನಸ್ಮೃತಿ ವಿಷಯತ್ವವು ಪರಬ್ರಹ್ಮನಿಗೇ ಎಂದು ವೇದಾಂತದಲ್ಲಿ ಅದೃಶ್ಯತ್ವಾಧಿಕರಣದಲ್ಲಿ ಸುನಿಶ್ಚಿತವಾಗಿರುವುದು. ಮರಣಕಾಲದಲ್ಲಿ ಯಾರ ಸ್ಮರಣೆಯನ್ನು ಮಾಡಿದರೆ ಪುನರಾವೃತ್ತಿ ರಹಿತವಾದ ಮೋಕ್ಷವು ದೊರೆಯುವುದೋ ಅವನೇ ಸರ್ವೋತ್ತಮನು. ಅವನು ಯಾರು ? ಶ್ರೀಕೃಷ್ಣನು ನಾನೇ ಎಂದು ಹೇಳುತ್ತಾನೆ.

(1) **ಏಷಾಬ್ರಾಹ್ಮೀಸ್ಥಿತಿಃ ಪಾರ್ಥನೈನಾಂ ಪ್ರಾಪ್ಯವಿಮುಹ್ಯತಿ ।**
ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ॥ (2. 72.)

ಪೂರ್ವೋಕ್ತರೀತಿಯಲ್ಲಿ ಸರ್ವಕಾಮರಹಿತನಾಗಿ ಭಗವದುಪಾಸನೆಯನ್ನು ಮಾಡುವುದು ಬ್ರಹ್ಮಜ್ಞಾನಿಯ ಲಕ್ಷಣರೂಪವಾದ ಸ್ಥಿತಿಯು. ಈ ಸ್ಥಿತಿಯನ್ನು ಹೊಂದಿದವನು ಸಂಸಾರತಾಪವನ್ನು ಹೊಂದುವುದಿಲ್ಲ. ದೇಹತ್ಯಾಗಕಾಲದಲ್ಲಿ ಇಂಥಾ ಭಗವದನುಸ್ಮೃತಿ ರೂಪಸ್ಥಿತಿಯಲ್ಲಿದ್ದವನಾದರೆ ಪ್ರಾಕೃತ ಶರೀರ ರಹಿತನಾದ ಬ್ರಹ್ಮನನ್ನು (ನನ್ನನ್ನು) ಹೊಂದುವನು.

(2) **ಸಾಧಿಭೂತಾಧಿದೈವಂಮಾಂ ಸಾಧಿಯಜ್ಞಂಚಯೇವಿದುಃ ।**
ಪ್ರಯಾಣಕಾಲೇಪಿಚಮಾಂ ತೇವಿದುರ್ಯುಕ್ತ ಚೇತಸಃ ॥
—(7. 30.)

ವಿನಾಶಿಯಾದ ಸರ್ವಭಾವಗಳಲ್ಲಿಯೂ ಅಂತರ್ಗತನಾಗಿ, ಹಿರಣ್ಯಗರ್ಭಾದಿ ಸರ್ವದೇವತಾಂತರ್ಗತನಾಗಿ, ಸರ್ವ ಯಜ್ಞಪ್ರವರ್ತಕನೂ ಫಲಭೋಕ್ತೃವೂ ಆದ ನನ್ನನ್ನು ತಿಳಿದು ದೇಹತ್ಯಾಗರೂಪವಾದ ಮರಣಕಾಲದಲ್ಲಿ ಯಾರು ನನ್ನನ್ನು ಧ್ಯಾನಮಾಡುವರೋ ಅವರೇ ಸಮಾಧಿಯುಕ್ತವಾದ ಮನಸ್ಸುಳ್ಳವರು.

(3) **ಅಂತಕಾಲೇಚಮಾಮೇವಸ್ಮರ್ರ ಮುಕ್ತ್ವಾಕಳೇಬರಂ ।**
ಯಃ ಪ್ರಯಾತಿಸಮದ್ಭಾವಂ ಯಾತಿನಾಸ್ತ್ಯತ್ರಸಂಶಯಃ ॥
—(8. 5.)

ಮೃತಿಕಾಲದಲ್ಲಿ ನನ್ನನ್ನೇ ಸ್ಮರಿಸುವವನಾಗಿ ದೇಹವನ್ನು ಪರಿತ್ಯಾಗ ಮಾಡಿ ಯಾವಾತನು ಪ್ರಯಾಣಮಾಡುತ್ತಾನೆಯೋ ಅವನು ನನ್ನಲ್ಲಿ (ನಿರ್ದುಃಖಾನಂದಾನುಭವಾತ್ಮಕವಾದ) ಸ್ಥಿತಿಯನ್ನು ಹೊಂದುತ್ತಾನೆ (ಮುಕ್ತನಾಗುತ್ತಾನೆಂದರ್ಥವು). ಈ ವಿಷಯದಲ್ಲಿ ಸಂಶಯವಿಲ್ಲ.

(4) **ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರರ್ ಮಾಮನುಸ್ಮರ್ರ ।**
ಯಃ ಪ್ರಯಾತಿತ್ಯಜನ್ದೇಹಂ ಸಯಾತಿಪರಮಾಂಗತಿಂ ॥
—(8. 13.)

ಪ್ರಣವವನ್ನು ಬಾಯಿಯಲ್ಲಿ ಉಚ್ಚಾರಮಾಡುತ್ತಾ ನನ್ನನ್ನು ಮನಸಾ ಧ್ಯಾನಮಾಡುತ್ತಾ ಯಾವಾತನು ದೇಹವನ್ನು ತ್ಯಾಗಮಾಡುತ್ತಾನೆಯೋ ಅವನು ಮುಕ್ತನಾಗುತ್ತಾನೆ.

ಯಾರ ಸ್ಮರಣೆಯಿಂದ **ಮುಕ್ತ**ನಾಗುತ್ತಾನೆಯೋ ಅವನು ಪರಬ್ರಹ್ಮನು ಎಂದರೆ ಸರ್ವೋತ್ತಮನಮಸ್ತುವೇ ಆಗಬೇಕೆಂಬುದು ಈ ವಾಕ್ಯಗಳ ಫಲಿತಾಂಶವು.

22. ಪರಮಾಕ್ಷರತ್ವವು (ಅಕ್ಷರ ಶಬ್ದವಾಚ್ಯತ್ವವು) ಪರಬ್ರಹ್ಮನಾದ ವಿಷ್ಣು ಮಾತ್ರ ನಿಷ್ಠವೆಂದು "ಅಕ್ಷರಮಂಬರಾಂತಧೃತೇಃ" ಇತ್ಯಾದಿ ವೇದಾಂತ ಸೂತ್ರಗಳಲ್ಲಿ ನಿರ್ಣಯಮಾಡಿರುತ್ತಾರೆ. ಶ್ರೀಕೃಷ್ಣನು ತಾನೇ ಮುಖ್ಯವಾಗಿ ಅಕ್ಷರಶಬ್ದವಾಚ್ಯನೆಂದು ಹೇಳಿರುವುದರಿಂದ ಇದರಿಂದಲೂ ಆತನ ಸರ್ವೋತ್ತಮತ್ವವು ಸಿದ್ಧವಾಗುವುದು.

ಅಕ್ಷರನೆಂದರೆ ನಾಶರಹಿತನೆಂದರ್ಥವು. ಅನಿತ್ಯತ್ವವು, ದೇಹಹಾನಿಯು, ದುಃಖಪ್ರಾಪ್ತಿಯು ಮತ್ತು ಅಪೂರ್ಣತೆಯು ಎಂದು ನಾಶವು ನಾಲ್ಕು ಪ್ರಕಾರವಾಗಿರುವುದೆಂದು ಶಾಸ್ತ್ರದಲ್ಲಿ ವರ್ಣಿಸಿರುತ್ತಾರೆ. ಅಚ್ಯುತನಲ್ಲಿ ಈ ನಾಲ್ಕು ದೋಷಗಳೂ ಇಲ್ಲವಾದುದರಿಂದ ಆತನು ಅಕ್ಷರನೆನ್ನಿಸುವನು. **"ನತ್ವೇವಾಹಂ ಜಾತುನಾಸಂ"** ಇತ್ಯಾದಿ ಶ್ಲೋಕಗಳಿಂದ ತಾನೂ ಮತ್ತು ಸರ್ವ ಜೀವರೂ ನಿತ್ಯರೆಂದು ಶ್ರೀಕೃಷ್ಣನು ಹೇಳಿರುತ್ತಾನೆ. "**ದೇಹಿನೋ** ದೇಹಾಂತರ ಪ್ರಾಪ್ತಿಃ" ಎಂದು ಜೀವನಿಗೇ ದೇಹಹಾನಿರೂಪವಾದ ನಾಶವೇ ಹೊರತು ತನಗಿಲ್ಲವೆಂದು ಸೂಚಿಸಿರುತ್ತಾನೆ.

ಯಃ ಸಸರ್ವಭೂತೇಷು ನಶ್ಯತ್ಸುನವಿನಶ್ಯತಿ—(8. 20.)

ಎಂಬ ಶ್ಲೋಕದಲ್ಲಿ ಮಹಾಪ್ರಳಯದಲ್ಲಿ ಸರ್ವ ಪ್ರಾಣಿಗಳೂ ದೇಹನಾಶವನ್ನು ಹೊಂದಿದರೂ ತನಗೆ ನಾಶವಿಲ್ಲವೆಂದು ಸ್ಪಷ್ಟವಾಗಿ ಹೇಳಿರುತ್ತಾನೆ. **"ನಾನವಾಪ್ತಮವಾಪ್ತವ್ಯಂ"** ಇತ್ಯಾದಿ ಶ್ಲೋಕಗಳಿಂದ ತನಗೆ ದುಃಖಕ್ಕೆ ಕಾರಣವೇ ಇಲ್ಲವೆಂದು ತೋರಿಸಿರುತ್ತಾನೆ. '**ಮತ್ತಃ ಪರಂತರಂ ನಾನ್ಯತ್**' ಇತ್ಯಾದಿ ಶ್ಲೋಕಗಳಿಂದ ತನಗಿಂತ ಉತ್ತಮರಿಲ್ಲವೆಂದೂ ತಾನೇ ನಿರವಧಿಕನೆಂದೂ ಹೇಳಿರುತ್ತಾನೆ. ಆದುದರಿಂದ ದೇಹಹಾನಿರೂಪನಾಶವುಳ್ಳ ಜೀವರುಗಳು ಅಕ್ಷರನೆನ್ನಿಸಲಾರರು. ಯದ್ಯಪಿ ಸ್ವಯೋಗ್ಯಪೂರ್ಣಾನಂದಾನುಭವವುಳ್ಳ ಲಕ್ಷ್ಮೀದೇವಿಯು ಅಕ್ಷರಳೆನ್ನಿಸುವಳು. ಹದಿನೈದನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣನೂ ಸಹ "ಕೂಟಸ್ಥೋ ಅಕ್ಷರ ಉಚ್ಯತೇ" ಎಂದು ಲಕ್ಷ್ಮೀದೇವಿಗೂ ಅಕ್ಷರ ಶಬ್ದವಾಚ್ಯತ್ವವು ಉಂಟೆಂದು ಹೇಳಿರುತ್ತಾನೆ. ಆದರೂ ಲಕ್ಷ್ಮೀದೇವಿಯು ಅಸ್ವತಂತ್ರಳಾದುದರಿಂದ ಪರಮಾತ್ಮನ ಅನುಗ್ರಹದಿಂದ ಅಕ್ಷರಳೆನ್ನಿಸುವಳು. ಪರಮಾತ್ಮನಾದರೋ ಅನ್ಯನಿರಪೇಕ್ಷನಾಗಿ ಅಕ್ಷರನೆನ್ನಿಸುವನು. ಎಂಟನೆಯ ಅಧ್ಯಾಯದಲ್ಲಿ "ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃಪರಮಾಂಗತಿಂ | ಯಂಪ್ರಾಪ್ಯ ನನಿವರ್ತಂತೇ ತದ್ಧಾಮ ಪರಮಂಮಮ ||" ಎಂಬಲ್ಲಿ ಶ್ರೀ ಕೃಷ್ಣನು ಪುನರಾವರ್ತಿ

ರಹಿತನಾದ ಮೋಕ್ಷಪ್ರದನಾದ ನಾನು ಅಕ್ಷರನೆನ್ನಿಸುವೆನು ಎಂದು ಹೇಳಿರುವುದರಿಂದ ಮುಖ್ಯವಾಗಿ ಅಕ್ಷರ ಶಬ್ದವಾಚ್ಯತ್ವವು ಮುಕ್ತಿಪ್ರದನಾದ ಶ್ರೀಕೃಷ್ಣನಿಗೇ ಸಲ್ಲುವುದು.

ಕೆಲವು ಕಡೆ ಶಾಸ್ತ್ರದಲ್ಲಿ ಮುಕ್ತರನ್ನೂ ಲಕ್ಷ್ಮೀದೇವಿಯರನ್ನೂ ಅಕ್ಷರರೆಂದು ವ್ಯವಹರಿಸಿ ಅವರಿಗಿಂತಲೂ ಅಧಿಕನಾದ ಪರಮಾತ್ಮನನ್ನು ಪರಮಾಕ್ಷರನೆಂದು ನಿರ್ದೇಶಮಾಡಿರುತ್ತಾರೆ. ಪರಮಾಕ್ಷರತ್ವವು ಲಕ್ಷ್ಮ್ಯಾದಿ ಯಾವ ಚೇತನರಿಗೂ ಯಾವ ಕಾಲಕ್ಕೂ ಬರಲಾರದು.

(1) **ಅಕ್ಷರಂ ಬ್ರಹ್ಮ ಪರಮಂ ॥**—(8. 3.)

ಬ್ರಹ್ಮನು ಯಾರೆಂಬ ಪ್ರಶ್ನೆಗೆ ಇದು ಉತ್ತರವು. ಪರಮಾಕ್ಷರನು ಬ್ರಹ್ಮನು (ಶ್ರೀಕೃಷ್ಣನು) ಎಂದು ಸ್ಪಷ್ಟವಾದ ಉತ್ತರವು.

(2) **ಯದಕ್ಷರಂ ವೇದವಿದೋವದಂತಿ....ತತ್ತೇಪದಂ ಸಂಗ್ರಹೇಣ ಪ್ರವಕ್ಷ್ಯೇ ।**—(8. 11.)

ವೇದವೇತ್ತೃಗಳು ಯಾವ ಪರಬ್ರಹ್ಮನನ್ನು (ನನ್ನನ್ನು) ಅಕ್ಷರನೆಂದು ಕರೆಯುವರೋ....ಅಂಥವನ ಸ್ವರೂಪವನ್ನು ನಿನಗೆ ಹೇಳುತ್ತೇನೆ.

(3) **ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂಗತಿಂ ।**
ಯಂಪ್ರಾಪ್ಯನನಿವರ್ತಂತೇ ತದ್ಧಾಮಪರಮಂ ಮಮ ॥
(8. 21.)

ಅವ್ಯಕ್ತನಾಮಕ ಭಗವಂತನು ಅಕ್ಷರನೆನ್ನಿಸುವನು. ಅವನೇ ಪರಮಪ್ರಾಪ್ಯನು. ಯಾವನ ಪ್ರಾಪ್ತಿಯಾದ ನಂತರ ಪುನರಾವರ್ತಿರೂಪಸಂಸಾರವು ಇಲ್ಲವೋ ಅದು ನನ್ನ ಸ್ವರೂಪವು. ಅರ್ಜುನನೂ ಹಾಗೆಯೇ ನೋಡಿರುತ್ತಾನೆ.

(4) **ತ್ವಮಕ್ಷರಂ ಪರಮಂವೇದಿತವ್ಯಂ ।**—(11. 18.)

ನೀನು ಪರಮಾಕ್ಷರನೆಂದು ತಿಳಿಯಲ್ಪಡತಕ್ಕವನು.

(5) **ಅನಂತದೇವೇಶ ಜಗನ್ನಿವಾಸ ತ್ವಮಕ್ಷರಂ ಸದಸತ್ತತ್ಪರಂಯತ್ ॥**—(11. 37.)

ಹೇ ಅನಂತ! ದೇವೋತ್ತಮ! ಜಗನ್ನಿವಾಸ! **ನೀನೇ ಅಕ್ಷರನು**; ಕಾರ್ಯಕಾರಣರೂಪವಾದ ಸಮಸ್ತ ಪ್ರಪಂಚಕ್ಕೂ ವಿಲಕ್ಷಣನು ನೀನೇ.

23. ಅವ್ಯಕ್ತತ್ವವು ಸರ್ವೋತ್ತಮ ವಸ್ತುವಾದ ಪರಬ್ರಹ್ಮನ ಗುಣವೆಂದು "ಸೂಕ್ಷ್ಮಂತು ತದರ್ಹತ್ವಾತ್"; "ತದವ್ಯಕ್ತಮಾಹಹಿ" ಇತ್ಯಾದಿ

ಬ್ರಹ್ಮಸೂತ್ರಗಳಲ್ಲಿ ನಿರ್ಣಯ ಮಾಡಿರುತ್ತಾರೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ತಾನೇ ಅವ್ಯಕ್ತನೆಂದು ಹೇಳಿರುವುದರಿಂದ ಅವನು ಸರ್ವೋತ್ತಮನೆಂದು ಸಿದ್ಧವಾಗುವುದು.

ಪ್ರಶ್ನೆ—ಸ್ವಾಮಿ! ಅವ್ಯಕ್ತನು ಎಂದರೆ ವ್ಯಕ್ತನಲ್ಲ, ಜ್ಞಾನವಿಷಯನಲ್ಲ, ಅಜ್ಞೇಯನು ಎಂದು ಅರ್ಥವು. ಪರಬ್ರಹ್ಮನು ಅಜ್ಞೇಯನು ಎಂದಷ್ಟೇ ಅದ್ವೈತಿಗಳು ಹೇಳುತ್ತಾರೆ. ಅವರಿಗೂ ತಮಗೂ ಭೇದವೇನು ?

ಉತ್ತರ—ಅರ್ಜುನನ ಜ್ಞಾನಕ್ಕೆ ವಿಷಯನಾದ, ಭೀಷ್ಮಾದಿಗಳಿಂದ ಸ್ತುತ್ಯನಾದ ರಣರಂಗಸ್ಥನಾದ ಶ್ರೀಕೃಷ್ಣನು ನಾನು ಅಜ್ಞೇಯನು ಎಂದು ಹೇಳಿಕೊಂಡರೆ "ನಾನು ವಂಧ್ಯಾಪುತ್ರನು" ಎಂದು ಮಾತಾಡುವವನಂತೆ ವಿರುದ್ಧ ಭಾಷಿಯಾಗುವನು. ಸರ್ವಜ್ಞಚೂಡಾಮಣಿಯಾದ ಯದುನಾಥನ ಮಾತುಗಳು ಉನ್ಮತ್ತಪ್ರಲಾಪಗಳಲ್ಲ. ಆದುದರಿಂದ ಪ್ರಮಾಣಗಳಿಗೆ ವಿರೋಧಬರದಂತೆ ಪದಗಳಿಗೆ ಪ್ರಕರಣೋಚಿತವಾದ ಅರ್ಥವನ್ನು ಮಾಡಬೇಕು. ಅವ್ಯಕ್ತಶಬ್ದಾರ್ಥವು ಮೂರುಪ್ರಕಾರವಾಗಿ ಶಾಸ್ತ್ರದಲ್ಲಿ ನಿರ್ಣೀತವಾಗಿರುವುದು. (1) ಪರಮಾತ್ಮನು ಶಬ್ದಾದಿ ವಿಷಯಗಳಂತೆ ಪಂಚಜ್ಞಾನೇಂದ್ರಿಯಗಳಿಂದ ವೇದ್ಯನಾಗುವುದಿಲ್ಲವಾದುದರಿಂದ ಅವ್ಯಕ್ತನೆನಿಸುವನು. ಆದುದರಿಂದಲೇ ಅವನಿಗೆ ಅಧೋಕ್ಷಜನೆಂದೂ ಹೆಸರು. (2) "ದೃಶ್ಯತೇತ್ವಗ್ರ್ಯಯಾಬುದ್ಧ್ಯಾ" ಇತ್ಯಾದಿ ಶ್ರುತ್ಯನುಸಾರವಾಗಿ ದಿವ್ಯದೃಷ್ಟಿಗೆ (ಶ್ರವಣಾದಿಗಳಿಂದ ಸಂಸ್ಕೃತವಾದ ಮನಸ್ಸಿಗೆ) ಪರಮಾತ್ಮನು ವ್ಯಕ್ತನಾಗುವನು ಆದರೆ ದಿವ್ಯದೃಷ್ಟಿಮಾತ್ರದಿಂದಲೇ ಅವನನ್ನು ನೋಡುವುದು ಅಸಾಧ್ಯವು. ಅವನೇ ತನ್ನ **ಪ್ರಸಾದದಿಂದ** ವ್ಯಕ್ತನಾದರೆ ಅವನನ್ನು ದಿವ್ಯ ಚಕ್ಷುಸ್ಸಿನಿಂದ ನೋಡಬಹುದು. ಅಧಿಕಾರಿಗಳ ಭಕ್ತಿನಿಮಿತ್ತವಾದ ಅವನ ಪ್ರಸಾದದಿಂದಲೇ ವ್ಯಕ್ತನಾಗುವ ಸ್ವಭಾವವುಳ್ಳವನಾದುದರಿಂದ ಅವನು ಅವ್ಯಕ್ತನೆನಿಸುವನು. (3) ಮತ್ತು ಪರಮಾತ್ಮನು ಪ್ರಸನ್ನನಾದರೂ ಅವನನ್ನು **ಸಾಕಲ್ಯೇನ** ತಿಳಿಯಲಾಗುವುದಿಲ್ಲ. ಅವನ ಏಕದೇಶವೇ ಲಕ್ಷ್ಮೀಬ್ರಹ್ಮಾದಿ ತೃಣಾಂತ ಚೇತನರ ಜ್ಞಾನಕ್ಕೆ ವಿಷಯವಾಗಿರುವುದು. ನಿರವಧಿಕಪರಿಪೂರ್ಣವಾದ ಅವನ ವೈಭವವು ಸಾಕಲ್ಯೇನ ಯಾರಿಗೂ ವ್ಯಕ್ತವಾಗುವುದಿಲ್ಲವಾದುದರಿಂದಲೂ ಅವನು ಅವ್ಯಕ್ತನೆನ್ನಿಸುವನು. ಈ ಮೂರು ವಿಧವಾದ ಅವ್ಯಕ್ತತ್ವವೂ ಕೃಷ್ಣನಿಗೆ ಸಮಗ್ರವಾಗಿರುವುದೆಂದು ಅವನ ವಾಕ್ಯಗಳಿಂದಲೇ ಸಿದ್ಧನಾಗುವುದು.

(1) **ಮಯಾತತಮಿದಂಸರ್ವಂಜಗದವ್ಯಕ್ತಮೂರ್ತಿನಾ ।**
ನಚಮತ್ಸ್ಥಾನಿಭೂತಾನಿ ಪಶ್ಯಮೇಯೋಗಮೈಶ್ವರಂ॥ (9. 4-5.)

ಚರಾಚರಾತ್ಮಕವಾದ ಈ ಸರ್ವಪ್ರಪಂಚವೂ ಸೂಕ್ಷ್ಮರೂಪಿಯಾದ ನನ್ನಿಂದ ವ್ಯಾಪ್ತವಾಗಿರುವುದು. (ಹಾಗಿದರೆ ಘಟಾದಿ ಪದಾರ್ಥಗಳಂತೆ ಇಂದ್ರಿಯಗಳಿಗೆ ಯಾತಕ್ಕೆ ಗೋಚರನಾಗುವುದಿಲ್ಲ? ಅಥವಾ ದೇಹಾಂತರ್ಗತ ಶೀತೋಷ್ಣಗಳು ಗೋಚರವಾಗುವಂತೆ ಸ್ಪರ್ಶೇಂದ್ರಿಯಕ್ಕಾದರೂ ಯಾಕೆ ವಿಷಯನಾಗುವುದಿಲ್ಲವೆಂದರೆ ಹೇಳುತ್ತಾನೆ.) ಸರ್ವಭೂತಗಳೂ ನನ್ನ ಸಂಬಂಧವನ್ನು ಹೊಂದಿದ್ದರೂ ತ್ವಗಿಂದ್ರಿಯದಿಂದ ನನ್ನನ್ನು ತಿಳಿದು ನನ್ನ ಧರ್ಮಸಂಕ್ರಾಂತಿಯನ್ನು ಹೊಂದಿರುವುದಿಲ್ಲ. ಇದಕ್ಕೆ ಕಾರಣವು ನನ್ನ ಈಶ್ವರಸಂಬಂಧಿಯಾದ ಯೋಗವು ಅಂದರೆ ಅಚಿಂತ್ಯಶಕ್ತಿಯು.

(2) **ಯಥಾಕಾಶಸ್ಥಿತೋನಿತ್ಯಂ ವಾಯುಸ್ಸರ್ವತ್ರಗೋಮಹಾ೯ ।**
ತಥಾಸರ್ವಾಣಿಭೂತಾನಿ ಮತ್ಸ್ಥಾನೀತ್ಯುಪಧಾರಯ॥—(9. 6.)

(ಭಗವಂತನು ಸರ್ವತ್ರವ್ಯಾಪ್ತನಾದರೂ ತ್ವಗಿಂದ್ರಿಯಾದಿಗಳಿಂದ ವೇದ್ಯನಾಗದಂತೆ ಪರಸ್ಪರ ಧರ್ಮಸಂಕ್ರಾಂತಿರಹಿತನಾಗಿರುವುದು ಹೇಗೆಂಬುದರಲ್ಲಿ ಇದು ದೃಷ್ಟಾಂತವು)

ಆಕಾಶದಲ್ಲಿರುವ ಮಹಾವಾಯುವು ಸರ್ವತ್ರ ವ್ಯಾಪ್ತವಾಗಿದ್ದರೂ ಹೇಗೆ ಆಯಾಯ ಸ್ಥಳದ ಧರ್ಮಸಂಪರ್ಕವನ್ನು ಹೊಂದುವುದಿಲ್ಲವೋ ಹಾಗೆಯೇ ಸರ್ವಪ್ರಾಣಿಗಳೂ ನನ್ನಲ್ಲಿಯೇ ಇದ್ದರೂ ನನ್ನ ಧರ್ಮಸಂಪರ್ಕರಹಿತವಾಗಿರುವುವು ಎಂದು ತಿಳಿ.

(3) **ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।**
ನಾಹಂ ಪ್ರಕಾಶಃ ಸರ್ವಸ್ಯಯೋಗ ಮಾಯಾಸಮಾವೃತಃ ।
—(7. 24-25.)

ಸ್ವಭಾವತಃ ಅವ್ಯಕ್ತಸ್ವರೂಪನಾದ ನನ್ನನ್ನು ವ್ಯಕ್ತನೆಂದು ವಿಪರೀತ ಜ್ಞಾನಿಗಳು ತಿಳಿಯುತ್ತಾರೆ. ನಾನು ನನ್ನ ಅಚಿಂತ್ಯಶಕ್ತಿಯಿಂದಲೂ ಜಡಪ್ರಕೃತಿಯಿಂದಲೂ ಆಚ್ಛಾದಿತನಾಗಿ ಸರ್ವಜನರ ಇಂದ್ರಿಯಜ್ಞಾನಕ್ಕೆ ವಿಷಯನಾಗುವದಿಲ್ಲ. ತೆರೆಯು ಮಧ್ಯೆ ಇದ್ದರೆ ತೆರೆಯಿಂದಾಚೆಯಲ್ಲಿನ ಪದಾರ್ಥವು ಹ್ಯಾಗೆ ಗೋಚರವಾಗುವದಿಲ್ಲವೋ ಹಾಗೆಯೇ ಅವಿದ್ಯಾರೂಪ ಪರೆಯಿಂದ ಸಹಿತರಾದ ಜೀವರು ನನ್ನ ಅಚಿಂತ್ಯಶಕ್ತಿಯಿಂದ ಅವ್ಯಕ್ತನಾದ ನನ್ನನ್ನು ತಿಳಿಯಲಾರರೆಂದು ಭಾವವು.

(4) **ಅವ್ಯಕ್ತೋಽಯಮಚಿಂತ್ಯೋಽಯಂ ।**—(2. 25.)

(ಪರಮಾತ್ಮನು ಜೀವನ ಸಂಗಡ ಸದಾ ಇದ್ದರೂ) ಅವನು ಅದೃಶ್ಯನು. ದೇಹವುಳ್ಳವನಾಗಿ ಸರ್ವತ್ರ ಇರುವವನು ಹೇಗೆ ಅದೃಶ್ಯನೆಂದರೆ ಅವನು ಅಚಿಂತ್ಯನು ಎಂದರೆ ಅದ್ಭುತಶಕ್ತಿಯುಳ್ಳವನು.

(5) **ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇಚತತ್ ।**

—(13.16)

ಅತಿಸೂಕ್ಷ್ಮನಾದುದರಿಂದ ಪರಬ್ರಹ್ಮನು ಇಂದ್ರಿಯಾಗೋಚರನು. ಅತನು ದೂರದಲ್ಲಿಯೂ ಸಮೀಪದಲ್ಲಿಯೂ ಇರತಕ್ಕವನು.

(6) **ನಾಹಂವೇದೈರ್ನತಪಸಾ ನ ದಾನೇನ ನ ಚೇಜ್ಯಯಾ ।**
ಶಕ್ಯ ಏವಂ ವಿಧೋದ್ರಷ್ಟುಂ ದೃಷ್ಟವಾನಸಿಮಾಂ ಯಥಾ ।
ಭಕ್ತ್ಯಾತ್ವನನ್ಯಯಾಶಕ್ಯ ಅಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ವೇನ ಪ್ರವೇಷ್ಟುಂಚ ಪರಂತಪ ॥

—(11. 54.)

ಅರ್ಜುನ! ನನ್ನನ್ನು (ಭಕ್ತಿರಹಿತವಾದ) ವೇದಾರ್ಥಜ್ಞಾನದಿಂದಲಾಗಲೀ, ತಪಸ್ಸಿನಿಂದಲಾಗಲೀ, ದಾನದಿಂದಲಾಗಲೀ, ಯಜ್ಞದಿಂದಲಾಗಲೀ ನೀನು ನೋಡಿದಂತೆ ನೋಡಲು ಸಾಧ್ಯವಾಗುವುದಿಲ್ಲ. (ಹಾಗಾದರೆ ನೀನು ಯಾವ ಉಪಾಯದಿಂದ ಅಧಿಕಾರಿಗಳಿಗೆ ವ್ಯಕ್ತನಾಗುವಿ ಎಂದರೆ ಹೇಳುತ್ತಾನೆ:—) ಅನನ್ಯಭಕ್ತಿಯಿಂದ ಅಪರಿಮಿತಮಹಿಮನಾದ ನನ್ನನ್ನು ತಿಳಿಯುವುದಕ್ಕೂ, **ನೋಡುವುದಕ್ಕೂ** ನಂತರ ಪ್ರವೇಶಮಾಡುವುದಕ್ಕೂ ಶಕ್ಯವಾಗುವುದು. ಭಕ್ತಿಯಿಂದ ಪ್ರಸನ್ನನಾಗಿ ಅವ್ಯಕ್ತನಾದ ಭಗವಂತನು ತನ್ನ ಸ್ವರೂಪವನ್ನು ವ್ಯಕ್ತಮಾಡುವನೆಂದು ಇದರಿಂದ ನಿಶ್ಚಿತವಾಗುವುದು.

(7) **ಭಕ್ತ್ಯಾಮಾಮಭಿಜಾನಾತಿಯಾವಾನ್ಯಶ್ಚಾಸ್ಮಿ ತತ್ವತಃ ।**
ತತೋಮಾಂತತ್ವತೋಜ್ಞಾತ್ವಾ ವಿಶತೇ ತದನಂತರಂ ॥

—(18. 55.)

ಭಕ್ತಿಯಿಂದ ನನ್ನ ಯಥಾರ್ಥಸ್ವರೂಪವನ್ನು ತಿಳಿದೇ ನನ್ನ ದರ್ಶನವನ್ನು ಹೊಂದಿ ನಂತರ ಮುಕ್ತನಾಗುವನೆಂದರ್ಥವು.

(8) **ಮತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ**
ಶಾಶ್ವತಂ ॥—(18. 62.)

ನನ್ನ ಪ್ರಸಾದದಿಂದಲೇ ಅತ್ಯುತ್ಕೃಷ್ಟವಾದ ಸಮಾಧಿಸುಖವನ್ನೂ (ಅಪರೋಕ್ಷ ಜ್ಞಾನವನ್ನೂ) ನಂತರ ಶಾಶ್ವತವಾದ ಮುಕ್ತಿಸ್ಥಾನವನ್ನೂ ಹೊಂದುತ್ತೀಯೆ.

ಭಗವಂತನು ಸಾಕಲ್ಯೇನ ಅಜ್ಞೇಯನೆಂಬುದನ್ನು ಅರ್ಜುನನೇ ಹೇಳಿದ್ದಾನೆ.

(9) ನಹಿತೇ ಭಗವನ್ವ್ಯಕ್ತಿಂ ವಿದುರ್ದೇವಾ ನದಾನವಾಃ ।
ಸ್ವಯಮೇವಾತ್ಮನಾತ್ಮಾನಂ ವೇತ್ಥತ್ವಂ ಪುರುಷೋತ್ತಮ ॥
(10. 14.-15.)

ಹೇ ಭಗವನ್! ನಿನ್ನ ಸಾಮರ್ಥ್ಯಾತಿಶಯವನ್ನು ದೇವತೆಗಳಾಗಲೀ (ಜ್ಞಾನಿಗಳೆಂದು ಪ್ರಸಿದ್ಧರಾದ) ಪ್ರಹ್ಲಾದಾದಿದಾನವರಾಗಲೀ ತಿಳಿದವರಲ್ಲ. ನೀನೇ ನಿನ್ನ ಸಂಪೂರ್ಣ ಸಾಮರ್ಥ್ಯವನ್ನು ಮತ್ತೊಬ್ಬರ ಅಪೇಕ್ಷೆಯಿಲ್ಲದೆ ಸ್ವಸಾಮರ್ಥ್ಯದಿಂದ ತಿಳಿದಿರುತ್ತೀಯೆ.

(10) ನಾಸ್ತ್ಯಂತೋ ವಿಸ್ತರಸ್ಯಮೇ ।—(10. 19.)

ಎಲೈ ಅರ್ಜುನನೇ! ನನ್ನ ವಿಭೂತಿರೂಪಗಳಲ್ಲಿ ಕೆಲವನ್ನು ಮಾತ್ರ ನಿನಗೆ ಹೇಳುತ್ತೇನೆ. ಸಕಲವನ್ನೂ ಹೇಳಬೇಕಾದರೆ ಎಷ್ಟು ಹೇಳಿದರೂ ಪರಿಸಮಾಪ್ತಿಯಾಗಲಾರದು.

(11) ನಾಂತೋಽಸ್ತಿಮಮದಿವ್ಯಾನಾಂ ವಿಭೂತೀನಾಂ ಪರಂತಪ ।
ಏಷತೂದ್ದೇಶತಃ ಪ್ರೋಕ್ತೋವಿಭೂತೇರ್ವಿಸ್ತರೋಮಯಾ ॥
—(10. 40.)

ನನ್ನ ಅದ್ಭುತವಾದ ವಿಭೂತಿರೂಪಗಳಿಗೆ ಪರಿಸಮಾಪ್ತಿ ಇಲ್ಲ. ಈಗ ನಾನು ಹೇಳಿದ ವಿಭೂತಿರೂಪಗಳ ವಿಸ್ತಾರವಾದರೋ ಶೃಂಗಗ್ರಾಹಕತಯಾ ಸ್ವಲ್ಪ ಮಾತ್ರವು.

ಯದ್ಯಪಿ "ಯೇತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ"; "ಯೋಽಸಾವಕ್ಷರಮವ್ಯಕ್ತಂ" ಇತ್ಯಾದಿ ವಾಕ್ಯಗಳಲ್ಲಿ ಲಕ್ಷ್ಮೀದೇವಿಯರಿಗೂ ಅವ್ಯಕ್ತಶಬ್ದವಾಚ್ಯತ್ವವು ಉಂಟು ಎಂದು ಕಂಡುಬರುವದು. ಆದರೆ ಲಕ್ಷ್ಮೀದೇವಿಯು ಸರ್ವನಿಯಾಮಕನಾದ ಪರಮಾತ್ಮನಿಗೆ ಸರ್ವದಾ ವ್ಯಕ್ತಳಾಗಿಯೇ ಇರುವವಳಾದುದರಿಂದ ಅವನ ಅನುಗ್ರಹದಿಂದ ಆಕೆಯು ತನ್ನಿಂದ ನಿಯಮ್ಯರಾದ ಬ್ರಹ್ಮಾದಿ ಜೀವರಿಗೆ ಅವ್ಯಕ್ತಳಾಗಿರುವಳು. ಆದುದರಿಂದ ಮುಖ್ಯ ಅವ್ಯಕ್ತಶಬ್ದವಾಚ್ಯತ್ವವು ಸ್ವತಂತ್ರನಾದ ಶ್ರೀಕೃಷ್ಣನಿಗೇ ಸರಿ.

(12) ಪರಸ್ತಸ್ಮಾತ್ತುಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।
—(8. 20.)

ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂಗತಿಂ ॥—(8. 20.)

ಅವ್ಯಕ್ತನಾಮಕ ಭಗವಂತನು ವ್ಯಕ್ತವಾದ ಸರ್ವ ಪ್ರಾಣಿಗಳಿಗಿಂತಲೂ ಭಿನ್ನನು, ಸ್ವತಂತ್ರನು ಮತ್ತು ಉತ್ತಮನು. (ಆ ಅವ್ಯಕ್ತನುಯಾರೆಂದರೆ ಹೇಳು ತ್ತಾನೆ.—) ಅಕ್ಷರನಾಗಿರುವ ಮತ್ತು ಯಾರನ್ನು (ಮುಕ್ತಿಯಲ್ಲಿ) ಪರಮ ಪ್ರಾಪ್ಯನೆಂದು ಹೇಳುವರೋ ಅವನೇ ಅವ್ಯಕ್ತನು. ಈ ವಾಕ್ಯಗಳಿಂದ ಮುಕ್ತಿ ಪ್ರದನಾದ ವಾಸುದೇವನೇ ಮುಖ್ಯತಃ ಅವ್ಯಕ್ತಶಬ್ದವಾಚ್ಯನೆಂದು ಸಿದ್ಧವಾಗು ತ್ತದೆ.

24. ಅಚಿಂತ್ಯಶಕ್ತಿಯು "ಆತ್ಮನಿಚೈವಂ ವಿಚಿತ್ರಾಶ್ಚಹಿ"; "ಸರ್ವೋ ಪೇತಾಚತದ್ದರ್ಶನಾತ್" ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ಸರ್ವೋತ್ತಮನಾದ ಪರ ಬ್ರಹ್ಮಮಾತ್ರ ವೃತ್ತಿಯಾದ ಧರ್ಮವೆಂದು ವೇದವೇದಾಂತಗಳಲ್ಲಿ ನಿರೂಪಿಸಲ್ಪಟ್ಟಿ ದೆ. ಅದ್ವೈತಮತದಲ್ಲಿ **"ಅಘಟನಾಪಟೀಯಸೀ ಸಾಚಾವಿದ್ಯಾ"** ಎಂದು ಅವಿದ್ಯೆಗೇ ಅಘಟಿತಘಟನಾಸಾಮರ್ಥ್ಯರೂಪವಾದ ಅಚಿಂತ್ಯಶಕ್ತಿಯನ್ನು ಒಪ್ಪಿರು ತ್ತಾರೆ. **ಜಡವಾದ** ಅವಿದ್ಯೆಗೆ ಇಂಥಾ ಅಚಿಂತ್ಯಶಕ್ತಿಯನ್ನು ಒಪ್ಪುವುದಾದರೆ ಬ್ರಹ್ಮನಿಗೆ ಜಡತ್ವವು; ಈಶ್ವರನಿಗೆ ವಿನಾಶವು; ಘಟಾದಿ ವಿನಾಶಪದಾರ್ಥಗಳಿಗೆ ನಿತ್ಯತ್ವವು ಮತ್ತು ಚೇತನತ್ವವು ಇವೇ ಮುಂತಾದ ಸಮಸ್ತ ಅಸಂಭಾವಿತ ಪ್ರಮೇಯಗಳನ್ನೂ ಒಪ್ಪಬೇಕಾಗುವುದರಿಂದ ಇದು ತತ್ವವಿಚಾರದೌರ್ಬಲ್ಯಜನಿತ ಸ್ವಗೋಷ್ಠೀಜನಮನೋರಂಜಕವಾದ ಅಭಿಪ್ರಾಯವೇ ಹೊರತು ಶಾಸ್ತ್ರಾರ್ಥವಾ ಗಲಾರದು.

ಭಗವದ್ಗೀತೆಯ ವಾಕ್ಯಗಳಿಂದ ಶ್ರೀಕೃಷ್ಣನೇ ದೇವದುಜ್ಞೇಯವಾದ ಅದ್ಭುತ ಐಶ್ವರ್ಯವುಳ್ಳವನೆಂದು ಸಿದ್ಧವಾಗುವುದು.

(1) **ಅವ್ಯಕ್ತೋಽಯಮಚಿಂತ್ಯೋಽಯಂ ।**—(2. 25.)

ಪರಬ್ರಹ್ಮನು ಅವ್ಯಕ್ತನು ಮತ್ತು ಅಚಿಂತ್ಯಾದ್ಭುತ ಶಕ್ತಿಯುಳ್ಳವನು.

(2) **ಆಶ್ಚರ್ಯವತ್ಪಶ್ಯತಿಕಶ್ಚಿದೇನ ಮಾಶ್ಚರ್ಯವದ್ವದತಿತಥೈವ ಚಾನ್ಯಃ ।**
ಆಶ್ಚರ್ಯವಚ್ಚೈನಮನ್ಯಶ್ಶೃಣೋತಿಶ್ರುತ್ವಾಪ್ಯೇನಂ ವೇದನ ಚೈವಕಶ್ಚಿತ್ ॥—(2. 29.)

ಸಾತ್ವಿಕಾಧಿಕಾರಿಯು (ಸರ್ವ ಸ್ವತಂತ್ರನಾದ) ಪರಮಾತ್ಮನನ್ನು ಅದ್ಭುತ ನನ್ನಾಗಿ ನೋಡುತ್ತಾನೆ. ಮತ್ತೊಬ್ಬನು ಇವನೇ ಅಸದೃಶನು ಅದ್ಭುತನು ಎಂದು ಹೇಳುತ್ತಾನೆ. ಮತ್ತೊಬ್ಬನು ಎಷ್ಟು ಶ್ರವಣಮಾಡಿದರೂ ಅವನ ಮಹಿಮೆಗೆ ಪರಿ

ಸಮಾಪ್ತಿಯೇ ಇಲ್ಲದಿರುವುದರಿಂದ ವಿಸ್ಮಿತನಾಗಿ ಶ್ರವಣಮಾಡುತ್ತಾನೆ. ಭಗವಂತನ ಮಹಾತ್ಮ್ಯೆಯನ್ನು ಎಷ್ಟು ಶ್ರವಣಮಾಡಿದರೂ ಅದ್ಭುತವಸ್ತುವಾದುದರಿಂದ ಸಾಕಲ್ಯದಿಂದ ತಿಳಿಯುವವನು ದುರ್ಲಭನು.

(3) **ಸರ್ವಸ್ಯಧಾತಾರಮಚಿಂತ್ಯರೂಪಂ ।**—(8. 9.)

ಪರಮಾತ್ಮನು (ನಾನು)....ಸಾಕಲ್ಯೇನ ತಿಳಿಯುವುದಕ್ಕೆ ಅಶಕ್ಯವಾದ ರೂಪವುಳ್ಳವನು.

(2) **ಉಪದ್ರಷ್ಟಾನುಮಂತಾ ಚ ಭರ್ತಾಭೋಕ್ತಾಮಹೇಶ್ವರಃ ।**

—(13. 23.)

ಪರಮಾತ್ಮನು ಸರ್ವಾಧಿಕನಾಗಿ ಸರ್ವವನ್ನೂ ನೋಡುವವನು....ಮಹಾಶಕ್ತಿಯುಳ್ಳವನು.

(5) **ಸಮಂಹಿ ಸರ್ವಭೂತೇಷುತಿಷ್ಠಂತಂ ಪರಮೇಶ್ವರಂ ।**
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿಸಪಶ್ಯತಿ ॥—(13. 28.)

ತಾರತಮ್ಯದಿಂದ ಯುಕ್ತರಾದ ಪ್ರಾಣಿಗಳಲ್ಲಿ ವಾಸಮಾಡುವ ಅಚಿಂತ್ಯಶಕ್ತಿಯುಳ್ಳ ಪರಮಾತ್ಮನನ್ನು ನ್ಯೂನಾಧಿಕಭಾವರಹಿತನೆಂದೂ ನಾಶಹೊಂದುವ ದೇಹಗಳಲ್ಲಿದ್ದರೂ ನಾಶರಹಿತನೆಂದೂ ತಿಳಿಯುವವನು ಜ್ಞಾನಿಯು.

ಈ ಶ್ಲೋಕದಲ್ಲಿ ಶ್ರೀಕೃಷ್ಣನು "**ಪರಮೇಶ್ವರಂ**" ಎಂಬ ಶಬ್ದದಿಂದ ತಾನು ಸ್ವಾಭಾವಿಕವಾದ ಅಚಿಂತ್ಯಶಕ್ತಿಯುಳ್ಳವನೆಂದು ಹೇಳಿ ಅದರ ಬಲದಿಂದಲೇ (1) ತಾರತಮ್ಯೋಪೇತರಾದ ಜೀವರಾಶಿಗಳಲ್ಲಿದ್ದರೂ ತಾನು ಸರ್ವತ್ರ ಪೂರ್ಣಗುಣನಾಗಿ ತಾರತಮ್ಯರಹಿತನೆಂದೂ (2) ತಾನು ವಾಸಮಾಡುವ ದೇಹಾದ್ಯಧಿಷ್ಠಾನಗಳು ನಾಶಹೊಂದಿದರೂ ತನಗೆ ನಾಶಾದಿಗಳು ಇಲ್ಲವೆಂದೂ ತನಗೆ ಅಚಿಂತ್ಯಶಕ್ತಿಯನ್ನು ಸಾಧಿಸುವ ಎರಡು ಯುಕ್ತಿಗಳನ್ನೂ ಹೇಳಿರುತ್ತಾನೆ. ಇನ್ನೂ ಕೆಲವು ಯುಕ್ತಿಗಳನ್ನು ಅಲ್ಲಲ್ಲಿ ಸೂಚಿಸಿರುತ್ತಾನೆ.

(6) **ದೂರಸ್ಥಂ ಚಾಂತಿಕೇಚತತ್ ।**—(13. 16.)

ಪರಮಾತ್ಮನು ಒಂದೇ ರೂಪದಿಂದ ಒಂದೇ ಕಾಲದಲ್ಲಿ ಅತಿ ದೂರದಲ್ಲೂ ಅತಿ ಸಮೀಪದಲ್ಲೂ ಇರುತ್ತಾನೆ. ಇದು ಅಚಿಂತ್ಯಶಕ್ತಿಯ ವ್ಯಾಪಾರವು.

(7) **ನಾಯಂಭೂತ್ವಾ ಭವಿತಾವಾನ ಭೂಯಃ ।**—(2. 20.)

ಪರಮಾತ್ಮನು ರಾಮಕೃಷ್ಣಾದಿರೂಪಗಳಿಂದ **ಪೂರ್ವದಲ್ಲಿ ಇರುವವನಾಗಿಯೇ** ರಾಮನು ಅವತರಿಸಿದನು, ಕೃಷ್ಣನು ಅವತರಿಸಿದನು ಎಂಬ ವ್ಯವ

ಹಾರಕ್ಕೆ ವಿಷಯನಾಗುವನು. ವಸ್ತುತಃ ರಾಮರೂಪವೂ ಕೃಷ್ಣರೂಪವೂ ಅವತಾರಕಾಲಕ್ಕಿಂತ ಪೂರ್ವದಲ್ಲಿಯೇ ಅದೇ ರೂಪದಿಂದ ಇದ್ದವು ಎಂದು ತಾತ್ಪರ್ಯವು. ಅಚಿಂತ್ಯಶಕ್ತಿಯಿಲ್ಲದಿದ್ದರೆ ಇದು ಸಾಧ್ಯವಾಗಲಾರದು.

(8) **ಸರ್ವತಃ ಪಾಣಿಪಾದಂ।**—(13. 14.)

ಪರಮಾತ್ಮನು ಸರ್ವಾವಯವಗಳಲ್ಲಿಯೂ ಪಾಣಿಪಾದಗಳ ಶಕ್ತಿಯುಳ್ಳವನು. ಯಾವ ಒಂದು ಇಂದ್ರಿಯವೂ ಇತರ ಇಂದ್ರಿಯಗಳ ವ್ಯಾಪಾರಮಾಡುವುದರಲ್ಲಿ ಸಮರ್ಥವಾದುದು. ಇದು ಅಚಿಂತ್ಯಶಕ್ತಿಯಿಂದಲೇ ಸಾಧ್ಯವು.

(9) **ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವಚ।**
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ॥

(15. 9.)

ಪೂರ್ಣಾನಂದನಾದ ಪರಮಾತ್ಮನು ಜೀವನ ಶ್ರೋತ್ರಾದಿ ಇಂದ್ರಿಯಗಳಲ್ಲಿ ಪ್ರವಿಷ್ಟನಾಗಿ ಜೀವಭುಕ್ತವಾದ ವಿಷಯಸುಖವನ್ನು ಮಾತ್ರ ಸ್ವೀಕರಿಸುತ್ತಾನೆ. ಆದರೂ ಅದರಿಂದ ಅವನ ಆನಂದಕ್ಕೆ ವೃದ್ಧ್ಯಾದಿಗಳು ಇಲ್ಲ. ಇದು ಅಚಿಂತ್ಯಶಕ್ತಿಪ್ರಯೋಜ್ಯ ವ್ಯಾಪಾರವು. ಶ್ರೀಮದಾಚಾರ್ಯರೂ ಕೂಡ " **ಪೂರ್ಣಾನಂದಮಯಸ್ಯಾಸ್ಯ ಚೇಷ್ಟಾ ನ ಜ್ಞಾಯತೇಕ್ವಚಿತ್** " ಎಂದು ಉದಾಹರಿಸಿರುತ್ತಾರೆ.

(10) **ಉತ್ಕ್ರಾಮಂತಂಸ್ಥಿತಂ ವಾಪಿ ಭುಂಜನಂ ವಾಗುಣಾನ್ವಿತಂ।**
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನ ಚಕ್ಷುಷಃ॥

(15. 10.)

(ಮರಣಕಾಲದಲ್ಲಿ) ಜೀವನನ್ನು ತೆಗೆದುಕೊಂಡು ಲೋಕಾಂತರಕ್ಕೆ ಪ್ರಯಾಣಮಾಡುವ ಮತ್ತು (ಸ್ಥಿತಿಕಾಲದಲ್ಲಿ) ಜೀವನಲ್ಲಿ ಸ್ಥಿತನಾಗಿರುವ **ಶುಭಮಾತ್ರವನ್ನು** ಭೋಗಿಸುವ ಶ್ರೀಪರಮಾತ್ಮನನ್ನು ವಿಮೂಢರು ತಿಳಿಯಲಾರರು ಜ್ಞಾನಚಕ್ಷುಸ್ಸುಳ್ಳವರು ತಿಳಿಯುವರು. ಇದರಿಂದಲೂ ಪರಮಾತ್ಮನಿಗೆ ಅಚಿಂತ್ಯಶಕ್ತಿಯು ಸಿದ್ಧಿಸುವುದು.

(11) **ಯೋಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ।**

(15. 17.)

ಪರಮಾತ್ಮನು ಮೂರು ಲೋಕವನ್ನೂ ಪ್ರವೇಶಿಸಿ ಪ್ರಪಂಚವು ನಾಶಹೊಂದಿದರೂ ತಾನು ನಾಶರಹಿತನಾಗಿ ಅಚಿಂತ್ಯಶಕ್ತಿಯಿಂದ ತಾನೊಬ್ಬನೇ ಸರ್ವವನ್ನೂ ಧರಿಸಿರುತ್ತಾನೆ.

(12) **ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋಜಗತ್ ।**
(10. 42.)

ನಾನು ನನ್ನ ಏಕಾಂಶದಿಂದ ಈ ಸರ್ವ ಜಗತ್ತನ್ನೂ ವ್ಯಾಪಿಸಿಕೊಂಡು ಇರುತ್ತೇನೆ.

ಜ್ಞಾನಚಕ್ಷುಸ್ಸುಳ್ಳವರು ತನ್ನನ್ನು ತಿಳಿಯುವರೆಂದು ಶ್ರೀ ಕೃಷ್ಣನು ಹೇಳಿರುತ್ತಾನೆ. ಜ್ಞಾನಚಕ್ಷುಸ್ಸಿನಿಂದ ಸಹಿತನಾದ ಅರ್ಜುನನೇ ಶ್ರೀ ಕೃಷ್ಣನು ಅಚಿಂತ್ಯಾದ್ಭುತಶಕ್ತಿಯುಳ್ಳವನೆಂಬುದರಲ್ಲಿ ಸಾಕ್ಷಿಯಾಗಿರುತ್ತಾನೆ. ಅರ್ಜುನನು ಕೃಷ್ಣನ ದಿವ್ಯರೂಪವನ್ನು ತೋರಿಸಬೇಕೆಂದು ಪ್ರಾರ್ಥಿಸುವಾಗಲೇ ಆತನ ಅಚಿಂತ್ಯ ಶಕ್ತಿಯನ್ನು ತಿಳಿದಿರುತ್ತಾನೆ.

(13) **ಏವಮೇತದ್ಯಥಾತ್ಥತ್ವ ಮಾತ್ಮಾನಂ ಪರಮೇಶ್ವರ ।**
ದ್ರಷ್ಟು ಮಿಚ್ಛಾಮಿತೇ ರೂಪಮೈಶ್ವರಂ ಪುರುಷೋತ್ತಮ ॥

ಹೇ ಪುರುಷೋತ್ತಮ! ಹೇ ಪರಮೇಶ್ವರ ! ಅಚಿಂತ್ಯಾದ್ಭುತವಾದ ಮಹಾಶಕ್ತಿಯುಳ್ಳವನೇ! ನೀನು ಹೇಳಿದ ನಿನ್ನ ಮಹಿಮೆಯೆಲ್ಲವೂ ಸತ್ಯವೇ ಸರಿ. **ಐಶ್ವರಂ ರೂಪಂ** ಎಂದರೆ ಅಚಿಂತ್ಯಶಕ್ತಿಕವಾದ ನಿನ್ನ ರೂಪವನ್ನು ನೋಡಬೇಕೆಂದು ಅಪೇಕ್ಷಿಸುತ್ತೇನೆ. ವಿಶ್ವರೂಪವು ಐಂದ್ರಜಾಲಿಕ ಪ್ರದರ್ಶನದಂತೆ ವಿಷ್ಣುರಚಿತ ಮಾಯಾವಿಲಾಸವೆಂದು ಕೆಲವರು ವಿಮೂಢರು ಹೇಳುತ್ತಾರೆ. ಅರ್ಜುನನು ನಿನ್ನ ಮಾಯಾರೂಪವನ್ನು ತೋರಿಸು ಎಂದು ಹೇಳಿದ್ದರೆ ಆ ಪ್ರಾರ್ಥನೆಗೆ ಅನುಗುಣವಾಗಿ ತೋರಿಸಿದ ರೂಪವು ಮಾಯಿಕವೆಂದು ಕಥಂಚಿತ್ ಹೇಳಬಹುದಾಗಿತ್ತು. ಪ್ರಶ್ನೆ ಮಾಡುವಾಗಲೇ ನೀನು ಮಹೇಶ್ವರನು ; ನಿನ್ನ ಐಶ್ವರರೂಪವನ್ನು ತೋರಿಸು ಎಂದು ಕೇಳಿರುತ್ತಾನೆ. ಮತ್ತು " **ಯೋಗೇಶ್ವರ....ದರ್ಶಯಾತ್ಮಾನಮವ್ಯಯಂ** " ಎಂದರೆ ಯೋಗೇಶ್ವರನೇ! ನಿನ್ನ ನಾಶರಹಿತವಾದ ಸ್ವರೂಪವನ್ನು ತೋರಿಸು ಎಂದೂ ಕೇಳಿರುತ್ತಾನೆ. ಇದರಿಂದ ಶ್ರೀ ಕೃಷ್ಣನು ತೋರಿಸಿದ ವಿಶ್ವರೂಪವು ನಾಶರಹಿತವಾದ ಆತನ ಸ್ವರೂಪವೆಂದು ಸಿದ್ಧವಾಗುವುದು. ಕೃಷ್ಣನೂ ಕೂಡ

(14) **ದಿವ್ಯಂದದಾಮಿತೇ ಚಕ್ಷುಃ ಪಶ್ಯಮೇಯೋಗಮೈಶ್ವರಂ ॥**
—(11. 8.)

ಎಂದು ಹೇಳಿರುತ್ತಾನೆ. ಇದರ ಅರ್ಥವು:—ನಿನಗೆ ದಿವ್ಯಚಕ್ಷುಸ್ಸು ಕೊಡುತ್ತೇನೆ. ನನ್ನ ಈಶ್ವರ ಸಂಬಂಧಿಯಾದ ಅಂದರೆ ಅಚಿಂತ್ಯವಾದ ಸಾಮರ್ಥ್ಯವನ್ನು ನೋಡು. ಹೀಗೆ ಹೇಳಿ

(15) **ದರ್ಶಯಾಮಾಸ ಪಾರ್ಥಾಯ ಪರಮಂ ರೂಪಮೈಶ್ವರಂ ||**

—(11. 9.)

ಪಾರ್ಥನಿಗೆ ತನ್ನ ಪರಮಂ ಎಂದರೆ ಯಥಾರ್ಥವಾದ ಮಾಯಿಕವಲ್ಲದ ಐಶ್ವರಂ ರೂಪಂ ಎಂದರೆ ಅಚಿಂತ್ಯಾದ್ಭುತಶಕ್ತ್ಯುಪೇತವಾದ ಪೂರ್ಣವಾದ ವಿಶ್ವರೂಪವನ್ನು ತೋರಿಸಿದನು.

ಈ ಪ್ರಶ್ನೋತ್ತರ ಪರಾಮರ್ಶೆಯಿಂದಲೇ ವಿಶ್ವರೂಪವು ಮಾಯಿಕವಲ್ಲ ವೆಂದು ಸಿದ್ಧವಾಗುವುದು. ಮಾಯಿಕರೂಪವನ್ನು ನೋಡುವುದಕ್ಕೆ ಇದ್ದ ಚಕ್ಷು ಸ್ಸಿನ ಶಕ್ತಿಯೂ ಕೂಡ ದೋಷಾದಿಗಳಿಂದ ಅಥವಾ ಸಾದೃಶ್ಯದರ್ಶನಾದಿಗಳಿಂ ದ ಕುಂಠಿತವಾಗಬೇಕು. ದಿವ್ಯವಾದ ಎಂದರೆ ಅಲೌಕಿಕವಾದ ಅತೀಂದ್ರಿಯ ಪದಾರ್ಥಗಳನ್ನು ನೋಡುವ ಚಕ್ಷುಸ್ಸುಬೇಕಾಗಿಲ್ಲ. ದುಷ್ಟಚಕ್ಷುಸ್ಸು ಮಾಯಿಕ ಪದಾರ್ಥಗಳ ದರ್ಶನಕ್ಕೆ ಬೇಕಾಗಬಹುದು. ದಿವ್ಯಚಕ್ಷುಸ್ಸು ಸರ್ವಥಾ ಅಪೇಕ್ಷಿತ ವಲ್ಲ. ದುಷ್ಟಚಕ್ಷುಸ್ಸಿಗೆ ಅಥವಾ ಸಾಮಾನ್ಯವಾದ ಚಕ್ಷುಸ್ಸಿಗೂ ಕೂಡ ತನ್ನ ಅಲೌಕಿಕ ಮಹಿಮೆಗಳು ಕಾಣುವುದಿಲ್ಲವೆಂದೇ ಶ್ರೀ ಕೃಷ್ಣನು "ದಿವ್ಯಂದದಾಮಿತೇ ಚಕ್ಷುಃ" ಎಂದು ಪ್ರತಿಜ್ಞೆ ಮಾಡಿ ತನ್ನ "ಪರಮಂರೂಪಮೈಶ್ವರಂ" ಅಂದರೆ ಉತ್ತ ಮವಾದ ಅಚಿಂತ್ಯಮಹಿಮೋಪೇತವಾದ ರೂಪವನ್ನು ತೋರಿಸಿರುತ್ತಾನೆ. ಇಂಥಾ ದಿವ್ಯಚಕ್ಷುರಹಿತರಾದುದರಿಂದಲೇ ದುರ್ಯೋಧನಾದಿಗಳು ಸಭೆಯಲ್ಲಿ ಶ್ರೀ ಕೃಷ್ಣನ ವಿಶ್ವರೂಪವನ್ನು ನೋಡಿ ಜುಗುಪ್ಸೆಯನ್ನು ಹೊಂದಿದರೆಂದು ಮಹಾ ಭಾರತದಲ್ಲಿ ಹೇಳಿರುತ್ತದೆ. ದಿವ್ಯಚಕ್ಷುಸ್ಸನ್ನು ಹೊಂದಿದ ನಂತರ ಅರ್ಜುನನು ಆ ರೂಪವನ್ನು ಅಚಿಂತ್ಯಮಹಿಮೆಯುಳ್ಳದ್ದೆಂದೇ ತಿಳಿದನು.

(16) **ಅನೇಕವಕ್ತ್ರನಯನಂ ಅನೇಕಾದ್ಭುತದರ್ಶನಂ |**
ದಿವ್ಯಮಾಲ್ಯಾಂಬರಧರಂ ದಿವ್ಯಗಂಧಾನುಲೇಪನಂ |
ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಂ ||

—(11. 11.)

ಅನಂತ ಮುಖಗಳು, ಅನಂತ ಕಣ್ಣುಗಳು, ಅನಂತ ಆಶ್ಚರ್ಯವಾದ ದ್ರಷ್ಟ ವ್ಯರೂಪಗಳುಳ್ಳ ದಿವ್ಯವಾದ ಅಂದರೆ ಸ್ವರೂಪಭೂತವಾದ ಹಾರ ವಸ್ತ್ರಗಳನ್ನು ಧರಿಸಿದ ಸ್ವರೂಪಭೂತವಾದ ಗಂಧದಿಂದ ಲಿಪ್ತನಾದ **ಸರ್ವಾಶ್ಚರ್ಯಮ ಯವಾದ** ವಿಶ್ವತೋಮುಖವಾದ ಅನಂತವಾದ ಕ್ರೀಡಾದಿಗುಣವಿಶಿಷ್ಟವಾದ ವಿಶ್ವರೂಪವನ್ನು ಅರ್ಜುನನು ಕಂಡನು.

(17) ಮಾಯಿಕಪದಾರ್ಥಕ್ಕೆ ಮಹಾ ತೇಜಸ್ಸು ಎಲ್ಲಿಂದ ಬಂತು? ಅಂಥ ಕಾರಪಷ್ಟೇ ಮಾಯಾರಚನೆಗೆ ಉಪೋದ್ಬಲಕವು. ವಿಶ್ವರೂಪವಾದರೋ ಅನಂತ ಸೂರ್ಯಕಾಂತಿಯಿಂದ ಸಹಿತವಾದದ್ದು.

ದಿವಿಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
ಯದಿಭಾಸ್ಸದೃಶೀಸಾಸ್ಯಾದ್ಭಾಸಸ್ತಸ್ಯಮಹಾತ್ಮನಃ ॥—(11. 12.)
ತೇಜೋಭಿರಾಪೂರ್ಯಜಗತ್ಸಮಗ್ರಂ ಭಾಸಸ್ತವೋಗ್ರಾಃ ಪ್ರತಪಂತಿವಿಷ್ಣೋ ।—(11. 30.)

ಅಂತರಿಕ್ಷದಲ್ಲಿ ಒಂದೇ ಕಾಲದಲ್ಲಿ ಅನಂತ ಸೂರ್ಯರು ಉದಯಿಸಿದರೆ ವ್ಯಕ್ತವಾಗುವ ಕಾಂತಿಯು ಆ ವಿಶ್ವರೂಪವನ್ನು ತಾಳಿದ ಶ್ರೀಹರಿಯ ದೇಹಕಾಂತಿಗೆ ಸದೃಶವಾದರೂ ಆಗಬಹುದು. ಹೇ ವಿಷ್ಣೋ! ನಿನ್ನ ತೀಕ್ಷ್ಣವಾದ ಪ್ರಭೆಗಳು ತಮ್ಮ ಪ್ರಕಾಶನ ಶಕ್ತಿಯಿಂದ ಸಕಲ ಪ್ರಪಂಚವನ್ನೂ ವ್ಯಾಪಿಸಿ ಸುಡುತ್ತವೆ. ಕಿಂಚ ಈ ವಿಶ್ವರೂಪವು ಸರ್ವ ಜ್ಞಾನಿಗಳಿಗೂ ಮತ್ತು ಮುಕ್ತರಿಗೂ ಪರಿದೃಶ್ಯಮಾನವಾಗಿರುತ್ತದೆ. ಯಥಾರ್ಥ ಜ್ಞಾನಿಗಳಾದ ದೇವತೆಗಳಿಂದಲೂ ಮುಕ್ತರಿಂದಲೂ ದೃಶ್ಯಮಾನವಾದ ರೂಪವು ಮಾಯಿಕವಾಗಲಾರದು:—

(18) **ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂ ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್ ।**
ಅಮೀಹಿತ್ವಾಂಸುರಸಂಘಾವಿಶಂತಿ ಕೇಚಿದ್ಭೀತಾಃ ಪ್ರಾಂಜಲಯೋಗೃಣಂತಿ ।
ಗಂಧರ್ವಯಕ್ಷಾಸುರಸಿದ್ಧಸಂಘಾವೀಕ್ಷಂತೇತ್ವಾಂ ವಿಸ್ಮಿತಾಶ್ಚೈವಸರ್ವೇ ॥—(11. 22.)

ಹೇ ಮಹಾತ್ಮನೇ! ನಿನ್ನ ಅದ್ಭುತವಾದ ಮತ್ತು ಉಗ್ರವಾದ ರೂಪವನ್ನು **ನೋಡಿ** ಮೂರು ಲೋಕವೂ ವ್ಯಥೆಯನ್ನು ಹೊಂದಿದೆ. ಮುಕ್ತಾಮುಕ್ತ ಸಕಲ ದೇವತೆಗಳೂ ನಿನ್ನಲ್ಲಿ ಪ್ರವಿಷ್ಟರಾಗಿದ್ದಾರೆ. ಅದರಲ್ಲಿ ಕೆಲವರು (ಅಮುಕ್ತರು) ಭೀತರಾಗಿ ನಿನ್ನನ್ನು ಪ್ರಾಂಜಲಿಗಳಾಗಿ ಸ್ತುತಿಸುತ್ತಾರೆ. ಗಂಧರ್ವ ಯಕ್ಷಾದಿ ಸರ್ವ ದೇವಸಮೂಹವೂ ವಿಸ್ಮಿತರಾಗಿ ನಿನ್ನನ್ನು **ನೋಡುತ್ತಾರೆ.**

ಲೋಕದಲ್ಲಿ ದುರ್ಬಲನಾದ ಐಂದ್ರಜಾಲಿಕನು ಸಭಿಕರಿಗೆ ಇಷ್ಟವಾದ ಪದಾರ್ಥಗಳನ್ನು ತತ್ಕಾಲದಲ್ಲಿ ಯಥಾರ್ಥವಾಗಿ ನಿರ್ಮಾಣಮಾಡುವುದಕ್ಕೆ ಸಾಮರ್ಥ್ಯವಿಲ್ಲದಿರುವುದರಿಂದ ಮಾಯಾಜಾಲವನ್ನು ಆಶ್ರಯಿಸುತ್ತಾನೆ. ಪರಮಾ

ತ್ಮನಿಗೆ ಸ್ವಾಭಾವಿಕವಾದ ಅಚಿಂತ್ಯಬಲವೇ ಇರುವುದರಿಂದ ಆತನ ಅದ್ಭುತರೂಪ ಪ್ರದರ್ಶನವು ಆತನಲ್ಲಿಯೇ ಇದ್ದರೂಪದ ಅಭಿವ್ಯಕ್ತಿಯೇ ಹೊರತು ತಾತ್ಕಾಲಿಕ ವಾದ ಮಾಯಿಕಸೃಷ್ಟಿಯಲ್ಲ.

(19) **ಅನಂತವೀರ್ಯಾಮಿತವಿಕ್ರಮಸ್ತ್ವಂ** ।—(11. 40.)

ಹೇ ಸ್ವಾಮಿ! ನೀನು ಅಪರಿಮಿತಬಲಪರಾಕ್ರಮಸಂಪನ್ನನು.

ಆದುದರಿಂದಲೇ ಅಚಿಂತ್ಯವಾದ ಸ್ವರೂಪಭೂತವಾದ ಮಹಿಮೋಪೇತ ನನ್ನು ಯಾವ ಲೌಕಿಕ ಉಪಾಯಗಳಿಂದಲೂ ವಶಪಡಿಸಿಕೊಳ್ಳುವುದು ಸಾಧ್ಯವಲ್ಲ ವೆಂದು ತಿಳಿದು ದಾಸ್ಯಭಾವದಿಂದ ನಮಸ್ಕಾರ ಮಾಡಿರುತ್ತಾನೆ.

(20) **ನಮೋನಮಸ್ತೇಽಸ್ತು ಸಹಸ್ರಕೃತ್ವಃ ಪುನಶ್ಚಭೂಯೋಽಪಿ ನಮೋನಮಸ್ತೇ** ।
ನಮಃ ಪುರಸ್ತಾದಥ ಪೃಷ್ಠತಸ್ತೇ ನಮೋಽಸ್ತುತೇ ಸರ್ವತ ಏವಸರ್ವ ॥—(11. 40.)

ಹೇ ಸ್ವಾಮಿ! ನಿನಗೆ ನಮಸ್ಕಾರವು! ನಿನಗೆ ಮತ್ತೂ ಮತ್ತೂ ನಮ ಸ್ಕಾರವು. ಪೂರ್ವದಲ್ಲಿ, ಪಶ್ಚಿಮದಲ್ಲಿ, ದಕ್ಷಿಣೋತ್ತರಗಳಲ್ಲಿ ಹಿಂದೆ, ಮುಂದೆ, ಮೇಲೆ, ಕೆಳಗೆ ಎಲ್ಲಿನೋಡಿದರೆ ಅಲ್ಲಿ ವ್ಯಾಪ್ತನಾಗಿರುವ ನಿನಗೆ ನಮಸ್ಕಾರವು.

ತನ್ನ ಅಚಿಂತ್ಯಶಕ್ತಿಯು ಅವಿದ್ಯಾದಿ ಉಪಾಧಿಗಳಿಂದ ಪ್ರಾಪ್ತವಾದ ಮಾ ಯಾಬಲವಲ್ಲ; ಸ್ವರೂಪಭೂತವಾದ ಸಾಮರ್ಥ್ಯವೇ ಎಂದು ಶ್ರೀಕೃಷ್ಣನೇ ವಿಶ್ವ ರೂಪದ ಉಪಸಂಹಾರಕಾಲದಲ್ಲಿ ನಿರೂಪಣೆ ಮಾಡಿರುತ್ತಾನೆ.

(21) **ಮಯಾಪ್ರಸನ್ನೇನ ತವಾರ್ಜುನೇದಂರೂಪಂಪರಂ ದರ್ಶಿತ ಮಾತ್ಮಯೋಗಾತ್** ।
ತೇಜೋಮಯಂ ವಿಶ್ವಮನಂತಮಾದ್ಯಂ........॥—(11. 47.)

ಎಲೈ ಅರ್ಜುನನೇ! ನಿನ್ನಲ್ಲಿ ಅನುಗ್ರಹವುಳ್ಳ ನನ್ನಿಂದ **ಆತ್ಮಯೋಗಾ ತ್** ಎಂದರೆ **ನನ್ನ ಸ್ವರೂಪಸಾಮರ್ಥ್ಯದಿಂದ, ತೇಜೋಮಯ**ವಾದ ಪೂರ್ಣವಾದ ಅಪರಿಚ್ಛಿನ್ನವಾದ ಜಗದಾದಿಕಾರಣವಾದ ಈ ರೂಪವು ನಿನಗೋ ಸ್ಕರ ತೋರಿಸಲ್ಪಟ್ಟಿತು.

ಕಿಂಚ, ನುಳ್ಳು ನೋಟವನ್ನು ನೋಡುವುದಕ್ಕೆ ಉಗ್ರವಾದ ತಪಸ್ಸುಮಾಡ ಬೇಕಾದುದಿಲ್ಲ. ವಿಶ್ವರೂಪವಾದರೋ "ಸುದುರ್ದರ್ಶವು." ಕೃಷ್ಣನು ಹೇಳು ತ್ತಾನೆ:—

(22) ಸುದುರ್ದರ್ಶಮಿದಂ ರೂಪಂ........|—(11. 52.)

ಭಕ್ತ್ಯಾತ್ವನನ್ಯಯಾಶಕ್ಯ ಅಹಮೇವಂವಿಧೋಽರ್ಜುನ ||

ಜ್ಞಾತುಂದ್ರಷ್ಟುಂ........||—(11. 54.)

ಅರ್ಜುನ! ಸುಲಭೋಪಾಯದಿಂದ ನನ್ನ ರೂಪವು ನೋಡುವುದಕ್ಕೆ ಅಶಕ್ಯವು. ಅನನ್ಯವಾದ ಭಕ್ತಿಯಿಂದಲೇ ಇಂಥಾ ವಿಶ್ವರೂಪಿಯಾದ ನಾನು ತಿಳಿಯಲ್ಪಡತಕ್ಕವನು.

ಯುದ್ಧ ಶಾಂತವಾದರೂ ವಿಶ್ವರೂಪದರ್ಶನ ಜನಿತ ಸಂಜಯನ ಆನಂದವು ಕ್ಷೀಣವಾಗಲಿಲ್ಲ.

(23) ತಚ್ಚಸಂಸ್ಮೃತ್ಯಸಂಸ್ಮೃತ್ಯ ರೂಪ ಮತ್ಯದ್ಭುತಂಹರೇಃ |

ವಿಸ್ಮಯೋಮೇ ಮಹಾರ್ರಾಜನ್ ಹೃಷ್ಯಾಮಿಚ ಪುನಃ ಪುನಃ ||

—(18. 77.)

ಎಲೈ ಧೃತರಾಷ್ಟ್ರನೇ! ಕೃಷ್ಣಾರ್ಜುನರ ಸಂವಾದದ ಸ್ಮರಣೆಯಿಂದ ನನಗೆ ಪುನಃ ಪುನಃ ಹರ್ಷ ಉಂಟಾಗುವುದು. ಮತ್ತು ಶ್ರೀ ಹರಿಯ ಪರಮಾಶ್ಚರ್ಯಕರವಾದ ಆ ವಿಶ್ವರೂಪವನ್ನು ಪುನಃ ಪುನಃ ಸ್ಮರಿಸಿಕೊಂಡು ನನಗೆ ಮಹಾಶ್ಚರ್ಯವು ಆಯಿತು; ಮತ್ತು ಮರಳಿ ಮರಳಿ ಆನಂದವನ್ನು ಹೊಂದುತ್ತೇನೆ.

"ಯೋಗೇಶ್ವರಾತ್ ಕೃಷ್ಣಾತ್" ಎಂದು ಪೂರ್ವಶ್ಲೋಕದಲ್ಲಿ ಹೇಳಿ ಸಂಜಯನು ಶ್ರೀಕೃಷ್ಣನ ಸ್ವರೂಪವನ್ನು ಅಂತ್ಯಶ್ಲೋಕದಲ್ಲಿ ಸಂಗ್ರಹವಾಗಿ ವರ್ಣಿಸಿರುತ್ತಾನೆ.

(24) ಯತ್ರಯೋಗೀಶ್ವರಃ ಕೃಷ್ಣೋ ಯತ್ರಪಾರ್ಥೋಧನುರ್ಧರಃ|

ತತ್ರಶ್ರೀರ್ವಿಜಯೋಭೂತಿರ್ಧ್ರುವಾನೀತಿರ್ಮತಿರ್ಮಮ ||

—(18. 78.)

ಅಚಿಂತ್ಯಾದ್ಭುತ ಶಕ್ತಿಯನ್ನು ಹೊಂದಿರುವ ಸರ್ವೇಶ್ವರನಾದ ಶ್ರೀಕೃಷ್ಣನು ಎಲ್ಲಿ (ಯಾವ ಸೈನ್ಯದಲ್ಲಿ) ಇರುತ್ತಾನೆಯೋ, (ಅವನನ್ನು ಆಶ್ರಯಿಸಿದ) ಗಾಂಡೀವಧನ್ವಿಯಾದ ಅರ್ಜುನನು ಎಲ್ಲಿರುತ್ತಾನೆಯೋ ಅಲ್ಲಿಯೇ ರಾಜ್ಯಲಕ್ಷ್ಮಿಯು, ಜಯವು, ಸಂಪತ್ತು, ನೀತಿಯೂ ನಿಶ್ಚಲವಾಗಿರುವುದೆಂದು ನನ್ನ ನಿಶ್ಚಯವು.

ಶ್ರೀಕೃಷ್ಣನ ಅಚಿಂತ್ಯಶಕ್ತಿಯು ಕುರುಕ್ಷೇತ್ರದ ಯುದ್ಧವೃತ್ತಾಂತದಿಂದಲೇ ತಿಳಿದುಬರುವುದು. ಆಯುಧರಹಿತನಾದ ಕೃಷ್ಣನನ್ನು ಆಶ್ರಯಿಸಿ ಅಲ್ಪಸೇನೆ

ಯಿಂದ ಯುಕ್ತರಾದ ಪಾಂಡವರು ಜಯಶೀಲರಾದರು. ಸರ್ವಾಯುಧಗಳಿಂದ ಸಂಪನ್ನರಾದ ಲಕ್ಷನಾರಾಯಣೀ ಸೇನೆಯನ್ನು ಕೃಷ್ಣನಿಂದ ಪಡೆದು ಹೆಚ್ಚು ಸೇನೆಯಿಂದ ರಹಿತನಾದರೂ ದುರ್ಯೋಧನನು ದುರ್ಗತಿಯನ್ನೇ ಹೊಂದಿದನು. ಅಚಿಂತ್ಯಸಾಮರ್ಥ್ಯೋಪೇತನಾದ ಶ್ರೀಕೃಷ್ಣನನ್ನು ನಂಬಿದವರಿಗೂ ಯಥಾಯೋಗ್ಯವಾದ ಅಚಿಂತ್ಯಶಕ್ತಿಯು ಬರುವುದೆಂದು "ಯತ್ರಪಾರ್ಥೋಧನುರ್ಧರಃ" ಎಂಬ ಶ್ಲೋಕಭಾಗದಿಂದ ಸಂಜಯನು ಸೂಚಿಸಿರುತ್ತಾನೆ. ಹೀಗಿರುವಲ್ಲಿ ಯೋಗಿಗಳಿಗೂ ಒಡೆಯನಾದ ಶ್ರೀಕೃಷ್ಣನ ಸಾಮರ್ಥ್ಯವನ್ನು ಎಷ್ಟೆಂದು ಹೇಳುವುದಕ್ಕಾಗದೀತು.

25. ಇವೇ ಮೊದಲಾದ ಅನಂತಯುಕ್ತಿಗಳಿಂದ ವಿಷ್ಣುಸರ್ವೋತ್ತಮತ್ವವು ವೇದಾಂತಸೂತ್ರಗಳಲ್ಲಿಯೂ ಭಗವದ್ಗೀತೆಯಲ್ಲಿಯೂ ನಿರ್ಣೀತವಾಗಿರುತ್ತದೆ. ಅನಂತಯುಕ್ತಿಗಳಿಂದೇನು! **ಜ್ಞಾನಿಗಳ ಆಚರಣೆಯೇ** ಪರಮಾತ್ಮನ ಸರ್ವೋತ್ತಮತ್ವಜ್ಞಾಪಕವಾದ ಮುಖ್ಯಯುಕ್ತಿಯಾಗಿರುವುದು. "ಅಹಮಾತ್ಮಾ ಗುಡಾಕೇಶ" ಎಂಬ ಶ್ರೀ ಕೃಷ್ಣನ ವಾಕ್ಯದಿಂದಲೂ "ಪರಂಬ್ರಹ್ಮ" ಎಂಬ ಅರ್ಜುನನ ಸ್ತುತಿಯಿಂದಲೂ ಕೃಷ್ಣನೇ ಆತ್ಮನು; ಕೃಷ್ಣನೇ ಪರಬ್ರಹ್ಮನು ಎಂದು ಸಿದ್ಧವಾಗುವುದು. ಇಂಥಾ ಆತ್ಮದರ್ಶನವನ್ನು ಮಾಡಿದ ಜ್ಞಾನಿಗಳು ಸರ್ವಲೌಕಿಕ ವಿಷಯಗಳನ್ನೂ ತೃಣಪ್ರಾಯವಾಗಿ ತಿಳಿದಿರುತ್ತಾರೆ.

(1) **ಯಸ್ತ್ವಾತ್ಮರತಿರೇವಸ್ಯಾ ದಾತ್ಮತೃಪ್ತಶ್ಚಮಾನವಃ ।**
ಆತ್ಮನ್ಯೇವಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥
ನೈವತಸ್ಯಕೃತೇನಾರ್ಥೋ ನಾಕೃತೇನೇಹಕಶ್ಚನ ।
ನಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥

—(3. 17-18)

ಇದರ ಅರ್ಥವು: —ಯಾವಾತನು ಪರಮಾತ್ಮ ದರ್ಶನದಿಂದಲೇ ಉಂಟಾದ ಸುಖವುಳ್ಳವನಾಗಿ ಅನ್ಯತ್ರ ಆಸಕ್ತಿಯುಳ್ಳವನಲ್ಲವೋ, (ಪರಮಾತ್ಮ ದರ್ಶನದಿಂದ ಉಂಟಾದ ಸುಖವುಳ್ಳವನಾದುದರಿಂದ) ಪರಮಾತ್ಮಪ್ರಸಾದದಿಂದ ಅನ್ಯವಿಷಯಗಳಲ್ಲಿ ಅಲಂಬುದ್ಧಿಯುಳ್ಳವನೋ, ಅಂಥಾ ಅಸಂಪ್ರಜ್ಞಾತಸಮಾಧಿಸ್ಥನು ಮಾಡಬೇಕಾದ ಕಾರ್ಯವು ಯಾವುದೂ ಇರುವುದಿಲ್ಲ. ಅಸಂಪ್ರಜ್ಞಾತ ಸಮಾಧಿಸ್ಥನಿಗೆ ಸಮಾಧಿಯನ್ನು ಬಿಟ್ಟು ಆಚರಿಸಲ್ಪಡುವ ಯಜ್ಞಾದಿಗಳಿಂದ ಪ್ರಯೋಜನವೇನೂ ಇರುವುದಿಲ್ಲ. (ಪರಮಾತ್ಮನ ದರ್ಶನಾರ್ಥವಾಗಿ ಯಜ್ಞಾದಿಗಳನ್ನು ಆಚರಿಸಬೇಕು.

ಸರ್ವಕರ್ಮಗಳಿಗೆ ಫಲರೂಪನಾದ ಪರಮಾತ್ಮನ ದರ್ಶನವೇ ಆಗುತ್ತಿರುವಾಗ ಅದನ್ನು ಬಿಟ್ಟು ಇನ್ನು ಯಾವ ಫಲಕ್ಕೋಸ್ಕರ ಯಜ್ಞಾದಿಗಳನ್ನು ಆಚರಿಸಬೇಕು? ಪರಮಾತ್ಮನ ದರ್ಶನಕ್ಕಿಂತ ಉತ್ತಮ ಫಲವು ಇಲ್ಲವೆಂದು ಭಾವವು). ಅಸಂಪ್ರಜ್ಞಾತಸಮಾಧಿಸ್ಥನಿಗೆ ಸಂಧ್ಯಾವಂದನಾದಿ ನಿತ್ಯಕರ್ಮಪರಿತ್ಯಾಗದಿಂದಲೂ ಪಾಪವಿಲ್ಲ. ಆತನಿಗೆ ದೇವತಾಗುರ್ವಾದಿಗಳ ದರ್ಶನ, ವಂದನ, ಸಂಭಾಷಣಾದಿಗಳಿಂದ ತಾನು ಅನುಭವಿಸುತ್ತಿರುವ ಬ್ರಹ್ಮದರ್ಶನಜನ್ಯಸುಖದ ಲಾಭಕ್ಕಿಂತಲೂ ಅಧಿಕವಾದ ಲಾಭವು ಇರುವುದಿಲ್ಲ. ಆರನೆಯ ಅಧ್ಯಾಯದಲ್ಲಿಯೂ ಶ್ರೀ ಕೃಷ್ಣನು ಹೀಗೆಯೇ ಹೇಳಿರುತ್ತಾನೆ.

(2) **ಯಂಲಬ್ಧ್ವಾಚಾಪರಂಲಾಭಂ ಮನ್ಯತೇನಾಧಿಕಂತತಃ।**

—(6. 22.)

ಪರಮಾತ್ಮ ದರ್ಶನಪ್ರಾಪಕವಾದ ಧ್ಯಾನಯೋಗವನ್ನು ಹೊಂದಿದನಂತರ ಅದಕ್ಕಿಂತ ಅಧಿಕವಾದ ಬೇರೆ ಲಾಭವನ್ನು ಅಧಿಕಾರಿಯು ತಿಳಿಯುವುದಿಲ್ಲ. ಈ ವಾಕ್ಯಗಳಿಂದ ಪರಮಾತ್ಮದರ್ಶನವೇ ಸರ್ವೋತ್ತಮ ಲಾಭವೆಂದು ನಿಶ್ಚಿತವಾಗುವುದರಿಂದ ಪರಮಾತ್ಮನು ಸರ್ವೋತ್ತಮ ಪದಾರ್ಥವು ; ಆತನ ದರ್ಶನಜನ್ಯವಾದ ಸುಖವು ಸರ್ವೋತ್ತಮಸುಖವು; ಎಂದು ಕೈಮುತ್ಯನ್ಯಾಯದಿಂದ ಸಿದ್ಧವಾಗುವುದು.

ಈ ರೀತಿಯಾಗಿ ಆಪ್ತತಮನೂ ಸರ್ವಜ್ಞಶಿಖಾಮಣಿಯೂ ಸಾಕ್ಷಾಜ್ಜಗದ್ಗುರುವೂ ಆದ ಶ್ರೀಕೃಷ್ಣನಿಂದ ಅಧಿಕಾರಿ ವರ್ಗದಲ್ಲಿ ಶ್ರೇಷ್ಠನೂ ಪವಿತ್ರತಮನೂ ಭಕ್ತಿಯಿಂದ ಶರಣಾಗತನೂ ಆದ ಶಿಷ್ಯನಾದ ಅರ್ಜುನನಿಗೆ ಮಹಾಧರ್ಮಸಂಕಟಕಾಲದಲ್ಲಿ "ಇಮಂ ವಿವಸ್ವತೇ ಯೋಗಂ" ಇತ್ಯಾದಿ ವಾಕ್ಯಗಳಲ್ಲಿ ನಿರೂಪಿತವಾಗಿರುವಂತೆ ಉಪದಿಷ್ಟವಾದ ಪ್ರಾಚೀನತಮವೂ, ವೇದಸಮ್ಮತವೂ ಆದ ಈ ಬ್ರಹ್ಮವಿದ್ಯೆಯು ಸ್ಪಷ್ಟವಾಗಿ ಸರ್ವ ವಿಮರ್ಶಕರಿಗೂ ಹೃದಯಂಗಮವಾಗುವಂತೆ ಶ್ರೀ ಕೃಷ್ಣನೇ ಪರಬ್ರಹ್ಮನು ; ಸರ್ವ ವೇದಪ್ರತಿಪಾದ್ಯನು ; ಆತನೇ ಮುಕ್ತಿಪ್ರದನು; ಆತನಿಂದ ಭಿನ್ನವಾದ ಸರ್ವಪ್ರಾಣಿಜಾತವೂ ಆತನ ಅನಂತಾಂಶಗಳಲ್ಲಿ ಏಕದೇಶಬಲವುಳ್ಳದ್ದಾದುದರಿಂದ ಆತನೇ ಸರ್ವೋತ್ತಮನು ; ಎಂದು ಬಹು ಪ್ರಕಾರವಾಗಿ ಪುನಃ ಪುನಃ ಬೋಧಿಸುತ್ತಿರುವುದು. ಸತ್ಯಜಗತ್ತಿಗೆ ನಿಯಾಮಕನೂ, ಅಲ್ಪರಾದ ಜೀವರುಗಳಿಗೆ ನಿರವಧಿಕಸ್ವಾಮಿಯೂ ಆಗಿರುವ ವಾಸುದೇವನು ಗೀತಾವಾಕ್ಯಗಳೆಂಬ ಸಿಂಹಾಸನದಲ್ಲಿ ಆರೂಢನಾಗಿ ವಿರಾಜಿಸುತ್ತಿರುವನು. ಹೀಗಿರುವಲ್ಲಿ ದಿವಾಂಧರಿಗೆ ಸೂರ್ಯನ ಪ್ರಭಾವವು ತೋರದಂತೆ, ಕಗ್ಗಲ್ಲಿಗೆ ಚಂದ್ರಕಿರಣ ಸಂಸ್ಪ

ರ್ಶದಿಂದ ಸುಖವಾಗದಿರುವಂತೆ, ದುಸ್ತರ್ಕಗಳಿಂದ ದೃಢೀಕೃತವಾದ ಪರಂಪರೋಪದೇಶರಹಿತವಾದ ಅಶಿಕ್ಷಿತಬುದ್ಧಿಗಳಿಗೆ ಭಗವದ್ವಾಕ್ಯಗಳು ನಾನಾ ಮತಗಳನ್ನು ಪ್ರತಿಪಾದನೆಮಾಡುವ ಪರಸ್ಪರ ವಿರುದ್ಧವಾದ ವಾಕ್ಯಗಳ ಸಂಗ್ರಹವು; ಕರ್ಮಭ್ರಂಶವನ್ನು ನಿರೂಪಿಸುವ ಅವಧೂತ ವಿದ್ಯೆಯು; ಸಂಸಾರಪ್ರವೃತ್ತಿಯನ್ನೇ ಉದ್ಘೋಷಿಸುವ ಗೃಹಸ್ಥೋಪನ್ಯಾಸವು ; ದುರ್ನಿರೂಪವಾದ ಅವಿದ್ಯಾಪ್ರಭಾವದಿಂದ ವಿಸ್ಮೃತವಾದ ಜೀವಚೈತನ್ಯದ ಬ್ರಹ್ಮತ್ವವನ್ನೇ ಜ್ಞಾಪಿಸುವ ವಿಜ್ಞಾಪನ ಪತ್ರಿಕೆಯು ; ಇವೇ ಮುಂತಾಗಿ ನಾನಾರೀತಿಯಲ್ಲಿ ತೋರುವುದೇ ಹೊರತು, ಅವಿದ್ಯಾಪಟಲಪಿಹಿತನಯನರಾದ ಮಂದಜೀವರ ದುಃಖನಿವೃತ್ತಿಗಾಗಿ, ನಿತ್ಯಮುಕ್ತನೂ, ನಿತ್ಯಾನಂದಸ್ವರೂಪನೂ, ಪೂರ್ವೋಕ್ತ ಅನಂತ ಕಲ್ಯಾಗುಣಭರಿತನೂ, ವೇದವೇದಾಂತಗಳೆಂಬ ನಿಜರಾಜ್ಯದ ದಿವ್ಯ ಚಕ್ರಾಧಿಪತ್ಯದ ಸಾರ್ವಭೌಮಪದವಿಯಲ್ಲಿ ಆರೂಢನೂ ಆದ ರಮಾನಾಥನ ಸರ್ವೋತ್ತಮತ್ವವನ್ನು ಪ್ರಕಾಶಮಾಡುವ ತತ್ವಪ್ರದೀಪವೆಂದು ತೋರಲಾರದು. ಆದರೂ ಸೂರ್ಯಕಿರಣಗಳಿಂದ ಕಮಲವು ವಿಕಸಿತವಾಗುವಂತೆ, ಚಂದ್ರಕಾಂತವು ಚಂದ್ರಕಿರಣಗಳ ಸಂಸ್ಪರ್ಶಗಳಿಂದ ಕರಗಿ ಮೃದುವಾಗುವಂತೆ, ಸಾತ್ವಿಕಮನಸ್ಸುಳ್ಳ ಸಜ್ಜನರು ಆನಂದಸಾಗರನಾದ ಶ್ರೀ ಕೃಷ್ಣನ ಮಧುರವಾಣಿಯಿಂದ ಸುಮನೋಹರವಾದ ತತ್ವವನ್ನು ತಿಳಿದು, ವಿಸ್ತೃತಬುದ್ಧಿಯನ್ನು ಹೊಂದಿ, ಭಕ್ತಿಭಾವದಿಂದ ತೊಯ್ಯಲ್ಪಟ್ಟ ಹೃದಯವುಳ್ಳವರಾಗಿ, ಪಾರ್ಥಸಾರಥಿಯಾದ ಶ್ರೀ ಕೃಷ್ಣನ ಪಾದಪಲ್ಲವದಲ್ಲಿ ಲಗ್ನವಾದ ಚಿತ್ತದಿಂದ, ಅವನ ಪ್ರಸಾದಾತಿಶಯಕ್ಕೆ ಪಾತ್ರರಾಗಿ, ಭವವೇದನೆಯನ್ನು ಪರಿಹರಿಸಿಕೊಂಡು ನಿತ್ಯಸುಖವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

II

ಜಗತ್ಸತ್ಯತ್ವ ಸಮರ್ಥನವು.

19 ರಿಂದ 24-7-1930 ರಲ್ಲಿ

ಸಭಿಕರು—ಮಹಾ ವಿದ್ವಾಂಸರು, ಪಂಡಿತರು, ಮತ್ತು ವಿದ್ಯಾರ್ಥಿಗಳು.

ಪ್ರಶ್ನೆ—ಸ್ವಾಮಿ—ಪೂರ್ವದಿವಸದಲ್ಲಿ ಸಕಲ ಗೀತಾವಾಕ್ಯಗಳಿಗೂ ವಿಷ್ಣುವಿನ ಸರ್ವೋತ್ತಮತ್ವವನ್ನು ಪ್ರತಿಪಾದನೆಮಾಡುವುದರಲ್ಲಿಯೇ ತಾತ್ಪರ್ಯವಿರುವುದೆಂದು ತಮ್ಮಿಂದ ನಿರೂಪಿತವಾಯಿತು. ಆದರೆ ಎದುವರಿವಿಗೆ ಬ್ರಹ್ಮಾತಿರಿಕ್ತ ಸಕಲ ಪ್ರಪಂಚವೂ '**ಮಿಥ್ಯಾ**' ಎಂದರೆ ಸ್ವರೂಪೇಣ ಇಲ್ಲದಿದ್ದರೂ ಬ್ರಹ್ಮನಲ್ಲಿ ಕಲ್ಪಿತವಾಗಿರುವುವು ಎಂದು ಹೇಳುವ ಮತವು ಪ್ರಮಾಣಗಳಿಂದಲೂ ದೃಢಯುಕ್ತಿಗಳಿಂದಲೂ ದೂರೀಕೃತವಾಗುವುದಿಲ್ಲವೋ ಅದುವರಿವಿಗೆ ತಮ್ಮಿಂದ ಸಿದ್ಧಾಂತಿತವಾದ ವಿಷ್ಣು ಸರ್ವೋತ್ತಮತ್ವವು ಸ್ವಪ್ನದಲ್ಲಿ ಪ್ರದರ್ಶಿತವಾದ ಗಂಟಿನಂತೆ ಪ್ರೇಕ್ಷಾವಂತರಿಂದ ಆದರಣೀಯವಾಗಲಾರದು. ಶೂನ್ಯಗೃಹದಲ್ಲಿ ಏಕಾಕಿಯಾಗಿ ಪ್ರವಿಷ್ಟನಾದ ಪುರುಷನ ಸ್ವಾಮಿತ್ವವೂ, ರಾಜ್ಯಹೀನನಾದ ರಾಜವೇಷ ಮಾತ್ರಧಾರಿಯಾದ (ನಾಟಕಶಾಲೆಯಲ್ಲಿರುವ) ನಟಪುರುಷನ ಚಕ್ರವರ್ತಿಪದವಿಯೂ, ತರಗತಿಗೆ ಒಬ್ಬನೇ ಆಗಿ ಶಾಲೆಯಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಯ ಪ್ರಾಥಮ್ಯವೂ ಹಾಸ್ಯಾಸ್ಪದವೇ ಸರಿ. ಮತ್ತು ಶುಕ್ತಿರಜತದ ನಿರ್ಮಾಣಕರ್ತನಿಗೆ ಎಷ್ಟು ಬುದ್ಧಿಬೇಕು? ಎಷ್ಟು ಪರಾಕ್ರಮವು ಮತ್ತು ಎಷ್ಟು ತಪಸ್ಸು ಅವಶ್ಯಕವು? ಹಾಗೆಯೇ ಶುಕ್ತಿರಜತದಂತೆ "ಮಿಥ್ಯಾ" ಆಗಿರುವ ಈ ಜಗತ್ತಿನ ಸೃಷ್ಟಿಗೆ ವಿಷ್ಣುವು ಎಷ್ಟು ಬುದ್ಧಿ ಕೌಶಲ್ಯವನ್ನು ಖರ್ಚುಮಾಡಬೇಕು? ಇಂಥಾ ಸುಳ್ಳು ಜಗತ್ತಿನ ಸ್ವಾಮಿತ್ವವು ಎಷ್ಟು ಶೋಭಾಯಮಾನವಾದುದು? ಬ್ರಹ್ಮಭಿನ್ನವಾದ ಜಗತ್ತೆಲ್ಲವೂ ಶುಕ್ತಿರಜತದಂತೆ ಸುಳ್ಳಾದಮೇಲೆ ಅವನು ಯಾರಿಗೆ ನಿಯಾಮಕನು ಎಂದು ಹೇಳಬೇಕು?

ಆದುದರಿಂದ ಪ್ರತ್ಯಕ್ಷಾದಿಪ್ರಮಾಣ ಸಿದ್ಧವಾದ ವಿಯದಾದಿ (ಆಕಾಶವೇ ಮುಂತಾದ) ಸರ್ವಜಗತ್ತೂ ಅತ್ಯಂತ ಸತ್ಯವಾದುದೆಂದು ತಾವು ಈ ದಿವಸ ಪ್ರತಿಪಾದನೆಮಾಡಿ ತೋರಿಸಿದರೆ ಇಂಥಾ ಜಗಜ್ಜನಕನ ಮಹಿಮೆಯು ಅತ್ಯದ್ಭುತವೇ ಸರಿ ಎಂದು ನಾವು ನಿಶ್ಚಯಿಸಬಹುದು. ಅನ್ಯಥಾ ವಿಷ್ಣುವಿನ ಸರ್ವೋತ್ತಮತ್ವ ಸಾಧನಾರ್ಥವಾಗಿ ತಾವು ತೆಗೆದುಕೊಂಡ ಬಹು ಪ್ರಯಾಸವು ಭಸ್ಮದಲ್ಲಿ ಮಾಡಿದ ಹೋಮದಂತೆ ನಿರರ್ಥಕವಾಗುವುದು.

ಉತ್ತರ—ಶ್ರೀಶ್ರೀಗಳವರು—ಶ್ರೀಕೃಷ್ಣನವಾಕ್ಯಗಳ ಆಧಾರದಿಂದಲೇ ನಾವು ಹಿಂದೆ ಪ್ರತಿಜ್ಞೆಮಾಡಿದಂತೆ ಅಂಬರಾದಿ ಸರ್ವಪ್ರಪಂಚವೂ ಸತ್ಯವೆಂದು ಉಪಪಾದನೆ ಮಾಡಿ ತೋರಿಸುತ್ತೇವೆ. ಇಲ್ಲಿ ಸ್ವಲ್ಪ ಉಪೋದ್ಘಾತವು ಅವಶ್ಯವಾಗಿದೆ. ಪ್ರಥಮತಃ "ಮಿಥ್ಯಾ" ಎಂಬ ಪದಕ್ಕೂ "ಸತ್ಯ" ವೆಂಬ ಪದಕ್ಕೂ ಅರ್ಥವೈಲಕ್ಷಣ್ಯವನ್ನು ನಿಷ್ಕೃಷ್ಟವಾಗಿ ಅವಶ್ಯವಾಗಿ ತಿಳಿಯಬೇಕು. ಇಲ್ಲದಿದ್ದರೆ ನಮ್ಮ ಈ ದಿವಸದ ವಿಚಾರವು ದಾರಿಯಿಲ್ಲದ ಗೊಂಡಾರಣ್ಯದಲ್ಲಿ ಮಾಡುವ ಪ್ರಯಾಣದಂತೆ ಆಗುವುದು. ಶುಕ್ತಿರಜತವು "**ಮಿಥ್ಯಾ**" ಎಂದೂ ಅಂಗಡಿಯಲ್ಲಿರುವ ರಜತವೇ ಮೊದಲಾದ ಪದಾರ್ಥಗಳನ್ನು **ಸತ್ಯ**ವೆಂದೂ ಸರ್ವರೂ ಕರೆಯುತ್ತಾರೆ. ಇವುಗಳೇ ಮೊದಲಾದ ಕೆಲವು ಪದಾರ್ಥಗಳ ವೈಲಕ್ಷಣ್ಯ ಪರಾಮರ್ಶದಿಂದಲೇ ಸತ್ಯಶಬ್ದಾರ್ಥವನ್ನೂ, ಮಿಥ್ಯಾ ಶಬ್ದಾರ್ಥವನ್ನೂ ನಾವು ತಿಳಿಯಬಹುದು.

1. ಶುಕ್ತಿರಜತವು ಪ್ರತೀತಿ ಮಾತ್ರ ಕಾಲೀನ ಜನ್ಮವುಳ್ಳದ್ದೆಂದು ಅದ್ವೈತಿಗಳು ಹೇಳುತ್ತಾರೆ. ಅಂದರೆ, ಶುಕ್ತಿಯನ್ನು ನೋಡಿ ಇದು ರಜತವು ಎಂಬ ಭ್ರಮವು ನಮಗೆ ಯಾವಾಗ ಬರುವುದೋ ಆಗಲೇ ಆ ರಜತವು ಇರುವಂತೆ ಜ್ಞಾನಕ್ಕೆ ಗೋಚರವಾಗುತ್ತದೆ. ಅದು ವಸ್ತುತಃ ಆಗಲೂ ಇಲ್ಲ. ಹಿಂದೆ ಯಾವಾಗಲೂ ಇರಲಿಲ್ಲ. ಮುಂದೂ ಇರುವುದಿಲ್ಲ. ಭ್ರಮಕಾಲದಲ್ಲಿ ಮಾತ್ರ ಇರುವಂತೆ ತೋರುವುದು.

ಆಕಾಶ, ಕಾಲ, ಇವೇ ಮುಂತಾದ ಕೆಲವು ಪದಾರ್ಥಗಳು **ಅನಾದಿಗಳು**. ಅಂದರೆ ಅವು ಇಲ್ಲದೇ ಇದ್ದ ಕಾಲವೇ ಇಲ್ಲ. ಮತ್ತು ಅಂಗಡಿಯಲ್ಲಿರುವ ರಜತವೂ ಕೂಡ ಬಹುದಿವಸದಿಂದ ಇರತಕ್ಕದ್ದೇ. ನಮಗೆ ಅವುಗಳ ಜ್ಞಾನ ಬರುವ ಕ್ಷಣದಲ್ಲಿ ಉತ್ಪನ್ನವಾದುವುಗಳಲ್ಲ. ಹೀಗೆ ಬಹುದೇಶಕಾಲಸಂಬಂಧವುಳ್ಳ ಪದಾರ್ಥಗಳು ಸತ್ಯವೆಂದೂ, ಭ್ರಮಕಾಲದಲ್ಲಿ ಮಾತ್ರ ತೋರಿ, ಹಿಂದೂ ತೋರದೆ ಮತ್ತು ಭ್ರಮಕಾಲದಲ್ಲಿಯೂ ಭ್ರಾಂತನಿಗೆ ಮಾತ್ರ ತೋರಿ ಎಲ್ಲರಿಗೂ ತೋರದೇ ಇರುವ ಪದಾರ್ಥಗಳು (ಅಸತ್ಯ) ಮಿಥ್ಯಾ ಎಂತಲೂ ನಿಶ್ಚಯಮಾಡಬಹುದು.

2. ಕುಂಬಾರನು ಘಟವನ್ನು (ಗಡಿಗೆಯನ್ನು) ನಿರ್ಮಾಣ ಮಾಡಬೇಕಾದರೆ ಮಣ್ಣು ಉಪಾದನ ಕಾರಣವಾಗುವುದು. ಕುಂಬಾರನು, ಚಕ್ರವು, ದಂಡ ಮುಂತಾದುವು ನಿಮಿತ್ತಕಾರಣವೆನ್ನಿಸುವುವು. ಇಂಥಾ ಸಂಭಾವಿತವಾದ ಕಾರಣ ಕಲಾಪಗಳಿಂದ ಹುಟ್ಟಿರುವುದರಿಂದ ಘಟವು ಸತ್ಯವೆನ್ನಿಸುವುದು. ಶುಕ್ತಿರಜತಕ್ಕೆ (ಗಡಿಗೆಗೆ ಮಣ್ಣಿನಂತೆ) ಸಂಭಾವಿತವಾದ ಯಾವ ಉಪಾದನ ಕಾರಣವಾಗಲೀ ನಿಮಿತ್ತಕಾರಣ (ಚೇತನ, ಕರಣ, ಇತ್ಯಾದಿ) ವಾಗಲೀ ಇರುವುದಿಲ್ಲ. ಕಾರಣ ಜನ್ಯವಲ್ಲದೆ ಪ್ರತೀತಿ ಮಾತ್ರ ಸಿದ್ಧವಾದುದರಿಂದ ಮಿಥ್ಯಾ ಎನ್ನಿಸುವುದು.

ಹೀಗೆ ಉಪಾದಾನ ಮತ್ತು ನಿಮಿತ್ತಕಾರಣಗಳ ರಾಹಿತ್ಯವು (ಇಲ್ಲದೇ ಇರೋಣವು) ಶುಕ್ತಿರಜತದಲ್ಲಿಯೂ, ಉಪಾದಾನಾದಿ ಕಾರಣ ಸಮುದಾಯವತ್ವವು (ಇರುವುದು) ಘಟಸೃಷ್ಟಿಯಲ್ಲಿಯೂ ಕಂಡುಬರುವುದರಿಂದ ಶುಕ್ತಿರಜತವು ಮಿಥ್ಯಾ ಎನ್ನಿಸುವುದು; ಘಟವು ಸತ್ಯವೆನ್ನಿಸುವುದು.

3. ಶುಕ್ತಿಯಲ್ಲಿ ರಜತಭ್ರಮವು ಎಲ್ಲರಿಗೂ ಯಾವಾಗಲೂ ಬರಲಾರದು. ಕಣ್ಣಿನಲ್ಲಿ ಯಾವುದಾದರು ದೋಷವು ಅಥವಾ ಪದಾರ್ಥದಲ್ಲಿಯೇ ದೂರಸ್ಥತ್ವಸೌಕ್ಷ್ಮ್ಯಾದಿ ದೋಷಗಳು ಅಥವಾ ಮತ್ತೊಂದು ವಸ್ತುವಿನ ಅತ್ಯಂತ ಸಾದೃಶ್ಯವು ಇವೇ ಮೊದಲಾದ **ದೋಷ ಸಹಕೃತವಾದ ಇಂದ್ರಿಯದಿಂದ** ಉತ್ಪನ್ನವಾದ ಜ್ಞಾನಕ್ಕೆ ಮಿಥ್ಯಾ ಪದಾರ್ಥಗಳು ಇರುವಂತೆ ಕಾಣುವುವು. ನಿರ್ದುಷ್ಟವಾದ ಇಂದ್ರಿಯಕ್ಕೆ ಶುಕ್ತಿರಜತ ಪ್ರತೀತಿಯು ಬರುವುದಿಲ್ಲ. ಏವಂಚ **ದೋಷಜನ್ಯಜ್ಞಾನವಿಷಯತ್ವ, ತದಭಾವ**ರೂಪವೈಲಕ್ಷಣ್ಯದಿಂದ ಶುಕ್ತಿರಜತವು ಮಿಥ್ಯಾ ಎಂದೂ, ಅಂಗಡಿಯಲ್ಲಿರುವ ರಜತವು ಸತ್ಯವೆಂದೂ ಪರೀಕ್ಷಕರು ನಿಶ್ಚಯಿಸುತ್ತಾರೆ.

4. ಶುಕ್ತಿಯನ್ನು ನೋಡಿ ಇದು ರಜತವೆಂದು ಭ್ರಾಂತನಾದ ಪುರುಷನು ಕಣ್ಣುಬಿಟ್ಟು ಬಗ್ಗಿನೋಡಿದಮೇಲೆ ಅಯ್ಯೋ! **ಇಲ್ಲಿ ರಜತವು ಇಲ್ಲವೇ ಇಲ್ಲ** (ನೇದಂರಜತಂ; ನಾಸ್ತ್ಯತ್ರರಜತಂ) ಎಂಬ ಸಮಾಚೀನವಾದ **ಬಾಧ ಜ್ಞಾನವನ್ನು** ಹೊಂದುವನು. ಅಂಗಡಿಯ ಬೆಳ್ಳಿಯಲ್ಲಿ ಇದು ಬೆಳ್ಳಿಯಲ್ಲವೆಂಬ ಬಾಧಜ್ಞಾನವು ಯಾರಿಗೂ ಯಾವ ಕಾಲಕ್ಕೂ ಬರುವುದಿಲ್ಲ. ಬೆಳ್ಳಿಯನ್ನು ಭಸ್ಮಮಾಡಿಬಿಟ್ಟರೂ ಕೂಡ **ಬೆಳ್ಳಿಯು ಇತ್ತು;** ಔಷಧಾರ್ಥವಾಗಿ ಭಸ್ಮಮಾಡಿರುವರು ಎಂದು ಜನರು ವ್ಯವಹಾರಮಾಡುವರೇ ಹೊರತು ಬೆಳ್ಳಿ ಇರಲೇ ಇಲ್ಲ

ಎಂದು ತಿಳಿಯಲಾರರು. ಶುಕ್ತಿರಜತದಲ್ಲಿ ಹಾಗಾಗಲಾರದು. ಭ್ರಾಂತಿಜ್ಞಾನವು ಹೋದ ಮೇಲೆ ಇಲ್ಲಿ **ರಜತವು ಇರಲೇ ಇಲ್ಲ** (ನಾಸೀದ್ರಜತಂ) ಎಂದು ಸರ್ವರೂ ತಿಳಿಯುತ್ತಾರೆ. ಆದುದರಿಂದ **ಬಾಧಜ್ಞಾನ ವಿಷಯತ್ವ, ತದಭಾವ**ಗಳಿಂದ ಶುಕ್ತಿರಜತವು ಸುಳ್ಳೆಂದೂ ಅಂಗಡಿಯ ರಜತವು ಸತ್ಯವೆಂದೂ ನಿಶ್ಚಿತವಾಗುವುದು.

5. ಅಂಗಡಿಯ ಬೆಳ್ಳಿಯಿಂದ ತಟ್ಟೆ, ಬಟ್ಟಲು, ಪಂಚಪಾತ್ರೆಯೇ ಮೊದಲಾದ ಪದಾರ್ಥಗಳನ್ನು ಮಾಡಿಸಬಹುದು. ಆದರೆ ಶುಕ್ತಿರಜತದಿಂದ ಯಾವ ಗೃಹೋಪಯೋಗಿ ಪದಾರ್ಥವೂ ತಯಾರಾಗಲಾರದು. "**ಅರ್ಥಕ್ರಿಯಾಕಾರಿತ್ವ**"ವು ಅಂದರೆ ಭೋಗಸಾಧನವಾದ ನಾನಾ ಪದಾರ್ಥಗಳ ಉತ್ಪಾದಕತ್ವಶಕ್ತಿಯು ಸತ್ಯಪದಾರ್ಥಗಳಿಗೆ ಇರುವುದೇ ಹೊರತು ಮಿಥ್ಯಾಭೂತ ಪದಾರ್ಥಗಳಿಗಿರುವುದಿಲ್ಲ.

ಪ್ರಶ್ನೆ—ಸ್ವಾಮಿ! ಮಿಥ್ಯಾಭೂತವಾದ ರಜ್ಜು ಸರ್ಪದಿಂದ ಭಯೋತ್ಪತ್ತ್ಯಾದಿಗಳು ಕಂಡಿರುವುದಲ್ಲವೇ ?

ಉತ್ತರ—ರಜ್ಜುಸರ್ಪವು ಭಯಜನಕವಲ್ಲ. ಮತ್ತೇನೆಂದರೆ ರಜ್ಜುವನ್ನು ನೋಡಿ ಇದು ಸರ್ಪವು ಎಂಬ **ಜ್ಞಾನದಿಂದ** ಭಯಕಂಪಾದಿಗಳು ಹುಟ್ಟುತ್ತವೆ. **ಸರ್ಪಭ್ರಮವು** (ಜ್ಞಾನವಿಶೇಷವು) **ಸತ್ಯವಾದುದು.** ಸತ್ಯವಾದ ಜ್ಞಾನಕ್ಕೆ ಅರ್ಥಕ್ರಿಯಾಕಾರಿತ್ವವು ಸರ್ವಸಮ್ಮತವಾದುದು. ಹೀಗೆ ಅರ್ಥಕ್ರಿಯಾಕಾರಿತ್ವ, ತದಭಾವಗಳಿಂದ ಅಂಗಡಿಯ ರಜತವು ಸತ್ಯವೆಂದೂ, ಶುಕ್ತಿರಜತವು "ಮಿಥ್ಯಾ" ಭೂತವೆಂದೂ ನಿರ್ಣಯಮಾಡಬಹುದು.

6. ಮುಕ್ತಿಯು ಪಾರಮಾರ್ಥಿಕ ಅವಸ್ಥೆಯು; ಬ್ರಹ್ಮಾಪರೋಕ್ಷಜ್ಞಾನವು ಪಾರಮಾರ್ಥಿಕ ವಿಷಯಕವು ಎಂಬುದು ಸರ್ವಜನಸಮ್ಮತವು. ಆದುದರಿಂದ **ಮುಕ್ತ್ಯವಸ್ಥೆಯಲ್ಲಿ** ಜಗತ್ತು ಇರುವುದೆಂದೂ, ಬ್ರಹ್ಮಾಪರೋಕ್ಷಜ್ಞಾನಿಗಳು ತಮ್ಮ **ಜ್ಞಾನಾವಸ್ಥೆಯಲ್ಲಿ** ಜಗತ್ತು ಇರುವುದೆಂದೂ ತಿಳಿದರೆ ಅದು ಸತ್ಯವಾಗುವುದು ಎಂಬುದರಲ್ಲಿ ಸಂಶಯವಿಲ್ಲ.

7. ನಿತ್ಯಪದಾರ್ಥಗಳು ಯಾವಾಗಲೂ "ಮಿಥ್ಯಾ" ಆಗಲಾರವು. ನಿತ್ಯವೆಂದರೆ ಸರ್ವಕಾಲದಲ್ಲೂ ಇರುವುವು ಎಂದರ್ಥವು. ಹಾಗಿರುವಲ್ಲಿ* **ನಾಸ್ತಿನಾ**

---

* ಈಗ ಇಲ್ಲ ; ಹಿಂದಿರಲಿಲ್ಲ ; ಮುಂದೂ ಇರುವುದಿಲ್ಲ ಎಂಬ ಜ್ಞಾನಕ್ಕೆ ವಿಷಯವಾಗತಕ್ಕ ಪದಾರ್ಥವು ಮಿಥ್ಯಾ ಎನ್ನಿಸುವುದು ಎಂದು ಅದ್ವೈತಿಗಳು ಹೇಳುತ್ತಾರೆ. ಈ ಲಕ್ಷಣವು

ನೀನ್ನಭವಿಷ್ಯತಿ ಇತ್ಯಾಕಾರಕಜ್ಞಾನವಿಷಯತ್ವಂ ಮಿಥ್ಯಾತ್ವಂ" ಎಂಬ ಅದ್ವೈತಿಗಳು ಪರಿಷ್ಕಾರ ಮಾಡಿರುವ ಮಿಥ್ಯಾತ್ವವು ಅವುಗಳಿಗೆ ಹೇಗೆ ಬಂದೀತು? (ಇದರಂತೆ ಅನಿತ್ಯಪದಾರ್ಥಗಳೂ ಕೆಲವು ಕಾಲಪರ್‍ಯಂತ ಇರುವುದರಿಂದ ಅವೂ ಸಹ ಮಿಥ್ಯಾ ಆಗಲಾರವು.) ಬ್ರಹ್ಮನು ನಿತ್ಯನಾದುದರಿಂದ ಸತ್ಯವಸ್ತುವೆನ್ನಿಸುವನು. ಇದೇ ರೀತಿಯಲ್ಲಿ ಶಾಸ್ತ್ರದಿಂದ ಇನ್ನೂ ಯಾವುದಾದರೂ ವಸ್ತುಗಳು ನಿತ್ಯವೆಂದು ಪ್ರಮಿತವಾದರೆ ಅವುಗಳನ್ನೂ ಸತ್ಯವೆಂದು ನಾವು ನಿರ್ಣಯ ಮಾಡಬೇಕು.

ಈ ರೀತಿ ಜಗತ್ತು ಸತ್ಯವೋ ಮಿಥ್ಯಾಭೂತವೋ ಎಂದು ಪರೀಕ್ಷೆಮಾಡುವುದರಲ್ಲಿ ಉದ್ಯುಕ್ತರಾದ ನಮಗೆ ಕೆಲವು ವ್ಯವಸ್ಥಾಪಕ ಸಾಮಗ್ರಿಗಳು ದೊರೆತವು. ಇಂಥಾ ಪ್ರಾಮಾಣಿಕ ಯುಕ್ತಿಗಳಿಂದ ಸಿದ್ಧವಾಗುವುದಾದರೆ ಜಗತ್ತು ಪಾರಮಾರ್ಥಿಕವು. †ಪ್ರಮಾಣಪಾತಾಸಹಿಷ್ಣುವಾದರೆ (ಯುಕ್ತಿವಿರುದ್ಧವಾದರೆ) ಮಿಥ್ಯಾಭೂತವು.

ಇನ್ನೊಂದು ಮಾತನ್ನು ಹೇಳಿ ನಮ್ಮ ಉಪೋದ್ಘಾತಪ್ರಕ್ರಿಯೆಯನ್ನು ಮುಗಿಸಿ ಶ್ರೀ ಕೃಷ್ಣನ ವಾಕ್ಯಾಮೃತಪಾನದಲ್ಲಿ ಆಸಕ್ತರಾಗೋಣ. ಉಗುರಿಂದಾ

ಶುಕ್ತಿ ರಜತದಲ್ಲಿ ಕಂಡುಬರುವುದು. ಆದರಂತೆ ಈ ಯಾವತ್ತು ಜಗತ್ತೂ ಮಿಥ್ಯಾ ಇರುವುದು ಎಂದು ಅವರ ಸಿದ್ಧಾಂತವು. ಆದರೆ ಕೆಲವು ನವೀನರು ಮಿಥ್ಯಾ ಎಂದರೆ **ಅನಿತ್ಯವು** ಎಂದು ಅರ್ಥ ಹೇಳುತ್ತಾರೆ. ಈ ಲಕ್ಷಣವು ಪ್ರಕೃತಿ, ಆಕಾಶ, ಕಾಲ ಮೊದಲಾದ ಕೆಲವು ಪದಾರ್ಥಗಳಲ್ಲಿ ಇಲ್ಲದೇ ಹೋದರೂ ಬ್ರಹ್ಮಾಂಡದಲ್ಲಿರುವ ಅನೇಕ ವಸ್ತುಗಳಲ್ಲಿ ಇರುವುದರಿಂದ ದ್ವೈತ ವೇದಾಂತಿಗಳಿಗೆ ಅತಿ ವಿರುದ್ಧವಲ್ಲ. ಆಗ ಶುಕ್ತಿ ರಜತ ದೃಷ್ಟಾಂತವನ್ನು ಅದ್ವೈತಿಗಳು ಪರಿತ್ಯಾಗ ಮಾಡಬೇಕಾಗುವುದು.

†ಕೆಲವರು ಅದ್ವೈತಿಗಳು ಯುಕ್ತಿವಿರುದ್ಧವಾದರೆ ತಾನೇ ಏನು? ಯುಕ್ತಿಯಿಂದ ಪ್ರತಿಪಾದನೆಮಾಡುವುದಕ್ಕೆ ಬರದೇ ಇರುವುದೇ ಅವಿದ್ಯಾಮಯವಾದ ಈ ಪ್ರಪಂಚಕ್ಕೆ ಭೂಷಣವು ಎಂದು ಹೇಳುತ್ತಾರೆ.

ದುರ್ಘಟತ್ವಮವಿದ್ಯಾಯಾಃ ಭೂಷಣಂನತುದೂಷಣಂ ।

ಅವಿದ್ಯೆಯನ್ನು ಯುಕ್ತಿಯಿಂದ ನಿರೂಪಣೆಮಾಡುವುದಕ್ಕೆ ಬರದೇ ಇರುವುದೇ ಒಂದು ಭೂಷಣವು ದೂಷಣವಲ್ಲ.

ಅವಿದ್ಯಾಯಾಃ ಅವಿದ್ಯಾತ್ವೇ ಇದಮೇವಹಿಲಕ್ಷಣಂ ।
ಮಾನಾಘಾತಾಸಹಿಷ್ಣುತ್ವಂ.... ॥

ಅವಿದ್ಯೆಗೆ ಪ್ರಾಮಾಣಿಕಯುಕ್ತಿವಿರುದ್ಧವಾಗಿರುವುದು ಮತ್ತು ಯುಕ್ತಿಯಿಂದ ಪ್ರತಿಪಾದನೆ ಮಾಡುವುದಕ್ಕೆ ಬರದೇ ಇರುವುದೇ ಮುಖ್ಯ ಲಕ್ಷಣವು.

ಗುವುದಕ್ಕೆ ವಜ್ರಾಯುಧಬೇಕೇ ಎಂಬ ಗಾದೆಗೆ ಅನುಸಾರವಾಗಿ "ವಿಶ್ವಂ ಮಿಥ್ಯಾ" ಎಂಬ ತತ್ವನಿಶ್ಚಯದ ದೋಷವನ್ನು ತೋರಿಸುವುದಕ್ಕೆ ಸಾಕ್ಷಾತ್ಪರ ಬ್ರಹ್ಮನನ್ನು ಯಾತಕ್ಕೆ ಸಾಕ್ಷಿಗಾಗಿ ಕರೆಯಬೇಕು? "ಸತಸ್ಯಹೇತುಘಸ್ತ್ರಾಣಾಂ ಉತ್ಪತನ್ನೇವಯೋಮೃತಃ" ಎಂಬ ನ್ಯಾಯಾನುಸಾರವಾಗಿ "ನಾನು ವಂಧ್ಯಾ ಪುತ್ರನು" ಎಂಬ ಉಕ್ತಿಯಂತೆ ಸ್ವವ್ಯಾಹತವಾದ "ವಿಶ್ವಂಮಿಥ್ಯಾ" ಎಂಬ ಪ್ರತಿಜ್ಞೆಯು ಆತ್ಮಘಾತದಿಂದಲೇ ಮೃತವಾಗಿರುವುದು. ಹೇಗೆಂದರೆ ಸರ್ವವೂ ಮಿಥ್ಯಾ ಎಂಬ ಪ್ರತಿಜ್ಞಾವಾಕ್ಯವು ಮಿಥ್ಯಾಭೂತವಾದುದೇ ಅಥವಾ ಸತ್ಯವೇ ಎಂದು ವಿಕಲ್ಪಮಾಡಿ ಕೇಳಿದರೆ ಅದ್ವೈತಿಗಳು ಉಭಯತಃ ಪಾಶಾರಜ್ಜುವಿನಿಂದ ಗ್ರಸ್ತರಾಗುವರು. ಪ್ರತಿಜ್ಞಾ ವಾಕ್ಯವು ಸತ್ಯವಾದರೆ **ಸರ್ವವೂ** ಮಿಥ್ಯಾ ಎಂದು ಹೇಳುವುದು ಹೇಗೆ? ಪ್ರತಿಜ್ಞಾ ವಾಕ್ಯವೂ ಮಿಥ್ಯಾ (ಇಲ್ಲವೇ ಇಲ್ಲ) ಎಂದು ಆದರೆ ಮಿಥ್ಯಾಭೂತವಾದ (ವಂಧ್ಯಾಪುತ್ರನ ವಾಕ್ಯದಂತೆ) ವಾಕ್ಯಕ್ಕೆ ಸಾಧಕತ್ವವು ಇಲ್ಲವಾದುದರಿಂದ ಜಗನ್ಮಿಥ್ಯಾತ್ವವು ಸಿದ್ಧಿಸಲಾರದು. ಹಾಗೂ ವಿರೋಧವು ಬಿಡಲಿಲ್ಲ. ಹೀಗೆ ಸ್ವವ್ಯಾಹತಿರೂಪ ಆತ್ಮಹನನದಿಂದಲೇ ನಷ್ಟಪ್ರಾಣ ವಾದ ಈ ಮತದ ಖಂಡನೆಗಾಗಿ ಅಮೋಘವಾದ ಭಗವದ್ವಾಕ್ಯರೂಪ ಬಾಣಗ

ಅನವಸ್ಥಾದಯೋದೋಷಾಃ ಸತ್ತಾಂನಿಘ್ನಂತಿವಸ್ತುನಃ ।
ಅದ್ವೈತಿನಾಂ ತೇಸುಹೃದಃ ಪ್ರಪಂಚೇತತ್ಪ್ರಸಂಜಕಾಃ ॥

ವಾದಿಗಳಿಂದ ನಿರೂಪಿತವಾದ ವಸ್ತುವು ಅಪ್ರಾಮಾಣಿಕವೆಂದು ತೋರಿಸುವುದಕ್ಕಾಗಿ ಪ್ರತಿವಾದಿಗಳಿಂದ ಪ್ರಯೋಗಿಸಲ್ಪಟ್ಟ ಅನವಸ್ಥಾದಿದೋಷಗಳು ಅದ್ವೈತಿಗಳಿಗೆ ಅತ್ಯಂತ ಪ್ರಿಯವಾದುವುಗಳೇ! ಇತ್ಯಾದಿ ರೀತಿಯಲ್ಲಿ ಹೇಳುತ್ತಾರೆ. ಅವಿದ್ಯೆಯು ಮತ್ತು ಅವಿದ್ಯಾಮಯವಾದ ಪ್ರಪಂಚವಿಷಯದಲ್ಲಿ ಹೇಳಲ್ಪಟ್ಟ ಈ ಮಾತು ಪ್ರಪಂಚಾಂತರ್ಗತವಾದ ಅದ್ವೈತಮತದ ವಿಷಯದಲ್ಲೂ ಅನ್ವಯಿಸುತ್ತದೆ. ನಮ್ಮ ಮತವು ಯುಕ್ತಿವಿರುದ್ಧವಾದರೆ ಏನು? ನಮ್ಮ ಮತದ ಮೇಲೆ ಅನವಸ್ಥಾದಿದೋಷಗಳು ಬಂದರೆ ಏನು ಎಂದು ಹೇಳಿದ ಹಾಗಾಯಿತು. ಈ ಪ್ರಕ್ರಿಯೆಯು ಕೇವಲ ಹಾಸ್ಯಾಸ್ಪದವಾದುದು. ದುರನ್ನಭೋಜನದಲ್ಲಿ ಆಸಕ್ತನಾದ ಪುರುಷನನ್ನು ಕುರಿತು **"ಉಚ್ಛಿಷ್ಟಮಪಿಚಾಮೇಧ್ಯಂ ಭೋಜನಂ ತಾಮಸಪ್ರಿಯಂ"** ಎಂದರೆ ಉಚ್ಛಿಷ್ಟ ಮತ್ತು ಅಪವಿತ್ರಾನ್ನಭಕ್ಷಣವು ತಾಮಸರಿಗೆ ಪ್ರಿಯವಾದುದು; ಎಂದು ಶ್ರೀ ಕೃಷ್ಣನು ಹೇಳಿರುತ್ತಾನೆ; ಇನ್ನು ಮೇಲೆ ನೀನು ಇಂಥಾ ಅಮೇಧ್ಯಾಹಾರವನ್ನು ಭಕ್ಷಣಮಾಡಬೇಡವೆಂದು ಶಾಸ್ತ್ರಜ್ಞರು ಹೇಳುವರು. ಈ ಮಾತನ್ನು ಕೇಳದೆ ಉಚ್ಛಿಷ್ಟಾದಿ ಭಕ್ಷಣವು ನನಗೆ ಅತ್ಯಂತ ಪ್ರಿಯವಾದುದು ಎಂದು ಒರಟು ಉತ್ತರವನ್ನು ಕೊಟ್ಟರೆ ಪ್ರಾಜ್ಞರು ಏನುಮಾಡುವುದಕ್ಕಾದೀತು? ಆದುದರಿಂದ ಶಾಸ್ತ್ರಸಿದ್ಧವಾದ ದೋಷಗಳನ್ನು ಒಪ್ಪಿಕೊಂಡು ಪರಿಹಾರೋಪಾಯವನ್ನು ಪಂಡಿತರು ಹುಡುಕಬೇಕು.

ಳನ್ನು ಪ್ರಯೋಗಿಸುವುದು ವ್ಯತಮಾರಣದಂತೆ ವ್ಯರ್ಥವೇ! ಹಾಗಿದ್ದರೂ ಬಹು ಜನರ ಅಂಗೀಕಾರದಿಂದ ಕಲ್ಪಿತ ಗೌರವನನ್ನು ಹೊಂದಿರುವುದರಿಂದ "ಮಾಯಾವಾದ"ವು ಸಾಕ್ಷಾತ್ ಶ್ರೀಕೃಷ್ಣನ ವಾಕ್ಯಗಳಿಗೆ ಪರಮವಿರುದ್ಧವೆಂಬುದನ್ನು ಪ್ರದರ್ಶನಮಾಡುತ್ತಲಿದ್ದೇವೆ.

ಪ್ರಕೃತ್ಯಾದಿ ಜಗತ್ತು ಅನಾದಿಯು.

(1) 1. **ನತ್ವೇವಾಹಂ ಜಾತುನಾಸಂ ನತ್ವಂ ನೇಮೇ ಜನಾಧಿಪಾಃ |**
ನಚೈವನಭವಿಷ್ಯಾಮಃ ಸರ್ವೇವಯಮತಃ ಪರಂ ||—(2. 12.)

ಈ ವಾಕ್ಯದಿಂದ ಜೀವರುಗಳು ಅನಾದಿನಿತ್ಯರು ಎಂದು ನಿಶ್ಚಿತವಾಗುವುದು. ಅನಾದಿಕಾಲದಿಂದ ನಿರ್ದೇಹರಾಗಿ ಜೀವರುಗಳು ಇರಲಾರರು. ಮುಕ್ತಿಯು ಮುಂದೆ ಪ್ರಾಪ್ತವಾಗತಕ್ಕ ಅವಸ್ಥೆಯಾದುದರಿಂದ ಅಮುಕ್ತರಾದ ಈ ಯೋಧರೆಲ್ಲರೂ ಅನಾದಿಕಾಲದಿಂದಲೂ ಪ್ರಕೃತಿನಿರ್ಮಿತವಾದ ಶರೀರವನ್ನು ಧರಿಸಿ ಯಾವುದೋ ಒಂದು ಕಾಲದಲ್ಲಿ ಮತ್ತು ಯಾವುದೋ ಒಂದು ದೇಶದಲ್ಲಿ ತತ್ತತ್ಕರ್ಮಜನಿತ ಸುಖದುಃಖಗಳನ್ನು ಅನುಭವಿಸುತ್ತಿದ್ದರೆಂದು ಸಿದ್ಧವಾಗುವುದು. ಪ್ರಾಕೃತ ದೇಹಸಂಬಂಧವು ಮುಕ್ತಿಪರ್ಯಂತವೂ ಅನರ್ಜಸೀಯವೆಂದು ಅರ್ಜುನನೇ ಹೇಳುತ್ತಾನೆ.

2. **ದೇಹಿನೋಽಸ್ಮಿನ್ ಯಥಾದೇಹೇಕೌಮಾರಂ ಯೌವನಂಜರಾ |**
ತಥಾ ದೇಹಾಂತರಪ್ರಾಪ್ತಿಃ............|| —(2. 13.)

ಬಾಲ್ಯದೇಹವುಳ್ಳವನಿಗೆ ಕೌಮಾರದೇಹವೂ ಕುಮಾರನಿಗೆ ಯೌವನದೇಹವೂ ಯುವನಿಗೆ ವೃದ್ಧದೇಹವೂ ಬರುವಂತೆ ಜೀವನಿಗೆ ಒಂದು ದೇಹವು ಹೋದರೆ ಮತ್ತೊಂದು ದೇಹವು ಪ್ರಾಪ್ತವಾಗುತ್ತಲೇ ಇರುವುದು (ಆಮುಕ್ತಿ.) ಇದರಿಂದ ಜೀವರುಗಳಿಗೆ ಸುಖದುಃಖಭೋಗಸಾಧನಗಳಾದ ದೇಹಾದಿಗಳು ಅನಾದಿಕಾಲದಿಂದಲೂ ಬರುತ್ತಿರುವುದೆಂದು ಸಿದ್ಧವಾಗುವುದರಿಂದ ಕಾಲ, ಆಕಾಶ, ದೇಹಾದಿಗಳ ಉತ್ಪತ್ತಿಗೆ ಮೂಲಭೂತವಾದ ಜಡಪ್ರಕೃತಿ ಇವು ಅವಶ್ಯವಾಗಿಯೂ ಇದ್ದೇ ಇರಬೇಕು. ಶುಕ್ತಿರಜತದಂತೆ ಇವು ಪ್ರತೀತಿ ಮಾತ್ರ ಕಾಲೀನ ಉತ್ಪತ್ತಿ ಉಳ್ಳವು ಎಂದು ಹೇಳಲಾಗುವುದಿಲ್ಲ. ಆದುದರಿಂದ ಪ್ರಕೃತಿ, ಆಕಾಶಾದಿ* ಅನಾದಿ ಪದಾರ್ಥಗಳಿಗೆ ಮಿಥ್ಯಾತ್ವವು ಸಿದ್ಧಿಸಲಿಲ್ಲ.

---

* **ಜೀವ ಈಶೋವಿಶುದ್ಧಾಚಿದ್ಭೇದಸ್ತಸ್ಯಾಸ್ತಯೋರ್ದ್ವಯೋಃ |**
ಅವಿದ್ಯಾತಚ್ಚಿತೋರ್ಯೋಗಃ ಷಡಸ್ಮಾಕಂಹ್ಯನಾದಯಃ ||

ಆಕಾಶಾದಿ ಕೆಲವು ಪದಾರ್ಥಗಳು **ನಿತ್ಯ**ವೆಂದೂ ಶ್ರೀಕೃಷ್ಣನು ಹೇಳುತ್ತಾನೆ.

(2) **ಅವಿನಾಶಿತುತದ್ವಿದ್ಧಿಯೇನ ಸರ್ವಮಿದಂತತಂ** —(2. 17.)

ಅರ್ಜುನ! (ನಿತ್ಯಪದಾರ್ಥವೇ ಇಲ್ಲ ಎಂಬ ಸಂಶಯವು ನಿನಗೆ ಬೇಡ.) ಯಾವದು ಸರ್ವತ್ರವ್ಯಾಪ್ತವೋ ಅದು ನಾಶರಹಿತವು (ನಿತ್ಯವು) ಎಂದು ನೀನು ತಿಳಿ. ಸರ್ವತ್ರವ್ಯಾಪ್ತವಾದುವುಗಳೆಲ್ಲಾ ನಿತ್ಯವಾಗಿರುವವು ಎಂಬ ಈ ವ್ಯಾಪ್ತಿಯಿಂದ ಆಕಾಶ, ಕಾಲ, ಅಕಾರಾದಿ ವರ್ಣಗಳು, ವೇದಗಳು, ಮೂಲಪ್ರಕೃತಿಯೇ ಮುಂತಾದ ಅನೇಕ ಪದಾರ್ಥಗಳಿಗೆ ನಿತ್ಯತ್ವವು ಸಿದ್ಧಿಸಿತು. ಅಂದರೆ ಇವು ಬಾಧಜ್ಞಾನದಿಂದ ಯಾವ ಕಾಲದಲ್ಲೂ ನಿವರ್ತವಾಗಲಾರವು. ಆದುದರಿಂದ ಇಂಥಾ ಅನಾದಿನಿತ್ಯಪದಾರ್ಥಗಳಿಗೆ ಮಿಥ್ಯಾತ್ವಸಾಧಕವಾದ ಪ್ರಮಾಣಗಳು ಒಂದೂ ಇರುವುದಿಲ್ಲ.

ಅನಿತ್ಯವಾದ ಬ್ರಹ್ಮಾಂಡಾತರ್ಗವಾದ ಪೃಥಿವ್ಯಾದಿ ಭೂತಗಳಿಗೂ ಘಟಪಟಾದಿ ಕಾರ್ಯಗಳಿಗೂ ಸಹ ಮಿಥ್ಯಾತ್ವಾಂಗೀಕಾರವು ಅನುಚಿತವೆಂಬುದನ್ನು ಶ್ರೀಕೃಷ್ಣನು ಬಹು ಪ್ರಕಾರದಿಂದ ತೋರಿಸಿರುತ್ತಾನೆ.

(3) **ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।**—(2. 28.)

ಹೇ ಅರ್ಜುನ! ಜೀವ ಶರೀರಗಳು ಅವ್ಯಕ್ತತತ್ವವನ್ನೇ ಮೂಲಕಾರಣವನ್ನಾಗಿ ಉಳ್ಳವುಗಳು. (ಅವ್ಯಕ್ತಶಬ್ದವು ಪ್ರಕೃತಿವಾಚಕವು. ಮೂಲಪ್ರಕೃತಿಯು ಸತ್ವರಜಸ್ತಮೋಗುಣಾತ್ಮಕವು. ಇದರಿಂದ ಪರಿಣತವಾದ ಮಹದಹಂಕಾರ, ಮನಸ್ಸು, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಶಬ್ದಾದಿ ಪಂಚವಿಷಯ, ಆಕಾಶಾದಿ ಪಂಚಮಹಾಭೂತ ಇವುಗಳ ದ್ವಾರಾ ಜೀವರುಗಳ ಸ್ಥೂಲದೇಹವು ಪರಿಣಮಿಸಲ್ಪಡುತ್ತದೆ.) ವ್ಯಕ್ತಮಧ್ಯಾನಿ ಎಂದರೆ ಜನನಮರಣಗಳಿಗೆ ಮಧ್ಯಕಾಲದಲ್ಲಿ ಸರ್ವರಿಗೂ ಸ್ಪಷ್ಟವಾಗಿ ಗೋಚರವಾಗುತ್ತವೆ. ನಂತರ ಅವ್ಯಕ್ತನಿಧನಾ

ಎಂದು ಅದ್ವೈತಿಗಳೂ ಸಹ ಜೀವ, ಈಶ್ವರ, ಶುದ್ಧಬ್ರಹ್ಮ, ಇವುಗಳಿಗೆ ಪರಸ್ಪರ ಭೇದ, ಅವಿದ್ಯಾ ಮತ್ತು ಅವಿದ್ಯಾಚಿತ್ಸಂಬಂಧ ಇವು ಆರೂ ಅನಾದಿ ಪದಾರ್ಥಗಳೆಂದು ಒಪ್ಪಿರುತ್ತಾರೆ. ಇವು ಆರೂ ದೇಶ ಕಾಲ ಸಂಬಂಧವುಳ್ಳವುಗಳಾಗಿ ಅನಾದಿಕಾಲದಿಂದಲೂ ಇರುತ್ತವೆ ಎಂದು ಒಪ್ಪಿ ಇವುಗಳು ಭ್ರಾಂತಿಕಲ್ಪಿತವು, "ನಾಸ್ತಿನಾಸೀನ್ನಭವಿಷ್ಯತೀತಿ ತ್ರೈಕಾಲಿಕನಿಷೇಧ ಪ್ರತಿಯೋಗಿತ್ವ" ವುಳ್ಳವು ಅಂದರೆ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ ಮುಂದೆಯೂ ಇರುವುದಿಲ್ಲವೆಂಬ ಜ್ಞಾನಕ್ಕೆ ವಿಷಯಗಳು ಎಂದು ಹೇಳುವುದು ಯುಕ್ತಿವಿರುದ್ಧವು.

ಸ್ಯೇ:ಪ— ಘಟವು (ಒಡೆದುಹೋದನಂತರ) ನಷ್ಟವಾದನಂತರ ಪುನಃ ಸ್ವಕಾರಣ ವಾದ ಮೃತ್ತಿನಲ್ಲಿಯೇ (ಮಣ್ಣಿನಲ್ಲಿ) ಐಕ್ಯವನ್ನು ಹೊಂದುವಂತೆ ಈ ಶರೀರಗಳು ನಷ್ಟವಾದನಂತರ ಪಂಚಮಹಾಭೂತಗಳಲ್ಲಿಯೂ, ಆ ಪಂಚಮಹಾಭೂತಗಳು, ಇಂದ್ರಿಯತತ್ವಗಳು, ಅಹಂಕಾರತತ್ವವು, ಮಹತ್ತತ್ತ್ವವು ಇವುಗಳ ದ್ವಾರಾ ಪುನಃ ಮೂಲಪ್ರಕೃತಿಯಲ್ಲೇ ಲಯವನ್ನು ಹೊಂದುತ್ತವೆ.

ಪ್ರಕೃತಿಪರಿಣಾಮವು ಹೀಗೆಯೇ ಆಗುವುದೆಂಬುದು ಶ್ರೀಕೃಷ್ಣನ ಇತರ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ.

(4) **ಸತ್ವಂ ರಜಸ್ತಮ ಇತಿಗುಣಾಃ ಪ್ರಕೃತಿಸಂಭವಾಃ ॥** (14. 5.)

ಸತರಜಸ್ತಮೋಗುಣಗಳೆಂಬ ಮೂರು (ತತ್ವರಾಶಿಗಳು) ಗುಣಗಳು ಮೂಲ ಜಡಪ್ರಕೃತಿಯಿಂದ ಉತ್ಪನ್ನವಾದುವುಗಳು (ಪರಿಣತವಾದವು); ಎಂದು ಅರ್ಥವು.

(5) **ಭೂಮಿರಾಪೋಽನಲೋವಾಯುಃ ಖಂಮನೋಬುದ್ಧಿರೇವಚ ।**
ಅಹಂಕಾರ ಇತೀಯಂ ಮೇ ಭಿನ್ನಾಪ್ರಕೃತಿರಷ್ಟಧಾ ॥
ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।—(7. 6.)

ನನ್ನ ಅಧೀನವಾದ ಜಡಪ್ರಕೃತಿಯು ಪೃಥಿವಿಯು; ಜಲವು; ಅಗ್ನಿಯು; ವಾಯುವು; ಆಕಾಶವು; ಮನಸ್ತತ್ವವು; ಬುದ್ಧಿತತ್ವವು; (ಮಹತತ್ವದಿಂದ ಸಹಿತವಾದ) ಅಹಂಕಾರತತ್ವವು ಎಂದು ಎಂಟು ಪ್ರಕಾರವಾಗಿ ಇರುತ್ತದೆ. (ಎಂಟು ಪ್ರಕಾರವಾಗಿ ಪರಿಣತವಾಗಿರುತ್ತದೆ.) ಲೋಕದಲ್ಲಿ ಕಾಣುವ ಸರ್ವ ಜೀವಶರೀರಗಳೂ ಇವುಗಳನ್ನೇ ಮೂಲಕಾರಣವನ್ನಾಗಿ ಉಳ್ಳವು ಎಂದು ತಿಳಿ; ಎಂದು ಅರ್ಥವು. "ನನ್ನ ಅಧೀನವಾದ" ಎಂದು ಶ್ರೀಕೃಷ್ಣನು ಹೇಳಿರುವುದರಿಂದ ಪ್ರಕೃತಿಯು ಪರಿಣಾಮಹೊಂದುವ ಸ್ವಭಾವವೂ ಕೂಡ ಪರಮಾತ್ಮನ ಅಧೀನವೆಂದು ಗೊತ್ತಾಗುತ್ತದೆ.

(6) **ಮಯಾಧ್ಯಕ್ಷೇಣಪ್ರಕೃತಿಃ ಸೂಯತೇಸಚರಾಚರಂ** (9. 10.)

ಅಧಿಪತಿಯಾದ ನನ್ನಿಂದ ಪ್ರೇರಿತವಾಗಿ ಪ್ರಕೃತಿಯು ಚರಾಚರ ಜಗತ್ತನ್ನು ಪ್ರಸವಿಸುತ್ತದೆ (ಹುಟ್ಟಿಸುತ್ತದೆ). ಇಲ್ಲಿ ಜಡಪ್ರಕೃತಿಯು ನಾನಾ ದೇಹಗಳ ರೂಪವಾಗಿ ಪರಿಣಮಿಸುತ್ತದೆ; ಚೇತನಪ್ರಕೃತಿಯು ಸರ್ವ ಜೀವರಿಗೂ ದೇಹಸಂಯೋಗವನ್ನು ಮಾಡುತ್ತದೆ ಎಂದು ವಿವೇಕವು.

ಹದಿಮೂರನೆಯ ಅಧ್ಯಾಯದಲ್ಲಿಯೂ ಕೂಡ ಪ್ರಕೃತಿಯು ಇದೇ ರೀತಿ ಯಲ್ಲಿ ನಿರೂಪಿತವಾಗಿದೆ.

(7) **ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತ ಮೇವಚ ।**
ಇಂದ್ರಿಯಾಣಿದಶೈಕಂಚ ಪಂಚಚೇಂದ್ರಿಯಗೋಚರಾಃ ।
—(13. 6.)

(ಇವು ಕ್ಷೇತ್ರಗಳು ಅಂದರೆ ಪರಮಾತ್ಮನಿಂದ ಪ್ರೇರಿತವಾಗಿ ಜೀವನ ಸುಖದುಃಖಾನುಭವಗಳಿಗೆ ಹೇತುಭೂತ ದೇಹೋಪಾದಾನಕವಾದ ಜಡದ್ರವ್ಯಗಳು) ಪಂಚಮಹಾಭೂತಗಳು, ಅಂಹಕಾರತತ್ವವು (ಮಹತ್ತತ್ವದಿಂದ ಸಹಿತವಾದ), ಬುದ್ಧಿತತ್ವವು, ತ್ರಿಗುಣಾತ್ಮಕಪ್ರಕೃತಿಯು, ಹನ್ನೊಂದು ಇಂದ್ರಿಯತತ್ವಗಳು, ಪಂಚತನ್ಮಾತ್ರಗಳು (ಇಂದ್ರಿಯ ವಿಷಯಗಳು), ಹೀಗೆ ಇಪ್ಪತ್ತನಾಲ್ಕು ತತ್ವ ಗಳೂ ಕ್ಷೇತ್ರಗಳೆನ್ನಿಸುವವು.

ಇದು ಸ್ಥಿತಿಕಾಲದ ವಿಭಾಗವಾದುದರಿಂದ ಮೂಲಪ್ರಕೃತಿಗೂ ಇಂದ್ರಿ ಯಾದಿಗಳಿಗೂ ಇರುವ ಕಾರ್ಯಕಾರಣಭಾವವು ಸ್ಫುಟವಾಗುವುದಿಲ್ಲ. ಶ್ರೀ ಕೃಷ್ಣನು ಹೇಳುತ್ತಾನೆ.—

(8) **ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ॥**
—(13. 21.)

ಶರೀರೇಂದ್ರಿಯಾದಿ ರೂಪೇಣ ಪರಿಣಾಮಹೊಂದುವುದರಲ್ಲಿ ಜಡಪ್ರಕೃ ತಿಯು ಮೂಲಕಾರಣವು. (ಜೀವನಿಗೆ ಶರೀರೇಂದ್ರಿಯಾದಿಗಳ ಸಂಯೋಗಮಾಡು ವುದರಲ್ಲಿ ಚೇತನ ಪ್ರಕೃತಿಯು ಕಾರಣಳು.)

ಇಷ್ಟು ವಾಕ್ಯಗಳಿಂದ 1. ಮೂಲಪ್ರಕೃತಿಯಿಂದ ಮಹದಹಂಕಾರಾದಿ ದ್ವಾರಾ ಜೀವನ ಶರೀರೇಂದ್ರಿಯಗಳು ಪರಿಣತವಾದುವು. 2. ಪರಿಣಾಮಕ್ಕೆ ನಿಯಾಮಕನು (ಅಂದರೆ ನಿಮಿತ್ತಕಾರಣನು) ನಾರಾಯಣನು ಎಂಬ ಎರಡು ನಿಶ್ಚಯಗಳು ಏರ್ಪಟ್ಟವು.

ಪ್ರಕೃತಿಯಿಂದ ದೇಹಾದಿಗಳ ಪರಿಣಾಮವೂ ಅವುಗಳಿಗೆ ಪುನಃ ಪ್ರಕೃತಿ ಯಲ್ಲಿ ಲಯವೆಂಬ ಕಾರ್ಯವೂ ವಿಚ್ಛೇದವೇ ಇಲ್ಲದೆ ಪುನಃ ಪುನಃ ಅನಂತಕಾಲ ದಲ್ಲೂ ನಡೆಯುತ್ತಿರುವುದೆಂದೂ ಅಂಥಾ ಪುನಃ ಪುನಃ ಜಗನ್ನಿರ್ಮಾಣಕಾರ್ಯ ದಲ್ಲಿ ತಾನೇ ನಿಮಿತ್ತಕಾರಣನೆಂದೂ ಶ್ರೀ ಕೃಷ್ಣನು ಹೇಳುತ್ತಾನೆ.

(9) **ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।**
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ ।
ಭೂತಗ್ರಾಮಸ್ಸ ಏವಾಯಂ ಭೂತ್ವಾಭೂತ್ವಾಪ್ರಲೀಯತೇ ।
ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ ॥

—(8. 18-19.)

ಅರ್ಥವು—ಬ್ರಹ್ಮದೇವರ ಹಗಲು ಪ್ರಾಪ್ತವಾದಾಗ (ಸೃಷ್ಟಿಕಾಲದಲ್ಲಿ) ಸಕಲ ಕಾರ್ಯಗಳೂ ಅವ್ಯಕ್ತನಾಮಕ ಭಗವಂತನಿಂದ ಪ್ರೇರಿತವಾಗಿ ಅವ್ಯಕ್ತನಾಮಕತತ್ವದಿಂದ (ಪರಿಣತವಾಗಿ) ಹುಟ್ಟುವುವು. ಬ್ರಹ್ಮದೇವರ ರಾತ್ರಿಯು ಪ್ರಾಪ್ತವಾದಾಗ (ಮಹಾಪ್ರಳಯದಲ್ಲಿ) ಉತ್ಪನ್ನವಾದ ಸರ್ವ ಕಾರ್ಯಗಳೂ ಅವ್ಯಕ್ತನಾಮಕ ತತ್ವದಲ್ಲಿ ಪುನಃ ಲಯವನ್ನು ಹೊಂದುತ್ತವೆ. (ಸ್ವೋಪಾದಾನ ಕಾರಣದಲ್ಲಿ ಐಕ್ಯಹೊಂದುತ್ತವೆ ಎಂದು ಅರ್ಥವು); ಮತ್ತು ಅವ್ಯಕ್ತನಾಮಕ ಭಗವಂತನಲ್ಲಿ ಲೀನವಾಗುತ್ತವೆ. ಇದೇ ಜನ್ಮಲಯ ವಿಶಿಷ್ಟವಾದ ಕಾರ್ಯಸಮುದಾಯವು ಪರಬ್ರಹ್ಮನ ಪ್ರತಿ ಹಗಲಿನಲ್ಲಿಯೂ (ಪ್ರತಿಸೃಷ್ಟಿಕಾಲದಲ್ಲೂ) ಹುಟ್ಟಿ, ಪ್ರತಿ ರಾತ್ರಿ ಕಾಲದಲ್ಲಿಯೂ (ಪ್ರತಿ ಮಹಾಪ್ರಳಯಾವಸ್ಥೆಯಲ್ಲಿಯೂ) ಲಯವನ್ನು ಹೊಂದುತ್ತಲೇ ಇರುತ್ತದೆ. ಪುನಃ ಹಗಲಾದಾಗ ಅವಶವಾಗಿ (ದೈವಾಧೀನವಾಗಿ) ಹುಟ್ಟುತ್ತದೆ.

ಈ ವಾಕ್ಯಗಳಿಂದ ಈಶ್ವರನ ಸೃಷ್ಟಿವ್ಯಾಪಾರವು ಪ್ರವಾಹತಃ ಅನಂತ ಕಾಲದಲ್ಲೂ ಪರ್ಯವಸಾನವಾಗದೇ ಯಾವಾಗಲೂ ನಡೆಯುತ್ತಲೇ ಇರುವುದೆಂದು ನಿಶ್ಚಿತವಾಗುವುದು. ನವಮಾಧ್ಯಾಯದಲ್ಲಿಯೂ ಕೃಷ್ಣನು ಹೀಗೆ ನಿರೂಪಿಸಿರುತ್ತಾನೆ.

(10) **ಸರ್ವಭೂತಾನಿಕೌಂತೇಯಪ್ರಕೃತಿಂ ಯಾಂತಿಮಾಮಿಕಾಂ ।**
ಕಲ್ಪಕ್ಷಯೇಪುನಸ್ತಾನಿ ಕಲ್ಪಾದೌವಿಸೃಜಾಮ್ಯಹಂ ।
ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ।
ಭೂತಗ್ರಾಮ ಮಿಮಂಕೃತ್ಸ್ನ ಮವಶಂಪ್ರಕೃತೇರ್ವಶಾತ್ ॥

(9. 7-8.)

ಎಲೈ ಕುಂತೀಪುತ್ರನೇ ! ಪ್ರಳಯಕಾಲದಲ್ಲಿ ಸರ್ವಭೂತಗಳೂ ನನ್ನ ಅಧೀನವಾದ ಸತ್ವಾದಿಗುಣಾತ್ಮಕ ಪ್ರಕೃತಿಯಲ್ಲಿ ಲಯಹೊಂದುತ್ತವೆ. (ಜಡಗಳು ಜಡಪ್ರಕೃತಿಯಲ್ಲಿಯೂ ಚೇತನರು ಚೇತನಪ್ರಕೃತಿಯಲ್ಲಿಯೂ ಲಯಿಸುತ್ತಾ

ರಿಂದು ವಿವೇಕವು.) ಪುನಃ ಆ ಭೂತಗಳನ್ನು ಸೃಷ್ಟಿಕಾಲದಲ್ಲಿ ನಾನು ನಾನಾ ವಿಧವಾಗಿ ಸೃಷ್ಟಿಮಾಡುತ್ತೇನೆ. ನನ್ನ ಅಧೀನವಾದ ಜಡಪ್ರಕೃತಿಯನ್ನು ಉಪಾದಾನಕಾರಣವನ್ನಾಗಿ ಸ್ವೀಕರಿಸಿ, ಪ್ರಕೃತಿಯ ಅಧೀನವಾದುದರಿಂದಲೇ ಅಸ್ವತಂತ್ರವಾದ ಈ ಸಕಲ ಭೂತಸಮೂಹವನ್ನೂ (ಚೇತನಾ ಚೇತನಾತ್ಮಕ ಪ್ರಪಂಚವನ್ನೂ) ಪುನಃ ಪುನಃ ಸೃಷ್ಟಿಮಾಡುತ್ತೇನೆ.

ಸೃಷ್ಟಿಪ್ರವಾಹವು ಅನಾದಿ ಮತ್ತು ನಿತ್ಯವೆಂಬುದು ಈ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಘಟಾದಿ ಕಾರ್ಯಪದಾರ್ಥಗಳು ಸ್ವರೂಪೇಣ ಅನಿತ್ಯವೇ ಆದರೂ ಅವುಗಳ ಸೂಕ್ಷ್ಮಭಾಗವು (ಪ್ರಕೃತಿಪರಮಾಣುಗಳು) ನಿತ್ಯವಾಗಿರುವವು. ಏವಂ ಚ ಪ್ರಕೃತ್ಯುಪಾದಾನಕವಾದ ಸರ್ವ ಕಾರ್ಯ ಪ್ರಪಂಚವೂ ಸೂಕ್ಷ್ಮರೂಪದಿಂದ ನಾಶಹೊಂದತಕ್ಕವುಗಳಲ್ಲವೆಂಬುದು ಸಿದ್ಧವಾಯಿತು. ಮತ್ತು "**ವಿಸೃಜಾಮಿ ಪುನಃ ಪುನಃ**" ಇತ್ಯಾದಿ ಶ್ರೀಕೃಷ್ಣನ ವಚನಗಳಿಂದ ಈ ಸೃಷ್ಟಿಯು ನಾರಾಯಣನಿಂದ ಉದ್ದೇಶಪೂರ್ವಕವಾಗಿ ಕೃತವಾದ ಜ್ಞಾನೇಚ್ಛಾಪ್ರಯತ್ನಪೂರ್ವಕವಾದ ವ್ಯಾಪಾರವು; ನಾರಾಯಣನು ನಿಮಿತ್ತ ಕಾರಣನು; ಗುಣತ್ರಯಾತ್ಮಕವಾದ ಪ್ರಕೃತಿಯು ಉಪಾದಾನಕಾರಣವು ಎಂಬುದೂ ನಿರ್ಣೀತವಾಗುವುದು.

ಇಷ್ಟು ಉಪನ್ಯಾಸದಿಂದ ಕಾರ್ಯಕಾರಣಾತ್ಮಕವಾದ ಸರ್ವ ಜಗತ್ತೂ ಸತ್ಯವೆಂದು ಹೇಳುವುದಕ್ಕೆ ಐದು ಕಾರಣಗಳು ದೊರೆತವು. 1. ಪ್ರಕೃತಿ, ಆಕಾಶಾದಿಗಳು ಸ್ವರೂಪೇಣ ಅನಾದಿಯಾದವುಗಳು. ಘಟಾದಿಕಾರ್ಯಗಳ ಉಪಾದಾನವಾದ ಮೂಲಜಡಪ್ರಕೃತಿಯು * ಅನಾದಿಯು; ಪ್ರತೀತಿಕಾಲದಲ್ಲಿ ಮಾತ್ರ ಉತ್ಪ

---

* ಶುಕ್ತಿರಜತವು ಅವಿದ್ಯೆ ಎಂಬ ಉಪಾದಾನ ಕಾರಣಜನ್ಯವಾದುದೆಂದು ಕೆಲವರು ಅದ್ವೈತಿಗಳು ಹೇಳುತ್ತಾರೆ. ಅವಿದ್ಯೆಯು ಸತ್ಯವಾದರೆ ಸತ್ಯಭೂತವಾದ ಅವಿದ್ಯೆಯೆಂಬ ಉಪಾದಾನದಿಂದ ಪರಿಣತವಾದ ಶುಕ್ತಿರಜತವು ಸತ್ಯವೇ ಆಗಬೇಕು; ಆಗ ಅದು "ಮಿಥ್ಯಾ" ಎಂದು ಅಂಗೀಕರಿಸುವುದು ಅಯುಕ್ತವಾಗುವುದು. ವಸ್ತುತಃ ಶುಕ್ತಿರಜತವು ಮಿಥ್ಯಾ ಎಂಬುದು ಕುರುಬರಿಗೂ ತಿಳಿದ ವಿಷಯವಾಗಿದೆ. ಅವಿದ್ಯೆಯು ಮಿಥ್ಯಾ ಆದರೆ, ಮಿಥ್ಯಾಭೂತಪದಾರ್ಥವು ಮತ್ತೊಂದು ಪದಾರ್ಥವಾಗಿ ಪರಿಣಾಮ ಹೊಂದುವುದು ಹೇಗೆ? ಕಿಂಚ ಅವಿದ್ಯೆಯು ಮಿಥ್ಯಾ ಆದರೆ ಅದೂ ಭ್ರಾಂತಿಕಲ್ಪಿತವು, ಅಂದರೆ ಪ್ರತೀತಿಕಾಲೀನ ಜನ್ಮವುಳ್ಳದ್ದು ಎಂದರ್ಥವು. ಅದು ಶುಕ್ತಿರಜತಕ್ಕೆ ಉಪಾದಾನವಾಗುವಂತೆ ಅದಕ್ಕೂ ಉಪಾದಾನಕಾರಣವಾಗಿ ಮತ್ತೊಂದು ಅವಿದ್ಯೆಯನ್ನು ಒಪ್ಪಬೇಕು. ಆ ಅವಿದ್ಯೆಗೆ ಉಪಾದಾನವು ಮತ್ತೊಂದು ಅವಿದ್ಯೆಯು. ಹೀಗೆ ಅವಿದ್ಯಾಪರಂಪರೆಗಳನ್ನು ಒಪ್ಪಬೇಕಾಗಿ ಅನವಸ್ಥೆ ಎಂಬ ದೂಷಣೆಯು ಬರುವುದು. ಈ ಸಂಕಟಪರಿಹಾರಾರ್ಥವಾಗಿ ಕೆಲವರು

ನ್ನವಾದುದಲ್ಲ. 2. ಪೃಥಿವ್ಯಾದಿ ಈ ಯಾವತ್ತೂ ಕಾರ್ಯಪ್ರಪಂಚವೂ ನಿಯತವಾದ ಕಾರಣಸಾಮಗ್ರಿಗಳಿಂದ ಉತ್ಪನ್ನವಾದುವು. ಮೂಲಜಡಪ್ರಕೃತಿಯು ಉಪಾದಾನಕಾರಣವೂ, ನಾರಾಯಣನು, ಕಾಲ, ಆಕಾಶಾದಿಗಳು ನಿಮಿತ್ತಕಾರಣವೂ ಆಗಿರುವುವು. 3. ಸೃಷ್ಟಿಪ್ರವಾಹವು ನಿತ್ಯವಾದುದು. ಯಾವಾಗಲೂ ಪರ್ಯವಸಾನವನ್ನು ಹೊಂದುವುದಿಲ್ಲ. ಆದುದರಿಂದ ಸೃಷ್ಟ್ಯುಪಯೋಗಿಯಾದ ಪ್ರಕೃತ್ಯಾದಿ ಕಾರಣ ಸಮೂಹಗಳು ಪರಬ್ರಹ್ಮನಂತೆ ನಿತ್ಯವಾಗಿಯೇ ಇರುವುವು. ಮಹಾಪ್ರಳಯದಲ್ಲಿಯೂ ಕೂಡ ಪರಬ್ರಹ್ಮನ ಆಶ್ರಯದಲ್ಲಿ ಲೀನವಾಗಿರುವುವು. ಸೃಷ್ಟಿಯಾದ ನಂತರ ವ್ಯಕ್ತವಾಗುವುವು. ಇಂಥಾ ನಿತ್ಯಪದಾರ್ಥಗಳೂ "ಮಿಥ್ಯಾ" ಆಗುವುದಾದರೆ ಪರಬ್ರಹ್ಮನೂ ಮಿಥ್ಯಾ ಆಗಬೇಕಾದೀತು! 4. ಈ ಕಾರಣಗಳಿಂದಲೇ ಜಗತ್ತು ಇರಲೇ ಇಲ್ಲ ಎಂಬ ಬಾಧಜ್ಞಾನವೂ ಕೂಡ ಯಾರಿಗೂ ಯಾವಾಗಲೂ ಬರುವಹಾಗಿಲ್ಲ. ಜಗತ್ತು ಸೂಕ್ಷ್ಮರೂಪೇಣ ಯಾವಾಗಲೂ ಇರುವುದು ಎಂದು ಶ್ರೀಕೃಷ್ಣನು ಹೇಳಿರುವನು. ಹೀಗಿರುವಲ್ಲಿ ಜಗತ್ತು ಇರಲಿಲ್ಲ ಎಂಬ ಜ್ಞಾನವು ಹ್ಯಾಗೆತಾನೇ ಬಂದೀತು? ಬಾಧಜ್ಞಾನಕ್ಕೆ ವಿಷಯವಾಗದಿರುವುದರಿಂದಲೂ ಈ ಜಗತ್ತು ಸತ್ಯವೆಂದು ಸಿದ್ಧವಾಯಿತು. 5. ಮತ್ತು ಸಾಕ್ಷಾಚ್ಛ್ರೀಮನ್ನಾರಾಯಣನ ಜ್ಞಾನಕ್ಕೆ ವಿಷಯವಾಗಿರುವ ಈ ಜಗತ್ತನ್ನು ದೋಷಜನ್ಯಪ್ರತೀತಿಗೆ ವಿಷಯವೆಂದು ಯಾರಿಗೆತಾನೇ ಹೇಳುವುದಕ್ಕೆ ಬಾಯಿ ಬಂದೀತು? ಪ್ರಮಾತ್ಮಕಜ್ಞಾನಸ್ವರೂಪಿಯಾದ ಶ್ರೀಹರಿಯು ಈ ಜಗತ್ತನ್ನು ನಾನೇ ಪುನಃ ಪುನಃ ಸೃಷ್ಟಿಮಾಡುತ್ತೇನೆ ಎಂದು ಶಪಥಪೂರ್ವಕವಾಗಿ ಅನೇಕವೇಳೆ ಹೇಳಿರುವುದರಿಂದ ಜಗತ್ಸತ್ಯತ್ವವು ಭಗವದ್ವಚನದಿಂದ ಅನುಗ್ರಹಿತವಾಗಿ ವಜ್ರಲೇಪದಂತೆ ಸುಸ್ಥಿರವಾಯಿತು.

ಕಿಂಚ 6. ಪ್ರಯತ್ನಪೂರ್ವಕವಾಗಿ ವಿವಿಧ ಪ್ರಕಾರವಾಗಿ ಸೃಷ್ಟಿಮಾಡುತ್ತೇನೆ ಎಂಬ ಅರ್ಥವುಳ್ಳ **ವಿಸೃಜಾಮಿ** ಎಂಬ ಪದವನ್ನು ಶ್ರೀಕೃಷ್ಣನು ಎರಡಾವರ್ತಿ ಉಪಯೋಗಿಸಿರುತ್ತಾನೆ. ಈ ಅಭಿಪ್ರಾಯವು ಶ್ರೀಕೃಷ್ಣನ ಮನಃಪೂರ್ವಕವಾದುದೆಂದು ತೋರಿಸುವ ಅನೇಕ ಶ್ಲೋಕಗಳಿರುವುವು.

(11) **ಬೀಜಂಮಾಂ ಸರ್ವಭೂತಾನಾಂ ವಿದ್ಧಿಪಾರ್ಥಸನಾತನಂ ॥**

—(7. 10.)

ಅದ್ವೈತಿಗಳು ಅವಿದ್ಯೆಯನ್ನು ಅನಾದಿ ಎಂದು ಹೇಳುವರು. ಅನಾದಿಯಾದರೆ ಭ್ರಾಂತಿಕಲ್ಪಿತವಾಗಲಾರದು. ಅನಾದಿಯಾದರೂ ಮಿಥ್ಯಾ ಆಗುವುದಾದರೆ ಪರಬ್ರಹ್ಮನೂ ಮಿಥ್ಯಾ ಆಗಲಿ ಎಂಬ ದ್ವೈತಿಗಳ ಆಪಾದನೆಯು ಸಿಡಿಲಿನಂತೆ ದುಸ್ಸಹವಾಗುವುದು.

ನಾನು ಸರ್ವಭೂತಗಳಿಗೂ ಸನಾತನನಾದ **ಉತ್ಪಾದಕನು** ಅಥವಾ ವ್ಯಂಜಕನು.

(12) **ಮಯಾಧ್ಯಕ್ಷೇಣಪ್ರಕೃತಿಃ ಸೂಯತೇಸಚರಾಚರಂ** ||–(9. 10.)

ಅಧಿಪತಿಯಾದ ನನ್ನಿಂದ ಪ್ರೇರಿತಳಾಗಿ ಪ್ರಕೃತಿಯು ಚೇತನಾಚೇತನಾತ್ಮಕವಾದ ಈ ಯಾವತ್ತೂ ಜಗತ್ತನ್ನು (ತಾಯಿಯು ಶಿಶುವನ್ನು ಪ್ರಸವಿಸುವಂತೆ) **ಪ್ರಸವಿಸುತ್ತಾಳೆ.**

(13) **ಯಾವತ್ಸಂಜಾಯತೇ ಕಿಂಚಿತ್ಸತ್ವಂಸ್ಥಾವರಜಂಗಮಂ |**
ಕ್ಷೇತ್ರಕ್ಷೇತ್ರಜ್ಞಸಂಯೋಗಾತ್ತದ್ವಿದ್ಧಿಭರತರ್ಷಭ ||–(13. 26.)

ಚೇತನಾಚೇತನಾತ್ಮಕವಾದ ಈ ಪ್ರಪಂಚದಲ್ಲಿ ಯಾವ ವಸ್ತುವು ಹುಟ್ಟಬೇಕಾದರೂ ಅದು ಚಿತ್ಪ್ರಕೃತಿಪರಮಾತ್ಮರ **ಸಂಯೋಗದಿಂದ** ಉತ್ಪನ್ನವಾಗುವುದೆಂದು ತಿಳಿ. ಈ ಶ್ಲೋಕದ ಅಭಿಪ್ರಾಯವನ್ನು ಶ್ರೀಕೃಷ್ಣನು ಹದಿನಾಲ್ಕನೆಯ ಅಧ್ಯಾಯದಲ್ಲಿ ವಿಸ್ತರಿಸಿರುತ್ತಾನೆ.

(14) **ಮಮಯೋನಿರ್ಮಹದ್ಬ್ರಹ್ಮತಸ್ಮಿನ್ಗರ್ಭಂದಧಾಮ್ಯಹಂ |**
ಸಂಭವಸ್ಸರ್ವಭೂತಾನಾಂ ತತೋಭವತಿಭಾರತ ||—(14. 3.)

ಚಿತ್ಪ್ರಕೃತಿಯು ನನ್ನ ಭಾರ್ಯೆಯು. ಆ ದೇವಿಯಲ್ಲಿ ನಾನು **ಗರ್ಭವನ್ನು ಧಾರಣಮಾಡುತ್ತೇನೆ.** (ಜಡಪ್ರಕೃತಿಯಿಂದ ಪರಿಣತವಾದ ತತ್ವಗಳಿಂದ ಕೂಡಿದ ನನ್ನ ಉದರದಲ್ಲಿ ಸ್ಥಿತರಾದ ಜೀವರನ್ನು ರೇತೋರೂಪದಿಂದ ಹೊರಗೆ ಹೊರಡಿಸಿ ಚಿತ್ಪ್ರಕೃತಿಯ ಉದರದಲ್ಲಿ ಸ್ಥಾಪಿಸುತ್ತೇನೆಂದು ಭಾವವು.) ಈರೀತಿಯಾಗಿ ಲಕ್ಷ್ಮೀದೇವಿಯಲ್ಲಿ ಗರ್ಭಧಾರಣ ಮಾಡೋಣದರಿಂದ ಸಕಲ ಪ್ರಾಣಿಗಳ ಉತ್ಪತ್ತಿಯೂ ಆಗುತ್ತದೆ.

(15) **ಸರ್ವಯೋನಿಷುಕೌಂತೇಯ ಮೂರ್ತಯಃ ಸಂಭವಂತಿಯಾಃ|**
ತಾಸಾಂಬ್ರಹ್ಮಮಹದ್ಯೋನಿರಹಂಬೀಜಪ್ರದಃಪಿತಾ||–(14. 4.)

ದೇವಮನುಷ್ಯ ಪಶುಪಕ್ಷ್ಯಾದಿಯೋನಿಗಳಲ್ಲಿ ಯಾವ ಯಾವ ಪ್ರಾಣಿಗಳು ಹುಟ್ಟುತ್ತವೆಯೋ ಅವುಗಳಿಗೆಲ್ಲಾ ಮಹಾಲಕ್ಷ್ಮಿಯು ಕ್ಷೇತ್ರರೂಪಳಾದ ಕಾರಣಳು (ಭಾರ್ಯೆಯಂತೆ) ; ನಾನು ಗರ್ಭಾಧಾನ ಮಾಡುವ ತಂದೆಯು.

ಶುಕ್ತಿರೂಪ್ಯಕ್ಕೂ, ರಜ್ಜು ಸರ್ಪಕ್ಕೂ ಬೀಜಪ್ರದನಾದ ತಂದೆಯನ್ನೂ, ಗರ್ಭಧಾರಣ ಮಾಡಿ ಪ್ರಸವಿಸುವ ತಾಯಿಯನ್ನೂ ನೋಡಿದವರ್‍ಯಾರು ? ಶುಕ್ತಿ

ರೂಪ್ಯದಂತೆ ಜಗತ್ತು ಮಿಥ್ಯಾ; ಈ ಪ್ರಪಂಚವೆಲ್ಲವೂ ಐಂದ್ರಜಾಲಿಕನ ಚಮತ್ಕಾರ ರಚನೆಯಂತೆ ಅವಿದ್ಯಾವಿಜೃಂಭಿತವಾದ ಸುಳ್ಳುನೋಟವೆಂದು ಹೇಳುವುದು ಕಾದಂಬರೀ ಗ್ರಂಥಗಳಿಗೆ ಉಚಿತವಾದ ಸ್ವಕಪೋಲಕಲ್ಪಿತವಾದ ಮಂದಜನ ಮನೋಹರವಾದ ಪ್ರಕ್ರಿಯೆಯೇ ಹೊರತು ಪ್ರಾಮಾಣಿಕವಾದ ಸಿದ್ಧಾಂತೋಕ್ತಿಯಾಗಲಾರದು. ಕಿಂಚ ಲೋಕದಲ್ಲಿರುವ ನಿಮಿತ್ತಮಾತ್ರರಾದ ತಂದೆತಾಯಿಗಳನ್ನೇ ಪುತ್ರರು ದುರ್ಭಾವಕ್ಕೆ ವಶರಾಗಿ "ನೀನು ನನಗೆ ತಂದೆಯಲ್ಲ; ನೀನು ತಾಯಿಯಲ್ಲ; ನಿನ್ನಿಂದ ನನಗೇನು?" ಇತ್ಯಾದಿ ನಿಂದೋಕ್ತಿಗಳನ್ನು ಆಡಿದರೆ, "ಸ ಮಾತೃಹಾಭವತಿ; ಪಿತೃಹಾಭವತಿ" ಇತ್ಯಾದಿ ಶ್ರುತ್ಯುಕ್ತ ರೀತಿಯಲ್ಲಿ ಪ್ರಬಲವಾದ ಮಾತೃದ್ರೋಹವೂ ಪಿತೃದ್ರೋಹವೂ ಪ್ರಾಪ್ತವಾಗಿ ಲೋಕದಲ್ಲಿ ಸಜ್ಜನರಿಂದ ನಿಂದಾಸ್ಪದರಾಗುತ್ತಾರೆ. ಹೀಗಿರುವಲ್ಲಿ ಜಗಜ್ಜನಕನಾದ ಶ್ರೀಮನ್ನಾರಾಯಣನನ್ನೂ, ಜಗನ್ಮಾತೆಯಾದ ಲಕ್ಷ್ಮೀದೇವಿಯನ್ನೂ ಕುರಿತು "ಈ ಪ್ರಪಂಚವು ಸುಳ್ಳು; ನೀವು ಏನು ಸೃಷ್ಟಿಮಾಡಿ ಕಷ್ಟಪಟ್ಟು ನಮ್ಮನ್ನು ಉದ್ಧರಿಸಿದುದು?." ಇತ್ಯಾದಿ ರೀತಿಯಲ್ಲಿ ಅರ್ಥಕೊಡುವ ಮಾಯಾವಾದವನ್ನು ಶಾಸ್ತ್ರಗ್ರಂಥದಲ್ಲಿ ಪ್ರತಿಪಾದನೆ ಮಾಡಿದರೆ ಭಗವಂತನ ಕೋಪಕ್ಕೆ ನಾವು ಹೇಗೆ ಪಾತ್ರರಾಗದೇ ಇದ್ದೇವು? "ಮಾತೃದೇವೋಭವ! ಪಿತೃದೇವೋಭವ!" ಇವೇ ಮುಂತಾದ ಶ್ರುತಿಗಳ ಗೌರವದಿಂದಲಾದರೂ ಜಗನ್ಮಿಥ್ಯಾತ್ವವನ್ನು ಶಾಸ್ತ್ರದಲ್ಲಿ ಒಡಂಬಡಬಾರದು.

ಪರಂತು 7. "ಮಿಥ್ಯಾ" ಪದಾರ್ಥಗಳಿಗೆ ಅರ್ಥಕ್ರಿಯಾಕಾರಿತ್ವವು ಎಲ್ಲಿಯೂ ಕಂಡಿಲ್ಲವೆಂದು ಹಿಂದೆ ನಿರೂಪಿಸಿರುತ್ತೇವೆ. ಪ್ರಕೃತ್ಯುಪಾದಾನಕವಾದ ಈ ಜಗತ್ತಿಗೆ ಅರ್ಥಕ್ರಿಯಾಕಾರಿತ್ವವು (ಅಂದರೆ ನಾನಾ ವಿಧವಾದ ಪದಾರ್ಥ ನಿರ್ಮಾಣದ್ವಾರಾ ಜೀವರುಗಳ ಭೋಗಕ್ಕೆ ಸಾಧನವಾಗುವುದು) ಇರುತ್ತದೆ ಎಂಬುದನ್ನು ಕೃಷ್ಣನು ಬಹು ಅಧ್ಯಾಯಗಳಲ್ಲಿ ನಿರೂಪಿಸಿರುತ್ತಾನೆ. ಪ್ರಕೃತಿಯು ಮಹದಹಂಕಾರಾದಿ ನಾನಾ ರೂಪೇಣ ಪರಿಣಮಿಸುತ್ತದೆ ಎಂದು ಹಿಂದೆ ನಿರೂಪಿಸಲ್ಪಟ್ಟಿದೆ.

(16) **ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।**
ವಿಕಾರಾಂಶ್ಚಗುಣಾಂಶ್ಚೈವ ವಿದ್ಧಿಪ್ರಕೃತಿಸಂಭವಾನ್ ॥

—(13. 20)

(ಚತುರ್ವಿಂಶತಿತತ್ವಾತ್ಮಕವಾದ) ಪ್ರಕೃತಿಯು ಮತ್ತು ಜೀವನು ಇವೆರಡೂ ಅನಾದಿ ಎಂದು ತಿಳಿ. ಮತ್ತು ಇಚ್ಛಾದ್ವೇಷಾದಿವಿಕಾರಗಳೂ ಸತ್ವರಜಸ್ತ

ಮೋಗುಣಗಳೂ ಪ್ರಕೃತಿಯಿಂದ ಉತ್ಪನ್ನವಾದುವು ಎಂದು ತಿಳಿ. ಇದರಿಂದ ಪ್ರಕೃತಿಗೆ ಗುಣತ್ರಯೋತ್ಪತ್ತಿರೂಪ ಅರ್ಥಕ್ರಿಯಾಕಾರಿತ್ವವು ಸಿದ್ಧವಾಯಿತು.

(17) **ಪುರುಷಃ ಪ್ರಕೃತಿಸ್ಥೋಹಿ ಭುಂಕ್ತೇ ಪ್ರಕೃತಿಜಾನ್ಗುಣಾನ್ ।**
ಕಾರಣಂಗುಣಸಂಗೋಽಸ್ಯ ಸದಸದ್ಯೋನಿ ಜನ್ಮಸು ॥

—(13. 20.)

ಜೀವನು ಪ್ರಕೃತಿಕಾರ್ಯವಾದ ದೇಹದಲ್ಲಿ ಸ್ಥಿತನಾಗಿ ಪ್ರಕೃತಿಪರಿಣಾಮಗಳಾದ ಸುಖದುಃಖಗಳನ್ನು ಅನುಭವಿಸುತ್ತಾನೆ. ಈ ಜೀವನಿಗೆ ಉತ್ತಮಾಧಮ ನಾನಾ ಯೋನಿಗಳಿಗೆ ಗುಣಗಳ ಸಂಗವೇ ಕಾರಣವು.

ಪ್ರಕೃತಿಗುಣಗಳಿಂದಾಗುವ ಬಂಧನ ಪ್ರಕಾರವನ್ನು ಹದಿನಾಲ್ಕನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣನು ವಿಶದವಾಗಿ ವಿವರಿಸಿರುತ್ತಾನೆ.

(18) **ಸತ್ವಂ ರಜಸ್ತಮ ಇತಿಗುಣಾಃ ಪ್ರಕೃತಿಸಂಭವಾಃ ।**
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಂ ॥
ತತ್ರಸತ್ವಂ ನಿರ್ಮಲತ್ವಾತ್ ಪ್ರಕಾಶಕ ಮನಾಮಯಂ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನಚಾನಘ ॥
ರಜೋರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಂ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಂ ॥
ತಮಸ್ತ್ವ ಜ್ಞಾನಜಂವಿದ್ಧಿ ಮೋಹನಂ ಸರ್ವದೇಹಿನಾಂ ।
ಪ್ರಮಾದಾಲಸ್ಯನಿದ್ರಾಭಿ ಸ್ತನ್ನಿಬಧ್ನಾತಿಭಾರತ ॥
ಊರ್ಧ್ವಂಗಚ್ಛಂತಿಸತ್ವಸ್ಥಾಮಧ್ಯೇತಿಷ್ಠಂತಿರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋಗಚ್ಛಂತಿತಾಮಸಾಃ ॥

—(14. 5-18.)

ಇದರ ಅರ್ಥವು—ಸತ್ವರಜಸ್ತಮಸ್ಸುಗಳೆಂಬ ಮೂರು ಗುಣಗಳು ಪ್ರಕೃತಿಯಿಂದ ಉತ್ಪನ್ನವಾದುವುಗಳು. ಇವು ಸ್ವರೂಪೇಣ ನಾಶರಹಿತನಾದ ಜೀವನನ್ನು ಶರೀರದಲ್ಲಿ **ಬಂಧಿಸುತ್ತವೆ.** ಗುಣತ್ರಯಗಳ ಮಧ್ಯದಲ್ಲಿ ಸತ್ವಗುಣವು ಶುದ್ಧವಾದುದರಿಂದ ರೋಗಾದ್ಯುಪದ್ರವನಾಶಕವಾಗಿ ಜೀವನಿಗೆ ತತ್ವಜ್ಞಾನವನ್ನೂ ಸುಖವನ್ನೂ ಉತ್ಪತ್ತಿಮಾಡುವುದರ ಮೂಲಕ ಬಂಧಕವಾಗಿರುತ್ತದೆ. ವಿಷಯಾಭಿಲಾಷೆ ಮತ್ತು ವಿಷಯಾಸಕ್ತಿಗಳಿಗೆ ಕಾರಣವಾದ ರಜೋಗುಣವು ರಾಗಾತ್ಮಕವು (ವಿಷಯಕಾಮಕ್ಕೆ ಮುಖ್ಯ ಕಾರಣವು). ಇದು ನಾನಾವಿಧವಾದ

ಲೌಕಿಕ ಉದ್ಯೋಗಗಳಲ್ಲಿ ಆಸಕ್ತನನ್ನಾಗಿ ಮಾಡುವುದರ ಮೂಲಕ ಜೀವನನ್ನು ದೇಹದಲ್ಲಿ ಬಂಧಿಸುತ್ತದೆ. ತಮೋಗುಣವು ಅಜ್ಞಾನಜನಕವು ಮತ್ತು ಸರ್ವ ಜೀವರುಗಳಿಗೂ ಮಿಥ್ಯಾಜ್ಞಾನವನ್ನು ಉಂಟುಮಾಡುವುದು. ಇದು ಪ್ರಮಾದ (ವಿಧಿನಿಷೇಧಗಳಲ್ಲಿ ಮನಸ್ಸನ್ನು ಇಡದೇ ಇರೋಣ.) ಆಲಸ್ಯ ಮತ್ತು ನಿದ್ರಾ ಇವುಗಳನ್ನು ವೃದ್ಧಿಮಾಡುವುದರ ಮೂಲಕ ಜೀವನನ್ನು ಬಂಧಿಸುತ್ತದೆ.*

ಸತ್ವಗುಣದಲ್ಲಿ ನಿಷ್ಠಾವುಳ್ಳವರು ಊರ್ಧ್ವಲೋಕಗಳನ್ನು ಹೊಂದುತ್ತಾರೆ. ರಜೋಗುಣಕಾರ್ಯದಲ್ಲಿ ಆಸಕ್ತರಾದವರು ಸ್ವರ್ಗಾದಿಗಳಲ್ಲಿ ವಾಸಮಾಡುತ್ತಾರೆ. ನೀಚವಾದ ತಮೋಗುಣದಿಂದ ಬದ್ಧರಾದವರು ನರಕಾದಿ ಅಧೋಗತಿಯನ್ನು ಹೊಂದುತ್ತಾರೆ.

ಹದಿನಾರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಸತ್ವಗುಣದಿಂದ ಯುಕ್ತರಾದವರ ದೈವೀಸಂಪತ್ತು ಅಂದರೆ ಮೋಕ್ಷಪ್ರಾಪಕವಾದ ಅಭಯ, ಅಂತಃಕರಣಶುದ್ಧಿ ಮುಂತಾದ ಸದ್ಧರ್ಮಗಳನ್ನೂ, ತಮೋಗುಣದಿಂದ ಸಹಿತರಾದವರ ದುರ್ಗತಿಗೆ ಕಾರಣವಾದ ದಂಭ, ದರ್ಪ, ಅಭಿಮಾನ ಇವೇ ಮುಂತಾದ ದುರ್ಗುಣಗಳನ್ನೂ ವಿಸ್ತಾರವಾಗಿ ನಿರೂಪಿಸುತ್ತಾನೆ. ಹದಿನೇಳು ಮತ್ತು ಹದಿನೆಂಟನೆಯ ಅಧ್ಯಾಯದಲ್ಲಿ ಶ್ರದ್ಧಾ, ಆಹಾರ, ಯಜ್ಞ, ತಪಸ್ಸು, ದಾನ, ತ್ಯಾಗ, ಜ್ಞಾನ, ಕರ್ಮ, ಕರ್ತಾ, ಬುದ್ಧಿ, ಧೃತಿ ಮತ್ತು ಸುಖ ಇವುಗಳು ಒಂದೊಂದೂ ಸಾತ್ವಿಕ, ರಾಜಸ, ತಾಮಸ ಭೇದೇನ ಮೂರು ಮೂರು ಪ್ರಕಾರವಾಗಿರುವುವು. ಸಾತ್ವಿಕವು ಪರಿಗ್ರಾಹ್ಯವು ; ರಾಜಸತಾಮಸ ಧರ್ಮಗಳು ತ್ಯಾಜ್ಯಗಳು ಎಂದು ಅಧಿಕಾರಿಗಳ ಸಾಧನಸೌಲಭ್ಯಕ್ಕಾಗಿ ತಲೆಯಮೇಲೆ ಹೊಡೆದಂತೆ ಒಂದೊಂದನ್ನೂ ಪುನಃ ಒತ್ತಿಒತ್ತಿ ಉಪದೇಶ ಮಾಡಿರುತ್ತಾನೆ. ಹೀಗೆ ನಾನಾವಿಧವಾದ ಅರ್ಥಕ್ರಿಯಾಕಾರಿಗಳಾದ ಈ ಪ್ರಪಂಚದ ಪದಾರ್ಥಗಳನ್ನು ಶುಕ್ತಿರಜತದಂತೆ ಮಿಥ್ಯಾ ಎಂದು ಹೇಳುವುದು ಹೇಗೆ? ಶುಕ್ತಿರಜತದಿಂದ ಯಾವ ದೇವರ ಮಂಟಪವನ್ನು ನಿರ್ಮಾಣಮಾಡಬಹುದು? ರಜ್ಜುಸರ್ಪವು ಯಾರನ್ನು ಕಚ್ಚಿತು? ಆದುದರಿಂದ ಸರ್ವಥಾ ಅರ್ಥಕ್ರಿಯಾಕಾರಿತ್ವವೆಂಬ ಧರ್ಮದಿಂದ ರಹಿತವಾದ ಶುಕ್ತಿರಜತ ದೃಷ್ಟಾಂತದಿಂದ ಈ ಪ್ರತ್ಯಕ್ಷಾದಿ ಪ್ರಮಾಣಸಿದ್ಧವಾದ ಯಾವತ್ತು ಜಗತ್ತನ್ನೂ ಮಿಥ್ಯಾ ಎಂದು ಹೇಳುವುದು ಆಗ್ರಹಮೂಲಕವೇ ಸರಿ. ಪರಂತು 8. ಸುಖದುಃಖಗಳು ಸಾಕ್ಷಿಪ್ರ

---

* ಇನ್ನು ಒಂಬತ್ತು ಶ್ಲೋಕಗಳು ಗುಣತ್ರಯಗಳ ಬಂಧನ ವೈಚಿತ್ರ್ಯವನ್ನು ವಿವರಿಸುತ್ತವೆ ವಿಸ್ತರಭಯದಿಂದ ಬರೆಯಲಿಲ್ಲ.

ತ್ಯಕ್ಷಗೋಚರವಾದವುಗಳು. ಅವುಗಳನ್ನು ಹ್ಯಾಗೆತಾನೇ ಸುಳ್ಳೆಂದು ಹೇಳುವುದು ? ನಾವು ಅನುಭವಿಸಿದ ಸುಖದ ವಿಷಯದಲ್ಲಾಗಲೀ ದುಃಖದ ವಿಷಯದಲ್ಲಾಗಲೀ ಯಾರಿಗೂ ಯಾವಾಗಲೂ ಬಾಧಜ್ಞಾನವು ಬರುವುದಿಲ್ಲ. 9. ಅಪರೋಕ್ಷಜ್ಞಾನಿಯಾದ ಅರ್ಜುನನೂ ಕೂಡ ತನ್ನ ದಿವ್ಯಚಕ್ಷುಸ್ಸಿನಿಂದ ಈ ಪ್ರಪಂಚವನ್ನು ನೋಡಿರುವುದರಿಂದಲೂ ಜ್ಞಾನಿಗಳಿಗೂ ಜ್ಞಾನಪ್ರದನಾದ ಸಾಕ್ಷಾದ್ಭಗವಂತನು ತಾನೇ ತನ್ನ ಸ್ವರೂಪಭೂತವಾದ ಅತ್ಯಂತ ನಿರ್ದೋಷವಾದ ಚಕ್ಷುಸ್ಸಿನಿಂದ ಈ ಜಗತ್ತನ್ನು ನೋಡುತ್ತಾ, "ಇದನ್ನು ಪುನಃ ಪುನಃ ಸೃಷ್ಟಿಮಾಡುತ್ತೇನೆ. ಸೃಷ್ಟಿಪ್ರವಾಹವು ನಿತ್ಯವಾಗಿರುವುದು" ಎಂದು ತನ್ನ ಸ್ವಂತಮುಖದಿಂದ ಹೇಳುತ್ತಿರುವಾಗ ಇದು "ಮಿಥ್ಯಾ" ಅಂದರೆ ಈಗಲೂ ಇಲ್ಲ; ಹಿಂದೆಯೂ ಇರಲಿಲ್ಲ; ಮುಂದೂ ಇರುವುದಿಲ್ಲ ಎಂದು ನಾವು ಹೇಳಬೇಕಾದರೆ ನಮ್ಮ ಎದೆಯು ಅಶ್ಮಸಾರದಂತೆ ದೃಢವಾಗಿರಬೇಕು.

(19) ಶ್ರೀಕೃಷ್ಣ ಉವಾಚ—**ಇಹೈಕಸ್ಥಂ ಜಗತ್ಕೃತ್ಸ್ನಂ ಪಶ್ಯಾದ್ಯಸಚರಾಚರಂ ಮಮದೇಹೇಗುಡಾಕೇಶ ।**—(11. 7.)

ಸಂಜಯ ಉವಾಚ—**ತತ್ರೈಕಸ್ಥಂ ಜಗತ್ಕೃತ್ಸ್ನಂಪ್ರವಿಭಕ್ತಮನೇಕಧಾ ।**
ಅಪಶ್ಯದ್ದೇವದೇವಸ್ಯ ಶರೀರೇಪಾಂಡವಸ್ತದಾ ॥-(11. 13.)

ಅರ್ಜುನಃ—**ದ್ಯಾವಾಪೃಥಿವ್ಯೋರಿದಮಂತರಂ ಹಿ ವ್ಯಾಪ್ತಂತ್ವಯೈಕೇನದಿಶಶ್ಚಸರ್ವಾಃ ॥**—(11. 20.)

ಇದರ ಅರ್ಥವು—ಶ್ರೀಕೃಷ್ಣನು ಹೇಳುತ್ತಾನೆ—ಎಲೈ ಗುಡಾಕೇಶ! (ಜಿತನಿದ್ರನಾದ ಅರ್ಜುನನೇ!) ನಿನಗೆ ಈಗ ತೋರಿಸುವ ನನ್ನ ದೇಹದಲ್ಲಿ ಸ್ಥಾವರಜಂಗಮಾತ್ಮಕವಾದ ಸಕಲ ಪ್ರಪಂಚವನ್ನೂ ಏಕದೇಶದಲ್ಲಿ ಸ್ಥಿತವಾಗಿರುವುದನ್ನು ಈಗ ನೋಡು. ಸಂಜಯನು ಹೇಳುತ್ತಾನೆ—ದೇವದೇವನಾದ ಆ ಪರಮಾತ್ಮನ ವಿಶ್ವರೂಪದಲ್ಲಿ ಅನೇಕ ಪ್ರಕಾರವಾಗಿ (ಪೃಥಿವ್ಯಾದಿ ಒಂಭತ್ತು ಆವರಣ ರೂಪೇಣ, ಮಹತ್ತತ್ವಾದಿ ಅನೇಕ ಪ್ರಕಾರೇಣ ಮತ್ತು ದೇವ, ದಾನವ, ಮಾನವಾದಿ ಬಹು ಪ್ರಕಾರೇಣ) ವಿಭಕ್ತವಾದ ಸಂಪೂರ್ಣ ಪ್ರಪಂಚವನ್ನೂ ಆಗ ಅರ್ಜುನನು ನೋಡಿದನು. ಅರ್ಜುನನು ಸ್ತುತಿಸುತ್ತಾನೆ—ಹೇ ಸ್ವಾಮಿ! ಭೂಮಿ ಮತ್ತು ಅಂತರಿಕ್ಷ ಲೋಕಗಳ ಮಧ್ಯದಲ್ಲಿರುವ ಈ ಸಮಸ್ತ ಪ್ರದೇಶವೂ ಸಮಸ್ತ ದಿಕ್ಕುಗಳೂ ನಿನ್ನೊಬ್ಬನಿಂದಲೇ ವ್ಯಾಪ್ತವಾಗಿವೆ.

ಅಪರೋಕ್ಷಜ್ಞಾನಿಯಾದ ಅರ್ಜುನನು ಭೂಲೋಕವನ್ನೂ ಅಂತರಿಕ್ಷ ಲೋಕವನ್ನೂ ಸಮಸ್ತ ದಿಕ್ಕುಗಳನ್ನೂ ಹಾಗೂ ಚರಾಚರಾತ್ಮಕವಾದ ಸಕಲ ಜಗತ್ತನ್ನೂ ನೋಡಿ ಸರ್ವತ್ರವ್ಯಾಪ್ತನಾದ ಪರಮಾತ್ಮನನ್ನು ನೋಡಿರುವನು. ಪರಮಾತ್ಮಾತಿರಿಕ್ತ ಜಗತ್ತು ಅವನ ಕಣ್ಣೆದುರಿಗೆ ನಿಲ್ಲಲಾರದೆ ಅದೃಶ್ಯವಾಗಿ ಹೋಗಲಿಲ್ಲ. ಶುಕ್ತಿರಜತಭ್ರಮೆಯಲ್ಲಿ ಅಧಿಷ್ಠಾನವಾದ ಶುಕ್ತಿಜ್ಞಾನವು ಬಂದಾಗ ರಜತವು ಇಲ್ಲವೆಂದು ಸ್ಫುಟವಾಗಿ ತಿಳಿಯುವುದು. ಹೀಗೆ ಪ್ರಪಂಚವು ಮಿಥ್ಯಾ ಆಗಿದ್ದರೆ ಪ್ರಪಂಚಭ್ರಮಕ್ಕೆ ಅಧಿಷ್ಠಾನನಾದ ಬ್ರಹ್ಮನ ಜ್ಞಾನವು ಅರ್ಜುನನಿಗೆ ದಿವ್ಯಚಕ್ಷುಸ್ಸಿನಿಂದ ಬಂದಾಗ ಸಕಲ ಪ್ರಪಂಚವೂ ಸುಳ್ಳೆಂಬುದು ಅವನಿಗೆ ಸ್ಫುಟ ವಾಗಿ ಗೊತ್ತಾಗಬೇಕಾಗಿತ್ತು. ಇದಕ್ಕೆ ವಿರುದ್ಧವಾಗಿ ಪ್ರಪಂಚವು ಅತ್ಯಂತ ಸತ್ಯವೆಂಬ ಜ್ಞಾನವೇ ಪ್ರಾಪ್ತವಾದುದರಿಂದ ಜಗತ್ಸತ್ಯತ್ವದಲ್ಲಿ ಗುರುಶಿಷ್ಯರಾದ ಕೃಷ್ಣಾರ್ಜುನರಿಬ್ಬರೂ ಸಾಕ್ಷಿ ಹೇಳುವವರಾದರು.

ಕಿಂಚ 10. ಸಂಸಾರಬಂಧವು ಶುಕ್ತಿರಜತದಂತೆ ಮಿಥ್ಯಾ ಆದರೆ ಅದರ ನಿವೃತ್ತ್ಯರ್ಥವಾಗಿ ಯಾರುತಾನೇ ಏನು ಪ್ರಯತ್ನಮಾಡಬೇಕು? "ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ" ಎಂಬಲ್ಲಿ ಶ್ರೀಕೃಷ್ಣನು ಅಧಿಕಾರಿ ಗಳು ಬಹು ಕಷ್ಟಪಟ್ಟು ಜ್ಞಾನವನ್ನು ಸಂಪಾದಿಸಿ, ಪಂಚಾಗ್ನಿ ತಪಶ್ಚರ್ಯಾದಿಗ ಳನ್ನು ಮಾಡಿ ಪವಿತ್ರರಾಗಿ, ಪರಬ್ರಹ್ಮನ ಪ್ರಸಾದದಿಂದ ಮುಕ್ತರಾಗುತ್ತಾರೆಂದು ಹೇಳಿರುತ್ತಾನೆ. ಜಗದ್ಬಂಧವು ಮಿಥ್ಯಾ ಆಗಿದ್ದರೆ ಸ್ವಯಂ ನಿವೃತ್ತವಾಗುತ್ತಿತ್ತು. ಮತ್ತೊಬ್ಬರ ಪ್ರಸಾದಾಪೇಕ್ಷೆಯು ಇರುತ್ತಿರಲಿಲ್ಲ. ಜ್ಞಾನಮಾತ್ರದಿಂದ ರಜತ ಭ್ರಮವು ನಿವೃತ್ತವಾಗುವಂತೆ ಬ್ರಹ್ಮಜ್ಞಾನಮಾತ್ರದಿಂದ ಜಗದ್ಬಂಧನಿವೃತ್ತಿಯು ಆಗುವುದಿಲ್ಲ. ಶ್ರೀಕೃಷ್ಣನು ಹೇಳುತ್ತಾನೆ—

(20) **ಮಾಮೇವಯೇ ಪ್ರಪದ್ಯಂತೇ ಮಾಯಾಮೇತಾಂತರಂತಿತೇ।**
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ ॥

ಇದರ ಅರ್ಥವು—ನನ್ನನ್ನೇ ಯಾರು ಶರಣಾಗತರಾಗುತ್ತಾರೋ ಅವರೇ ಈ ದುಸ್ತರವಾದ ನನ್ನ ಇಚ್ಛಾಧೀನವಾದ ಪ್ರಕೃತಿಬಂಧವನ್ನು ದಾಟುತ್ತಾರೆ. (ನನ್ನ ಭಕ್ತನು) ನನ್ನ ಪ್ರಸಾದದಿಂದ ಶಾಶ್ವತವಾದ ನಾಶರಹಿತವಾದ ಮುಕ್ತಿ ಸ್ಥಾನವನ್ನು ಹೊಂದುತ್ತಾನೆ.

ಈ ರೀತಿಯಾಗಿ ಪ್ರಕೃತಿಬಂಧವನ್ನು ಅತಿಕ್ರಮಣಮಾಡಬೇಕಾದರೆ ನಿಷ್ಕಾ ಮಕರ್ಮಾನುಷ್ಠಾನ, ಗುರುಸೇವಾ, ಶ್ರವಣ, ಮನನ, ಧ್ಯಾನ, ವಿಷ್ಣುವಿನಲ್ಲಿ ಶರ

ಣಾಗತಿಪೂರ್ವಕವಾಗಿ ಅನನ್ಯವಾದ ಭಕ್ತಿಭಾವ, ಕಾಮಕ್ರೋಧಾದಿ ಪರಿಹಾರಾರ್ಥವಾಗಿ ತೀಕ್ಷ್ಣವಾದ ಉಗ್ರ ತಪಸ್ಸು ಇವೇ ಮುಂತಾದ ಬಹು ನಿಯಮಗಳನ್ನು ಶಾಸ್ತ್ರವು ಹೇಳುತ್ತಿರುವುದು. ಬಂಧವು ಮಿಥ್ಯಾಭೂತವಾದರೆ ಸ್ವಯಂ ನಿವೃತ್ತವಾಗುವುದರಿಂದ ಈ ಯಾವತ್ತು ಪ್ರಯಾಸವು ಮೌಢ್ಯಮೂಲಕವೆಂದೇ ಹೇಳಬೇಕಾಯಿತು. ಪ್ರೇಕ್ಷಾವಂತರಲ್ಲಿ ಶಿಖಾಮಣಿಯಾದ ಶ್ರೀಕೃಷ್ಣನು ಉಪದೇಶಮಾಡಿ, ಅರ್ಜುನನು "ಸರ್ವಮೇತದೃತಂ ಮನ್ಯೇ" ಎಂದರೆ ನೀನು ಹೇಳಿದುದೆಲ್ಲಾ ಯಥಾರ್ಥವೇ ಸರಿ ಎಂದು ಹೇಳಿರುವುದರಿಂದ ಜಗನ್ಮಿಥ್ಯಾತ್ವವು ಭಗವದ್ಗೀತಾ ವಾಕ್ಯಗಳಿಗೆ ಪರಮವಿರುದ್ಧವಾದ ತತ್ವವಾಗುತ್ತದೆ. ಜಗತ್ತು ಸ್ವರೂಪೇಣ ಅವ್ಯಯವು; ಅದು ಜೀವನಿಗೆ ಬಂಧಕವು; ಬಂಧಪರಿಹಾರಾರ್ಥವಾಗಿ "ಅಮಾನಿತ್ವಮದಂಭಿತ್ವ ಮಹಿಂಸಾಕ್ಷಾಂತಿರೇವಚ" ಇತ್ಯಾದಿ ಶ್ಲೋಕೋಕ್ತ ಅನೇಕ ಮನೋಧರ್ಮಗಳ ಸಂಪಾದನೆಯು ಅವಶ್ಯಕವು; ಮತ್ತು ಪರಮಾತ್ಮನಲ್ಲಿ ಶರಣಾಗತಿಯೇ ಪರಮಮುಕ್ತಿಸಾಧನವು ಎಂಬ ಅರ್ಥವನ್ನು ನಿರೂಪಿಸುವ ಶ್ರೀಕೃಷ್ಣನ ಹದಿನೈದನೆಯ ಅಧ್ಯಾಯದ ವಾಕ್ಯಗಳನ್ನು ಉದಾಹರಿಸಿ ಈ ಉಪನ್ಯಾಸವನ್ನು ಮುಗಿಸುವೆವು.

(21) ಶ್ರೀ ಭಗವಾನುವಾಚ:—**ಊರ್ಧ್ವಮೂಲಮಧಃ ಶಾಖಮಶ್ವತ್ಥಂ ಪ್ರಾಹುರವ್ಯಯಂ।**

ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂವೇದಸವೇದವಿತ್॥
ಅಶ್ವತ್ಥಮೇನಂ ಸುವಿರೂಢಮೂಲ ಮಸಂಗಶಸ್ತ್ರೇಣ ದೃಢೇನ ಛಿತ್ವಾ।
ತತಃಪರಂತತ್ಪರಿಮಾರ್ಗಿತವ್ಯಂ ಯಸ್ಮಿನ್ಗತಾನ ನಿವರ್ತಂತಿ ಭೂಯಃ।
ತಮೇವಚಾದ್ಯಂ ಪುರುಷಂ ಪ್ರಪದ್ಯೇಯತಃ ಪ್ರವೃತ್ತಿಃ ಪ್ರಸೃತಾಪುರಾಣೀ।
ನಿರ್ಮಾನಮೋಹಾ ಜಿತಸಂಗದೋಷಾ ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ।
ದ್ವಂದ್ವೈರ್ವಿಮುಕ್ತಾಸ್ಸುಖದುಃಖಸಂಜ್ಞೈರ್ಗಚ್ಛಂತ್ಯಮೂಢಾಃ ಪದಮವ್ಯಯಂತತ್॥—(15. 1-5.)

ಇದರ ಅರ್ಥವು:—ಶ್ರೀ ಕೃಷ್ಣನು ಹೇಳುತ್ತಾನೆ:—ಪ್ರತ್ಯಕ್ಷಾದಿ ಪ್ರಮಾಣಸಿದ್ಧವಾದ ಈ ಜಗದ್ವೃಕ್ಷವು ಪರಮಾತ್ಮ, ಚೇತನ ಪ್ರಕೃತಿ ಮತ್ತು ಅಚೇತನ

ಪ್ರಕೃತಿಗಳೆಂಬ ಮೂರು ಉತ್ಕೃಷ್ಟ ಆಧಾರಗಳನ್ನು ಉಳ್ಳದ್ದು. (ವೃಕ್ಷಕ್ಕೆ ಬೇರಿನಂತೆ ಜಡಪ್ರಕೃತಿಯು ಜಗದ್ವೃಕ್ಷಕ್ಕೆ ಆಧಾರವು; ಬೇರಿಗೂ ಆಶ್ರಯವಾದ ಭೂಮಿಯಂತೆ ಚೇತನ ಪ್ರಕೃತಿಯು ಆಶ್ರಯಳಾಗಿದ್ದಾಳೆ; ಭೂ ದೇವತೆಯು ವಿಲಕ್ಷಣವಾಗಿದ್ದು ವೃಕ್ಷಕ್ಕೆ ಆಶ್ರಯವಾಗಿರುವಂತೆ ಜಗದ್ವೃಕ್ಷಕ್ಕೆ ಪರಮಾತ್ಮನು ವಿಲಕ್ಷಣ ಆಶ್ರಯನು.) ವಿಷ್ಣು, ಚೇತನಪ್ರಕೃತಿಗಳಿಗಿಂತ ನೀಚರಾದ ಮಹದಹಂಕಾರಾದಿ ತತ್ವಗಳು ಮತ್ತು ಇವುಗಳ ಅಭಿಮಾನಿ ದೇವತೆಗಳು ಪ್ರಸಿದ್ಧ ವೃಕ್ಷದ ಶಾಖೆಯಂತೆ ಜಗದ್ವೃಕ್ಷದಲ್ಲಿರುತ್ತಾರೆ. ಜಗದ್ವೃಕ್ಷಕ್ಕೆ ವೇದಗಳು ಪ್ರಸಿದ್ಧವೃಕ್ಷದ ಪತ್ರಗಳಂತೆ ಇರುತ್ತವೆ. (ಲೋಕದಲ್ಲಿ ಪ್ರಸಿದ್ಧವೃಕ್ಷದಲ್ಲಿ ಹೇಗೆ ಎಲೆಗಳು ಹುಟ್ಟಿದ ನಂತರವೇ ಫಲೋತ್ಪತ್ತಿಯಾಗುವುದೋ, ಹಾಗೆಯೇ, ವೇದಾರ್ಥಜ್ಞಾನವಾದನಂತರ ಸಾಧನೆಯನ್ನು ಆಚರಿಸಿದವನಿಗೆ ಕಾಮಮೋಕ್ಷರೂಪವಾದ ಫಲಪ್ರಾಪ್ತಿಯಾಗುವುದರಿಂದ ವೇದಗಳು ಪತ್ರಗಳಂತೆ ಎಂದು ನಿರೂಪಿತವಾಯಿತು.) ಇಂಥಾ ಜಗದ್ವೃಕ್ಷವು '**ಅಶ್ವತ್ಥಂ**' ಎಂದರೆ ಅತಿ ಚಂಚಲವಾಗಿ ಪ್ರತಿಕ್ಷಣವೂ ವಿಕಾರವನ್ನು ಹೊಂದುತ್ತಿರುವುದು ಎಂದೂ, ಹಾಗಾದರೂ **ಪ್ರವಾಹತಃ ಅವ್ಯಯವು** ಆದರೆ ನಾಶರಹಿತವಾಗಿ ಅನಾದಿ ನಿತ್ಯವಾಗಿರುವುದೆಂದೂ ಜ್ಞಾನಿಗಳು ಹೇಳುತ್ತಾರೆ............ಇಂಥಾ ಪ್ರಬಲವಾದ ವಿಷ್ಣುವೇ ಮೊದಲಾದ ಆಶ್ರಯವುಳ್ಳ ಪ್ರತಿಕ್ಷಣವೂ ವಿಕಾರವನ್ನು ಹೊಂದತಕ್ಕ ಈ ಜಗದ್ವೃಕ್ಷವನ್ನು ವೈರಾಗ್ಯವೆಂಬ ಸಾಣೆಯಿಂದ ಹರಿತವಾದ ದೃಢವಾದ ಜ್ಞಾನಾಖ್ಯ ಖಡ್ಗದಿಂದ ಛಿತ್ವಾ—ಛೇದನಮಾಡಿ (ಆದರೆ ಈ ಜಗತ್ತಿಗೆ ಮೂಲಭೂತನು ಲೋಕವಿಲಕ್ಷಣನಾದ ಪರಮಾತ್ಮನು; ಜಗತ್ತು ಬಹುಪ್ರಕಾರವಾಗಿರುವುದು; ಪ್ರತಿದಿನವೂ ವಿಕಾರವನ್ನು ಹೊಂದುತ್ತಲಿರುವುದು; ಆದರೆ ಜಗತ್ಪ್ರವಾಹವು ನಾಶರಹಿತವಾಗಿ ಸರ್ವದಾ ಇರುವುದು ಎಂದು ವಿವೇಚನೆ ಮಾಡಿ ತಿಳಿದುಕೊಂಡು), ತದನಂತರ ಯಾವ ಪರಬ್ರಹ್ಮನಲ್ಲಿ ಪ್ರವಿಷ್ಟರಾದರೆ ಪುನಃ ಸಂಸಾರಕ್ಕೆ ಬರುವುದಿಲ್ಲವೋ ಅಂಥಾ ಪರಬ್ರಹ್ಮನನ್ನು ಶ್ರವಣಮನನಾದಿಗಳಿಂದ ಹುಡುಕಬೇಕು. (ಇಂಥಾ ಜ್ಞಾನಪ್ರಾಪ್ತಿಗೆ ಉಪಾಯವನ್ನೂ ಕೃಷ್ಣನು ಹೇಳುತ್ತಾನೆ—)ಅನಾದಿಯಾದ ಈ ಸಂಸಾರ ಪ್ರವಾಹವು ಯಾವಾತನಿಂದ ಉಂಟಾಯಿತೋ ಅಂಥಾ ಪುರಾಣಪುರುಷನನ್ನೇ ಶರಣುಹೊಂದಬೇಕು. ಮತ್ತು ಅಭಿಮಾನದಿಂದಲೂ ಮಿಥ್ಯಾಜ್ಞಾನದಿಂದಲೂ ರಹಿತರಾಗಿ, ವಿಷಯಾಸಕ್ತಿ ಎಂಬ ದೋಷವನ್ನು ಜಯಿಸಿ ಭಗವತ್ಕಥಾಶ್ರವಣಾದಿಗಳಲ್ಲಿ ನಿರತರಾಗಿ ಸಂಪೂರ್ಣವಾಗಿ ವಿಷಯಾಭಿಲಾಷೆಯನ್ನು ತೊರೆದು, ಸುಖದುಃಖಾದಿ ದ್ವಂದ್ವ

ಗಳಿಂದ ರಹಿತರಾದ ರಜೋಗುಣ ತಮೋಗುಣ ಕಾರ್ಯಗಳಿಂದ ಶೂನ್ಯರಾದ ಅಧಿಕಾರಿಗಳು ನಿತ್ಯವಾದ ಪರಮಾತ್ಮನ ವೈಕುಂಠಾದಿ ಲೋಕವನ್ನು ಹೊಂದುತ್ತಾರೆ.

ಈ ರೀತಿಯಾಗಿ ವಿಧಿವಿಹಿತವಾದ ನಿಯತಸಾಧನೆಯಿಂದ ಪ್ರಸನ್ನನಾದ ಪರಮಾತ್ಮನಿಂದಲೇ ದಾಟಲ್ಪಡಬೇಕಾದುದರಿಂದ ಈ ಸಂಸಾರಚಕ್ರವು ಅತ್ಯಂತ ಸತ್ಯವಾದುದೇ ಸರಿ. ಶುಕ್ತಿರಜತವನ್ನು ನಾಶಮಾಡುವುದಕ್ಕೆ ತಪಸ್ಸಿನಿಂದ ಪ್ರಸನ್ನನಾದ ಮಹಾಪುರುಷನ ಯತ್ನವು ಬೇಕಾಗಿಲ್ಲ.

ii

ಶ್ರೀ ಶ್ರೀಗಳವರು—ಶ್ರೀ ಕೃಷ್ಣನು ಜಗತ್ಸತ್ಯತ್ವವನ್ನು ಪ್ರಾಮಾಣಿಕವಾದ ನಾನಾ ಯುಕ್ತಿಗಳಿಂದ ಪ್ರತಿಪಾದನೆಮಾಡಿರುವುದಲ್ಲದೆ ಜಗತ್ತು ಈಗಲೂ ಇಲ್ಲ. ಹಿಂದೆಯೂ ಇರಲಿಲ್ಲ. ಮುಂದೂ ಇರುವುದಿಲ್ಲ ಎಂಬ "ಮಿಥ್ಯಾವಾದ" ವನ್ನು ಕಂಠತಃ ಸ್ಪಷ್ಟವಾಗಿಯೂ ನಿಂದಿಸುತ್ತಾನೆ.

(1) **ಪ್ರವೃತ್ತಿಂ ಚ ನಿವೃತ್ತಿಂ ಚ ಜನಾನವಿದುರಾಸುರಾಃ |**
ಅಸತ್ಯಮ ಪ್ರತಿಷ್ಠಂತೇ ಜಗದಾಹುರನೀಶ್ವರಂ ||—(16. 8.)

ಇದರ ಅರ್ಥವು—ಅಸುರಜನರು ವಿಧಿವಿಹಿತ ವಿಷಯದಲ್ಲಿ ಪ್ರವರ್ತಿಸುವುದನ್ನೂ ನಿಷಿದ್ಧ ವಿಷಯದ ಪರಿತ್ಯಾಗವನ್ನೂ ತಿಳಿದವರಲ್ಲ ; ಮತ್ತು ಈ ಅಸುರರು ಜಗತ್ತು ಅಸತ್ಯವು ಅಂದರೆ ಸತ್ಯರಹಿತವು ; ಶುಕ್ತಿರಜತದಂತೆ ಮಿಥ್ಯಾಭೂತವು ಎಂದು ಹೇಳುವರು ; ಮತ್ತು ಸತ್ಯಶಬ್ದವಾಚ್ಯನಾದ ವಿಷ್ಣುವಿನಿಂದ ಸೃಷ್ಟವಾದುದಲ್ಲ; ಎಂದೂ, ಬಹುಕಾಲ ಈ ಜಗತ್ತು ಇರತಕ್ಕದ್ದಲ್ಲ; ಅದು ಜ್ಞಾನದಿಂದ ಬಾಧ್ಯವು ಅಥವಾ ಪ್ರತಿಷ್ಠಾನಾಮಕ ವಿಷ್ಣುವಿನಿಂದ ರಕ್ಷಿತವಾಗಿಲ್ಲವೆಂದೂ ಮತ್ತು ಈಶ್ವರರಹಿತವೆಂದೂ ಹೇಳುತ್ತಾರೆ.

ಪ್ರಶ್ನೆ—ಸ್ವಾಮಿ ! ಶಂಕರಭಾಷ್ಯದಲ್ಲಿ ಈ ಶ್ಲೋಕಕ್ಕೆ ಏನು ಅರ್ಥಮಾಡಿರುತ್ತಾರೆ ?

ಉತ್ತರ—"ಅಸತ್ಯಂ" ಎಂಬ ಪದಕ್ಕೆ ನಾವು ಹೇಳಿದಂತೆಯೇ **ಶಂಕರಾಚಾರ್ಯರು—"ಯಥಾವಯಮನೃತಪ್ರಾಯಾಃ ತಥೇದಂ ಜಗತ್ಸರ್ವಮಸತ್ಯಂ"** ಎಂದೂ; "**ಅಸತ್ಯಂ ಸತ್ಯವರ್ಜಿತಂ**" ಎಂದು **ನೀಲಕಂಠವ್ಯಾಖ್ಯಾನದಲ್ಲೂ** ಅರ್ಥಮಾಡಿರುತ್ತಾರೆ.

ಪ್ರಶ್ನೆ—ಬೌದ್ಧಮತದ ತತ್ವವನ್ನು ವ್ಯಾವೃತ್ತಿಮಾಡುವುದಕ್ಕೆ ಶಂಕರಾಚಾರ್ಯರು ಹಾಗೆ ಅರ್ಥಮಾಡಿರಬಹುದು. ಬೌದ್ಧರಷ್ಟೇ ಜಗತ್ತು ಅಸತ್ಯವೆಂದು ಹೇಳುವರು!

ಉತ್ತರ—ಹಾಗೆ ಸರ್ವಥಾ ಆಗಲಾರದು. **ಜಗತ್ತಿನ ವಿಷಯದಲ್ಲಿ** ಬೌದ್ಧತತ್ವಕ್ಕೂ ನಮ್ಮ ತತ್ವಕ್ಕೂ ಸ್ವಲ್ಪವೂ ಭೇದವಿಲ್ಲವೆಂದು ಶಂಕರಾಚಾರ್ಯರೇ ಸ್ಪಷ್ಟವಾಗಿ ಅಂಗೀಕರಿಸಿರುತ್ತಾರೆ. ಇಗೋ ಅವರ ವಾಕ್ಯವು—"ಜ್ಞಾನಜ್ಞೇಯಜ್ಞಾತೃ ಭೇದರಹಿತಂ ಪರಮಾರ್ಥತತ್ವಂ ಅದ್ವಯಮೇತನ್ನ ಬುದ್ಧೇನಭಾಷಿತಂ | **ಯದ್ಯಪಿ ಬಾಹ್ಯಾರ್ಥನಿರಾಕರಣಂ ಜ್ಞಾನಮಾತ್ರಕಲ್ಪನಾ ಚ ಅದ್ವಯವಸ್ತು ಸಾಮಿಪ್ಯಮುಕ್ತಂ** ಇದಂತು ಪರಮಾರ್ಥತತ್ವಂ ಅದ್ವೈತಂ ವೇದಾಂತೇಷ್ವೇವವಿಜ್ಞೇಯಮಿತ್ಯರ್ಥಃ ||

ಇದರ ತಾತ್ಪರ್ಯವು—ಅಂಬರಾದಿ ಸಕಲ ಬಾಹ್ಯ ಪ್ರಪಂಚವನ್ನು ನಿರಾಕರಣೆಮಾಡಿ ಸಕಲವೂ ಜ್ಞಾನದಲ್ಲಿ ಕಲ್ಪಿತವೆಂದು (ಭ್ರಾಂತಿಯಿಂದ ಆರೋಪಿತವಾದುದು; ಮಿಥ್ಯಾ) ಎಂದು ಎರಡು ತತ್ವಗಳೂ ಹೇಳುವುದರಿಂದ ಈ ವಿಷಯದಲ್ಲಿ ಅದ್ವೈತಮತಕ್ಕೂ ಬೌದ್ಧಮತಕ್ಕೂ ಸ್ವಲ್ಪವೂ ಭೇದವಿರುವುದಿಲ್ಲ. ಆದರೆ ಜ್ಞಾನಜ್ಞೇಯ ಜ್ಞಾತೃಭೇದರಹಿತನಾದ ಅದ್ವಿತೀಯನಾದ ಬ್ರಹ್ಮನನ್ನು ಬುದ್ಧನು ಹೇಳಲಿಲ್ಲ.

ಈರೀತಿಯಲ್ಲಿ ಜಗತ್ತು ಸತ್ವರಹಿತವೆಂದು ಇಬ್ಬರೂ ಒಪ್ಪಿಕೊಂಡಿರುವುದರಿಂದ ಈ ಶ್ಲೋಕ ವ್ಯಾಖ್ಯಾನದಲ್ಲಿ ಶಂಕರಾಚಾರ್ಯರು ತಮ್ಮನ್ನು ತಾವೇ ಖಂಡನೆಮಾಡಿಕೊಂಡಾಯಿತು.

ಪ್ರಶ್ನೆ—ಸ್ವಾಮಿ! ಅದು ಹೇಗೆ? ಜಗತ್ತು ಅಸತ್ಯವೆಂದು ಅದ್ವೈತಿಗಳು ಎಲ್ಲಿ ಹೇಳುತ್ತಾರೆ. ಜಗತ್ತು ಸದಸದ್ವಿಲಕ್ಷಣವು ಎಂದೇ ಅವರ ಸಿದ್ಧಾಂತವು.

ಉತ್ತರ—ಹೌದು! ಸತ್ತುಹೋದವನನ್ನು ವೈಕುಂಠಯಾತ್ರೆಯನ್ನು ಮಾಡಿದನು ಎಂದು ಮೃದುವಾಗಿ ಹೇಳುವುದರಿಂದ ಅವನು ಭೂಲೋಕದಲ್ಲಿ ಬದುಕಿರುತ್ತಾನೆ ಎಂದು ಅರ್ಥವು ಬರುವುದಿಲ್ಲ. ಉಪ್ಪು ಬೇಕು ಎಂದು ಕೇಳುವುದಕ್ಕೆ ಬದಲಾಗಿ ರಾತ್ರಿವೇಳೆಯಲ್ಲಿ ಕೆಲವರು ಸಕ್ಕರೆ ಬಡಿಸಬೇಕೆಂದು ಹೇಳುವರು; ಅದರಿಂದ ಉಪ್ಪಿಗೆ ಮಾಧುರ್ಯರಸವು ಪ್ರಾಪ್ತವಾಗುವುದಿಲ್ಲ. ಜಗತ್ತನ್ನು ನೀವು ಸತ್ಯವು, ಅಸತ್ಯವು, ಸದಸದಾತ್ಮಕವು, ಸದಸದ್ವಿಲಕ್ಷಣವು; ಘಟವು ಅಥವಾ

ಡಿತ್ಥ ಇವೇ ಮುಂತಾದ ಬೇಕಾದ **ಹೆಸರು**ಗಳಿಂದ ಕರೆಯಬಹುದು. "ನಹಿ ನಾಮ್ನಿ ವಿಪ್ರತಿಪತ್ತಿಃ" ಪದಾರ್ಥಗಳಿಗೆ ಹೆಸರನ್ನು ಇಡುವುದು ಸ್ವಲ್ಪಮಟ್ಟಿಗೆ ಶಾಸ್ತ್ರಕಾರರ ಅಧೀನವು. ಆದರೆ **ಪದಾರ್ಥಗಳು** ಬದಲಾಯಿಸಲಾರವು. ಈ ಜಗತ್ತು ಶುಕ್ತಿರಜತದಂತೆ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ ಎಂಬ ಲಕ್ಷಣವುಳ್ಳದ್ದು ಎಂದು ಅವರು ಒಪ್ಪಿರುತ್ತಾರೆ. ದೇಶ ಕಾಲ ಸಂಬಂಧವುಳ್ಳ ವಸ್ತುವಿಗೆ ಲೋಕದಲ್ಲಿ ಸತ್ (ಇರುವುದು) ಎಂದೂ, ಹಾಗೆ ಇರುವಂತೆ ತೋರಿದರೂ ಕೂಡ ಪರೀಕ್ಷೆಯಾದನಂತರ ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಇಲ್ಲದಿದ್ದರೆ ಆ ವಸ್ತುವನ್ನು 'ಅಸತ್' ಎಂತಲೂ ಲೋಕದಲ್ಲಿ ಕರೆಯುವರು. ಜಗತ್ತು 'ಅಸತ್' ಅಥವಾ "ಅಸತ್ಯವು" ಎಂದು ಹೇಳುವುದು ಆಸುರಮತವೆಂದು ಶ್ರೀಕೃಷ್ಣನು ನಿಂದಿಸಿರುವುದರಿಂದ ಅದ್ವೈತಿಗಳು ಹೇಳುವಂತೆ ಪ್ರಪಂಚವು ಪ್ರತೀತಿಕಾಲದಲ್ಲಿಯೂ ಇಲ್ಲ, ಹಿಂದೆಯೂ ಇರಲಿಲ್ಲ, ಮುಂದೂ ಇರಲಿಲ್ಲ ಎಂದು ನಾವು ಅಂಗೀಕರಿಸಕೂಡದು.

ಪ್ರಶ್ನೆ—ಸ್ವಾಮಿ! ಈಗ (ಪ್ರತೀತಿಕಾಲದಲ್ಲಿ) ಜಗತ್ತಿನಲ್ಲಿ "ಸತ್ತಾ" ಇಲ್ಲ ಎಂದು ಅದ್ವೈತಿಗಳು ಅಂಗೀಕರಿಸಿರುವರೇ ?

ಉತ್ತರ—ಹೌದು! ತ್ರೈಕಾಲಿಕ ನಿಷೇಧಪ್ರತಿಯೋಗಿತ್ವಂ ಮಿಥ್ಯಾತ್ವಂ" ಎಂದು ಅವರ ಪರಿಷ್ಕಾರವು. ಮೂರು ಕಾಲದಲ್ಲಿಯೂ ಇಲ್ಲ ಎಂಬ ಜ್ಞಾನಕ್ಕೆ ವಿಷಯವಾದುದು ಮಿಥ್ಯಾ ಎನ್ನಿಸುವುದು ಎಂದು ಇದರ ಅರ್ಥವು.

ಪ್ರಶ್ನೆ—ವ್ಯಾವಹಾರಿಕ ಸತ್ತಾವುಳ್ಳದ್ದು ಎಂದು ಹೇಳುವರಲ್ಲವೇ ?

ಉತ್ತರ—ನಾವು ಹಿಂದೆಯೇ ನಿರೂಪಿಸಿದೆವು. ಶಿಶುವು ಸತ್ತುಹೋಗಿದ್ದಾಗ ಶಿಶುವು ಏನಾದನೆಂದು ಪ್ರಶ್ನೆಮಾಡಲ್ಪಟ್ಟ ಒಬ್ಬಾನೊಬ್ಬ ಗೃಹಸ್ಥನು ಚಿರಂಜೀವಿಯು ತಣ್ಣಗಿರುವನು ಎಂದು ಉತ್ತರ ಕೊಟ್ಟನು. ಇದರಿಂದ ಮೃತ ಶಿಶುವಿಗೆ ಪ್ರಾಣಗಳು ಬರಲಾರವು. ಹಾಗೆಯೇ ಪ್ರಕೃತದಲ್ಲಿ ಅಜ್ಞಜನರಿಗೆ ಜಗತ್ತಿನಲ್ಲಿ "ಸತ್ವ"ವೇ ಇಲ್ಲವೆಂದು ಹೇಳಿದರೆ ಬಹಳ ಜುಗುಪ್ಸೆಯುಂಟಾಗಿ ಶಾಸ್ತ್ರದಲ್ಲಿ ದ್ವೇಷಬಂದೀತೆಂಬ ಶಂಕೆಯಿಂದ ಅದೇ ಅರ್ಥವನ್ನೇ ಗಂಭೀರವಾದ ರೀತಿಯಲ್ಲಿ "ವ್ಯಾವಹಾರಿಕಸತ್ತಾ ಉಂಟು" ಎಂದು ಅದ್ವೈತ ಗ್ರಂಥಕಾರರು ಹೇಳಿರುತ್ತಾರೆ. ಯಾತಕ್ಕೆಂದರೆ ಸತ್ತಾ ಎಂದರೆ ಇರೋಣವು; ವ್ಯಾವಹಾರಿಕ ಎಂದರೆ ಇಲ್ಲದೆ ಇರುವುದು ಎಂದು ಅರ್ಥವು. ತಥಾಚ, ಇಲ್ಲದೇ ಇರುವ ಸತ್ತಾ ಇಲ್ಲದೇ ಇರುವ ಇರೋಣವು= ಇಲ್ಲದೇ ಇರುವಿಕೆ= **ಅಸತ್ತು** ಎಂದು ಪ್ರಾಪ್ತ

ವಾಗುವುದರಿಂದ ಜಗತ್ತು ಅಸತ್ತು ಎಂದರೂ ವ್ಯಾವಹಾರಿಕ ಸತ್ತಾ ಉಳ್ಳದ್ದು ಎಂದರೂ ಒಂದೇ ಆಗುವುದು. ಶಿಶುವು ಸತ್ತನು ಎಂದರೂ ಕಳೆದುಹೋದ ಪ್ರಾಣವುಳ್ಳವನು ಎಂದರೂ ಒಂದೇ ಅರ್ಥವಾಗುವುದಷ್ಟೇ!

ಪ್ರಶ್ನೆ—ಹಾಗಾದರೆ ಘಟವು ಇರುತ್ತದೆ ಪಟವು ಇರುತ್ತದೆ ಎಂದು ನಾವು ತಿಳಿಯುವುದೆಲ್ಲಾ ಭ್ರಾಂತಿಯು!

ಉತ್ತರ—ಹೌದು! ಎಲ್ಲರೂ ಭ್ರಾಂತರೆಂದೇ ಹೇಳುವರು. ಜಗದ್ವಿಷಯದಲ್ಲಿ "ಸತ್ತಾ" ವಗಾಹಿಯಾದ (ಜಗತ್ತು ಇದೆ ಎಂದು ತಿಳಿಯುವ) ಎಲ್ಲಾ ಜ್ಞಾನವೂ ಅಪ್ರಮಾಣವೇ! ಕೆಲವರು ಮಾತ್ರ ಜಗದ್ವಿಷಯಕವಾದ ನಮ್ಮ ಜ್ಞಾನಗಳಿಗೆಲ್ಲಾ ವ್ಯಾವಹಾರಿಕ ಪ್ರಾಮಾಣ್ಯವುಂಟು ಎಂದು ಹೇಳುತ್ತಾರೆ. ಆದರೆ ವ್ಯಾವಹಾರಿಕ ಪ್ರಾಮಾಣ್ಯವೆಂದು ಅಪ್ರಾಮಾಣ್ಯಕ್ಕೇ ಅಜ್ಞಜನರ ಉದ್ದಿಶ್ಯವಾಗಿ ಇಡಲ್ಪಟ್ಟ ಬೇರೇ ಹೆಸರು.

ಪ್ರಶ್ನೆ—ಹಾಗಾದರೆ ವ್ಯಾವಹಾರಿಕ ಪ್ರಾಮಾಣ್ಯವೆಂದರೂ ಅಪ್ರಾಮಾಣ್ಯವೆಂದರೂ ಅರ್ಥಭೇದವು ಸ್ವಲ್ಪವೂ ಇಲ್ಲವೇ?

ಉತ್ತರ—ಅದ್ವೈತಗ್ರಂಥಕಾರರೇ ಈ ನಿರ್ಣಯವನ್ನು ಒಪ್ಪಿರುತ್ತಾರೆ.

ತಥಾಹಿ :—**ವೇದಾಂತಕಲ್ಪತರುಪರಿಮಳೇ**—

"ಅಹಂ ಪ್ರತ್ಯಯಸ್ಯ ಕರ್ತೃತ್ವಭೋಕ್ತೃತ್ವಾದಿ ವಿಷಯಸ್ಯಾತ್ಮನ್ಯದ್ವೈತ ವಾಕ್ಯಜಾತೇನ ಬಾಧೇತು ತನ್ಮೂಲಸ್ಯ ಪ್ರಮಾಣಸ್ಯ ನಕ್ವಚಿದಪಿಚಾರಿತಾರ್ಥ್ಯಂ । ನಚ ವ್ಯಾವಹಾರಿಕವಿಷಯಾಲಂಬನತಯಾ ತತ್ರೈವ ಚಾರಿತಾರ್ಥ್ಯಂ ಸ್ಯಾದಿತಿ ವಾಚ್ಯಂ । ವ್ಯಾವಹಾರಿಕ ವಿಷಯಸ್ಯ ಶುಕ್ತಿರೂಪ್ಯಾದಿವತ್ಕದಾ ಚಿದ್ಬಾಧ್ಯತ್ವಾಭ್ಯುಪಗಮಾ ದ್ಬಾಧ್ಯವಿಷಯೇಚ ವ್ಯಾವಹಾರಿಕಂ ಪ್ರಾಮಾಣ್ಯಮಿತಿವ್ಯವಹಾರಸ್ಯಾ ದ್ವೈತಪರಿಭಾಷಾಮಾತ್ರ ಸಿದ್ಧತ್ವಾದಿತ್ಯಾಶಂಕ್ಯ ನಿರ್ದೋಷತ್ವೇನ ಕ್ಲೃಪ್ತಶಾಸ್ತ್ರಸ್ಯೈವ ವಿಷಯಾಂತರ ಪ್ರದರ್ಶನೇನ ಚಾರಿತಾರ್ಥ್ಯ ಮುಪಪಾದನೀಯಂ ನತು ದೋಷಮೂಲಸ್ಯಾಹಂ ಪ್ರತ್ಯಯಸ್ಯತಸ್ಯ . . . ಭ್ರಾಂತಿತ್ವೋಪಪತ್ತೇ ರಿತಿ ವಿವೇಚನಾಯತಸ್ಯದೋಷಮೂಲತ್ವಂ ದರ್ಶಯಿತುಂ ಪ್ರವೃತ್ತಮುತ್ತರ ಗ್ರಂಥ ಮವತಾರಯತಿ—ಏವಂತಾವದಿತಿ."

ಇದರ ತಾತ್ಪರ್ಯವು—ವೇದಾಂತಕಲ್ಪತರು ಪರಿಮಳಕಾರರು ಹೇಳುತ್ತಾರೆ—"ಅಹಂಕರ್ತಾ, ಅಹಂಭೋಕ್ತಾ (ನಾನು ಕರ್ತನು; ನಾನು ಸುಖಿ

ದುಃಖಭೋಕ್ತೃವಾದ ಜೀವನು) ಇತ್ಯಾದಿ ಜ್ಞಾನಗಳಿಗೆ ವಿಷಯವಾದ ಕರ್ತೃತ್ವ ಭೋಕ್ತೃತ್ವವು ಸತ್ಯವಾದರೆ ಜೀವಚೈತನ್ಯವು ಬ್ರಹ್ಮವಾಗಲಾರದು. (ತತ್ವಮಸಿ ಮುಂತಾದ) ಅದ್ವೈತವಾಕ್ಯಗಳಾದರೋ ಜೀವನೇ ಬ್ರಹ್ಮನು ಎಂದು ಹೇಳು ವುವು. ಹೀಗೆ ನಾನು ಕರ್ತನು ಭೋಕ್ತನು ಎಂದು ಬೋಧಿಸುವ ಅನುಭವಕ್ಕೂ ಬ್ರಹ್ಮನು ನಿಷ್ಕ್ರಿಯನು ಚಿನ್ಮಾತ್ರನು ಇತ್ಯಾದಿ ರೀತಿಯಲ್ಲಿ ಬೋಧಿಸುವ ಅದ್ವೈತವಾಕ್ಯಗಳಿಗೂ ಪರಸ್ಪರ ವಿರೋಧ ಬಂದರೆ, ಇವೆರಡರಲ್ಲಿ ಯಾವುದು ಪ್ರಮಾಣವು, ಯಾವುದು ಅಪ್ರಮಾಣವು (ಸುಳ್ಳು ಹೇಳುವದು) ಎಂದು ಹೇಳ ಬೇಕು? ಅದ್ವೈತವಾಕ್ಯ ಸಮೂಹಗಳೇ ಪ್ರಬಲನೆಂದು ನಾವು ತೀರ್ಮಾನಮಾಡಿ ದರೆ, ಅಹಂಕರ್ತಾ ಭೋಕ್ತಾ ಇತ್ಯಾದಿ ಪ್ರತ್ಯಯಗಳಿಗೆ (ಜ್ಞಾನಗಳಿಗೆ) ವಿಷಯ ಗಳಾದ ಕರ್ತೃತ್ವ ಭೋಕ್ತೃತ್ವಾದಿಗಳು ಸರ್ವಥಾ ಸುಳ್ಳು ಎಂದು ಪ್ರಾಪ್ತವಾಗಿ, ಅಹಂಕರ್ತಾ ಭೋಕ್ತಾ ಇತ್ಯಾದಿ ಪ್ರತ್ಯಯಗಳಿಗೆ ಯಾವ ರೀತಿಯಾಗಿಯೂ ಸಾರ್ಥಕ್ಯವನ್ನು (ಪ್ರಾಮಾಣ್ಯವನ್ನು) ಹೇಳಿದಹಾಗಾಗಲಿಲ್ಲ. ಅಹಂಕರ್ತಾ ಭೋಕ್ತಾ ಎಂಬ ಪ್ರತ್ಯಯಗಳು ವ್ಯಾವಹಾರಿಕ ವಿಷಯಕಗಳು ಅಂದರೆ ವ್ಯಾವ ಹಾರಿಕ ಕರ್ತೃತ್ವಾದಿಗಳನ್ನು ಬೋಧಿಸುವುವು; ಅದ್ವೈತವಾಕ್ಯಗಳಾದರೋ ಪಾರಮಾರ್ಥಿಕ ನಿಷ್ಕ್ರಿಯತ್ವಾದಿಗಳನ್ನು ಬೋಧಿಸುವುವು; ಅಂತೂ ಉಭಯವೂ ಪ್ರಮಾಣಗಳೇ ಆಗಲಿ ಎಂದು ಹೇಳಬಹುದಲ್ಲಾ ಎಂದರೆ **ಅದೂ ಕೂಡು ವುದಿಲ್ಲ.** ಅಹಂಕರ್ತಾ ಭೋಕ್ತಾ ಇತ್ಯಾದಿ ಪ್ರತ್ಯಯ ವಿಷಯಗಳಾದ ಕರ್ತೃತ್ವ ಭೋಕ್ತೃತ್ವಾದಿಗಳು ವ್ಯಾವಹಾರಿಕಗಳು ಅಂದರೆ ಇಲ್ಲದೇ ಇರುವುವು ಎಂದೇ ಅರ್ಥವು; ಯಾತಕ್ಕೆಂದರೆ, ವ್ಯಾವಹಾರಿಕವಿಷಯಗಳಾದ ಕರ್ತೃತ್ವಾದಿಗಳು ಶುಕ್ತಿರೂಪ್ಯದಂತೆ ಯಾವಾಗಲಾದರೂ ಒಂದು ಕಾಲದಲ್ಲಿ **ಬಾಧ್ಯವಾಗುವುವು** (ಹಿಂದೂ ಇರಲಿಲ್ಲ; ಈಗಲೂ ಇಲ್ಲ, ಮುಂದೆಯೂ ಇರುವುದಿಲ್ಲ ಎಂಬ ಜ್ಞಾನಕ್ಕೆ ವಿಷಯವಾಗುವುವು) ಎಂದು ನಾವು ಒಪ್ಪಿಕೊಂಡಿರುವುದರಿಂದ ಬಾಧ್ಯವಾದ ಕರ್ತೃತ್ವಭೋಕ್ತೃತ್ವಾದಿಗಳ ವಿಷಯಕವಾದ ಜ್ಞಾನಗಳಿಗೆ ವ್ಯಾವಹಾರಿಕ ಪ್ರಾಮಾಣ್ಯವುಂಟು ಎಂದು ಹೇಳುವುದು **ನಾವು ಅದ್ವೈತಮತದವರು** ಮಾಡಿಕೊಂಡ **ಪರಿಭಾಷಾ** (ಅಪ್ರಮಾಣವಾದುದಕ್ಕೇ ವ್ಯಾವಹಾರಿಕ ಪ್ರಾಮಾಣ್ಯವೆಂದು ಹೆಸರು; ಇಲ್ಲದೇ ಇರುವ ಪದಾರ್ಥವನ್ನು ವ್ಯಾವಹಾರಿಕ ಸತ್ತಾ ಉಳ್ಳದ್ದುಎಂದು ಕರೆಯಬೇಕೆಂದು ಮಾಡಿರುವ **ಸಂಕೇತವು**) ಮಾತ್ರ ವಾಗುವುದೇ ಹೊರತು, ಕರ್ತೃತ್ವಭೋಕ್ತೃತ್ವವೆಂಬ ವಿಷಯಗಳಿಗೆ ಸತ್ವವಾಗಲೀ ಮತ್ತು ಅಹಂಕರ್ತಾ ಭೋಕ್ತಾ ಎಂಬ ಕರ್ತೃತ್ವ ಭೋಕ್ತೃತ್ವ ವಿಷಯಕ

ವಾದ ಜ್ಞಾನಗಳಿಗೆ ಪ್ರಾಮಾಣ್ಯವಾಗಲೀ ಪ್ರಾಪ್ತವಾಗಲಿಲ್ಲ. ಹೀಗೆ ಶಂಕಿಸಿಕೊಂಡು ವೇದಾಂತ ಕಲ್ಪತರುಕಾರರು “**ಹಾಗೆಯೇ ಆಗಿಕೊಂಡು ಹೋಗಲಿ!**” ನೀವು ಹೇಳಿದುದೆಲ್ಲಾ ನಿಜವೇ! ಆದರೆ ನಿರ್ದೋಷವಾದುದರಿಂದ ಅತ್ಯಂತ ಪ್ರಾಮಾಣಿಕವೆಂದು ಸಂಪ್ರತಿಪನ್ನವಾದ ಒಂದು ಶಾಸ್ತ್ರಕ್ಕೆ ಮತ್ತೊಂದರಿಂದ ಬಾಧ (ವಿರೋಧ) ಬಂದರೆ ಅದು ಸರ್ವಥಾ ಅಪ್ರಮಾಣವು (ಸುಳ್ಳು ಹೇಳುವುದು) ಎಂದು ಹೇಳಲಾಗುವುದಿಲ್ಲ,* ಅಂಥಾ ಸಂದರ್ಭದಲ್ಲಿ ಯಾವುದಾದರೂ ಅರ್ಥಾಂತರ ಕಲ್ಪನೆಯನ್ನು ಮಾಡಿ ಆ ಶಾಸ್ತ್ರಕ್ಕೆ ಸಾರ್ಥಕ್ಯವನ್ನು (ಬೇರೇ ಅರ್ಥದಲ್ಲಿ ಪ್ರಾಮಾಣ್ಯವನ್ನು) ಹೇಳಬೇಕು. ದೋಷಮೂಲವಾದ ಅಹಂಕರ್ತಾ ಭೋಕ್ತಾ ಇತ್ಯಾದಿ ಪ್ರತ್ಯಯಗಳಿಗೆ ನಿರ್ದುಷ್ಟವಾದ ಅದ್ವೈತ ವಾಕ್ಯಗಳಿಂದ ವಿರೋಧವು ಬಂದರೆ ನಾವು ಅರ್ಥಾಂತರವನ್ನು ಕಲ್ಪನೆಮಾಡಿ ಬೇರೆ ಗತಿಯನ್ನು ಹೇಳಬೇಕಾಗಿಲ್ಲ. ಅಂದರೆ ಅವು ಸರ್ವಥಾ ಅಪ್ರಾಮಾಣಿಕಗಳೇ; ಅವುಗಳಿಗೆ ವಿಷಯಗಳಾದ ಕರ್ತೃತ್ವಾದಿಗಳು ಸುಳ್ಳೇ. ಅಹಂಕರ್ತಾ ಭೋಕ್ತಾ ಇತ್ಯಾದಿ ಪ್ರತ್ಯಯಗಳಿಗೆ ಭ್ರಾಂತಿತ್ವವೇ ಯುಕ್ತಿಸಿದ್ಧವಾಗಿರುವುದು” ಎಂದು ಹೇಳಬೇಕಾಗಿ, ಅಹಂಕರ್ತಾ ಭೋಕ್ತಾ ಇತ್ಯಾದಿ ಪ್ರತ್ಯಯಗಳಿಗೆ ದೋಷಮೂಲತ್ವವನ್ನು ತೋರಿಸುವುದಕ್ಕಾಗಿ ಉತ್ತರಗ್ರಂಥವನ್ನು “ಪಸಂತಾಪತ್” ಇತ್ಯಾದಿ ವಾಕ್ಯಗಳಿಂದ ವೇದಾಂತ ಕಲ್ಪತರುಕಾರರು ಅವತರಿಸುತ್ತಾರೆ.”

ಈ ವಾಕ್ಯಗಳ ಪರ್ಯಾಲೋಚನೆಯಿಂದ ಮೂರು ಕಾಲದಲ್ಲಿಯೂ ಇಲ್ಲದೇ ಇರುವ ಪದಾರ್ಥವನ್ನೇ ವ್ಯಾವಹಾರಿಕ ಸತ್ತಾ ಉಳ್ಳದ್ದು ಎಂದು ಕರೆಯಬೇಕು ಎಂದು ಅದ್ವೈತ ಶಾಸ್ತ್ರದ ಪರಿಭಾಷಾ ಇರುತ್ತದೆ ಎಂದು ಅವರ ಮಾತಿನಿಂದಲೇ ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ಮತದ ಪ್ರಕಾರ ಪ್ರಪಂಚವೂ ಪ್ರಪಂಚಾಂತರ್ಗತವಾದ ಸಕಲ ವ್ಯವಹಾರಗಳೂ ಅತ್ಯಂತ ಸುಳ್ಳೇ! ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ. ಈ ಶಾಸ್ತ್ರದ ರೀತಿಯಿಂದ ನಾವು ಈ ಸಭೆಯಲ್ಲಿ ಉಪದೇಶ ಮಾಡುತ್ತಿರುವುದು ಸುಳ್ಳು, ನೀವು ಶ್ರವಣಮಾಡುತ್ತಿ

---

* “ಉದಿತೇಹೋತವ್ಯಂ” (ಉದಯಾನಂತರ ಹೋಮ ಮಾಡಬೇಕು) ಎಂಬ ನಿರ್ದುಷ್ಟ ಶಾಸ್ತ್ರಕ್ಕೆ “ಅನುದಿತೇಹೋತವ್ಯಂ” ಎಂಬ ಮತ್ತೊಂದು ನಿರ್ದುಷ್ಟ ವಾಕ್ಯದಿಂದ ವಿರೋಧವು ಬಂದರೆ ಉದಿತೇಹೋತವ್ಯಂ ಎಂಬ ಶಾಸ್ತ್ರವು ಅಪ್ರಮಾಣವು ಎಂದು ಹೇಳಕೂಡದು. ಆ ವಾಕ್ಯಕ್ಕೆ ಯಾವುದಾದರೂ ಒಂದು ವಿಷಯವನ್ನು ಕೊಟ್ಟು ವಿಕಲ್ಪೇನ ಮಾಡಬಹುದು ಎಂದು ಹೇಳಿ ಗತಿಯನ್ನು ಕಲ್ಪಿಸಬೇಕು.

ರುವುದು ಸುಳ್ಳು, ಈ ಸಭೆ, ನಮ್ಮ ವ್ಯಾಪಾರಗಳೇ ಮುಂತಾದ ಸಮಸ್ತವೂ ಇಲ್ಲವೇ ಇಲ್ಲ. ಈ ವಿಷಯವನ್ನೇ ಪದ್ಯರೂಪವಾಗಿ ಪೂರ್ವಿಕರು ವಿನೋದಮಾಡಿರುತ್ತಾರೆ.

ಮೃಗತೃಷ್ಣಾಂಭಸಿಸ್ನಾತಃ ಖಪುಷ್ಪಕೃತಶೇಖರಃ |
ಅಹೋವಂಧ್ಯಾಸುತೋಯಾತಿ ಶಶಶೃಂಗಧನುರ್ಧರಃ ||

ಅರ್ಥವು—ಮರೀಚಿಕಾ ಪ್ರವಾಹದಲ್ಲಿ ಸ್ನಾನಮಾಡಿ ಗಗನಾರವಿಂದ ರಚಿತವಾದ ಕಿರೀಟವನ್ನು ಶಿರಸ್ಸಿನಲ್ಲಿ ಧರಿಸಿ ಶಶಶೃಂಗದಿಂದ ಮಾಡಲ್ಪಟ್ಟ ಧನುಸ್ಸನ್ನು ಧಾರಣೆಮಾಡಿ ಅಗೋ! ವೀರಾಗ್ರಣಿಯಾದ ವಂಧ್ಯಾಪುತ್ರನು ರಣರಂಗಕ್ಕೆ ಬರುತ್ತಿದ್ದಾನೆ.

ಜಗನ್ಮಿಥ್ಯಾತ್ವವು ಅತ್ಯಂತ ನಿರ್ದುಷ್ಟವಾದ ಶ್ರೀಕೃಷ್ಣನ ಪ್ರತ್ಯಕ್ಷ ವಿರೋಧದಿಂದಲೂ, "ಪಶ್ಯಾಮಿದೇವಾಂಸ್ತವದೇವದೇಹೇ" ಎಂದು ಸ್ತುತಿಸುವ ಬ್ರಹ್ಮಾಪರೋಕ್ಷಜ್ಞಾನಿಯಾದ ಅರ್ಜುನನ ನಿರ್ದುಷ್ಟಪ್ರತ್ಯಕ್ಷ ವಿರೋಧದಿಂದಲೂ ಪರಾಹತವಾಗಿರುತ್ತದೆ. ಪರಬ್ರಹ್ಮನಾದ ಶ್ರೀಕೃಷ್ಣನ ಪ್ರತ್ಯಕ್ಷವೂ ಮತ್ತು "ಅನಘನೆಂದು" ಕೃಷ್ಣನಿಂದ ಕರೆಯಲ್ಪಟ್ಟು, ಆತನ ಪರಮಾನುಗ್ರಹದಿಂದ ಜ್ಞಾನಿಯಾದ, ಅರ್ಜುನನ ಪ್ರತ್ಯಕ್ಷವೂ ಭ್ರಾಂತಿರೂಪವೆಂದು ಹೇಳುವುದು ಬಹು ಸಾಹಸದ ಪ್ರಯತ್ನವಿರುತ್ತದೆ. ಮತ್ತು ಜಗತ್ತು ಮಿಥ್ಯಾ, ಪ್ರತ್ಯಕ್ಷ ಸಾಮಾನ್ಯವೂ ಭ್ರಾಂತಿರೂಪವು ಎಂದು ಹೇಳಿದರೆ ಅಪ್ರಾಮಾಣ್ಯಕ್ಕೆ ಸ್ವತಸ್ತ್ವವನ್ನು ಹೇಳುವ ಬೌದ್ಧರ ಮತವನ್ನೇ ಅಂಗೀಕರಿಸಿದಂತಾಗುವುದು.

iii

ಪ್ರಶ್ನೆ—" ಯೋಮಾಮೇವಮಸಂಮೂಢೋಜಾನಾತಿ ಪುರುಷೋತ್ತಮಂ ಸಸರ್ವವಿತ್ ||" ಎಂದು ಹದಿನೈದನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣನು ಹೇಳಿರುತ್ತಾನೆ. ಪುರುಷೋತ್ತಮನನ್ನು ತಿಳಿದವರು ಸರ್ವವನ್ನೂ ತಿಳಿದವರು ಎಂದು ಇದರ ಅರ್ಥವು. ಇದರಿಂದ ಪುರುಷೋತ್ತಮನೇ ಸರ್ವವು; ಪುರುಷೋತ್ತಮಭಿನ್ನವಾದ ಜಗತ್ತು ಅಸತ್ಯವು ಎಂದು ಅರ್ಥವಾಗುವುದಿಲ್ಲವೇ?

ಉತ್ತರ—ಶ್ರೀ ಶ್ರೀಗಳವರು—ಪುರುಷೋತ್ತಮನು ಜಗದಭಿನ್ನನೆಂದಾಗಲೀ, ಪುರುಷೋತ್ತಮಭಿನ್ನವಾದ ಜಗತ್ತು ಮಿಥ್ಯಾ ಎಂದಾಗಲೀ ಈ ವಾಕ್ಯಕ್ಕೆ ಅರ್ಥವಾಗುವುದಿಲ್ಲ. ಯಾತಕ್ಕೆಂದರೆ "ಯಾಮಾಮೇವ ಮಸಂಮೂಢಃ" ಎಂದು ಶ್ರೀ ಕೃಷ್ಣನು ನನ್ನನ್ನು **ಹೀಗೆ** ಅಂದರೆ ಪೂರ್ವೋಕ್ತರೀತಿಯಲ್ಲಿ, **ಉತ್ತಮಃ**

ಪುರುಷಸ್ತ್ವನ್ಯಃ ಎಂದರೆ ನಾನು ಕ್ಷರಾಕ್ಷರ ಪುರುಷರಿಗಿಂತ ಭಿನ್ನನು ಮತ್ತು ಉತ್ತಮನು ಎಂದು ತಿಳಿದವನು ಸರ್ವವನ್ನೂ ತಿಳಿದಂತಾಗುವುದು ಎಂದು ಹೇಳಿರುವುದರಿಂದ 1. ಇದೇ ಸರ್ವಶಾಸ್ತ್ರಾರ್ಥದ ಮುಖ್ಯಸಾರವಾದುದರಿಂದ ಇದನ್ನು ತಿಳಿದವನು ಸರ್ವವನ್ನೂ ತಿಳಿದಂತೆಯೇ ಆಯಿತು ಎಂದು ಅವನ ಅಭಿಪ್ರಾಯವಿರುತ್ತದೆ. 2. ಅಥವಾ ಈ ಜ್ಞಾನಫಲದಲ್ಲಿಯೇ ಇತರ ಜಗದ್ವಿಷಯಕಜ್ಞಾನದಿಂದ ಆಗುವ ಫಲಗಳೆಲ್ಲವೂ ಅಂತರ್ಭೂತವಾಗಿವೆ ಎಂದು ಅರ್ಥವಾಗುವುದು. ಈ ಅರ್ಥವೇ ಶ್ರೀ ಕೃಷ್ಣನಿಗೆ ಬಹಳ ಹೃದ್ಯವಾಗಿರುವುದೆಂದು ಎರಡನೆಯ ಮತ್ತು ಎಂಟನೆಯ ಅಧ್ಯಾಯದ ಅವನ ಮಾತುಗಳಿಂದಲೇ ತಿಳಿದು ಬರುವುದು :—

ಯಾವಾನರ್ಥ ಉದಪಾನೇಸರ್ವತಸ್ಸಂಪ್ಲುತೋದಕೇ ।
ತಾವಾ೯ಸರ್ವೇಷುವೇದೇಷು ಬ್ರಾಹ್ಮಣಸ್ಯವಿಜಾನತಃ ॥—(2. 46.)

ಭಾವಿ, ಹಳ್ಳ, ಕುಂಟೆಯೇ ಮೊದಲಾದ ಸಣ್ಣ ಜಲಾಶಯಗಳಲ್ಲಿ ಏನು (ಸ್ನಾನಪಾನಾದಿ ರೂಪ) ಪ್ರಯೋಜನವು ಆಗುತ್ತದೆಯೋ, ಆ ಪ್ರಯೋಜನವು ಸಮೃದ್ಧಜಲವುಳ್ಳ ಗಂಗಾ, ಕಾವೇರ್ಯಾದಿ ಮಹಾಜಲಾಶಯಗಳಲ್ಲಿ ಹೇಗೆ ಅಂತರ್ಭೂತವಾಗಿದೆಯೋ, ಹಾಗೆಯೇ ಸರ್ವ ವೇದೋಕ್ತ ಕಾಮ್ಯಕರ್ಮಗಳನ್ನು ಮಾಡುವವರಿಗೆ ಪ್ರಾಪ್ತವಾಗುವ ಸ್ವರ್ಗಾದಿ (ಸುಖವು) ಫಲಗಳು ಪರಬ್ರಹ್ಮನನ್ನು ಸಾಕ್ಷಾತ್ತಾಗಿ ನೋಡುವ ಅಪರೋಕ್ಷಜ್ಞಾನಿಯ ಫಲದಲ್ಲಿ (ಜ್ಞಾನಜನ್ಯ ಮೋಕ್ಷಸುಖದಲ್ಲಿ) ಅಂತರ್ಭವಿಸುತ್ತವೆ. ಏವಂಚ, ಪುರುಷೋತ್ತಮನ ಜ್ಞಾನದಿಂದಾಗುವ ಫಲದಲ್ಲಿ ಇತರ ಸರ್ವ ಜಗದ್ಜ್ಞಾನದಿಂದಾಗುವ ಫಲವೆಲ್ಲವೂ ಅಡಗಿಹೋಗಿದೆ ಎಂದು ಅರ್ಥವಾಗುವುದು. ಪುನಃ ಎಂಟನೆಯ ಅಧ್ಯಾಯದಲ್ಲಿಯೂ ಹೀಗೆಯೇ ಹೇಳಲ್ಪಟ್ಟಿರುತ್ತದೆ.

ವೇದೇಷುಯಜ್ಞೇಷು ತಪಸ್ಸುಚೈವ ದಾನೇಷುಯತ್ಪುಣ್ಯಫಲಂ ಪ್ರದಿಷ್ಟಂ ।
ಅತ್ಯೇತಿತತ್ಸರ್ವಮಿದಂ ವಿದಿತ್ವಾ ಯೋಗೀ ಪರಂಸ್ಥಾನಮುಪೈತಿ ಚಾದ್ಯಂ ॥——(8. 28.)

ಇದರ ಅರ್ಥವು—ಪೂರ್ವೋಕ್ತಜ್ಞಾನಿಯು ಭಗವಂತನ ಸ್ವರೂಪವನ್ನೂ ಆತನ ಸೃಷ್ಟ್ಯಾದಿ ಕರ್ತೃತ್ವಗಳನ್ನೂ, ಉತ್ಕ್ರಾಂತಿ ಪ್ರಕಾರ ಮಾರ್ಗಾದಿಗ

ಳನ್ನೂ ತಿಳಿದವನಾಗಿ, ಸಕಲ ವೇದಾಧ್ಯಯನ ಮಾಡುವುದರಿಂದಾಗುವ ಪುಣ್ಯವನ್ನೂ, ಜ್ಯೋತಿಷ್ಟೋಮಾದಿ ಯಾಗಗಳನ್ನು ಆಚರಿಸುವುದರಿಂದಾಗುವ ಪುಣ್ಯವನ್ನೂ, ಕೃಚ್ಛ್ರಚಾಂದ್ರಾಯಣಾದಿ ತಪಸ್ಸನ್ನು ಆಚರಿಸುವುದರಿಂದಾಗುವ ಪುಣ್ಯವನ್ನೂ ಮತ್ತು ವಿಧ್ಯುಕ್ತರೀತಿಯಲ್ಲಿ ಸತ್ಪಾತ್ರದಾನದಿಂದಾಗುವ ಪುಣ್ಯವನ್ನೂ ಅತಿಕ್ರಮಿಸುತ್ತಾನೆ. (ಅಂದರೆ, ಅಧ್ಯಯನ, ಯಜ್ಞ, ತಪಸ್ಸು, ದಾನಗಳಿಂದಾಗುವ ಪುಣ್ಯಫಲಗಳೆಲ್ಲಕ್ಕಿಂತಲೂ ಜ್ಞಾನಿಯು ತನ್ನ ಜ್ಞಾನಪ್ರಭಾವದಿಂದಲೇ ಅಧಿಕವಾದ ಪುಣ್ಯವನ್ನು ಸಂಪಾದಿಸುತ್ತಾನೆ ಎಂದರ್ಥವು.) ಮತ್ತು ಶಾಶ್ವತವಾದ ಮುಕ್ತಿಸ್ಥಾನವನ್ನೂ ಹೊಂದುತ್ತಾನೆ.

ಈ ಸಮಾಖ್ಯಾ ವಾಕ್ಯಗಳ ಬಲದಿಂದ ಪುರುಷೋತ್ತಮನನ್ನು ಈ ರೀತಿ ತಿಳಿದವರು ಸರ್ವವನ್ನೂ ತಿಳಿದವರು; ಎಂಬುದಕ್ಕೆ ಸರ್ವ ಜ್ಞಾನದ ಫಲವೂ ಪುರುಷೋತ್ತಮ ವಿಷಯಕ ಜ್ಞಾನದ ಫಲದಲ್ಲಿ ಅಂತರ್ಭಾವವನ್ನು ಹೊಂದಿರುತ್ತದೆ ಎಂದೇ ಅರ್ಥಮಾಡಬೇಕು. 3. ಅಥವಾ ಪ್ರಧಾನನಾದ ಪುರುಷೋತ್ತಮನನ್ನು ತಿಳಿದ ಮೇಲೆ ಸರ್ವವನ್ನೂ ತಿಳಿದ ಪ್ರಾಯವೇ ಎಂಬ ಅರ್ಥವನ್ನಾದರೂ ಮಾಡಬಹುದು. ಈ ರಾಜಧಾನಿಗೆ ಪ್ರಧಾನರು ಮಹಾರಾಜರು. ಅವರನ್ನು ತಿಳಿದ ಮೇಲೆ ಅವರ ಅಧೀನರಾದ ಇತರರನ್ನು ತಿಳಿದಂತೆಯೇ ಆಯಿತೆಂದು ಲೋಕವ್ಯವಹಾರವಿರುವುದು. ಹೀಗೆ ಈ ಶ್ಲೋಕಕ್ಕೆ ಅನೇಕ ಅರ್ಥಗಳು ಸಂಭವಿಸುತ್ತಿರುವಲ್ಲಿ ಇವುಗಳೆಲ್ಲವನ್ನೂ ಬಿಟ್ಟು ಸರ್ವ ಪ್ರಮಾಣಗಳಿಗೂ ವಿರುದ್ಧವಾದ ಪುರುಷೋತ್ತಮಾತಿರಿಕ್ತ ಪ್ರಪಂಚವೆಲ್ಲವೂ ಮಿಥ್ಯಾ ಎಂದು ಕಲ್ಪನೆಮಾಡುವುದು ಸರ್ವಥಾ ಉಚಿತವಾದುದಲ್ಲ.

ಮತ್ತು ಇದೇ ಪ್ರಕರಣಗಳಲ್ಲಿ "**ಯೋಗೀಪರಂಸ್ಥಾನ ಮುಪೈತಿ ಚಾದ್ಯಂ**" ಎಂದೂ "**ಶಾಶ್ವತಂ ಪದಮವ್ಯಯಂ**" ಎಂದೂ "**ಸ್ಥಾನಂ ಪ್ರಾಪ್ಸ್ಯಸಿಶಾಶ್ವತಂ**" ಎಂದೂ ಮುಕ್ತಲೋಕವು ನಿತ್ಯವೆಂದು ಹೇಳಿ "**ಪ್ರತಿಷ್ಠಾಹಮಮೃತಸ್ಯ**" ಎಂಬ ವಾಕ್ಯದಿಂದ ನಿತ್ಯವಾದ ಮುಕ್ತಲೋಕಗಳಿಗೂ ಮತ್ತು ಮುಕ್ತಜೀವರಿಗೂ ನಾನು ನಿಯಾಮಕನೆಂದು ಸಾಕ್ಷಾಚ್ಛ್ರೀಕೃಷ್ಣನು ಹೇಳುತ್ತಿರುವಾಗಲೇ, ಅವನ ವ್ಯತಿರಿಕ್ತವಾಗಿ ಸಕಲ ಪ್ರಪಂಚವೂ ಸುಳ್ಳೆಂದು ಹೇಳುವುದು ಭಯಂಕರವಾದ ಪ್ರಮಾಣಗಳ ಅತಿಕ್ರಮವಿರುತ್ತದೆ. ಕಿಂಚ "ಸರ್ವಸ್ಯ ಧಾತಾರಂ ಅನುಸ್ಮರೇದ್ಯಃ ಪರಂಪುರುಷಮುಪೈತಿ ದಿವ್ಯಂ" ಮತ್ತು "ಸರ್ವಮಿದಂ ವಿದಿತ್ವಾಪರಂಸ್ಥಾನ ಮುಪೈತಿಚಾದ್ಯಂ" ಎಂಬ ಶ್ರೀ ಕೃಷ್ಣನ ವಾಕ್ಯಗ

ಳಿಂದ ಪರಮಾತ್ಮನು ಸರ್ವಕ್ಕೂ ಧಾರಕನು ಮತ್ತು ಪೋಷಕನು ಎಂದು ಧ್ಯಾನ ಮಾಡುವವನೇ ಪರಮ ಪುರುಷನನ್ನು ಹೊಂದುವನು; ಅಧಿಯಜ್ಞಾದಿರೂಪಿಯೂ ಮತ್ತು ಸೃಷ್ಟ್ಯಾದಿ ಕರ್ತನು ಶ್ರೀ ಹರಿಯು ಎಂದು ತಿಳಿದವನೇ ಸನಾತನವಾದ ಪರಂಧಾಮವನ್ನು ಹೊಂದುವನು (ಮುಕ್ತನಾಗುವನು) ಎಂದು ತಿಳಿದುಬರುವುದರಿಂದ, ಮೋಕ್ಷಾಪೇಕ್ಷಿಗಳಾದ ಸರ್ವರೂ, ಜಗತ್ತು **ಇರುವುದು** ಅದಕ್ಕೆ ಶ್ರೀ ಕೃಷ್ಣನು ಸೃಷ್ಟ್ಯಾದಿಕರ್ತನು ಎಂದು ಚಿಂತಿಸಬೇಕೇ ಹೊರತು ಜಗತ್ತು ಇಲ್ಲವೇ ಇಲ್ಲ ಎಂದು ಹೇಳಕೂಡದು; ಯಾತಕ್ಕೆಂದರೆ ಈ ಶ್ಲೋಕಗಳಿಂದ ಜಗನ್ಮಿಥ್ಯಾತ್ವ ಜ್ಞಾನವು ಮೋಕ್ಷೋಪಯೋಗಿಯಲ್ಲವು ಎಂದು ಸಿದ್ಧವಾಗುವುದು. ಮತ್ತು ಜಗತ್ತು ಮಿಥ್ಯಾ ಎಂದು ವಾಕ್ಯೋಚ್ಚಾರಣಮಾಡುವಾಗಲೇ ನಿರೀಶ್ವರವಾದಕ್ಕೆ ಕಾಲು ಚಾಚಿದಂತಾಯಿತು. ಜಗತ್ತು ಇದ್ದರಲ್ಲವೇ ಅದರ ಸೃಷ್ಟ್ಯರ್ಥವಾಗಿ ಒಬ್ಬ ಈಶ್ವರನು ಬೇಕು. ಶುಕ್ತಿರೂಪ್ಯದಂತೆ ಜಗತ್ತೇ ಇಲ್ಲದ ಮೇಲೆ ಅದನ್ನು ಸೃಷ್ಟಿಸುವ, ಮತ್ತು ಪಾಲಿಸುವ ಪುರುಷನೆಲ್ಲಿಂದ ಬಂದಾನು? ಆದುದರಿಂದ ಪ್ರಪಂಚಮಿಥ್ಯಾತ್ವವನ್ನು ಪ್ರತಿಪಾದನೆಮಾಡುವವನು ಒಂದೇ ವಾಗ್ವಜ್ರದಿಂದ ಜಗಜ್ಜನ್ಮಾದಿ ಕಾರಣತ್ವರೂಪಮಹಿಮೋಪೇತನಾದ ಪರಮೇಶ್ವರನ ಶಿರಸ್ಸನ್ನು ನೆಲದಲ್ಲಿ ಕೆಡಗುವುದಕ್ಕೆ ಯತ್ನಿಸಿದಂತಾಯಿತು. ಆದರೆ ಈ ಮಹದತಿಕ್ರಮವು ಶ್ರೀ ಕೃಷ್ಣನ ಅತ್ಯಂತ ಕೋಪಕ್ಕೆ ಪಾತ್ರವಾದುದೆಂದು "ಅಸತ್ಯಮಪ್ರತಿಷ್ಠಂತೇ ಜಗದಾಹುರನೀಶ್ವರಂ" ಎಂಬ ಶ್ಲೋಕದನಂತರ ಪ್ರಾಪ್ತವಾಗುವ ಫಲಕಥನ ಪರವಾಕ್ಯಗಳಿಂದ ತಿಳಿದುಬರುತ್ತದೆ.

ಏತಾಂದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯಜಗತೋಽಹಿತಾಃ ॥—(16. 9.)

ಇದರ ಅರ್ಥವು—ಅಸುರರು ಜಗತ್ತು ಸತ್ವರಹಿತವಾದುದು; ಆದುದರಿಂದಲೇ ಪಾಲಕರಹಿತವಾದುದು; ಮತ್ತು ಸ್ವಾಮಿಯಾದ ಈಶ್ವರರಹಿತವೆಂದು ಹೇಳುತ್ತಾರೆ. ಇಂಥಾ ವಿಪರೀತ ಜ್ಞಾನವನ್ನು ಆಶ್ರಯಿಸಿ ದುಷ್ಟಚಿತ್ತರೂ, ಅಲ್ಪಬುದ್ಧಿಗಳೂ ಆಗಿ, ಘೋರವಾದ ಕರ್ಮದಲ್ಲಿ ನಿರತರೂ ಆದ, ಈ ಪ್ರಪಂಚದ ಶತ್ರುಗಳು (ಪ್ರಪಂಚವು ಅಸತ್ಯವೆನ್ನುವುದರಿಂದಲೂ ಪ್ರಪಂಚದ ಶತ್ರುಗಳು) ತಮ್ಮ ನಾಶಾರ್ಥವಾಗಿಯೇ (ಪಾಪಸಂಪಾದನ ದ್ವಾರಾ ನರಕವನ್ನು ಹೊಂದುವುದಕ್ಕೆ) ಲೋಕದಲ್ಲಿ ಹುಟ್ಟುತ್ತಾರೆ. ಶ್ರೀಕೃಷ್ಣನು ಇಂಥಾ ಘೋರ ಫಲವನ್ನು ಹೇಳಿರುವುದರಿಂದ ಭಗವತ್ಕೋಪಭೀರುಗಳಾದ ಸರ್ವಸಜ್ಜನರೂ ಭಗವಂತನ ಸೃಷ್ಟ್ಯಾದಿ

ಮಹದೈಶ್ವರ್ಯಗಳಿಗೆ ಭಂಜಕವಾದ ಪ್ರಪಂಚಕ್ಕೆ ಮಿಥ್ಯಾತ್ವವನ್ನು ಪ್ರತಿಪಾದನೆ ಮಾಡುವ ತತ್ವದಲ್ಲಿ ಮನಸ್ಸು ಕೊಡದೇ ಸತ್ಯವಾದ ಮತ್ತು ಪ್ರವಾಹ ರೂಪೇಣ ನಿತ್ಯವಾದ ಈ ಸಕಲ ಜಗತ್ತಿಗೂ ತನ್ನ ಅಪ್ರತಿಹತ ಮಹಚ್ಛಕ್ತಿಯಿಂದ ಒಬ್ಬನೇ ನಿಯಮಕನಾದ ಶ್ರೀಕೃಷ್ಣನನ್ನು ಸರ್ವಭಾವೇನ (ಪಿತೃತ್ವೇನ, ಸ್ವಾಮಿತ್ವೇನ, ಸುಹೃತ್ವೇನ, ಬಂಧುತ್ವೇನ, ಸಖಿತ್ವೇನ, ಗತಿತ್ವೇನ) ನಂಬಿ ಶರಣುಹೊಂದಬೇಕು.

III

ಜೀವಬ್ರಹ್ಮರ ಭೇದಸಮರ್ಥನವು.

24 ರಿಂದ 31—7—1930 ರಲ್ಲಿ.

ಪ್ರಾಶ್ನಿಕರು—**ಧರ್ಮಾಧಿಕಾರಿಗಳು ವಿದ್ವಾಂಸರು ಮತ್ತು ವಿದ್ಯಾರ್ಥಿಗಳು.**

ಪ್ರಶ್ನೆ—ಸ್ವಾಮಿ! ಸತ್ಯವಾದ ಜಗತ್ತಿಗೆ ಸರ್ವೋತ್ತಮನಾದ ವಿಷ್ಣುವು ನಿಯಾಮಕನೆಂದು ಇದುವರೆವಿಗೆ ತಮ್ಮಿಂದ ನಿರೂಪಿತವಾಯಿತು. ಈ ದಿವಸ **"ತತ್ವತೋ ಭಿನ್ನಾ ಜೀವಗಣಾಃ"** ಎಂಬ ತಮ್ಮಿಂದ ಉದಾಹೃತವಾದ ಶ್ಲೋಕಭಾಗದ ವಿಷಯದಲ್ಲಿ ಗೀತಾವಾಕ್ಯಗಳ ಸಮ್ಮತಿಯನ್ನು ಕೊಟ್ಟು ವಿಶದವಾಗಿ ಉಪನ್ಯಾಸಮಾಡಬೇಕು. ಅದ್ವೈತ ಮತದಲ್ಲಿ ಭೇದವೆಂಬ ಪದಾರ್ಥವೇ ಇರುವುದಿಲ್ಲ. ಭೇದವು ಮಿಥ್ಯಾಭೂತವಾದುದು. ಜೀವ ಚೈತನ್ಯವು ಪರಬ್ರಹ್ಮನೇ ಆಗಿರುವುದು. ಭಾಸ್ಕರ ಮತದಲ್ಲಿ ಜೀವಜೀವರಿಗಾಗಲೀ, ಜೀವ ಪರಮಾತ್ಮನಿಗಾಗಲೀ ಭೇದವು ಕೇವಲ ಉಪಾಧಿನಿರ್ಮಿತವಾದುದು. ಉಪಾಧಿಗಳು ನಾಶವಾದನಂತರ ಭೇದವು ನಾಶವಾಗಿ ಅತ್ಯಂತಾಭೇದವೇ ಪ್ರಾಪ್ತವಾಗುವುದು. ಮತ್ತು ಅನೇಕ ಪಾಶ್ಚಾತ್ಯತತ್ವಜ್ಞರು ಜೀವರುಗಳು ಪರಬ್ರಹ್ಮನ ಸಾಕ್ಷಾದಂಶಗಳಾಗಿರುವುದರಿಂದ ಜೀವಬ್ರಹ್ಮರಿಗೆ ಭೇದವು ಸರ್ವಥಾ ಇರುವುದಿಲ್ಲವೆಂದು ನಿಶ್ಚಯಿಸಿರುತ್ತಾರೆ. ಜೀವಬ್ರಹ್ಮರ ಅಭೇದವು ಪ್ರಾಮಾಣಿಕವಾದರೆ ಬಹುದಿನಸ ಉಪನ್ಯಾಸಗಳಲ್ಲಿ ತಮ್ಮಿಂದ ಸ್ಥಾಪಿತವಾದ ವಿಷ್ಣುಸರ್ವೋತ್ತಮತ್ವವು ಸಿಡಿಲಿನ ಘಾತದಿಂದ ನೆಲಕ್ಕೆ ಉರುಳುವ ವೃಕ್ಷದಂತೆ ಭಗ್ನವಾಗಿ ಬೀಳುವುದು. ಹೇಗೆಂದರೆ, ನಾರಾಯಣನೇ ಪರಬ್ರಹ್ಮನು; ಆತನೇ ಸರ್ವೋತ್ತಮವಸ್ತುವು ಎಂದು ತಮ್ಮಿಂದ ನಿರೂಪಿತವಾಯಿತು. ಆದರೆ ಸರ್ವಜೀವರುಗಳೂ ಪರಬ್ರಹ್ಮನಿಂದ ಅಭಿನ್ನರಾದರೆ, ಒಬ್ಬನು ಉತ್ತಮನು ಮತ್ತೊಬ್ಬನು ಅಧಮನು ಎಂಬ ವ್ಯವಸ್ಥೆಗೇ ಅವಕಾಶವಿಲ್ಲ. ಅತ್ಯಂತ ಭಿನ್ನರಾದ ಇಬ್ಬರು ಚೇತನರಿದ್ದರೇನೇ ಸ್ವಾಮಿ ಭೃತ್ಯನ್ಯಾಯವೂ, ನಿಯಮ್ಯನಿಯಾಮಕಭಾವವೂ ಸಂಭವಿಸುವುದು; ಒಬ್ಬನು ಉತ್ತಮನು ಮತ್ತೊಬ್ಬನು ಅವರನು ಎಂಬ ವ್ಯವಸ್ಥೆಯೂ

ನ್ಯಾಯಪ್ರಾಪ್ತವಾಗುವುದು. ಅತ್ಯಂತಾಭಿನ್ನರಾದ ಅನೇಕ ಜೀವರುಗಳು ಇರುವ ದಾದರೆ ವಿಷ್ಣುವು ಒಬ್ಬನೇ ಸರ್ವೋತ್ತಮನೆಂದು ಪ್ರತಿಪಾದನೆಮಾಡುವುದು ಕಟ್ಟುಕಥೆಗಳಿಗೆ ಉಚಿತವಾದ ವಿನೋದೋಕ್ತಿಯಾಗುವುದೇ ಹೊರತು ಶಾಸ್ತ್ರಾರ್ಥ ವಾಗಲಾರದು. "ಸ್ವಮೂರ್ತಿಗಣಮಧ್ಯಗಃ" ಎಂದು ಹೇಳಿರುವಂತೆ ತಾನೇ ಒಂದು ರೂಪವಿಶೇಷದಿಂದ ಮಧ್ಯದಲ್ಲಿ ಸಿಂಹಾಸನಾರೂಢನಾಗಿ ತನ್ನ ಇತರ ರೂಪ ವಿಶೇಷಗಳಿಂದಲೇ ಆರಾಧಿತನಾಗಿ ಸರ್ವೋತ್ಕೃಷ್ಟನೆಂದು ಸ್ತುತ್ಯನಾಸನಾದ ವಿಷ್ಣುವಿಗೆ ತನ್ನ ಇತರರೂಪಾಪೇಕ್ಷೆಯಾ ಪ್ರಾಪ್ತವಾದ ಉತ್ತಮತ್ವವು ವಾಸ್ತವ ವಾದುದಲ್ಲ. ಮತ್ತು ಕೇವಲ ಅಜ್ಞಜನಮೋಹಕವಾದ ಪ್ರದರ್ಶನವಾಗಿರುತ್ತದೆ. ಹಾಗೆಯೇ ಸರ್ವಚೇತನರೂ ನಾರಾಯಣನಿಂದ ಅಭಿನ್ನರಾದರೆ, ನಾರಾಯಣನು ಮಾತ್ರ ಸರ್ವೋತ್ತಮನು : ಇತರ ಚೇತನರು ಅವನ ಭೃತ್ಯರು ಎಂಬ ತಮ್ಮ ಉಪ ಪಾದನೆಯು ವಿನೋದೋಕ್ತಿಗೆ ಸದೃಶವಾಗುವುದು. ಮತ್ತು, ಕೆಲವರು ಏಕಜೀವ ವಾದಿಗಳು ಜೀವಬಾಹುಳ್ಯವನ್ನೇ ಒಪ್ಪದಿರುವುದರಿಂದ ಜೀವಭೇದವನ್ನು ಹ್ಯಾಗೆ ತಾನೇ ಒಪ್ಪುವರು? ಆದುದರಿಂದ ಜೀವಬ್ರಹ್ಮ ಭೇದವನ್ನೂ ಜೀವಜೀವ ಭೇದ ವನ್ನೂ ತಮ್ಮಿಂದ ಪ್ರತಿಜ್ಞಾತವಾದ ರೀತಿಯಲ್ಲಿ ಕೇವಲ ಭಗವದ್ಗೀತೆಯ ವಾಕ್ಯ ಗಳ ಆಧಾರದಿಂದಲೇ ಸಾವಕಾಶವಾಗಿ ನಿರೂಪಿಸಬೇಕು.

ಉತ್ತರ—ಶ್ರೀ ಶ್ರೀಗಳವರು—ಕೌರವ ಪಾಂಡವ ಸೇನಾಮಧ್ಯಪ್ರದೇಶ ದಲ್ಲಿ ಸ್ಥಿತನಾದ, ಕೌರವಸೈನ್ಯ ವಿದಾರಕನಾದ ಶ್ರೀಕೃಷ್ಣನ ವಾಕ್ಯಗಳು ಜೀವ ಬ್ರಹ್ಮರ ಅಭೇದವೆಂಬ ಶತ್ರುಹೃದಯವನ್ನು ಭೇದಿಸುವ ಯುಕ್ತಿಗಳೆಂಬ ವಿಷದಿಗ್ಧ ವಾದ ಅಗ್ರಭಾಗಗಳುಳ್ಳ ತೀಕ್ಷ್ಣವಾದ ನಾರಾಚಗಳಾಗಿರುತ್ತವೆ. ಭಗವದ್ಗೀತೆ ಯಲ್ಲಿ ಅಭೇದಸಾಧಕವಾದ ಒಂದು ವಾಕ್ಯವೂ ಇರುವುದಿಲ್ಲ. ಪಾಂಚಜನ್ಯವನ್ನು ಹಸ್ತದಲ್ಲಿ ಧರಿಸಿದ ಜಗನ್ನಾಥನು ಹದಿನೆಂಟು ಅಧ್ಯಾಯಗಳಲ್ಲಿಯೂ ವೇದಾಂತ ನಿರ್ಣೀತವಾದ ಉಪಪತ್ತಿಗಳಿಂದ ಸಹಿತವಾಗಿ ಜೀವಬ್ರಹ್ಮರಿಗೆ ಭೇದವನ್ನೇ ತನ್ನ ಸಿದ್ಧಾಂತವನ್ನಾಗಿ ಉದ್ಘೋಷಿಸಿರುತ್ತಾನೆ. ಭಗವದ್ಗೀತೆಯಲ್ಲಿ ಭೇದಸಾಧಕ ಪ್ರಮಾಣಗಳು ಎರಡುವಿಧವಾಗಿರುತ್ತವೆ. ಕೆಲವು ವಾಕ್ಯಗಳಲ್ಲಿ ಶ್ರೀಕೃಷ್ಣನು ತನ್ನಲ್ಲಿರುವ ಜೀವಭೇದವನ್ನು ಸ್ಪಷ್ಟವಾಗಿ ಕಂಠತಃ ನಿರೂಪಿಸಿರುತ್ತಾನೆ. ಮತ್ತು ಕೆಲವು ವಾಕ್ಯಗಳಲ್ಲಿ ವೇದಾಂತನಿರ್ಣೀತವಾದ ಭೇದಕಧರ್ಮಗಳನ್ನು ಪ್ರದರ್ಶನೆ ಮಾಡಿ ಜೀವಬ್ರಹ್ಮರು ಪರಸ್ಪರವಾಗಿ ಅತ್ಯಂತ ಭಿನ್ನರೆಂದು ಉಪಪಾದನೆಮಾಡಿ ತೋರಿಸಿರುತ್ತಾನೆ. ಇವುಗಳಲ್ಲಿ ಸಾಕ್ಷಾದ್ಭೇದಪ್ರತಿಪಾದಕ ವಾಕ್ಯಗಳನ್ನು ಮೊದಲು ಉದಾಹರಿಸುತ್ತೇವೆ.

2.

1. ಪರಸ್ತಸ್ಮಾತ್ತುಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।
ಯಸ್ಸಸರ್ವೇಷು ಭೂತೇಷು ನಶ್ಯತ್ಸುನವಿನಶ್ಯತಿ ॥—(8. 29.)

ಇದರ ಅರ್ಥವು—ಅವ್ಯಕ್ತನಾಮಕ ಭಗವಂತನಾದರೋ ಉತ್ಪತ್ತಿ ಉಳ್ಳ ಸಮಸ್ತ ಪ್ರಾಣಿಸಮೂಹಕ್ಕಿಂತಲೂ **ಅನ್ಯಃ ಎಂದರೆ ಅತ್ಯಂತ ಭಿನ್ನನು ;** ಮತ್ತು ಪರಃ ಎಂದರೆ ಉತ್ತಮನು ; ಆತನು ಸ್ವತಂತ್ರನು ಮತ್ತು ಸನಾತನನು. ಮಹಾಪ್ರಳಯದಲ್ಲಿ ಸರ್ವಪ್ರಾಣಿಗಳೂ ನಷ್ಟವಾದರೂ ಆತನು ನಾಶವನ್ನು ಹೊಂದುವುದಿಲ್ಲ.

ಇಲ್ಲಿ ಹೇಳಿರುವ "ಅವ್ಯಕ್ತ" ಶಬ್ದವಾಚ್ಯವಾದ ವಸ್ತುವು ಶ್ರೀಕೃಷ್ಣನೇ ಎಂಬುವುದು ಮುಂದಿನ ಶ್ಲೋಕದಿಂದಲೇ ತಿಳಿದುಬರುತ್ತದೆ.

ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂಗತಿಂ ।
ಯಂ ಪ್ರಾಪ್ಯನನಿವರ್ತಂತೇ ತದ್ಧಾಮಪರಮಂ ಮಮ ॥—(8. 21.)

ಇದರ ಅರ್ಥವು—ಅವ್ಯಕ್ತನಾಮಕ ಭಗವಂತನೇ ಅಕ್ಷರನೆನ್ನಿಸುವನು ; ಅವನನ್ನೇ ಪರಮಪ್ರಾಪ್ಯನೆಂದು ಹೇಳುತ್ತಾರೆ. (ಅವ್ಯಕ್ತನು ಯಾರೆಂದರೆ, ಅಕ್ಷರನು ಎಂದು ಶ್ರೀಕೃಷ್ಣನು ಹೇಳಿದನು. ಅಕ್ಷರನು ಯಾರೆಂದರೆ, ಪರಮಪ್ರಾಪ್ಯನೆಂದು ಹೇಳಿದನು. ಪುನಃ ಆ ಪರಮಪ್ರಾಪ್ಯನು ನಾನೇ ಎಂದು ಹೇಳಿ ವ್ಯಕ್ತಿನಿಶ್ಚಯವನ್ನು ಉತ್ತರಾರ್ಧದಲ್ಲಿ ಮಾಡುತ್ತಾನೆ). ಯಾವುದನ್ನು ಹೊಂದಿದ ಮೇಲೆ ಪುನರಾವರ್ತಿಯು ಇಲ್ಲವೋ ಅದು ಪರಮಪ್ರಾಪ್ಯವಾದ ನನ್ನ ಸ್ವರೂಪವು.

ಮೋಕ್ಷಪ್ರದವಾದ ಸ್ವರೂಪವುಳ್ಳ ಶ್ರೀಕೃಷ್ಣನೇ ಅವ್ಯಕ್ತಶಬ್ದವಾಚ್ಯವಾದ ವಸ್ತುವು. ಅವ್ಯಕ್ತನು ಉತ್ಪನ್ನರಾದ ಸರ್ವಚೇತನರಿಗಿಂತಲೂ ಅನ್ಯನು ಎಂದರೆ ಭಿನ್ನನು ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಈ ವಾಕ್ಯವು ಜೀವಬ್ರಹ್ಮರ ಭೇದಸಾಧನೆಯಲ್ಲಿ ಸ್ಫುಟವಾದ ಪ್ರಮಾಣವಾಗಿರುತ್ತದೆ.

2. ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರಏವಚ ।
ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ।
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ॥
(15. 16-17)

ಇದರ ಅರ್ಥವು :—ಲೋಕದಲ್ಲಿ (ಭಗವದಧೀನವಾದ ಪ್ರಪಂಚದಲ್ಲಿ ಕ್ಷರಪುರುಷರು ಮತ್ತು ಅಕ್ಷರಪುರುಷರೆಂಬ ಎರಡುವಿಧವಾದ ಚೇತನರು ಇದ್ದಾರೆ.

(ಬ್ರಹ್ಮಾದಿ) ಸರ್ವ (ಉತ್ಪನ್ನದೇಹವುಳ್ಳ) ಜೀವರುಗಳೂ ಶರೀರನಾಶವುಳ್ಳವರಾದ ಕಾರಣ ಕ್ಷರಪುರುಷರೆನ್ನಿಸುವರು. ಆಕಾಶದಂತೆ ನಿರ್ವಿಕಾರಳಾದ ಲಕ್ಷ್ಮೀದೇವಿಯು ಶರೀರನಾಶರಹಿತಳಾದುದರಿಂದ ಅಕ್ಷರಪುರುಷಳೆನ್ನಿಸುವಳು. ಪುರುಷಶ್ರೇಷ್ಠನಾದ ಪರಬ್ರಹ್ಮನಾದರೋ ಕ್ಷರಾಕ್ಷರಪುರುಷರುಗಳಿಗಿಂತ **ಅನ್ಯಃ ಎಂದರೆ ಭಿನ್ನನು.** ಆದುದರಿಂದಲೇ "ಪರಮಾತ್ಮಾ" ಎಂದರೆ ಪರಮಚೇತನನು (ಉತ್ತಮಚೇತನನು) ಎಂದು "ಚೇತನಶ್ಚೇತನಾನಾಂ" ಇತ್ಯಾದಿ ಶ್ರುತಿಗಳಲ್ಲಿ ನಿರೂಪಿತನಾಗಿರುವನು.

ಈ ವಾಕ್ಯದಲ್ಲಿ ಶ್ರೀಕೃಷ್ಣನು ವಿನಾಶಿದೇಹವುಳ್ಳ ಅನೇಕ ಚೇತನರೂ ಮತ್ತು ದೇಹನಾಶರಹಿತವಾದ ಚೇತನವೂ ಉಂಟೆಂದು ಹೇಳಿ ಪರಮಚೇತನನಾದ ನಾನು ಪೂರ್ವೋಕ್ತ ಉಭಯವಿಧ ಚೇತನರಿಗಿಂತಲೂ ಅನ್ಯನೆಂದು ಸಾಕ್ಷಾದ್ಭೇದವಾಚಕವಾದ ಅನ್ಯಶಬ್ದಪ್ರಯೋಗದಿಂದಲೇ ತಿಳಿಸಿ ಉಕ್ತಾರ್ಥದಲ್ಲಿ ದಾರ್ಢ್ಯಾರ್ಥವಾಗಿ ಶ್ರುತಿಸಮ್ಮತಿಯನ್ನೂ ಕೊಟ್ಟಿರುತ್ತಾನೆ. ಮತ್ತು "ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ" ಇತ್ಯಾದಿ ವಾಕ್ಯಗಳಿಂದ ಭೇದಕ ಧರ್ಮಗಳನ್ನೂ ನಿರೂಪಿಸುತ್ತಾನಾದ್ದರಿಂದ ಈ ಗೀತಾವಾಕ್ಯಗಳು ನಿರವಕಾಶವಾದ ಜೀವಬ್ರಹ್ಮರಿಗೆ ಭೇದಸಾಧಕವಾದ ಪ್ರಮಾಣವಾಗಿರುತ್ತವೆ. ಕಿಂಚ "ದ್ವಾವಿಮೌ ಪುರುಷೌ ಲೋಕೇ" ಎಂದರೆ ಭಗವದಧೀನವಾದ ಪ್ರಪಂಚದಲ್ಲಿ ಎರಡು ಪ್ರಕಾರವಾದ ಚೇತನರಿರುವರು ಎಂದು ಹೇಳಿ, "ಕ್ಷರಃ ಸರ್ವಾಣಿ **ಭೂತಾನಿ**" ಎಂದರೆ ಸರ್ವಪ್ರಾಣಿಗಳೂ ಕ್ಷರಪುರುಷರು ಎಂದು ಹೇಳುವಾಗ, "ಭೂತಾನಿ" ಎಂಬ ಬಹುವಚನಾಂತ ಶಬ್ದವನ್ನು ಪ್ರಯೋಗಮಾಡಿರುತ್ತಾನೆ. ಅಕ್ಷರಪುರುಷಳನ್ನು ನಿರ್ದೇಶಮಾಡುವಾಗ ಏಕವಚನಾಂತ ಶಬ್ದವನ್ನು ಪ್ರಯೋಗಮಾಡಿರುತ್ತಾನೆ. ಇದರಿಂದ ಭಗವದ್ಭಿನ್ನವಾದ ಪ್ರಪಂಚದಲ್ಲಿ ಪರಸ್ಪರ ಭಿನ್ನರಾದ ದೇಹನಾಶವನ್ನು ಹೊಂದತಕ್ಕ ಅನೇಕ ಚೇತನರು ಇರುವರೆಂದೂ, ಅವರುಗಳಿಂದ ಭಿನ್ನವಾದ ದೇಹನಾಶರಹಿತವಾದ ಒಂದು ಚೇತನವು ಇರುವುದು ಎಂದೂ ; ಈ ಉಭಯ ವರ್ಗದ ಚೇತನರಿಗಿಂತಲೂ ಅನ್ಯನಾದವನು ಪರಮಚೇತನನೆಂದು ಪ್ರಸಿದ್ಧನಾದ ಶ್ರೀಕೃಷ್ಣನೆಂದೂ ನಿರ್ಧರಿಸಬೇಕು.

ಈ ರೀತಿಯಾಗಿ ಶ್ರೀಕೃಷ್ಣನು ಸಾಕ್ಷಾದ್ಭೇದಬೋಧಕವಾದ "**ಅನ್ಯ**" ಶಬ್ದವನ್ನು ಪ್ರಯೋಗಿಸಿ ಪರಬ್ರಹ್ಮನಾದ ತನಗೂ ಮತ್ತು ಜೀವವರ್ಗಕ್ಕೂ ಅತ್ಯಂತ ಭೇದವು ಉಂಟೆಂದು ನಿರೂಪಿಸಿರುತ್ತಾನೆ. ಇದಲ್ಲದೆ ಜೀವಬ್ರಹ್ಮರ

ಅಭೇದಕ್ಕೆ ಸರ್ವಥಾ ವಿರೋಧಿಗಳಾದ ವಿರುದ್ಧಧರ್ಮಗಳನ್ನು ಅನೇಕ ವಾಕ್ಯಗಳಲ್ಲಿ ಪ್ರದರ್ಶಿಸಿರುತ್ತಾನೆ. ಅವುಗಳನ್ನು ಸಂಕ್ಷೇಪವಾಗಿ ಉಪಪಾದನೆಮಾಡಿ ತೋರಿಸುತ್ತೇನೆ.

3.

1. ಅನಾದಿನಿತ್ಯರಾದ ಸರ್ವಪ್ರಕಾರದಿಂದಲೂ ಸ್ವರೂಪೇಣ ನಾಶರಹಿತರಾದ ಅನಂತ ಚೇತನರು ಉಂಟೆಂದು ಶ್ರೀಕೃಷ್ಣನು ಹೇಳುತ್ತಾನೆ.

(1) **ನತ್ವೇವಾಹಂ ಜಾತುನಾಸಂ ನತ್ವಂ ನೇಮೇಜನಾಧಿಪಾಃ ।**
ನಚೈವ ನಭವಿಷ್ಯಾಮಃ ಸರ್ವೇವಯಮತಃಪರಂ ॥—(2. 12.)

ಇದರ ಅರ್ಥವು—(ಶ್ರೀ ಕೃಷ್ಣನಾದ) ನಾನು, ನೀನು, ಮತ್ತು ಇಲ್ಲಿ ಮಿಳಿತರಾದ ರಾಜರುಗಳು ಇವರೆಲ್ಲರೂ ಹಿಂದೆ ಯಾವುದಾದರೂ ಒಂದು ಕಾಲದಲ್ಲಿ ಇಲ್ಲದೇ ಇರಲಿಲ್ಲ (ಹಿಂದೆ ಇದ್ದರೇ ಇದ್ದರು.) ಮತ್ತು ನಾವೆಲ್ಲರೂ ಇನ್ನು ಮುಂದೆ ಉತ್ತರಕಾಲದಲ್ಲಿ ಇಲ್ಲದೇ ಇರುವುದಿಲ್ಲ. (ಭವಿಷ್ಯತ್ಕಾಲದಲ್ಲಿಯೂ) ಇದ್ದೇ ಇರುತ್ತೇವೆ.)

ವರ್ತಮಾನಕಾಲದಲ್ಲಿ ಇರುವುದು ಪ್ರತ್ಯಕ್ಷಸಿದ್ಧವಾದುದರಿಂದ ಶ್ರೀ ಕೃಷ್ಣನು ನಾವೆಲ್ಲರೂ ಈಗಲೂ ಇರುತ್ತೇವೆ ಎಂದು ಹೇಳಲಿಲ್ಲ. ಈ ಪ್ರಕಾರ ಭೂತಭವಿಷ್ಯದ್ವರ್ತಮಾನವೆಂಬ ಕಾಲತ್ರಯ ಸಂಬಂಧವುಳ್ಳ (ಅನಾದಿನಿತ್ಯರಾದ) ಅನೇಕ ಚೇತನರು ಇರುತ್ತಾರೆಂಬುದು ಶ್ರೀ ಕೃಷ್ಣನ ವಾಕ್ಯದಿಂದ ಸಿದ್ಧವಾಯಿತು. ಸಕಲ ಜೀವಾಭಿನ್ನವಾದ ಪರಬ್ರಹ್ಮತತ್ವವು ಒಂದೇ ಆಗಿದ್ದರೆ 'ಅಹಂ' ಎಂದೂ, 'ತ್ವಂ' ಎಂದೂ, 'ಇಮೇಜನಾಧಿಪಾಃ' ಎಂದೂ ಪ್ರತ್ಯೇಕವಾಗಿ ಅನೇಕ ಚೇತನರಾಶಿಗಳಿಗೆ ನಿತ್ಯತ್ವವನ್ನು ಸಾಧನೆಮಾಡುವ ವ್ಯರ್ಥಪ್ರಯಾಸವನ್ನು ತತ್ವಜ್ಞಚೂಡಾಮಣಿಯಾದ ಶ್ರೀ ಕೃಷ್ಣನು ಯಾತಕ್ಕೆ ತೆಗೆದುಕೊಳ್ಳುತ್ತಿದ್ದನು?*

---

* ಶಂಕರಾಚಾರ್ಯರೂ ಕೂಡ ಈ ಶ್ಲೋಕವನ್ನು "**ತ್ರಿಷ್ವಪಿಕಾಲೇಷುನಿತ್ಯಾ**" **ಎಂದರೆ ಮೂರುಕಾಲದಲ್ಲಿಯೂ ನಿತ್ಯರು** ಎಂದು ಭೇದಪರವಾಗಿಯೇ ಅರ್ಥಮಾಡಿ, ನಂತರ ಸ್ವಮತಾಭಿನಿವೇಶದಿಂದ "ಆತ್ಮಸ್ವರೂಪೇಣೇತ್ಯರ್ಥಃ । ದೇಹಭೇದಾನುವೃತ್ತ್ಯಾ ಬಹುವಚನಂ । ನಾತ್ಮಭೇದಾಭಿಪ್ರಾಯೇಣ । ಎಂದು ಬರೆದಿರುವರು. ಇದರ ಅರ್ಥವು :— "ಆತ್ಮಸ್ವರೂಪವಿವಕ್ಷೆಯಿಂದ ನಿತ್ಯತ್ವವು ಹೇಳಿರುತ್ತದೆ. ದೇಹಭೇದವಿವಕ್ಷೆಯಿಂದ ಬಹುವಚನಪ್ರಯೋಗವು; ಆತ್ಮಬಾಹುಳ್ಯವಿರುವುದೆಂಬ ಅಭಿಪ್ರಾಯದಿಂದಲ್ಲ." ಮೂಲಗೀತಾಶ್ಲೋಕಗಳಲ್ಲಿ ಇವರ ಈ ಸ್ವಂತ ಅಭಿಪ್ರಾಯಕ್ಕೆ ಯಾವ ಆಧಾರವೂ ಇರುವುದಿಲ್ಲ. ಪ್ರತ್ಯೇಕವಾಗಿ ನಿತ್ಯರಾದ ಅನೇಕ ಆತ್ಮರುಗಳೇ ಹೇಳಿರುತ್ತದೆ.

ದೇಹನಾಶವಾದರೂ ಜೀವಸ್ವರೂಪವು ನಾಶಹೊಂದುವುದಿಲ್ಲವೆಂದು ಶ್ರೀ ಕೃಷ್ಣನು ಅನೇಕ ಶ್ಲೋಕಗಳಿಂದ ಉಪಪಾದನೆಮಾಡಿ ತೋರಿಸುತ್ತಾನೆ.

(2) **ದೇಹಿನೋಽಸ್ಮಿನ್ ಯಥಾದೇಹೇ ಕೌಮಾರಂ ಯೌವನಂಜರಾ ।**
ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರನಮುಹ್ಯತಿ ॥—(2. 13.)

ಅರ್ಥವು—ಜೀವನಿಗೆ ಬಾಲ್ಯದೇಹವು ಹೋಗಿ ಕೌಮಾರದೇಹವೂ, ಕೌಮಾರದೇಹವು ಹೋಗಿ ಯೌವನದೇಹವೂ, ಯೌವನದೇಹವು ಹೋಗಿ ವಾರ್ಧಿಕ್ಯದೇಹವೂ ಬರುವಂತೆ ಮರಣಾನಂತರ ಈ ದೇಹವು ಹೋಗಿ ಮತ್ತೊಂದುದೇಹವು (ಕರ್ಮವಶವಾಗಿ) ಪ್ರಾಪ್ತವಾಗುತ್ತದೆ. (ಜೀವನ ಸ್ವರೂಪವಾದರೋ ಸರ್ವಥಾ ನಾಶವಾಗತಕ್ಕದ್ದಲ್ಲ.) ಇದನ್ನು ತಿಳಿದ ಪಂಡಿತನು ದೇಹನಾಶವನ್ನು ಕುರಿತು ಶೋಕವನ್ನು ಹೊಂದುವುದಿಲ್ಲ.

ಪೂರ್ವ ಶ್ಲೋಕದಲ್ಲಿ ಶ್ರೀಕೃಷ್ಣನು ತಾನೂ ಮತ್ತು ಸರ್ವ ಚೇತನರೂ ಅನಾದಿನಿತ್ಯರೆಂದು ಪ್ರತಿಪಾದನೆಮಾಡಿ ಬಂದು ದೇಹತ್ಯಾಗಾನಂತರ ಮತ್ತೊಂದು ದೇಹದ ಪ್ರಾಪ್ತಿಯು ಜೀವಚೇತನಕ್ಕೆ ಮಾತ್ರವೇ ಎಂದು ತೋರಿಸಬೇಕಾಗಿ ತಾನು ಮತ್ತು ಇತರ ಚೇತನರೂ ಪೂರ್ವಶ್ಲೋಕದಲ್ಲಿ ಪ್ರಸಕ್ತರಾಗಿದ್ದರೂ ಕೂಡ, ತನ್ನನ್ನು ವ್ಯಾವೃತ್ತಿಮಾಡಿಕೊಂಡು, ಉತ್ಪನ್ನದೇಹವುಳ್ಳವನಿಗೆ ಎಂಬ ಅರ್ಥವನ್ನು ಕೊಡುವ "**ದೇಹಿನಃ**" ಎಂಬ ಪದವನ್ನು ಪ್ರಯೋಗಮಾಡಿರುತ್ತಾನೆ. ಇದರಿಂದ ನಾನಾದೇಹಪ್ರಾಪ್ತಿಯು ಜೀವನಿಗೇ ಹೊರತು ಪರಮಚೇತನನಾದ ಕೃಷ್ಣನಿಗಿಲ್ಲವೆಂದು ಸಿದ್ಧವಾಗುವುದು. ಮುಂದೆ "ಶರೀರಿಣಃ" ಎಂಬ ವಿಶೇಷಣದಿಂದ ಈ ವಿಷಯವನ್ನೇ ವಿಶದಮಾಡುವನು.

(3) **ಅಂತವಂತ ಇಮೇದೇಹಾನಿತ್ಯಸ್ಯೋಕ್ತಾಃ ಶರೀರಿಣಃ ॥**
(2. 18.)

ಅರ್ಥವು—ಸ್ವರೂಪೇಣನಿತ್ಯನಾದ ಉತ್ಪನ್ನವಾದ ಶರೀರವುಳ್ಳ ಈ ಜೀವನ ದೇಹಗಳು ನಾಶಹೊಂದತಕ್ಕವುಗಳೇ. ಜೀವಸ್ವರೂಪವು ನಿತ್ಯವಾದುದು; ಸರ್ವಥಾ ನಾಶಹೊಂದತಕ್ಕುದಲ್ಲವೆಂದು ನಿರೂಪಿಸುತ್ತಾನೆ.—

(4) **ವಿನಾಶಮವ್ಯಯಸ್ಯಾಸ್ಯನ ಕಶ್ಚಿತ್ಕರ್ತುಮರ್ಹತಿ ।**—(2 17.)

ಅರ್ಥವು—ನಾಶಹೀನನಾದ ಈ ಜೀವನನ್ನು ಯಾರೂ ನಾಶಮಾಡಲಾರರು.

(5) **ನ ಜಾಯತೇ ಮ್ರಿಯತೇವಾಕದಾಚಿತ್........ಹನ್ಯಮಾನೇ ಶರೀರೇ ||**—(2. 20.)

ಅರ್ಥವು—ಜೀವನು (ಸ್ವರೂಪೇಣ) ಉತ್ಪನ್ನನಾಗುವುದಿಲ್ಲ. ಸ್ವರೂಪದಿಂದ ಸಾಯುವುದಿಲ್ಲ. (ಜೀವನಿಗೆ ಜನನಮರಣ ವ್ಯವಹಾರವು ಶರೀರೋತ್ಪತ್ತಿನಾಶಮೂಲಕವೆಂದು ಭಾವವು.) ಶರೀರವು ನಾಶವಾದರೂ ಜೀವನಿಗೆ ಜನನಮರಣಗಳಿಲ್ಲ.

(6) **ವೇದಾವಿನಾಶಿನಂ ನಿತ್ಯಂ ಯಏನಮಜಮವ್ಯಯಂ |**—(2. 21.)

ಅರ್ಥವು :—ಈ ಜೀವನು ಸ್ವರೂಪೇಣ ಸದಾ ನಾಶಹೀನನಾದುದರಿಂದ, ಉತ್ಪತ್ತಿರಹಿತನಾಗಿಯೂ ಸ್ವರೂಪವಿಕಾರಶೂನ್ಯನಾಗಿಯೂ ಇರುವನೆಂದು ತಿಳಿಯಬೇಕು.

ಜೀವನು 'ಅವಿನಾಶಿಯು' ಎಂದರೆ ಸ್ವರೂಪೇಣನಾಶಹೊಂದತಕ್ಕವನಲ್ಲ ಎಂದು ಹೇಳಿ, ಶ್ರೀ ಕೃಷ್ಣನು ಅಷ್ಟರಲ್ಲೇ ತೃಪ್ತನಾಗದೆ, "ನಿತ್ಯಂ ಅವಿನಾಶಿನಂ" ಎಂಬಲ್ಲಿ ನಿತ್ಯಂ ಎಂಬ ವಿಶೇಷಣವನ್ನೂ ಕೊಟ್ಟಿರುತ್ತಾನೆ. ಜೀವಸ್ವರೂಪವು ನಿತ್ಯವು ಎಂದರೆ ಮುಂದೆ ಯಾವ ಅನಂತಕಾಲದಲ್ಲಿಯೂ ನಾಶಹೊಂದತಕ್ಕದ್ದಲ್ಲ; ಎಂದು ಹೇಳಿರುವುದರಿಂದ ಜೀವನಿಗೆ ಮತ್ತೊಬ್ಬ ಜೀವನಿಂದಾಗಲೀ ಪರಮಾತ್ಮನಿಂದಾಗಲಿ ಐಕ್ಯವು ಪ್ರಾಪ್ತವಾಗಿ ತನ್ನ ಸ್ವರೂಪ ನಾಶವು ಎಂದಿಗೂ ಆಗಲಾರದು ಎಂದು ನಿಶ್ಚಿತವಾಗುವುದು. ಜೀವಸ್ವರೂಪಕ್ಕೆ ಯಾವರೀತಿಯಾದ ವಿಕಾರವೂ ಬರಲಾರದೆಂದು ಇನ್ನೂ ಕೆಲವು ಯುಕ್ತಿಗಳಿಂದಲೂ ದೃಢೀಕರಿಸುತ್ತಾನೆ.

(7) **ನೈನಂ ಛಿಂದಂತಿಶಸ್ತ್ರಾಣಿ ನೈನಂದಹತಿಪಾವಕಃ |**
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿಮಾರುತಃ |
ಅಚ್ಛೇದ್ಯೋಽಯ ಮದಾಹ್ಯೋಽಯ ಮಕ್ಲೇದ್ಯೋಽಶೋಷ್ಯ ಏವಚ ||—(2. 23-24.)

ಈ ಜೀವನನ್ನು ಶಸ್ತ್ರಗಳು ಕತ್ತರಿಸುವುದಿಲ್ಲ; ಅಗ್ನಿಯು ಇವನನ್ನು ಸುಡುವುದಿಲ್ಲ; ಜಲವು ಇವನನ್ನು ತೊಯ್ಯಿಸುವುದಿಲ್ಲ; ಗಾಳಿಯು ಇವನನ್ನು ಒಣಗಿಸುವುದಿಲ್ಲ. (ಯಾತಕ್ಕೆಂದರೆ,) ಈ ಜೀವನು ಛೇದನ ಯೋಗ್ಯವಾದ ಪದಾರ್ಥವೇ ಅಲ್ಲ; ದಾಹಾರ್ಹನಲ್ಲ; ಜಲದಿಂದ ಒದ್ದೆಯಾಗತಕ್ಕ ಪದಾರ್ಥವಲ್ಲ; ಮತ್ತು ವಾಯುವಿನಿಂದ ಒಣಗತಕ್ಕವನಲ್ಲ. ಹೀಗೆ ಹೇಳಿರುವುದರಿಂದ

ಜೀವಸ್ವರೂಪವು ಶಸ್ತ್ರಾಸ್ತ್ರಗಳ ವಧೆಯಿಂದಾಗಲೀ, ದೇವತೆಗಳವರಾದಿ ನಿಮಿತ್ತ ವಾಗಲೀ ವಿಕಾರವನ್ನು ಹೊಂದಿ ಮತ್ತೊಂದು ವಸ್ತುವಿನಲ್ಲಿ ಲೀನವಾಗಿ ಹೋಗು ವುದು (ಐಕ್ಯವನ್ನು ಹೊಂದುವುದು) ಎಂದು ಹೇಳಲಾಗುವುದಿಲ್ಲ. ಪರಮಾತ್ಮನೂ ಸಹ ವಿಕಾರರಹಿತನೆಂದು ಶ್ರೀಕೃಷ್ಣನು ಹೇಳುತ್ತಾನೆ.

1. ....**ಅವಿಕಾರ್ಯೋಽಯಮುಚ್ಯತೇ** ।—(2. 25.)

ಪರಮಾತ್ಮನು (ಶ್ರೀ ಕೃಷ್ಣನು) ಸರ್ವಪ್ರಕಾರದಿಂದಲೂ ವಿಕಾರವನ್ನು ಹೊಂದಿಸಲ್ಪಡತಕ್ಕವನಲ್ಲ.

2. **ಅಜೋಽಪಿಸನ್ನವ್ಯಯಾತ್ಮಾ** ।—(2. 25.)

ಪರಮಾತ್ಮನು ಜನನರಹಿತನು. ಆತನು ನಾಶರಹಿತವಾದ ದೇಹವುಳ್ಳವನು.

3. **ಪರಮಾತ್ಮಾಯಮವ್ಯಯಃ** ।—(13. 32.)

ಈ ಪರಮಾತ್ಮನು (ಶ್ರೀಕೃಷ್ಣನು) ಅವ್ಯಯನು.

ಹೀಗಿರುವುದರಿಂದ ನಮ್ಮ ವಿವಾದವು ಈ ರೀತಿಯಾಗಿ ಪರಿಣಮಿಸಿತು. 1. ಪರಮಾತ್ಮನೂ ವಿಕಾರರಹಿತನು ನಾಶಹೊಂದತಕ್ಕ ಸ್ವರೂಪ ಉಳ್ಳವನಲ್ಲ. ಜೀವಾತ್ಮನೂ ಸ್ವರೂಪೇಣ ನಾಶಹೊಂದತಕ್ಕವನಲ್ಲ. ಸ್ವರೂಪ ವಿಕಾರವಾಗ ದಂತೆ ಭಿನ್ನವಾದ ವಿರುದ್ಧ ಧರ್ಮಗಳುಳ್ಳ ಎರಡು ವಸ್ತುಗಳಿಗೆ ತಾದಾತ್ಮ್ಯವು ಪ್ರಾಪ್ತವಾಗಲಾರದು.

ಚಿನ್ನದ ಬಂದಿಯನ್ನೂ ಚಿನ್ನದ ಡಾಬನ್ನೂ ಕರಗಿಸಿದರೆ ಎರಡು ಆಭರಣ ಗಳೂ ತಮ್ಮ ಮೃದುಸ್ವಭಾವದಿಂದ ತಮ್ಮ ತಮ್ಮ ಆಕಾರವನ್ನು ಕಳೆದುಕೊಂಡು ಬಿಟ್ಟು, ಅಗ್ನಿ ತಾಪದಿಂದ ಕರಗಿ ಪರಸ್ಪರ ಬೆರೆತು ಒಂದೇ ಗಡ್ಡೆಯಾಗಿ ಪರಿಣಮಿಸು ವುವು. ಘನವಾದ ಎರಡು ವಜ್ರದ ಘಟ್ಟಿಗಳಂತೆ ಇರುವ ಜೀವಾತ್ಮ ಪರಮಾ ತ್ಮರು ಉಭಯರೂ ನಿರ್ವಿಕಾರರಾಗಿ ಅಚ್ಛೇದ್ಯರಾಗಿರುವಾಗ ತಮ್ಮ ಧರ್ಮ ಗಳನ್ನು ಕಳೆದುಕೊಂಡು ಒಂದೇ ಚೈತನ್ಯವಾಗಿ ಹೋಗುವುದು ಹೇಗೆ ?

2. ಮತ್ತೊಂದು ಅನುಪಪತ್ತಿಯೂ ಉಂಟು.

ನಹ್ಯನ್ಯೋಽ ಅನ್ಯಾತ್ಮನಾ ಭವತಿ ।

ಶಂಕರಾಚಾರ್ಯರೂ ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ “**ನಹ್ಯನ್ಯಸ್ಯಾನ್ಯಭಾವ ಉಪಪದ್ಯತೇ**” ಎಂದು ಬರೆದಿರುತ್ತಾರೆ. ಭಿನ್ನವಾದ ಒಂದು ವಸ್ತುವಿಗೆ ಮತ್ತೊಂದು ವಸ್ತು ತಾದಾತ್ಮ್ಯವು ಕೂಡುವುದಿಲ್ಲ ಎಂದರ್ಥವು. ಈ ರೀತಿಯಾಗಿ ಶಾಸ್ತ್ರೀಯ ನ್ಯಾಯವನ್ನು ಅಂಗೀಕರಿಸಿ ಭಿನ್ನರಾದ ಜೀವಬ್ರಹ್ಮರಿಗೆ ಐಕ್ಯವನ್ನು ಒಪ್ಪಿದುದು ಆಶ್ಚರ್ಯವು.

ಎಂಬ ಶಾಸ್ತ್ರಸಿದ್ಧವಾದ ನ್ಯಾಯವನ್ನು ನಿಷ್ಕಾರಣವಾಗಿ ಪರಿತ್ಯಾಗಮಾಡಬೇಕಾಗುವುದು. ಒಂದು ವಸ್ತುವು ತನ್ನಿಂದ ಅತ್ಯಂತ ಭಿನ್ನವಾದ ಮತ್ತೊಂದು ವಸ್ತುವಿನ ತಾದಾತ್ಮ್ಯವನ್ನು ಯಾವ ಕಾರಣದಿಂದಲೂ ಹೊಂದಲಾರದು. ಹಾಗೆ ಹೊಂದುವುದಾದರೆ ಕೆಂಪುಮಣ್ಣಾಗಲಿ! ವಜ್ರವು ಸೀಸವಾಗಲಿ! ಜಡವು ಜೀವನಾಗಲಿ! ಚೇತನನು ಜಡವಾಗಲಿ! ಎಂಬ ಸರ್ವ ಅನಿಷ್ಟ ಆಪಾದನೆಗಳೂ ಪ್ರಾಪ್ತವಾಗುವುವು. ಚಿನ್ನ ಬೆಳ್ಳಿ ಮೊದಲಾದುವುಗಳು ಮೂಸೆಯಲ್ಲಿಟ್ಟು ಕರಗಿಸಿದರೆ ಒಂದೇ ಗಟ್ಟಿಯಾಗುವುವು. ಆದರೆ ಅಲ್ಲಿ **ನಿಬಿಡತರ ಸಂಯೋಗವು** ಪ್ರಾಪ್ತವಾಯಿತೇ ಹೊರತು ತಾದಾತ್ಮ್ಯವು (ಐಕ್ಯವು) ಉಂಟಾಗಲಿಲ್ಲ. ಆದುದರಿಂದಲೇ ಒಂದು ಬೆಳ್ಳಿ ಗಡ್ಡೆಯು ಸಹಿತವಾಗಿ ಮತ್ತೊಂದು ಬೆಳ್ಳಿ ಗಡ್ಡೆಯನ್ನು ಒಟ್ಟುಗೂಡಿ ಕರಗಿಸಿದರೆ ಎರಡು ಗಡ್ಡೆಯ ತೂಕವೂ ಇರುವುದೇ ಹೊರತು ಒಂದೇಗಡ್ಡೆಯ ತೂಕದಷ್ಟು ಬೆಳ್ಳಿಯಾಗುವುದಿಲ್ಲ. ಎರಡು ಗಡ್ಡೆಗಳಿಗೂ ತಾದಾತ್ಮ್ಯವು (ಐಕ್ಯವು) ಪ್ರಾಪ್ತವಾಗಿದ್ದರೆ, ತೂಕವೃದ್ಧಿಯು ಉಂಟಾಗಕೂಡದು. ನದಿಗಳು ಸಮುದ್ರದಲ್ಲಿ ಏಕೀಭಾವವನ್ನು ಹೊಂದುವುವೆಂದು ವ್ಯವಹಾರವಿರುವುದು. ಇದು ಗೌಣವ್ಯವಹಾರವು. ನದಿಯು ಸಮುದ್ರವೇ ಆಗಿಹೋದರೆ ಸ್ವಲ್ಪವೂ ವೃದ್ಧಿಯು ಆಗದೆ ಸಮುದ್ರಮುಖದಲ್ಲಿ ಪ್ರವಾಹವೃದ್ಧಿಯು ಕಾಣಿಸದೇ ಹೋಗಬೇಕಾದೀತು! ನದೀ ಸಮುದ್ರಗಳಿಗೆ ಮಿಶ್ರಣಮಾತ್ರವೆಂಬುದು ಸರ್ವಜನಸಮ್ಮತವು.*

ಪರಂತು 3. ಪರಬ್ರಹ್ಮನು ಜೀವತಾದಾತ್ಮ್ಯವನ್ನು ಹೊಂದಬಹುದೆಂಬ ಸಂಭಾವನೆಯೂ ಅತ್ಯಂತ ಅನುಚಿತವು. ಹೇಗೆಂದರೆ—ಪರಮಾತ್ಮನು ನೀಚ ಜೀವತಾದಾತ್ಮ್ಯವನ್ನು ಹೊಂದುವನು ಎಂದರೆ ನೀಚಜೀವನೇ ಆಗುವನು ಎಂದ

---

* ನದೀ ಸಮುದ್ರ ದೃಷ್ಟಾಂತವು ಭೇದಸಾಧಕವೆಂದು ಅದ್ವೈತಿಗಳೂ ಒಪ್ಪಿರುತ್ತಾರೆ. ತಥಾಹಿ ಸೂತ್ರಭಾಷ್ಯೆ (1. 4. 22 ರಲ್ಲಿ) **ಭಾಮತೀ—" ನದೀ ಪಾತಃ ಪರಮಾಣೂನಾಂತು ಸಮುದ್ರಪಾಥಃ ಪರಮಾಣುಭ್ಯಃ ಪೂರ್ವಾವಸ್ಥಿತೇಭ್ಯೋ ಭೇದ ಏವ ನಾಭೇದಃ । ಏವಂ ಸಮುದ್ರಾದಪಿತೇಷಾಂ ಭೇದ ಏವ ॥ "** ಅರ್ಥವು—ನದೀ ಜಲ ಪರಮಾಣುಗಳಿಗೆ ಪೂರ್ವದಿಂದಲೂ ಸಮುದ್ರದಲ್ಲಿದ್ದ ಜಲಪರಮಾಣುಗಳಿಂದ **ಭೇದವೇ** ಹೊರತು ಅಭೇದವು ಇರುವುದಿಲ್ಲ. ಹಾಗೆಯೇ ಸಮುದ್ರಕ್ಕೂ (ಅದರಲ್ಲಿ ಮಿಳಿತವಾದ) ನದೀ ಪರಮಾಣುಗಳಿಗೂ ಭೇದವೇ ಇರುತ್ತದೆ. ಕಲ್ಪತರು ಪರಿಮಳದಲ್ಲಿಯೂ ಹೀಗೆಯೇ ಹೇಳಿರುತ್ತದೆ. P. 422. ತಮ್ಮ ಮೂಲಗ್ರಂಥಗಳನ್ನು ನೋಡದೆ ಕೆಲವರು ಅದ್ವೈತಿಗಳು ಈ ದೃಷ್ಟಾಂತವು ಅಭೇದಸಾಧಕವೆಂದು ನಂಬಿರುತ್ತಾರೆ.

ರ್ಥವು. ಆಗ ಆತನ ಅಚಿಂತ್ಯಶಕ್ತಿಯೂ, ಸರ್ವಜ್ಞತ್ವವೂ, ಪೂರ್ಣತ್ವವೂ, ಸರ್ವಗತತ್ವವೂ ಕೂಡಲೇ ಅದೃಶ್ಯವಾಗಬೇಕು. * ಅಚಿಂತ್ಯಶಕ್ತಿಯು ಅಲ್ಪಶಕ್ತಿಯಾಗಲಿ ! ಸರ್ವ ವಿಷಯಕಜ್ಞಾನವು ಸ್ವಲ್ಪ ವಿಷಯಕ ಜ್ಞಾನವಾಗಲಿ ; ಪೂರ್ಣತ್ವವು ಅಪೂರ್ಣತ್ವವಾಗಲಿ ! ಸರ್ವಗತತ್ವವು ಅಲ್ಪವ್ಯಾಪ್ತಿರೂಪವಾಗಲಿ ! ಇವೇ ಮುಂತಾದ ಆಪಾದನೆಗಳು ಕೋಟಿ ಮೈಲುಗಳು ಒಂದಂಗುಲವಾಗಲಿ, ಕಲ್ಲು ಆಕಾಶವಾಗಲಿ ಇತ್ಯಾದಿ ಮಾತುಗಳಂತೆ ಅತ್ಯಂತ ವಿರುದ್ಧವಾದುವುಗಳು. ವಿರುದ್ಧಧರ್ಮಗಳುಳ್ಳ ಪದಾರ್ಥಗಳು ಏಕೀಭಾವವನ್ನು ಹೊಂದುವುದು ಅಸಂಭಾವಿತವು. ಮತ್ತು ಅಚಿಂತ್ಯಶಕ್ತಿಯು ಸ್ವಯಂ ನಾಶವಾಗದೆ ಅಲ್ಪಶಕ್ತಿಯಾಗಲಾರದು. ಪೂರ್ಣತ್ವವು ಅಪೂರ್ಣತ್ವವಾಗುವುದಾದರೆ ಪೂರ್ಣತ್ವವು ನಾಶವಾಗಬೇಕು. ಹೀಗೆ ಭಗವದ್ಧರ್ಮಗಳ ಸ್ವರೂಪನಾಶವು ಪ್ರಾಪ್ತವಾಗದೆ ಜೀವತಾದಾತ್ಮ್ಯವು ಭಗವಂತನಿಗೆ ಪ್ರಾಪ್ತವಾಗಲಾರದು. ಪರಬ್ರಹ್ಮನಾದ ಶ್ರೀಕೃಷ್ಣನ ಸ್ವರೂಪವು, ದೇಹವು ಮತ್ತು ಇಂದ್ರಿಯಗಳೂ ಕೂಡ ಶಶ್ವದೇಕಪ್ರಕಾರವಾಗಿ ನಿತ್ಯವಾಗಿರುವುವೆಂದು **" ಅವ್ಯಯಾತ್ಮಾ "** **" ಜನ್ಮಕರ್ಮಚಮೇದಿವ್ಯಂ "** ಇತ್ಯಾದಿ ಅನೇಕ ಗೀತಾವಾಕ್ಯಗಳೂ ಮತ್ತು **" ಸ್ವಾಭಾವಿಕೀ ಜ್ಞಾನಬಲ ಕ್ರಿಯಾಚ "** ಮುಂತಾದ ಅನೇಕ ಶ್ರುತಿಗಳೂ ಹೇಳುತ್ತವೆ. **" ಸತ್ಯಸ್ಸೋ ಅಸ್ಯಮಹಿಮಾ "** ಎಂಬ ಶ್ರುತಿಯೂ ಕೂಡ ಭಗವದ್ಧರ್ಮಗಳು ಮಿಥ್ಯಾಭೂತವಾಗಲಾರವೆಂದು ಹೇಳುತ್ತದೆ. ಕಿಂಚ 4. ಸಂಸಾರತಾಪದಿಂದ ನಿಷ್ಟಪ್ತನಾಗಿ ಸುರಾ

---

* ಈ ನ್ಯಾಯವು ಅದ್ವೈತಮತದಲ್ಲಿ ಛಾಂದೋಗ್ಯಭಾಷ್ಯದ **ಆನಂದಗಿರಿ** ಟೀಕಾ ಗ್ರಂಥಕರ್ತರಿಂದಲೇ ಸೂಚಿತವಾಗಿರುವದು. '' ಕಾಮೋಸ್ಮಿ ಭರತರ್ಷಭ '' ಎಂಬ ಗೀತಾ ಶ್ಲೋಕ ವ್ಯಾಖ್ಯಾನಾವಸರದಲ್ಲಿ **(ಕಾಮಸ್ಯ ಬ್ರಹ್ಮೈಕ್ಯೇ) ಬ್ರಹ್ಮಣೋಽನಾದಿತ್ವಂ ಹೀಯತೇ, ಚೇತನ ಶೇಷತ್ವಾಚ್ಚ ಕಾಮಸ್ಯ ಬ್ರಹ್ಮಣಃ ಸ್ವಾತಂತ್ರ್ಯಂ ಹೀಯತೇ** ಎಂದು ಬರೆದಿರುತ್ತಾರೆ. (ಕಾಮವು ಬ್ರಹ್ಮಾಭಿನ್ನವಾದರೆ) ಬ್ರಹ್ಮನು ಸಾದಿಯಾದ ಕಾಮೈಕ್ಯವುಳ್ಳವನಾದರೆ, ಬ್ರಹ್ಮನೂ ಸಾದಿ (ಜನ್ಯ) ಯಾಗಬೇಕು. ಬ್ರಹ್ಮನು ಮನಸ್ಸಿಗೆ ಅಧೀನವಾದ ಕಾಮೈಕ್ಯವನ್ನು ಹೊಂದಿದರೆ ಬ್ರಹ್ಮನೂ ಮನಸ್ಸಿಗೆ ಅಧೀನತೆಯನ್ನು ಹೊಂದಬೇಕು. ಎಂದು ಹೇಳಿರುತ್ತಾರೆ. ಪ್ರಕೃತದಲ್ಲಿ ಜೀವನ ವಿಷಯದಲ್ಲೂ ಈ ನ್ಯಾಯವನ್ನು ಅತಿದೇಶಮಾಡಬಹುದು. ಬ್ರಹ್ಮನು ಜನ್ಯದೇಹವುಳ್ಳ ಜೀವೈಕ್ಯವನ್ನು ಹೊಂದಿದರೆ ಬ್ರಹ್ಮನೂ ಜನ್ಯದೇಹವುಳ್ಳವನಾಗಬೇಕು ; ಬ್ರಹ್ಮನು ಅಲ್ಪನಾದ (ಮತ್ತು ಅಣುವಾದ) ಜೀವೈಕ್ಯವನ್ನು ಹೊಂದಿದರೆ ಬ್ರಹ್ಮನೂ ಅಲ್ಪನೂ ಅಣುವೂ ಆಗಬೇಕು. ಬ್ರಹ್ಮನು ಪರತಂತ್ರನಾದ ಜೀವೈಕ್ಯವನ್ನು ಹೊಂದಿದರೆ ಬ್ರಹ್ಮನೂ ಪರತಂತ್ರನಾಗಬೇಕು ; ಇತ್ಯಾದಿ ಸರ್ವ ದೋಷಗಳೂ ಐಕ್ಯವನ್ನು ಒಪ್ಪಿಕೊಂಡರೆ ಬರುವುದೆಂದು ಅದ್ವೈತಿಗಳೇ ತೋರಿಸಿರುತ್ತಾರೆ.

ಪಾಸ ಸುವರ್ಣಸ್ತೇಯಾದಿಗಳನ್ನು ಆಚರಿಸಿ ಅತ್ಯಂತ ವಿಪತ್ತಿನಲ್ಲಿ ಸಿಕ್ಕಿಬಿದ್ದಿರುವ ತತ್ವಜ್ಞಾನಶೂನ್ಯನಾದ ಮೂರ್ಖನು ಆತ್ಮ ಹನನವನ್ನು ಇಚ್ಛಿಸಬಹುದು. ಆದರೆ ನಿತ್ಯವ್ಯಕ್ತವಾದ ಸ್ವರೂಪಭೂತವಾದ ಪೂರ್ಣಸುಖಾನುಭವವನ್ನು ಹೊಂದಿರುವ ಮತ್ತು ತನ್ನ ನಿತ್ಯಸುಖವನ್ನು ಅವಿದ್ಯಾದಿರೂಪವಾದ ಮೂಷಿಕಹಾವಳಿಯಿಂದಲೂ, ದುರಾಗ್ರಹದಿಂದ ತಾದಾತ್ಮ್ಯವನ್ನು ಕೋರುವ ಅಧಮಜೀವರುಗಳ ನಿರಂತರ ಪೀಡೆಯಿಂದಲೂ ರಕ್ಷಿಸಿಕೊಳ್ಳುವದಕ್ಕೆ ಸಾಧಕವಾದ ಪೂರ್ಣಶಕ್ತಿ ಮತ್ತು ಸರ್ವಜ್ಞತ್ವರೂಪ ಪ್ರಬಲ ಅಮಾತ್ಯರಿಂದ ಸಹಿತನಾದ, ರಾಜಾಧಿರಾಜನಾದ ಪರಮಾತ್ಮನು ತನ್ನ ಸ್ವರಾಜ್ಯವಾದ (ಸ್ವರೂಪಭೂತವಾದ) ಪೂರ್ಣಸುಖವನ್ನು ನೀಚಜೀವನಿಗೆ ದಾನಮಾಡಿ ವನವಾಸಕ್ಕೆ ಹೋಗಲಾರನು. ಶ್ರೀ ರಾಮನು ವನವಾಸಕ್ಕೆ ಹೋದರೂ ಛಾಯೆಯಂತೆ ಅನುಸರಿಸಿದ ತನ್ನ ಪತ್ನಿಯನ್ನು ಪರಿತ್ಯಾಗಮಾಡಲಿಲ್ಲ. ಹೀಗಿರುವಲ್ಲಿ ಪ್ರೇಕ್ಷಾವಂತರಿಗೆ ಚೂಡಾಮಣಿಯಾದ ಪರಬ್ರಹ್ಮನು ನನಗೆ ಪೂರ್ಣಸುಖವು ಬೇಡ. ನನಗೆ ಅಲ್ಪಸುಖವು ಬೇಕು ಎಂದು ದುರ್ಬುದ್ಧಿಗೆ ವಶನಾಗಿ ತನ್ನ ಸ್ವರೂಪವನ್ನೇ ಕಳೆದುಕೊಂಡು ಆತನ ಆಧಿಪತ್ಯವಿನಕ್ಷೆಯಿಂದ ನರಕವೇದನೆಗಿಂತಲೂ ದುಸ್ಸಹವಾದ ನೀಚಜೀವತಾದಾತ್ಮ್ಯವನ್ನು ಹೊಂದುವನೆಂಬುದು ಅತ್ಯಂತ ಅಪಹಸನೀಯ ಪ್ರಕ್ರಿಯೆಯು.

ಜೀವಸ್ವರೂಪವು ಪರಮಾತ್ಮನಿಂದ ಭಿನ್ನವಾಗಿ ನಿತ್ಯವಾಗಿರುವುದೆಂದೂ ಮತ್ತು 5. ಜೀವಸ್ವಭಾವಕ್ಕೆ ಪರಮಾತ್ಮನು ಸದಾ ನಿಯಾಮಕನಾಗಿ ರಕ್ಷಕನಾಗಿರುವನೆಂದೂ ಶ್ರೀ ಕೃಷ್ಣನು ಹೇಳುತ್ತಾನೆ.

11. **ಅಜೋನಿತ್ಯಶ್ಶಾಶ್ವತೋಽಯಂ ಪುರಾಣೋ ನಹನ್ಯತೇ ಹನ್ಯಮಾನೇಶರೀರೇ** (2. 20.)

12. **ನಿತ್ಯಃ ಸರ್ವಗತ ಸ್ಥಾಣುರಚಲೋಽಯಂ ಸನಾತನಃ।** (2. 24.)

13. **ದೇಹೀನಿತ್ಯ ಮವಧ್ಯೋಽಯಂ ದೇಹೇಸರ್ವಸ್ಯಭಾರತ ।** —(2. 30.)

ಇದರ ತಾತ್ಪರ್ಯವು :—ಈ ಜೀವನು (ಅಜನೂ, ನಿತ್ಯನೂ, ಶಾಶ್ವತನೂ ಆದ ಈಶ್ವರನಿಗೆ ಪ್ರತಿಬಿಂಬನಾದುದರಿಂದ ತಾನೂ) ಸ್ವರೂಪೇಣ ಜನ್ಮರಹಿತನು; ಸ್ವರೂಪನಾಶವಾಗುವ ವಿಕಾರವನ್ನು ಹೊಂದದೆ ಏಕಪ್ರಕಾರವಾಗಿರುವವನು ; (ಹಾಗಾದರೂ ಭಗವಂತನ ಸಾಮ್ಯವು ಬರಲಿಲ್ಲವೆಂದು ಹೇಳುತ್ತಾನೆ :—) ಜೀವನು ಪುರಾಣನು ; ಶರೀರವನ್ನು ಬಿಟ್ಟು ಶರೀರಾಂತರವನ್ನು ಹೊಂದುತ್ತಲೇ

ಇರುವನು. ಆದರೆ ಶರೀರವು ನಾಶವಾಗುತ್ತಿದ್ದರೂ ಸ್ವರೂಪವು ನಾಶವಾಗುವುದಿಲ್ಲ. (ಇಷ್ಟೇ ಇವನ ಸಾಮರ್ಥ್ಯವು). 12. ಈ ಜೀವನು ನಿತ್ಯನು, ಸರ್ವಗತನಾದ ಪರಮಾತ್ಮನಲ್ಲಿ ಇರುವವನೂ, ಮತ್ತು ಅಣುವು; * (ಈಶ್ವರಾಶ್ರಿತತ್ವದಿಂದ) ಚಲನರಹಿತನು ಮತ್ತು ವಿಧಿಬದ್ಧನು. 13. (ಜೀವನಿತ್ಯತ್ವವು ಸ್ವಾಭಾವಿಕವಾದುದರಿಂದ ಈಶಾಧೀನವಲ್ಲವೆಂಬ ಶಂಕೆಯು ಅಯುಕ್ತವೆಂದು ಹೇಳುತ್ತಾನೆ:—) ಜೀವನ ಸೂಕ್ಷ್ಮದೇಹದಲ್ಲೂ ಸ್ಥೂಲದೇಹದಲ್ಲೂ ಮತ್ತು ಸ್ವರೂಪದೇಹದಲ್ಲೂ ಅಯಂ= ಎಂದರೆ ಪೂರ್ವಶ್ಲೋಕದಲ್ಲಿ ಪ್ರಕೃತನಾದ ಅಚಿಂತ್ಯಶಕ್ತಿಯುಳ್ಳ ಪರಮಾತ್ಮನು ರಕ್ಷಕನಾಗಿರುತ್ತಾನೆ. ಆದುದರಿಂದ ಜೀವನು ಸರ್ವದಾ ಅವಧ್ಯನು. (ನಿಯಾಮಕನಾದ ಈಶ್ವರನ ಇಚ್ಛೆಯಿಲ್ಲದೆ ಯಾವ ದೇಹಪಾತವೂ ಆಗಲಾರದೆಂದು ಭಾವವು.)

ಈ ವಾಕ್ಯದಿಂದ "ನಿತ್ಯಂನಿತ್ಯಾತ್ಮನಾಯುತಃ;" ಸ್ವಭಾವೋಜೀವಏವಚ" ಇತ್ಯಾದಿ ಪ್ರಮಾಣವಚನೋಕ್ತ ರೀತಿಯಲ್ಲಿ ನಿತ್ಯತ್ವರೂಪವಾದ ಜೀವನ ಸ್ವಭಾವವನ್ನು ನಾಶಹೊಂದಿಸದೆ (ತನ್ನ ಅಥವಾ ಅನ್ಯಚೇತನರ ತಾದಾತ್ಮ್ಯವನ್ನು ಹೊಂದಿಸದೆ) ರಕ್ಷಿಸುತ್ತಿರುವನೆಂದು ನಿಶ್ಚಿತವಾಗುವುದು. †

ಈ ರೀತಿಯಾಗಿ 1. ಜೀವಸ್ವರೂಪವು ನಿತ್ಯವೂ ನಿರ್ವಿಕಾರವೂ ಆದುದರಿಂದಲೂ, 2. ಪರಮಾತ್ಮಸ್ವರೂಪವು ದೇಹಾದಿಗಳೂ ಕೂಡ ನಿತ್ಯವೂ ನಿರ್ವಿಕಾರವೂ ಆದುದರಿಂದಲೂ 3. ನಹ್ಯನ್ಯೋऽನ್ಯಾತ್ಮನಾಭವತಿ ಎಂಬ ಶಾಸ್ತ್ರಸಿದ್ಧವಾದ ನ್ಯಾಯವನ್ನು ಭಿನ್ನವಾದ ಜೀವಬ್ರಹ್ಮರಿಗೆ ಐಕ್ಯವನ್ನು ಒಪ್ಪುವುದರಿಂದ ಅತಿಕ್ರಮಿಸಬೇಕಾಗುವುದರಿಂದಲೂ, 4. ಅಲ್ಪಜೀವನ ತಾದಾತ್ಮ್ಯವನ್ನು ಹೊಂದಿ

---

* ಸರ್ವಗತಸ್ಥಶ್ಚಾಸೌ ಅಣುಶ್ಚ ಎಂದು ಸರ್ವಗತಸ್ಥಾಣು; ಎಂಬ ಸಮಸ್ತ ಪದದ ವಿಗ್ರಹವು. ಸರ್ವಗತನಾದ ಹರಿಯಲ್ಲಿ ಸ್ಥಿತನಾಗಿರುವವನು ಮತ್ತು ಅಣುವು ಎಂದರ್ಥವು. "**ನಿತ್ಯಂ ಸರ್ವಗತೇ ವಿಷ್ಣೌ ಅಣುರ್ಜೀವೋವ್ಯವಸ್ಥಿತಃ**" ಎಂಬ ವಿಷ್ಣುಪುರಾಣದ ಸಮಾಖ್ಯಾವಚನದಿಂದ ಈ ವ್ಯಾಖ್ಯಾನವು ಅತ್ಯಂತ ಪ್ರಾಮಾಣಿಕವೆಂದು ನಿಶ್ಚಯಿಸಬಹುದು. "ಮತ್ಸ್ಥಾನಿ ಸರ್ವಭೂತಾನಿ" ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. ತಕಾರಕ್ಕೆ ದಕಾರಾದೇಶವನ್ನು ಮಾಡಿದರೆ ಸನಾತನಃ ಎಂಬುದು ಸನಾದನಃ ಎಂದಾಗುವುದು. ವಿಧಿನಿಷೇಧಗಳಿಂದ ಬದ್ಧನು ಎಂದು ಅದರ ಅರ್ಥವು.

† ರಸೋಽಹಮಪ್ಸು; ಶಬ್ದಃಖೇ, ತೇಜಶ್ಚಾಸ್ಮಿವಿಭಾವಸೌ ಇತ್ಯಾದಿ ಬಹು ಸ್ಥಳಗಳಲ್ಲಿ ಪದಾರ್ಥಗಳ ಅನಾದಿನಿತ್ಯಸ್ವಭಾವಗಳಿಗೂ ನಿಯಾಮಕನಾಗಿ ಪರಬ್ರಹ್ಮನು ರಕ್ಷಣೆಮಾಡಿರುತ್ತಿರುವುದು ಸ್ಪಷ್ಟವಾಗಿ ಶ್ರೀಕೃಷ್ಣನಿಂದಲೇ ಹೇಳಲ್ಪಟ್ಟಿರುತ್ತದೆ.

ದರೆ ತಾನೂ ಅಲ್ಪನೇ ಆಗಬೇಕಾಗುವುದರಿಂದಲೂ, 5. ಪರಮಾತ್ಮನು ಪ್ರೇಕ್ಷಾವಂತನಾದುದರಿಂದ ತನ್ನ ಸ್ವರೂಪಸುಖವನ್ನು ನೀಚಜೀವನ ತಾದಾತ್ಮ್ಯದಿಂದ ಕಳೆದುಕೊಳ್ಳಬಾರದೆಂಬ ಸರ್ವಚೇತನಸ್ವಾಭಾವಿಕವಾದ ಇಚ್ಛೆಯುಳ್ಳವನಾಗಿ ಆ ವಿಷಯದಲ್ಲಿ ಅದರ ಪರಿರಕ್ಷಣೆಗೆ ಬೇಕಾಗುವ ಪೂರ್ಣ ಶಕ್ತಿಯುಳ್ಳವನಾಗಿರುವುದರಿಂದಲೂ, 6. ಮತ್ತು ತನಗಿಂತ ಭಿನ್ನರಾದ ಜೀವರ ಸ್ವಭಾವಪ್ರವೃತ್ತ್ಯಾದಿಗಳಿಗೆ ನಿಯಾಮಕನಾಗಿ ಅವರ ಅಂತರ್ಗತನಾಗಿ ರಕ್ಷಿಸುತ್ತಿರುವನೆಂದು "ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನತಿಷ್ಠತಿ ;" "ಮತ್ತಃ ಸರ್ವಂಪ್ರವರ್ತತೇ" ಇತ್ಯಾದಿ ಅನೇಕ ವಾಕ್ಯಗಳಲ್ಲಿ ಶ್ರೀಕೃಷ್ಣನು ಹೇಳಿರುವುದರಿಂದಲೂ ಜೀವಜೀವೈಕ್ಯವಾಗಲೀ ಜೀವಬ್ರಹ್ಮೈಕ್ಯವಾಗಲೀ ಅನಾದ್ಯನಂತ ಕಾಲದಲ್ಲಿ ಯಾವಾಗಲೂ ಸಂಭವಿಸಲಾರದು.

4.

ಪ್ರಶ್ನೆ—ಸ್ವಾಮಿ! ಜೀವಬ್ರಹ್ಮರ ಐಕ್ಯವನ್ನು ನಿಷೇಧಿಸುವ ಭಗವದ್ವಚನಗಳು ಯಾವುವು?

ಉತ್ತರ—ಪರಬ್ರಹ್ಮನು ಗುಣಬದ್ಧನಾದ ಜೀವನಲ್ಲವು ಮತ್ತು ಪರಬ್ರಹ್ಮನು ಜೀವನೆಂಬುದು ಮೂಢರ ತತ್ವವು ; ಎಂದು ಕೆಲವು ವಾಕ್ಯಗಳು ಹೇಳುತ್ತವೆ. ಜೀವನು ಬ್ರಹ್ಮನೆಂದು ತಿಳಿದರೆ ಅನರ್ಥವುಂಟೆಂದೂ ಕೆಲವು ವಾಕ್ಯಗಳು ಹೇಳುತ್ತವೆ. ತಥಾಹಿ—

(1) **ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂಜಗತ್ ।**
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಂ ॥

—(7. 13.)

ಅರ್ಥವು—ಈ ಜಗತ್ತಿನಲ್ಲಿರುವ ಸರ್ವ ಅಜ್ಞಾನಿಗಳ ಸಮೂಹವೂ ತ್ರಿಗುಣಕಾರ್ಯಗಳಾದ ಪದಾರ್ಥಗಳಿಂದ ಮೋಹಿತವಾಗಿ (ತ್ರಿಗುಣಕಾರ್ಯವಾದ ದೇಹದಿಂದ ಬದ್ಧರಾದ ಜೀವರ ದರ್ಶನದಿಂದ ಮೋಹಿತವಾಗಿ), ಈ ತ್ರಿಗುಣಭಿನ್ನನಾಗಿಯೂ, ತ್ರಿಗುಣಬದ್ಧನಲ್ಲದೆಯೂ, ತ್ರಿಗುಣವಿಕಾರರಹಿತ ದೇಹವುಳ್ಳವನೂ ಆದ, ಅತಏವ (ದೇಹದಿಂದಲೂ) ನಾಶರಹಿತನಾದ ನನ್ನನ್ನು ತಿಳಿಯುವುದಿಲ್ಲ. ಲೋಕದಲ್ಲಿ ಬ್ರಹ್ಮಾದಿ ಜೀವರ ದೇಹಗಳು ತ್ರಿಗುಣಮಯವಾಗಿರುವಂತೆ ಶ್ರೀಕೃಷ್ಣನ ಶರೀರವೂ ತ್ರಿಗುಣಮಯವಾದುದು ; ಬ್ರಹ್ಮಾದಿಗಳು ಜೀವರಾಗಿರುವಂತೆ ಶ್ರೀಕೃಷ್ಣನೂ ಗುಣಮಯ ದೇಹವುಳ್ಳ ಒಬ್ಬ ಜೀವನು ಎಂದು ಅಜ್ಞಜನರು

ತಿಳಿಯುತ್ತಾರೆ; ವಸ್ತುತಃ ಶ್ರೀಕೃಷ್ಣನು ತ್ರಿಗುಣನಿರ್ಮಿತವಲ್ಲದ ಅಪ್ರಾಕೃತವಾದ ದಿವ್ಯದೇಹವುಳ್ಳ ಪರಮಚೇತನನು; ಎಂದು ಭಾವವು.

(2) ಅವ್ಯಕ್ತಂವ್ಯಕ್ತಿಮಾಪನ್ನಂಮನ್ಯಂತೇ ಮಾಮಬುದ್ಧಯಃ ।
ಪರಂಭಾವಮಜಾನಂತೋ ಮಮಾವ್ಯಯಮನುತ್ತಮಂ ॥
—(7. 24.)

ಅರ್ಥವು—ದುರ್ಬುದ್ಧಿಯುಳ್ಳವರು ಇತರ (ಸರ್ವಜೀವ) ವಿಲಕ್ಷಣವಾದ, ಉತ್ತಮೋತ್ತಮ ರಹಿತವಾದ, ಸರ್ವಪ್ರಕಾರದಿಂದಲೂ (ಸ್ವರೂಪೇಣಮತ್ತು ದೇಹತಃ) ನಾಶರಹಿತವಾದ, ನನ್ನ ಯಥಾರ್ಥ ಸ್ಥಿತಿಯನ್ನು ತಿಳಿಯದೆ, ಅವ್ಯಕ್ತಂ= ಎಂದರೆ ಅವ್ಯಕ್ತಸ್ವರೂಪನಾದ ಅಥವಾ ಜನ್ಮದೇಹರಹಿತನಾದ ನನ್ನನ್ನು "ನಾನು" "ನಾನು" ಎಂದು ಪ್ರತೀತಿ ವಿಷಯವಾಗಿ ಸರ್ವದಾ ವ್ಯಕ್ತನಾದ (ಅಥವಾ ಕಾರ್ಯದೇಹವುಳ್ಳ) ಜೀವನು ಎಂದು ತಿಳಿಯುತ್ತಾರೆ. ಅವ್ಯಕ್ತನಾದ ಪರಬ್ರಹ್ಮನನ್ನು ಸರ್ವದಾ ವ್ಯಕ್ತವಾದ ಅಹಂಪದಾರ್ಥವಾದ ಜೀವನೆಂದು ತಿಳಿಯುವವರು ವಿಪರೀತಜ್ಞಾನಿಗಳು ಎಂದು, ಬ್ರಹ್ಮನೇ ಜೀವನೆಂದು ತಿಳಿಯುವವರನ್ನು ಶ್ರೀಕೃಷ್ಣನು ನಿಂದಿಸಿರುತ್ತಾನೆ.

(3) ಅವಜಾನಂತಿಮಾಂ ಮೂಢಾಮಾನುಷೀಂತನುಮಾಶ್ರಿತಂ ।
ಪರಂಭಾವಮಜಾನಂತೋ ಮಮಭೂತಮಹೇಶ್ವರಂ ॥11॥
ಮೋಘಾಶಾಮೋಘಕರ್ಮಾಣೋ ಮೋಘಜ್ಞಾನಾವಿಚೇತಸಃ ।
ರಾಕ್ಷಸೀಮಾಸುರೀಂ ಚೈವಪ್ರಕೃತಿಂ ಮೋಹಿನೀಂ ಶ್ರಿತಾಃ ॥12॥
ಮಹಾತ್ಮಾನಸ್ತುಮಾಂ ಪಾರ್ಥದೈವೀಂಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯಮನಸೋ ಜ್ಞಾತ್ವಾಭೂತಾದಿಮವ್ಯಯಂ ॥13॥
ಸತತಂ ಕೀರ್ತಯಂತೋ ಮಾಂಯತಂತಶ್ಚದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾನಿತ್ಯಯುಕ್ತಾ ಉಪಾಸತೇ ॥
—(9. 11-14.)

ಇದರ ಅರ್ಥವು—11. ತಾಮಸಜನರು ಸರ್ವದಾ ಏಕಪ್ರಕಾರವಾಗಿರುವ, ಮಹತ್ತಾದ, ಅಚಿಂತ್ಯಶಕ್ತಿಯುಳ್ಳ, ಪರಂ ಎಂದರೆ ಜೀವವಿಲಕ್ಷಣವಾದ (ಅಥವಾ ಉತ್ತಮವಾದ) ನನ್ನ ಯಥಾರ್ಥಸ್ವರೂಪವನ್ನು ತಿಳಿಯದೆ ಮನುಷ್ಯ ದೇಹದಂತೆ ರೂಪವನ್ನು ತಾಳಿರುವ ನನ್ನನ್ನು ಮನುಷ್ಯದೇಹವುಳ್ಳ ಜೀವನೆಂದು ತಿಳಿದು ಅವಮಾನಮಾಡುತ್ತಾರೆ ಎಂದರೆ ಅಧಮನನ್ನಾಗಿ ತಿಳಿಯುತ್ತಾರೆ. (ಜೀವವಿಲಕ್ಷ

ಣನಾದ ಜೀವರಿಗಿಂತ ಉತ್ತಮನಾದ ಪರಮಚೇತನನನ್ನು ಸಾಮಾನ್ಯ ಮನುಷ್ಯರಂತೆ ಇವನೂ ಒಬ್ಬ ಜೀವನು ಎಂದು ತಿಳಿಯುವುದು ಪರಮಾತ್ಮನಿಗೆ ಅವಮಾನ ಮಾಡಿದ ಹಾಗಾಯಿತು. ಮಹಾರಾಜರನ್ನು ಗುಲಾಮನೆಂದು ತಿಳಿದರೆ ಅವರಿಗೆ ಅವಮಾನಮಾಡಿದ ಹಾಗಾಗುವುದು.) ಪರಮಾತ್ಮನನ್ನು ಅಲ್ಪತ್ವೇನ ತಿಳಿದವರಿಗೆ ಅನರ್ಥವುಂಟೆಂದು ಭಗವಂತನು ಹೇಳುತ್ತಾನೆ.—12. ಇಂಥಾ ಭಗವದ್ದ್ವೇಷಿಗಳ ಅಭಿಲಾಷೆಗಳೆಲ್ಲಾ ವ್ಯರ್ಥವಾಗುವುವು; (ಅವರಿಂದ ಅಭಿಲಷಿತವಾದ ಸ್ವರ್ಗಾದಿಸುಖಗಳು ಪ್ರಾಪ್ತವಾಗಲಾರವು.) ಅವರ ಯಜ್ಞಾದಿ ಕರ್ಮಗಳು ನಿಷ್ಫಲವಾಗುವುವು. ದುರರ್ಥದಿಂದ ಯುಕ್ತವಾಗಿರುವುದರಿಂದ ಅವರ ಜ್ಞಾನವೆಲ್ಲವೂ ವ್ಯರ್ಥವೇ. ಅವರು ಪರಮಾತ್ಮನಿಗೆ ವಿರುದ್ಧಮನಸ್ಸುಳ್ಳವರು. ಅವರು ರಾಕ್ಷಸ ಸಂಬಂಧಿಯಾದ ಮಿಥ್ಯಾಜ್ಞಾನಜನಕವಾದ ಅಸುರಸ್ವಭಾವವನ್ನು ಹೊಂದಿದವರು. (ಈ ಶ್ಲೋಕದಲ್ಲಿ ಪರಮಾತ್ಮನು ಅಧಮಜೀವನೆಂದು ತಿಳಿದವರ ಆಶೆಗಳು, ಕರ್ಮಗಳು, ತತ್ವಜ್ಞಾನವೇ ಮೊದಲಾದ ಸಕಲ ಭಾಗ್ಯವೂ ವ್ಯರ್ಥವು ಎಂದರೆ ಆಮುಷ್ಮಿಕ ಶ್ರೇಯಸ್ಸಿಗೆ ಕಾರಣವಾಗಲಾರದೆಂದು ಹೇಳಿ ಆರೀತಿಯಾದ ಜ್ಞಾನವು ಬುದ್ಧಿಭ್ರಂಶಕರವಾದ ಅಸುರಸ್ವಭಾವವನ್ನು ಹೊಂದಿರುವ ರಾಕ್ಷಸರಿಗೇ ಬರುವುದೆಂದು ನಾಮನಿರ್ದೇಶಮಾಡಿರುತ್ತಾನೆ.) (ಹಾಗಾದರೆ ದೇವಸ್ವಭಾವುಳ್ಳ ಜನರು ನಿನ್ನನ್ನು ಯಾವರೀತಿಯಾಗಿ ತಿಳಿಯುವರೆಂದರೆ ಹೇಳುತ್ತಾನೆ—) 13. ದೇವತಾ ಸಂಬಂಧಿಯಾದ (ಮುಕ್ತಿಯೋಗ್ಯವಾದ) ಸ್ವಭಾವವನ್ನು ಹೊಂದಿರುವ ಮಹಾತ್ಮರಾದರೋ ಅನನ್ಯಮನಸ್ಕರಾಗಿ, ನನ್ನನ್ನು ಸರ್ವಪ್ರಾಣಿಗಳಿಗೆ ಉತ್ಪಾದಕನೆಂದೂ ಮತ್ತು ಚತುರ್ವಿಧ ನಾಶರಹಿತನೆಂದೂ ತಿಳಿದು ಸೇವಿಸುತ್ತಾರೆ. 14. ನಿರಂತರ ನನ್ನ ನಾಮಸಂಕೀರ್ತನ ಮಾಡುವವರಾಗಿ ಅಚಂಚಲವಾದ ನಿಯಮಗಳಿಂದ ನನ್ನ ಪೂಜಾದಿಗಳಲ್ಲಿ ಯತ್ನಮಾಡುವವರಾಗಿ ಭಕ್ತಿಯಿಂದ ನನ್ನನ್ನು ನಮಸ್ಕರಿಸುತ್ತಾ ಸರ್ವದಾ ನನ್ನ ರೂಪದಲ್ಲಿ ಇಡಲ್ಪಟ್ಟ ಮನಸ್ಸುಳ್ಳವರಾಗಿ ನನ್ನನ್ನು ಉಪಾಸನೆ ಮಾಡುತ್ತಾರೆ.

ಶ್ರೀಕೃಷ್ಣನು ಈ ವಾಕ್ಯಗಳಿಂದ ಜೀವನು ಬ್ರಹ್ಮನಲ್ಲವೆಂಬಲ್ಲಿ ಸಾಧಕವಾದ ಕೆಲವು ಯುಕ್ತಿಗಳನ್ನು ಸೂಚಿಸಿರುತ್ತಾನೆ. 1. ಅಸುರಸ್ವಭಾವವುಳ್ಳ ಜನರೇ ಅವನನ್ನು ಅಧಮ ಜೀವನೆಂದು ತಿಳಿಯುವರು. 2. ಆ ಜ್ಞಾನ ನಿಮಿತ್ತದಿಂದ ಅವರ ಯಜ್ಞಾದಿಗಳು ನಿಷ್ಫಲವಾಗುವುವು. 3. ದೈವೀಸ್ವಭಾವವುಳ್ಳ ಈ ಸಜ್ಜನರು ಅವನನ್ನು ಚತುರ್ವಿಧ ನಾಶರಹಿತನಾದ ಸೃಷ್ಟಿಕರ್ತನಾದ ಬ್ರಹ್ಮನೆಂದೇ ತಿಳಿಯುವರು 4. ಪರಬ್ರ

ಹ್ಮನು ಭೂತಾದಿಯು ; ಎಂದರೆ ಒಬ್ಬ ಜೀವನಿಂದ ಮತ್ತೊಬ್ಬ ಜೀವನಿಗೆ ಉತ್ಪತ್ತಿಯು ; ಅವನಿಂದ ಮತ್ತೊಬ್ಬನಿಗೆ ಉತ್ಪತ್ತಿಯು ಎಂದು ಹೇಳುತ್ತಾ ಹೋದರೆ ಅನವಸ್ಥೆಯು ಬರುವುದು. ಅದರ ಪರಿಹಾರಾರ್ಥವಾಗಿ ಜನ್ಮ ದೇಹರಹಿತನಾದ ಒಬ್ಬ ವಿಲಕ್ಷಣ ಉತ್ಪಾದಕನನ್ನು ಕೊನೆಯಲ್ಲಿ ಒಪ್ಪಬೇಕು. ಆತನೂ ಜೀವನಾದರೆ ಮತ್ತೊಬ್ಬನಿಂದ ದೇಹವನ್ನು ಹೊಂದಬೇಕಾಗುವುದರಿಂದ ಅವನು ವಿಲಕ್ಷಣ ಚೇತನನಾಗಬೇಕು. ಅಂಥಾ ನಾಶರಹಿತವಾದ ನಿತ್ಯದೇಹವುಳ್ಳವನು ಪರಮಾತ್ಮನು. ಈ ಅಭಿಪ್ರಾಯವನ್ನು ಅವ್ಯಯಂ ಎಂಬ ವಿಶೇಷಣವು ಸೂಚಿಸುವುದು. ಪರಬ್ರಹ್ಮನು ವಿಲಕ್ಷಣ ಚೇತನನಾದುದರಿಂದ ಅವನು ಜೀವಭಿನ್ನನೆಂದು ಸಿದ್ಧಿಸುವುದು. ಉತ್ಪಾದಕ ಉತ್ಪಾದ್ಯಗಳಿಗೆ ಪಿತೃಪುತ್ರರಿಗಿರುವಂತೆ ಭೇದವು ನಿಶ್ಚಿತವಾಗಿರುವುದು. ಭೂತ ಜನಕನಾದ ಪರಮಾತ್ಮನು ತಾನೇ ದೇಹ ಸಂಬಂಧವನ್ನು ಉಂಟುಮಾಡಿ ಸೃಷ್ಟಿಸುವ ಜೀವನಾಗಲಾರನು.* ತನಗೆ ತಾನೇ ತಂದೆಯೆಂಬುದು ಅಪ್ರಸಿದ್ಧವು.†

---

* "ಆತ್ಮಾವೈಪುತ್ರನಾಮಾಸಿ" ಇತ್ಯಾದಿ ಶ್ರುತಿಗಳಲ್ಲಿ ತಂದೆಯೇ ಮಗನಾಗಿ ಹುಟ್ಟುವನೆಂದು ಇರುವುದರಿಂದ ಪಿತೃಪುತ್ರರಿಗೆ ತಾದಾತ್ಮ್ಯವು ಆಗಬಹುದೆಂದು ಭ್ರಮಿಸಕೂಡದು. ತಂದೆಯೇ ಪುತ್ರಜೀವನಾದರೆ ಮಾತೃಗಾಮಿತ್ವವನ್ನು ಮಹಾದೋಷವೆಂದು ನಿಂದಿಸುವ ಶಾಸ್ತ್ರವನ್ನು ಸುಡಬೇಕಾಗುವದು. ಆದುದರಿಂದ ತಂದೆಯಿಂದ ಅತ್ಯಂತ ಭಿನ್ನನಾದ ಪುತ್ರಜೀವನು ತಂದೆಯ ರೇತಸ್ಸಿನಿಂದ ಪರಿಣತವಾದ ದೇಹವುಳ್ಳವನೆಂದು ಶ್ರುತಿಯು ಗೌಣವಾದ ಅರ್ಥವುಳ್ಳದ್ದಾಗಿರುವುದು. ಆದುದರಿಂದ ಪ್ರಕೃತದಲ್ಲಿಯೂ ಜಗತ್ಪಿತನಾದ ಪರಬ್ರಹ್ಮನಿಗೂ ಜನ್ಯರಾದ ಭೂತಜೀವರಿಗೂ ಅಭೇದವು ಸಂಭವಿಸಲಾರದು.

ಈ ಶ್ಲೋಕದ ಮುಂದಿನ ಶ್ಲೋಕವು.

† ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋಮಾಮುಪಾಸತೇ ।
ಏಕತ್ವೇನಪೃಥಕ್ತ್ವೇನ ಬಹುಧಾವಿಶ್ವತೋ ಮುಖಂ ॥—(9. 15.)

ಎಂದರೆ ಕೆಲವರು ಉಪಾಸಕರು ನನ್ನನ್ನು ಏಕತ್ವವಿಶಿಷ್ಟನೆಂದೂ (ಒಬ್ಬನೇ ಎಂದೂ), ಮತ್ತು ಪೃಥಕ್ತ್ವೇನ= ಎಂದರೆ ಭಿನ್ನವಾಗಿ ಬಹುಪ್ರಕಾರವಾದ ಅನಂತರೂಪಗಳುಳ್ಳವನೆಂದೂ ಉಪಾಸನೆ ಮಾಡುತ್ತಾರೆ; ಎಂದು ಇರುವುದರಿಂದ ಪರಬ್ರಹ್ಮನು ಸ್ವರೂಪೇಣ ಒಬ್ಬನೇ ಆಗಿರುವನು; ಮತ್ತು ಜೀವರೂಪೇಣ ಅನಂತ ಜೀವಾಕಾರಗಳನ್ನು ತಾಳಿರುವನು ಎಂದು ಅರ್ಥ ಮಾಡಬಹುದೆಂದು ಭ್ರಮಿಸುವರು. ಇದು ಅಸಂಗತವು ; ಯಾತಕ್ಕೆಂದರೆ 1. ನನ್ನನ್ನು ಜೀವನೆಂದು ತಿಳಿಯುವವರು ಅಸುರರೆಂದು ಬಹುಪ್ರಕಾರವಾಗಿ ಹಿಂದಿನ ಶ್ಲೋಕಗಳಲ್ಲಿ ಶ್ರೀ ಕೃಷ್ಣನು ನಿಂದಿಸಿರುತ್ತಾನೆ ; 2. ಈ ಭಿನ್ನವಾದ ಅನಂತ ರೂಪಗಳು ಯಾವುವೆಂಬುದನ್ನು ಶ್ರೀಕೃಷ್ಣನು ತಾನೇ ಇದರ ಮುಂದಿನ ಶ್ಲೋಕಗಳಲ್ಲಿ ನಿರೂಪಿಸಿರುತ್ತಾನೆ.—

(4) ಪ್ರವೃತ್ತಿಂ ಚ ನಿವೃತ್ತಿಂ ಚ ಜನಾನವಿದುರಾಸುರಾಃ ।
ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ।
....................ಇತ್ಯಜ್ಞಾನ ವಿಮೋಹಿತಾಃ ।
ಮಾಮಾತ್ಮ ಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ।
ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರ ಮಶುಭಾನಾ ಸುರೀಷ್ವೇವ ಯೋನಿಷು ॥
ಆಸುರೀಂ ಯೋನಿಮಾಪನ್ನಾಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋಯಾಂತ್ಯಧಮಾಂ
ಗತಿಂ ॥—(16. 7-20.)

ಇದರ ತಾತ್ಪರ್ಯವು—ಆಸುರಜನರು ವಿಧ್ಯುಕ್ತ ಆಚರಣೆಯಲ್ಲಿ ಪ್ರವರ್ತಿಸುವುದನ್ನೂ ಮತ್ತು ವಿಧಿಸಿಷಿದ್ಧ ವಿಷಯಗಳಲ್ಲಿ ನಿವರ್ತಿಸುವುದನ್ನೂ ಕೂಡ ತಿಳಿಯಲಾರರು. ಅವರು ನಾನು ಪರಮೇಶ್ವರನು; ನಾನು ಸ್ವತಂತ್ರ ಭೋಗವುಳ್ಳವನು; ನಾನು ಕೃತಕೃತ್ಯನು; ಸ್ವತಂತ್ರಬಲವುಳ್ಳವನು; ಸ್ವತಂತ್ರ ಸುಖವುಳ್ಳವನು ಇತ್ಯಾದಿ ವಿಪರೀತಜ್ಞಾನವುಳ್ಳವರಾಗಿರುವರು. ಮತ್ತು ಸ್ವಶರೀರದಲ್ಲಿಯೂ ಪರಶರೀರಗಳಲ್ಲಿಯೂ ನಿಯಾಮಕನಾಗಿರುವ ನನ್ನನ್ನು ಅತ್ಯಂತ ದ್ವೇಷಮಾಡುವವರಾಗಿ (ಈಶ್ವರನೇ ಸರ್ವಪ್ರೇರಕನಾದರೆ ಈಗ ಸುಮ್ಮನೆ ಕುಳಿತಿರುವ

ಅಹಂಕ್ರತುರಹಂ ಯಜ್ಞಃ ಸ್ವಧಾಮಹಮಹಮೌಷಧಂ ।
ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂಹುತಂ ॥
ಇತ್ಯಾದಿ—(9. 16.)

ಅರ್ಥವು—ಕ್ರತುವಿನಲ್ಲಿ ನಾನು; ಯಜ್ಞದಲ್ಲಿ ನಾನು; "ಸ್ವಧಾ" ದಲ್ಲಿ ನಾನು; ಯಜ್ಞೋಪಯೋಗಿ ವನಸ್ಪತಿಗಳಲ್ಲಿ ನಾನು; ಯಜ್ಞಾಂಗ ಮಂತ್ರಗಳಲ್ಲಿ ನಾನು; ಆಜ್ಯದಲ್ಲಿ ನಾನು; ಅಗ್ನಿಯಲ್ಲಿ ನಾನು; ಹೋಮದಲ್ಲಿ ನಾನು; (ಹೀಗೆ ಬಹು ರೂಪಗಳಿಂದ ನಾನು ಯಜ್ಞಾದಿಗಳಲ್ಲಿ ಸನ್ನಿಹಿತನಾಗಿರುವೆನು.) ಇದೇ ಮುಂತಾದ ಶ್ಲೋಕಗಳಲ್ಲಿ ನಿಯಾಮಕ ಬಹು ರೂಪಗಳನ್ನು ಹೇಳಿರುವುದರಿಂದ ಶ್ರೀಕೃಷ್ಣನೇ ಭಿನ್ನನಾಗಿ ಬಹು ಜೀವಭಾವವನ್ನು ಹೊಂದುವನೆಂದು ಪೂರ್ವ ಶ್ಲೋಕದಲ್ಲಿರುವ "ಪೃಥಕ್ತ್ವೇನಬಹುಧಾವಿಶ್ವತೋ ಮುಖಂ" ಎಂಬ ಪದಗಳಿಗೆ ಅರ್ಥಮಾಡಬಾರದು. ಕಿಂಚ, ಒಂದೇ ಭಗವಂತನ ವಿಶ್ವರೂಪವು ಬಹುಪ್ರಕಾರವುಳ್ಳದ್ದಾಗಿಯೂ ವಿಶ್ವತೋಮುಖವಾಗಿಯೂ ಇರುವಂತೆಯೇ ಅರ್ಜುನನು ನೋಡಿರುವನು. ಆದುದರಿಂದ ಪ್ರಕರಣೋಚಿತವಾಗಿ "ಪೃಥಕ್ತ್ವೇನ" ಇತ್ಯಾದಿ ಪದಗಳಿಗೆ **ಜೀವವಿಲಕ್ಷಣವಾದ** ಬಹು ಪ್ರಕಾರವಾದ (ನಾನಾವರ್ಣಗಳುಳ್ಳ) ಅನಂತರೂಪಗಳುಳ್ಳವನು ಪರಬ್ರಹ್ಮನು (ಶ್ರೀಕೃಷ್ಣನು); ಎಂದು ಅರ್ಥಮಾಡಬೇಕು.

ನನ್ನಿಂದ ವ್ಯಾಪಾರವನ್ನು ಮಾಡಿಸಲಿ; ಅಥವಾ ಭೋಜನಾದಿಗಳನ್ನು ಮಾಡುವ ನನ್ನನ್ನು ತಡೆಯಲಿ; ಹಾಗೆ ಮಾಡದೆ ಇರುವ್ರದರಿಂದ ಈಶ್ವರನು ಸರ್ವನಿಯಾಮ ಕನಲ್ಲ ಎಂದು ಹೇಳುತ್ತಾ, ಈಶ್ವರನ ಸ್ವಾತಂತ್ರ್ಯವನ್ನು ಅಪಲಾಪಮಾಡುವುದರ ಮೂಲಕ ದ್ವೇಷಮಾಡುವವರಾಗಿ,) ನನ್ನ ವಿಷಯದಲ್ಲಿ ಅಧಿಕ ಅಸೂಯೆಯನ್ನು ಮಾಡುತ್ತಾರೆ. (ನಿರ್ದೋಷನಾದ ನನ್ನಲ್ಲಿ ದೋಷವನ್ನೂ, ಗುಣಪೂರ್ಣನಲ್ಲಿ ಗುಣಹೀನತ್ವವನ್ನೂ ತಿಳಿಯುತ್ತಾರೆ.) ಈ ರೀತಿಯಾಗಿ ನನ್ನನ್ನು ದ್ವೇಷಿಸುವ, ಕ್ರೂರರೂ, ಅಶುಭ ಫಲಾರ್ಹರೂ ಆದ ನರಾಧಮರನ್ನು ಸಂಸಾರದಲ್ಲಿ, ಅದ ರಲ್ಲಿಯೂ ತಾಮಸಯೋನಿಯಲ್ಲಿ ಪುನಃ ಪುನಃ ಹುಟ್ಟಿಸುತ್ತೇನೆ. ತಾಮಸಸ್ವಭಾವ ವುಳ್ಳ ಈ ಜನರು ಅನೇಕ ಜನ್ಮಗಳಲ್ಲಿ ಅಸುರಸಂಬಂಧಿ ದೇಹವನ್ನು ಹೊಂದಿದವ ರಾಗಿ ನನ್ನನ್ನು ಸರ್ವಥಾ ಹೊಂದದೆ ಅಧಮಾಂಗತಿಂ ಎಂದರೆ ನಿತ್ಯನರಕಲಕ್ಷಣ ವಾದ ಸ್ಥಾನವನ್ನು ಹೊಂದುತ್ತಾರೆ.

ಈ ಶ್ಲೋಕಗಳಲ್ಲಿ ನಾನೇ ಈಶ್ವರನು ಎಂಬ ಜ್ಞಾನವು. 1. ಅಸುರ ಸ್ವಭಾವಜನ್ಯವೆಂದೂ, 2. ಸ್ವದೇಹ ಪರದೇಹಗಳಲ್ಲಿ ನಿಯಾಮಕನಾಗಿ ಸ್ಥಿತನಾದ ಪರಮಾತ್ಮದ್ವೇಷರೂಪವಾದ ಆಚರಣೆಯೆಂದೂ, 3. "ಇತ್ಯಜ್ಞಾನ ವಿಮೋಹಿತಾಃ" ಎಂದಿರುವ್ರದರಿಂದ ಯಥಾರ್ಥಜ್ಞಾನವಲ್ಲವೆಂದೂ 4. ಮತ್ತು ಅಧಮ ಗತಿರೂಪವಾದ ಘೋರ ಅನರ್ಥಗಳಿಗೆ ಕಾರಣವಾಗುವುದೆಂದೂ ಹೇಳಿರುವುದ ರಿಂದ, ಈಶ್ವರಾಭೇದವು ಮೋಕ್ಷಾರ್ಥಿಗಳಿಗೆ ಸರ್ವಥಾ ಉಚಿತವಲ್ಲವೆಂದು ಸ್ಪಷ್ಟ ವಾಗುವುದು.

ಪ್ರಶ್ನೆ—ಸ್ವಾಮಿ! ಈ ಶ್ಲೋಕದಲ್ಲಿ ಈಶ್ವರೋಽಹಂ ಎಂದರೆ ನಾನು ಸಮರ್ಥನು ಎಂದು ಇಷ್ಟೇ ಅರ್ಥಮಾಡಿದರೆ ಸಾಕು. ನಾನೇ ಪರಮೇಶ್ವರನು; ಬ್ರಹ್ಮಾಭಿನ್ನನು ಎಂದು ಯಾತಕ್ಕೆ ಅರ್ಥಮಾಡಬೇಕು?

ಉತ್ತರ—1. "**ಸಿದ್ಧೋಽಹಂ, ಬಲವಾನ್**" ಇತ್ಯಾದಿ ಪದಗಳೂ ನಾನು ಸಮರ್ಥನು ಎಂಬ ಅರ್ಥವನ್ನು ಕೊಡುವುದರಿಂದ ಈಶ್ವರೋಽಹಂ ಎಂಬಲ್ಲಿ ಯೂ ನಾನು ಸಮರ್ಥನು ಎಂಬ ಅರ್ಥವನ್ನು ಮಾಡಿದರೆ ಶ್ರೀ ಕೃಷ್ಣನ ವಾಕ್ಯ ಗಳಲ್ಲಿ ಪುನರುಕ್ತಿದೋಷವನ್ನು ಹೇಳಿದಂತಾಗುವುದು. ಆದುದರಿಂದ ಇಲ್ಲಿ ನಾನು ಪರಮೇಶ್ವರನು; ನಾನೇ ಸ್ವತಂತ್ರನು ಎಂದೇ ಅರ್ಥಮಾಡಬೇಕು.

2. ನಾನು ಸಮರ್ಥನು; ನಾನು ಭೋಗವುಳ್ಳವನು ಇತ್ಯಾದಿ ಜ್ಞಾನವು ಯಥಾರ್ಥವೇ ಆಗಿರುವುದರಿಂದ ಅವುಗಳಿಂದ ಅಧೋಗತಿಯು ಆಗಲಾರದು.

ಶ್ರೀ ಕೃಷ್ಣನು ದುಷ್ಟಫಲವನ್ನು ಹೇಳಿರುವುದರಿಂದ ನಾನು ಸ್ವತಂತ್ರನಿಯಾಮಕನು; ಸ್ವತಂತ್ರ್ಯಸಾಮರ್ಥ್ಯವುಳ್ಳವನು ಎಂದಾದರೂ ಕೊನೆಯಪಕ್ಷದಲ್ಲಿ ಅರ್ಥ ಮಾಡಬೇಕು. ಸ್ವತಂತ್ರಸಾಮರ್ಥ್ಯವು ಪರಬ್ರಹ್ಮನ ಲಕ್ಷಣವಾದುದರಿಂದ, ಪರಬ್ರಹ್ಮನ ಲಕ್ಷಣವನ್ನು ತನ್ನಲ್ಲಿ ಹೇಳಿಕೊಂಡರೂ ಪರಬ್ರಹ್ಮನು ನಾನೇ ಎಂದು ಹೇಳಿದಹಾಗೆಯೇ ಆಗುವುದು. ಮೈಸೂರು ರಾಜ್ಯವು ನನಗಿರುವುದು ಎಂದು ಹೇಳಿಕೊಂಡರೂ ನಾನೇ ಮೈಸೂರು ರಾಜನು ಎಂದು ಅರ್ಥವಾಗುವುದು. 3. ಕಿಂಚ "**ತಾನಹಂದ್ವಿಷತಃ**" ಎಂದರೆ ಈ ರೀತಿ ನನ್ನಲ್ಲಿ ದ್ವೇಷಮಾಡುವಂಥಾ ಜನರನ್ನು ನಾನು ನರಕದಲ್ಲಿ ಹಾಕುತ್ತೇನೆಂದು ಶ್ರೀಕೃಷ್ಣನು ಹೇಳಿರುತ್ತಾನೆ. ನಾನು ಸಮರ್ಥನು ಎಂಬ ಜ್ಞಾನವು ಕೃಷ್ಣನ ದ್ವೇಷರೂಪವಾಗಿ ಹ್ಯಾಗೆ ಆಗುವುದು? ನಾನು ಬಂಡೆಕಲ್ಲು ಎಂದು ಭ್ರಮಿಸಿದರೆ ನನಗೆ ಅದರಿಂದ ಪ್ರಯೋಜನವೇನೂ ಇಲ್ಲದಿದ್ದರೂ ದೈವದ್ವೇಷವಾಗಲಾರದು. ಶ್ರೀ ಕೃಷ್ಣನು ಪೂರ್ವೋಕ್ತ ಆಚರಣೆಗಳೆಲ್ಲಾ ನನ್ನ ದ್ವೇಷಿಗಳ ಆಚರಣೆಗಳು ಎಂದು ಹೇಳಿರುವುರಿಂದ ಈಶ್ವರೋಹಂ ಎಂದರೆ ನಾನೇ ಪರಬ್ರಹ್ಮನು ಎಂದಾಗಲೀ ಅಥವಾ ಸರ್ವಸ್ವತಂತ್ರನು ಎಂದಾಗಲೀ ಅರ್ಥಮಾಡಬೇಕು. ಇದು ಕೃಷ್ಣದ್ವೇಷವೇ ಆಗುವುದು; ದುಷ್ಟಫಲಗಳಿಗೂ ಕಾರಣವಾಗಬಹುದು. (ನಾನೇ ಚಕ್ರವರ್ತಿಯು ಎಂದು ಹೇಳಿಕೊಂಡರೂ, ಈ ದೇಶಗಳಿಗೆಲ್ಲಾ ನಾನೇ ನಿಯಾಮಕನು ಎಂದು ಹೇಳಿಕೊಂಡರೂ ಚಕ್ರವರ್ತಿ ದ್ವೇಷರೂಪವಾದ ಆಚರಣೆಯು ಆಗುವುದು.) 4. ಮತ್ತು ಶಂಕರಾಚಾರ್ಯರೂ ಕೂಡ ಭಗವದ್ಗೀತೆಯ ಹದಿನೆಂಟನೆಯ ಅಧ್ಯಾಯದಲ್ಲಿ "ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನತಿಷ್ಠತಿ" ಎಂಬ ಶ್ಲೋಕದಲ್ಲಿರುವ ಈಶ್ವರ ಶಬ್ದಕ್ಕೆ "**ಈಶನ ಶೀಲೋನಾರಾಯಣಃ**" ಎಂದು ಅರ್ಥ ಮಾಡಿರುವರು. ಮತ್ತು ಈ ಸ್ಥಳದಲ್ಲಿ ಈಶ್ವರಶಬ್ದದಿಂದ ಪರಬ್ರಹ್ಮನನ್ನು ತೆಗೆದುಕೊಳ್ಳಬಾರದೆಂದು ಹೇಳಿರುವುದಿಲ್ಲ. (ಈ ಪದಕ್ಕೆ ವ್ಯಾಖ್ಯಾನವೇ ಮಾಡಿರುವುದಿಲ್ಲ.) ಗೀತೆಯಲ್ಲಿರುವ ಈಶ್ವರಶಬ್ದವು ಸರ್ವನಿಯಾಮಕನಾದ ನಾರಾಯಣನನ್ನು ಬೋಧಿಸುವುದು ಎಂದು ಅವರು ಅಲ್ಲಿ ಮಾಡಿರುವ ವ್ಯಾಖ್ಯಾನವು ಇಲ್ಲಿಗೂ ಅನ್ವಯಿಸುವುದು. 5. ಮತ್ತು ಭಗವದ್ಗೀತೆಯಲ್ಲಿ ಎಲ್ಲಿಯೂ ಈಶ್ವರಶಬ್ದವು ಸಾಮರ್ಥ್ಯವುಳ್ಳವನು ಎಂಬ ಸಾಮಾನ್ಯ ಅರ್ಥದಲ್ಲಿ ಬಂದಿರುವುದಿಲ್ಲ. ಸ್ವತಂತ್ರ ಶಕ್ತಿಯುಳ್ಳವನು; ಅಚಿಂತ್ಯಸಾಮರ್ಥ್ಯೋಪೇತನು ಇತ್ಯಾದಿ ಅರ್ಥಗಳಲ್ಲಿ ಬ್ರಹ್ಮ ವಾಚಕವಾಗಿಯೇ ಪ್ರಯುಕ್ತವಾಗಿರುವುದು. "ಭೂತಾನಾಮೀಶ್ವರೋಪಿಸನ್"

—(4. 6.) ; " ಸರ್ವಲೋಕ ಮಹೇಶ್ವರಂ "—(5. 29.) ; " ಮಮಭೂತ ಮಹೇಶ್ವರಂ "—(9. 11.) ; " ವಿಶ್ವೇಶ್ವರ ವಿಶ್ವರೂಪ "—(11. 16.) ; " ತಿಷ್ಠಂತಂ ಪರಮೇಶ್ವರಂ "—(13. 27.) ; " ಸಮವಸ್ಥಿತ ಮೀಶ್ವರಂ " —(13. 28.) ; " ಯಚ್ಚಾಪ್ಯುತ್ಕ್ರಾಮತೀಶ್ವರಃ "—(15. 8.) ; " ಬಿಭರ್ತ್ಯ ವ್ಯಯ ಈಶ್ವರಃ "—(15. 17.) ; " ಈಶ್ವರಃ ಸರ್ವಭೂತಾನಾಂ "—(18. 61.) ; ಈ ಸ್ಥಳಗಳಲ್ಲೆಲ್ಲಾ ಈಶ್ವರಶಬ್ದವು ಪರಬ್ರಹ್ಮ (ಶ್ರೀ ಕೃಷ್ಣ) ನನ್ನು ಬೋಧಿಸುವುದೇ ಹೊರತು ಅನ್ಯಾರ್ಥದಲ್ಲಿ ಪ್ರಯುಕ್ತವಾಗಿರುವುದಿಲ್ಲ. ಮತ್ತು 6. ಅಸುರಸ್ವಭಾವವನ್ನು ವರ್ಣಿಸುವ ಈ ಪ್ರಕರಣದಲ್ಲಿ ಬೇರೆ ಅರ್ಥದಲ್ಲಿ ಈಶ್ವರ ಶಬ್ದವನ್ನು ಉಪಯೋಗಿಸುವುದಕ್ಕೆ ನಿಮಿತ್ತವೂ ಇರುವುದಿಲ್ಲ. ಆದುದ ರಿಂದ ನಾನೇ ಪರಬ್ರಹ್ಮನು ಎಂಬ ಮತವನ್ನೇ ಶ್ರೀ ಕೃಷ್ಣನು ಈ ಶ್ಲೋಕಗಳಿಂದ ತನ್ನ ದ್ವೇಷಕ್ಕೂ ಸಂತರ ನಿತ್ಯವಾದ ನರಕಗಳಿಗೂ ಕಾರಣವಾಗುವುದೆಂದು ನಿಂದಿ ಸಿರುತ್ತಾನೆ ಎಂದು ಹೇಳಬೇಕು.

ಪ್ರಶ್ನೆ—ಸ್ವಾಮಿ ! ನಾನೇ ಪರಮೇಶ್ವರನು ; ನಾನೇ ನಾರಾಯಣನು ; ನಾನೇ ಪರಬ್ರಹ್ಮನು ಇತ್ಯಾದಿ ರೀತಿಯಾಗಿ ಉಪಾಸನೆಮಾಡಬೇಕೆಂದು ಅದ್ವೈತ ಮತದಲ್ಲಿ ಹೇಳಿರುತ್ತಾರೆಯೇ ?

ಉತ್ತರ—ಹೇಳಿರುತ್ತಾರೆ. ಇಗೋ ! **ಶಂಕರಾಚಾರ್ಯರು** " ಸ್ವಾತ್ಮ ನಿರೂಪಣದಲ್ಲಿ " ಹೀಗೆ ಬರೆದಿರುತ್ತಾರೆ—

ಹರಿರಹಮಸ್ಮಿ ಹರೋಹಂ ವಿಧಿರಹಮೇವಾಸ್ಮಿ ಕಾರಣಂ ತೇಷಾಂ ।

ಅರ್ಥವು—ನಾನೇ ಹರಿಯು ; ನಾನೇ ಹರನು ; ನಾನೇ ಬ್ರಹ್ಮನು ; ನಾನೇ ಅವರಿಗೆಲ್ಲಾ ಕಾರಣನು.

ಈ ಅಭಿಪ್ರಾಯವನ್ನೇ ಕೃಷ್ಣನು ನಿಂದಿಸಿರುತ್ತಾನೆ. ಆದುದರಿಂದಲೇ ನಾವೂ ಇಷ್ಟು ಖಂಡಿತವಾಗಿ ಈ ತತ್ವವು ಬಹು ಪ್ರಮಾಣವಾಕ್ಯಗಳಿಗೆ ವಿರುದ್ಧ ವಾಗಿರುವುದೆಂಬುದನ್ನು ತೋರಿಸಬೇಕಾಯಿತು. ಕಿಂಚ ಸಕಲ ಜೀವರುಗಳೂ " ಬ್ರಹ್ಮ " ತತ್ವವೇ ಆಗಿದ್ದರೆ " ಕಿಂ ತದ್ಬ್ರಹ್ಮ ? " ಎಂಬ ಅರ್ಜುನನ ಪ್ರಶ್ನೆಗೆ ಉತ್ತರರೂಪವಾಗಿ ಶ್ರೀ ಕೃಷ್ಣನು ನೀನೇ ಮೊದಲಾದ ಸಕಲ ಚೇತನರೂ " ಬ್ರಹ್ಮ " ಪದಾರ್ಥವು ಎಂದು ಉತ್ತರಕೊಡದೆ ಲಕ್ಷ್ಮಿಯೇ ಮೊದಲಾದ ಸಕಲ ಚೇತನರನ್ನೂ ವ್ಯಾವೃತ್ತಿಮಾಡಿ ಪರಮಾಕ್ಷರನು ಬ್ರಹ್ಮನು ಎಂಬ ಉತ್ತರವನ್ನು ಯಾತಕ್ಕೆ ಕೊಟ್ಟನು ?

(5) ಅರ್ಜುನ ಉವಾಚ—ಕಿಂ ತದ್ಬ್ರಹ್ಮ....ಪುರುಷೋತ್ತಮ ।
(8. 1.)

ಶ್ರೀ ಭಗವಾನುವಾಚ—ಅಕ್ಷರಂ ಬ್ರಹ್ಮಪರಮಂ ।—(8. 3.)

ಅರ್ಥವು—ಅರ್ಜುನನು ಕೇಳುತ್ತಾನೆ—ಹೇ ಪುರುಷೋತ್ತಮ ! ಬ್ರಹ್ಮವಸ್ತುವು ಯಾವುದು ? ಶ್ರೀಕೃಷ್ಣನು ಹೇಳುತ್ತಾನೆ—ಪರಮಾಕ್ಷರನು ಬ್ರಹ್ಮನು.

(6) ಕರ್ಶಯಂತಃ ಶರೀರಸ್ಥಂ ಭೂತಗ್ರಾಮಮಚೇತಸಃ ।
ಮಾಂ ಚೈವಾಂತಃ ಶರೀರಸ್ಥಂ ತಾನ್ ವಿದ್ಧ್ಯಾಸುರನಿಶ್ಚಯಾನ್ ॥
(17. 7.)

ಅರ್ಥವು—ಶರೀರದಲ್ಲಿ ನಿಯಾಮಕರಾಗಿ ವಾಸಮಾಡುವ (ಲಕ್ಷ್ಮೀ ಬ್ರಹ್ಮ ರುದ್ರಾದಿ) ದೇವತಾ ಸಮೂಹವನ್ನೂ ಮತ್ತು ಅಂತರ್ಯಾಮಿಯಾಗಿ ಶರೀರದಲ್ಲಿರುವ ನನ್ನನ್ನೂ ಕರ್ಶಯಂತಃ= ಎಂದರೆ ಅಲ್ಪಗುಣವುಳ್ಳವನೆಂದು (ಜೀವನಿಗಿಂತ ಭಿನ್ನನಾಗಿ ಪೂರ್ಣಗುಣನಾಗಿ ಅಂತರ್ಯಾಮಿಯಾಗಿರುವನು ಎಂದು ತಿಳಿಯದೆ ಬ್ರಹ್ಮನು ಶರೀರದಲ್ಲಿರುವ ಜೀವನೇ ಎಂದು) ತಿಳಿಯುತ್ತಾರೆಯೋ, ಅಂಥಾ ವಿಮೂಢರನ್ನು ಅಸುರಸಂಬಂಧಿ ನಿಶ್ಚಯವುಳ್ಳವರೆಂದು ತಿಳಿ.

ಈ ನಮ್ಮ ಶರೀರದಲ್ಲಿ ಜೀವನೂ ಇರುವನು; ಪರಮಾತ್ಮನಾದ ಕೃಷ್ಣನೂ ಇರುವನು. ಜೀವನು ಶರೀರಜನ್ಯದುಃಖಾದಿಗಳನ್ನು ಅನುಭವಿಸುತ್ತಿರುವನು. ಪರಮಾತ್ಮನು ಅಂತರ್ಯಾಮಿಯಾಗಿ ನಿಯಾಮಕನಾಗಿರುವ ಗುಣಪೂರ್ಣಬ್ರಹ್ಮನು. ಹೀಗಿರುವಲ್ಲಿ ಶರೀರದಲ್ಲಿರುವ ಜೀವನನ್ನೇ ಬ್ರಹ್ಮನೆಂದು ತಿಳಿದರೆ ಪರಮಾತ್ಮನನ್ನು (ರಾಜನನ್ನು ಚಂಡಾಲನೆಂದು ತಿಳಿದಂತೆ) ಮನಸಾ "ಕರ್ಶಣ" ಮಾಡಿದಂತಾಗುವುದು; ಎಂದು ತಾತ್ಪರ್ಯವು. (ಪೂರ್ಣನಾದ ಪರಮಾತ್ಮನಿಗೆ ಪ್ರಸಿದ್ಧವಾದ ದೇಹಕರ್ಶಣವು (ಕೃಶನನ್ನಾಗಿ ಮಾಡುವುದು) ಅಶಕ್ಯವಾದುದರಿಂದ ಮನಸ್ಸಿನಿಂದ ಅವನು ಅಧಮನೆಂದು ತಿಳಿಯೋಣದರಿಂದ ಅವನನ್ನು ಕರ್ಶಣಮಾಡಿದ ಹಾಗಾಯಿತು.) ಹದಿನೆಂಟನೆಯ ಅಧ್ಯಾಯದಲ್ಲಿಯೂ ಅಲ್ಪನಾದ ಜೀವನನ್ನು ಪೂರ್ಣನಾದ ಬ್ರಹ್ಮನೆಂದು ತಿಳಿಯುವುದು ತಾಮಸವೆಂದು ಹೇಳುತ್ತಾನೆ.

(7) ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿಸಾತ್ವಿಕಂ ॥
ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇಸಕ್ತಮಹೈತುಕಂ ।
ಅತತ್ವಾರ್ಥವದಲ್ಪಂಚ ತತ್ತಾಮಸಮುದಾಹೃತಂ ॥
(18. 20-22.)

ತಾತ್ಪರ್ಯವು—ಮೊದಲನೆಯ ಶ್ಲೋಕದಲ್ಲಿ ಸಾತ್ವಿಕಜ್ಞಾನದ ಲಕ್ಷಣ ವನ್ನು ಶ್ರೀಕೃಷ್ಣನು ಹೇಳುತ್ತಾನೆ—ಪರಸ್ಪರ ಭಿನ್ನವಾದ **ಅನಂತಪ್ರಾಣಿಗಳಲ್ಲಿ** ಒಬ್ಬನೇ ಒಬ್ಬನು ಅವ್ಯಯನಾದ ಪರಮಾತ್ಮನು ವಾಸಸ್ಥಾನಗಳ ಭೇದನಿಮಿತ್ತವಾಗಿ ಭೇದಹೊಂದದೇ ಇರುವನೆಂದು ತಿಳಿಯುವ ಜ್ಞಾನವು ಸಾತ್ವಿಕವು. ಇದರಿಂದಲೂ ಮತ್ತು " **ಸಮಂಹಿ ಸರ್ವಭೂತೇಷು** " ಇತ್ಯಾದಿ ಸಮಾಖ್ಯಾ ಶ್ಲೋಕಗಳಿಂದಲೂ ಸರ್ವತ್ರಸಮನಾಗಿ ಅನೇಕ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನನ್ನು (ಶ್ರೀ ಕೃಷ್ಣನನ್ನು) ತಿಳಿಯುವುದು ಸಾತ್ವಿಕ ಜ್ಞಾನವೆಂದು ನಿಶ್ಚಿತವಾಗುವುದು. ಇದರಿಂದ ಜೀವನಲ್ಲಿ ಜೀವಭಿನ್ನನಾದ ಪರಮಾತ್ಮನು ಇರುವನೆಂದು ಸಿದ್ಧಿಸುವುದು. ತಾಮಸಜ್ಞಾನದ ಲಕ್ಷಣವನ್ನು ಎರಡನೆಯ ಶ್ಲೋಕದಲ್ಲಿ ಶ್ರೀ ಕೃಷ್ಣನು ಹೇಳುತ್ತಾನೆ:—ಅಲ್ಪನಾದ ಜೀವನ ವಿಷಯದಲ್ಲಿ ಕೃತ್ಸ್ನವತ್ ಎಂದರೆ ಪೂರ್ಣವಾದ ಬ್ರಹ್ಮನಂತೆ ಯಾವಜ್ಞಾನವು ಗ್ರಹಿಸುವುದೋ, (ಜೀವನಲ್ಲಿ ಬ್ರಹ್ಮಾಭೇದವಿಷಯಕವಾದ ಜ್ಞಾನವು ಯಾವುದೋ) ; ಯಾವ ಜ್ಞಾನವು ಯುಕ್ತಿರಹಿತವಾಗಿರುವುದೋ ; ಅತತ್ವಾರ್ಥವತ್ ಎಂದರೆ ಅಸತ್ಯವಿಷಯಕವೋ ಮತ್ತು ಬಹು (ಅಜ್ಞಾನದಿಂದ ಮಿಶ್ರವಾಗಿರುವುದರಿಂದ) ಅಲ್ಪವೋ ಅದು ತಾಮಸಜ್ಞಾನವೆನ್ನಿಸುವುದು.

ಈ ರೀತಿಯಾಗಿ ಸಪ್ತ ಅಕ್ಷೌಹಿಣೀ ಸೇನಾನಾಯಕರಾದ ಪಾಂಡವರಿಗೆ ಸ್ವಾಮಿಯಾದ ಶ್ರೀ ಕೃಷ್ಣನು ವಿಶಾವರ್ತಿ ಸ್ಪಷ್ಟವಾಗಿ ಜೀವಬ್ರಹ್ಮರಿಗೆ ಅಭೇದ ಪ್ರತಿಪಾದಕವಾದ ಮತವನ್ನು ತನ್ನ ಹೃದಯಪೂರ್ವಕವಾಗಿ ಧಿಕ್ಕರಿಸಿರುತ್ತಾನೆ. ಇದೂ ಅಲ್ಲದೆ ಜೀವಬ್ರಹ್ಮರಿಗೆ ಸರ್ವಥಾ ಭೇದಸಾಧಕವಾದ ಅತ್ಯಂತ ಸತ್ಯವಾದ ಪರಸ್ಪರ ವಿರುದ್ಧಧರ್ಮಗಳನ್ನು ಪ್ರತಿಪಾದನೆಮಾಡಿ ಮುಕ್ತಿಯಲ್ಲಿಯೂ ಅಭೇದವು ನಾಶವಾಗುವುದಿಲ್ಲವೆಂದು ಅನೇಕ ಪ್ರಕರಣಗಳಲ್ಲಿ ತೋರಿಸಿರುತ್ತಾನೆ.

5.

ಪ್ರಶ್ನೆ—ಸ್ವಾಮಿ! ಮುಕ್ತಿಯಲ್ಲಿ ಜೀವಬ್ರಹ್ಮರಿಗೆ ಭೇದ ಉಂಟೆಂದು ಶ್ರೀ ಕೃಷ್ಣನು ಎಲ್ಲಿ ಹೇಳಿರುತ್ತಾನೆ ? ಮತ್ತು ಜ್ಞಾನ್ಯವಸ್ಥೆಯಲ್ಲಿ ಅರ್ಜುನನು ಜೀವಬ್ರಹ್ಮರಿಗೆ ಭೇದವನ್ನು ಅಂಗೀಕರಿಸಿರುವನೇ ? ಈ ವಿಷಯವನ್ನು ವಿಶದವಾಗಿ ವಿವರಿಸಬೇಕು.

ಉತ್ತರ—ಶ್ರೀ ಶ್ರೀಗಳವರು—" ಮುಕ್ತಿ " ಯೆಂಬ ಅವಸ್ಥೆಯು ಯಥಾರ್ಥವು ; ಮತ್ತು ಅನೇಕರು ಸಂಸಾರದಿಂದ ಮುಕ್ತರಾಗಿರುವರು ಎಂದು

ಸಿಶ್ಚಿತವಾದರೆ ಮುಕ್ತಿಯಲ್ಲಿ ಭೇದವುಂಟೋ ಅಥವಾ ಅಭೇದವೋ ಎಂಬ ಚರ್ಚೆಯನ್ನು ನಾವು ಮಾಡಬಹುದು; ಆದುದರಿಂದ ಇಲ್ಲಿ ಉಪೋದ್ಘಾತರೂಪವಾಗಿ ಒಂದೆರಡು ಮಾತುಗಳು ಅವಶ್ಯಕವು. ಅದ್ವೈತಮತದಲ್ಲಿ ಮುಕ್ತಿಯು ಅನಾದಿಕಾಲದಲ್ಲಿ ಇದುವರೆವಿಗೆ ಯಾರಿಗೂ ಆಗಿರುವುದಿಲ್ಲವೆಂದು ಸಿಶ್ಚಯಿಸಬೇಕು. ಅದ್ವೈತಿಗಳಲ್ಲಿ ಅನೇಕರು ಏಕಜೀವವಾದಿಗಳು. ಅವರು ಹೇಳುವುದೇನೆಂದರೆ ;— ಒಂದೇ ಜೀವನು ಸಂಸಾರದಲ್ಲಿರುವವನು ; ಅವನ ಅಜ್ಞಾನಕಲ್ಪಿತವಾಗಿ ನಿರ್ಜೀವರಾದ ದೇಹಗಳಾಗಿ ನಾವೆಲ್ಲರೂ ಓಡಾಡುತ್ತಿರುವಂತೆ ಕಾಣುತ್ತೇವೆ. ವಸ್ತುತಃ, ಯಾರ ಅಜ್ಞಾನದಿಂದ ಜಗತ್ತು ಕಲ್ಪಿತವಾಗಿರುವುದೋ ಆ ಒಬ್ಬ ಜೀವನ ದೇಹದಲ್ಲಿಯೇ ಜೀವವು ಇರುವುದು. ಇತರ ದೇಹಗಳಲ್ಲಿ (ನಮ್ಮೆಲ್ಲರ ದೇಹದಲ್ಲಿಯೂ) ಜೀವವೇ ಇಲ್ಲ. ಆ ಏಕಜೀವನಿಗೆ ಮುಕ್ತಿಯಾದರೆ, ಸ್ವಪ್ನದಿಂದ ಪುರುಷನು ಎಚ್ಚರವನ್ನು ಹೊಂದಿದಾಗ, ಸಕಲ ಸ್ವಾಪ್ನಪ್ರಪಂಚವೂ, ಸ್ವಪ್ನದಲ್ಲಿ ಕಂಡ ಜೀವರಾಶಿಗಳೂ ಮಾಯವಾಗುವಂತೆ ನಾವೆಲ್ಲರೂ ಅದೃಶ್ಯರಾಗುವೆವು ; ಎಂದು ಹೇಳುತ್ತಾರೆ. ಅಂತೂ ಒಬ್ಬ ಜೀವನಿಗೆ ಮುಕ್ತಿಯಾದರೆ ಎಲ್ಲರೂ ಅದೃಶ್ಯರಾಗಿ ಸಂಸಾರೋಪರಮವು ಪ್ರಾಪ್ತವಾಗುವುದು. ಪ್ರಕೃತದಲ್ಲಿ ಸಂಸಾರವು ಇನ್ನೂ ಶಾಂತವಾಗಿಲ್ಲವಾದುದರಿಂದ, ಅನಿರ್ದಿಷ್ಟನಾದ ಆ ಏಕಜೀವನಿಗೆ ಇನ್ನೂ ಮುಕ್ತಿಯು ಆಗಿಲ್ಲ; ಅವನ ಅಜ್ಞಾನಕಲ್ಪಿತರಾದ ನಿರ್ಜೀವರಾದ ಇತರರಿಗೆ ಮುಕ್ತಿಪ್ರಸಕ್ತಿಯೇ ಇಲ್ಲವೆಂಬುದು ಸಿದ್ಧವಾಯಿತು.

ಇನ್ನು ಕೆಲವರು ಅದ್ವೈತಿಗಳು ಬಹು ಜೀವವಾದಿಗಳು. ಈ ಮತದ ರೀತಿಯಿಂದಲೂ ಯಾರಿಗೂ ಇದುವರೆವಿಗೆ ಮುಕ್ತಿಯಾಗಿರುವುದಿಲ್ಲ. 1. ಹೇಗೆಂದರೆ :- ಅವಿದ್ಯಾವಿಮೋಹಿತರಾದ ಜೀವಚೇತನರಿಗಿಂತ ಮಾಯಾವೃತರಾದ ಬ್ರಹ್ಮವಿಷ್ಣುರುದ್ರಾದಿ ಈಶ್ವರಚೇತನರು ಜ್ಞಾನದಿಂದ ಪ್ರಬಲರು ಎಂದು ಅವರು ಅಂಗೀಕರಿಸಿರುತ್ತಾರೆ. (ಅದ್ವೈತಮತದ ರೀತ್ಯಾ) ಜ್ಞಾನಿಗಳಿಗೆ ಗುರುವಾದ ವಿಷ್ಣುವಿಗಷ್ಟೇ ಅದ್ವೈತತತ್ವವು ಸ್ಫುಟವಾಗಿ ತಿಳಿದಿರಬೇಕು. ಅಂಥಾ ವಿಷ್ಣುವೂ ಕೂಡ ಅನಾದಿಕಾಲದಿಂದಲೂ ಬ್ರಹ್ಮೈಕ್ಯರೂಪ ಮುಕ್ತಿಯನ್ನು ಹೊಂದದೆ ಪ್ರತ್ಯಕ್ಷವಾಗಿ ಅರ್ಜುನನ ರಥದಲ್ಲಿ ಕುಳಿತಿರುವುದರಿಂದ ಬಹುಭ್ರಾಂತಿಯುಕ್ತರಾದ ಇತರ ಜೀವರುಗಳು ಯಾರೂ ಇದುವರೆವಿಗೆ ಮುಕ್ತರಾಗಿಲ್ಲವೆಂಬುದು ಕೈಮುತ್ಯನ್ಯಾಯದಿಂದ ಸಿದ್ಧವು. 2. ಕಿಂಚ **ಶಂಕರಾಚಾರ್ಯರು** ಕೂಡ ಐಕ್ಯಜ್ಞಾನವು ಆದ ಕ್ಷಣವೇ ದೇಹಾದಿಗಳು ನಷ್ಟವಾಗಿ ಬ್ರಹ್ಮೈಕ್ಯವು ಪ್ರಾಪ್ತವಾಗುವುದು: ಪ್ರಾರಬ್ಧಕರ್ಮಾದಿಗಳು ಪ್ರತಿಬಂಧಕವಾಗಿ ಇರುವುದು ಸುಳ್ಳು ಎಂದು ಬರೆದಿರುತ್ತಾರೆ.

ತಥಾಹಿ—**ಅಪರೋಕ್ಷಾನುಭೂತಿಯಲ್ಲಿ**

ಉತ್ಪನ್ನೇಽಪ್ಯಾತ್ಮವಿಜ್ಞಾನೇ ಪ್ರಾರಬ್ಧಂ ನೈವಮುಂಚತಿ ।
ಇತಿಯಚ್ಛ್ರೂಯತೇ ಶಾಸ್ತ್ರೇ ತನ್ನಿರಾಕ್ರಿಯತೇಽಧುನಾ ॥ †

ಎಂದು ಪ್ರತಿಜ್ಞೆ ಮಾಡಿ,

---

† ಈ ವಚನಗಳಿಂದ ಪ್ರಬಲವಾದ ಎರಡು ವಿಷಯಗಳು ತಿಳಿದುಬರುತ್ತವೆ 1. ಶಾಸ್ತ್ರದಲ್ಲಿ ಎಂದರೆ ವೇದಾಂತಸೂತ್ರಗಳಲ್ಲಿ ಪ್ರಾರಬ್ಧವು ಉಂಟೆಂದು ಹೇಳಿರುತ್ತದೆ ಎಂದು ಶಂಕರಾಚಾರ್ಯರು ಒಪ್ಪಿಕೊಂಡು ಅದು ಈಗ ನಮ್ಮಿಂದ ನಿರಾಕರಿಸಲ್ಪಡುವುದು ಎಂದು ಆರಂಭಿಸಿರುವುದರಿಂದ ಇವರ ಅಭಿಪ್ರಾಯವು ಬ್ರಹ್ಮಸೂತ್ರಗಳಿಗೆ ವಿರುದ್ಧವೆಂದು ಅವರ ವಚನದಿಂದಲೇ ಸ್ಪಷ್ಟವಾಗುತ್ತದೆ. ಆ ಶಾಸ್ತ್ರಕ್ಕೆ ಬೇರೇ ತಾತ್ಪರ್ಯವನ್ನು ಕಲ್ಪಿಸುತ್ತೇನೆ ಎಂದು ಹೇಳದೆ ಅದನ್ನು ನಿರಾಕರಣೆಮಾಡುತ್ತೇನೆ ಎಂದು ಪ್ರತಿಜ್ಞೆಮಾಡಿರುವುದರಿಂದ, ವೇದಾಂತಶಾಸ್ತ್ರವೂ ಒಂದೊಂದು ವೇಳೆ ಸುಳ್ಳುಹೇಳಬಹುದೆಂದು ಅವರು ಒಪ್ಪಿದ ಹಾಗಾಯಿತು. ಇಂಥಾ ಬಹು ಸ್ಥಳಗಳ ಪರಾಮರ್ಶೆ ಮಾಡಿಯೇ ಘನಹೊಂದಿದ ಕೀರ್ತಿವುಳ್ಳ ಅದ್ವೈತ ತತ್ವಜ್ಞರಲ್ಲಿ ಅದ್ವಿತೀಯನೆಂದು ಸುಪ್ರಸಿದ್ಧನಾದ ಪಂಡಿತಾಗ್ರಣಿಯಾದ ಡಾಸೆನ್ ಎಂಬಾತನೂ ಕೂಡ ಆನಂದಮಯ ಪ್ರಕರಣದಲ್ಲಿ ಶಂಕರಾಚಾರ್ಯರು ಉದ್ದೇಶಪೂರ್ವಕವಾಗಿ ಸೂತ್ರಕಾರರಿಗೆ ವಿರುದ್ಧವಾದ ಅರ್ಥವನ್ನೇ ಬರೆದಿರುವರೆಂದು ತೋರಿಸಿರುತ್ತಾನೆ—

We can suppose that Shankara disagrees with Badarayana here, that he therefore interprets the sutras first in Badarayana's sense, and then rejects this interpretation, in order to give another in its place in the sense of which he finally interprets the sutras as the standard authority of the school consciously changing their original meaning—Paul Deussen in his System of the Vedanta.

ಅರ್ಥವು—(ಈ ಆನಂದಮಯದ ಪ್ರಕಾರಣದ ಸೂತ್ರಾರ್ಥಗಳಿಗೂ ಶಂಕರಾಚಾರ್ಯರ ಭಾಷ್ಯದಿಂದ ತೋರಿಬರುತ್ತಿರುವ ಅರ್ಥಗಳಿಗೂ ವಿರೋಧವಿರುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಕಾರಣವೇನು? ಇದನ್ನು ಶಂಕರಾಚಾರ್ಯರು ಮಾಡಲೇ ಇಲ್ಲ. ಇದು ಪ್ರಕ್ಷಿಪ್ತವೆಂದಾದರೂ ಊಹಿಸಬಹುದು; ಅಥವಾ ಶಂಕರಾಚಾರ್ಯರು ತಮ್ಮ ಅಭಿಪ್ರಾಯವನ್ನು ಹೇಳದೆ ಯಾರೋ ಮತ್ತೊಬ್ಬರ ಅಭಿಪ್ರಾಯವನ್ನು ಈ ಸೂತ್ರದಲ್ಲಿ ಬರೆದಿರಬಹುದು ಎಂದು ಊಹಿಸಬಹುದು; ಅಥವಾ) ನಾವು ಹೀಗೆ ಊಹಿಸಬಹುದು; ಶಂಕರಾಚಾರ್ಯರು ಈ ಸ್ಥಳದಲ್ಲಿ ಬಾದರಾಯಣರ ಅಭಿಪ್ರಾಯವನ್ನು ಒಪ್ಪುವುದಿಲ್ಲ; ಆದುದರಿಂದ ಅವರು ಮೊದಲು, ಪೂರ್ವಪಕ್ಷವನ್ನು ಉಪಪಾದನೆ ಮಾಡುವ ಪ್ರಕರಣದಲ್ಲಿ, ಬಾದರಾಯಣರ ಸೂತ್ರಾರ್ಥವನ್ನು ನಿರೂಪಿಸಿ ಅನಂತರ ತಮ್ಮ ಅಭಿಪ್ರಾಯಾನುಸಾರವಾಗಿ ತಮ್ಮ ಮತಕ್ಕೆ ಅತ್ಯಂತ ಆಧಾರವಾಗುವ ರೀತಿಯಲ್ಲಿ ಸೂತ್ರವ್ಯಾಖ್ಯಾ

ತತ್ವಜ್ಞಾನೋದಯಾದೂರ್ಧ್ವಂ ಪ್ರಾರಬ್ಧಂ ನೈವವಿದ್ಯತೇ ।
ಅಜ್ಞಾನಿಜನಬೋಧಾರ್ಥಂ ಪ್ರಾರಬ್ಧಂ ವಕ್ತಿನೈಶ್ರುತಿಃ ॥

ಎಂದು ಹೇಳಿರುತ್ತಾರೆ.

ವಿವೇಕಚೂಡಾಮಣಿಯಲ್ಲಿಯೂ ಕೂಡ ಹೀಗೆ ಬರೆದಿರುತ್ತಾರೆ—

ಸಮಾಧಾತುಂ ಬಾಹ್ಯದೃಷ್ಟ್ಯಾ ಪ್ರಾರಬ್ಧಂ ವದತಿಶ್ರುತಿಃ ।
ನತು ದೇಹಾದಿ ಸತ್ಯತ್ವ ಬೋಧನಾಯ ವಿಪಶ್ಚಿತಾಂ ॥

ಅರ್ಥವು—ಆತ್ಮಜ್ಞಾನವು (ಬ್ರಹ್ಮೈಕ್ಯಜ್ಞಾನವು) ಉತ್ಪನ್ನವಾದರೂ ಪ್ರಾರಬ್ಧಕರ್ಮವು ಇನ್ನೂ ಬಿಡುವುದಿಲ್ಲ ಎಂದು ಏನು ಶಾಸ್ತ್ರದಲ್ಲಿ ಹೇಳಿರುವುದೋ ಅದು ಈಗ ನಿರಾಕರಿಸಲ್ಪಡುವುದು. ತತ್ವಜ್ಞಾನೋತ್ಪತ್ತ್ಯನಂತರದಲ್ಲಿ ಪ್ರಾರಬ್ಧವು ಇರುವುದಿಲ್ಲ; ಶ್ರುತಿಯು ಅಜ್ಞಾನಿ ಜನಗಳ ಉದ್ದಿಶ್ಯ ಪ್ರಾರಬ್ಧವು ಉಂಟೆಂದು (ಸುಳ್ಳು) ಹೇಳುವುದು. ಅಜ್ಞಾನಿಗಳ ದೃಷ್ಟಿಯನ್ನು ಅನುಸರಿಸಿ ಶ್ರುತಿಯು ಪ್ರಾರಬ್ಧವು ಉಂಟೆಂದು ಹೇಳುತ್ತದೆ.

ಇದರಿಂದಲೂ, ಐಕ್ಯಜ್ಞಾನವು ಇದುವರೆವಿಗೂ ಯಾರಿಗೂ ಹುಟ್ಟಿ ಮುಕ್ತರಾದವರಿಲ್ಲವೆಂದು ನಿರ್ಣಯಿಸಬಹುದು. ಐಕ್ಯತತ್ವೋಪದೇಶಕ ಶಿಖಾಮಣಿಗಳಾದ

ನವಾಡಬೇಕಾಗಿ, ಬಾದರಾಯಣರಿಗೆ ಇಷ್ಟವಾದ ಸೂತ್ರಾರ್ಥವನ್ನು ತಿರಸ್ಕರಿಸಿರುತ್ತಾರೆ; ಮತ್ತು **ಉದ್ದೇಶಪೂರ್ವಕವಾಗಿ** ಆ ಸೂತ್ರಗಳಿಗೆ ಬಾದರಾಯಣರಿಂದ ಅಭಿಪ್ರೇತವಾದ ಮೊದಲನೆಯ ಅರ್ಥವನ್ನು ಬದಲಾಯಿಸಿರುತ್ತಾರೆ. ಡಾಸನ್ ಸಾಹೇಬರಿಗೆ ಈ ಕೊನೆಯ ನಿಶ್ಚಯದಲ್ಲಿಯೇ ಹೆಚ್ಚು ಸಮ್ಮತಿಯಿರುವುದು.

ಅದ್ವೈತಿಗಳಿಂದ ರಚಿತವಾದ **ಶಂಕರ ದಿಗ್ವಿಜಯದ** 15 ನೆಯ ಸರ್ಗದ 103 ನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಉದಾಹೃತವಾದ ಶ್ಲೋಕದಿಂದಲೂ ಶಂಕರಾಚಾರ್ಯರು ಸೂತ್ರಾರ್ಥವನ್ನು ಅತಿಕ್ರಮಿಸಿ ವ್ಯಾಖ್ಯಾನಮಾಡುತ್ತಾರೆಂಬುದು ಸ್ಪಷ್ಟವಾಗುವುದು.

“ ವ್ಯಾಸೋಪದಿಷ್ಟ ಸೂತ್ರಾಣಾಂದ್ವೈತ ವಾಕ್ಯಾತ್ಮನಾಂಶಿವೇ ।
ಅದ್ವೈತಮೇವ ಸೂತ್ರಾರ್ಥಂ ಪ್ರಾಮಾಣ್ಯೇನ ಕರಿಷ್ಯತಿ ।
ಅವಿಮುಕ್ತೇಸಮಾಸೀನಂ ವ್ಯಾಸಂವಾಕ್ಯೈರ್ವಿಜಿಗ್ಯಚ ॥

ಅರ್ಥವು:—ಶಂಕರಾಚಾರ್ಯರು ಜೀವಬ್ರಹ್ಮರ ಭೇದಾರ್ಥದಲ್ಲಿಯೇ ತಾತ್ಪರ್ಯವುಳ್ಳ ವೇದವ್ಯಾಸರ ಸೂತ್ರಗಳಿಗೆ ಕಾಶೀಕ್ಷೇತ್ರದಲ್ಲಿ ಸ್ಥಿತರಾದ ವ್ಯಾಸರನ್ನು ವಾಕ್ಯಾರ್ಥದಲ್ಲಿ ಜಯಿಸಿ ಅದ್ವೈತವನ್ನೇ ಸೂತ್ರಾರ್ಥವೆಂದು ಹೇಳುತ್ತಾರೆ. ಮೂಲಸೂತ್ರಕಾರರಾದ ವ್ಯಾಸರನ್ನೇ ಗೆದ್ದು ಅವರಿಗೆ ವಿರುದ್ಧವಾದ ಅರ್ಥಗಳನ್ನು ಅವರ ಸೂತ್ರಗಳಿಗೇ ಮಾಡಿರುವ ವ್ಯಾಖ್ಯಾನಕಾರನು ಎಷ್ಟು ಪ್ರಾಮಾಣಿಕನೆಂಬುದನ್ನು ಚರ್ಚಿಸಿ ಪ್ರಯೋಜನವಿಲ್ಲ. H. S.

ಶಂಕರಾಚಾರ್ಯರಿಗೇ ದೇಹಬಂಧವು ಕಳಚಿಹೋಗಿ ಬ್ರಹ್ಮಭಾವವು ಪ್ರಾಪ್ತವಾಗಲಿಲ್ಲ. * ಶುಕವಾಮದೇವಾದಿ ಋಷಿಗಳೂ, ವಿಷ್ಣುಬ್ರಹ್ಮರುದ್ರಾದಿ ದೇವತೆಗಳೂ ಇನ್ನೂ ಸದೇಹರಾಗಿ ಪರಿದೃಶ್ಯಮಾನರಾಗಿರುವುದರಿಂದ ಅವರಿಗೂ ಈ ಉದಾಹೃತ ಶ್ಲೋಕಗಳ ರೀತಿಯಿಂದ ಐಕ್ಯಜ್ಞಾನವು ಪ್ರಾಪ್ತವಾಗಿರುವುದಿಲ್ಲ. ಏಕಜೀವವಾದದಲ್ಲಿಯೂ, ಬಹು ಜೀವವಾದದಲ್ಲಿಯೂ ಅವರ ನ್ಯಾಯದಿಂದಲೇ ಆಲೋಚನೆಮಾಡಿದರೆ ಅನಾದಿ ಸೃಷ್ಟಿಪ್ರವಾಹದಲ್ಲಿ ಇದುವರೆವಿಗೆ ಯಾರೂ ಮುಕ್ತರಾದವರಿಲ್ಲ.

ಉತ್ತರಕಾಲದಲ್ಲಿಯಾದರೂ ಇಂಥಾ ಮುಕ್ತ್ಯವಸ್ಥೆಯು ಬರಬಹುದೆಂದು ಪ್ರಮಾಣವಿರುವುದಿಲ್ಲ. ಹೇಗೆಂದರೆ ಸರ್ವಚೇತನರೂ ವಿಶೇಷಣ ಶ್ರೀ ಕೃಷ್ಣನೂ ನಿತ್ಯರೆಂದು,

(1) **ನಚೈವನಭವಿಷ್ಯಾಮಃ ಸರ್ವೇವಯಮತಃಪರಂ** ।—(2. 12.)
ವಿನಾಶಮವ್ಯಯಸ್ಯಾಸ್ಯ ನಕಶ್ಚಿತ್ಕರ್ತುಮರ್ಹತಿ ॥—(2 17,)
ಅಂತವಂತ ಇಮೇದೇಹಾ ನಿತ್ಯಸ್ಯೋಕ್ತಾಃಶರೀರಿಣಃ ।—(2. 18.)
ಅಜೋನಿತ್ಯಶ್ಶಾಶ್ವತೋಽಯಂಪುರಾಣೋ.... ॥—(2. 20.)
ವೇದಾವಿನಾಶಿನಂನಿತ್ಯಂ.... ।—(2. 21.)
ನಿತ್ಯಸ್ಸರ್ವಗತಸ್ಥಾಣುಃ.... ॥—(2. 24.)
ದೇಹೀನಿತ್ಯಮವಧ್ಯೋಽಯಂ.... ॥—(2. 30.)

ಇತ್ಯಾದಿ ಅನೇಕ ವಾಕ್ಯಗಳಲ್ಲಿ ಹೇಳಲ್ಪಟ್ಟಿರುತ್ತದೆ. ಮತ್ತು ನವಮಾಧ್ಯಾಯದಲ್ಲಿ "ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಂ" ಎಂದು ಹೇಳಿರುವುದರಿಂದ ಸೃಷ್ಟಿಪ್ರವಾಹವೂ ಕೂಡ ನಿತ್ಯವಾಗಿರುವುದೆಂದು ತಿಳಿದುಬರುತ್ತದೆ. ಆದುದರಿಂದ ವಿಷ್ಣುಬ್ರಹ್ಮರುದ್ರಾದಿಗಳ ಮಾಯೋಪಾಧಿಕವಾದ ಈಶ್ವರಭಾವವಾಗಲೀ ಅವಿದ್ಯೋಪಾಧಿಕವಾದ ಅಸ್ಮದಾದಿಗಳ ಜೀವಭಾವವಾಗಲೀ ನಷ್ಟವಾಗಿ ನಮಗೆ ಬ್ರಹ್ಮೈಕ್ಯಜ್ಞಾನದಿಂದ ದೇಹಬಂಧಾದಿಗಳು ಕಳಚಿಹೋಗಿ, ಬ್ರಹ್ಮೈಕ್ಯರೂಪವಾದ ಮುಕ್ತಿಯು ಬರಲಾರದೆಂದು ಖಂಡಿತವಾಗಿಯೂ ನಿಶ್ಚಯಿಸಬಹುದು. ಈರೀತಿಯಾಗಿ ಬ್ರಹ್ಮೈಕ್ಯರೂಪವಾದ ಮುಕ್ತಿಯು ಶಶವಿಷಾಣದಂತೆ ಅಪ್ರಸಿದ್ಧ

---

*"**ಶುಕೋ ಮುಕ್ತಃ ವಾಮದೇವೋ ಮುಕ್ತಃ ಇತ್ಯಾದಯಸ್ತ್ವರ್ಥವಾದಾ ಏವ**" ಎಂದರೆ ಶುಕವಾಮದೇವಾದಿಗಳು ಮುಕ್ತರಾಗಿರುವರೆಂಬುದು ಸ್ತುತಿಪರವಾದ ಮಾತೇ ಹೊರತು ಯಥಾರ್ಥಪ್ರಮೇಯವಲ್ಲವೆಂದು ಅಪ್ಪಯ್ಯದೀಕ್ಷಿತರೇ ಬರೆದಿರುತ್ತಾರೆ.

ವಾಗಿ ಹೋದುದರಿಂದ ಮುಮುಕ್ಷುಗಳಾದ ನಾವೆಲ್ಲರೂ 1. ಬ್ರಹ್ಮೈಕ್ಯಭಿನ್ನವಾದ ಯಾವುದಾದರೂ ಒಂದು ರೀತಿಯಾದ (ಜೀವಭಾವವು ನಿತ್ಯವಾದುದರಿಂದ ನಾಶವಾಗದಿದ್ದರೂ ನಮಗೆ ಬಹು ಸುಖಪ್ರದವಾದ) ಮುಕ್ತ್ಯವಸ್ಥೆಯನ್ನೂ ಮತ್ತು 2. ಬ್ರಹ್ಮೈಕ್ಯಜ್ಞಾನಕ್ಕಿಂತ ಭಿನ್ನವಾದ ಮುಕ್ತಿಹೇತುಭೂತವಾದ ಜ್ಞಾನವನ್ನೂ ಅವಶ್ಯವಾಗಿಯೂ ಒಪ್ಪಬೇಕು. ಹಾಗಲ್ಲದೆ, ಮುಕ್ತಿಯು ಯಾರಿಗೂ ಇಲ್ಲದೆ ಇದ್ದರೆ ಹೋಗಲಿ, ಎಂದು ಹೇಳುವುದು ಶ್ರೀ ಕೃಷ್ಣನಿಗೆ ಪರಮವಿರುದ್ಧವಾದ ಅಭಿಪ್ರಾಯವಾಗಿರುತ್ತದೆ. ಶ್ರೀ ಕೃಷ್ಣನು ಹೇಳುತ್ತಾನೆ.—

(2) **ವೀತರಾಗಭಯಕ್ರೋಧಾ ಮನ್ಮಯಾಮಾಮುಪಾಶ್ರಿತಾಃ ।**
ಬಹವೋಜ್ಞಾನತಪಸಾ ಪೂತಾಮದ್ಭಾವಮಾಗತಾಃ॥---(4. 10.)

ಅರ್ಥವು—ವಿಷಯಸ್ನೇಹವನ್ನೂ, ಭಯಕ್ರೋಧಗಳನ್ನೂ ಪರಿತ್ಯಾಗಮಾಡಿ ನಾನೇ (ಶ್ರೀ ಕೃಷ್ಣನೇ) ಪ್ರಧಾನನೆಂದು ತಿಳಿದವರಾಗಿ ನನ್ನನ್ನೇ ಆಶ್ರಯಿಸಿ ಅನೇಕ ಸಜ್ಜನರು ಜ್ಞಾನದಿಂದಲೂ, ತಪಸ್ಸಿನಿಂದಲೂ ಪವಿತ್ರರಾಗಿ, (ಕರ್ಮಬಂಧವನ್ನು ಪರಿಹರಿಸಿಕೊಂಡು), ನನ್ನಲ್ಲಿ ಸಾಯುಜ್ಯವೆಂಬ ಸ್ಥಿತಿಯನ್ನು ಹೊಂದುತ್ತಾರೆ (ಮುಕ್ತರಾಗುತ್ತಾರೆ). ನನ್ನನ್ನು (ಶ್ರೀ ಕೃಷ್ಣನನ್ನು) ಹೊಂದದೇ ಇರುವುದೇ ಸಂಸಾರಕ್ಕೆ ಕಾರಣವು (ನಿರ್ಗುಣಬ್ರಹ್ಮನನ್ನು ಹೊಂದದೇ ಇರುವುದು ಕಾರಣವಲ್ಲ) ಎಂದೂ ಹೇಳುತ್ತಾನೆ:—

ಅಪ್ರಾಪ್ಯಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ ।—(9. 3.)

ನನ್ನನ್ನು ಹೊಂದದೇ ಇರುವವರು ಜನನಮರಣರೂಪವಾದ ಸಂಸಾರಕ್ಕೆ ಪುನಃ ಪುನಃ ಬರುತ್ತಾರೆ.

ಪ್ರಶ್ನೆ—ಸ್ವಾಮಿ! "ಮದ್ಭಾವಮಾಗತಾಃ" ಎಂದರೆ ನನ್ನ ಭಾವವನ್ನು ಹೊಂದಿದರೆಂದು ಇರುವುದರಿಂದ ಅನೇಕರು ಬ್ರಹ್ಮೈಕ್ಯವನ್ನು ಹಿಂದೆ ಹೊಂದಿರುವರೆಂದು ಅರ್ಥವು ಯಾತಕ್ಕೆ ಆಗಬಾರದು?

ಉತ್ತರ—ಕೃಷ್ಣನಲ್ಲಿ ಐಕ್ಯವನ್ನು ಹೊಂದುವುದು ಮುಕ್ತಿಯು ಎಂದು ಅದ್ವೈತಿಗಳೂ ಒಪ್ಪುವುದಿಲ್ಲ. ನಾವೂ ಒಪ್ಪುವುದಿಲ್ಲ. ಕೃಷ್ಣಭಿನ್ನನಾದ ಬೇರೆ ಬ್ರಹ್ಮನಲ್ಲಿ ಐಕ್ಯವು ಪೂರ್ವೋಕ್ತನ್ಯಾಯಗಳಿಂದ ಸಂಭವಿಸಲಾರದು. ಕಿಂಚ ಕೃಷ್ಣನಲ್ಲಿ ಇದುವರೆವಿಗೆ ಐಕ್ಯವು ಯಾವ ಜೀವನಿಗೂ ಆಗಿರುವುದಿಲ್ಲ. ಆದುದರಿಂದ ಮಮಭಾವಃ ಮದ್ಭಾವಃ ಎಂದು ವಿಗ್ರಹಮಾಡದೆ, ಮಯಿಭಾವಃ

(ಸ್ಥಿತಿಃ) ಮದ್ಭಾವಃ ಎಂದು ವಿಗ್ರಹಮಾಡಬೇಕು. ಭಗವಂತನಲ್ಲಿ ಪ್ರವೇಶವೇ ಮುಕ್ತಿಯೇ ಹೊರತು ವಿಷ್ಣ್ವೈಕ್ಯವು ಮುಕ್ತಿಯಲ್ಲವೆಂದು "**ವಿಶತೇತದನಂತರಂ**" ಎಂದೂ "**ವಿಶಂತಿಯದ್ಯತಯೋವೀತರಾಗಾಃ**" ಎಂದರೆ ಕಾಮಾದಿ ರಹಿತರಾದ ಜ್ಞಾನಿಗಳು ಯಾರಲ್ಲಿ (ಮುಕ್ತಿಯಲ್ಲಿ) **ಪ್ರವೇಶಿಸುವರೋ** (ಅದು ನನ್ನ ಸ್ವರೂಪವು) ಎಂದು ಅರ್ಥಕೊಡುವ ಎಂಟನೆಯ ಅಧ್ಯಾಯದ ಶ್ರೀಕೃಷ್ಣನ ವಾಕ್ಯದಿಂದಲೂ ನಿಶ್ಚಿತವಾಗುವುದು. ಮತ್ತು ಮುಕ್ತಿಯು ಅದ್ವೈತಿಗಳು ಹೇಳುವಂತೆ ಸಿದ್ಧವಾದ ಪರಬ್ರಹ್ಮ ಭಾವವಲ್ಲ; ಮತ್ತೇನೆಂದರೆ ಮುಂದೆ (**ಸಾಧನಾನಂತರ**) **ಪ್ರಾಪ್ತನಾಗುವ** ಒಂದು ಸ್ಥಾನವಿಶೇಷವೆಂದು ಶ್ರೀಕೃಷ್ಣನ ವಾಕ್ಯಗಳಿಂದ ತೋರಿಬರುವುದು. ಮುಕ್ತಿಪರವಾದ ಶ್ರೀ ಕೃಷ್ಣನ ವಾಕ್ಯಗಳನ್ನು ಪರಿಶೀಲನೆಮಾಡೋಣ.

(3) **ಯಂಹಿನವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ ।**
ಸಮದುಃಖಸುಖಂಧೀರಂ ಸೋಽಮೃತತ್ವಾಯಕಲ್ಪತೇ ॥

—(2. 15.)

ಯಾರು........ವೈಷಯಿಕ ಸುಖದುಃಖಗಳಿಂದ ಚಿತ್ತವಿಕಾರವನ್ನು ಹೊಂದುವುದಿಲ್ಲವೋ ಅಂಥಾ ಜ್ಞಾನಿಯು ಮುಕ್ತನಾಗುತ್ತಾನೆ.

(4) **ಕರ್ಮಜಂಬುದ್ಧಿಯುಕ್ತಾಹಿ ಫಲಂತ್ಯಕ್ತ್ವಾಮನೀಷಿಣಃ ।**
ಜನ್ಮಬಂಧವಿನಿರ್ಮುಕ್ತಾಃ ಪದಂಗಚ್ಛಂತ್ಯನಾಮಯಂ ॥

—(2. 51.)

ವಿವೇಕಿಗಳು ನಿಷ್ಕಾಮಧರ್ಮದಿಂದ ಜ್ಞಾನವನ್ನು ಹೊಂದಿ ಜನನಮರಣಾದಿಬಂಧದಿಂದ ವಿನಿರ್ಮುಕ್ತರಾಗಿ ನಿರ್ದುಃಖವಾದ ಸ್ಥಾನವನ್ನು **ಹೊಂದುತ್ತಾರೆ.** (ಮುಕ್ತರಾಗುತ್ತಾರೆ).

(5)...... **ಸಶಾಂತಿಮಾಪ್ನೋತಿನಕಾಮಕಾಮೀ ।**—(2. 70.)

ವಿಷಯಸುಖಗಳಿಂದ ಚಿತ್ತವಿಕಾರವನ್ನು ಹೊಂದದ ಜ್ಞಾನಿಯು ಮುಕ್ತಿಯನ್ನು **ಹೊಂದುತ್ತಾನೆ.** (ವಿಷಯಾಭಿಲಾಷೆಯುಳ್ಳವನು ಮುಕ್ತಿಯನ್ನು ಹೊಂದುವುದಿಲ್ಲ.)

(6) **ನಿರ್ಮಮೋನಿರಹಂಕಾರಃ ಸಶಾಂತಿಮಧಿಗಚ್ಛತಿ ।**—(2. 71.)

ಮಮತಾಹಂಕಾರರಹಿತನಾದ ಜ್ಞಾನಿಯು ಮುಕ್ತಿಯನ್ನು **ಹೊಂದುತ್ತಾನೆ.**

(7) **ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ।**
—(2. 72.)

ಮರಣಕಾಲದಲ್ಲಿ ವಿಷಯಸಂಗರಹಿತನಾಗಿ ಭಗವಂತನ ಸ್ಮೃತಿಯುಕ್ತನಾದ ಪುರುಷನು ಪ್ರಾಕೃತಶರೀರರಹಿತನಾದ ಬ್ರಹ್ಮನನ್ನು **ಹೊಂದುತ್ತಾನೆ.** (ಮುಕ್ತನಾಗುತ್ತಾನೆ.)

(8) **ಬಹವೋಜ್ಞಾನತಪಸಾಪೂತಾಮದ್ಭಾವಮಾಗತಾಃ ।**—(4. 10.)

ಬಹುಜನರು ಜ್ಞಾನಿಗಳಾಗಿ ನನ್ನಲ್ಲಿ ನಿರ್ದುಃಖಾನಂದಾನುಭವಾತ್ಮಕವಾದ ಸ್ಥಿತಿಯನ್ನು ಹೊಂದಿರುತ್ತಾರೆ.

(9) **ಬ್ರಹ್ಮೈವತೇನಗಂತವ್ಯಂ ।**—(4. 24.)

ಬ್ರಹ್ಮಾರ್ಪಣಬುದ್ಧಿಯಿಂದ ಕರ್ಮಮಾಡುವವನಿಂದ **ಹೊಂದಲ್ಪಡತಕ್ಕವನೂ** ಬ್ರಹ್ಮನೇ.

(10) **ಜ್ಞಾನಂಲಬ್ಧ್ವಾ ಪರಾಂಶಾಂತಿ ಮಚಿರೇಣಾಧಿಗಚ್ಛತಿ ।**
—(4-39.)

ಜ್ಞಾನವನ್ನು ಪಡೆದನಂತರ ಶೀಘ್ರದಲ್ಲಿ ಅತ್ಯುತ್ತಮವಾದ ಸುಖವನ್ನು (ಮೋಕ್ಷವನ್ನು) **ಹೊಂದುತ್ತಾನೆ.**

(11) **ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ।**
—(5. 17.)

ಜ್ಞಾನದಿಂದ ನಷ್ಟವಾದ ಪಾಪವುಳ್ಳವರು ಪುನರಾವೃತ್ತಿರಾಹಿತ್ಯರೂಪವಾದ ಮುಕ್ತಿಯನ್ನು **ಹೊಂದುತ್ತಾರೆ.**

(12) **ಸಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ॥**
—(5. 21.)

ಸಮಾಧಿಯೋಗದಲ್ಲಿ ಪರಬ್ರಹ್ಮನ (ಶ್ರೀ ಕೃಷ್ಣನ) ಧ್ಯಾನಮಾಡುವ ಯೋಗಿಯು **ನಾಶರಹಿತವಾದ ಸುಖವನ್ನು ಅನುಭವಿಸುತ್ತಾನೆ.** ಪರಿಸಮಾಪ್ತಿಯಿಲ್ಲದ ನಿರಂತರ ಸುಖದ ಅನುಭವವೇ ಮುಕ್ತಿಯೆಂದೂ, ಸುಖರೂಪನಾದ ಬ್ರಹ್ಮನೇ ಆಗುವದು ಮುಕ್ತಿಯಲ್ಲವೆಂದೂ ಇದರಿಂದ ಸಿದ್ಧವಾಗುವುದು.

(13) **ಸಯೋಗೀಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ।**
—(5. 24.)

ಪೂರ್ವೋಕ್ತಯೋಗಿಯು ಬ್ರಹ್ಮಜ್ಞಾನವನ್ನು ಹೊಂದಿ ನಿರ್ವಾಣ (ಪ್ರಾಕೃತಶರೀರ ರಹಿತನಾದ) ಬ್ರಹ್ಮನನ್ನು **ಹೊಂದುತ್ತಾನೆ.**

ಪ್ರಶ್ನೆ—"ಬ್ರಹ್ಮಭೂತಃ" ಎಂದರೆ ಬ್ರಹ್ಮನೇ ಆಗಿ ಎಂದಲ್ಲವೇ ಅರ್ಥವು.

ಉತ್ತರ—ಹಾಗೆ ಅರ್ಥಮಾಡಿದರೆ 1. "ಬ್ರಹ್ಮನಿರ್ವಾಣಂ ಅಧಿಗಚ್ಛತಿ" ಎಂಬ ಶ್ಲೋಕಭಾಗದ ಯೋಜನೆಯು ದುರ್ಘಟವಾಗುವುದು. ಬ್ರಹ್ಮನೇ ಆಗಿ ನಿರ್ವಾಣಬ್ರಹ್ಮನನ್ನು **ಹೊಂದುವನು.** ಎಂದು ಹೇಳುವುದು ಅಸಂಗತವಾಗುವುದು. ಬ್ರಹ್ಮನಾಗಿ ಹೋದಮೇಲೆ ಪುನಃ ನಿರ್ವಾಣಬ್ರಹ್ಮನನ್ನು ಹೊಂದುವನು ಎಂದು ಯಾತಕ್ಕೆ ಹೇಳಬೇಕು ? 2. ಶಂಕರಾಚಾರ್ಯರೂ ಕೂಡ ಹದಿನೆಂಟನೆಯ ಅಧ್ಯಾಯದಲ್ಲಿ "ಬ್ರಹ್ಮಭೂತಃ ಪ್ರಸನ್ನಾತ್ಮಾನಶೋಚತಿನಕಾಂಕ್ಷತಿ" ಎಂಬ ಶ್ಲೋಕದಲ್ಲಿರುವ "ಬ್ರಹ್ಮ ಭೂತಃ" ಎಂಬ ಪದಕ್ಕೆ ಬ್ರಹ್ಮನಾಗಿ ಎಂದು ಅರ್ಥಮಾಡದೆ **"ಬ್ರಹ್ಮಪ್ರಾಪ್ತಃ"** ಎಂದರೆ ಬ್ರಹ್ಮನನ್ನು ಹೊಂದಿದವನು ಎಂದು (ಇಂಥಾ ಬಾಧಕಗಳಿದ್ದುದರಿಂದಲೇ) ಅರ್ಥಮಾಡಿರುವರು. ಬ್ರಹ್ಮಾನಂದೀಯದಲ್ಲೂ ಕೂಡ ಬ್ರಹ್ಮಜ್ಞಾನವುಳ್ಳವನಾಗಿ ಎಂದು ಅರ್ಥಮಾಡಿರುತ್ತಾರೆ. ಆದುದರಿಂದ ಬ್ರಹ್ಮಣಿಭೂತಃ= ಬ್ರಹ್ಮಭೂತಃ ಎಂದರೆ ಬ್ರಹ್ಮನಲ್ಲಿ ಇಡಲ್ಪಟ್ಟ ಮನಸ್ಸುಳ್ಳವನು ಎಂದು ಅರ್ಥಮಾಡುವುದೇ ಉಚಿತವು.

(14) **ಲಭಂತೇ ಬ್ರಹ್ಮನಿರ್ವಾಣಂ ಋಷಯಃ ಕ್ಷೀಣಕಲ್ಮಷಾಃ ।**

(2. 25.)

ನಷ್ಟವಾದ ಪಾಪವುಳ್ಳ ಜ್ಞಾನಿಗಳು ನಿರ್ವಾಣ ಬ್ರಹ್ಮನನ್ನು **ಪಡೆಯುತ್ತಾರೆ.**

(15) **ಶಾಂತಿಂನಿರ್ವಾಣ ಪರಮಾಂಮತ್ಸಂಸ್ಥಾಮಧಿಗಚ್ಛತಿ ।**

—(6. 15.)

ಯೋಗಿಯು ದೇಹತ್ಯಾಗೋತ್ತರ ಕಾಲೀನವಾದ ಮತ್ಸಂಸ್ಥಾಂ ಎಂದರೆ **ನನ್ನಲ್ಲಿ** ಸ್ಥಿತಿರೂಪವಾದ ಮುಕ್ತಿಯನ್ನು **ಹೊಂದುತ್ತಾನೆ.** ಈ ವಾಕ್ಯದಲ್ಲಿ ಪರಮಾತ್ಮನಲ್ಲಿ ಇರುವುದೇ ಮುಕ್ತಿಯೇ ಹೊರತು ಪರಮಾತ್ಮನೇ ಆಗಿ ಹೋಗುವುದು ಮುಕ್ತಿಯಲ್ಲವೆಂದು ಶ್ರೀ ಕೃಷ್ಣನು ಸ್ಪಷ್ಟವಾಗಿ ಹೇಳಿರುತ್ತಾನೆ. ಯದ್ಯಪಿ ನಾವೆಲ್ಲರೂ ಈಗಲೂ ಪರಮಾತ್ಮನಲ್ಲಿಯೇ ಇದ್ದೇವೆ. ಆದರೂ ಪರಮಾತ್ಮನ ಅತ್ಯರ್ಥಪ್ರಸಾದಕ್ಕೆ ಪಾತ್ರರಾಗಿ ಸ್ಥಾನವಿಶೇಷಗಳಲ್ಲಿ ಇರುವುದೇ ಇಲ್ಲಿ ವಿವಕ್ಷಿತವು.

(16) ....**ತತೋಯಾತಿಪರಾಂಗತಿಂ ।**—(6. 45.)

(ಯೋಗಿಯು ಜ್ಞಾನಿಯಾಗಿ) ಉತ್ತಮಗತಿಯನ್ನು (ಮುಕ್ತಿಯನ್ನು) ಕುರಿತು **ಹೋಗುತ್ತಾನೆ**; ಅಥವಾ ಹೊಂದುತ್ತಾನೆ.

(17) **ಅಂತಕಾಲೇಚಮಾಮೇವಸ್ಮರ್ರ ಮುಕ್ತ್ವಾಕಳೇವರಂ ।**
ಯಃ ಪ್ರಯಾತಿಸಮದ್ಭಾವಂ ಯಾತಿನಾಸ್ತ್ಯತ್ರಸಂಶಯಃ ॥
—(8. 5.)

ಅಂತ್ಯಕಾಲದಲ್ಲಿ ನನ್ನನ್ನು ಸ್ಮರಣೆಮಾಡಿ ಶರೀರವನ್ನು ಬಿಟ್ಟರೆ ಅವನು ನನ್ನಲ್ಲಿ ಉತ್ತಮಸ್ಥಿತಿಯನ್ನು **ಹೊಂದುತ್ತಾನೆ.** ಇದರಲ್ಲಿ ಸಂಶಯವಿಲ್ಲ. (ಪರಮಾತ್ಮನ ಅನುಗ್ರಹದಿಂದ ನಿತ್ಯಾಭಿವ್ಯಕ್ತವಾದ ಆನಂದವನ್ನು ಅನುಭವಿಸುವುದೇ ಇಲ್ಲಿ ವಿವಕ್ಷಿತವಾದ ಉತ್ತಮವಾದ ಸ್ಥಿತಿಯು.)

ಪ್ರಶ್ನೆ—ಸ್ವಾಮಿ! ಇಲ್ಲಿ ಮದ್ಭಾವಂಯಾತಿ ಎಂದರೆ ನನ್ನ ಸ್ವರೂಪವನ್ನು ಹೊಂದುತ್ತಾನೆ ಎಂದರೆ ನಾನೇ ಆಗುತ್ತಾನೆ ಎಂದು ಯಾತಕ್ಕೆ ಅರ್ಥ ಮಾಡಬಾರದು?

ಉತ್ತರ—ನಿತ್ಯರಾದ ಜೀವರಿಗೆ ಕೃಷ್ಣೈಕ್ಯವು ಬರಲಾರದೆಂಬಲ್ಲಿ ಬಹು ಯುಕ್ತಿಗಳನ್ನು ಹಿಂದೆಯೇ ನಿರೂಪಿಸಿರುತ್ತೇವೆ. 2 ಮತ್ತು ಮುಂದಿನ ಶ್ಲೋಕದಲ್ಲಿ ಕೃಷ್ಣನು ಹೇಳುತ್ತಾನೆ.—

ಯಂಯಂವಾಪಿಸ್ಮರ್ರ ಭಾವಂತ್ಯಜತ್ಯಂತೇ ಕಳೇವರಂ ।
ತಂತಮೇವೈತಿಕೌಂತೇಯ ಸದಾ ತದ್ಭಾವಭಾವಿತಃ ॥—(8. 6.)

ಅರ್ಥವು—ಜೀವನು ಮರಣಕಾಲದಲ್ಲಿ ಯಾವ ಯಾವ ಪದಾರ್ಥವನ್ನು ಸ್ಮರಿಸುತ್ತಾ ದೇಹವನ್ನು ಬಿಡುತ್ತಾನೆಯೋ, ಸದಾ ಆ ಪದಾರ್ಥದಲ್ಲೇ ಇಡಲ್ಪಟ್ಟ ಮನಸ್ಸಿನ ವಾಸನಾಪ್ರಭಾವದಿಂದ ಆಯಾಯ ಪದಾರ್ಥವನ್ನೇ ಹೊಂದುತ್ತಾನೆ.

ಹೀಗೆ ಹೇಳಿರುವುದರಿಂದ, ಕೃಷ್ಣನನ್ನು ಸ್ಮರಿಸುತ್ತಾ ಸತ್ತರೆ, ಆ ಮನಸ್ಸಿನ ವಾಸನಾ ಪ್ರಭಾವದಿಂದ ಕೃಷ್ಣನನ್ನು ಹೊಂದಬಹುದು. ಕೃಷ್ಣನೇ ಆಗುವುದು ಅಸಂಭಾವಿತವು. ಮರಣಕಾಲದಲ್ಲಿ ಇಂದ್ರನನ್ನು ಸ್ಮರಿಸುತ್ತಾ ಸತ್ತರೆ ಇಂದ್ರನ ದೇಹಕ್ಕೆ ಸದೃಶವಾದ (ದೇವತಾ) ದೇಹವು ಬರಬಹುದು. ಇಂದ್ರನೇ ಆಗಲಾರನು. ಹೀಗೆಯೇ ಶಂಖಚಕ್ರಾದಿಧಾರಿಯಾದ ಶ್ರೀ ಕೃಷ್ಣನನ್ನು ಸ್ಮರಣೆ ಮಾಡಿಕೊಂಡು ಸತ್ತರೆ, ಕೃಷ್ಣನ ರೂಪಕ್ಕೆ ಸದೃಶವಾದ ರೂಪವು ಬರಬಹುದು. ಇದೇ ಸಾರೂಪ್ಯಮುಕ್ತಿಯೆನ್ನಿಸುವುದು. ಆದುದರಿಂದ ಮಯಿಭಾವಃ ಮದ್ಭಾವಃ

ಎಂದಾಗಲೀ, ಮಮಭಾವ (ರೂಪಂ) ಇವಭಾವೋಯಸ್ಯಸಃ ಎಂದಾಗಲೀ ವಿಗ್ರಹಮಾಡಿ ಅರ್ಥವನ್ನು ಮಾಡಬೇಕೇ ಹೊರತು ಪ್ರಮಾಣವಿರುದ್ಧವಾದ ಐಕ್ಯಾರ್ಥಕ್ಕೆ* ಇಲ್ಲಿ ಅವಕಾಶವಿರುವುದಿಲ್ಲ. ಇದರಿಂದಲೇ "ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ" ಎಂಬ ಹದಿಮೂರನೆಯ ಅಧ್ಯಾಯದ ಶ್ಲೋಕವನ್ನೂ ವ್ಯಾಖ್ಯಾನಮಾಡಿದಂತಾಯಿತು. ಮತ್ತು ಎಂಟನೆಯ ಅಧ್ಯಾಯದ ಮುಂದಿನ ಎರಡು ಶ್ಲೋಕಗಳಲ್ಲಿಯೂ ತನ್ನಲ್ಲಿ ಸ್ಥಿತಿಯೇ ಮುಕ್ತಿಯೆಂದು ಶ್ರೀಕೃಷ್ಣನು ತೋರಿಸುತ್ತಾನೆ:—

(18) **ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಂ ।**
—(8. 7.)

ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸುಳ್ಳ ಜ್ಞಾನಿಯು ಸಂಶಯವಿಲ್ಲದೆ ನನ್ನನ್ನೇ **ಹೊಂದುವನು.**

(19) **ಪರಮಂಪುರುಷಂದಿವ್ಯಂಯಾತಿಪಾರ್ಥಾನುಚಿಂತಯನ್ ।**
—(8. 8.)

(ವಿಷಯಗಳಲ್ಲಿ ಸಂಚಾರರಹಿತವಾದ ಅನನ್ಯಮನಸ್ಕನಾದ ಯೋಗಿಯು) ಪರಮಾತ್ಮನನ್ನು ಧ್ಯಾನಮಾಡುವವನಾಗಿ ಕ್ರೀಡಾದಿಗುಣವಿಶಿಷ್ಟನಾದ ಪರಮಪುರುಷನನ್ನು **ಹೊಂದುತ್ತಾನೆ.**

(20) ....**ಸತಂಪರಂಪುರುಷಮುಪೈತಿದಿವ್ಯಂ ॥**—(8. 10.)

ಪೂರ್ವೋಕ್ತಜ್ಞಾನಿಯು ದಿವ್ಯನಾದ ಪರಮಪುರುಷನನ್ನು **ಹೊಂದುತ್ತಾನೆ.**

(21) ....**ವಿಶಂತಿಯದ್ಯತಯೋವೀತರಾಗಾಃ ।**—(8. 11.)

ಕಾಮಾದಿರಹಿತರಾದ ಜ್ಞಾನಿಗಳು(ಮುಕ್ತಿಯಲ್ಲಿ) ಯಾವ ಪರಮಾತ್ಮನನ್ನು **ಪ್ರವೇಶಿಸುತ್ತಾರೆಯೋ** ಅಂಥಾ (ನನ್ನ) ಸ್ವರೂಪವನ್ನು ಹೇಳುತ್ತೇನೆ.

(22) ....**ಸಯಾತಿಪರಮಾಂಗತಿಂ ।**—(8. 13.)

---

* ಮದ್ಭಾವಂ ಎಂಬ ಪದಕ್ಕೆ ಐಕ್ಯಪರವಾಗಿ ಅರ್ಥಮಾಡಿದರೆ ಲಕ್ಷಣಾವೃತ್ತಿಯನ್ನು ಸ್ವೀಕರಿಸಬೇಕೆಂದು ಅದ್ವೈತಿಗಳಿಗೆ ಸಮ್ಮತವಾದ ಅಭಿಪ್ರಾಯವು. ಮಯಿಭಾವಃ ಎಂಬ ವಿಗ್ರಹದಿಂದ ಮಾಡಿದ ಅರ್ಥವು ಮುಖ್ಯವೃತ್ತಿಯಿಂದ ಮಾಡಿದುದಾಗಿಯೂ ಮತ್ತು ಬಾಧಕರಹಿತವಾದುದರಿಂದ ಪ್ರಾಮಾಣಿಕವಾಗಿಯೂ ಇರುತ್ತದೆ.

(ಪ್ರಣವವನ್ನು ಜಪಿಸುತ್ತಾ ನನ್ನನ್ನು ಧ್ಯಾನಮಾಡಿ ದೇಹಬಿಡುವ ಯೋಗಿಯು) ಅತ್ಯುತ್ತಮವಾದ ಗತಿಯನ್ನು (ಮುಕ್ತಿಯನ್ನು) **ಹೊಂದುತ್ತಾನೆ.**

ಮುಕ್ತಿಯು ಜನನಮರಣರಹಿತವಾದ, ಸುಖಾನುಭವರೂಪವಾದ, ಪರಮಾತ್ಮನಿಂದ ಭಿನ್ನವಾಗಿ ಪರಮಾತ್ಮಾಧೀನವಾದ, ನಿತ್ಯವಾದ ಸ್ಥಿತಿಯೆಂದು ಸ್ಪಷ್ಟವಾಗಿ ಶ್ರೀ ಕೃಷ್ಣನ ಇದೇ ಅಧ್ಯಾಯದ ಹದಿನೈದನೆಯ ಶ್ಲೋಕದಿಂದ ನಿಶ್ಚಿತವಾಗುವುದು—

(23) **ಮಾಮುಪೇತ್ಯಪುನರ್ಜನ್ಮದುಃಖಾಲಯಮಶಾಶ್ವತಂ ।**
ನಾಪ್ನುವಂತಿಮಹಾತ್ಮಾನಃ ಸಂಸಿದ್ಧಿಂಪರಮಾಂಗತಾಃ ॥

—(8. 15.)

ಜ್ಞಾನಿಗಳು ನನ್ನನ್ನು ಹೊಂದಿ ಪರಮಸಂಸಿದ್ಧಿ (ಮುಕ್ತಿ)ಯನ್ನು **ಪಡೆದವರಾಗಿ** ದುಃಖಕ್ಕೆ ಆಶ್ರಯವಾದ ಅನಿತ್ಯವಾದ ಪುನರ್ಜನ್ಮವನ್ನು ಹೊಂದುವುದಿಲ್ಲ.

ಇದರಿಂದ 1. ನನ್ನನ್ನು (ಶ್ರೀ ಕೃಷ್ಣನನ್ನು) ಹೊಂದುವುದೇ **ಪರಮ** ಸಂಸಿದ್ಧಿಯು; 2. ಅದಕ್ಕಿಂತ ಭಿನ್ನವಾದ ನಿರ್ಗುಣಬ್ರಹ್ಮನ ಪ್ರಾಪ್ತಿಯಲ್ಲವು; 3. ಅದು ಶಾಶ್ವತವಾದ ಮತ್ತು ದುಃಖಸಂಪರ್ಕರಹಿತವಾದ ಸ್ಥಾನವು; 4. ಅಲ್ಲಿಂದ ಜನನಮರಣರೂಪಸಂಸಾರಕ್ಕೆ ಪುನರಾವೃತ್ತಿಯು ಇಲ್ಲವು; 5. ಮತ್ತು "ಗತಾಃ" "ನಾಪ್ನುವಂತಿ" ಎಂಬ ಬಹುವಚನಾಂತ ಶಬ್ದಗಳ ಪ್ರಯೋಗದಿಂದ ಮುಕ್ತಿಯಲ್ಲೂ ಪರಸ್ಪರ ಭಿನ್ನರಾಗಿ ಸಂಸಾರಕ್ಕೆ ಪುನಃ ಬರದಿರುವ ಚೇತನರು ಅನೇಕರಿರುವರು ಎಂದೂ ಸಿದ್ಧವಾಗುವುದು. ಇಷ್ಟು ಪ್ರಮೇಯವೂ ಇನ್ನೂ ಸ್ಪಷ್ಟವಾಗಿ ಹದಿನಾಲ್ಕನೆಯ ಅಧ್ಯಾಯದ ಶ್ರೀಕೃಷ್ಣನ ವಾಕ್ಯದಿಂದ ನಿಶ್ಚಿತವಾಗುವುದು.—

(24) **ಇದಂ ಜ್ಞಾನ ಮುಪಾಶ್ರಿತ್ಯ ಮಮಸಾಧರ್ಮ್ಯಮಾಗತಾಃ ।**
ಸರ್ಗೇಽಪಿನೋಪಜಾಯಂತೇ ಪ್ರಳಯೇನವ್ಯಥಂತಿಚ ॥

—(14. 2.)

ನನ್ನಿಂದ ಉಪದಿಷ್ಟವಾದ ತತ್ವಜ್ಞಾನವನ್ನು ಆಶ್ರಯಿಸಿ, ನನ್ನ ಸಾಧರ್ಮ್ಯವನ್ನು (ಸಾರೂಪ್ಯ ಮುಕ್ತಿಯನ್ನು) ಹೊಂದಿದವರಾಗಿ ಸೃಷ್ಟಿಕಾಲದಲ್ಲಿ ಹುಟ್ಟುವುದಿಲ್ಲ: ಪ್ರಳಯಕಾಲದಲ್ಲಿಯೂ ದೇಹಾದಿನಾಶದಿಂದ ವ್ಯಥೆಯನ್ನು ಹೊಂದುವುದಿಲ್ಲ.

ಈ ಶ್ಲೋಕದಲ್ಲಿ ಶ್ರೀ ಕೃಷ್ಣನು ನಾನೇ ಆಗಿ ಎಂದು ಹೇಳದೆ ನನ್ನ ಸಮಾನ ಧರ್ಮವನ್ನು ಹೊಂದಿದವರಾಗಿ ಎಂದು ಹೇಳಿರುವುದರಿಂದ ಮುಕ್ತಿ

ಯಲ್ಲಿ ಭೇದವು ಸಿದ್ಧವಾಯಿತು. ಹಾಗಾದರೆ ಸರ್ವಸಾಮ್ಯವು ಮುಕ್ತರಿಗೆ ಬರ ಬಹುದೆಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ತಾನು ಹೇಳಿದ ಸಾಧರ್ಮ್ಯವು ಯಾವ ವಿಷಯದಲ್ಲಿ ಎಂಬುದನ್ನು "ಸರ್ಗೇಽಪಿನೋಪಜಾಯಂತೇ ಪ್ರಳಯೇನ ವ್ಯಥಂತಿ ಚ" ಎಂದು ಉತ್ತರಾರ್ಧದಲ್ಲಿ ವಿವರಿಸಿರುತ್ತಾನೆ. ಸೃಷ್ಟಿಕಾಲದಲ್ಲಿ ಜನನಾಭಾವ, ಪ್ರಳಯಕಾಲದಲ್ಲಿ ಮರಣಾಭಾವ, ಮತ್ತು ವ್ಯಥಾಭಾವ (ದುಃಖ ರಾಹಿತ್ಯ) ಇಷ್ಟು ವಿಷಯಗಳಲ್ಲಿ ಸಾಮ್ಯವುಂಟು. ಮತ್ತು ಸಾಧರ್ಮ್ಯಮಾ ಗತಾಃ ಎಂಬ ಬಹುವಚನಪ್ರಯೋಗದಿಂದಲೂ ಪರಮಾತ್ಮನನ್ನು ಹೊಂದಿ ನಿರ್ದುಃಖರಾದ ಅನೇಕ ಮುಕ್ತರಿರುವರು ಎಂದು ಸಿದ್ಧವಾಗುವುದು. ಎಂಟನೆಯ ಅಧ್ಯಾಯದಲ್ಲಿಯೂ ಇನ್ನೂ ಅನೇಕ ಇಂತಹ ವಚನಗಳು ಇರುತ್ತವೆ.

(25) **ಮಾಮುಪೇತ್ಯತು ಕೌಂತೇಯ ಪುನರ್ಜನ್ಮನವಿದ್ಯತೇ ।**

—(8. 16.)

ಹೇ ಕೌಂತೇಯ! ನನ್ನನ್ನು ಹೊಂದಿದವನಿಗೆ (ಮುಕ್ತನಿಗೆ) ಪುನರ್ಜನ್ಮವು ಇರುವುದಿಲ್ಲ.

(26) **ಯಂಪ್ರಾಪ್ಯನನಿವರ್ತಂತೇ ತದ್ಧಾಮಪರಮಂಮಮ ।**

—(8. 21.)

ಯಾರನ್ನು ಹೊಂದಿದಮೇಲೆ (ಸಂಸಾರಕ್ಕೆ) ಪುನರಾವರ್ತಿ ಇಲ್ಲವೋ ಅದು ನನ್ನ ಸ್ವರೂಪವು; ಅಥವಾ ಅದು ನನ್ನ ಲೋಕವು.

(27) **ಯೋಗೀಪರಂಸ್ಥಾನ ಮುಪೈತಿಚಾದ್ಯಂ ॥**—(8. 28.)

ಜ್ಞಾನಿಯು ಸನಾತನವಾದ ಅತ್ಯುತ್ತಮವಾದ ಸ್ಥಾನವನ್ನು (ಮುಕ್ತಿಯನ್ನು) **ಹೊಂದುತ್ತಾನೆ.**

(28) **ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋಮಾಮುಪೈಷ್ಯಸಿ ॥**

—(9. 28.)

ಕರ್ಮ ಫಲಗಳನ್ನು ನನ್ನಲ್ಲಿ ಸಮರ್ಪಿಸಿ, ವಿಹಿತಾನುಷ್ಠಾನದಲ್ಲಿ ಮನಸ್ಸುಳ್ಳ ಜ್ಞಾನಿಯು ಕರ್ಮಬಂಧದಿಂದ ಅತ್ಯಂತ ವಿಮುಕ್ತನಾಗಿ ನನ್ನನ್ನು **ಹೊಂದುತ್ತಾನೆ.** ಇದರಿಂದಲೂ ಶ್ರೀ ಕೃಷ್ಣನನ್ನು ಹೊಂದುವುದೇ ಮುಕ್ತಿಯೆಂದು ಸಿದ್ಧವಾಗುವುದು.

(29) **ಜ್ಞಾತುಂದ್ರಷ್ಟುಂ ಚ ತತ್ವೇನ ಪ್ರವೇಷ್ಟುಂಚ ಪರಂತಪ ।**

(11. 55.)

ಭಕ್ತಿಯಿಂದಲೇ ನನ್ನನ್ನು (ಶ್ರೀ ಕೃಷ್ಣನನ್ನು) ತಿಳಿಯುವುದಕ್ಕೂ ನೋಡುವುದಕ್ಕೂ, ನಂತರ **ಪ್ರವೇಶಿಸುವುದಕ್ಕೂ** (ಮುಕ್ತನಾಗುವುದಕ್ಕೂ) ಸಾಧ್ಯವಾಗುವುದು. ಇದರಿಂದ ಭಗವಂತನಲ್ಲಿ ಪ್ರವೇಶವೇ ಮುಕ್ತಿಯೆಂದು ಸಿದ್ಧವಾಗುವುದು.

(30) **ನಿರ್ವೈರಃಸರ್ವಭೂತೇಷು ಯಸ್ಸಮಾಮೇತಿ ಪಾಂಡವ ।**

—(11. 55.)

ನನ್ನ ಭಕ್ತನಾಗಿ, ಜ್ಞಾನಿಯಾಗಿ, ಸರ್ವ ಪ್ರಾಣಿಗಳಲ್ಲಿಯೂ ದ್ವೇಷವರ್ಜಿತನಾದವನು ನನ್ನನ್ನು (ಶ್ರೀ ಕೃಷ್ಣನನ್ನು) **ಹೊಂದುತ್ತಾನೆ.**

(31) **ಸಮಂಪಶ್ಯನ್ಹಿಸರ್ವತ್ರ....ತತೋಯಾತಿ ಪರಾಂಗತಿಂ ।**

—(13. 29).

ಸರ್ವತ್ರಸಮನೆಂದು ಭಗವಂತನನ್ನು (ಶ್ರೀ ಕೃಷ್ಣನನ್ನು) ತಿಳಿದ ಜ್ಞಾನಿಯು ಮುಕ್ತಿಯನ್ನು **ಹೊಂದುತ್ತಾನೆ.**

(32) **ತತ ಏವಚವಿಸ್ತಾರಂಬ್ರಹ್ಮಸಂಪದ್ಯತೇತದಾ ।**—(13. 31.)

ಪರಮಾತ್ಮನು ವಿಷಮಾಧಿಷ್ಠಾನಗಳಲ್ಲಿದ್ದರೂ ಸಮನು ಮತ್ತು ಅವನೇ ಸರ್ವಕ್ಕೂ ಸೃಷ್ಟಿಕರ್ತನು ಎಂದು ತಿಳಿದವನು ಪರಬ್ರಹ್ಮನನ್ನು **ಸಂಪದ್ಯತೇ*** ಎಂದರೆ ಹೊಂದುತ್ತಾನೆ.

(33) **ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಮೃತಮಶ್ನುತೇ ।**

—(14. 20.)

ತ್ರಿಗುಣಬಂಧದಿಂದ ರಹಿತನಾದವನು ಜನನ, ಮರಣ, ಜರಾ, ದುಃಖಗಳಿಂದ ವಿಮುಕ್ತನಾಗಿ ಮೋಕ್ಷವನ್ನು **ಹೊಂದುತ್ತಾನೆ.**

(34) **ಸಗುಣಾನ್ಸಮತೀತ್ಯೈತಾನ್ ಬ್ರಹ್ಮಭೂಯಾಯಕಲ್ಪತೇ ।**

—(14. 26)

ಜ್ಞಾನಿಯು ಗುಣತ್ರಯಗಳನ್ನು ಅತಿಕ್ರಮಿಸಿ, ಬ್ರಹ್ಮನಲ್ಲಿ ಉತ್ತಮಸ್ಥಿತಿ (ಮುಕ್ತಿ)ಯನ್ನು ಹೊಂದುವುದಕ್ಕೆ ಸಮರ್ಥನಾಗುವನು.

---

*ಬ್ರಹ್ಮದಾರಣ್ಯಕೋಪನಿಷತ್ತಿನ ಶಂಕರಭಾಷ್ಯದಲ್ಲಿ ಹೀಗೆ ಬರೆದಿರುತ್ತಾರೆ:—" **ಸಂಪತ್ತಿಶ್ಚೇತ್ತದಾಪತ್ತಿರ್ನಸ್ಯಾತ್** " ಹೊಂದುವುದಾದರೆ ಆಗಲಾರನು ಎಂದು ಅರ್ಥವು. ಬ್ರಹ್ಮನನ್ನು ಸಂಪಾದಿಸುತ್ತಾನೆ (ಹೊಂದುತ್ತಾನೆ) ಎಂದು ಹೇಳಿದರೆ ಬ್ರಹ್ಮನಾಗಿ ಆಗುತ್ತಾನೆ ಎಂದು ಹೇಳಲಾಗುವುದಿಲ್ಲ ಎಂದು ತಾತ್ಪರ್ಯವು. ಇಂಥಾ ಲೋಕಸಿದ್ಧ ನ್ಯಾಯಗಳನ್ನು ಒಪ್ಪಿಯೂ ಈ ವಾಕ್ಯಗಳೆಲ್ಲಾ ಅಭೇದಸಾಧಕವೆಂದು ಹೇಳುವುದು ಆಶ್ಚರ್ಯವು.

ಬ್ರಹ್ಮಭೂಯಾಯಕಲ್ಪತೇ ಎಂದರೆ ಬ್ರಹ್ಮನೇ ಆಗುವುದಕ್ಕೆ ಸಮರ್ಥನಾಗುವನು ಎಂಬ ಅರ್ಥವು ಆಪಾತತಃ ತೋರುವುದು. ಆದರೆ "**ಬ್ರಹ್ಮಣೋಹಿ ಪ್ರತಿಷ್ಠಾಹಂ**" ಎಂಬ ಉತ್ತರ ಶ್ಲೋಕದಿಂದ, ಈ ಶ್ಲೋಕದ ಬ್ರಹ್ಮ ಶಬ್ದವು ಪರಬ್ರಹ್ಮನನ್ನು ಬೋಧಿಸಿದರೆ ಅಸಂಗತವಾಗುವುದರಿಂದ, ಲಕ್ಷ್ಮಿಯನ್ನು ಬೋಧಿಸುವುದೆಂದು ಸ್ಪಷ್ಟವಾಗುವುದು. ಜ್ಞಾನಿಯು ಲಕ್ಷ್ಮಿಯನ್ನು ಹೊಂದಿದ ನಂತರ ನನ್ನನ್ನು ಹೊಂದುತ್ತಾನೆಂದರ್ಥವು. ಕಿಂಚ "ಮದ್ಭಾವಾಯೋಪಪದ್ಯತೇ" ಎಂಬ ಶ್ಲೋಕ ವ್ಯಾಖ್ಯಾನಾವಸರದಲ್ಲಿ ನಾವು ನಿರೂಪಿಸಿರುವಂತೆ ಬಾಧಿತವಾದ ಬ್ರಹ್ಮ ಭಾವವು ಜೀವನಿಗೆ ಬರಲಾರದು. ಹದಿನೈದನೆಯ ಅಧ್ಯಾಯದಲ್ಲಿ ಮುಕ್ತಿಯು ನಾಶರಹಿತವಾದ ಸ್ಥಾನದಲ್ಲಿ ಸ್ಥಿತಿಯೆಂದು ವ್ಯಕ್ತವಾಗಿರುವುದು.

(35) **ಯಸ್ಮಿನ್ಗತಾನನಿವರ್ತಂತಿ ಭೂಯಃ।**—(15. 5.)

ಪರಬ್ರಹ್ಮನಲ್ಲಿ (ಶ್ರೀ ಕೃಷ್ಣನಲ್ಲಿ) ಪ್ರವಿಷ್ಟರಾದವರು ಪುನಃ ಸಂಸಾರಕ್ಕೆ ಹಿಂತಿರುಗಿ ಬರುವುದಿಲ್ಲ.

(36)............**ಗಚ್ಛಂತ್ಯಮೂಢಾಃ ಪದಮವ್ಯಯಂತತ್** |—(15. 5.)

(ಕಾಮಾದಿರಹಿತರಾದ) ಜ್ಞಾನಿಗಳು ನಾಶರಹಿತನಾದ ಭಗವಂತನನ್ನು ಶ್ರೀ ಕೃಷ್ಣನನ್ನು) ಅಥವಾ ನಾಶರಹಿತವಾದ (ವೈಕುಂಠಾದಿ) **ಸ್ಥಾನವನ್ನು** ಹೊಂದುತ್ತಾರೆ.

(37) **ಯದ್ಗತ್ವಾನನಿವರ್ತಂತೇ ತದ್ಧಾಮಪರಮಂಮಮ।**—(15. 6.)

ಯಾವುದನ್ನು ಹೊಂದಿದ ಮೇಲೆ ಪುನಃ ಸಂಸಾರಬಂಧವನ್ನು ಹೊಂದುವುದಿಲ್ಲವೋ ಅಂಥಾದ್ದು ಪರಮೋತ್ತಮವಾದ ನನ್ನ ಸ್ವರೂಪವು ಅಥವಾ (ವೈಕುಂಠಾದಿ) ಸ್ಥಾನವು.

(38) **ಭಕ್ತ್ಯಾಮಾಮಭಿಜಾನಾತಿಯಾವಾನ್ ಯಶ್ಚಾಸ್ಮಿತತ್ವತಃ।**
ತತೋಮಾಂತತ್ವತೋಜ್ಞಾತ್ವಾ ವಿಶತೇತದನಂತರಂ॥

—(18. 55.)

ಭಕ್ತಿಯಿಂದ ನನ್ನನ್ನು ತಿಳಿದು, ಜ್ಞಾನಿಯಾಗಿ ನಂತರ ನನ್ನಲ್ಲಿ (ಶ್ರೀಕೃಷ್ಣನಲ್ಲಿ) **ಪ್ರವೇಶಿಸುತ್ತಾನೆ.**

(39) **ಮತ್ಪ್ರಸಾದಾದವಾಪ್ನೋತಿಶಾಶ್ವತಂ ಪದಮವ್ಯಯಂ।**

—(18. 56.)

ನನ್ನ **ಪ್ರಸಾದದಿಂದ** ನಿರ್ವಿಕಾರವಾದ ಮತ್ತು ಸರ್ವವಿಧವಾದ ನಾಶರಹಿತವಾದ ಸ್ಥಾನವನ್ನು (ಅಥವಾ ನನ್ನ ರೂಪವನ್ನು) ನನ್ನ ಭಕ್ತನು **ಪಡೆಯು**

ತ್ತಾನೆ. 1. **ಶಾಶ್ವತಂ** ಮತ್ತು **ಅವ್ಯಯಂ** ಎಂಬ ಎರಡು ವಿಶೇಷಣಗಳನ್ನು ಹಾಕಿರುವುದರಿಂದ ಈ ಮುಕ್ತಿಯು **ಪರಮಮುಕ್ತಿಯೇ** ಹೊರತು ಇನ್ನು ಬೇರೆ ಅವಾಂತರ ಸುಖಪ್ರದವಾದ ಸ್ಥಾನವಲ್ಲವು ಎಂದು ನಿಶ್ಚಿತವಾಗುವುದು. ಮತ್ತು 2. "**ಪದಂ ಅವಾಪ್ನೋತಿ**" ಎಂದರೆ ಸ್ಥಾನವನ್ನು ಪಡೆಯುತ್ತಾನೆ ಎಂದು ಹೇಳಿರುವುದರಿಂದ ಬ್ರಹ್ಮಭಾವದ ಅಭಿವ್ಯಕ್ತಿಯೇ ಮುಕ್ತಿಯಲ್ಲ; ಮುಕ್ತನೇ ನೆಂದರೆ ಬ್ರಹ್ಮನಿಂದ ಭಿನ್ನವಾದ ಒಂದು ವಸ್ತುವೆಂದು ಸಿದ್ಧಿಸುವುದು. 3. "**ಮತ್ಪ್ರಸಾದಾತ್**" ಎಂದರೆ ನನ್ನ ಅನುಗ್ರಹದಿಂದ ಎಂದು ಹೇಳಿರುವುದರಿಂದ ಪರಮಾತ್ಮನೇ (ಶ್ರೀಕೃಷ್ಣನೇ) ಮುಕ್ತಿಪ್ರದನು. ಆತನ ಪ್ರಸಾದಕ್ಕೆ ಪಾತ್ರನಾದ ಜೀವನು ಸರ್ವದಾ ಅವನ ಕಿಂಕರನೆಂದೂ ಸಿದ್ಧವಾಗುವುದು.

ಈ ರೀತಿಯಾಗಿ ಮುಕ್ತಿಯನ್ನು ವರ್ಣಿಸುವ ಸಕಲ ವಾಕ್ಯಗಳೂ ಜೀವ ಬ್ರಹ್ಮರ ಭೇದವನ್ನೇ ಉದ್ಘೋಷಿಸುತ್ತಿರುವುವು. ಮುಕ್ತಿಯು ಜೀವನಿಂದ ಸಾಧನಾನುಷ್ಠಾನಂತರ ಪ್ರಾಪ್ಯವಾನವಾದ "ಪರಮ ಸಂಸಿದ್ಧಿ"ಯೆಂದೂ, ಜೀವನಿಗೆ ಮುಕ್ತಿಯಲ್ಲಿ ಭಗವಂತನ ಪ್ರವೇಶವೂ ಮತ್ತು ಶಾಶ್ವತಸ್ಥಾನದಲ್ಲಿ ವಾಸವೂ ಉಂಟೆಂದೂ: ಮತ್ತು ಸಾಕ್ಷಾಚ್ಛ್ರೀಕೃಷ್ಣನ ಅನುಗ್ರಹದಿಂದಲೇ ಲಭ್ಯವಾಗುವುದೆಂದೂ ಹೇಳಿರುವುದರಿಂದ ಅದ್ವೈತಾದಿಮತಗಳಲ್ಲಿ ಹೇಳಿರುವ ನಿರ್ಗುಣಬ್ರಹ್ಮನಿಂದ ಸ್ವತಃವ (ಮುಕ್ತಿಯೊಬ್ಬರ ಪ್ರಸಾದವನ್ನು ಅಪೇಕ್ಷಿಸದೇ) ಏಕೀಭಾವವನ್ನು ಹೊಂದುವುದಾಗಲೀ, ಉಪಾಧಿನಾಶಾನಂತರ ಪ್ರವೇಶಾದಿಗಳಿಲ್ಲದೆ, ಅತ್ಯಂತಾಭೇದ ಪ್ರಾಪ್ತವಾಗುವುದಾಗಲೀ ಮುಕ್ತಿಯಲ್ಲವೆಂದು ಮುಕ್ತಿಪ್ರದನಾದ ವಾಸುದೇವನ ಮತವಾಗಿರುತ್ತದೆ.

ಜ್ಞಾನಿಯಾದ ಅರ್ಜುನನೂ ತನ್ನ ದಿವ್ಯದೃಷ್ಟಿಯಿಂದ ಭಗವಂತನ ಅದ್ಭುತ ಸ್ವರೂಪವನ್ನು ನೋಡಿದಾಗ "ದೇವಾನ್" "ಸುರಸಿದ್ಧಸಂಘಾನ್" ಎಂದರೆ ಅನೇಕ ದೇವತೆಗಳನ್ನು ಸುರರ ಮತ್ತು ಸಿದ್ಧಾದಿಗಳ ಸಮೂಹವನ್ನು ಪರಮಾತ್ಮನಿಂದ ಭಿನ್ನರಾಗಿ ಇರುವುದನ್ನೇ ನೋಡಿರುವನು. ಪರಮಾತ್ಮನು ಎಲ್ಲಾ ಮನುಷ್ಯರಂತೆ ಒಬ್ಬ ಸಾಮಾನ್ಯನಾದ ಅಥವಾ ಸ್ವಲ್ಪ ಹೆಚ್ಚು ಪರಾಕ್ರಮವುಳ್ಳ ಒಬ್ಬ ವೀರನಿರಬಹುದೆಂಬ ಆತನ ಭ್ರಾಂತಿಯು ನಷ್ಟವಾಗಿ ಮಹಾಪುರುಷನಾದ ಶ್ರೀಕೃಷ್ಣನ ನಿಜಸ್ವರೂಪವನ್ನು ತಿಳಿಯದೆ ಮಾಡಿದ ಅವಜ್ಞೆಯನ್ನು ಕ್ಷಮಿಸಬೇಕೆಂದು ಬೇಡಿಕೊಂಡಿರುತ್ತಾನೆ.

(40) **ಸಖೇತಿ ಮತ್ವಾಪ್ರಸಭಂಯದುಕ್ತಂ ಹೇ ಕೃಷ್ಣ ಹೇ ಯಾದವಹೇ ಸಖೇತಿ ।**

ಅಜಾನತಾಮಹಿಮಾನಂ ತವೇದಂಮಯಾ ಪ್ರಮಾದಾತ್ಪ್ರಣಯೇನವಾಪಿ ।

ಪಿತೇವಪುತ್ರಸ್ಯ ಸಖೇವಸಖ್ಯುಃ ಪ್ರಿಯಃ ಪ್ರಿಯಾಯಾರ್ಹಸಿ ದೇವಸೋಢುಂ ॥—(11. 40-44.)

ಹೇ ಸ್ವಾಮಿ ! ನಿನ್ನ **ಮಹಿಮೆಯನ್ನು** ತಿಳಿಯದೆ, ನಿನ್ನನ್ನು ಸಾಮಾನ್ಯ ಸ್ನೇಹಿತನೆಂದು ತಿಳಿದು ನಾನು ಪ್ರಮಾದದಿಂದಲೂ, ಕ್ವಚಿತ್ ಪ್ರೀತಿವಿಶೇಷ ದಿಂದಲೂ, ನಿನ್ನನ್ನು ಹೇ ಕೃಷ್ಣ ! ಹೇ ಯಾದವ ! ಎಲೈ ಮಿತ್ರನೇ ! ಇತ್ಯಾದಿ ರೀತಿಯಲ್ಲಿ ಕರೆದು ನಿನ್ನನ್ನು ಅವಜ್ಞೆಮಾಡಿರುವುದನ್ನು ನೀನು ಕ್ಷಮಿಸು. ಹೇ ದೇವ ! ತಂದೆಯು ಪುತ್ರನನ್ನೂ, ಮಿತ್ರನು ಮಿತ್ರನ ಅಪರಾಧವನ್ನೂ, ಪತಿಯು ಪತ್ನಿಯ ಅಪರಾಧವನ್ನೂ ಕ್ಷಮಿಸುವಂತೆ ನೀನು ನನ್ನ ಅಪರಾಧವನ್ನು ಸಹಿಸಿ ಕೊಳ್ಳಬೇಕು.

(41) **ನಮೋನಮಸ್ತೇಸ್ತು ಸಹಸ್ರ ಕೃತ್ವಃ ಪುನಶ್ಚಭೂಯೋಽಪಿ ನಮೋನಮಸ್ತೇ ॥**—(11.39.)

ಹೇ ದೇವ ! ನಿನಗೆ ಅನಂತ ಪ್ರಣಾಮಗಳನ್ನು ಮಾಡುತ್ತೇನೆ. ಮತ್ತೂ ಮತ್ತೂ ನಿನಗೆ ನಮಸ್ಕಾರವು.

ಜ್ಞಾನಿಯಾದ ಅರ್ಜುನನು ಜಗತ್ತನ್ನೂ, ಜೀವನನ್ನೂ, ಪರಬ್ರಹ್ಮನನ್ನೂ ಅವರುಗಳಿಗೆ ಪರಸ್ಪರ ಭೇದವನ್ನೂ ನೋಡಿರುವನು ; "**ಮಹಿಮಾನಂತವೇದಂ**" ಎಂದು ಪರಮಾತ್ಮನ ಸೃಷ್ಟ್ಯಾದಿ ಕರ್ತೃತ್ವ, ನಿತ್ಯತ್ವ, ವಿಭುತ್ವ, ಅಚಿಂತ್ಯಶಕ್ತಿಯೇ ಮೊದಲಾದ ಅನೇಕ ಧರ್ಮಗಳನ್ನೂ ನೋಡಿರುವನು. ಅದ್ವೈತಮತದಲ್ಲಿ ಶುಕ್ತಿ ಎಂಬ ಅಧಿಷ್ಠಾನದಲ್ಲಿ ರಜತವು ಕಲ್ಪಿತವಾಗಿರುವಂತೆ ಈ ಯಾವತ್ತು ಪ್ರಪಂಚವೂ, ಜೀವಭಾವವೂ, ಸರ್ವಜ್ಞತ್ವಾದಿ ಈಶ್ವರನ ಗುಣಗಳೂ ಅಧಿಷ್ಠಾನವಾದ ನಿರ್ಗುಣಬ್ರಹ್ಮನಲ್ಲಿ ಕಲ್ಪಿತವಾಗಿರುವುವು ; ಮತ್ತು ಪರೀಕ್ಷಾನಂತರ ಅಧಿಷ್ಠಾನವಾದ ಶುಕ್ತಿಯ ಸಮೀಚೀನ (ಶುಕ್ತಿತ್ವೇನ) ಜ್ಞಾನವು ಹುಟ್ಟಿದ ಮೇಲೆ ಕಲ್ಪಿತವಾದ ರಜತವು ಅದೃಶ್ಯವಾಗುವಂತೆ ಅಧಿಷ್ಠಾನವಾದ ಪರಬ್ರಹ್ಮನ ಜ್ಞಾನವು ಉತ್ಪನ್ನವಾದಾಗ ಕಲ್ಪಿತವಾದ ಪ್ರಪಂಚವೂ, ಜೀವಭಾವವೂ, ಪರಸ್ಪರ ಭೇದವೂ, ಸರ್ವಜ್ಞತ್ವ, ಸೃಷ್ಟಿಕರ್ತೃತ್ವಾದಿ ಭಗವನ್ಮಹಿಮೆಗಳೂ ಅದೃಶ್ಯ

ವಾಗುವುವು. ಅವರ ಪ್ರಕ್ರಿಯೆಯು ಹೀಗಿರುವುದು.† ಪ್ರಕೃತದಲ್ಲಿ ಅಂಥಾ ಅಧಿಷ್ಠಾನವಾದ ಆದಿಮಧ್ಯಾಂತರಹಿತವಾದ ಅಪರಿಚ್ಛಿನ್ನವಾದ ಭಗವದ್ರೂಪವನ್ನು ಅರ್ಜುನನು ನೋಡಿದನು. ಆಗ ಆತನು ಪ್ರಪಂಚ, ಜೀವ, ಭಗವನ್ಮಹಿಮೆಗಳು, ಮತ್ತು ಪಂಚಭೇದಗಳನ್ನು ಸತ್ಯವಾಗಿಯೇ ಕಂಡನೇ ಹೊರತು ಅವು ಶುಕ್ತಿರಜತದಂತೆ ಅದೃಶ್ಯವಾಗಲಿಲ್ಲ. ಆದುದರಿಂದ ಪರಸ್ಪರ ಭಿನ್ನರಾದ ಮತ್ತು ಬ್ರಹ್ಮನಿಂದ ಅತ್ಯಂತ ಭಿನ್ನರಾದ ಅನೇಕ ಜೀವರುಗಳು ಉಂಟು ಎಂಬಲ್ಲಿ **ಅರ್ಜುನನ ದಿವ್ಯದೃಷ್ಟಿಯೂ** ಪ್ರಮಾಣವಾಗಿರುವುದು. ಇದೇ ಯುಕ್ತಿಯಿಂದ ಜ್ಞಾನಾನಂತರ ಉಪಾಧಿಗಳು ನಾಶವಾಗಿ ಜೀವೇಶ್ವರರಿಗೆ ಅತ್ಯಂತಾಭೇದವೇ ಪ್ರಕಟವಾಗುವುದೆಂದು ಹೇಳುವ ಭಾಸ್ಕರಮತವೂ, ಜೀವರುಗಳು ಬ್ರಹ್ಮನ ಸತ್ಯಭೂತವಾದ ಅಲ್ಪಶಕ್ತಿಯುಳ್ಳ ಸಾಕ್ಷಾದಂಶಗಳೆಂದು ಹೇಳುವ ಅಪೂರ್ಣಬ್ರಹ್ಮವಾದವೂ ಕೃಷ್ಣಾರ್ಜುನರಿಗೆ ಪರಮವಿರುದ್ಧವೆಂದು ತಿಳಿಯಬೇಕು.

6.

ಶ್ರೀ ಕೃಷ್ಣನು ಜೀವಪರಮಾತ್ಮರಿಗೆ ಭೇದಸಾಧಕವಾದ ಅನೇಕ ಯುಕ್ತಿಗಳನ್ನೂ ನಿರೂಪಿಸಿರುತ್ತಾನೆ. ಸರ್ವಜ್ಞತ್ವಾಲ್ಪಜ್ಞತ್ವವೇ ಮುಂತಾದ ವಿರುದ್ಧ ಧರ್ಮಗಳು ಅತ್ಯಂತ ಭೇದಕ್ಕೆ ಸಾಧಕಗಳೆಂದು ಶಂಕರಾಚಾರ್ಯರೂ ಒಪ್ಪಿರುತ್ತಾರೆ. ತಥಾಹಿ :—

ಸರ್ವಸಿದ್ಧಾಂತಸಾರಸಂಗ್ರಹೇ—
ಕಥಮೇಕತ್ವಮನಯೋರ್ಘಟತೇ ವಿಪರೀತಯೋಃ ।

---

† ಕೇನೋಪನಿಷತ್ತಿನ ಶಾಂಕರಭಾಷ್ಯದ **ಆನಂದಗಿರಿಟೀಕಾ**ಕಾರರು ಹೀಗೆ ಬರೆದಿರುತ್ತಾರೆ– **ಲೋಕೇಶುಕ್ತ್ಯಾದಿತತ್ವಂ ವಿಜಾನತಾಂ ಯತೋಽಧ್ಯಸ್ತಂ ರೂಪ್ಯಾದ್ಯವಿಜ್ಞಾತಂ ಭವತಿ । ಅಜಾನತಾಮೇವತ್ವಧ್ಯಸ್ತಂ ವಿಜ್ಞಾತಂ ಭವತೀತಿ ಪ್ರಸಿದ್ಧಂ ।** ಲೋಕದಲ್ಲಿ (ಶುಕ್ತಿ ಮೊದಲಾದವನ್ನು ನೋಡಿ ಇದು ರಜತವು ಇತ್ಯಾದಿ ರೀತಿಯಾಗಿ ಭ್ರಮವನ್ನು ಹೊಂದಿದವರಿಗೆ) ಶುಕ್ತ್ಯಾದಿ (ಅಧಿಷ್ಠಾನ) ಗಳನ್ನು ಯಥಾರ್ಥವಾಗಿ (ಶುಕ್ತಿತ್ವೇನ) ತಿಳಿದರೆ ಭ್ರಮದಲ್ಲಿ ತೋರುತ್ತಿದ್ದ ರಜತಾದಿಗಳು ಅದೃಶ್ಯವಾಗುವುವು. ಅಧಿಷ್ಠಾನದ ಯಥಾರ್ಥಜ್ಞಾನವಾದ ಮೇಲೆ ಆರೋಪಿತ ರಜತವು ಜ್ಞಾನಕ್ಕೆ ಗೋಚರವಾಗುವುದಿಲ್ಲ ; ಎಂದು ಅರ್ಥವು ಇದೇ ರೀತಿಯಾಗಿ ಜಗತ್ತು, ಭೇದ, ಭಗವನ್ಮಹಿಮೆಗಳು ಇವೆಲ್ಲವೂ ಅಧಿಷ್ಠಾನಭೂತನಾದ ಬ್ರಹ್ಮನಲ್ಲಿ ಆರೋಪಿತವಾಗಿರುವುವು. ಅಧಿಷ್ಠಾನ ರೂಪನಾದ ನಿರ್ಗುಣಬ್ರಹ್ಮನ ಯಥಾರ್ಥಜ್ಞಾನವು ಆದರೆ ಜಗತ್ತು, ಭೇಧ, ಭಗನ್ಮಹಿಮೆಗಳು ಇವೆಲ್ಲವೂ ಮಾಯವಾಗುವುವು (ಕಾಣುವುದೇ ಇಲ್ಲ). ಎಂದು ಹೇಳುತ್ತಾರೆ.

ವಿರುದ್ಧಧರ್ಮಾಕ್ರಾಂತತ್ವಾತ್ಪರಸ್ಪರ ವಿಲಕ್ಷಣೌ |
ಜೀವೇಶೌವಹ್ನಿತುಹಿನಾವಿವ ಶಬ್ದಾರ್ಥತೋಽಪಿಚ ||

ವಿರುದ್ಧ ಲಕ್ಷಣಗಳುಳ್ಳ ಜೀವೇಶ್ವರರಿಗೆ ಐಕ್ಯವು ಹೇಗೆ ಸಂಭವಿಸುವುದು? ವಿರುದ್ಧಧರ್ಮಗಳಿಂದ ಯುಕ್ತರಾದುದರಿಂದ ಜೀವೇಶ್ವರರು ಅಗ್ನಿಹಿಮಗಳಂತೆ ಪರಸ್ಪರ ವಿಲಕ್ಷಣರೇ.

ಆದರೆ ಈ ವಿರುದ್ಧಧರ್ಮಗಳು ಮಿಥ್ಯಾಭೂತವಾದುವುಗಳು (ಸುಳ್ಳು.) ಇವು ಬ್ರಹ್ಮಜ್ಞಾನವಾದ ನಂತರ (ಶುಕ್ತಿಜ್ಞಾನವನ್ನು ಹೊಂದಿದವನಿಗೆ ಕಲ್ಪಿತ ರಜತವು ತೋರದೇ ಇರುವಂತೆ) ಅದೃಶ್ಯವಾಗುವುದರಿಂದ ಜೀವಬ್ರಹ್ಮರುಗಳ ಐಕ್ಯವು ಸಿದ್ಧಿಸುವುದೆಂದು ಅವರ ಅಭಿಮಾನವು.* ಪರಮಾತ್ಮನ ಧರ್ಮಗಳು

*** ನಿರ್ದೋಷ ಶ್ರುತಿ ಸಾಕ್ಷಿಭ್ಯಾಂ ಪ್ರಮಿತೇ ಬ್ರಹ್ಮಜೀವಯೋಃ |**
ಗುಣಪೂರ್ತ್ಯಲ್ಪಗುಣತೇ ಮಿಥ್ಯೇತಿಚನಯುಜ್ಯತೇ ||

ಅಪೌರುಷೇಯವಾದ ನಿರ್ದುಷ್ಟ **ಅಥರ್ವಶಿರಶ್ರುತಿಯು "ಅತಃಕಸ್ಮಾದುಚ್ಯತೇ ಪರಂ ಬ್ರಹ್ಮೇತಿ? ಯಸ್ಮಾದುಚ್ಚಾರ್ಯಮಾಣ ಏವ ಬೃಹತಿ, ಬೃಹ್ಮಯತಿ, ತಸ್ಮಾದುಚ್ಯತೇ ಪರಂ ಬ್ರಹ್ಮೇತಿ"** ಎಂದು ಹೇಳಿರುವುದು. ಅರ್ಥವು :—ಪರಬ್ರಹ್ಮನು ಬ್ರಹ್ಮನೆಂದು ಏತಕ್ಕೆ ಕರೆಯಲ್ಪಡುವನು? ಯಾವ ಕಾರಣದಿಂದ ತಾನು ಪರಿಪೂರ್ಣನಾಗಿರುವನೋ ಮತ್ತು ಸಕಲವನ್ನೂ ಪೂರ್ಣವಾಗಿ ವ್ಯಾಪಿಸಿಕೊಂಡೇ ಇರುವನೋ ಅದರಿಂದ ಪರಬ್ರಹ್ಮನೆನಿಸುವನು. **"ಬೃಹತ್ವಂ ಬ್ರಹ್ಮಪದಪ್ರವೃತ್ತಿನಿಮಿತ್ತಂ"** ಎಂದು ಅದ್ವೈತಿಗಳೂ ಒಪ್ಪಿರುತ್ತಾರೆ. ಆದರೆ ಈ ಪೂರ್ಣತ್ವವನ್ನು "ಗುಣಗಳಿಂದ ಪರಿಪೂರ್ತಿಯನ್ನು ಹೊಂದಿರುವುದು" ಎಂದು ಅರ್ಥ ಮಾಡದೆ **ವಸ್ತುಭೇದರಹಿತವಾಗಿರುವುದು** ಎಂದು ಅರ್ಥಮಾಡಿರುವರು. ಈ ಅರ್ಥಕ್ಕೆ ಸಹಾಯವಾದ ಒಂದು ಶ್ರುತಿಯೂ ಇಲ್ಲ. ಮತ್ತು **"ಅಥಕಸ್ಮಾದುಚ್ಯತೇ ಬ್ರಹ್ಮ....ಬೃಹಂತೋಽಹ್ಯಸ್ಮಿನ್‌ಗುಣಾಃ"** ಎಂಬ ಮತ್ತೊಂದು ಶ್ರುತಿಯು "**ಅಥಕಸ್ಮಾದುಚ್ಯತೇ ಬ್ರಹ್ಮ....ಬೃಹಂತೋಽಹ್ಯಸ್ಮಿನ್‌ಧರ್ಮಾಃ**" ಎಂಬ ಅದ್ವೈತಸಿದ್ಧಿಕಾರರು ಉದಾಹರಿಸಿರುವ ಶ್ರುತಿಯೂ "ಬ್ರಹ್ಮನೆಂದು ಬ್ರಹ್ಮನಿಗೆ ಯಾಕೆ ಹೆಸರು? ಆತನಲ್ಲಿ **ಗುಣಗಳು** ಪರಿಪೂರ್ಣವಾಗಿರುವುದರಿಂದ" ಎಂದು ಹೇಳುವುದರಿಂದ **ಗುಣಪೂರ್ಣ**ನಾದುದರಿಂದಲೇ ಪರಬ್ರಹ್ಮನಿಗೆ ಬ್ರಹ್ಮನೆಂದು ಹೆಸರು. ವಸ್ತುಭೇದರಹಿತನಾದುದರಿಂದಲ್ಲ ಎಂದು ಸಿದ್ಧವಾಗುವುದು. ಈ ರೀತಿಯಾಗಿ ನಿರ್ದುಷ್ಟವಾದ ಶ್ರುತಿಯು ಬ್ರಹ್ಮನು ಗುಣಪೂರ್ಣನೆಂದು ಹೇಳುವುದು. ನಿರ್ದುಷ್ಟವಾದ ಸಾಕ್ಷಿ ಪ್ರತ್ಯಕ್ಷವು ನಾನು ಪರಿಪೂರ್ಣನಾದ ಬ್ರಹ್ಮನಲ್ಲ ಎಂದು ಸದಾ ಹೇಳುತ್ತಲೇ ಇರುವುದು. ಈ ರೀತಿಯಲ್ಲಿ ನಿರ್ದೋಷವಾದ ವೇದದಿಂದ ಪ್ರಮಿತವಾದ ಬ್ರಹ್ಮನ ಪೂರ್ಣತ್ವವಾಗಲೀ, ನಿರ್ದೋಷವಾದ ಸಾಕ್ಷಿಗೋಚರವಾದ ಜೀವನ ಅಪೂರ್ಣತ್ವ, ಅಸ್ವಾತಂತ್ರ್ಯಾದಿಗಳಾಗಲೀ ಮಿಥ್ಯಾ ಎಂದು ಹೇಳುವುದು ಅನುಚಿತವು.

'ಅನ್ಯಯಾತ್ಮಾ' ಇತ್ಯಾದಿ ಶ್ರೀ ಕೃಷ್ಣನ ವಾಕ್ಯಗಳಿಂದಲೂ, "**ಅನಂತ ವೀರ್ಯಾಮಿತವಿಕ್ರಮಸ್ತ್ವಂ**" ಇತ್ಯಾದಿ ಅರ್ಜುನನ ದಿವ್ಯಜ್ಞಾನೋತ್ಪತ್ತಿಯಾದನಂತರದಲ್ಲಿ ಮಾಡಿದ ಸ್ತುತಿಯಿಂದಲೂ ಮಿಥ್ಯಾಭೂತವಲ್ಲವೆಂದು ಸಿದ್ಧಿಸುವುದು. ಜೀವನೂ **ನಿತ್ಯನಾಗಿ ಮುಕ್ತಿಯಲ್ಲಿ** ಹರಿಪ್ರಸಾದಕಾಂಕ್ಷಿಯಾಗಿ ರುವುದರಿಂದ ಜೀವನ ಧರ್ಮಗಳೂ ಮಿಥ್ಯಾಭೂತವಾಗಲಾರವು. ಆದುದರಿಂದ ಜೀವಪರಮಾತ್ಮರಿಗೆ ವಿರುದ್ಧಧರ್ಮಗಳನ್ನು ಶ್ರೀಕೃಷ್ಣನ ವಾಕ್ಯಗಳಿಂದ ಪ್ರದರ್ಶನೆಮಾಡಿದರೆ, ಅದ್ವೈತಮತದಲ್ಲಿ ಹೇಳಿರುವರೀತಿಯಲ್ಲಿ ಜೀವಬ್ರಹ್ಮರ ಐಕ್ಯವು ಶ್ರೀ ಕೃಷ್ಣನಿಗೆ ಸಮ್ಮತವಲ್ಲ ; ಆದುದರಿಂದಲೇ ಸಕಲ ಶಾಸ್ತ್ರಗಳಿಂದಲೂ ಬಹಿರ್ಭೂತವಾದುದೆಂದು ಸಿಶ್ಚಿತವಾಗುವುದು.

ವಿರುದ್ಧಧರ್ಮಗಳು ನಾಶಹೊಂದಿ ಐಕ್ಯವು ಪ್ರಕಟವಾಗುವುದೆಂದು ಹೇಳುವ ಭಾಸ್ಕರಮತದವರೂ ಕೂಡ ವಿರುದ್ಧ ಧರ್ಮಗಳು ಭೇದಸಾಧಕವೆಂದು ಅಂಗೀಕರಿಸಿರುವರು. ನಿತ್ಯರಾದ ಜೀವೇಶ್ವರರ ಧರ್ಮಗಳು ನಾಶರಹಿತವೆಂದು ನಾವು ತೋರಿಸಿರುತ್ತೇವೆ. ಆದುದರಿಂದ ಶ್ರೀ ಕೃಷ್ಣನ ವಾಕ್ಯಗಳಿಂದ ಜೀವಬ್ರಹ್ಮರ ವಿರುದ್ಧಧರ್ಮಗಳನ್ನು ಪ್ರತಿಪಾದನೆಮಾಡಿ ತೋರಿಸುವುದರಿಂದ ಇವರ ಮತವೂ ಅಪ್ರಾಮಾಣಿಕವೆಂದು ನಿಶ್ಚಿತವಾಗುವುದು. ಆದುದರಿಂದ, ವಿಷ್ಣು ಸರ್ವೋತ್ತಮತ್ವಸ್ಥಾಪನೆಯಲ್ಲಿ ನಮ್ಮಿಂದ ಪ್ರದರ್ಶಿತವಾದ ಜೀವೇಶ್ವರರ ವಿರುದ್ಧಧರ್ಮಗಳನ್ನು ಬಹು ಸಂಕ್ಷೇಪವಾಗಿ ವಿವರಿಸುತ್ತೇವೆ.

ತಥಾಹಿ—

1. ಸರ್ವಜ್ಞತ್ವ ಅಲ್ಪಜ್ಞತ್ವಗಳು.

(1) **ತಾನ್ಯಹಂವೇದಸರ್ವಾಣಿ ನತ್ವಂ ವೇತ್ಥಪರಂತಪ ।**—(4. 5.)

(2) **ವೇದಾಹಂಸಮತೀತಾನಿ ವರ್ತಮಾನಾನಿಚಾರ್ಜುನ ।**
ಭವಿಷ್ಯಾಣಿಚ ಭೂತಾನಿಮಾಂತು ವೇದನಕಶ್ಚನ ॥—(7. 26.)

ಇವೇ ಮೊದಲಾದ ವಾಕ್ಯಗಳಿಂದ ಅರ್ಜುನೋಪಲಕ್ಷಿತರಾದ ಸರ್ವಜೀವರೂ ಅಲ್ಪಜ್ಞರೆಂದೂ ಶ್ರೀ ಕೃಷ್ಣನು ಸರ್ವಜ್ಞನೆಂದೂ ಸಿದ್ಧವಾಗುವುದು.

2. ಪೂರ್ಣತ್ವ-ದುಃಖಿತ್ವಗಳು.

(1) **ನಾನವಾಪ್ತಮವಾಪ್ತವ್ಯಂ....।**—(3. 22.)

ದೋಷಮೂಲಕವಾದ ಜ್ಞಾನಕ್ಕೆ ವಿಷಯವಾಗುವ ಶುಕ್ತಿರಜತವು ಮಿಥ್ಯಾ ಆಗಬಹುದು. ದೋಷರಹಿತ ಕರಣಮೂಲಕವಾದ ಜ್ಞಾನಕ್ಕೆ ವಿಷಯಗಳಾದ ಪೂರ್ಣತ್ವ ಅಲ್ಪತ್ವಗಳು ಹೇಗೆ ತಾನೇ ಸುಳ್ಳಾಗುವುವು ?

(2) ಪುರುಷಃ ಪ್ರಕೃತಿಸ್ಥೋಹಿಭುಂಜ್ತೇಪ್ರಕೃತಿಜಾನ್ಗುಣಾನ್ ।
(13. 22.)

3. ಸಂಸಾರತಾರಕತ್ವ-ಬದ್ಧತ್ವಗಳು.

(1) ಮತ್ಪ್ರಸಾದಾತ್ತರಿಷ್ಯಸಿ....।—(3. 22.)

(2) ಮತ್ಪ್ರಸಾದಾತ್ಪರಾಂ ಶಾಂತಿಂಸ್ಥಾನಂ ಪ್ರಾಪ್ಸ್ಯಸಿಶಾಶ್ವತಂ ।
—(18. 62.)

4. ಗಮ್ಯಗಂತೃಭಾವವು. ಪರಮಾತ್ಮನು ಮುಕ್ತಿಯಲ್ಲಿ ಜೀವನಿಂದ ಗಮ್ಯನು. ಜೀವನು ಪ್ರವೇಶಮಾಡುವವನು.

ತತೋಮಾಂತತ್ವತೋ ಜ್ಞಾತ್ವಾ ವಿಶತೇ ತದನಂತರಂ ।
—(18. 55.)

5. ಆಧಾರಾಧೇಯಭಾವವು. ಪರಮಾತ್ಮನು ಆಧಾರನು. ಜೀವನು ಆಧೇಯನು ಎಂದು ಶ್ರೀಕೃಷ್ಣನು ಹೇಳುತ್ತಾನೆ :—

ಮಯಿಸರ್ವಮಿದಂಪ್ರೋತಂ ಸೂತ್ರೇಮಣಿಗಣಾಇವ ।—(7. 7.)

6. ನಿಯಮ್ಯನಿಯಾಮಕಭಾವವು.

(1) ಮತ್ತಃಸರ್ವಂಪ್ರವರ್ತತೇ ।—(10. 8.)

(2) ಈಶ್ವರಃಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ ।
ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿಮಾಯಯಾ ॥
—(18. 61.)

7. ಸೃಜ್ಯಸ್ರಷ್ಟೃಭಾವವು. ಪರಮಾತ್ಮನು ದೇಹಸಂಬಂಧವನ್ನು ಕೊಟ್ಟು ಜೀವನನ್ನು ಸೃಷ್ಟಿಸುವವನು. ಜೀವನು ಸೃಜ್ಯನು.

ಅಹಂಸರ್ವಸ್ಯಪ್ರಭವಃ ।—(10. 8.)

8. ಸ್ವಾಮಿಭೃತ್ಯಭಾವವು.

ದೇವದೇವಜಗತ್ಪತೇ ।—(10. 15.)

9. ವಿಭುತ್ವ-ಅಣುತ್ವಗಳು.

ಆದಿದೇವಮಜಂವಿಭುಂ ।—(10. 12.)

ಸರ್ವಂಸಮಾಪ್ನೋಷಿತತೋಽಸಿಸರ್ವಃ ।—(11. 40.)

ಇತ್ಯಾದಿ ವಾಕ್ಯಗಳಿಂದ ಪರಮಾತ್ಮನು ವ್ಯಾಪ್ತನೆಂದು ಸಿದ್ಧವಾಗುವುದು. ಜೀವನು ಅಣುವೆಂಬುದನ್ನು ಶ್ರೀ ಕೃಷ್ಣನು ಎರಡನೆಯ ಅಧ್ಯಾಯದಲ್ಲಿ ಹೇಳಿರುತ್ತಾನೆ.

ಮತ್ತು

ತಥಾಶರೀರಾಣಿ ವಿಹಾಯಜೀರ್ಣಾನ್ಯನ್ಯಾನಿಸಂಯಾತಿನವಾನಿದೇಹೀ ||

—(2. 22.)

ಇತ್ಯಾದಿ ಶ್ಲೋಕಗಳಲ್ಲಿ ಒಂದು ದೇಹದಿಂದ ಮತ್ತೊಂದು ದೇಹವನ್ನು ಕುರಿತು ಜೀವನು ಪ್ರಯಾಣ ಮಾಡುತ್ತಿರುವನೆಂದು ಶ್ರೀಕೃಷ್ಣನು ಹೇಳಿರುವುದರಿಂದ, ಜೀವನು ವ್ಯಾಪ್ತನಲ್ಲವೆಂಬುದು ಸಿದ್ಧವಾಗುವುದು. ಎಂಟನೆಯ ಅಧ್ಯಾಯದಲ್ಲಿ "ಉತ್ಕ್ರಾಂತಿಗತ್ಯಾಗತೀನಾಂ" ಇತ್ಯಾದಿ ಸೂತ್ರೋಕ್ತಯುಕ್ತಿಯನ್ನು ಸೂಚಿಸುವಂಥಾ, ಜ್ಞಾನಿಯ ಉತ್ಕ್ರಮಣ ಪ್ರಕಾರವನ್ನು ನಿರೂಪಿಸಿರುತ್ತಾನೆ. ಬ್ರಹ್ಮರಂಧ್ರದ ದ್ವಾರಾ ಉತ್ಕ್ರಮಣ ಹೊಂದುವ ಯೋಗಿಜೀವನು ಅಣುವಾಗಿರಬೇಕೆಂದು ಸುಲಭವಾಗಿ ನಿಶ್ಚಯಿಸಬಹುದು. ಯದ್ಯಪಿ ಪರಮಾತ್ಮನೂ ಅಣುವು; ಆದರೆ ಜೀವನಂತೆ ಕೇವಲ ಅಣುಮಾತ್ರನಲ್ಲ. "ಅಣೋರಣೀಯಾನ್ ಮಹತೋ ಮಹೀಯಾನ್" ಇತ್ಯಾದಿ ಶ್ರುತ್ಯುಕ್ತರೀತ್ಯಾ ಶ್ರೀಹರಿಯು ಸೂಕ್ಷ್ಮಗಳಿಗಿಂತ ಸೂಕ್ಷ್ಮನೂ, ಸ್ಥೂಲಪದಾರ್ಥಗಳಿಗಿಂತ ಸ್ಥೂಲನಾಗಿಯೂ ಇರುವನು. ವಿಭುವಾದ ನಾರಾಯಣನೇ ತನ್ನ ಅಚಿಂತ್ಯಶಕ್ತಿಯಿಂದ ಅಣುವಾದ ಜೀವನಲ್ಲಿ ಅಣುರೂಪದಿಂದ ಇರುವನು; ಆದರೆ ಅವನ ವ್ಯಾಪ್ತಿಯು ಅಷ್ಟೇ ಅಲ್ಲ. ಜೀವನು ಸರ್ವದಾ ಅಣುವು.

10-13. ಮತ್ತೂ ನಾಲ್ಕು ಯುಕ್ತಿಗಳಿಂದ ಜೀವಬ್ರಹ್ಮರಿಗೆ ಅತ್ಯಂತ ಭೇದವೇ ಹೊರತು ಅದ್ವೈತಿಗಳು ಹೇಳುವಂತೆ ಅಭೇದವು ಇರುವುದಿಲ್ಲವೆಂದು ಶ್ರೀಕೃಷ್ಣನು ಎಂಟನೆಯದೇ ಮುಂತಾದ ಅಧ್ಯಾಯಗಳಲ್ಲಿ ತೋರಿಸಿರುತ್ತಾನೆ. ಅದ್ವೈತಿಗಳು ಹೇಳುವಂತೆ ಬ್ರಹ್ಮೈಕ್ಯಜ್ಞಾನದಿಂದ ಅವಿದ್ಯಾನಿವೃತ್ತಿಯುಂಟಾಗಿ ತತ್ಕಾಲದಲ್ಲಿ ದೇಹಬಂಧಾದಿಗಳು ಕಳಚಿಹೋಗಿ ಬ್ರಹ್ಮೈಕ್ಯವು ಪ್ರಾಪ್ತವಾಗುವುದಾದರೆ, ಬ್ರಹ್ಮಜ್ಞಾನಿಯ **ಉತ್ಕ್ರಮಣಪ್ರಕಾರ** ಪುನರಾವರ್ತಿರಹಿತರಾಗುವವರು ಹೋಗಬೇಕಾದ ಉತ್ತರಾಯಣ **ಮಾರ್ಗಕಥನ** ಮತ್ತು ಹದಿನೈದನೆಯ ಅಧ್ಯಾಯದಲ್ಲಿ, **ಅವರು** ಹೊಂದುವ **ನಿತ್ಯಸ್ಥಾನದ ವರ್ಣನೆಯು** ಮತ್ತು **ಕರ್ಮವಿಧಿಗಳು** ಈ ನಾಲ್ಕು ವಿಷಯಗಳನ್ನೂ ಶ್ರೀಕೃಷ್ಣನು ಬೋಧಿಸಿದುದು ಅಸಂಗತವೇ ಆಗಬೇಕಾಗುವುದು. "**ವೇದವಿದೇವಚಾಹಂ**" ಎಂದು ಶ್ರೀಕೃಷ್ಣನೇ ಹೇಳಿರುವುದರಿಂದ ವೇದವೇತ್ತೃಗಳಲ್ಲಿ ಪ್ರಧಾನನಾದ ಶ್ರೀಕೃಷ್ಣನ ಈ ವಾಕ್ಯಗಳ ಪರ್ಯಾಲೋಚನೆಯಿಂದ ಜೀವಬ್ರಹ್ಮರಿಗೆ ಭೇದವು ಎಂದಿಗೂ ಪ್ರಾಪ್ತವಾಗಲಾರದೆಂದು ಸಿದ್ಧಿಸುವುದು. ಶ್ರೀಕೃಷ್ಣನು ಹೇಳುತ್ತಾನೆ.—

(1) ಸರ್ವದ್ವಾರಾಣಿ ಸಂಯಮ್ಯ ಮನೋಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗ
ಧಾರಣಾಂ ॥
ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।
ಯಃಪ್ರಯಾತಿತ್ಯಜನ್ ದೇಹಂ ಸಯಾತಿ ಪರಮಾಂಗತಿಂ ॥

—(8. 12-13.)

ವಾಯು ಸಂಚಾರಮಾಡುವ ಸುಷುಮ್ನೇತರ ನಾಡಿಗಳನ್ನು ನಿರೋಧಿಸಿ, (ಹೃದಯದಲ್ಲಿರುವ) ಹೃನ್ನಾಮಕ ನಾರಾಯಣನಲ್ಲಿ ಮನಸ್ಸನ್ನು ಸ್ಥಿರವಾಗಿಟ್ಟು, ಸ್ವದೇಹಸ್ಥಿತವಾದ ಪ್ರಾಣವಾಯುವನ್ನು ಬ್ರಹ್ಮರಂಧ್ರದಲ್ಲಿ ಇರಿಸಿ, ನಿರಂತರ ಧ್ಯಾನದಲ್ಲಿರತನಾಗಿ, ಪ್ರಣವವನ್ನು ಜಪಿಸುತ್ತಾ, ಪ್ರಣವಪ್ರತಿಪಾದ್ಯನಾದ ನನ್ನನ್ನು ಧ್ಯಾನಮಾಡುತ್ತಾ ದೇಹವನ್ನು ಬಿಡುವ ಅಧಿಕಾರಿಯು ಪರಮಗತಿಯನ್ನು ಅಂದರೆ ಪರಮಮುಕ್ತಿಯನ್ನು ಹೊಂದುತ್ತಾನೆ.

ಬ್ರಹ್ಮೈಕ್ಯಜ್ಞಾನಮಾತ್ರದಿಂದ ಬ್ರಹ್ಮೈಕ್ಯರೂಪಮುಕ್ತಿಯು ಪ್ರಾಪ್ತವಾಗುವ ಪಕ್ಷಕ್ಕೆ ಈ ಉತ್ಕ್ರಮಣಪ್ರಕಾರಕಥನವು ವ್ಯರ್ಥವಾಗುವುದು. ಇದು ಅಶಾಶ್ವತವಾದ ಅವಾಂತರಮುಕ್ತಿಪರವೆಂದು ಹೇಳುವಹಾಗಿಲ್ಲ. "**ಸಯಾತಿ ಪರಮಾಂಗತಿಂ**" ಎಂದರೆ ಜ್ಞಾನಿಯು ಪರಮಮುಕ್ತಿಯನ್ನೇ ಹೊಂದುತ್ತಾನೆ ಎಂದು ಹೇಳಿರುವುದರಿಂದ ಈ ವಾಕ್ಯಗಳು ಜ್ಞಾನಿಗಿಂತಲೂ ಭಿನ್ನನಾದ ಪ್ರಣವ ಪ್ರತಿಪಾದ್ಯನಾದ ಪರಬ್ರಹ್ಮನು (ಶ್ರೀ ಕೃಷ್ಣನು) ಮುಕ್ತಿನಿಯಾಮಕನಾಗಿರುವನೆಂದು ಸ್ಥಿರಪಡಿಸುವುವು.* "**ಮುಕ್ತಾನಾಂ ಪರಮಾಗತಿಃ**" ಎಂಬ ಶ್ರೀ ಕೃಷ್ಣನ ಹೆಸರೇ ಈ ಅರ್ಥವನ್ನು ಸೂಚಿಸುವುದು.

(2) ಯತ್ರಕಾಲೇತ್ವನಾವೃತ್ತಿಮಾವೃತ್ತಿಂ ಚೈವಯೋಗಿನಃ ।
ಪ್ರಯಾತಾಯಾಂತಿತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥
ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ ।
ತತ್ರಪ್ರಯಾತಾಗಚ್ಛಂತಿ ಬ್ರಹ್ಮ ಬ್ರಹ್ಮವಿದೋಜನಾಃ ।
ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ಉತ್ತರಾಯಣಂ ।
ತತ್ರ ಚಾಂದ್ರಮಸಂಜ್ಯೋತಿ ರ್ಯೋಗೀ ಪ್ರಾಪ್ಯನಿವರ್ತತೇ ।

---

* ಪ್ರಣವಪ್ರತಿಪಾದ್ಯನು ಸಾಕ್ಷಾತ್ಪರಬ್ರಹ್ಮನೇ ಆಗಿರುವನು ಎಂದು ಶಂಕರಾಚಾರ್ಯರೇ ನಿರ್ಣಯಮಾಡಿರುತ್ತಾರೆ.

ಶುಕ್ಲ ಕೃಷ್ಣೇಗತೀಹ್ಯೇತೇ ಜಗತಃ ಶಾಶ್ವತೇ ಮತೇ ।
ಏಕಯಾಯಾತ್ಯನಾವೃತ್ತಿ ಮನ್ಯಯಾವರ್ತತೇ ಪುನಃ ॥

(8. 23-26.)

ಎಲೈ ಭರತಶ್ರೇಷ್ಠನೇ ! ಜ್ಞಾನಯೋಗಿಗಳೂ ಕರ್ಮಯೋಗಿಗಳೂ ಯಾವ ಯಾವ ಕಾಲಾಭಿಮಾನಿದೇವತೆಗಳಿಂದ ಅಧಿಷ್ಠಿತವಾದ ಮಾರ್ಗದಲ್ಲಿ ಪ್ರಯಾಣ ಮಾಡಿ, (ಒಂದುಮಾರ್ಗದಲ್ಲಿ ಹೋದವರು) ಅಪುನರಾವೃತ್ತಿಯನ್ನೂ, (ಮತ್ತೊಂದು ಮಾರ್ಗದಲ್ಲಿ ಹೋದವರು) ಪುನರಾವೃತ್ತಿಯನ್ನೂ ಹೊಂದುತ್ತಾರೆಯೋ, ಅಂಥಾ ಮಾರ್ಗನಿಯಾಮಕರಾದ ಕಾಲಾಭಿಮಾನಿ ದೇವತಾಭೇದವನ್ನು ಹೇಳುತ್ತೇನೆ ಕೇಳು. ಅಗ್ನಿದೇವತೆಯು, ಅರ್ಚಿನಾಮಕದೇವತೆಯು, ಅಹರಭಿಮಾನಿದೇವತೆಯು, ಶುಕ್ಲಪಕ್ಷಾಭಿಮಾನಿದೇವತೆಯು, ಷಣ್ಮಾಸಾಭಿಮಾನಿದೇವತೆಯು, ಉತ್ತರಾಯಣಾಭಿಮಾನಿದೇವತೆಯು ಇವರುಗಳಿಂದ ಪಾಲಿಸಲ್ಪಟ್ಟ ಮಾರ್ಗದಲ್ಲಿ ಪ್ರಯಾಣಮಾಡಿದ **ಬ್ರಹ್ಮಜ್ಞಾನಿಗಳು** ಪರಬ್ರಹ್ಮನನ್ನು ಹೊಂದುತ್ತಾರೆ.

ಧೂಮಾಭಿಮಾನಿದೇವತೆಯು, ರಾತ್ರ್ಯಭಿಮಾನಿದೇವತೆಯು, ಕೃಷ್ಣಪಕ್ಷಾಭಿಮಾನಿದೇವತೆಯು, (ಆಷಾಢಾದಿ) ಷಣ್ಮಾಸಾಭಿಮಾನಿದೇವತೆಯು, ದಕ್ಷಿಣಾಯನಾಭಿಮಾನಿದೇವತೆಯು ಇವರುಗಳಿಂದ ಅಧಿಷ್ಠಿತಮಾರ್ಗದಲ್ಲಿ ಪ್ರಯಾಣಮಾಡಿದ ಕರ್ಮಯೋಗಿಗಳು ಚಂದ್ರಾದಿಗಳು ವಾಸಮಾಡುವ, ತೇಜಃಪ್ರಚುರವಾದ ಸ್ವರ್ಗಾದಿ ಲೋಕವನ್ನು ಹೊಂದಿ, ಅಲ್ಲಿ ಅಲ್ಲಿ ತಾವು ಮಾಡಿದ ಪುಣ್ಯಗಳಿಗೆ ಫಲರೂಪವಾದ ಸೌಖ್ಯವನ್ನು ಅನುಭವಿಸಿ, "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂದು ಹೇಳಿರುವ ಮೇರೆಗೆ ಪುನಃ ಭೂಲೋಕಕ್ಕೆ ಜನನಾರ್ಥವಾಗಿ ಹಿಂತಿರುಗಿ ಬರುತ್ತಾರೆ.

ಹೀಗೆ ಬ್ರಹ್ಮಜ್ಞಾನಿಗಳೂ ಕರ್ಮಯೋಗಿಗಳೂ ಪ್ರಯಾಣಮಾಡುವ ಉತ್ತರಾಯಣ ದಕ್ಷಿಣಾಯನಮಾರ್ಗಗಳೆರಡೂ ಏಕಪ್ರಕಾರವಾಗಿರುವುವು. (ಅಂದರೆ ಕರ್ಮಯೋಗಿಗಳು ದಕ್ಷಿಣಾಯನಮಾರ್ಗದಲ್ಲೇ ಹೋಗಬೇಕು; ಬ್ರಹ್ಮಜ್ಞಾನಿಗಳು ಉತ್ತರಾಯಣಮಾರ್ಗದಲ್ಲೇ ಮೋಕ್ಷವನ್ನು ಕುರಿತು ಹೋಗಬೇಕು ಎಂಬ ನಿಯಮವು ವ್ಯತ್ಯಾಸವಿಲ್ಲದೆ ಯಾವಾಗಲೂ ಇರುವುವು.) ಇದು ಜ್ಞಾನಿಸಮ್ಮತವು. ಒಂದು ಮಾರ್ಗದಿಂದ ಹೋದವನು ಪುನರಾವರ್ತಿಯನ್ನು ಹೊಂದುವುದಿಲ್ಲ. ಮತ್ತೊಂದು ಮಾರ್ಗದಿಂದ ಹೋದವನು ಪುನಃ ಲೋಕಕ್ಕೆ ಬರುತ್ತಾನೆ.

ಬ್ರಹ್ಮೈಕ್ಯಜ್ಞಾನಮಾತ್ರದಿಂದ ಬ್ರಹ್ಮೈಕ್ಯರೂಪಮುಕ್ತಿಯು ಆಗಿ ಹೋಗುವುದಾದರೆ, ಅಪುನರಾವರ್ತಿಯೋಗ್ಯರು ಹೋಗುವ ಉತ್ತರಾಯಣಮಾರ್ಗಕಥ

ನವ್ರ ಅನುಪಪನ್ನವಾಗುವುದು. ಇದು ಬ್ರಹ್ಮೈಕ್ಯಜ್ಞಾನವಾಗದ, ಅಪಕ್ವರಾದ ಯೋಗಿಗಳು ಅವಾಂತರ ಮುಕ್ತಿಯನ್ನು ಕುರಿತು ಹೋಗುವ ಮಾರ್ಗವೆಂಬುದು ಪ್ರಮಾಣರಹಿತವಾದ ಅಭಿನಿವೇಶದ ಮಾತಾಗಿರುತ್ತದೆ. ಕಿಂಚ, ಶ್ರೀಕೃಷ್ಣವಾಕ್ಯಗಳಿಗೆ ವಿರುದ್ಧವೂ ಆದುದು :—

ತತ್ರಪ್ರಯಾತಾಗಚ್ಛಂತಿಬ್ರಹ್ಮಬ್ರಹ್ಮ ವಿದೋಜನಾಃ ।—(8. 24.)

ಎಂದರೆ ಬ್ರಹ್ಮಜ್ಞಾನಿಗಳು ಉತ್ತರಾಯಣಮಾರ್ಗದಲ್ಲಿ ಹೋಗಿ ಬ್ರಹ್ಮನನ್ನು ಹೊಂದುತ್ತಾರೆ, ಎಂದು ಸ್ಪಷ್ಟವಾಗಿ 1. ಆ ಮಾರ್ಗದಲ್ಲಿ ಹೋಗುವ ಅಧಿಕಾರಿಗಳು ಬ್ರಹ್ಮಜ್ಞಾನಿಗಳು ಎಂದೂ, 2. ಅದರಿಂದ ಹೋದವರಿಗೆ ಪ್ರಾಪ್ಯವಾದ ವಸ್ತುವು **ಬ್ರಹ್ಮನು,** ಅಶಾಶ್ವತಸುಖವಲ್ಲವೆಂದೂ ಹೇಳಿರುತ್ತಾನೆ ಕಿಂಚ 3. ಬ್ರಹ್ಮಜ್ಞಾನಹೀನರಿಗೆ ದಕ್ಷಿಣಾಯನ ಮಾರ್ಗವನ್ನೂ ಹೇಳಿರುತ್ತಾನೆ. ಇದರಿಂದ ಬ್ರಹ್ಮೈಕ್ಯಕ್ಕಿಂತ ಅತ್ಯಂತ ಭಿನ್ನವಾದ ಬೇರೆ ಒಂದು ಮುಕ್ತಿಯು ಇರುವುದೆಂದೂ, ಬ್ರಹ್ಮೈಕ್ಯಜ್ಞಾನಕ್ಕಿಂತ ಭಿನ್ನವಾದ ಬ್ರಹ್ಮಜ್ಞಾನದಿಂದ ಅದು ಸಾಧ್ಯವಾಗುವುದೆಂದೂ ಸಿದ್ಧವಾಯಿತು. ಶ್ರೀ ಕೃಷ್ಣನು **ನನ್ನ ಪ್ರಾಪ್ತಿಯೇ** ಪರಮ ಮುಕ್ತಿಯೆಂದು ಹೇಳಿರುವನು. ಪುನಃ ಹೇಳುವನು.—

ಆ ಬ್ರಹ್ಮಭವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯತುಕೌಂತೇಯ ಪುನರ್ಜನ್ಮನವಿದ್ಯತೇ ॥—(8. 16.)
ಅವ್ಯಕ್ತೋಽಕ್ಷರಇತ್ಯುಕ್ತಸ್ತಮಾಹುಃ ಪರಮಾಂಗತಿಂ ।
ಯಂಪ್ರಾಪ್ಯನನಿವರ್ತಂತೇತದ್ಧಾಮಪರಮಂಮಮ ॥—(8. 21.)

ಈ ಶ್ಲೋಕಾರ್ಥಗಳು 29 ಮತ್ತು 105 ನೆಯ ಪುಟಗಳಲ್ಲಿ ವಿವೃತವಾಗಿರುವುವು. ಇವುಗಳಿಂದ ಶ್ರೀ ಕೃಷ್ಣನಿಂದ ಭಿನ್ನನಾದ ಪರಮ ಪ್ರಾಪ್ಯನಾದ ನಿರ್ಗುಣಬ್ರಹ್ಮನು ಸುತರಾಂ ಇಲ್ಲವೆಂದು ನಿಶ್ಚಿತವಾಗುವುದು.

(3) ....**ಗಚ್ಛಂತ್ಯಮೂಢಾಃ ಪದಮವ್ಯಯಂತತ್ ।**
ನತದ್ಭಾಸಯತೇಸೂರ್ಯೋನಶಶಾಂಕೋನಪಾವಕಃ ॥
ಯದ್ಗತ್ವಾನನಿವರ್ತಂತೇ ತದ್ಧಾಮಪರಮಂಮಮ ॥

—(15. 5-6.)

ಜ್ಞಾನಿಗಳು ಅವ್ಯಯವಾದ ಎಂದರೆ ಸರ್ವಥಾ ನಾಶರಹಿತವಾದ ನನ್ನ ಲೋಕವನ್ನು ಹೊಂದುತ್ತಾರೆ. ನನ್ನ ಸ್ಥಾನವನ್ನು ಸೂರ್ಯ ಚಂದ್ರ, ಅಗ್ನ್ಯಾದಿಗಳು ಪ್ರಕಾಶಪಡಿಸುವುದಿಲ್ಲ. (ತಾವೇ ವಿಲಕ್ಷಣವಾದ ಇನ್ನೂ ಅತಿಶಯಿತವಾದ

ತೇಜಸ್ಸಿನಿಂದ ಸ್ವಯಂಪ್ರಕಾಶಮಾನವಾಗಿರುವನೆಂದು ಅರ್ಥವು.) ಯಾವ ಸ್ಥಾನವನ್ನು ಹೊಂದಿದ ಮೇಲೆ ಪುನಃ ಹಿಂತಿರುಗಿ ಸಂಸಾರಬಂಧವನ್ನು ಹೊಂದುವುದಿಲ್ಲವೋ ಅಂಥಾ **ಪರಮಧಾಮವು** (ಪರಮಪ್ರಾಪ್ಯವಾದ ಸ್ಥಾನವು) ನನ್ನದು.

ಈ ಶ್ಲೋಕವನ್ನು ಭಗವತ್ಸ್ವರೂಪ ಪರವಾಗಿ ಅರ್ಥಮಾಡಿದರೂ ಇದೇ ಅಭಿಪ್ರಾಯವು ಬರುವುದು. ವೈಕುಂಠಾದಿ ನಿತ್ಯಲೋಕಗಳು ಮಹಾಪ್ರಳಯದಲ್ಲೂ ನಾಶಹೊಂದದೆ ನಿತ್ಯವಾಗಿರುವುವೆಂದು ಪುರಾಣಗಳಲ್ಲಿ ಸುಪ್ರಸಿದ್ಧವು. ಮುಕ್ತರು ವಾಸಮಾಡತಕ್ಕ ದೇಶವಿಶೇಷವನ್ನು ಹೇಳಿ ಅದೇ ಪರಮಪ್ರಾಪ್ಯವಾದ ಸ್ಥಾನವೆಂದು ಶ್ರೀಕೃಷ್ಣನೂ ಹೇಳಿರುವುದರಿಂದ, ಬ್ರಹ್ಮೈಕ್ಯವು ಮುಕ್ತಿಯಲ್ಲವೆಂದೂ, ಅತಏವ ಬ್ರಹ್ಮೈಕ್ಯಜ್ಞಾನವು ಮುಕ್ತಿಗೆ ಕಾರಣವಾಗುವುದಿಲ್ಲವೆಂದೂ ಸ್ಥಿರವಾಗುವುದು. ಕಿಂಚ,

(4) **"ಕುರುಕರ್ಮೈವತಸ್ಮಾತ್ತ್ವಂ"**
ಮನ್ಮನಾಭವಮದ್ಭಕ್ತೋಮದ್ಯಾಜೀಮಾಂನಮಸ್ಕುರು ।
ಮಾಮೇವೈಷ್ಯಸಿಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥—(9. 34.)

ಇತ್ಯಾದಿ ಶ್ಲೋಕಗಳಲ್ಲಿ "ನೀನು ಕರ್ಮ**ಮಾಡು**; ನನ್ನಲ್ಲಿ ಭಕ್ತಿ **ಮಾಡು**" ಎಂದು ವಿಧಾನಮಾಡಿರುವನು. ಮತ್ತು ಈರೀತಿ ನನ್ನನ್ನು ಉಪಾಸನೆ ಮಾಡಿದರೆ ಮೋಕ್ಷವು ಪ್ರಾಪ್ತಿಯಾಗುವುದೆಂದು **ಫಲವನ್ನು ಹೇಳಿರುವನು.** ಈ ಕರ್ಮವಿಧಾನವು ಮತ್ತು ಫಲಕಥನವು ಸಂಸಾರಿಯಾದ ಜೀವನ ವಿಷಯದಲ್ಲಿ ಸಲ್ಲುವುದೇ ಹೊರತು ಪೂರ್ಣಕಾಮನಾದ ಪರಮಾತ್ಮನಿಗೆ ಕೂಡಲಾರದು. ಇದರಿಂದಲೂ ಶ್ರೀಕೃಷ್ಣನು ಸಂಸಾರಿಯಾದ ಅರ್ಜುನಾದಿ ಜೀವರುಗಳಿಂದ ಅತ್ಯಂತ ಭಿನ್ನನಾದ, ಕರ್ಮವಿಧಿಗೆ ಬದ್ಧನಲ್ಲದ ಮತ್ತು ಮುಂದೆ ಹೊಂದಲ್ಪಡತಕ್ಕ ಮೋಕ್ಷರೂಪಪ್ರಯೋಜನರಹಿತನಾದ, ನಿತ್ಯಮುಕ್ತನಾದ ಪರಬ್ರಹ್ಮನೆಂದು ಸಿದ್ಧವಾಗುವುದು.

ಶಂಕರಾಚಾರ್ಯರ ಮಾತುಗಳಿಂದಲೇ ಈ ಅಭಿಪ್ರಾಯವು ವಜ್ರಲೇಪದಂತೆ ಸುಸ್ಥಿರವಾಗುವುದು. ಜ್ಞಾನಿಯ ಉತ್ಕ್ರಮಣ, ಪ್ರಯಾಣಮಾರ್ಗ, ವಾಸಮಾಡುವ ದೇಶವಿಶೇಷಕಥನವು ಇವೆಲ್ಲವೂ ಜೀವಬ್ರಹ್ಮರಿಗೆ ಭೇದಸಾಧಕವೇ ಆಗುವುದೆಂದು ಬರೆದಿರುತ್ತಾರೆ. ತಥಾಹಿ:—**ಬೃಹದಾರಣ್ಯಕೋಪನಿಷಚ್ಛಾಂಕರಭಾಷ್ಯಂ:—**

" ಅಸತಿಭೇದೇ ಕಸ್ಯಕುತೋಗತಿಃ ಸ್ಯಾತ್ । ತದಭಾವೇ (ಭೇದಾಭಾವೇ) ಚ ದಕ್ಷಿಣೋತ್ತರ ಮಾರ್ಗವಿಶೇಷಾನುಪಪತ್ತಿ ರ್ಗಂತವ್ಯದೇಶಾನುಪಪತ್ತಿಶ್ಚೇತಿ। ಭಿನ್ನಸ್ಯತುಪರಸ್ಮಾದಾತ್ಮನಃ ಸರ್ವಮೇತದುಪಪನ್ನಂ। ಕರ್ಮಜ್ಞಾನಸಾಧನೋಪದೇಶಾಶ್ಚ। ಭಿನ್ನಶ್ಚೇದ್ಬ್ರಹ್ಮಣಃ ಸಂಸಾರೀಸ್ಯಾದ್ಯುಕ್ತಸ್ತಂ ಪ್ರತ್ಯಭ್ಯುದಯ ನಿಶ್ಶ್ರೇಯಸ ಸಾಧನಯೋಃ ಕರ್ಮಜ್ಞಾನಯೋರುಪದೇಶೋ ನೇಶ್ವರಸ್ಯಾಪ್ತಕಾಮತ್ವಾತ್ ॥

ಈ ವಾಕ್ಯಗಳು ಪೂರ್ವಪಕ್ಷದ ಶಂಕಾಗ್ರಂಥದಲ್ಲಿ ಬಂದಿರುತ್ತವೆ. ಇದರ ಅರ್ಥವು :—" ಜೀವಬ್ರಹ್ಮರಿಗೆ ಭೇದವಿಲ್ಲದಿದ್ದರೆ (ಜೀವನೇ ಬ್ರಹ್ಮನಾಗಿದ್ದರೆ), ಯಾರಿಗೆ ಯಾವ ಸಾಧನದಿಂದ ಮುಕ್ತಿಯಾಗಬೇಕು? 1-2. ಜೀವನು ಬ್ರಹ್ಮನಿಂದ ಭಿನ್ನನಲ್ಲದಿದ್ದರೆ, ದಕ್ಷಿಣೋತ್ತರ ಮಾರ್ಗಭೇದದ ಕಥನವು, ಉಭಯ ಮಾರ್ಗದಿಂದ ಹೊಂದಲ್ಪಡುವ ಭಿನ್ನಸ್ಥಾನಕಥನವು, ಇವೆರಡೂ ಯುಕ್ತಿವಿರುದ್ಧವಾಗುವುವು. ಪರಮಾತ್ಮನಿಂದ ಸಂಸಾರಿಯು ಭಿನ್ನನಾಗಿದ್ದರೆ, ಇವೆಲ್ಲವೂ (ಮಾರ್ಗ, ಮುಕ್ತಿಸ್ಥಾನ ಕಥನಾದಿಗಳು) ಸಮಂಜಸವಾಗುವುವು. 3. ಮತ್ತು ಕರ್ಮರೂಪಸಾಧನ ಮತ್ತು ಜ್ಞಾನರೂಪಸಾಧನಗಳ ಉಪದೇಶವೂ ಉಪಪನ್ನವಾಗುವುದು. 4. ಸಂಸಾರಿಯು ಬ್ರಹ್ಮನಿಂದ ಭಿನ್ನನಾಗಿದ್ದರೇನೇ ಅವನನ್ನು ಕುರಿತು ನಿನಗೆ ಸ್ವರ್ಗವಾಗುವುದು ; ನಿನಗೆ ಮೋಕ್ಷವು ಪ್ರಾಪ್ತವಾಗುವುದು ; ಎಂಬ ಸ್ವರ್ಗಮುಕ್ತಿರೂಪ ಫಲೋಪದೇಶಗಳು ಸಾರ್ಥಕವಾಗುವುವು. ಸ್ವರ್ಗಮುಕ್ತಿಗಳಿಗೆ ಸಾಧಕವಾದ ಕರ್ಮಜ್ಞಾನಗಳೆಂಬ ಸಾಧನೋಪದೇಶವೂ (ಅಪೂರ್ಣನಾದ) ಜೀವನಿಗೆ ಯೋಗ್ಯವೇ ಹೊರತು, ಆಪ್ತಕಾಮನಾದ ಈಶ್ವರನಿಗೆ ಉಚಿತವಾಗಲಾರದು."

ಈ ರೀತಿಯಲ್ಲಿ ಜೀವಬ್ರಹ್ಮರಿಗೆ ಅಭೇದವನ್ನು ಒಪ್ಪಿದರೆ ಪ್ರಾಪ್ತವಾಗುವ ಸರ್ವ ಅನುಪಪತ್ತಿಗಳನ್ನೂ ಅವರೇ ತೋರಿಸಿರುತ್ತಾರೆ

ಪ್ರಶ್ನೆ—ಸ್ವಾಮಿ! ಇದು ಅವರಿಗೆ ಪೂರ್ವಪಕ್ಷಗ್ರಂಥವಾದ ಮೇಲೆ ಇದಕ್ಕೆ ಯಾವ ಸಮಾಧಾನವನ್ನು ಹೇಳಿ ಭೇದವನ್ನು ನಿರಾಕರಣೆಮಾಡಿ ಅದ್ವೈತವನ್ನು ಸಮರ್ಥನೆಮಾಡಿರುತ್ತಾರೆ ?

ಉತ್ತರ—ಉತ್ತರವನ್ನು ಹೇಳಿದರೆ ನೀವು ನಗುತ್ತೀರಿ. ಆದರೂ ಇರತಕ್ಕದ್ದನ್ನು ಹೇಳಲೇಬೇಕು. " ಅಹಂಬ್ರಹ್ಮಾಸ್ಮಿ " ಎಂಬ ಸ್ಪಷ್ಟಶ್ರುತಿಯು ಜೀವಬ್ರಹ್ಮರಿಗೆ ಅಭೇದವನ್ನು ಹೇಳುವುದರಿಂದ ನಿಮ್ಮ ಗೋಪಾಲಬಾಲನ ಮಾತುಗ

ಳೆಲ್ಲಾ ಮುಖ್ಯಭೇದ, ಮುಖ್ಯನಿಧಿ, ಮುಖ್ಯಸಾಧನ, ಮುಖ್ಯಮಾರ್ಗ, ಮುಖ್ಯಫಲಗಳನ್ನು ಹೇಳುವವೆಂದು ಹೇಳಿರುತ್ತಾರೆ.

ಪ್ರಶ್ನೆ—ಇದಕ್ಕೆ ಪರಿಹಾರವೇನು?

ಉತ್ತರ—ಸಾವಕಾಶವಾಗಿ ಇನ್ನು ಮೇಲೆ ತತ್ವಮಸ್ಯಾದಿ ಶ್ರುತ್ಯರ್ಥಗಳನ್ನು ವಿಚಾರಮಾಡಿ, "ಅಹಂಬ್ರಹ್ಮಾಸ್ಮಿ" ಇವೇ ಮುಂತಾದ ಶ್ರುತಿಗಳಿಗೆ ಭೇದದಲ್ಲೇ ತಾತ್ಪರ್ಯವಿರುವುದೆಂದು ತೋರಿಸುತ್ತೇನೆ. ಕಿಂಚ "ಶಿಷ್ಯಸ್ತೇಹಂ ಶಾಧಿಮಾಂತ್ವಾಂಪ್ರಪನ್ನಂ" ಎಂದು, ಅರ್ಜುನನು ಶಿಷ್ಯನಾಗಿ ಶ್ರೀ ಕೃಷ್ಣನಲ್ಲಿ ಶರಣಾಗತನಾಗಿರುವಾಗ, ಆಪ್ತತಮನಾದ ಶ್ರೀ ಸ್ವಾಮಿಯು ಮುಖ್ಯತತ್ವವನ್ನು ಬೋಧಿಸುವುದಕ್ಕೆ ನಿಮಿತ್ತವಿಲ್ಲ. ಮತ್ತು ಬ್ರಹ್ಮಸ್ವರೂಪವನ್ನು ದಿವ್ಯಚಕ್ಷುಸ್ಸಿನಿಂದ ಅರ್ಜುನನು ನೋಡಿರುವುದರಿಂದಲೂ ಕೃಷ್ಣೋಕ್ತಿಗಳುಪ್ರಮಾಣತಮವೆಂದು ನಿಶ್ಚಿತವಾಗುವುದು. "ವೇದೈಶ್ಚಸರ್ವೈರಹಮೇವವೇದ್ಯಃ" ಎಂದು ಹೇಳಿದ ಮೇರೆಗೆ "ಅಹಂಬ್ರಹ್ಮಾಸ್ಮಿ, ತತ್ವಮಸಿ, ನೇಹನಾನಾಸ್ತಿಕಿಂಚನ, ಪ್ರಜ್ಞಾನಂಬ್ರಹ್ಮ, ಅಯಮಾತ್ಮಾಬ್ರಹ್ಮ" ಮುಂತಾದ ಸರ್ವಶ್ರುತ್ಯರ್ಥಗಳನ್ನೂ ಸಮಗ್ರವಾಗಿ ತಿಳಿದಿರುವ ಜಗದ್ಗುರುವಾದ ಶ್ರೀ ಕೃಷ್ಣನು ತಾನೇ **ಲೋಕೇ ವೇದೇಚಕಥಿತಃ ಪುರುಷೋತ್ತಮಃ** ಎಂದರೆ "ನಾನು ಭಾರತಾದಿ ಪೌರುಷೇಯಗ್ರಂಥಗಳಲ್ಲಿಯೂ, ವೇದಗಳಲ್ಲಿಯೂ ಪುರುಷೋತ್ತಮನು (ಪರಮಚೇತನನು) ಎಂದು ಪ್ರಸಿದ್ಧನಾಗಿರುವೆನು" ಎಂದು ಹೇಳಿರುತ್ತಾನೆ. ಹೀಗಿರುವಲ್ಲಿ, ಸಾವಕಾಶವಾದ* (ಅನೇಕ ರೀತಿಯಾಗಿ ಅರ್ಥಮಾಡುವುದಕ್ಕೆ ಸಂಭವವಿರುವ) ಒಂದೆರಡು ಶ್ರುತಿವಾಕ್ಯಗಳಿಂದ, ನಿರವಕಾಶವಾದ (ಭೇದಪರವಾಗಿಯೇ ಅರ್ಥವುಳ್ಳ, ಬೇರೆ ಅರ್ಥಮಾಡುವುದಕ್ಕೆ ಅವಕಾಶವಿಲ್ಲದಿರುವ) ಅನಂತವೇದವಾಕ್ಯಗಳೂ, ಗೀತಾದಿ ಸ್ಮೃತಿವಾಕ್ಯಗಳೂ ಮುಖ್ಯ ಹೇಳುವುವು, ಎಂದು ಹೇಳುವುದು ಬಹು ಸಾಹಸದ ಪ್ರಯತ್ನವಿರುತ್ತದೆ.

14. ಕಿಂಚ, **ದ್ವಾಸುಪರ್ಣಾ** ಇತ್ಯಾದಿ ಶ್ರುತಿಸೂಚಿತಜೀವಬ್ರಹ್ಮರ ಭೇದಕಧರ್ಮಗಳನ್ನು ಸಹ ಶ್ರೀ ಕೃಷ್ಣನು ಹದಿನೈದನೆಯ ಅಧ್ಯಾಯದಲ್ಲಿ ತೋರಿಸಿರುತ್ತಾನೆ.

---

* ವಸ್ತುತಃ **ಮುಖ್ಯವೃತ್ತಿಯಿಂದ** ಅದ್ವೈತವನ್ನು ಬೋಧಿಸುವ ಒಂದು ಶ್ರುತಿಯೂ ಇರುವುದಿಲ್ಲ. ಶಂಕರಾಚಾರ್ಯರೂ ಕೂಡ **ಮುಖ್ಯವೃತ್ತಿಯಿಂದ** ಅದ್ವೈತವನ್ನು ಒಂದು ಶ್ರುತಿಯೂ ಹೇಳುವುದಿಲ್ಲವೆಂದು ಸ್ಪಷ್ಟವಾಗಿ ಬರೆದಿರುತ್ತಾರೆ. ಸುಪ್ರಖ್ಯಾತವಾದ ತತ್ವಮಸಿ ವಾಕ್ಯವೂ ಕೂಡ ಮುಖ್ಯವೃತ್ತಿಯಿಂದ ಅದ್ವೈತವನ್ನು ಬೋಧಿಸುವುದಿಲ್ಲವೆಂದು "ಐಕ್ಯಂ ತಯೋರ್ಲಕ್ಷಿತಯೋರ್ನವಾಚ್ಯಯೋಃ" ಇತ್ಯಾದಿ ಶ್ಲೋಕಗಳಲ್ಲಿ ಹೇಳಿರುತ್ತಾರೆ.

(1) **ಶ್ರೋತ್ರಂಚಕ್ಷುಃ ಸ್ಪರ್ಶನಂಚರಸನಂ ಘ್ರಾಣಮೇವಚ ।**
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ।
ಉತ್ಕ್ರಾಮಂತಂಸ್ಥಿತಂವಾಪಿ ಭುಂಜಾನಂ ವಾಗುಣಾನ್ವಿತಂ ।
ವಿಮೂಢಾನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥
—(15. 9-10)

ಪರಮಾತ್ಮನು (ಶ್ರೀ ಕೃಷ್ಣನು) ಜೀವರುಗಳ ಶ್ರೋತ್ರ, ನೇತ್ರ, ತ್ವಕ್, ರಸನ, ಘ್ರಾಣೇಂದ್ರಿಯಗಳನ್ನು ಮತ್ತು ಮನಸ್ಸನ್ನೂ ಸಹ ಪ್ರವೇಶಮಾಡಿ, ಶಬ್ದಾದಿ ವಿಷಯಭೋಗವನ್ನು ಮಾಡುತ್ತಾನೆ. ಒಂದೇ ಶರೀರದಲ್ಲಿ ಜೀವಪರಮಾತ್ಮರಿಬ್ಬರೂ ಇದ್ದು, ಇಬ್ಬರೂ ವಿಷಯಭೋಗಗಳನ್ನು ಮಾಡುವುದಾದರೆ, ಪರಮಾತ್ಮನಿಗೆ ಜೀವಸಾಮ್ಯವು ಬಂದಹಾಗಾಯಿತೆಂದರೆ ಹೇಳುತ್ತಾನೆ:—ಜೀವನನ್ನು ತೆಗೆದುಕೊಂಡು ಲೋಕಾಂತರವನ್ನು ಕುರಿತು ಪ್ರಯಾಣಮಾಡುವ, ಮತ್ತು ಜೀವಸಹಿತನಾಗಿ ಶರೀರದಲ್ಲಿ ಸ್ಥಿತನಾಗಿರುವ **ಗುಣಾನ್ವಿತಂ ಭುಂಜಾನಂ** ಎಂದರೆ ಶುಭವಿಷಯವನ್ನೇ ಭೋಗಮಾಡುವ ಪರಮಾತ್ಮನನ್ನು ವಿಮೂಢರು ತಿಳಿಯಲಾರರು. ಜ್ಞಾನದೃಷ್ಟಿಯುಳ್ಳವರು ತಿಳಿಯುತ್ತಾರೆ.

ಹೀಗೆ ಜೀವಬ್ರಹ್ಮರಿಗೆ ಪಾರಮಾರ್ಥಿಕವಾದ ಬಹುವಿರುದ್ಧಧರ್ಮಗಳನ್ನು ಶ್ರೀ ಕೃಷ್ಣನು ತೋರಿಸಿರುವುದರಿಂದ ಅದ್ವೈತತತ್ವವು ಆತನಿಗೆ ಸರ್ವಥಾ ಸಮ್ಮತವಲ್ಲವೆಂದು ನಿರೂಪಿಸಿರುತ್ತೇವೆ.

7.

ಪ್ರಶ್ನೆ—ಸ್ವಾಮಿ! "ಪಾಂಡವಾನಾಂ ಧನಂಜಯಃ" ಎಂದರೆ ನಾನೇ ಧನಂಜಯನೆಂದು ಅರ್ಥವಾಗುವುದು. ಹೀಗಿರುವಲ್ಲಿ ಅಭೇದಸಾಧಕವಾದ ಒಂದು ವಚನವೂ ಇಲ್ಲವೆಂದು ತಾವು ಹೇಳುವುದು ಹೇಗೆ?

ಉತ್ತರ—ದಶಮಾಧ್ಯಾಯದ ಈ ಪ್ರಕರಣವೆಲ್ಲಾ ಅತ್ಯಂತ ಭೇದಪರವೆಂದು ಅರ್ಜುನನ ಪ್ರಶ್ನೆಯ ಪರಾಮರ್ಶದಿಂದಲೇ ಗೊತ್ತಾಗುವುದು.

(1) **ವಕ್ತುಮರ್ಹಸ್ಯಶೇಷೇಣದಿವ್ಯಾಹ್ಯಾತ್ಮವಿಭೂತಯಃ ।**
ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂವ್ಯಾಪ್ಯತಿಷ್ಠಸಿ ।
ಕೇಷುಕೇಷುಚಭಾವೇಷುಚಿಂತ್ಯೋಽಸಿಭಗವನ್ಮಯಾ ॥
—(10. 16-17.)

ಹೇ ಭಗವನ್! ಸಕಲ **ವಸ್ತುಗಳನ್ನೂ ವ್ಯಾಪಿಸಿಕೊಂಡು ಸ್ಥಿತನಾಗಿರುವ** ನಿನ್ನ ವಿಭೂತಿರೂಪಗಳನ್ನು ನನಗೆ ಉಪದೇಶ ಮಾಡಬೇಕು. ಯಾವ ಯಾವ **ಪದಾರ್ಥಗಳಲ್ಲಿ** ನೀನು ನನ್ನಿಂದ ಧ್ಯಾನಮಾಡಲ್ಪಡುವಿ?

ಯಾವ ಪದಾರ್ಥದಲ್ಲಿ ನೀನು ಯಾವ ರೂಪದಿಂದ ಸ್ಥಿತನಾಗಿರುವಿ ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಆಯುಧಗಳಲ್ಲಿ ನಾನು ವಜ್ರಾಯುಧವು; ನಾನು ಮೇರು ಪರ್ವತವು; ಎಂದು ಹೇಳಿರುವುದರಿಂದ ಶ್ರೀಕೃಷ್ಣನು ವಜ್ರಾಯುಧದಲ್ಲಿ ವಜ್ರನಾಮಕನಾಗಿ ಅನೇಕ ಆಯುಧಗಳಿಗಿಂತಲೂ ಅದಕ್ಕೆ ಉತ್ತಮತ್ವಪ್ರದನಾಗಿರುವನೆಂತಲೂ ಮೇರುವಿನಲ್ಲಿ ಒಂದುರೂಪದಿಂದ ಇದ್ದು ಅದಕ್ಕೆ ಸಕಲ ಪರ್ವತಗಳಿಗಿಂತಲೂ ಆಧಿಕ್ಯಪ್ರದನಾಗಿ ಸ್ಥಿತನಾಗಿರುವನೆಂತಲೂ ಅರ್ಥಮಾಡಬೇಕು. ಹಾಗೆಯೇ ಪಾಂಡವರಲ್ಲಿ ನಾನು ಧನಂಜಯನು ಎಂದರೆ, ಧನಂಜಯನಲ್ಲಿ ಒಂದುರೂಪದಿಂದ ಇದ್ದು ಅವನಿಗೆ ವಿಶೇಷ ಕೀರ್ತಿಪ್ರದನಾಗಿ ಇರುವೆನೆಂದು ಅರ್ಥಮಾಡಬೇಕು. ಧನಂಜಯನಲ್ಲಿ ಶ್ರೀಕೃಷ್ಣನು ವಿಶೇಷ ವಿಭೂತಿರೂಪದಿಂದ ಇದ್ದುದು "**ನಿಮಿತ್ತಮಾತ್ರಂಭವಸವ್ಯಸಾಚಿನ್**" ಎಂಬ ಶ್ರೀಕೃಷ್ಣನ ಗೀತಾವಾಕ್ಯದಿಂದಲೇ ಗೊತ್ತಾಗುವುದು; ಆದರೆ ಭಾಗವತದಲ್ಲಿ ಇದು ಸುಪ್ರಸಿದ್ಧವು. ಉತ್ತರಗೋಗ್ರಹಣದಲ್ಲಿ (ವಿರಾಟ ನಗರದಲ್ಲಿ) ಪುಕ್ಕಲು ಹುಡುಗನನ್ನು ಸಾರಥಿಯನ್ನಾಗಿ ಮಾಡಿಕೊಂಡು, ಭೀಷ್ಮದ್ರೋಣಾದಿಗಳಿಂದ ಸಹಿತವಾದ ಸಕಲ ಕೌರವಸೇನೆಯನ್ನೂ ಮಥನಮಾಡಿದ ಅರ್ಜುನನು, ಶ್ರೀಕೃಷ್ಣನು ತನ್ನ ಅವತಾರವನ್ನು ಸಮಾಪ್ತಿಮಾಡಿ ಪರಂಧಾಮಕ್ಕೆ ತೆರಳಿದ ನಂತರ, ಕೃಷ್ಣಾಜ್ಞೆಯನ್ನು ಶಿರಸಾಧಾರಣಮಾಡಿ, ದ್ವಾರಕಾಪುರಿಯಿಂದ ಕೃಷ್ಣಪತ್ನಿಯರನ್ನು ಹಸ್ತಿನಾವತಿಗೆ ಕರೆದುಕೊಂಡು ಹೋಗುತ್ತಿರಲು ದುರ್ಬಲರಾದ ದೊಣ್ಣೆಕಳ್ಳರಿಂದ ಪರಾಜಿತನಾಗಿ ಗಾಂಡೀವ ಧನುಸ್ಸಿಗೆ ನಾಣೇರಿಸಲಾರದೆ ಅಣ್ಣನಾದ ಯುಧಿಷ್ಠಿರನ ಬಳಿಗೆ ಬಂದು "**ಅಬಲೇವವಿನಿರ್ಜಿತೋಽಸ್ಮಿ**" ಎಂದು ಪ್ರಲಾಪಮಾಡಿರುತ್ತಾನೆ. ನಾನು ಸ್ತ್ರೀಯಂತೆ ಸೋತು ಹೋದೆನು ಎಂದು ಅರ್ಥವು.

ಇದರಿಂದ, ಶ್ರೀಕೃಷ್ಣನು ಭೂಭಾರಹರಣಾರ್ಥವಾಗಿ ಅರ್ಜುನನಲ್ಲಿ ವಿಶೇಷ ಸಾನ್ನಿಧ್ಯವನ್ನು ಇಟ್ಟಿದ್ದು, ತನ್ನ ಅವತಾರ ಪರಿಸಮಾಪ್ತಿಯಲ್ಲಿ ಪುನಃ ಅದನ್ನು ತೆಗೆದುಕೊಂಡು ಹೋದನೆಂದು ಸಿದ್ಧವಾಗುವುದು. ಶ್ರೀ ಕೃಷ್ಣನು ತನ್ನ ಅನೇಕ ವಿಭೂತಿರೂಪಗಳನ್ನು ಅರ್ಜುನನಿಗೆ ಉಪದೇಶಮಾಡಿ, ಉಪಸಂಹಾರವಾಕ್ಯದಲ್ಲಿಯೂ ಕೂಡ ಭೇದವನ್ನೇ ಹೇಳಿರುತ್ತಾನೆ:—

(2) **ನತದಸ್ತಿ ವಿನಾಯತ್ಸ್ಯಾನ್ಮಯಾ ಭೂತಂ ಚರಾಚರಂ |**

—(10. 39.)

ಎಲೈ ಅರ್ಜುನನೇ ! ಚರಾಚರಾತ್ಮಕವಾದ ಜಗತ್ತಿನಲ್ಲಿ **ನನ್ನಿಂದ ಸಹಿತ ನಾಗದೇ ಇರುವ** ಒಂದು ವಸ್ತುವೂ ಇಲ್ಲ. ಎಲ್ಲಾ ವಸ್ತುಗಳಲ್ಲಿಯೂ ಒಂದೊಂದು ರೂಪದಿಂದ ಇರುತ್ತೇನೆಂದು ಅರ್ಥವು.

ಇದರಿಂದ ಸೂರ್ಯ, ಇಂದ್ರ, ಚಂದ್ರ, ಮೇರು ಧನಂಜಯ ಮುಂತಾದುವುಗಳೆಲ್ಲಾ "**ಮಮದಿವ್ಯಾನಾಂ ವಿಭೂತೀನಾಂ**" ಎಂಬಲ್ಲಿ ಹೇಳಿರುವಂತೆ ಲೋಕವಿಲಕ್ಷಣವಾದ ಪರಮಾತ್ಮನ ವಿಭೂತಿರೂಪಗಳಿಗೆ ಅಧಿಷ್ಠಾನಗಳೆಂದು ನಿರ್ಣಯಿಸಬೇಕು.

ಅದ್ವೈತಮತದ ರೀತಿಯಿಂದಲೂ ಈ ವಾಕ್ಯಕ್ಕೆ ಐಕ್ಯಾರ್ಥವು ಸಂಭವಿಸುವುದಿಲ್ಲ. ಕೃಷ್ಣಧನಂಜಯರಿಗೆ ಐಕ್ಯವು ವಿಶಿಷ್ಟೈಕ್ಯರೂಪವಾದುದರಿಂದ ಅದ್ವೈತಿಗಳಿಗೆ ಸಮ್ಮತವಲ್ಲವು. ಮತ್ತು "**ಕಾಮೋಽಸ್ಮಿ ಭರತರ್ಷಭ**" ಎಂದರೆ ಆಪಾತತಃ ನಾನೇ ಕಾಮನು ಎಂಬ ಅರ್ಥವನ್ನು ಕೊಡುವ ಗೀತಾವಾಕ್ಯಕ್ಕೆ ನಾನು ಕಾಮಸ್ವಾಮಿಯು ಎಂದೇ ಅರ್ಥಮಾಡಬೇಕೆಂದು ಶಂಕರಾಚಾರ್ಯರೇ ತಮ್ಮ ಛಾಂದೋಗ್ಯಭಾಷ್ಯದಲ್ಲಿ * ತೀರ್ಮಾನಮಾಡಿರುತ್ತಾರೆ. ಹೀಗೆ ಬಾಧಕವಿದ್ದಲ್ಲಿ ಐಕ್ಯ

*** ಅದ್ವೈತಿಗಳ ಛಾಂದೋಗ್ಯ ಭಾಷ್ಯಟೀಕಾ :—ಕಾಮಸಾಮಾನಾಧಿಕರಣ್ಯೇ ಬಾಧಕೋಪಲಂಭಾತ್........ತಸ್ಯ (ಕಾಮಸ್ಯ) ಕಾರ್ಯತ್ವಾತ್ತದೈಕ್ಯೇ ಬ್ರಹ್ಮಣೋಽನಾದಿತ್ವಂ ಬಾಧ್ಯತೇ ಚೇತನ ಶೇಷತ್ವಾಚ್ಚ ಕಾಮಸ್ಯ ತದೈಕ್ಯೇಬ್ರಹ್ಮಣಃ ಸ್ವಾತಂತ್ರ್ಯಂ ಹೀಯತೇ |....ಕಥಂತರ್ಹಿಕಾಮೋಽಸ್ಮೀತಿತಾದಾತ್ಮ್ಯಸ್ಮೃತಿ ರಿತ್ಯಾಶಂಕ್ಯಾಹ "ತಸ್ಮಾದಿತಿ" | ಕಾಮೇಶ್ವರಯೋಃ ಸಾಮಾನಾಧಿಕರಣ್ಯಾಸಂಭವಾತ್....... ಸ್ಮೃತಾವಪಿ ಬ್ರಹ್ಮಪಾರ ತಂತ್ರ್ಯಮಾತ್ರಂ ಕಾಮಸ್ಯವಿವಕ್ಷಿತಂ ||**

ತಾತ್ಪರ್ಯವು :—"ಕಾಮಸಾಮಾನಾಧಿಕರಣ್ಯ (ತಾದಾತ್ಮ್ಯ) ವನ್ನು ಈಶ್ವರನಿಗೆ ಒಪ್ಪಿದರೆ ಬಾಧಕವು ಇರುವುದು. ಪ್ರಕೃತಿ ಕಾರ್ಯವಾದ (ಜನ್ಯವಾದ) ಕಾಮಕ್ಕೆ ಬ್ರಹ್ಮತಾದಾತ್ಮ್ಯವನ್ನು ಒಪ್ಪಿಕೊಂಡರೆ ಬ್ರಹ್ಮನಿಗೆ ಅನಾದಿತ್ವವು ಭಗ್ನವಾಗುವುದು. ಮತ್ತು ಸರ್ವ ಚೇತನಾಧೀನವಾದ ಕಾಮವು ಬ್ರಹ್ಮನೇ ಆದರೆ, ಬ್ರಹ್ಮನು ಸರ್ವಚೇತನಾಧೀನನೆಂದು ಪ್ರಾಪ್ತವಾಗಿ ಬ್ರಹ್ಮನ ಸ್ವಾತಂತ್ರ್ಯವು ನಷ್ಟವಾಗುವುದು. ಹಾಗಾದರೆ **ಕಾಮೋಽಸ್ಮಿ** ಎಂಬ ತಾದಾತ್ಮ್ಯವನ್ನು ಹೇಳುವ ಸ್ಮೃತಿಗೆ ಏನು ಗತಿಕಲ್ಪಿಸಬೇಕೆಂದರೆ ಕಾಮಕ್ಕೂ, ಬ್ರಹ್ಮನಿಗೂ ಸಾಮಾನಾಧಿಕರಣ್ಯವು (ತಾದಾತ್ಮ್ಯವು) ಸಂಭವಿಸುವುದಿಲ್ಲವಾದುದರಿಂದ ಈ ಸ್ಮೃತಿಗೆ ಕಾಮವು **ಬ್ರಹ್ಮಪರತಂತ್ರವು** ಎಂದರೆ ಬ್ರಹ್ಮಾಧೀನವು ಎಂದು ಅರ್ಥಮಾಡಬೇಕು."

ವನ್ನು ಒಪ್ಪಬಾರದೆಂದು ಉಭಯುಮತರೀತಿಯಿಂದಲೂ ಪ್ರಾಪ್ತವಾದುದರಿಂದ, ಶಿಷ್ಯನಾದ ಮತ್ತು ಜ್ಞಾನಿಯಾದ ಸಂತರವೂ ಪುನಃ ಪುನಃ ನಮಸ್ಕಾರಮಾಡುತ್ತಿರುವ ಅರ್ಜುನನಿಗೂ, ಗುರುವಾದ ಶ್ರೀ ಕೃಷ್ಣನಿಗೂ ಐಕ್ಯವು ಬಾಧಿತವಾಗಿರುವುದರಿಂದ, ಪ್ರಕರಣೋಚಿತವಾಗಿ ನಾನು ಧನಂಜಯನಲ್ಲಿ ಒಂದು ವಿಭೂತಿರೂಪಿನಿಂದ ಇದ್ದೇನೆ ಎಂದೇ ಅರ್ಥಮಾಡಬೇಕು. " ರಾಮಶ್ಶಸ್ತ್ರಭೃತಾಮಹಂ " ಎಂದರೆ ಧನುರ್ಧಾರಿಗಳಲ್ಲಿ ಪರಶುರಾಮನು ನಾನು ಎಂಬಲ್ಲಿ ಇಂಥಾ ವಿರೋಧವು ಯಾವುದೂ ಇರುವುದಿಲ್ಲ. ಮತ್ತು ನಾರಾಯಣನೇ ಪರಶುರಾಮನೆಂದು ಸ್ಪಷ್ಟಪ್ರಮಾಣಗಳು ಇರುವುವು. ಆದುದರಿಂದ ಅಲ್ಲಿ ಭೇದಕಲ್ಪನೆಯು ಅವಶ್ಯಕವಿಲ್ಲ. " ಆದಿತ್ಯಾನಾ ಮಹಂ ವಿಷ್ಣುಃ " " ಸಿದ್ಧಾನಾಂ ಕಪಿಲೋಮುನಿಃ " " ವೃಷ್ಣೀನಾಂ ವಾಸುದೇವೋಸ್ಮಿ " " ಮುನೀನಾಮಪ್ಯಹಂ ವ್ಯಾಸಃ " ಎಂಬ ನಾಲ್ಕು ಸ್ಥಳಗಳಲ್ಲಿಯೂ ಕೂಡ ನಾನು ಆದಿತ್ಯರಮಧ್ಯದಲ್ಲಿ ವಿಷ್ಣು (ಉರುಕ್ರಮ) ನಾಮಕ ಆದಿತ್ಯನು; ಸಿದ್ಧರಮಧ್ಯದಲ್ಲಿ ನಾನೇ ಸಾಕ್ಷಾತ್ಕಪಿಲನು; ಸರ್ವಮುನಿಗಳಿಗಿಂತಲೂ ಶ್ರೇಷ್ಠನಾದ ವೇದವ್ಯಾಸನು ನಾನೇ; ಎಂದೇ ಅರ್ಥಮಾಡಬೇಕು.

2. ಪ್ರಶ್ನೆ—ಸ್ವಾಮಿ !

(1) **ಬ್ರಹ್ಮಭೂತಃ ಪ್ರಸನ್ನಾತ್ಮಾ ನಶೋಚತಿನಕಾಂಕ್ಷತಿ ।**—(18. 54.)

ಎಂಬ ಶ್ಲೋಕವು ಬ್ರಹ್ಮನಾದವನು ಶೋಕಾದಿರಹಿತನಾಗುವನು ಎಂಬ ಅರ್ಥವನ್ನು ಬೋಧಿಸುವುದರಿಂದ, ಇದು ಅದ್ವೈತಕ್ಕೆ ಸಾಧಕವೆಂದು ಯಾತಕ್ಕೆ ಹೇಳಬಾರದು ?

ಉತ್ತರ—ಈ ಶ್ಲೋಕದ ಉತ್ತರಾರ್ಧವೇ ಅಭೇದಶಂಕೆಯನ್ನು ನುಂಗುವ ಮಹದ್ಭೂತವಾಗಿರುವುದು.

(2) **ಸಮಃ ಸರ್ವೇಷು ಭೂತೇಷು ಮದ್ಭಕ್ತಿಂಲಭತೇಪರಾಂ ।**

—(18. 54.)

ಎಂಬುದು ಉತ್ತರಾರ್ಧವು. ವಿಶಿಷ್ಟಶ್ಲೋಕಾರ್ಥವೇನೆಂದರೆ ;—ಬ್ರಹ್ಮಭೂತಃ= ಬ್ರಹ್ಮಣಿಭೂತಃ,= ಬ್ರಹ್ಮನಲ್ಲಿ ಸದಾ ಸ್ಥಿತನಾದವನು ; ಎಂದರೆ ಸದಾ ಬ್ರಹ್ಮಧ್ಯಾನಮಾಡುವವನು, ಪ್ರಸನ್ನವಾದ ಎಂದರೆ ವಿಷಯಾಭಿಲಾಷೆಗಳಿಂದ ರಹಿತವಾದ ಮನಸ್ಸುಳ್ಳವನಾಗುವನು ; ಅತ ವನ ಶೋಕವನ್ನು ಹೊಂದುವುದಿಲ್ಲ ; ಅಪೇಕ್ಷೆಯನ್ನೂ ಮಾಡುವುದಿಲ್ಲ. **ಹೀಗಿರುವವನು** ಸರ್ವ ಪ್ರಾಣಿಗಳಲ್ಲಿ

ದ್ವೇಷಾಸೂಯೆಗಳಿಂದ ವರ್ಜಿತನಾಗಿ **ನನ್ನಲ್ಲಿ ಉತ್ಕೃಷ್ಟಭಕ್ತಿಯನ್ನು ಹೊಂದುತ್ತಾನೆ.**

ಈ ರೀತಿ "ಬ್ರಹ್ಮಭೂತ"ನಾದವನಿಗೆ ಭಗವದ್ಭಕ್ತಿರೂಪಫಲವು ಉತ್ತರಾರ್ಧದಲ್ಲಿ ಹೇಳಿರುವುದರಿಂದ, ಬ್ರಹ್ಮನಾದವನು ಎಂಬ ಐಕ್ಯಾರ್ಥವನ್ನು ಈ ಪದಕ್ಕೆ ಮಾಡಬಾರದು. ಇದರಿಂದಲೇ "ಬ್ರಹ್ಮಭೂತೋಽಧಿಗಚ್ಛತಿ" ಇತ್ಯಾದಿ ಅನೇಕ ವಾಕ್ಯಗಳನ್ನೂ ವ್ಯಾಖ್ಯಾನಮಾಡಿದ ಹಾಗಾಯಿತು. ಬ್ರಹ್ಮನೇ ಆದನು ಎಂದು ಹೇಳಿ ನಂತರ ಪುನಃ ಮತ್ತೊಂದನ್ನು ಹೊಂದುತ್ತಾನೆ ಎಂದು ಹೇಳುವುದು ಅಸಂಗತೋಕ್ತಿಯಾಗುವುದು.

ಈ ಜಿಜ್ಞಾಸೆಯಿಂದ ಮತ್ತೊಂದು ನಿರ್ಣಯವು ಏರ್ಪಟ್ಟಿತು. ಅಭೇದಾಭಿಪ್ರಾಯವು ಮನಸ್ಸಿನಲ್ಲಿ ಸರ್ವಥಾ ಇಲ್ಲದಿದ್ದರೂ, ಶಾಸ್ತ್ರಕಾರರು ಆಪಾತತಃ ಅಭೇದ ಪ್ರತೀತಿಯು ಬರುವಂತೆ "ಬ್ರಹ್ಮಭೂತಃ ಪ್ರಸನ್ನಾತ್ಮಾ" "ಬ್ರಹ್ಮಭೂತೋಽಧಿಗಚ್ಛತಿ" "ಪಾಂಡವಾನಾಂಧನಂಜಯಃ"; "ಕಾಮೋಽಸ್ಮಿ"; "ಮದ್ಭಾವಾಯೋಪಪದ್ಯತೇ" ಇತ್ಯಾದಿ ವಾಕ್ಯಗಳಲ್ಲಿ (ಸಾಮಾನಾಧಿಕರಣ್ಯಸಹಿತವಾದ) ಪ್ರಯೋಗಗಳನ್ನು ಮಾಡಿರುತ್ತಾರೆ. ವಿಚಾರಮಾಡಿದರೆ ಈ ವಾಕ್ಯಗಳು ಸರ್ವಥಾ ಭೇದವನ್ನೇ ಬೋಧಿಸುವುವು. ಅಭೇದವನ್ನು ಬೋಧಿಸುವುದಿಲ್ಲ. ಆದುದರಿಂದ ಇವು **ಸಾವಕಾಶ**ವೆನ್ನಿಸುವುವು. **ಬ್ರಹ್ಮಸಂಪದ್ಯತೇ ತದಾ; ಉತ್ತಮಃ ಪುರುಷಸ್ತ್ವನ್ಯಃ** ಇತ್ಯಾದಿ ಭೇದವಾಕ್ಯಗಳಾದರೋ ತೀಕ್ಷ್ಣವಾದ ವೈದ್ಯನ ಚೂರಿಯಂತೆ ಅಪ್ರತಿಹತವಾಗಿ ಅಭೇದಪಕ್ಷವನ್ನು ಖಂಡನೆಮಾಡುವುದರಲ್ಲಿಯೂ, ಭೇದವನ್ನು ಸ್ಥಾಪಿಸುವುದರಲ್ಲಿಯೂ ಸಮರ್ಥವಾಗಿರುವುವು ; ಎಂದರೆ ಭೇದವಾಕ್ಯಗಳು ಅಭೇದಪರವಾದ ಶಂಕೆಯನ್ನೂ ಹುಟ್ಟಿಸಲಾರವು. ಅವುಗಳಿಗೆ ಬೇರೆ ಅರ್ಥವೇ ಸಂಭವಿಸುವುದಿಲ್ಲ. ಆದುದರಿಂದ ಅವು **ನಿರವಕಾಶ**ವೆನ್ನಿಸುವವು. ಹೀಗಿರುವಲ್ಲಿ, ನಾವು ಸುಮ್ಮನೆ ಇಲ್ಲದಿರುವ ಭಾರವನ್ನು ತಲೆಯಮೇಲೆ ಹಾಕಿಕೊಂಡು ಸಂಕಟಪಡುವ ಮಂದನಂತೆ, ಭೇದವಾಕ್ಯಗಳೆಲ್ಲಾ ಸುಳ್ಳು ಭೇದವನ್ನು ಹೇಳುವುವು ಎಂದು ನಿಷ್ಕಾರಣವಾಗಿ ಕಲ್ಪನೆಮಾಡಿ, ಅದಕ್ಕೇನುಗತಿ? ದೋಷಾದಿ ಕಾರಣಗಳಿಲ್ಲದೆ ಯಾವುದೂ ಸುಳ್ಳಾಗಲಾರದಲ್ಲಾ ಎಂದು ಪುನಃ ಪಶ್ಚಾತ್ತಾಪವನ್ನು ಹೊಂದಿ, ಇವೆಲ್ಲವೂ ಅವಿದ್ಯಾಮೂಲಕವಾದರೆ ನಮ್ಮ ಕಲ್ಪನೆಯೆಲ್ಲವೂ ಸಮಂಜಸವಾಗುವುದೆಂದು ಮತ್ತೊಂದು ಸುಳ್ಳು ಕಲ್ಪನೆಮಾಡಿ, ಆ ಅವಿದ್ಯೆಯು ಯಾರಿಗೆ? ಏನು? ಎಂದು ಕೂಲಂಕಷವಾದ ಪ್ರಶ್ನೆಯನ್ನು ತತ್ವಬುಭುತ್ಸುವು

ಮಾಡಿದರೆ, ಪುನಃ ಧೈರ್ಯಗೆಡದೆ, "ನದೀಮೂಲ! ಋಷಿಮೂಲ! ಇವುಗಳ ನ್ನೆಲ್ಲಾ ಹೆಚ್ಚು ವಿಚಾರಮಾಡಬಾರದು" ಎಂಬ ಲೌಕಿಕಗಾದೆಗೆ ಅನುಗುಣವಾಗಿ ಅವಿದ್ಯಾಮೂಲವು ಅನಿರ್ವಚನೀಯವು ಎಂದು ಪುನಃ ಕಲ್ಪನೆಮಾಡಿ; ಅಲ್ಲಿಗೂ ಸುಮ್ಮನಿರದೆ, ಒಬ್ಬ ಖಂಡಿತವಾದಿಯು ಅನಿರ್ವಚನೀಯವೆಂದರೆ ಹೇಳುವುದಕ್ಕಾ ಗುವುದಿಲ್ಲವೆಂದರ್ಥವು; ಇದರಿಂದ ನಿಮ್ಮ ಮತವು ಪ್ರಾಮಾಣಿಕವಾಗಲಾರದು ಮತ್ತು ಹೀಗೆ ನೀವು ಅವಿದ್ಯೆಯನ್ನು ಅಂಗೀಕರಿಸಿ ವಾದಮಾಡಿದರೆ ಅನವಸ್ಥಾದಿ ದೋಷಗಳು ಬರುವವು ಎಂದು ಸಭೆಯಲ್ಲಿ ಹೇಳಿಬಿಟ್ಟರೆ, ಆಗ ಪರ್ಯವಸಾನದಲ್ಲಿ "ಆಗಲಿ! ಬರಲಿ! ಅನವಸ್ಥಾದಿದೋಷಗಳು ನಮಗೆ ಅತ್ಯಂತ ಪ್ರಿಯವಾದುವು ಗಳು! ಅವು ನಮ್ಮ ಬಂಧುಗಳು. ಇದರ ಮೇಲೆ ನೀವೇನು ಮಾಡುವಿರಿ?" ಎಂಬ ಒರಟು ಉತ್ತರದಿಂದ ವಾದವನ್ನು ಕೊನೆಗಾಣಿಸಬೇಕಾಗುವುದು. ಇಂಥಾ ಅಪ್ರಾಮಾಣಿಕ ಪ್ರಮೇಯ ಪರಂಪರಾಕಲ್ಪನೆಯನ್ನೇ ಪೂರ್ವಿಕರು "ಅಬದ್ಧಂ ಪಠಿತ್ವಾಕಂಚೋದ್ಯೇನ ಪರಿಹರತಿ" ಎಂಬ ನ್ಯಾಯಾನುಗುಣವಾಗುವುದೆಂದು ನಿಂದಿಸಿರುತ್ತಾರೆ. ಆದುದರಿಂದ ನಿರವಕಾಶವಾದ ಭೇದವಾಕ್ಯಗಳು ಖಂಡಿತವಾ ದಿಯಾದಮಿತ್ರನಂತೆ, "ಅಪ್ರಿಯಸ್ಯಚತಥ್ಯಸ್ಯ ವಕ್ತಾಶ್ರೋತಾಚದುರ್ಲಭಃ" ಎಂಬ ನ್ಯಾಯಾನುಸಾರವಾಗಿ, ಜೀವನಿಗೆ ನಿತ್ಯದಲ್ಲೂ ಬಹು ಹಿತವಾಗುವ ಪರ ಬ್ರಹ್ಮಾಧೀನತ್ವವನ್ನು ಬೋಧಿಸುವುವೆಂದು ನಿಶ್ಚಯಿಸುವುದು ಸರ್ವಶಾಸ್ತ್ರ ಸಮ್ಮತ ವಾದ ಅರ್ಥವೆಂದು ನಾವು ನಿರೂಪಿಸಿರುತ್ತೇವೆ.

3. ಪ್ರಶ್ನೆ—ಸ್ವಾಮಿ!

(1) **ಯಸ್ತ್ವಾತ್ಮರತಿರೇವಸ್ಯಾ ದಾತ್ಮತೃಪ್ತಶ್ಚಮಾನವಃ।**
ಆತ್ಮನ್ಯೇವಚಸಂತುಷ್ಟ ಸ್ತಸ್ಯಕಾರ್ಯಂ ನವಿದ್ಯತೇ॥—(3. 17.)

ಈ ಶ್ಲೋಕವು ಅಭೇದಬೋಧಕವೆಂದು ಅನೇಕರು ನಂಬಿರುವರು. ಇದರ ಅರ್ಥವನ್ನು ವಿವರಿಸಬೇಕು.

ಉತ್ತರ—1. **ಆತ್ಮನ್ಯೇವಚಸಂತುಷ್ಟಃ** ಎಂದರೆ **ಆತ್ಮನಲ್ಲಿ** ಸ್ಥಿತನಾದುದರಿಂದಲೇ ಸಂತೋಷ (ಉತ್ತಮ ಸುಖ) ಹೊಂದಿದವನು ಎಂಬ. ಅರ್ಥವುಳ್ಳ ಈ ಪದಗಳು ಸ್ಪಷ್ಟವಾಗಿ ಧ್ಯಾನಮಾಡತಕ್ಕ ಜ್ಞಾನಿಗೂ ಪರಮಾತ್ಮನಿ ಗೂ ಭೇದವನ್ನೇ ಹೇಳುತ್ತಿರುವುವು. 2. ಮತ್ತು ಅಭೇದಬೋಧಕವಾದ ಒಂದು ಪದವೂ ಇಲ್ಲಿ ಇಲ್ಲ. ಆದುದರಿಂದ ಈ ಶ್ಲೋಕದ ಅರ್ಥವನ್ನು ಭೇದಪರವಾಗಿಯೇ ಮಾಡಬೇಕು. ಹೇಗೆಂದರೆ—ಯಾವ ಜ್ಞಾನಿಯು ಆತ್ಮನಲ್ಲಿಯೇ ರತಿವುಳ್ಳವನೋ,

ಎಂದರೆ ಆತ್ಮದರ್ಶನದಿಂದುಂಟಾದ ಸುಖವುಳ್ಳವನೇ ಹೊರತು ಅನ್ಯವಿಷಯಗಳಲ್ಲಿ ಸರ್ವಥಾ ಆಸಕ್ತಿರಹಿತನೋ ಮತ್ತು ಆತ್ಮನ್ಯೇವಚ ಸಂತುಷ್ಟಃ= ಆತ್ಮದರ್ಶನ ದಿಂದ ಉತ್ತಮ ಸುಖವನ್ನು ಹೊಂದಿ (ಆ ಕಾರಣದಿಂದ), ಆತ್ಮತೃಪ್ತಃ = ಪರಮಾತ್ಮಪ್ರಸಾದದಿಂದ ಅನ್ಯವಿಷಯಗಳಲ್ಲಿ ಅವು ಅಲ್ಪಗಳು, ಅವು ಯಾತಕ್ಕೆ, ಎಂಬ ಅಲಂಬುದ್ಧಿಯನ್ನು ಹೊಂದಿದವನೋ, ಅಂಥಾ ಅಸಂಪ್ರಜ್ಞಾತ ಸಮಾಧಿ ಸ್ಥನಾದ ಜ್ಞಾನಿಯು (ತನ್ನ ಸಮಾಧಿಯನ್ನು ಬಿಟ್ಟು) ಬಾಹ್ಯಕರ್ಮವನ್ನೂ ಮಾಡಬೇಕಾಗಿಲ್ಲ ಎಂದು ಶ್ಲೋಕಾರ್ಥವು. ಪರಮಾತ್ಮದರ್ಶನದಿಂದ ಜ್ಞಾನಿ ಯು ಸುಖಿಯಾಗುವನೆಂದು ಇಲ್ಲಿರುವುದೇ ಹೊರತು ಆತ್ಮನೇ ಆಗಿಹೋಗುವ ನೆಂದು ಇಲ್ಲಿ ಹೇಳಿಲ್ಲ. 3. ಮತ್ತು "**ರತಿಃ**" ಎಂದರೆ ಆಸಕ್ತಿಯು ದಾರಾ, ಧನ, ಆಟ, ವಿದ್ಯಾ, ಅಥವಾಪರಮಾತ್ಮ ಇವೇ ಮುಂತಾದ ಯಾವುದಾದರೂ ತನ್ನಿಂದ ಭಿನ್ನವಾದ ಒಂದು **ವಿಷಯದಲ್ಲಿ** ಸಂಭವಿಸುವುದು; ಹಾಗೆಯೇ "**ತೃಪ್ತಿಃ**" ಎಂದರೆ ಇನ್ನು ಸಾಕು ಅಧಿಕವಾಗಿ ಬೇಡ ಎಂಬ ಅಲಂಬುದ್ಧಿಯು ಒಂದು ಕಡೆಯಿಂದ ಸುಖವು ಪ್ರಾಪ್ತವಾದುದನ್ನೂ, ಅಲ್ಪಸುಖವನ್ನು ಕೊಡುವ ಇತರ ವಿಷಯಸದ್ಭಾವವನ್ನೂ ಬೋಧಿಸುವುದು. 4. ತನ್ನಲ್ಲಿಯೇ ರತಿಯು, ತನ್ನ ಲ್ಲಿಯೇ ಅಲಂಬುದ್ಧಿಯನ್ನು ಹೊಂದುವುದು ಎಂದು ಅರ್ಥಮಾಡಿದರೆ ಉತ್ತರಾ ರ್ಥಕ್ಕೆ ವಿರೋಧವಾಗುವುದಲ್ಲದೆ ಅದ್ವೈತಮತದ ರೀತಿಯಿಂದ ಪ್ರಬಲವಾದ **ಕರ್ತೃಕರ್ಮವಿರೋಧವೂ** ಪ್ರಾಪ್ತವಾಗುವುದು. 5. ಪರಂತು ಜ್ಞಾನಿಯು ಆತ್ಮೈಕ್ಯವನ್ನು ಹೊಂದಿದ ಮೇಲೆ ಪುನಃ ದೇಹಾದಿಗಳಿಂದ ಸಹಿತವಾಗಿ ಭೂಲೋಕದಲ್ಲಿ ಕಂಡುಬರುವುದೇ ಅದ್ವೈತಮತದ ರೀತಿಯಿಂದ ಅಶಕ್ಯವು. ಐಕ್ಯಜ್ಞಾನವು ಅದ್ವೈತಶಾಸ್ತ್ರಪ್ರಕಾರ ಇದುವರೆಪಿಗೆ ಯಾರಿಗೂ ಬಂದಿಲ್ಲವೆಂದು ನಾವು ನಿರೂಪಿಸಿರುತ್ತೇವೆ. ಆದುದರಿಂದ ಬ್ರಹ್ಮಜ್ಞಾನಿಯು ಕರ್ಮಮಾಡಬೇ ಕಾಗಿಲ್ಲವೆಂದು ಹೇಳುವುದು ಕೇವಲ ಅಪ್ರಸಕ್ತವಚನವಾಗುವುದು. 6. ಮತ್ತು ಇಲ್ಲಿ ಹೇಳಿರುವ ಆತ್ಮತೃಪ್ತಿಯು ಅತ್ಯುತ್ತಮ ವಸ್ತುಲಾಭದಿಂದಲೇ ಎಂಬುದು ಇದೇ ಅಧ್ಯಾಯದ ಉತ್ತರ ಶ್ಲೋಕದಿಂದಲೂ, ಆರನೆಯ ಅಧ್ಯಾಯದ ಸಮಾ ಖ್ಯಾವಾಕ್ಯದಿಂದಲೂ ನಿಶ್ಚಯವಾಗುವುದು.

(2) **ನಚಾಸ್ಯಸರ್ವಭೂತೇಷುಕಶ್ಚಿದರ್ಥವ್ಯಪಾಶ್ರಯಃ ।**—(3. 18.)

(3) **ಯತ್ರಚೈನಾತ್ಮನಾತ್ಮಾನಂ ಪಶ್ಯನ್ನಾತ್ಮನಿತುಷ್ಯತಿ ।**
ಸುಖಮಾತ್ಯಂತಿಕಂ ಯತ್ತದ್ಬುದ್ಧಿ ಗ್ರಾಹ್ಯಮತೀಂದ್ರಿಯಂ ।

ನೇತ್ತಿಯತ್ರನಚೈವಾಯಂ ಸ್ಥಿತಶ್ಚಲತಿತತ್ವತಃ ।
ಯಂ ಲಬ್ಧ್ವಾಚಾಪರಂಲಾಭಂ ಮನ್ಯತೇನಾಧಿಕಂತತಃ ।

—(6. 20-22.)

ಅಸಂಪ್ರಜ್ಞಾತಸಮಾಧಿಸ್ಥನಾದ ಯೋಗಿಯು ಆತ್ಮನಾ = ಪರಮಾತ್ಮಪ್ರಸಾದದಿಂದ ಅಥವಾ ಮನಸ್ಸಿನಿಂದ, ಆತ್ಮಾನಂ ಎಂದರೆ ಭಗವಂತನನ್ನು ನೋಡುವವನಾಗಿ, ಆತ್ಮನಿ = ಆ ಭಗವಂತನಲ್ಲಿ (ಅಥವಾ ಆತ್ಮಾ ಎಂದರೆ ದೇಹವೆಂದೂ ಅರ್ಥವಾಗುವುದರಿಂದ, ಸ್ವದೇಹದಲ್ಲಿಯೇ) ಸುಖವನ್ನು ಹೊಂದಿ, ಅತೀಂದ್ರಿಯವಾದ, ಬುದ್ಧಿಗ್ರಾಹ್ಯವಾದ ಆತ್ಯಂತಿಕ ಸುಖವನ್ನು ಅನುಭವಿಸುತ್ತಾನೆ. ಧ್ಯಾನದಲ್ಲಿ ಸ್ಥಿತನಾದ ಇಂಥಾ ಯೋಗಿಯು ತತ್ವತಃ ಎಂದರೆ ಧ್ಯೇಯವಾದ ಭಗವದ್ರೂಪದ ದೆಸೆಯಿಂದ ಸ್ವಲ್ಪವೂ ಚಲಿಸುವುದಿಲ್ಲ. (ಹಾಗೆ ಮತ್ತೊಂದು ವಿಷಯವನ್ನು ಕುರಿತು ಯೋಗಿಯ ಮನಸ್ಸು ಯಾತಕ್ಕೆ ಚಲಿಸುವುದಿಲ್ಲವೆಂದರೆ:—) ಆ ಸಮಾಧಿಯೋಗವನ್ನು ಹೊಂದಿದ ನಂತರ ಜ್ಞಾನಿಗೆ (ತಾನು ನೋಡುತ್ತಿರುವ) ಆ ಭಗವಂತನಿಂದ **ಅಧಿಕವಾದ ಯಾವ ಲಭ್ಯಪದಾರ್ಥವೂ** ಲೋಕದಲ್ಲಿರುವುದಿಲ್ಲ; ಹೀಗೆ ಹೇಳಿರುವುದರಿಂದ "ಯಸ್ತ್ವಾತ್ಮರತಿರೇವಸ್ಯಾತ್" ಎಂಬ ಶ್ಲೋಕವನ್ನು ಭೇದಪರವಾಗಿಯೇ ವ್ಯಾಖ್ಯಾನಮಾಡಬೇಕು.

4. **ಪ್ರಶ್ನೆ**—ಸ್ವಾಮಿ!

(1) **ಇದಂಶರೀರಂಕೌಂತೇಯಕ್ಷೇತ್ರಮಿತ್ಯಭಿಧೀಯತೇ ।**
ಏತದ್ಯೋವೇತ್ತಿತಂಪ್ರಾಹುಃಕ್ಷೇತ್ರಜ್ಞಮಿತಿತದ್ವಿದಃ ।
ಕ್ಷೇತ್ರಜ್ಞಂಚಾಪಿಮಾಂ ವಿದ್ಧಿಸರ್ವಕ್ಷೇತ್ರೇಷುಭಾರತ ॥

—(13. 23.)

ಎಲೈ ಕೌಂತೇಯನೇ! ಈ ಶರೀರವು ಕ್ಷೇತ್ರವೆನ್ನಿಸುವುದು. ಇದನ್ನು ತಿಳಿದವನು ಕ್ಷೇತ್ರಜ್ಞನೆಂದೆನಿಸುವನು. ಸರ್ವಕ್ಷೇತ್ರಗಳಲ್ಲಿಯೂ ಇರುವ ಅಂಥಾ **ಕ್ಷೇತ್ರಜ್ಞನು ನಾನು.** ಹೀಗೆ ಇರುವುದರಿಂದ ಶರೀರದಲ್ಲಿರುವ ಜೀವನೇ ಬ್ರಹ್ಮನು ಎಂದು ಸಿದ್ಧವಾಗುವುದಿಲ್ಲವೇ?

ಉತ್ತರ—ಈ ಶ್ಲೋಕದಲ್ಲಿ ಕ್ಷೇತ್ರಪದಕ್ಕೆ ಆರು ಅಡಿ ಪ್ರಮಾಣವುಳ್ಳ ನಮ್ಮ ದೇಹಮಾತ್ರವೆಂದು ಅರ್ಥವಲ್ಲ. ಈ ಪದದ ಅರ್ಥವನ್ನು ಶ್ರೀ ಕೃಷ್ಣನೇ ಮಾಡಿರುತ್ತಾನೆ.—

**(2) ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವಚ ।
ಇಂದ್ರಿಯಾಣಿದಶೈಕಂಚ ಪಂಚಚೇಂದ್ರಿಯಗೋಚರಾಃ ॥
ಇಚ್ಛಾದ್ವೇಷಃ ಸುಖಂದುಂಖಂ ಸಂಘಾತಶ್ಚೇತನಾಧೃತಿಃ ।
ಏತತ್ಕ್ಷೇತ್ರಂಸಮಾಸೇನ ಸವಿಕಾರಮುದಾಹೃತಂ ॥**

—(13. 5-6.)

ಪೃಥಿವೀ, ಜಲ, ಅಗ್ನಿ, ವಾಯು, ಆಕಾಶವೆಂಬ ಪಂಚ ಮಹಾಭೂತಗಳು ; ಮಹತ್ತತ್ವದಿಂದ ಸಹಿತವಾದ ಅಹಂಕಾರತತ್ವವು ; ಬುದ್ಧಿತತ್ವವು ; ಅವಕ್ತತತ್ವವು ; ಹನ್ನೊಂದು ಇಂದ್ರಿಯತತ್ವಗಳು ಮತ್ತು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಇಂದ್ರಿಯ ವಿಷಯಗಳು ; ಹೀಗೆ **ಇಪ್ಪತ್ತುನಾಲ್ಕು ತತ್ವಗಳು ಕ್ಷೇತ್ರವೆನ್ನಿಸುವವು.**

ಈ ರೀತಿಯಲ್ಲಿ ಶರೀರವೆಂದರೆ ಕ್ಷೇತ್ರವು, ಕ್ಷೇತ್ರವೆಂದರೆ ಇಪ್ಪತ್ತು ನಾಲ್ಕು ತತ್ವಸಮೂಹವು ; ಇವುಗಳನ್ನು ತಿಳಿದವನು ಕ್ಷೇತ್ರಜ್ಞನು ಅಂಥಾ ಕ್ಷೇತ್ರಜ್ಞನು ನಾನು ಎಂದು ಶ್ರೀ ಕೃಷ್ಣನು ಹೇಳಿರುವುದರಿಂದ ಸಾಮಾನ್ಯವಾದ ಒಂದು ಘಟವನ್ನೇ ಸಾಕಲ್ಯೇನ ತಿಳಿಯುವುದಕ್ಕೆ ಶಕ್ತಿಹೀನನಾಗಿರುವ ಜೀವನು ಹೇಗೆ ತಾನೇ ಅವ್ಯಕ್ತತತ್ವಾಂತವಾದ ಜಗತ್ತನ್ನು ತಿಳಿದ ಕ್ಷೇತ್ರಜ್ಞನಾದಾನು ? ಆದುದರಿಂದ ಇಲ್ಲಿ ಶರೀರಪದವು ಯೌಗಿಕವು, ಎಂದರೆ

ಹಿಂಸಾಹೇತುಶ್ಚಜೀವಸ್ಯ ಪರೇಣಪ್ರೇರ್ಯತೇ ಚಯತ್ ।

ಎಂಬ ಪ್ರಮಾಣಶ್ಲೋಕದಲ್ಲಿ ಕೂಡ ಪ್ರದರ್ಶಿತವಾದ ಶೄಹಿಂಸಾಯಾಂ, ಈರ ಪ್ರೇರಣೇ ಎಂಬ ಎರಡು ಧಾತುಗಳಿಂದ ನಿಷ್ಪನ್ನವಾಗಿ "ಪರಮಾತ್ಮನಿಂದ ಪ್ರೇರ್ಯವಾದ ಮತ್ತು ಜೀವನಿಗೆ ಸುಖದುಃಖಗಳಿಗೆ ಕಾರಣವಾದ ಇಪ್ಪತ್ತು ನಾಲ್ಕು ತತ್ವರಾಶಿಗಳು ಎಂದು ಅರ್ಥವಾಗುವುದು. 2. ಅಲ್ಲದೆ "ಸರ್ವಕ್ಷೇತ್ರೇಷು ಭಾರತ" ಎಂದರೆ ಸರ್ವಕ್ಷೇತ್ರಗಳಲ್ಲಿಯೂ ಇದ್ದು ಕ್ಷೇತ್ರಸ್ವರೂಪವನ್ನು ನಾನು ತಿಳಿದವನಾದುದರಿಂದ ನಾನು ಕ್ಷೇತ್ರಜ್ಞನು ಎಂದು ಶ್ರೀ ಕೃಷ್ಣನು ಹೇಳಿರುತ್ತಾನೆ. ತನ್ನ ಶರೀರವನ್ನೇ ತಿಳಿಯಲಾರದೆ ವೈದ್ಯರ ಅಧೀನನಾದ ಒಬ್ಬೊಬ್ಬ ಜೀವನಿಗೆ ಸರ್ವಕ್ಷೇತ್ರಗಳ ವಾಸವೂ, ಸರ್ವಕ್ಷೇತ್ರಗಳ ಜ್ಞಾನವೂ ಹೇಗೆ ಸಂಘವಿಸುವುದು ? ಆದುದರಿಂದ, ಶರೀರವೆಂದರೆ ಭಗವಂತನಿಂದ ಪ್ರೇರ್ಯವಾದ ಕ್ಷೇತ್ರವೆಂದು ಹೆಸರುಳ್ಳ ಅವ್ಯಕ್ತಾಂತ ಸಮಸ್ತ ವಸ್ತುಗಳು. ಅವುಗಳನ್ನು ತಿಳಿದವನು ಕ್ಷೇತ್ರಜ್ಞನು ; ಅಂಥಾ ಕ್ಷೇತ್ರಜ್ಞನು ನಾನು ; ಎಂದು ಈ ಶ್ಲೋಕಗಳಿಗೆ ಅರ್ಥ ಮಾಡಬೇಕು.

ಈ ರೀತಿಯಲ್ಲಿ, ಶ್ರೀಮದ್ಭಗವದ್ಗೀತೆಯಲ್ಲಿ ಒಂದು ಭೇದಸಾಧಕವಚನವೂ ಇಲ್ಲವಾದುದರಿಂದ, ಪರಸ್ಪರಭಿನ್ನರಾದ ಅನೇಕ ಜೀವರುಗಳಿಂದ ಅತ್ಯಂತ ಭಿನ್ನ ನಾದ ನಾರಾಯಣನು (ತಾನು) ಪುರುಷೋತ್ತಮನೆಂಬುದೇ ಶ್ರೀ ಕೃಷ್ಣನ ಅಭಿಪ್ರಾಯವೆಂದು ನಿಶ್ಚಯಿಸಬೇಕು.

8

ಇನ್ನು ವಾಕ್ಯತಾತ್ಪರ್ಯನಿರ್ಣಾಯಕ ಉಪಕ್ರಮಾದಿ ಲಿಂಗಗಳ ಪರಾ ಮರ್ಶೆಯಿಂದಲೂ, ಭಗವದ್ಗೀತಾ ವಾಕ್ಯಗಳಿಗೆ ಜೀವಬ್ರಹ್ಮರ ಭೇದ ಮತ್ತು ವಿಷ್ಣುಸರ್ವೋತ್ತಮತ್ವ ಇವುಗಳಲ್ಲಿಯೇ ತಾತ್ಪರ್ಯವಿರುವುದೇ ಹೊರತು, ಅವು ಗಳು ಅಭೇದದ ಸುದ್ದಿಯನ್ನೇ ಅರಿಯವೆಂಬುದು ನಿಶ್ಚಿತವಾಗುವುದು. ತಥಾಹಿ—

1. ಉಪಕ್ರಮದಲ್ಲಿ,

(1) **ಧರ್ಮಕ್ಷೇತ್ರೇಕುರುಕ್ಷೇತ್ರೇಸಮೇತಾಯುಯುತ್ಸವಃ।**—(1. 1.)

ಎಂದು ಇರುವುದು. ಧರ್ಮಸಾಧನ ಭೂಮಿಯಾದ ಕುರುಕ್ಷೇತ್ರದಲ್ಲಿ, ಯು ದ್ಧೇಚ್ಛುಗಳಾದ ಕುರುಪಾಂಡವರು ಮಿಳಿತರಾದರು, ಎಂದು ಅರ್ಥವು. ಇಲ್ಲಿ ಅನೇಕ ಪರಸ್ಪರ ಭಿನ್ನರಾದ ಜೀವರುಗಳು ಇದ್ದರೆಂದು ಹೇಳಿರುತ್ತದೆ. ಇವರು ಗಳು ಪರಸ್ಪರ ದ್ವೇಷದಿಂದ ಯುದ್ಧಾರ್ಥವಾಗಿ ಪ್ರಾಪ್ತವಾಗಿರುವುದರಿಂದ, ಇವ ರಿಗೆ ಐಕ್ಯವು ಸರ್ವಥಾ ಸಂಭವಿಸಲಾರದೆಂದು ಯುಕ್ತಿಯೂ ಹೇಳಿರುವುದು. ಜೀವ ಬ್ರಹ್ಮರ ಭೇದವನ್ನೂ ಇದೇ ಶ್ಲೋಕದಲ್ಲಿಯೇ ಹೇಳಿದಂತೆಯೇ ಆಯಿತು. ಹೇಗೆಂ ದರೆ—ಸರ್ವಜೀವರುಗಳೂ ಬ್ರಹ್ಮನಿಂದ ಅತ್ಯಂತ ಅಭಿನ್ನರಾದರೆ:—**ತದಭಿನ್ನಾ ಭಿನ್ನಸ್ಯತದಭಿನ್ನತ್ವಂ** ಎಂಬ ನ್ಯಾಯದಿಂದ, ಜೀವರುಗಳೂ ಪರಸ್ಪರ ಅಭಿ ನ್ನರೇ ಆಗಬೇಕು. ಕೃಷ್ಣನೂ ರಾಮನೂ ನಾರಾಯಣಾಭಿನ್ನರಾದರೆ, ಕೃಷ್ಣ ರಾಮರು ಪರಸ್ಪರ ಅಭಿನ್ನರಾಗಬೇಕು ಎಂದು ಈ ನ್ಯಾಯದ ಅರ್ಥವು. ಪ್ರಕೃ ತದಲ್ಲಿ ಹೀಗಿಲ್ಲದೆ, ಪರಸ್ಪರ ಭಿನ್ನರಾದ ಅನೇಕ ಜೀವರುಗಳು ಉಂಟೆಂದು ಹೇಳಿ ರುವುದರಿಂದ, ಜೀವಬ್ರಹ್ಮರೂ ಸಹ ಪರಸ್ಪರ ಭಿನ್ನರಾಗಿಯೇ ಇರಬೇಕು. ಮತ್ತು ಯುದ್ಧದಲ್ಲಿ ಒಬ್ಬನು ಮತ್ತೊಬ್ಬನನ್ನು ಸಂಹರಿಸಿ ಸುಖಿಯಾಗಬೇಕೆಂದು ಇಚ್ಛೆ ಯುಳ್ಳವನಾದುದರಿಂದ, ಸುಖದುಃಖಗಳು ಪ್ರತಿಯೊಬ್ಬ ಜೀವನಿಗೂ ಪ್ರತ್ಯೇಕವಾಗಿ ಇರುವುವೆಂದು ಸಿದ್ಧವಾಗುವುದು. ಹಾಗಿಲ್ಲದೆ, ಪರಸ್ಪರ ಐಕ್ಯವು ಇದ್ದಪಕ್ಷದಲ್ಲಿ, ಒಬ್ಬನ ಸುಖವು ಇತರರಿಗೂ ಮತ್ತು ಒಬ್ಬನ ದುಃಖವೂ ಸರ್ವರಿಗೂ ಆಗಬೇಕು. ಕಿಂಚ ಪಾಂಡವದುರ್ಯೋಧನಾದಿಗಳಿಗೆ ಐಕ್ಯವಿದ್ದರೆ, ದುರ್ಯೋಧನನ ಸಂಹಾರ

ರೂಪವಾದ ಅವರ ಯುದ್ಧಕಾರ್ಯದಲ್ಲಿ, ಪಾಂಡವರು ತಮ್ಮನ್ನೇ ತಾವು ದ್ವೇಷ ಮಾಡಿ ಆತ್ಮಹನನವನ್ನು ಮಾಡಿಕೊಂಡಂತಾಗುವುದು. ಹಾಗಿಲ್ಲದೆ, "ಇದು ಧರ್ಮ ಯುದ್ಧವು; ಶತ್ರುವಾದ ದುರ್ಯೋಧನನು ಸತ್ತರೆ ದುಃಖಪಡಕೂಡದು." ಎಂದು ಗೀತೋಪದೇಶದ ಉಪಕ್ರಮವಾಕ್ಯದಲ್ಲಿಯೇ ಶ್ರೀ ಕೃಷ್ಣನು ಹೇಳುತ್ತಾನೆ.—

(2) **ಅಶೋಚ್ಯಾನನ್ವಶೋಚಸ್ತ್ವಂ** ।—(2. 11.)

ಅರ್ಜುನ! ನೀನು ಶೋಕಕ್ಕೆ ಅರ್ಹರಲ್ಲದ ಧಾರ್ತರಾಷ್ಟ್ರರನ್ನು ಕುರಿತು ಶೋಕಪಡುತ್ತಿದ್ದೀಯೆ.

ಇನ್ನೂ ಹಿಂದೆಯೇ, ಅಜ್ಞಾನದಿಂದ ಸಹಿತನಾದ ಅರ್ಜುನ ಜೀವನು ಜ್ಞಾನಾರ್ಥವಾಗಿ ಪರಬ್ರಹ್ಮನಾದ ಶ್ರೀ ಕೃಷ್ಣನಲ್ಲಿ ಶರಣಾಗತನಾಗಿರುತ್ತಾನೆ.

(3) **ಶಿಷ್ಯಸ್ತೇಽಹಂ ಶಾಧಿಮಾಂತ್ವಾಂ ಪ್ರಪನ್ನಂ** ।—(2. 7.)

ಹೇ ಮಧುಸೂಧನ! (ಧರ್ಮಸಂಕಟದಲ್ಲಿ ಸಿಕ್ಕಿ ಬಿದ್ದು) ಶಿಷ್ಯನಾಗಿ ನಿನ್ನಲ್ಲಿ ಶರಣಾಗತನಾಗಿರುತ್ತೇನೆ. ನನ್ನನ್ನು ಶಿಕ್ಷಿಸು ಎಂದರೆ ನನಗೆ ಶ್ರೇಯಸ್ಕರವಾದ ಮಾರ್ಗವನ್ನು ಉಪದೇಶಮಾಡು.

2. ಉಪಸಂಹಾರದಲ್ಲಿಯೂ ಜೀವಬ್ರಹ್ಮರಿಗೆ ಸಂಯುಕ್ತಿಕವಾದ ಭೇದವೇ ಪ್ರತಿಪಾದಿಸಲ್ಪಟ್ಟಿರುವುದು.

(1) **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ** ।
ತಮೇವಶರಣಂಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ।

ಪರಬ್ರಹ್ಮನು ಸರ್ವಪ್ರಾಣಿಗಳ ಹೃದಯಪ್ರದೇಶದಲ್ಲಿ ನಿಯಾಮಕನಾಗಿ ಸ್ಥಿತನಾಗಿರುವನು. ಹೇ ಅರ್ಜುನ! ನೀನು ಅವನನ್ನೇ ಸರ್ವಪ್ರಕಾರವಾಗಿಯೂ ಶರಣುಹೊಂದು. ಅವನ ಪ್ರಸಾದದಿಂದ ಉತ್ತಮವಾದ ಜ್ಞಾನವನ್ನೂ ಶಾಶ್ವತವಾದ ವೈಕುಂಠಾದಿ ಸ್ಥಾನವನ್ನೂ ಹೊಂದುತ್ತೀಯೆ.

ಈ ರೀತಿಯಾಗಿ ಶ್ರೀಕೃಷ್ಣನು ತನ್ನ ವಿಸ್ತಾರವಾದ ಉಪದೇಶವನ್ನು ಮುಗಿಸಿ, ಉಪಸಂಹಾರದಲ್ಲಿ ತನ್ನಿಂದ ಉಪದಿಷ್ಟವಾದ ತತ್ವಸಾರವನ್ನು ಪುನಃ ಸಂಕ್ಷೇಪವಾಗಿ ನಿರೂಪಣೆಮಾಡುತ್ತಾನೆ:—

(2). **ಸರ್ವಗುಹ್ಯತಮಂಭೂಯಃ ಶೃಣುಮೇಪರಮಂವಚಃ** ।
ಇಷ್ಟೋಽಸಿಮೇದೃಢಮಿತಿತತೋವಕ್ಷ್ಯಾಮಿತೇಹಿತಂ ।

ಮನ್ಮನಾಭವಮದ್ಭಕ್ತೋಮದ್ಯಾಜೀಮಾಂ ನಮಸ್ಕುರು ।
ಮಾಮೇವೈಷ್ಯಸಿಸತ್ಯಂತೇ ಪ್ರತಿಜಾನೇಪ್ರಿಯೋಽಸಿಮೇ ।
ಸರ್ವಧರ್ಮಾನ್ಪರಿತ್ಯಜ್ಯಮಾಮೇಕಂ ಶರಣಂವ್ರಜ ।
ಅಹಂತ್ವಾಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿಮಾಶುಚಃ ॥
—(18. 64-66.)

ಅರ್ಜುನ! ಪುನಃ ಅತ್ಯಂತ ಗೋಪ್ಯವಾದ, ಪರಮಂ ಎಂದರೆ ಅತಿ ಯಥಾರ್ಥವಾದ ನನ್ನ ಮಾತನ್ನು ಕೇಳು. ನನಗೆ ನೀನು ಬಹು ಪ್ರಿಯನಾಗಿರುತ್ತೀಯಾದುದರಿಂದ ನಿನಗೆ ಹಿತವನ್ನು ಹೇಳುತ್ತೇನೆ. ನೀನು ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸುಳ್ಳವನಾಗು; ನನ್ನ ಭಕ್ತನಾಗು; ನನ್ನ ಉದ್ದೇಶ್ಯಕವಾದ ಯಾಗವನ್ನು ಮಾಡು; ನನ್ನನ್ನು ನಮಸ್ಕರಿಸು; ನೀನು ನನ್ನನ್ನೇ ಹೊಂದುವವನಾಗುತ್ತೀಯೆ. ಇದು ಸತ್ಯವೆಂದು ಪ್ರತಿಜ್ಞೆಮಾಡುತ್ತೇನೆ. ನೀನು ನನಗೆ ಪ್ರಿಯನಾಗಿರುತ್ತೀ.

ಸರ್ವ ಅವೈಷ್ಣವ ಧರ್ಮಗಳನ್ನು ಪಂತ್ಯಾಗಮಾಡಿ ನಾನೇ ಪ್ರಧಾನನೆಂದು ತಿಳಿದು ನನ್ನನ್ನು ಶರಣುಹೊಂದು. ನಾನು ನಿನ್ನನ್ನು ಸರ್ವಪಾಪಗಳಿಂದಲೂ ಬಿಡಿಸಿಬಿಡುತ್ತೇನೆ. ನೀನು ಶೋಕಪಡಬೇಡ.

"ನೀನು ಶೋಕಪಡಬೇಡ" ಎಂಬ ಶ್ರೀ ಕೃಷ್ಣನ ಮಾತು "**ಜೀವಾ ಏವತು ದುಃಖಿನಃ**" ಎಂಬ ಶ್ರುತಿಯನ್ನು ಸ್ಮರಣೆಗೆ ತಂದು ಕೊಡುತ್ತದೆ. ಅರ್ಜುನನೂ ಕೂಡ, ಪರಬ್ರಹ್ಮನಾದ ಶ್ರೀ ಕೃಷ್ಣನಿಗೂ ತನಗೂ ಅತ್ಯಂತ ಭೇದವನ್ನೇ ಅಂಗೀಕರಿಸಿರುತ್ತಾನೆ.

(3) **ನಷ್ಟೋ ಮೋಹಃ ಸ್ಮೃತಿರ್ಲಬ್ಧಾತ್ವತ್ಪ್ರಸಾದಾನ್ಮಯಾಚ್ಯುತ।**
ಸ್ಥಿತೋಽಸ್ಮಿಗತಸಂದೇಹಃ ಕರಿಷ್ಯೇವಚನಂ ತವ ।—(18. 73.)

ಎಲೈ ಅಚ್ಯುತನೇ? ನನ್ನ ಬಂಧುಸ್ನೇಹಜನಿತ ಮಿಥ್ಯಾಜ್ಞಾನವು ನಷ್ಟವಾಯಿತು. ನಿನ್ನ ಪ್ರಸಾದದಿಂದ ನನ್ನ ಪೂರ್ವಜ್ಞಾನವು ಪ್ರಾಪ್ತವಾಯಿತು. ಸಂದೇಹರಹಿತನಾಗಿ ಯುದ್ಧದಲ್ಲಿ ಸ್ಥಿತನಾಗಿರುತ್ತೇನೆ. ನಿನ್ನ ಆಜ್ಞೆಯಂತೆ ನಡೆಯುತ್ತೇನೆ.

ಅರ್ಜುನನು ಶ್ರೀ ಕೃಷ್ಣನ ಕೈಂಕರ್ಯವನ್ನೇ ಒಪ್ಪಿದಂತಾಯಿತು. ಭಗವದ್ಗೀತೆಯ ಅಂತ್ಯ ಶ್ಲೋಕದಲ್ಲಿಯೂ, ಯತ್ರ "**ಯೋಗೇಶ್ವರಃ ಕೃಷ್ಣೋಯತ್ರ ಪಾರ್ಥೋಧನುರ್ಧರಃ**" ಎಂದು ಕೃಷ್ಣಾರ್ಜುನರ ಹೆಸರುಗಳನ್ನು ಬೇರೆ ಬೇರೆ ಗ್ರಹಣಮಾಡಿ ಕೃಷ್ಣನಿಗೆ ಉತ್ತಮತ್ವ ಸಾಧಕವಾದ "ಯೋಗೀ

ಶ್ವರಃ" ಎಂಬ ವಿಶೇಷಣವನ್ನು ಕೊಟ್ಟಿರುವುದರಿಂದ, ಉಪಸಂಹಾರದಲ್ಲಿ ಭೇದವೇ ಸಿದ್ಧವಾಗುವುದೇ ಹೊರತು ಅಭೇದಗಂಧಕ್ಕೆ ಸರ್ವಥಾ ಅವಕಾಶವಿರುವುದಿಲ್ಲ.

3. ಅಭ್ಯಾಸವೂ ಜೀವಬ್ರಹ್ಮರ ಭೇದದಲ್ಲಿಯೇ ಇರುವುದು. ದಾರ್ಢ್ಯಾರ್ಥವಾಗಿಯೂ, ಸಾಭಿಪ್ರಾಯವಾಗಿ (ಮನಃಪೂರ್ವಕವಾಗಿ) ಹೇಳಿದುದೆಂದು ತೋರಿಸುವುದಕ್ಕಾಗಿಯೂ, ಉಕ್ತಪ್ರಮೇಯವನ್ನು ಪುನಃ ಪುನಃ ಹೇಳುವುದು ಅಭ್ಯಾಸವೆನ್ನಿಸುವುದು.

(1) **ಯೋಬುದ್ಧೇಃ ಪರತಸ್ತು ಸಃ ।**—(3. 42.)

(2) **ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।**
—(8. 20.)

(3) **ಉತ್ತಮಃ ಪುರುಷಸ್ತ್ವನ್ಯಃ ।**—(15. 17.)

ಇತ್ಯಾದಿ ಬಹು ಸ್ಥಳಗಳಲ್ಲಿ ಪರಮಾತ್ಮನು ಜೀವರುಗಳಿಂದ ಭಿನ್ನನೆಂದು ಪುನಃ ಪುನಃ ಪ್ರತಿಪಾದಿಸಲ್ಪಟ್ಟಿರುವುದು. ಮತ್ತು ಅಲ್ಲಿ ಅಲ್ಲಿ ಭೇದಸಾಧಕವಾದ ಸ್ವಾಮಿಭೃತ್ಯಭಾವವು, ನಿಯಾಮಕನಿಯಮ್ಯಭಾವವು, ಮತ್ತು ಆಧಾರಾಧೇಯಭಾವವೇ ಮೊದಲಾದ ಬಹು ಯುಕ್ತಿಗಳನ್ನು ಹೇಳಿರುತ್ತಾನೆ. ಆದುದರಿಂದ ಅಭ್ಯಾಸವೂ ಜೀವಬ್ರಹ್ಮರ ಭೇದಕ್ಕೇ ಸಾಧಕವಾಗಿರುವುದು.

4. ಅಪೂರ್ವತಾ ಎಂಬ ಲಿಂಗವೂ ಕೂಡ ಜೀವಬ್ರಹ್ಮರಿಗೆ ಭೇದವನ್ನೇ ತೋರಿಸಿಕೊಡುವುದು. ಪ್ರಮಾಣಾಂತರದಲ್ಲಿ ಹೇಳದೇ ಇರುವ ಹೊಸವಿಷಯವನ್ನು ಪ್ರತಿಪಾದನೆ ಮಾಡಿದರೆ, ಆ ನೂತನ ವಿಷಯೋಪನ್ಯಾಸದಲ್ಲಿ ಗ್ರಂಥಕಾರನಿಗೆ ಅಧಿಕ ತಾತ್ಪರ್ಯವಿರುತ್ತದೆ ಎಂದು ತಿಳಿದುಬರುವುದು. ಇದಕ್ಕೆ ಅಪೂರ್ವತೆ ಎಂದು ಹೆಸರು. ಭೇದವು ಸಾಮಾನ್ಯಪ್ರತ್ಯಕ್ಷದಿಂದ ಸಿದ್ಧವಾಗಿರುವುದರಿಂದ ಭೇದವನ್ನು ಹೇಳುವ ಯಾವ ಶಾಸ್ತ್ರಕ್ಕೂ ಅಪೂರ್ವತೆಯು ಇಲ್ಲವಾದುದರಿಂದ ಭೇದಪ್ರತಿಪಾದಕವಾದ ಸರ್ವ ವೇದ ಭಾಗಗಳೂ ಅಪ್ರಮಾಣಗಳೆಂದು ಅದ್ವೈತಿಗಳು ಹೇಳುತ್ತಾರೆ. ಆದರೆ ಇದು ಕೇವಲ ಅಭಿಮಾನದ ಮಾತು. 1. ಅಪೂರ್ವತೆಯು ಇಲ್ಲದ ವಾಕ್ಯಗಳೆಲ್ಲಾ ಅಪ್ರಮಾಣಗಳಾಗುವುದಾದರೆ ಮೊದಲಾವರ್ತಿ ಹೇಳಿದ **ತತ್ವಮಸಿ** ಎಂಬ ವಾಕ್ಯವು ಪ್ರಮಾಣವಾದರೂ, ಎರಡನೆಯ, ಮೂರನೆಯ, ಹಾಗೂ ಒಂಭತ್ತನೆಯ ಸಲದವರೆವಿಗೆ ಉಪದಿಷ್ಟವಾದ ತತ್ವಮಸಿವಾಕ್ಯಗಳು ಅಪ್ರಮಾಣವೆಂದು ಒಪ್ಪಬೇಕಾಗುವುದು. 2. ಅಪೂರ್ವತೆಯಿಂದಲೇ ವಾಕ್ಯಪ್ರಾಮಾಣ್ಯವನ್ನು ನಿಶ್ಚಯಿಸುವುದಾದರೆ **ಅಸದೇವೇದಮಗ್ರ ಆಸೀತ್** ಎಂಬ

ಶ್ರುತಿಯು "**ಶೂನ್ಯವು ಮೊದಲಿತ್ತು**" ಎಂದು ಅಪೂರ್ವವಾಗಿ ಹೇಳುವುದರಿಂದ ಅದ್ವೈತಿಗಳೂ ಕೂಡ ಕೂಡ ಶೂನ್ಯವೇ ಜಗತ್ಕಾರಣವೆಂದು ಒಪ್ಪಬೇಕಾದೀತು! 3. ಅಪೂರ್ವತೆಯಿಂದಲೇ ವಾಕ್ಯವು ಪ್ರಮಾಣವಾಗುವುದಾದರೆ, ಅಭ್ಯಾಸವು ತಾತ್ಪರ್ಯನಿರ್ಣಾಯಕಲಿಂಗವೆಂಬ ಶಾಸ್ತ್ರಜ್ಞರ ನಿಶ್ಚಯವನ್ನು ಪರಿತ್ಯಾಗಮಾಡಬೇಕು. 4. ಪರಂತು ಗುರುವು ನಾಲ್ಕು ಮೂರು ಏಳು ಎಂದು ಹೇಳಿದನಂತರ ಶಿಷ್ಯನ ನಾಲ್ಕು ಮೂರೇಳು ಎಂಬ ವಾಕ್ಯಕ್ಕೆ ಅಪೂರ್ವತೆಯು ಇಲ್ಲದುದರಿಂದ ಅಪ್ರಾಮಾಣ್ಯವು ಪ್ರಾಪ್ತವಾಗಿ ಲೋಕವ್ಯವಹಾರವೇ ಕಷ್ಟಕರವಾಗಬೇಕಾಗುವುದು. 5. ಕಿಂಚ "**ಯತ್ಪುನರುಕ್ತಂ ತದಪ್ರಮಾಣಂ**" ಎಂಬ ಬೌದ್ಧರ ಅನುಭವ ವಿರುದ್ಧವಾದ ನ್ಯಾಯವೇ ಪ್ರಾಪ್ತವಾಗುವುದು. ಒಂದು ಸಾರಿ ಹೇಳಿದುದನ್ನೇ ಪುನಃ ಹೇಳಿದರೆ ಅದು ಅಪ್ರಮಾಣವೆನ್ನಿಸುವುದೆಂದು ಬೌದ್ಧರು ಹೇಳಿರುವರು. ಈ ಅಭಿಪ್ರಾಯದ ದೋಷವನ್ನು ಕುರುಜರು ಕೂಡ ಕಂಡುಹಿಡಿಯಬಹುದು.

ಇದೆಲ್ಲಾ ಹಾಗಿರಲಿ. ವಸ್ತುತಃ, ಅಭೇದಾರ್ಥಕ್ಕೆ ಹೇಗೆ ಅಪೂರ್ವತೆಯು ಇರುವುದೋ, ಹಾಗೆಯೇ **ಭೇದಾಗಮಕ್ಕೂ ಅಪೂರ್ವತೆಯು ಇದ್ದೇ ಇರುವುದು**. ಭೇದವು ಪ್ರತ್ಯಕ್ಷಸಿದ್ಧವಾದುದರಿಂದ ಭೇದಾಗಮವು ಹೇಗೆ ಅಪೂರ್ವ ವಿಷಯವನ್ನು ಹೇಳಿದಹಾಗಾಯಿತೆಂದು ಶಂಕಿಸಕೂಡದು. ಜೀವಜಡ ಭೇದವೂ, ಜಡಗಳ ಪರಸ್ಪರಬೇಧವೂ ಪ್ರತ್ಯಕ್ಷಸಿದ್ಧವಾದರೂ, **ಜೀವಬ್ರಹ್ಮರ ಭೇದವು ಪ್ರತ್ಯಕ್ಷಸಿದ್ಧವಾಗಿರುವುದಿಲ್ಲ**. ಭೇದಜ್ಞಾನವು ಬರಬೇಕಾದರೆ, ಯಾವುದರಿಂದ ಭೇದವನ್ನು ಹೇಳಬೇಕೋ ಅಂಥಾ ಪ್ರತಿಯೋಗಿಜ್ಞಾನವು ಅವಶ್ಯಕವು. ಪ್ರಕೃತದಲ್ಲಿ, ಬ್ರಹ್ಮನಿಂದ ನಾನು ಭಿನ್ನನು ಎಂಬಲ್ಲಿ ಬ್ರಹ್ಮನು ಪ್ರತಿಯೋಗಿಯು; ಇಂಥಾ ಭೇದಜ್ಞಾನಕ್ಕೆ ಪ್ರತಿಯೋಗಿಯಾದ ಬ್ರಹ್ಮನ ಜ್ಞಾನವು (ಬ್ರಹ್ಮನು ಉಂಟು ಎಂದು ತಿಳಿಯುವುದು) **ವೇದದಿಂದಲೇ** ಬರಬೇಕು. ಪ್ರತ್ಯಕ್ಷದಿಂದಲೂ ಅನುಮಾನದಿಂದಲೂ ಬ್ರಹ್ಮಜ್ಞಾನವು ಬರುವುದಿಲ್ಲವೆಂಬುದು ಸರ್ವವೇದಾಂತಿಗಳಿಗೂ ಸಮ್ಮತವು. ವೇದದಿಂದಲೇ **ಪ್ರಥಮತಃ** ಬ್ರಹ್ಮನು ಉಂಟೆಂದು ತಿಳಿದಮೇಲೆಯೇ ನಾನು ಬ್ರಹ್ಮನಲ್ಲ; "ನಾನು ಬ್ರಹ್ಮಭಿನ್ನನು" ಎಂಬ ಜೀವಬ್ರಹ್ಮರ ಭೇದಜ್ಞಾನವು ಹುಟ್ಟುವುದರಿಂದ ಭೇದಾಗಮಕ್ಕೆ ಅಪೂರ್ವತೆಯು ಬಂದೇ ಬಂದಿತು.

ಆದರೆ, ಭಗವದ್ಗೀತೆಯಲ್ಲಿ ಪರಬ್ರಹ್ಮನಾದ ಶ್ರೀಕೃಷ್ಣನು ಪ್ರತ್ಯಕ್ಷಸಿದ್ಧನಾಗಿರುವುದರಿಂದ, ಪ್ರತ್ಯಕ್ಷದಿಂದಲೇ ಪ್ರತಿಯೋಗಿಜ್ಞಾನವು ಬಂದು ಹೋಗಿ

ರುವುದು; ಹೀಗೆಯೇ ನಾನು ಕೃಷ್ಣನಲ್ಲ ಎಂಬ ಜ್ಞಾನವೇ ನಾನು ಬ್ರಹ್ಮನಲ್ಲ ಎಂಬ ಜ್ಞಾನರೂಪವಾದುದರಿಂದ, ಪ್ರತ್ಯಕ್ಷದಿಂದಲೇ ಜೀವಬ್ರಹ್ಮರ ಭೇದಜ್ಞಾನವು ಹುಟ್ಟಿರುವುದರಿಂದ, ಭೇದಬೋಧಕವಾದ ಶ್ರೀಕೃಷ್ಣನ ವಾಕ್ಯಗಳಿಗೆ ಅಪೂರ್ವತೆಯು ಬರಲಿಲ್ಲವೆಂದು ಶಂಕಿಸಕೂಡದು. ನಾನು ಕೃಷ್ಣನಲ್ಲ ಎಂಬ ಜ್ಞಾನವು ಬೇರೆ. ನಾನು ಬ್ರಹ್ಮನಲ್ಲ ಎಂಬ ಜ್ಞಾನವು ಬೇರೆ. ಕೃಷ್ಣನು ಜ್ಞಾನವಿಷಯನಾಗಿದ್ದರೂ, ಕೃಷ್ಣನು ಪರಬ್ರಹ್ಮನು ಎಂದು ತಿಳಿಯುವವರೆವಿಗೂ, ನಾನು (ಜೀವನು) ಪರಬ್ರಹ್ಮನಲ್ಲ ಎಂಬ ಜ್ಞಾನವು ಹುಟ್ಟುವುದಕ್ಕೆ ಅವಕಾಶವಿಲ್ಲ. ಆದುದರಿಂದಲೇ, ದುರ್ಯೋಧನನಿಗೆ ನಾನು ಕೃಷ್ಣನಲ್ಲ ಎಂಬ ಜ್ಞಾನವು ಬಂದರೂ, ನಾನು ಸರ್ವನಿಯಾಮಕನಾದ ಬ್ರಹ್ಮನಲ್ಲ ಎಂಬ ಜ್ಞಾನವು ಹುಟ್ಟಲೇ ಇಲ್ಲ. ಶ್ರೀಕೃಷ್ಣನ ದರ್ಶನವಾದರೂ, ಕೃಷ್ಣನು ಪರಬ್ರಹ್ಮನೆಂಬ ಜ್ಞಾನವು ವೇದದಿಂದಲೋ ಅಥವಾ ಕೃಷ್ಣನ ವಾಕ್ಯದಿಂದಲೋ ಪ್ರಥಮತಃ ಬರಬೇಕಾಗಿರುವುದರಿಂದ, ಕೃಷ್ಣನು "**ಮತ್ತಃ ಪರತರಂ ನಾನ್ಯತ್**" ಎಂದು ಹೇಳಿ ನಾನೇ ಬ್ರಹ್ಮನು ಎಂದು ತಿಳಿಸಿದ ಮೇಲೆಯೇ ನಾನು ಬ್ರಹ್ಮನಲ್ಲ ಎಂಬ ಜ್ಞಾನವು ಅರ್ಜುನಾದಿ ಜೀವರುಗಳಿಗೆ ಹುಟ್ಟುವುದು.

(1) **ಅವಜಾನಂತಿಮಾಂ ಮೂಢಾಮಾನುಷೀಂತನುಮಾಶ್ರಿತಂ ।**
ಪರಂಭಾವಮಜಾನಂತೋ ಮಮಭೂತಮಹೇಶ್ವರಂ ||--(9. 11.)

ಇತ್ಯಾದಿ ವಾಕ್ಯಗಳಿಂದ ಕೃಷ್ಣನು ತಾನೂ ಒಬ್ಬ ಸಾಮಾನ್ಯ ಮನುಷ್ಯನೆಂಬ ಭ್ರಮವನ್ನು ನಿವಾರಣೆಮಾಡಿ, ತಾನು ಪರಬ್ರಹ್ಮನೆಂದು ಹೇಳಿರುತ್ತಾನೆ. ಆದುದರಿಂದ ಶ್ರೀಕೃಷ್ಣನ "**ಪರಸ್ತಸ್ಮಾತ್ತು ಭಾವೋಽನ್ಯೋ**" ಇತ್ಯಾದಿ ಭೇದವಾಕ್ಯಗಳು ಅಪೂರ್ವವಾಗಿ ಜೀವರುಗಳಿಗೆ ನಾನು ಬ್ರಹ್ಮನಲ್ಲ ಎಂಬ ಜ್ಞಾನವನ್ನು ಹುಟ್ಟಿಸುತ್ತವೆ. ಇದುವರೆವಿಗೂ ನಾನು ಕೃಷ್ಣನಲ್ಲ ಎಂಬ ಜ್ಞಾನವು ಮಾತ್ರ ಪ್ರತ್ಯಕ್ಷಸಿದ್ಧವಾಗಿತ್ತು. ಕೃಷ್ಣನು ಬ್ರಹ್ಮನೆಂದು ತಿಳಿದಮೇಲೆ **ನಾನು ಬ್ರಹ್ಮನಲ್ಲ** ಎಂಬ ಜ್ಞಾನವು ಅಪೂರ್ವವಾಗಿಯೇ ಹುಟ್ಟುವುದರಿಂದ ಭಗವದ್ಗೀತೆಯ ಭೇದವಾಕ್ಯಕ್ಕೆ ಅಪೂರ್ವತೆಯೂ ಪ್ರಾಪ್ತವಾಯಿತು.

ಅಷ್ಟೇ ಅಲ್ಲ! ಶ್ರೀ ಕೃಷ್ಣನು ವಿಶ್ವರೂಪದರ್ಶನವನ್ನು ಮಾಡಿಸಿದಾಗ, ತನಗೂ ಪರಮಾತ್ಮನಿಗೂ ಇರುವ ನಿಜವಾದ ಅಂತರವನ್ನು ಬಹು ಸ್ಪಷ್ಟವಾಗಿ ಅರ್ಜುನನು ಕಂಡನು. ನಿರವಧಿಕವಾದ ಭಗವಂತನ ಐಶ್ವರ್ಯವನ್ನು ನೂತನವಾಗಿ ಕಂಡು, ನೂತನವಾದ (**ಅಪೂರ್ವವಾದ**) ಅಧಿಕಭೇದಜ್ಞಾನವನ್ನು ಹೊಂ

ದಿದನೆಂದು ಸಂಜಯನು ಹೇಳಿರುತ್ತಾನೆ. ಸಾಮಾನ್ಯವಾದ ಭೇದಜ್ಞಾನವು ನಾನು ಪರಬ್ರಹ್ಮನೆಂಬ ಶ್ರೀ ಕೃಷ್ಣನ ಮಾತಿನಿಂದಲೇ ಅರ್ಜುನನಿಗೆ ಹುಟ್ಟಿತ್ತು. ಆದರೆ ವಿಶ್ವರೂಪಿಯಾದ ಶ್ರೀ ಕೃಷ್ಣನ ನಿಜವೈಭವವನ್ನು ಸಾಕ್ಷಾತ್ ನೋಡಿದನಂತರ, ಆತನ ಭೇದಜ್ಞಾನವು ಇನ್ನು ಆಳವೂ, ವಿಸ್ತೃತವೂ ಆಯಿತು. ಆದುದರಿಂದಲೇ ವಿಸ್ಮಿತನಾದನು ಮತ್ತು ಭೀತನಾದನು. ಪೂರ್ವದಲ್ಲಿದ್ದ ಭೇದಜ್ಞಾನವೇ ಅರ್ಜುನನಿಗೆ ಇದ್ದರೆ ಆತನು ಆಶ್ಚರ್ಯವನ್ನು ಹೊಂದುತ್ತಿರಲಿಲ್ಲ; ಮತ್ತು ತಾನು ಮಾಡಿದ ಅವಜ್ಞೆಯನ್ನು ಕ್ಷಮಿಸಬೇಕೆಂದು ಬೇಡಿಕೊಂಡು ಪುನಃ ಪುನಃ ಪ್ರಣಾಮಗಳನ್ನು ಮಾಡುತ್ತಿರಲಿಲ್ಲ. ಅರ್ಜುನನು ಹೇಳುತ್ತಾನೆ.

(1) **ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ ಭಯೇನ ಚ ಪ್ರವ್ಯಥಿತಂ ಮನೋ ಮೇ ||**—(11. 45.)

ಹೇ ಸ್ವಾಮಿ! ಪೂರ್ವದಲ್ಲಿ ನೋಡಲ್ಪಡದಿರುವ ನಿನ್ನ ರೂಪವನ್ನು ನೋಡಿ ಆಶ್ಚರ್ಯಬುದ್ಧಿಯಿಂದ ರೋಮಾಂಚಿತಗಾತ್ರನಾಗಿರುತ್ತೇನೆ. ನನ್ನ ಮನಸ್ಸು ಭಯದಿಂದ ಬಹಳ ವ್ಯಾಕುಲವಾಗಿದೆ.

ಈ ರೀತಿಯಲ್ಲಿ ಭಗವದ್ಗೀತೆಯಿಂದ ಉತ್ಪನ್ನವಾದ ನಾನು ಬ್ರಹ್ಮನಲ್ಲ ಎಂಬ ಸಾಮಾನ್ಯಭೇದಜ್ಞಾನಕ್ಕೂ, ಮತ್ತು ಪರಬ್ರಹ್ಮನ **ರೂಪವಿಶೇಷ**ಪ್ರತಿಯೋಗಿಕವಾದ ಭೇದಜ್ಞಾನಕ್ಕೂ ಅಪೂರ್ವತೆಯೇ ಇರುವುದರಿಂದ, ಅಪೂರ್ವತೆ ಇಲ್ಲದಿರುವಪ್ರಯುಕ್ತ ಭೇದಶಾಸ್ತ್ರಕ್ಕೆ ಅಪ್ರಾಮಾಣ್ಯವೆಂದು ಅದ್ವೈತಿಗಳು ಮಾಡುವ ನಿಂದೆಯು ಕೇವಲಮೌಢ್ಯಮೂಲವಾದುದು.

5. ಫಲವೆಂಬ ತಾತ್ಪರ್ಯನಿರ್ಣಾಯಕಲಿಂಗವೂ ಭಗವದ್ಗೀತೆಯಲ್ಲಿ ಭೇದವಾಕ್ಯಗಳಿಗೇ ಇರುತ್ತದೆ. ಹದಿನೈದನೆಯ ಅಧ್ಯಾಯದಲ್ಲಿ, ಶ್ರೀ ಕೃಷ್ಣನು "**ಉತ್ತಮಃ ಪುರುಷಸ್ತ್ವನ್ಯಃ**" ಎಂದು ತಾನು ಸರ್ವಜೀವರಿಂದ ಭಿನ್ನನೆಂದು ಹೇಳಿ, ಈ ರೀತಿಯಾಗಿ ತನ್ನ ಸರ್ವಜೀವವೈಲಕ್ಷಣ್ಯವನ್ನು (ಪುರುಷೋತ್ತಮತ್ವವನ್ನು) ತಿಳಿದವರಿಗೆ ಆಗುವ ಪ್ರಯೋಜನವನ್ನು ನಿರೂಪಿಸಿರುತ್ತಾನೆ.

(3) **ಏತದ್ಬುದ್ಧ್ವಾ ಬುದ್ಧಿಮಾನ್ಸ್ಯಾತ್ ಕೃತಕೃತ್ಯಶ್ಚ ಭಾರತ।**—(15. 20.)

ನನ್ನ ಪುರುಷೋತ್ತಮತ್ವವನ್ನು ಪರೋಕ್ಷದಿಂದ ತಿಳಿದು, ಅಪರೋಕ್ಷಜ್ಞಾನಿಯಾಗುತ್ತಾನೆ; ನಂತರ ಮುಕ್ತನೂ ಆಗುತ್ತಾನೆ. ಇಲ್ಲಿ ಭೇದಜ್ಞಾನಕ್ಕೆ ಅಪರೋಕ್ಷ ಜ್ಞಾನದ್ವಾರಾ ಮೋಕ್ಷರೂಪ ಮಹಾಫಲವು ಹೇಳಿರುತ್ತದೆ. ಸಕಲ ಪುರುಷಾರ್ಥಗಳಲ್ಲಿಯೂ ಮೋಕ್ಷವು ಶ್ರೇಷ್ಠವಾದುದು. ಅಂಥಾ

ಮೋಕ್ಷಕ್ಕೆ ಸಾಧಕವಾದ ಜ್ಞಾನವು ಅತ್ಯಂತ ಯಥಾರ್ಥವಾಗಬೇಕು. ಮೋಕ್ಷೋಪಯೋಗಿಯಾದ ಯಥಾರ್ಥಜ್ಞಾನಕ್ಕೆ ವಿಷಯವಾದುದರಿಂದಲೂ ಭೇದವು ಸತ್ಯವೆಂದು ನಿಶ್ಚಿತವಾಗುವುದು.

6. ಅರ್ಥವಾದ. ಸ್ತುತಿ, ನಿಂದಾ, ಪರಕೃತಿ, ಪುರಾಕಲ್ಪವೆಂಬ ನಾಲ್ಕು ಪ್ರಕಾರವಾದ ಅರ್ಥವಾದವೂ ಭೇದವಾಕ್ಯಗಳಿಗೆ ಇರುತ್ತದೆ.

(1) **ಪಶ್ಯಂತಿ ಜ್ಞಾನಚಕ್ಷುಷಃ ।**—(15. 10.)

(2) **ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।**
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ।
ಕರ್ಮಭಿಃ ॥—(13. 31.)

ಎಂಬಲ್ಲಿ ಶ್ರೀ ಕೃಷ್ಣನು ತನ್ನನ್ನೇ ಸರ್ವೋತ್ತಮನನ್ನಾಗಿ ತಿಳಿದ ಭೇದ ಜ್ಞಾನಿಯನ್ನು ಅವನಿಗಾಗುವ ಫಲಕಥನ ಪೂರ್ವಕವಾಗಿ ಪ್ರಶಂಸೆಮಾಡಿರುತ್ತಾನೆ. ಅರ್ಥವು:—1. ಜ್ಞಾನದೃಷ್ಟಿಯುಳ್ಳವರೇ ಶರೀರದಲ್ಲಿದ್ದು ಶುಭಫಲಮಾತ್ರವನ್ನು ಭೋಗಮಾಡುವ ಪರಮಾತ್ಮನನ್ನು ತಿಳಿಯುತ್ತಾರೆ. 2. ಶ್ರದ್ಧೆಯಿಂದ, ಅಸೂಯಾರಹಿತರಾಗಿ (ಕಷ್ಟವಾದ ಕರ್ಮಗಳನ್ನು ವಿಧಿಸಿರುವನೆಂದು ಪರಮಾತ್ಮನಲ್ಲಿ ದ್ವೇಷಮಾಡದೆ), ನಿಯತಕರ್ಮಗಳನ್ನು ಆಚರಿಸಿ, ನನ್ನಲ್ಲಿ ಸಮರ್ಪಿಸುವ ಜ್ಞಾನಿಗಳು ಕರ್ಮಬಂಧದಿಂದ ಮುಕ್ತರಾಗುತ್ತಾರೆ. ತನ್ನ ಸರ್ವೋತ್ತಮತ್ವಜ್ಞಾನಹೀನರಾದವರನ್ನು ಕೃಷ್ಣನು ನಿಂದಿಸುತ್ತಾನೆ—

(3) **ಯೇತ್ವೇತದಭ್ಯಸೂಯಂತೋ ನಾನುತಿಷ್ಠಂತಿಮೇಮತಂ ।**
ಸರ್ವಜ್ಞಾನವಿಮೂಢಾಂಸ್ತಾನ್ವಿದ್ಧಿನಷ್ಟಾನಚೇತಸಃ ॥
—(3. 32.)

ನನ್ನ ಮತವನ್ನು ಅನುಷ್ಠಾನಮಾಡದವರು ವಿಶೇಷಮಿಥ್ಯಾಜ್ಞಾನಿಗಳು, ಅವಿವೇಕಿಗಳು ಮತ್ತು ನರಕಾದ್ಯನರ್ಥಭಾಗಿಗಳು.

(4) **ಕರ್ಮಣೈವಹಿ ಸಂಸಿದ್ಧಿ ಮಾಸ್ಥಿತಾಜನಕಾದಯಃ ॥**—(3. 10.)

(5) **ಬಹವೋಜ್ಞಾನತಪಸಾ ಪೂತಾಮದ್ಭಾವಮಾಗತಾಃ।**—(4. 10.)

ಜನಕಾದಿ ರಾಜರ್ಷಿಗಳು ಯಜ್ಞನಾಮಕ ವಿಷ್ಣುಪ್ರೀತಿಕರವಾದ ಕರ್ಮದಿಂದಲೇ ಜ್ಞಾನಸಿದ್ಧಿಯನ್ನು ಹೊಂದಿದರು. ಜ್ಞಾನದಿಂದಲೂ ತಪಸ್ಸಿನಿಂದಲೂ ಪವಿತ್ರರಾಗಿ ಅನೇಕರು ಮುಕ್ತರಾದರು. ಈ ವಾಕ್ಯಗಳಿಂದ ಪರಕೃತಿಪುರಾಕಲ್ಪಗಳನ್ನೂ ನಿರೂಪಣೆಮಾಡಿ ಸರ್ವಯಜ್ಞಭೋಕ್ತೃವೂ ಕರ್ಮಫಲನಿಯಾಮಕ

ಸೂ ಆದ ಬ್ರಹ್ಮನಿಗೂ, ವಿಧಿಬದ್ಧನಾದ ಜೀವನಿಗೂ ಇರುವ ಭೇದವು ಅತ್ಯಂತ ಪ್ರಾಮಾಣಿಕವೆಂದು ಶ್ರೀ ಕೃಷ್ಣನು ತೋರಿಸಿರುತ್ತಾನೆ.

7. ಉಪಪತ್ತಿ ಎಂದರೆ ಯುಕ್ತಿಯು. ಇದು ಅತಿಮುಖ್ಯವಾದ ವಾಕ್ಯ ತಾತ್ಪರ್ಯ ನಿರ್ಣಾಯಕಲಿಂಗವು. ಭೇದಪರವಾಗಿ ಗೀತಾವಾಕ್ಯಗಳಿಗೆ ಅರ್ಥಮಾಡುವುದಕ್ಕೆ ಯುಕ್ತಿಗಳಿರುವುವೇ ಅಥವಾ ಜೀವಬ್ರಹ್ಮರ ಅಭೇದಪರವಾಗಿ ಅರ್ಥ ಮಾಡುವುದಕ್ಕೆ ಯುಕ್ತಿಗಳಿರುವುವೇ ಎಂದು ವಿಮರ್ಶೆಮಾಡಿ ನೋಡಿದರೆ, ಅಭೇದಾರ್ಥವನ್ನು ಸ್ವೀಕರಿಸುವುದಕ್ಕೆ ಒಂದು ಯುಕ್ತಿಯೂ ಗೀತಾವಾಕ್ಯಗಳಲ್ಲಿರುವುದಿಲ್ಲ. ಜೀವಪರಮಾತ್ಮರು ಭಿನ್ನರೆಂಬಲ್ಲಿ ಶ್ರೀಕೃಷ್ಣನು ಅನಂತಯುಕ್ತಿಗಳನ್ನು ಹೇಳಿರುತ್ತಾನೆ. ಸರ್ವಜ್ಞತ್ವಾಲ್ಪಜ್ಞತ್ವಾದಿ ರೂಪವಿರುದ್ಧ ಧರ್ಮಗಳು, ಸ್ವಾಮಿ ಭೃತ್ಯಭಾವವೇ ಮೊದಲಾದ ಪೂರ್ವೋಕ್ತ ಸಂಬಂಧ ವಿಶೇಷಗಳು, ಮತ್ತು ಪರಮಾತ್ಮನ ಸರ್ವಾಂತರ್ಯಾಮಿತ್ವವೂ ಜೀವನು ಬ್ರಹ್ಮನಿಂದ ಅತ್ಯಂತ ಭಿನ್ನನೆಂದು ನಿಶ್ಚಯಮಾಡುವುದರಲ್ಲಿಯೇ ಯುಕ್ತಿಗಳಾಗಿರುತ್ತವೆ.

ಈ ರೀತಿಯಾಗಿ ಸಪ್ತತಾತ್ಪರ್ಯ ನಿರ್ಣಾಯಕ ಲಿಂಗಗಳೂ ಸಪ್ತದುರ್ಗಗಳಂತೆ ಜೀವಬ್ರಹ್ಮರ ಭೇದವೆಂಬ ಮಹಾರಾಜನಿಂದ ಸಹಿತವಾದ ಗೀತಾರಾಜಧಾನಿಯನ್ನು ರಕ್ಷಿಸುತ್ತಿರುವುವಾದುದರಿಂದ ಅಭೇದವೆಂಬ ಶತ್ರುಪ್ರವೇಶಕ್ಕೆ ಸ್ವಲ್ಪವೂ ಅವಕಾಶವನ್ನು ಕೊಡಲಾರವು.

9.

ಶ್ರೀ ಶ್ರೀಗಳವರು—ಹೆಚ್ಚು ಹೇಳುವುದರಿಂದೇನು! ಗೀತಾಶಾಸ್ತ್ರದ ಪ್ರವೃತ್ತಿಪ್ರಕಾರವನ್ನು ವಿಮರ್ಶೆಮಾಡೋಣದರಿಂದಲೇ, ಅಭೇದಾರ್ಥವು ಶ್ರೀ ಕೃಷ್ಣನ ಹೃದಯದಿಂದ ದೂರೋತ್ಸಾರಿತವಾದುದೆಂದು ನಿಶ್ಚಿತವಾಗುವುದು. ಬಂಧು ಸ್ನೇಹದಿಂದಲೂ, ಗುರ್ವಾದಿಗಳ ಹನನನಿಮಿತ್ತಕವಾದ ಪಾಪಶಂಕೆಯಿಂದಲೂ, ಘೋರ ಕರ್ಮರೂಪವಾದ ಯುದ್ಧವನ್ನು ಮಾಡುವುದಿಲ್ಲವೆಂದು ಹೇಳಿ ತೂಷ್ಣೀಂಭಾವವನ್ನು ವಹಿಸಿದ ಅರ್ಜುನನನ್ನು ಕುರಿತು ಶ್ರೀ ಕೃಷ್ಣನ ತತ್ವವು ಅದ್ವೈತವಾಗಿದ್ದರೆ ಹೀಗೆ ಹೇಳುತ್ತಿದ್ದನು. "ಎಲೈ ಅರ್ಜುನನೇ! ನೀನು ಸಾಕ್ಷಾತ್ಪರಬ್ರಹ್ಮನಾಗಿರುತ್ತೀಯೇ! ನಿನ್ನ ದೇಹವು ನಿನ್ನ ಗಾಂಡೀವಧನುಸ್ಸು, ನಿನ್ನ ಬಾಣಗಳು, ನಿನ್ನ ಎದುರಿಗೆ ಪರಿದೃಶ್ಯರಾದ ಯೋಧರದೇಹಾದಿಗಳು ಮತ್ತು ಈ ಭಯಂಕರ ಪಟಾಟೋಪವೆಲ್ಲವೂ ಶುಕ್ತಿರೂಪ್ಯದಂತೆ ಅತ್ಯಂತ ಮಿಥ್ಯಾಭೂತವಾದುವು. ನಮ್ಮ

ಯುದ್ಧಾದಿಗಳು, ಭಯವು, ಪ್ರಾಪ್ಯಮಾನವಾದ ರಾಜ್ಯಾದಿಫಲಗಳು, ಅಥವಾ ಸ್ವರ್ಗಾದಿಗಳು ಇವೆಲ್ಲವೂ ಮಿಥ್ಯಾ. ನೀನು ಏತಕ್ಕೆ ವೃಥಾ ಕಂಬನಿಗರೆಯುವಿ ?"

ಈ ಉಪದೇಶವು ನಾಟಕಶಾಲೆಯ ವಿದೂಷಕನ ಮಾತಿನಂತೆ ವಿನೋದ ಜನಕವಾಗುವುದೇ ಹೊರತು, ಘೋರಯುದ್ಧದಲ್ಲಿ ಶತ್ರುಸಂಹಾರರೂಪವಾದ ಭಯಂಕರಕಾರ್ಯದಲ್ಲಿ ಉತ್ತೇಜನ ಕೊಡಲಾರವು. ಈ ರೀತಿ ಸುಳ್ಳುಯುದ್ಧದಲ್ಲಿ, ಸುಳ್ಳು ಯೋಧರನ್ನು, ಸುಳ್ಳು ಧನುರ್ಬಾಣಗಳಿಂದ, ಮಿಥ್ಯಾಸಂಹಾರವನ್ನು ಮಾಡಿ, ಸುಳ್ಳು ಕೃಷ್ಣನ ಸುಳ್ಳುಪ್ರಸಾದದಿಂದ, ಸುಳ್ಳುರಾಜ್ಯದ ಪ್ರಾಪ್ತಿಯು ಯಾವ ಪ್ರಾಜ್ಞನಿಂದ ಅಪೇಕ್ಷಿತವು? ಮತ್ತು ಜಗತ್ತೆಲ್ಲವೂ ಮಿಥ್ಯಾ ಎಂದು ತಿಳಿದ ಯಾವ ಪ್ರೇಕ್ಷಾವಂತನು ಅತಿ ಭಯಂಕರವಾದ ಘೋರಯುದ್ಧದಲ್ಲಿ ಬಹು ಪ್ರಯತ್ನ ಪೂರ್ವಕವಾಗಿ ಆಸಕ್ತನಾಗುವನು? ಅದ್ವೈತತತ್ವವನ್ನು ಉಪದೇಶಮಾಡುವ ಗುರುವಿಗೆ ಮೌನವು ಉಚಿತವು. ಶ್ರವಣಮಾಡಿದ ಶಿಷ್ಯನಿಗೆ ನಿವೃತ್ತಿಯು (ಮೋಟುಮರದಂತೆ ಅಚಲನಾಗಿರುವುದು) ಉಚಿತವು. ಬುದ್ಧನೂ ಅಂತ್ಯತತ್ವ ಸ್ವರೂಪವನ್ನು ಶಿಷ್ಯರಿಗೆ ಹೇಳಿ, ಹೆಚ್ಚು ವಿಚಾರಬಂದಾಗ ಮೌನವನ್ನು ಧರಿಸಿರುವನು. ಶಂಕರಾಚಾರ್ಯರೂ ಸಹ ನೂರಾವರ್ತಿ ಶಿಷ್ಯನು ಅದ್ವೈತತತ್ವದ ನಿಜ ಸ್ವರೂಪವಿಷಯದಲ್ಲಿ ಪ್ರಶ್ನೆಮಾಡಿದಾಗ ಗುರುಗಳು ಮೌನವನ್ನು ಧರಿಸಿದರೆಂದು ತಮ್ಮ ಭಾಷ್ಯದಲ್ಲಿ ಬರೆದಿರುತ್ತಾರೆ.* ಇದು ಅದ್ವೈತಗುರುಗಳಿಗೆ ಉಚಿತವೇ! ಅದ್ವೈತತತ್ವವನ್ನು ಶ್ರವಣಮಾಡಿದ (ಅತ ಏವ ಜ್ಞಾನಮಾರ್ಗವನ್ನು ಅವಲಂಬಿಸಿದ) ಶಿಷ್ಯನಿಗೂ ಶಂಕರಭಾಷ್ಯದಲ್ಲಿ ಹೇಳಿರುವಂತೆ ಕರ್ಮಪರಿತ್ಯಾಗವು ಉಚಿತವು. ಕರ್ಮನಿವೃತ್ತಿಯು ಅದ್ವೈತಜ್ಞಾನಕ್ಕೆ ಭೂಷಣವು.

ಜಗನ್ಮಿಥ್ಯಾತ್ವಜ್ಞಾನವು ಹೇಗೆ ಕರ್ಮಪ್ರವೃತ್ತಿಗೆ ವಿರೋಧಿಯೋ, ಹಾಗೆಯೇ ನಾನು ಬ್ರಹ್ಮನೆಂಬ ಜ್ಞಾನವೂ ಕೂಡ ನಿವೃತ್ತಿಗೇ ಕಾರಣವಾಗುವುದು. ವಿಧಿಬದ್ಧನಾದ ಮೋಕ್ಷಫಲಾಕಾಂಕ್ಷಿಯಾದ ಜೀವನು ಸ್ವವರ್ಣಾಶ್ರಮಧರ್ಮಗಳನ್ನು ಮಾಡುವುದು ಸಂಭಾವಿತವು. ನಾನು ಈಗಲೂ ಪರಿಪೂರ್ಣನಾದ ಬ್ರಹ್ಮನು ಎಂದು **ತಿಳಿದುಹೋದಮೇಲೆ** ಅದ್ವೈತಮತದರೀತ್ಯಾ ಅಜ್ಞರ ಉದ್ದಿಶ್ಯ ಏರ್ಪಟ್ಟ ಯುದ್ಧಾದಿ ಕರ್ಮಾದಿಗಳನ್ನು ಮಾಡುವುದು ಅಸಂಭಾವಿತವು.

---

* (3. 2. 17.) ಶಾಂಕರಭಾಷ್ಯದಲ್ಲಿರುತ್ತದೆ.

ಆದರಲ್ಲೂ ಬ್ರಹ್ಮೈಕ್ಯದ ಲೇಶ ಅನುಭವವನ್ನು ಹೊಂದಿದ ಅರ್ಜುನನಂಥಾ ಜ್ಞಾನಿಯು ಕರ್ಮಮಾರ್ಗದಲ್ಲಿ ಪ್ರವರ್ತಿಸುವುದು ಸರ್ವಥಾ ಅಸಂಭಾವಿತವು.*

ಹೀಗೆ ಅದ್ವೈತಮತದ ರೀತಿಯಿಂದ ಬ್ರಹ್ಮಜ್ಞಾನವಾಗಲೀ ಜಗದ್ಭ್ರಾಂತಿಜ್ಞಾನವಾಗಲೀ ಪ್ರಬಲವಾದ ಕರ್ಮಮಾರ್ಗದಲ್ಲಿ ಪ್ರವರ್ತಿಗೆ ಪ್ರತಿಬಂಧಕಗಳಾಗುವುವೇ ಹೊರತು ಉತ್ಸಾಹವೃದ್ಧಿಯನ್ನು ಉಂಟುಮಾಡಲಾರವು. ಶ್ರೀ ಕೃಷ್ಣನಾದರೋ ಅರ್ಜುನನಿಗೆ ತತ್ತ್ವೋಪದೇಶವನ್ನು ಮಾಡಿ ಪುನಃ ಪುನಃ "ಹೀಗೆ ತತ್ತ್ವವು ಇರುವುದರಿಂದ ನೀನು ಯುದ್ಧವನ್ನು ಮಾಡು" ಎಂದು ವಿಧಿಸುತ್ತಿರುವನು.

(1) **ಉತ್ತಿಷ್ಠ ಪರಂತಪ ।**—(2. 3.)

ಎಲೈ ಪರಂತಪನೇ ಯುದ್ಧದಲ್ಲಿ ಸನ್ನದ್ಧನಾಗು.

(2) ....**ತಸ್ಮಾದ್ಯುಧ್ಯಸ್ವ ಭಾರತ ।**—(2. 18.)

ಆದುದರಿಂದ ಯುದ್ಧವನ್ನು ಮಾಡು.

(3) **ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಂ ।**
—(2. 32.)

ಬಹು ಪುಣ್ಯವಂತರಾದ ಕ್ಷತ್ರಿಯರಿಗೆ ಇಂಥಾ ಯುದ್ಧವು ದೊರಕುವುದು. ಜೀವಚೈತನ್ಯವೇ ಪರಬ್ರಹ್ಮನಾದರೆ ಯುದ್ಧವು ದೊರಕದಿದ್ದರೆ ಆಗುವ ನಷ್ಟವೇನು?

(4) **ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ।**
—(2. 37.)

ಆದುದರಿಂದ ಯುದ್ಧಾರ್ಥವಾಗಿ ಮನಸ್ಸನ್ನು ಸ್ಥಿರಪಡಿಸಿಕೊಂಡು ಸನ್ನದ್ಧನಾಗು.

---

* "ನಾನು ಬ್ರಹ್ಮನೇ ಆದರೂ, ಈ ದಿವಸ ನನ್ನ ಬ್ರಹ್ಮಭಾವವು ಅಭಿವ್ಯಕ್ತವಾಗಿಲ್ಲ. ನನ್ನ ಬ್ರಹ್ಮಭಾವವು ವ್ಯಕ್ತವಾಗುವುದಕ್ಕಾಗಿ ನಾನು ಕರ್ಮಮಾಡಬೇಕು." ಎಂದು ಅದ್ವೈತಿಗಳು ಹೇಳಿದರೆ, ಈ ಮತವು ಯುದ್ಧಾದಿಗಳಲ್ಲಿ ಪ್ರವೃತ್ತಿಗೆ ಕಾರಣವಾಗಬಹುದು. ಆದರೆ ಇದನ್ನು ಅದ್ವೈತಿಗಳು ಅಂಗೀಕರಿಸಲಾರರು. 1. ನಿರ್ವಿಶೇಷನಾದ ಮತ್ತು ಸ್ವಪ್ರಕಾಶನಾದ ಬ್ರಹ್ಮನಿಗೆ ಅಭಿವ್ಯಕ್ತಿ ಎಂಬ ಅವಸ್ಥಾವಿಶೇಷವನ್ನು ಅದ್ವೈತಿಗಳು ಒಪ್ಪುವುದಿಲ್ಲ. 2. ನನ್ನ ಬ್ರಹ್ಮಭಾವವು ಈ ದಿವಸ ಅಭಿವ್ಯಕ್ತವಾಗಿಲ್ಲವೆಂಬುದೂ ಅವರ ಮತದ ರೀತ್ಯಾ ಸುಳ್ಳು. ನಾನು **ಈಗಲೂ** ಪರಿಪೂರ್ಣನಾದ, ನಿತ್ಯಾಭಿವ್ಯಕ್ತನಾದ ಪರಬ್ರಹ್ಮನಿದ್ದೇನೆ ಎಂಬುದೇ ಅದ್ವೈತಜ್ಞಾನಾಕಾರವು. ಇಂಥಾ ಜ್ಞಾನವು ಹೇಗೆ ತಾನೇ ಸ್ವಕರ್ಮಾಚರಣೆಯಲ್ಲಿ ಉತ್ಸಾಹವನ್ನು ಕೊಡುವುದು?

(5) **ತತೋಯುದ್ಧಾಯ ಯುಜ್ಯಸ್ವ ।**—(2. 38.)

ಆದುದರಿಂದ ಯುದ್ಧಾರ್ಥವಾಗಿ ಸಿದ್ಧನಾಗು.

(6) **ಯುಧ್ಯಸ್ವವಿಗತಜ್ವರಃ ।**—(3. 30.)

ನಿರ್ಭಯನಾಗಿ ಯುದ್ಧಮಾಡು.

(7) **ಉತ್ತಿಷ್ಠಭಾರತ ।**—(4. 42.)

ಅರ್ಜುನ! ಯುದ್ಧಕ್ಕೆ ಏಳು!

(8) **ಮಾತೇಸಂಗೋಽಸ್ತ್ವಕರ್ಮಣಿ ।**

ನಿನಗೆ ಸ್ವಕರ್ಮಪರಿತ್ಯಾಗದಲ್ಲಿ ಸ್ನೇಹ ಬೇಡ.

ಈ ರೀತಿಯಾಗಿ ಕೈಯಲ್ಲಿ ಚಾವಟಿಯನ್ನು ಹಿಡಿದಿರುವ, ಪಾರ್ಥಸಾರಥಿಯಾದ ಶ್ರೀ ಕೃಷ್ಣನ ವಿಧಿವಾಕ್ಯಗಳಿಂದ ಆತನು ಉಪದೇಶಮಾಡಿದ ತತ್ವವು ಯುದ್ಧಾದಿ ಸ್ವಕರ್ಮಗಳಿಗೆ ಉಪೋದ್ಬಲಕವೇ ಹೊರತು. ಸ್ವಲ್ಪವಾದರೂ ಉತ್ಸಾಹನಾಶಕವಲ್ಲವೆಂದು ಸಿದ್ಧವಾಗುವುದು. ಅದ್ವೈತಿಗಳು ಹೇಳುವಂತೆ, ಬ್ರಹ್ಮವು ಸತ್ಯವು; ಬ್ರಹ್ಮಾತಿರಿಕ್ತ ಪ್ರಪಂಚವು ಮಿಥ್ಯಾ; ಕರ್ಮಾದಿಗಳು ಅಜ್ಞರ ಉದ್ದಿಶ್ಯ ಹೇಳಿದುದು ಎಂದು ಶ್ರೀ ಕೃಷ್ಣನು ಉಪದೇಶಮಾಡಿದ್ದರೆ, ಮೊದಲೇ ಆರಿಹೋಗುತ್ತಿರುವ ಅಗ್ನಿಗೆ ತಣ್ಣೀರನ್ನು ಎರಚಿದಂತೆ, ಅರ್ಜುನನು ಮಿಥ್ಯಾಭೂತವಾದ ಈ ಹಾಳು ಪ್ರಪಂಚವೂ, ಜಯವೂ, ರಾಜ್ಯವೂ ಏನಾದರೇನು? ಎಂದು ಕೃತನಿಶ್ಚಯನಾಗಿ ರಥದಲ್ಲಿ ಕುಳಿತಿರುವುದನ್ನು ಬಿಟ್ಟು, ದೀರ್ಘಾಕಾರವಾಗಿ ದೇಹವನ್ನು ಚಾಚಿ ನಿದ್ರೆಮಾಡಬಹುದಾಗಿತ್ತು.* ಅರ್ಜುನನು ಇನ್ನೂ ಅಜ್ಞಾನಿಯಾದುದರಿಂದ ಯುದ್ಧಮಾಡಿದನೆಂಬುದು ಅಸಂಗತವು. ಶ್ರೀ ಕೃಷ್ಣನಂಥಾ ಜಗದ್ಗುರುವಿನಿಂದ ಅತಿಪ್ರೀತಿಪೂರ್ವಕವಾದ ಉಪದೇಶವನ್ನು ಹೊಂದಿ, ದಿವ್ಯದೃಷ್ಟಿಯನ್ನು ಪಡೆದು, ಆತನಿಂದ ಪರಮಾನುಗ್ರಹಪೂರ್ವಕವಾಗಿ, ಹೇ ಅನಘ! ಎಂದು ಕರೆಯಲ್ಪಟ್ಟ, ಇಂದ್ರಾವತಾರನೆಂದು ಸುಪ್ರಖ್ಯಾತನಾದ ಅರ್ಜುನನೂ ತತ್ವಜ್ಞಾನವನ್ನು ಪಡೆಯದೆ,† ಉಪದೇಶವು ಆದ ಉತ್ತರಕ್ಷಣದಲ್ಲಿಯೇ, ಅದ್ವೈತಮತದ

---

* ನಿದ್ರೆಯಲ್ಲಿ ಬ್ರಹ್ಮೈಕ್ಯಾನುಭವವು ಬರುವುದು; ಸೌಷುಪ್ತಿಕ ಸುಖವು ಪರಬ್ರಹ್ಮಾನಂದವೇ ಎಂದು ಅದ್ವೈತತತ್ವದ ರಹಸ್ಯಪ್ರಕ್ರಿಯೆಯು. ಕೆಲವರು ಅದ್ವೈತಿಗಳು ಅಷ್ಟಕ್ಕೂ ತೃಪ್ತರಾಗದೆ ತಮ್ಮ ಯಾವತ್ತು ವಿಷಯಾನುಭವಜನಿತಾನಂದವೂ ಬ್ರಹ್ಮಾನಂದವೆಂದೇ ಹೇಳುವರು.

† **"ಪಾರ್ಥಾರ್ಷ್ಟಿಷೇಣ"** ಇತ್ಯಾದಿ ಭಾಗವತಶ್ಲೋಕಗಳಲ್ಲಿ ದೇಹಾತ್ಮಭ್ರಮರಹಿತರಾದ, ದೇವಮಾಯೆಯನ್ನು ದಾಟಿರುವ ಶುಕ, ವಾಮದೇವಾದಿ ಅನೇಕ ಜ್ಞಾನಿಗಳ ಮಧ್ಯದಲ್ಲಿ ಅರ್ಜುನನೂ ಒಬ್ಬನೆಂದು ಪರಿಗಣನೆಮಾಡಿರುತ್ತಾರೆ.

ರೀತ್ಯಾ ಮಿಥ್ಯಾಭೂತವು ಮತ್ತು ಮೋಕ್ಷೋಪಯೋಗಿಯಲ್ಲವೆಂದು ಸುನಿಶ್ಚಿತವಾದ, ಭಯಂಕರ ಕರ್ಮದಲ್ಲಿ ಉದ್ಯುಕ್ತನಾದನೆಂದು ಹೇಳುವುದು ಅತ್ಯಂತ ವಿರುದ್ಧವಾದಪ್ರಕ್ರಿಯೆಯು.

ದ್ವೈತಮತದಲ್ಲಾದರೋ "ದುರ್ಜನರಾದ ಧಾರ್ತರಾಷ್ಟ್ರರನ್ನು ಕಡಿ! ಹೊಡಿ! ಬಡಿ!" ಮುಂತಾದ ವೀರ್ಯವರ್ಧಕವಾದ ಉಪದೇಶವು ತತ್ವಾನುಗುಣವೇ ಆಗಿರುವುದು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಷಡ್ವರ್ಗಗಳನ್ನೂ ಸಹ **ಸ್ವರೂಪೇಣ** ಪರಿತ್ಯಜಿಸಬೇಕೆಂದು ದ್ವೈತಿಗಳು ಹೇಳುವುದಿಲ್ಲ. ಸದ್ವಿಷಯಗಳಲ್ಲಿ ಕಾಮವೂ, ದುರ್ವಿಷಯಗಳಲ್ಲಿ ಕ್ರೋಧವೂ, ಅಪಾತ್ರರಿಗೆ ದಾನಮಾಡುವುದರಲ್ಲಿ ಲೋಭವೂ, ಪರಮಾತ್ಮನಲ್ಲಿ ಅತ್ಯಂತ ಪ್ರೀತಿಯೆಂಬ ಮೋಹವೂ, ನಾನು ಪುರುಷೋತ್ತಮನ ಭೃತ್ಯನೆಂಬ ಮದವೂ, ಬ್ರಹ್ಮದ್ವೇಷಿಗಳ ವಿಷಯದಲ್ಲಿ ಮಾತ್ಸರ್ಯವೂ ಅವಶ್ಯಕವೇ ಆಗಿರುವುವು. ಹೀಗೆಯೇ ಪ್ರಕೃತದಲ್ಲಿ ಭೂಭಾರಹರಣಾರ್ಥವಾಗಿ ಅವತರಿಸಿದ ಪರಬ್ರಹ್ಮನಾದ ಶ್ರೀಮನ್ನಾರಾಯಣನ ಸೇವಾರೂಪವಾದ ಧರ್ಮಯುದ್ಧದಲ್ಲಿ, ದುರ್ಯೋಧನಾದಿ ದುರ್ಜನರ ಹನನರೂಪವಾದ ಸ್ವವರ್ಣಾಶ್ರಮೋಚಿತಕರ್ಮವನ್ನು, ಬಂಧುಸ್ನೇಹದಿಂದ ಅಧರ್ಮವೆಂದು ವಿಪರೀತವಾಗಿ ತಿಳಿದು, ಪರಿತ್ಯಾಗಮಾಡಿದ ಅರ್ಜುನನು ಅಪರಾಧಿಯಾದನು. ಅರ್ಜುನನಿಗೆ ಮಹಾಪುಣ್ಯ ನಾಶವೂ, ಪಾಪಪ್ರಾಪ್ತಿಯೂ ಪ್ರಸಕ್ತವಾದುದರಿಂದ, ಭಕ್ತಾರ್ತಿಭಂಜಕನಾದ ಶ್ರೀ ಕೃಷ್ಣನು ಆತನಿಗೆ ಸಮಸ್ತ ಪರಾಪರತತ್ವಗಳನ್ನೂ ಉಪದೇಶಮಾಡಿದನು. ಅದು ಹೇಗೆಂದರೆ "ಎಲೈ ಅರ್ಜುನನೇ! ನಾನು ಪರಬ್ರಹ್ಮನು; ನೀನೇ ಮೊದಲಾದ ಈ ಯೋಧರೆಲ್ಲರೂ ವಿಧಿಬದ್ಧರಾದ ಚೇತನರು. ಜೀವರುಗಳು ಸ್ವರೂಪೇಣ ನಿತ್ಯರು. ಅವರನ್ನು ನಿನ್ನ ಬಾಣಗಳು ಸಂಹರಿಸುವುದಿಲ್ಲವಾದುದರಿಂದ ನೀನು ಅವರ ಉದ್ದಿಶ್ಯ ಶೋಕಪಡಬೇಡ. ಅವರ ದೇಹನಾಶವು ಅವಶ್ಯಕವು. ಅವರು ದುರ್ಜನನ ಪಕ್ಷಪಾತಿಗಳಾಗಿ ನನ್ನ ವಿಧಿಯನ್ನು ಅತಿಕ್ರಮಿಸಿ ವಿಷ್ಣುವೈಷ್ಣವದ್ವೇಷಿಗಳಾಗಿರುವುದರಿಂದ ಅವರಿಗೆ ದೇಹನಾಶರೂಪವಾದ ದಂಡವು ನನಗೆ ಇಷ್ಟಕರವು. "ಜಹಿಶತ್ರುಂ ಮಹಾಬಾಹೋ!" ನೀನು ನನ್ನ ದ್ವೇಷಿಗಳಾದ ಅವರಲ್ಲಿ ಅಭಿಮಾನ ಮಾಡಿ ಅವರನ್ನು ಸಂಹಾರಮಾಡದೆ ಇದ್ದರೆ, (ರಾಜದ್ರೋಹಿಯಲ್ಲಿ ಪ್ರೀತಿಮಾಡುವ ಪ್ರಜೆಯು ರಾಜದ್ವೇಷಿಯಾಗುವಂತೆ) ನೀನೂ ನನ್ನ ದ್ವೇಷಿಯಾಗುವಿ. ನೀನು ಅವರನ್ನು ಸಂಹಾರಮಾಡಿದರೆ, (ರಾಜಾಜ್ಞಾನುಸಾರ ರಾಜದ್ರೋಹಿಯನ್ನು ಶಿಕ್ಷಿಸುವ ರಾಜಭಟನಂತೆ) ನನ್ನ ಪ್ರೀತಿಗೆ

ಪಾತ್ರನಾಗುವಿ. ನನ್ನ ಪ್ರೀತಿಯಿಂದ ನಿನಗೆ ಬಹಳ ಲಾಭವುಂಟು. ನೀನು ವರ್ಣಾಶ್ರಮೋಚಿತಯುದ್ಧವನ್ನು ಮಾಡಿ, ನನಗೆ ಅರ್ಪಿಸಿ ನನ್ನಲ್ಲಿ ಶರಣಾಗತನಾದರೆ "ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ." ನಾನು ನಿನ್ನ ಸರ್ವ ಪಾಪಗಳನ್ನೂ ಭಸ್ಮಮಾಡಿ ನಿನಗೆ ಜ್ಞಾನಾದಿಗಳನ್ನು ಕೊಟ್ಟು ಶಾಶ್ವತಸ್ಥಾನದಲ್ಲಿ ಸುಖಪಡಿಸುವೆನು. ನನಗೆ ಯಾರಲ್ಲೂ ಪಕ್ಷಪಾತವಿಲ್ಲ. "ಯೇ ಯಥಾಮಾಂ ಪ್ರಪದ್ಯಂತೇ ತಾಂಸ್ತಥೈವಭಜಾಮ್ಯಹಂ." ಸೇವಾನುಗುಣವಾಗಿ ನಾನು ಫಲ ಕೊಡತಕ್ಕವನು. ನೀನು ಯುದ್ಧಪರಿತ್ಯಾಗಮಾಡಿದರೆ ನಿನಗೆ ಬಹಳ ಹಾನಿಯುಂಟು. "ಸ್ವಧರ್ಮಂ ಕೀರ್ತಿಂ ಚ ಹಿತ್ವಾಪಾಪ ಮವಾಪ್ಸ್ಯಸಿ" ಪಾಪವನ್ನು ಹೊಂದುವಿ. ನಿನ್ನ ಯಾವತ್ತು ದೇಹಬಲವನ್ನು ಉಪಯೋಗಿಸಿ, ದುಷ್ಟರನ್ನು ಸಂಹಾರ ಮಾಡಿ, ಆ ಪುಣ್ಯಫಲವನ್ನು "ಕುರುಷ್ವಮದರ್ಪಣಂ" ಎಂದರೆ ನನಗೆ ಅರ್ಪಿಸು. ನನ್ನ ಆಜ್ಞೆಯನ್ನು ಮೀರದೆ ದುಷ್ಟಬಂಧುಗಳಲ್ಲಿ ಮೋಹವನ್ನು ಬಿಟ್ಟು, "ಯುಧ್ಯಸ್ವ ವಿಗತಜ್ವರಃ" ಪಾಪಶಂಕೆಯಿಲ್ಲದೆ ನಿರ್ಭಯನಾಗಿ ಯುದ್ಧ ಮಾಡು."

ಇಂಥಾ ಉಪದೇಶವು ಮತ್ತೂ ಅಧಿಕವಾಗಿ, ವಿಷ್ಣು ಪ್ರೀತಿಕರವಾದ ಉದ್ಯೋಗಗಳಲ್ಲಿ ಮನುಷ್ಯನನ್ನು ಆಸಕ್ತನನ್ನಾಗಿ ಮಾಡುವುದು. ಅರ್ಜುನನೂ ಕೂಡ ದುರ್ಜನರಲ್ಲಿ ಪ್ರೀತಿಮಾಡಿದ ತನ್ನ ಅಪರಾಧವನ್ನು ಒಪ್ಪಿಕೊಂಡು ಸಂತೋಷದಿಂದ ಯುದ್ಧದಲ್ಲಿ ಪ್ರವೃತ್ತನಾಗಿದ್ದಾನೆ.

ನಷ್ಟೋಮೋಹಃ ಸ್ಮೃತಿರ್ಲಬ್ಧಾತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿಗತಸಂದೇಹಃ ಕರಿಷ್ಯೇವಚನಂತವ ॥—(18. 73.)

ಎಲೈ ಅಚ್ಯುತನೇ! ನನ್ನ ವಿಪರೀತ ಜ್ಞಾನವು ಹೋಯಿತು. ನನ್ನ ಪೂರ್ವಜ್ಞಾನವು ಪ್ರಾಪ್ತವಾಯಿತು. ನಾನು ನಿವೃತ್ತಸಂದೇಹನಾಗಿ ಯುದ್ಧಸನ್ನದ್ಧನಾಗಿರುವೆನು. ನಿನ್ನ ಅಪ್ಪಣೆಯನ್ನು ನಡೆಸುತ್ತೇನೆ. ಫಲಿತಾಂಶವೇನೆಂದರೆ, ನನಗಿಂತ ಶ್ರೇಷ್ಠನಾದ, ಸತ್ಕರ್ಮಗಳಿಗೆ ಫಲಪ್ರದನಾದ ಪರಬ್ರಹ್ಮನು ಒಬ್ಬನು ನನ್ನಿಂದ ಭಿನ್ನನಾಗಿರುವನೆಂದು ತಿಳಿದರೆ, ವಿಧವಿಧವಾದ ಸ್ವಧರ್ಮಾನುಷ್ಠಾನಗಳಲ್ಲಿ ಅಧಿಕಾರಿಗಳಿಗೆ ಆಸಕ್ತಿಯುಂಟಾಗುವುದು. ನಾನೇ ಬ್ರಹ್ಮನು ನನ್ನ ಕರ್ಮಾದಿಗಳು ಮಿಥ್ಯಾಭೂತವು ಎಂಬ ತತ್ವಜ್ಞಾನವು ಸಹಜವಾದ ಜಾಡ್ಯದ ವೃದ್ಧಿಯನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ.

10

ಪ್ರಶ್ನೆ—ಸ್ವಾಮಿ! ಶಂಕರಾಚಾರ್ಯರು ಕರ್ಮಪರಿತ್ಯಾಗವು ಉಚಿತವೆಂದು ಗೀತಾಭಾಷ್ಯದಲ್ಲಿ ಹೇಳಿರುತ್ತಾರೆಯೇ ?

ಉತ್ತರ—"**ಮುಮುಕ್ಷೋಃ ಸರ್ವಕರ್ಮ ಸಂನ್ಯಾಸವಿಧಾನಾತ್**" ಎಂದು ತಮ್ಮ ಗೀತಾಭಾಷ್ಯದಲ್ಲಿ ಸರ್ವ ಮುಮುಕ್ಷುಗಳಿಗೂ ಕರ್ಮಪರಿತ್ಯಾಗವು ವಿಧಿಸಲ್ಪಟ್ಟಿರುವುದೆಂದು ಬರೆದಿರುತ್ತಾರೆ. ಈ ವಾಕ್ಯದ ಪರ್ಯಾಲೋಚನೆಯಿಂದ ವೇದಾಂತ (ಬ್ರಹ್ಮಸೂತ್ರ) ಶ್ರವಣಕ್ಕೆ ಆರಂಭಿಸಿದವನಿಗೆ ವಿದ್ಯುಕ್ತಕರ್ಮಪರಿತ್ಯಾಗವು ಶಂಕರಾಚಾರ್ಯರಿಗೆ ಸಮ್ಮತವೆಂದು ತೋರುವುದು. ಹೇಗೆಂದರೆ, ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಫಲಭೋಗವೈರಾಗ್ಯ, ಶಮದಮಾದಿಸಾಧನಸಂಪತ್ತು, ಮತ್ತು **ಮುಮುಕ್ಷುತ್ವ** ಎಂಬ ನಾಲ್ಕು ಧರ್ಮಗಳುಳ್ಳವನು ವೇದಾಂತಶಾಸ್ತ್ರಾಭ್ಯಾಸಕ್ಕೆ ಅಧಿಕಾರಿಯೆಂದು ಶಾಂಕರಭಾಷ್ಯದಲ್ಲಿ ಹೇಳಿರುತ್ತಾರೆ. ಈ ನಾಲ್ಕರಲ್ಲಿ **ಮುಮುಕ್ಷಾ** ಎಂದರೆ ಮೋಕ್ಷೇಚ್ಛೆಯು ಒಂದು ಧರ್ಮವಾಗಿರುವುದು. ಆದುದರಿಂದ, ಮುಮುಕ್ಷುವಿಗೆ ಕರ್ಮಪರಿತ್ಯಾಗವು ಉಚಿತವೆಂಬ ಶಂಕರಾಚಾರ್ಯರ ಮಾತಿನಿಂದ, ಅದ್ವೈತವೇದಾಂತಾಭ್ಯಾಸದಲ್ಲಿ ಪ್ರವಿಷ್ಟರಾದ ಸರ್ವ ಬ್ರಾಹ್ಮಣರೂ ನಿತ್ಯನೈಮಿತ್ತಿಕಕರ್ಮಗಳನ್ನು ಪರಿತ್ಯಾಗಮಾಡಬಹುದೆಂದು ಅವರ ಅಭಿಪ್ರಾಯವೆಂದು ಸಿದ್ಧವಾಗುವುದು. ಇಷ್ಟೇ ಅಲ್ಲ! ಮುಮುಕ್ಷುತ್ವಾದಿ ಧರ್ಮಗಳಿಂದ ರಹಿತರಾದ ಗೃಹಸ್ಥರಿಗೂ ಕೂಡ ನಿತ್ಯಕರ್ಮಗಳನ್ನು ಪರಿತ್ಯಾಗಮಾಡುವುದರಿಂದ ಯಾವ ಹಾನಿಯೂ ಇರುವುದಿಲ್ಲವೆಂದು ತೋರಿಸುವ ಯುಕ್ತಿಯನ್ನು ಸ್ಪಷ್ಟವಾಗಿ ಗೀತಾಭಾಷ್ಯದ ತೃತೀಯಾಧ್ಯಾಯದಲ್ಲಿ ಬರೆದಿರುತ್ತಾರೆ. ಆ ವಾಕ್ಯಗಳನ್ನು ಉದಾಹರಿಸಿ ಗುಣದೋಷವಿಮರ್ಶೆಯನ್ನು ಸಾವಧಾನವಾಗಿ ಮೋಕ್ಷಸಾಧನನಿರೂಪಣಾವಸರದಲ್ಲಿ ಮಾಡುತ್ತೇವೆ. ಸದ್ಯದಲ್ಲಿ, ಅದ್ವೈತಮತದರೀತ್ಯಾ **ಮುಮುಕ್ಷುಮಾತ್ರನಿಗೆ** ಸ್ವಕರ್ಮಪರಿತ್ಯಾಗವು ವಿಹಿತವಾಗಿರುವುದರಿಂದ, ತತ್ವಜ್ಞಾನಿಶಿಖಾಮಣಿಯಾದ ಅರ್ಜುನನಿಗೆ ಕ್ಷತ್ರಿಯೋಚಿತವಾದ ಯುದ್ಧಕರ್ಮಪರಿತ್ಯಾಗದಿಂದ ಏನೂ ಬಾಧಕವಿಲ್ಲವೆಂದು ಅವರ ಮತದ ರೀತ್ಯಾ ನಿರ್ವಿವಾದವಾಗಿ ಸಿದ್ಧವಾಗುವುದು. ಹೀಗೆ ಕರ್ಮಮಾರ್ಗದಲ್ಲಿ ಪ್ರವೃತ್ತಿಯಿಂದ ಫಲವಿಲ್ಲವೆಂದೂ, ಕರ್ಮಪರಿತ್ಯಾಗದಿಂದ ಪ್ರತ್ಯವಾಯವಿಲ್ಲವೆಂದೂ ಅರ್ಜುನನು ತಿಳಿಯುವವನಾದರೆ, ಆತನು ಸಮುನ್ನದ್ಧವಾದ, ಭಯಂಕರ ಯುದ್ಧದಲ್ಲಿ, ಅಭಿವೃದ್ಧವಾದ ಉತ್ಸಾಹದಿಂದ ಯುದ್ಧಮಾ

ಡಿದುದು, ನಿಷ್ಕಾರಣವಾದ ಅಕಾಂಡಕಾಂಡವದಂತೆ ಅಸಂಗತವಾಗುವುದು. ಆದುದರಿಂದ, ಶ್ರೀ ಕೃಷ್ಣನು ನಿಷ್ಪ್ರವೃತ್ತಿಗೆ ಕಾರಣವಾದ ಅದ್ವೈತತತ್ವವನ್ನು ಅರ್ಜುನನಿಗೆ ಉಪದೇಶಮಾಡಿಲ್ಲವೆಂದು ನಿಶ್ಚಯಿಸಬೇಕು.

ಈ ರೀತಿಯಾಗಿ 1. "**ಅನ್ಯ**" ಶಬ್ದದಿಂದ ಸಹಿತವಾದ ಸಾಕ್ಷಾಜ್ಜೀವ ಬ್ರಹ್ಮರ ಭೇದಬೋಧಕ ವಚನಗಳು; 2. ಜೀವಬ್ರಹ್ಮರುಗಳ ಪ್ರತ್ಯೇಕವಾದ ನಿತ್ಯವಾದ ಅವಸ್ಥಿತಿಯು; 3. ನಹ್ಯನ್ಯೋನ್ಯಾತ್ಮನಾಭವತಿ ಇತ್ಯಾದಿ ಪೂರ್ವ ಪ್ರದರ್ಶಿತನ್ಯಾಯಗಳು; 4. ಭೇದಸಾಧಕವಾದ ಸರ್ವಜ್ಞತ್ವಾಲ್ಪಜ್ಞತ್ವಾದಿ ರೂಪ ಅನೇಕ ವಿರುದ್ಧ ಧರ್ಮಗಳು; 5. ಭಿನ್ನರಾದ ಜೀವಪರಮಾತ್ಮರನ್ನುಳ್ಳ ಮುಕ್ತ್ಯವಸ್ಥಾಕಥನವು; 6. ಭೇದಾವಗಾಹಿಯಾದ ಅಪರೋಕ್ಷಜ್ಞಾನವರ್ಣನೆಯು; 7. ಅಭೇದನಿಷೇಧಕವಾದ ಸಾಕ್ಷಾದ್ವಚನಗಳು; 8. ಅಭೇದಬಾಧಕಗಳಾದ ಅನುಭವಭೇದವೇ ಮೊದಲಾದ ಯುಕ್ತಿಗಳು; 9. ಉಪಕ್ರಮಾದಿ ಲಿಂಗಸದ್ಭಾವವು; ಮತ್ತು 10. ಯುದ್ಧೋಪದೇಶಪ್ರಕರಣದಲ್ಲಿ ಉತ್ಸಾಹಭಂಜಕವಾದ ಅಭೇದತತ್ವದ ಅನೌಚಿತ್ಯವು; ಇಷ್ಟು ವಿಷಯಗಳ ವಿಮರ್ಶೆಯಿಂದ, ಭಗವದ್ಗೀತೆಯನ್ನು ಉಪದೇಶಿಸಿದ ಪರಮಚೇತನನಾದ ಶ್ರೀ ಕೃಷ್ಣನಿಗೆ, "ಜೀವಚೈತನ್ಯವೇ ಪರಬ್ರಹ್ಮಚೈತನ್ಯವು. ಉತ್ತಮಾಧಮ ಭಾವದಿಂದ ಸಹಿತವಾದ ಬಹುಚೇತನರು ಇಲ್ಲ." ಎಂಬ ಅದ್ವೈತ ತತ್ವವು ಅತ್ಯಂತ ವಿರುದ್ಧಪ್ರಕ್ರಿಯೆಯೆಂದೂ; ಮತ್ತು ನಿತ್ಯವೂ, ಅತ್ಯಂತ ಸತ್ಯವೂ, ಆದ ಪಂಚಭೇದವು ಆತನಿಗೆ ಪ್ರಿಯತಮವಾದ ಮತವೆಂದೂ ಸಿದ್ಧವಾಗುವುದು. ಇಷ್ಟು ಪ್ರಮಾಣಗಳನ್ನು ಅತಿಕ್ರಮಿಸಿ ಅಭೇದವು ಗೀತಾರ್ಥವು, ಶ್ರೀ ಕೃಷ್ಣನಿಗೆ ಸಮ್ಮತವೆಂದು ಹೇಳುವವನು ಮಿತಿಮೀರಿದ ಭ್ರಾಂತನು ಅಥವಾ ಪ್ರಬಲವಾದ ದುರಾಗ್ರಹಕ್ಕೆ ವಶನಾದವನೆಂದು ನಿಸ್ಸಂಶಯವಾಗಿ ಹೇಳಬಹುದು.* ಆದುದರಿಂದ "**ಪ್ರತಿಜಾನೇಪ್ರಿಯೋಸಿಮೇ**" ಎಂದು

---

* ಶ್ರೀಪಾದವಡೆಯರ ಈ ನಿರ್ಣಯವು ಸಕಲ ಪಾಶ್ಚಾತ್ಯ ವಿದ್ವಾಂಸರಿಂದಲೂ ಅನುಮೋದಿಸಲ್ಪಟ್ಟದೆ. ಭಗವದ್ಗೀತೆಯು ಅಭೇದಸಾಧಕವಲ್ಲ ಮತ್ತು ಕರ್ಮಾಕರಣವನ್ನು ಬೋಧಿಸುವುದಿಲ್ಲವೆಂಬ ವಿಷಯದಲ್ಲಿ ಅವರು ನಿರ್ವಿವಾದರಾಗಿರುತ್ತಾರೆ. ಪಾಶ್ಚಾತ್ಯ ಪಂಡಿತಾಗ್ರಣಿಯಾಗಿ ಆಕ್ಸಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತಮಹೋಪಾಧ್ಯಾಯ ಪದವಿಯಲ್ಲಿ ಆರೂಢನಾದ **ಮ್ಯಾಕ್ಡೊನೆಲ್** ಎಂಬ ಗ್ರಂಥಕರ್ತನ ಅಭಿಪ್ರಾಯವು ಹೀಗಿರುತ್ತದೆ:—

Sankara........was the principal exponent of the Adwaita doctrine or Strict Monism....His Gita Bhashya or commentary on

ಭಕ್ತರಲ್ಲಿ ಅಧಿಕವಾದ ಪ್ರೀತಿಯಿಂದ "ನಾನೇ ಪುರುಷೋತ್ತಮನು; ನನ್ನಲ್ಲಿ ಶರಣು ಹೊಂದು ಎಂದು ಶಪಥಮಾಡಿ ಹೇಳುವ ಶ್ರೀಕೃಷ್ಣನ ವಾಕ್ಯಗಳನ್ನು ನಂಬಿ, ಆತನೇ ಸರ್ವಜೀವವಿಲಕ್ಷಣನಾದ ಪರಬ್ರಹ್ಮನೆಂದು ಭಕ್ತಿಯಿಂದ ಉಪಾಸನೆ ಮಾಡುವವನು ಶೀಘ್ರದಲ್ಲಿಯೇ, ಸಂಸಾರಸಾಗರವನ್ನು ಗೋವತ್ಸಪದದಂತೆ, ಅನಾಯಾಸದಿಂದ ದಾಟುವುದರಲ್ಲಿ ಸಂಶಯವಿಲ್ಲ.

---

the Bhagavadgita is rather an independent religio-philosophic treatise than a commentary in the strict sense. From the Gita, he tries to adduce proofs for his own doctrine....especially in its esoteric part relating to the performance of social duties:— India's Past. By A. A. Macdonell; Emeritus professor of Sanskrit in the University of Oxford.

ಇದರ ಅರ್ಥವು:—ಶಂಕರಾಚಾರ್ಯರು ಅದ್ವೈತತತ್ವದ ಅಥವಾ ಐಕ್ಯವಾದದ ಪ್ರತಿಪಾದಕರಲ್ಲಿ ಪ್ರಧಾನರು. ಗೀತಾಭಾಷ್ಯವೆಂಬ ಅವರ ಗೀತಾವ್ಯಾಖ್ಯಾನವು ಒಂದು **ಸ್ವತಂತ್ರವಾದ** ಧರ್ಮ ಮತ್ತು ತತ್ವಮೀಮಾಂಸಾಗ್ರಂಥವೇಹೊರತು ಸರಿಯಾದ ವ್ಯಾಖ್ಯಾನವೆನ್ನಿಸುವುದಿಲ್ಲ. ಅವರು ಗೀತೆಯಿಂದ **ತಮ್ಮ ಸ್ವಂತತತ್ವಗಳಿಗೆ** ಅನುಕೂಲವಾಗುವಂತೆ ರುಜುವಾತುಗಳನ್ನು ತೋರಿಸುವುದಕ್ಕೆ ಪ್ರಯತ್ನಮಾಡುತ್ತಾರೆ. (ಗೀತೆಯ ಅಭಿಪ್ರಾಯವು ಇರುವಂತೆ ವ್ಯಾಖ್ಯಾನಮಾಡಿಲ್ಲವೆಂದು ಭಾವವು.) ಅದರಲ್ಲಿಯೂ ವರ್ಣಾಶ್ರಮಧರ್ಮಪ್ರವೃತ್ತಿಗೆ ಸಂಬಂಧವಾದ ಬಹಿರಂಗ ಭಾಗದಲ್ಲಿ, ಗೀತೆಯಲ್ಲಿ (ಸ್ವಲ್ಪವೂ ರುಜುವಾತು ಇಲ್ಲದಿದ್ದರೂ), ತಮ್ಮ ಸ್ವಂತ ತತ್ವಗಳಿಗೆ ರುಜುವಾತು ತೋರಿಸುವುದಕ್ಕೆ ಪ್ರಯತ್ನಮಾಡುತ್ತಾರೆ.

ಘನಹೊಂದಿದ ಕೀರ್ತಿಯುಳ್ಳ, ಕಲ್ಕತ್ತಾ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಪದವಿಯಲ್ಲಿರುವ ಡಾಕ್ಟರ್ ಉರ್ಕ್ಯು ಹಾರ್ಟ್ ಎಂಬ ವಿದ್ವಾಂಸನೂ ಭಗವದ್ಗೀತೆಗೆ ದ್ವೈತದಲ್ಲಿಯೇ ತಾತ್ಪರ್ಯವಿರುವುದೆಂದು ನಿಶ್ಚಯಿಸಿರುತ್ತಾನೆ:—

"Such a work as the Gita would naturally give encouragement to dualistic tendencies."—p. 44. The Vedanta and Modern Thought by W. S. Urquhart. M. A; D. Litt.

ಅರ್ಥವು:—ಗೀತೆಯಂಥಾ ಗ್ರಂಥವು, ಸಹಜವಾಗಿಯೂ, ದ್ವೈತರೀತಿಯಿಂದ ತತ್ವಪ್ರತಿಪಾದನೆಗೆ ಉತ್ತೇಜನ ಕೊಡುವುದು.—(H. S.)

IV

ಜೀವಪಾರತಂತ್ರ್ಯ ಸಮರ್ಥನವು.

---

1 ಮತ್ತು 2—8—1930 ರಲ್ಲಿ

ಸಭಿಕರು—ಧರ್ಮಾಧಿಕಾರಿಗಳು, ವಿದ್ವಾಂಸರು ಮತ್ತು ವಿದ್ಯಾರ್ಥಿಗಳು.

ಶ್ರೀ ಶ್ರೀಗಳವರು—"**ಹರೇರನುಚರಾಃ**" ಎಂದರೆ ಸರ್ವಜೀವರಾಶಿಗಳೂ ವಿಷ್ಣುವಿನ ಅನುಯಾಯಿಗಳು, ಎಂಬ ನಮ್ಮಿಂದ ಪ್ರತಿಜ್ಞಾತವಾದ ಶ್ಲೋಕಭಾಗೋಕ್ತಪ್ರಮೇಯವನ್ನು ಈ ದಿವಸ ನಿರೂಪಿಸುತ್ತೇವೆ.

ಪ್ರಶ್ನೆ—ಸ್ವಾಮಿ! ಮುಖ ನೋಡುವಾಗಲೇ ಈತನು ಹನುಮಂತನು ಎಂದು ತಿಳಿಯುವಂತೆ, ಆ ಕಡೆ ಈ ಕಡೆ ನೋಡಿದರೆ ಸಾಕು; ಎಲ್ಲಾ ಜೀವರುಗಳೂ ವಿಷ್ಣುಭೃತ್ಯರಲ್ಲವೆಂದು ಸಿದ್ಧವಾಗುವುದು. ಶೈವಶಾಕ್ತೇಯಾದಿ ಅನೇಕ ಮತಾನುಯಾಯಿಗಳು ಸುತರಾಂ ವಿಷ್ಣುಭೃತ್ಯರಲ್ಲ. ದುರ್ಯೋಧನನು ವಿಷ್ಣುದಾಸನಲ್ಲವೆಂಬುದು ಸರ್ವಸಮ್ಮತವು.

ಶ್ರೀ ಶ್ರೀಗಳವರು—ನಮ್ಮ ವಾಕ್ಯಗಳ ಭಾವವು ನಿಮಗೆ ತಿಳಿಯಲಿಲ್ಲ. ಎಲ್ಲಾ ಜೀವರೂ ಹರಿಯ ಅನುಚರರೆಂದರೆ ಅವರೆಲ್ಲಾ ವಿಷ್ಣುಭಕ್ತರು, ಭಕ್ತಿಯಿಂದ ವಿಷ್ಣುಸೇವೆಯಲ್ಲಿರತರಾದವರು, ಎಂದು ನಮ್ಮ ತಾತ್ಪರ್ಯವಲ್ಲ. ಮತ್ತೇನೆಂದರೆ, ಮೈಸೂರು ದೇಶದವರೆಲ್ಲಾ ಮಹಾರಾಜರ ಅನುಚರರು ಎಂದರೆ ಈ ದೇಶದ ಪ್ರಜೆಗಳೆಲ್ಲಾ ಅವರ ಅಧೀನರು; ಅವರ ಆಳ್ವಿಕೆಗೆ ಒಳಪಟ್ಟವರು ಎಂದು ಅರ್ಥವಾಗುವಂತೆ, ಸರ್ವಚೇತನರೂ ಸರ್ವಶಕ್ತನೂ, ಸ್ವತಂತ್ರನೂ ಆದ ಪರಮಾತ್ಮನ ವಶದಲ್ಲಿರುವರು; ಅವನಿಂದ ನಿಯಮ್ಯರಾಗಿ, ಅವನ ಅಧೀನದಲ್ಲಿ ನಾನಾ ವ್ಯಾಪಾರಗಳನ್ನು ಮಾಡುವವರಾಗಿದ್ದಾರೆಯೇ ಹೊರತು, ಅವನನ್ನು ಲಕ್ಷಿಸದೆ ಯಾವ ಒಂದು ವ್ಯಾಪಾರವನ್ನು ಮಾಡುವುದಕ್ಕೂ ಸ್ವತಂತ್ರರಲ್ಲ; ಮತ್ತು ಪರಮಾತ್ಮನನ್ನು ನೀನು ಹೀಗೆಯೇ ಮಾಡಬೇಕು ಎಂದು ನಿಯಮಿಸುವುದಕ್ಕೂ ಸಮರ್ಥರಲ್ಲ ಎಂದು ತಾತ್ಪರ್ಯವು.

ಪ್ರಶ್ನೆ—ಸ್ವಾಮಿ! ಸರಿಹೋಯಿತು. ಸಕಲ ಚೇತನರೂ ವಿಷ್ಣುವಿನ ವಶರೆಂದು ಹೇಳುವ ಗೀತಾವಾಕ್ಯಗಳು ಯಾವುವು?

ಉತ್ತರ—ಬಹಳ ಆಶ್ಚರ್ಯವು! ಬೆಳಗಾಗುವವರೆವಿಗೂ ರಾಮಾಯಣವನ್ನು ಕೇಳಿ ರಾಮನಿಗೂ ಸೀತೆಗೂ ಏನಾಗಬೇಕು ಎಂದು ಪ್ರಶ್ನೆಮಾಡಿದ ಹಾಗಾಯಿತು. 1. ವಿಷ್ಣುವೇ ಸರ್ವೋತ್ತಮನೆಂಬಲ್ಲಿ **ದ್ವಾವಿಮೌ ಪುರುಷೌ ಲೋಕೇ** ಇತ್ಯಾದಿ ಸಾಕ್ಷಾದ್ವಚನಗಳನ್ನು (ಎರಡನೆಯ ಪುಟದಲ್ಲಿಯೇ) ಉದಾಹರಿಸಿರುತ್ತೇವೆ. ಇದರಿಂದ ಸರ್ವಚೇತನರೂ ವಿಷ್ಣುವಿಗಿಂತ ಅಧಮರು; ಆದುದರಿಂದ ಅವನ ವಶದಲ್ಲೇ ಇರುವವರು ಎಂದು ಸಿದ್ಧವಾಗುವುದು. ಮಹಾರಾಜರು ಎಲ್ಲಾ ಪ್ರಜೆಗಳಿಗಿಂತ ಉತ್ತಮರೆಂದು ಹೇಳಿದರೆ ಪ್ರಜೆಗಳು ಮಹಾರಾಜರಿಗಿಂತ ಅಧಮರು ಎಂದು ಅನುಮಾನದಿಂದ ಸಿದ್ಧವಾಗುವುದಿಲ್ಲವೇ? 2. ಮತ್ತು ಬ್ರಹ್ಮಾದಿ ಸರ್ವಜೀವರೂ ಉತ್ತಮರಲ್ಲವೆಂಬಲ್ಲಿ (ಎಂಟನೆಯ ಪುಟದಲ್ಲಿ) ಗೀತಾವಾಕ್ಯಗಳನ್ನು ಉದಾಹರಿಸಿರುತ್ತೇವೆ. ಆ ವಾಕ್ಯಗಳು ಬ್ರಹ್ಮಾದಿಗಳು ವಿಷ್ಣುವಿನ ಆಶ್ರಯದಲ್ಲಿರುವರೆಂಬಲ್ಲಿ ಪ್ರಮಾಣವಾಗುವುವು. 3. ಕಿಂಚ ವಿಷ್ಣುವೇ ಪರಬ್ರಹ್ಮನು ಎಂದರೆ ಸರ್ವೋತ್ತಮ ವಸ್ತುವು ಎಂಬಲ್ಲಿ ಪೂರ್ಣಾನಂದತ್ವ, ಸ್ವಾತಂತ್ರ್ಯವೇ ಮೊದಲಾದ ಯುಕ್ತಿಗಳನ್ನು (ಹತ್ತನೆಯ ಪುಟ ಮೊದಲುಗೊಂಡು) ನಿರೂಪಿಸಿರುತ್ತೇವೆ. ಇವುಗಳೇ ಒಂದೊಂದೂ ಜೀವರುಗಳ ಅಲ್ಪತೆಯನ್ನೂ, ಅಸ್ವತಂತ್ರತೆಯನ್ನೂ ಸಾಧಿಸುವುದಕ್ಕೆ ಸಮರ್ಥವಾಗಿರುವವು. ಕಿಂಬಹುನಾ! ಪರಮಾತ್ಮನ ಅಚಿಂತ್ಯಶಕ್ತಿಯು ಸರ್ವರನ್ನೂ ಅವನ ವಶವನ್ನಾಗಿ ಮಾಡುವುದು. 4. ಜೀವರುಗಳು ಸರ್ವಥಾ ಅಸ್ವತಂತ್ರರೆಂಬುದು, "ನೀನು ಕರ್ಮಫಲವನ್ನು ಕೋರಬೇಡ! ನೀನು ನಿಯತವಾದ ಕರ್ಮವನ್ನು ಮಾಡು" ಇತ್ಯಾದಿ ಅವನ ವಿಧಿಗಳಿಂದ ಗೊತ್ತಾಗುವುದು. ಸ್ಪಷ್ಟವಚನವನ್ನೂ ಶ್ರೀಕೃಷ್ಣನೇ ಹೇಳಿರುತ್ತಾನೆ:—

(1) **ನಕರ್ತೃತ್ವಂ ನಕರ್ಮಾಣಿ ಲೋಕಸ್ಯಸೃಜತಿಪ್ರಭುಃ ।**
ನಕರ್ಮಫಲ ಸಂಯೋಗಂ ಸ್ವಭಾವಸ್ತು ಪ್ರವರ್ತತೇ ।
ನಾದತ್ತೇ ಕಸ್ಯ ಚಿತ್ಪಾಪಂ ನ ಚೈವಸುಕೃತಂವಿಭುಃ ।
—(5. 14-15.)

ಪ್ರಭುವಾದ ಪರಮಾತ್ಮನು ಜೀವನಿಗೆ ಅಗ್ನಿಹೋತ್ರಾದಿ ಕರ್ಮಾನುಷ್ಠಾನದಲ್ಲಿ ಸ್ವಾತಂತ್ರ್ಯವನ್ನು ಕೊಡುವುದಿಲ್ಲ; ಕ್ರಿಯಾಜನ್ಯ "ಅದೃಷ್ಟ" ಗಳ ವಿಷಯದಲ್ಲಿಯೂ ಸ್ವಾತಂತ್ರ್ಯವನ್ನು ಕೊಡುವುದಿಲ್ಲ. ಕರ್ಮಫಲಸಂಯೋಗದಲ್ಲಿಯೂ ಜೀವರಿಗೆ ಸ್ವಾತಂತ್ರ್ಯವನ್ನು ಕೊಡುವುದಿಲ್ಲ. ಕರ್ಮಾನುಷ್ಠಾನದಲ್ಲಿ, ಕರ್ಮ

ಜನ್ಯ ಅದೃಷ್ಟದಲ್ಲಿ, ಮತ್ತು ಕರ್ಮಫಲಪ್ರಾಪ್ತಿಯಲ್ಲಿ ಜೀವರಿಗೆ ಸ್ವಾತಂತ್ರ್ಯವು ಇಲ್ಲದಿದ್ದರೆ ಕರ್ಮವು ನೆರವೇರುವುದು ಹೇಗೆ ಎಂದರೆ **ಸ್ವಭಾವಸ್ತು ಪ್ರವರ್ತತೇ*** ಸರ್ವಸ್ವತಂತ್ರನಾದ ಪರಮಾತ್ಮನೇ ಕರ್ಮಾನುಷ್ಠಾನ, ಕರ್ಮಜನ್ಯ ಅದೃಷ್ಟ, ಕರ್ಮಫಲ ಸಂಯೋಗಗಳಲ್ಲಿ ಪ್ರವರ್ತಿಸುತ್ತಾನೆ. (ಯಾವಾಗಲೂ ಯಾವ ವಿಷಯದಲ್ಲೂ ಜೀವನಿಗೆ ಸ್ವಾತಂತ್ರ್ಯವನ್ನು ಕೊಡುವುದಿಲ್ಲ. ಮತ್ತು ಸರ್ವ ವಿಷಯಗಳಲ್ಲೂ ಸರ್ವದಾ ತಾನೇ ಸ್ವತಂತ್ರಪ್ರವರ್ತಕನು; ಎಂದು ಭಾವವು. ಭಗವಂತನೇ ಸ್ವತಂತ್ರನಾದರೆ ಪುಣ್ಯಪಾಪ ಲೇಪಗಳು ಅವನಿಗೆ ಬರಲಿ ಎಂದರೆ ಹೇಳುತ್ತಾನೆ:—) ವಿಭುಃ— ಸಮರ್ಥನಾದ ಪರಮಾತ್ಮನು (ತಾನು ಸಮರ್ಥನಾದುದರಿಂದಲೇ) ಕರ್ಮಗಳ ಪುಣ್ಯಪಾಪಗಳ ಲೇಪವನ್ನು ಹೊಂದುವುದಿಲ್ಲ.

ಈ ಶ್ಲೋಕಗಳನ್ನು ಜೀವಪರವಾಗಿಯೂ ಅರ್ಥಮಾಡಬಹುದು. ಹೇಗೆಂದರೆ:—ಜಡಕ್ಕಿಂತಲೂ ಸಮರ್ಥನಾದ ಈ ಜೀವನು ಇತರ ಜನರುಗಳಿಂದ ಸ್ವತಂತ್ರವಾಗಿ ಕರ್ಮವನ್ನು ಮಾಡಿಸುವದಿಲ್ಲ; ತಾನೂ ಸ್ವತಂತ್ರವಾಗಿ ಮಾಡುವದಿಲ್ಲ. ಕರ್ಮಗಳಿಂದುಂಟಾಗುವ ಪುಣ್ಯಪಾಪ ಫಲರೂಪವಾದ ಸುಖದುಃಖ ಸಂಬಂಧವನ್ನು ಉಂಟುಮಾಡಲಾರನು. (ಸ್ವತಂತ್ರವಾಗಿ ಕರ್ಮಮಾಡುವವನು; ಕರ್ಮಮಾಡಿಸುವವನು ಮತ್ತು ಕರ್ಮಫಲಗಳನ್ನು ಕೊಡುವವನು ಸ್ವತಂತ್ರನಾದ ಈಶ್ವರನೇ ಎಂದು ಹೇಳುತ್ತಾನೆ:—) ಸ್ವಭಾವಸ್ತು ಎಂದರೆ ಅನ್ಯನಿರಪೇಕ್ಷನಾದ ಸ್ವತಂತ್ರನಾದ ಪರಮಾತ್ಮನೇ ಈ ವಿಷಯಗಳಲ್ಲಿ ಪ್ರವರ್ತಿಸುತ್ತಾನೆ. (ಮತ್ತಃ ಸರ್ವಂಪ್ರವರ್ತತೇ ಎಂಬ ಶ್ರೀಕೃಷ್ಣನ ವಾಕ್ಯವು ಈ ವಿಷಯದಲ್ಲಿ ಸಮಾಖ್ಯಾರೂಪವಾಗಿರುವುದು.) ಜಡಾಪೇಕ್ಷೆಯಿಂದ ಸಮರ್ಥನಾದ ಜೀವನು ಮತ್ತೊಬ್ಬನ ಪಾಪವನ್ನು ಅಥವಾ ತಾನು ಮಾಡಿದ ದುಷ್ಕರ್ಮದ ಪಾಪವನ್ನೂ ಸಹ ಸ್ವತಂತ್ರನಾಗಿ ಹೊಂದುವುದಿಲ್ಲ. ಪುಣ್ಯವನ್ನೂ ಸ್ವತಂತ್ರನಾಗಿ ಹೊಂದುವುದಿಲ್ಲ. (ತಾನು ಮಾಡಿದ ಅಥವಾ ಇತರರಿಂದ ಮಾಡಿಸಿದ ಕರ್ಮಗಳಿಗೆ ಪುಣ್ಯಪಾಪಗಳು ಉಂಟಾಗುವುದರಲ್ಲಿ ಈಶ್ವರನೇ ಕಾರಣನೆಂದು ಭಾವವು.)

ಈ ವಾಕ್ಯಗಳಿಂದ ಜೀವರುಗಳು ಸರ್ವಥಾ ಅಸ್ವತಂತ್ರರಾದುದರಿಂದ, ಸದಾ ಪರಮಾತ್ಮನ ವಶರಾಗಿಯೇ ಸ್ವಸ್ವವ್ಯಾಪಾರಗಳನ್ನು ಮಾಡುವರೆಂದು ನಿಶ್ಚಿತವಾಗುವುದು,

---

* **ಮತ್ತಃ ಸರ್ವಂಪ್ರವರ್ತತೇ** ಎಂದರೆ ನನ್ನಿಂದಲೇ (ಶ್ರೀ ಕೃಷ್ಣನಿಂದಲೇ) ಎಲ್ಲವೂ ಪ್ರವರ್ತಿಸುತ್ತದೆ, ಎಂಬ ಶ್ರೀ ಕೃಷ್ಣನ ವಚನಾನುಸಾರ ಇಲ್ಲಿ ಹೇಳಿರುವ "ಸ್ವಭಾವ" ಶಬ್ದವಾಚ್ಯವಾದ ವಸ್ತುವು ಪರಮಾತ್ಮನು, ಅವನೇ ಸ್ವತಂತ್ರನು ಎಂದು ಸಿದ್ಧವಾಗುವುದು.

ಇದೂ ಅಲ್ಲದೆ ಸರ್ವತ್ರ ಪರಮಾತ್ಮನೇ ನಿಯಾಮಕನಾಗಿರುವುದರಿಂದ, ಈ ಜೀವರುಗಳು ಯಾರ ಯಾರ ಸೇವೆಯನ್ನು ಮಾಡಿದರೂ, ವಸ್ತುತಃ ಅದು ತದಂತರ್ಯಾಮಿಯಾದ ಪರಮಾತ್ಮನ ಸೇವೆಯಾಗಿರುವುದು. ಫಲವನ್ನು ಕೊಡುವವನೂ ಅಂತರ್ಯಾಮಿಯಾದ ಪರಮಾತ್ಮನು. "ವೀಣಾಯಾಂ........ಏತಂತೇಗಾಯಂತಿ" ಎಂಬ ಛಾಂದೋಗ್ಯಶ್ರುತಿಯು ರಾಜಾಸ್ಥಾನಗಳಲ್ಲಿ ಗಾಯಕರು ಏನು ವೀಣಾವಾದನಗಳನ್ನು ಮಾಡುವರೋ, ಅದು ರಾಜಾಂತರ್ಗತನಾದ ಪರಬ್ರಹ್ಮನ ಉದ್ದಿಶ್ಯ ಮಾಡಿದ ಸ್ತುತಿಯೆನಿಸುವುದು ಎಂದು ಹೇಳುತ್ತದೆ. ಗಾಯನಕ್ಕೆ ಪ್ರೇರಕನೂ ಪರಮಾತ್ಮನು; ಗಾಯನದಿಂದ ಪ್ರಸನ್ನನಾಗಿ ದ್ರವ್ಯಾದಿಫಲ ಕೊಡುವವನೂ ಪರಮಾತ್ಮನೇ; ರಾಜಾದಿಗಳು ನಿಮಿತ್ತಮಾತ್ರರು ಎಂದು ತಾತ್ಪರ್ಯವು. ಈ ಅಭಿಪ್ರಾಯದಿಂದಲೇ ಅನ್ಯದೇವತೆಗಳಿಗೆ ಮಾಡಿದ ಸೇವೆಯೂಕೂಡ, (ಸೇವೆ ಮಾಡುವ ಜನರು ತಿಳಿಯದಿದ್ದರೂ) ನನ್ನ ಸೇವೆಯು ಆಗುವುದು ಎಂದು ಶ್ರೀ ಕೃಷ್ಣನು ಹೇಳುತ್ತಾನೆ. ಅನ್ಯದೇವತೆಗಳನ್ನು ಉದ್ದೇಶಮಾಡಿ ಸೇವೆ ಮಾಡುವವರಿಗೆ ಪ್ರವರ್ತಕನೂ, ಮಾಡಿದ ಸೇವೆಗಳಿಗೆ ಆಯಾಯ ದೇವತೆಗಳಲ್ಲಿ ನಿಂತು ಫಲಪ್ರದನಾಗುವನೂ ಪರಮಾತ್ಮನೇ ಆಗಿರುವನು.

(2) **ಯೋಯೋಯಾಂಯಾಂತನುಂ ಭಕ್ತಃ ಶ್ರದ್ಧಯಾಽರ್ಚಿತು**
ಮಿಚ್ಛತಿ ।
ತಸ್ಯತಸ್ಯಾಚಲಾಂಶ್ರದ್ಧಾಂ ತಾಮೇವವಿದಧಾಮ್ಯಹಂ ।
ಸತಯಾ ಶ್ರದ್ಧಯಾಯುಕ್ತಸ್ತಸ್ಯಾರಾಧನ ಮೀಹತೇ ।
ಲಭತೇ ಚತತಃ ಕಾಮಾ ಮಯ್ಯೈವವಿಹಿತಾರ್ಹಿತಾ* ॥
—(7. 21-22.)

ನವಮಾಧ್ಯಾಯದಲ್ಲಿ ಶ್ರೀ ಕೃಷ್ಣನು ಹೀಗೆ ಹೇಳಿರುತ್ತಾನೆ:—

(3) **ಯೇಪ್ಯನ್ಯದೇವತಾ ಭಕ್ತಾಯಜಂತೇ ಶ್ರದ್ಧಯಾನ್ವಿತಾಃ ।**
ತೇಪಿಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಂ† ॥
—(9. 23.)

ಆದರೂ **ನತುಮಾಮಭಿಜಾನಂತಿ** ಎಂದರೆ ಪೂಜೆಮಾಡುವ ಜೀವರುಗಳು ತಾವು ಪರಮಾತ್ಮನ ವಶರಾಗಿಯೇ ಕರ್ಮಮಾಡಿ, ಪರಮಾತ್ಮನಿಗೇ ಸಮರ್ಪಿಸುತ್ತಿರುವೆವೆಂದು ತಿಳಿಯಲಾರರು ಎಂದು ಹೇಳಿರುತ್ತಾನೆ. "ಆಕಾಶಾ

* ಈ ಶ್ಲೋಕವ್ಯಾಖ್ಯಾನವು ಇಪ್ಪತ್ತಾರನೆಯ ಪುಟದಲ್ಲಿ ಬಂದಿರುತ್ತದೆ.

† ಈ ಶ್ಲೋಕವ್ಯಾಖ್ಯಾನವು ಇಪ್ಪತ್ತೇಳನೆಯ ಪುಟದಲ್ಲಿರುತ್ತದೆ.

ತ್ಪತಿತಂತ್ರೋಯಂ ಯಥಾಗಚ್ಛತಿಸಾಗರಂ | ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ || ಎಂಬ ಸಂಧ್ಯಾವಂದನ ಸ್ತುತಿಯೂ ಇದೇ ಅರ್ಥವನ್ನು ಹೇಳುತ್ತದೆ.

ಪ್ರಶ್ನೆ—ಸ್ವಾಮಿ! ಇದು ಎಲ್ಲಿ ಕಂಡುಬಂದಿರುವುದು. ನಾನು ರಾಜಸೇವೆಯನ್ನು ಮಾಡುತ್ತಾ ರಾಜಸೇವಕನಲ್ಲವೆಂದು ತಿಳಿದುಕೊಂಡಿರುವುದಕ್ಕಾಗುವುದೇ?

ಉತ್ತರ—ಹಳ್ಳಿಯಗೌಡರುಗಳ ವ್ಯಾಪಾರಪರೀಕ್ಷೆಯನ್ನು ಮಾಡಿರಿ. ರೈತರು ಶ್ಯಾನುಭೋಗರಿಗೆ ಕಂದಾಯದ್ರವ್ಯವನ್ನು ಕೊಡುವಾಗ ನಾವು ಈ ವ್ಯಾಪಾರದಿಂದ ಮಹಾರಾಜರನ್ನು ತೃಪ್ತಿಪಡಿಸುತ್ತಿರುವೆವೆಂದು ತಿಳಿಯದೆ, ಅಮಲ್ದಾರರ ಅಥವಾ ಶ್ಯಾನುಭೋಗರ ಮನಸ್ತೃಪ್ತಿಯಾಯಿತೆಂದು ತಿಳಿದಿರುವರು. ಹಾಗೆಯೇ ಗ್ರಾಮರಕ್ಷಣಾದಿ ಸಕಲ ವ್ಯಾಪಾರಗಳೂ ರಾಜಾಧೀನವಾಗಿ ನಡೆಯುತ್ತಿದ್ದರೂ, ಪಟೇಲನೇ ಗ್ರಾಮರಕ್ಷಕನು ಎಂದು ತಿಳಿದಿರುವರು. ಎಷ್ಟೋಜನ ಹುಡುಗರಿಗೆ ತಮಗೆ ಪಾಲಕರಾದ ಒಬ್ಬ ಮಹಾರಾಜರು ಇದ್ದಾರೆಂಬುದೂ ತಿಳಿಯದು.

ಈ ರೀತಿಯಲ್ಲಿ ಪ್ರವೃತ್ತಿಯಲ್ಲಿಯೂ, ಫಲಹೊಂದುವುದರಲ್ಲಿಯೂ ಜೀವರು ಅಸ್ವತಂತ್ರರಾದುದರಿಂದ ಪರಮಾತ್ಮನ ಅನುಚರರೆಂದು ನಿರ್ಣಯ ಮಾಡಬೇಕು. ಶ್ರೀಕೃಷ್ಣನು ಹೇಳುತ್ತಾನೆ:—

(4) **ನೈವಕಿಂಚಿತ್ಕರೋಮೀತಿಯುಕ್ತೋಮನ್ಯೇತತತ್ವವಿತ್ |**
ಪಶ್ಯನ್ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್‌ಗಚ್ಛನ್‌ಸ್ವಪನ್‌ಶ್ವಸನ್ |
ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ನಿಮಿಷನ್ನಪಿ |
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿಧಾರಯನ್ |
ಬ್ರಹ್ಮಣ್ಯಾಧಾಯಕರ್ಮಾಣಿ ಸಂಗಂತ್ಯಕ್ತ್ವಾ ಕರೋತಿಯಃ |
ಲಿಪ್ಯತೇನ ಸ ಪಾಪೇನ ಪದ್ಮಪತ್ರಮಿವಾಂಭಸಾ ||—(5. 8-10.)

ತಾತ್ಪರ್ಯವು :—ಯೋಗಾನುಷ್ಠಾನ ಮಾಡುವ ತತ್ವಜ್ಞಾನಿಯು ಕಣ್ಣಿನಿಂದ ರೂಪಾದಿಗಳನ್ನು ನೋಡುವಾಗ, ಕಿವಿಯಿಂದ ಶಬ್ದವನ್ನು ಕೇಳುವಾಗ, ಸ್ಪರ್ಶೇಂದ್ರಿಯದಿಂದ ಪದಾರ್ಥಗಳನ್ನು ಮುಟ್ಟುವಾಗ, ಮೂಸಿನೋಡುವಾಗ, ಭಕ್ಷಣಮಾಡುವಾಗ, ಪಾದದಿಂದ ಸಂಚಾರಮಾಡುವಾಗ, ಶಯನಮಾಡುವಾಗ, ಶ್ವಾಸಬಿಡುವಾಗ, ಮಾತಾಡುವಾಗ, ಮಲಾದಿವಿಸರ್ಜನಮಾಡುವಾಗ, ಕೈಯಿಂದ ಪದಾರ್ಥಗಳನ್ನು ಹಿಡಿಯುವಾಗ, ಕಣ್ಣು ರೆಪ್ಪೆಗಳನ್ನು ತೆರೆಯುವಾಗ ಮತ್ತು

ಮುಚ್ಚುವಾಗಲೂ ಕೂಡ, (ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಸರ್ವ ವ್ಯಾಪಾರವನ್ನು ಮಾಡುವಾಗಲೂ) ಚಕ್ಷುರಾದಿ ಇಂದ್ರಿಯಗಳು ಪರಮಾತ್ಮನಿಂದ ಪ್ರೇರಿತವಾಗಿಯೇ ರೂಪ, ಶಬ್ದ, ಸ್ಪರ್ಶಾದಿ ವಿಷಯಗಳಲ್ಲಿ ಪ್ರವರ್ತಿಸುತ್ತವೆ; ನಾನು "**ನೈವ ಕಿಂಚತ್ಕರೋಮಿ**" ಎಂದರೆ **ಸ್ವತಂತ್ರವಾಗಿ** ಒಂದು ವ್ಯಾಪಾರವನ್ನೂ ಮಾಡುವವನಲ್ಲ ಎಂದು ತಿಳಿಯಬೇಕು. ಈ ರೀತಿಯಾಗಿ ಸರ್ವಕರ್ಮಗಳನ್ನೂ **ಬ್ರಹ್ಮಣ್ಯಾಧಾಯ** ಎಂದರೆ ಪರಬ್ರಹ್ಮನೇ ಸ್ವತಂತ್ರಪ್ರವರ್ತಕನು ಮತ್ತು ಫಲದಾತೃವು ಎಂದು ತಿಳಿದು ಪರಮಾತ್ಮನಲ್ಲಿ ಸಮರ್ಪಿಸುವವನು ಮತ್ತು ಕರ್ಮಫಲೇಚ್ಛಾರಹಿತನಾದವನು, ಕಮಲಪತ್ರವು ಜಲದಿಂದ ಹೇಗೆ ಲಿಪ್ತವಾಗುವುದಿಲ್ಲವೋ ಹಾಗೆಯೇ, ತನ್ನಲ್ಲಿರುವ ಪಾಪಗಳಿಂದ ಲಿಪ್ತನಾಗುವುದಿಲ್ಲ; ಎಂದರೆ ಜ್ಞಾನವನ್ನು ಹೊಂದಿ, ಪಾಪಗಳು ಸುಟ್ಟುಹೋದನಂತರ ಮುಕ್ತನಾಗುತ್ತಾನೆಂದು ಅರ್ಥವು.

2.

ಪ್ರಶ್ನೆ—ಸ್ವಾಮಿ! ಜೀವರುಗಳಿಗೆ ಯಾವಶಕ್ತಿಯೂ ಇಲ್ಲದೆ ಕೇವಲ ಜಡತುಲ್ಯರಾದರೆ ಅವರನ್ನು ಉದ್ದೇಶಮಾಡಿ ವಿಧಿನಿಷೇಧಗಳು ಹೇಗೆ ಪ್ರವೃತ್ತವಾದವು? ಮತ್ತು ಸರ್ವಥಾ ಶಕ್ತಿರಹಿತರಾದ ನಮಗೆ ಪಾಪನಿಮಿತ್ತವಾಗಿ ದುಃಖವನ್ನು ಪರಮಾತ್ಮನು ಕೊಡುವುದು ಅನ್ಯಾಯವಾಗುವುದಿಲ್ಲವೇ?

ಉತ್ತರ—ಜೀವನು ಕರ್ತನಲ್ಲ, ಕಲ್ಲಿನಂತೆ ಜಡನೆಂದು ಹೇಳಿದರೆ ನೀವು ಹೇಳುವ ಎರಡು ದೋಷಗಳೂ ಬರುವುವು. ನಾವು ಹಾಗೆ ಹೇಳುವುದಿಲ್ಲ. ಈ ಅಭಿಪ್ರಾಯವನ್ನು ತಿಳಿಯದೇ, ಅನೇಕರು "ಎಲ್ಲಾ ದೇವರೇ ಮಾಡಿಸಿಬಿಡುವುದಾದರೆ ನಮ್ಮ ಪ್ರಯತ್ನವು ಏನೂ ಇರುವುದಿಲ್ಲ. ಹೀಗಿರುವಲ್ಲಿ ನಮಗೆ ಧರ್ಮವಿಧಾನಗಳನ್ನು ಮಾಡಿ, ಅದನ್ನು ಮಾಡದಿದ್ದರೆ ದುಃಖವನ್ನು ಕೊಡುವುದು ಉಚಿತವಲ್ಲ" ಎಂದು ನಮ್ಮ ಶಾಸ್ತ್ರದ ಮೇಲೆ ದೋಷಾರೋಪಣೆಯನ್ನು ಮಾಡಿರುವರು. ಶ್ರೀಕೃಷ್ಣನು **ಜೀವರು ಕರ್ತರು ಎಂದರೆ ಸ್ವಾಭಾವಿಕವಾದ ಕ್ರಿಯಾಕರಣಸಾಮರ್ಥ್ಯವನ್ನು ಹೊಂದಿರುವರು** ಎಂದು ತೋರಿಸುವುದಕ್ಕಾಗಿ, "**ಪ್ರಭುಃ**" "**ವಿಭುಃ**" ಎಂಬ ವಿಶೇಷಣಗಳನ್ನು ಉಪಯೋಗಿಸಿರುತ್ತಾನೆ. ವಿದ್ಯುಚ್ಛಕ್ತಿ ದೀಪಗಳು ಸ್ವಾಭಾವಿಕವಾಗಿ ಕೆಲವು ಒಂದು ಮೇಣಬತ್ತಿಕಾಂತಿಯುಳ್ಳವು, ಕೆಲವು ಹತ್ತು ಮೇಣಬತ್ತಿ ಶಕ್ತಿಯುಳ್ಳವು, ಕೆಲವು ನೂರು ಮೇಣಬತ್ತಿ ಶಕ್ತಿಯುಳ್ಳವು; ಹೀಗೆ ಇರುವಂತೆ, ಜೀವರುಗಳು ಸ್ವರೂಪತಃ ಕೆಲವರು ನೂರು ಆನೆಯ ಬಲವುಳ್ಳವರು, ಕೆಲವರು ಸಾವಿರ ಆನೆಯ ಬಲವುಳ್ಳವರು, ಕೆಲವರು ಲಕ್ಷ ಆನೆಯ

ಬಲವುಳ್ಳವರು. ಈ **ಶಕ್ತಿಯು** ಅನಾದಿನಿತ್ಯವಾಗಿ ಜೀವನ ಜ್ಞಾನಾನಂದಾದಿಗಳಂತೆ ಜೀವನಸ್ವರೂಪಭೂತವಾಗಿಯೇ ಇರುವುದು. ಆದುದರಿಂದ ಜೀವನು ಸಂಧ್ಯಾದಿ ಕರ್ಮಗಳನ್ನು ಮಾಡುವುದರಲ್ಲಿ **ಸಮರ್ಥನಾಗಿರುವನು.** ಹಾಗಿದ್ದರೂ ಈ ಬಲವನ್ನು ಸ್ವತಂತ್ರವಾಗಿ (ಪರಮಾತ್ಮನನ್ನು ಅಪೇಕ್ಷಿಸದೆ) ಉಪಯೋಗಿಸುವುದಕ್ಕೆ ಬರುವುದಿಲ್ಲ. ಆದುದರಿಂದ ಜೀವನು ಒಂದು ವೇಳೆ ಸಂಧ್ಯಾದಿಕರ್ಮಗಳನ್ನು ಮಾಡಬೇಕಾದರೆ, ಜೀವನೂ ಪ್ರಯತ್ನಪೂರ್ವಕವಾಗಿ ವ್ಯಾಪಾರಮಾಡಬೇಕು ; ಅದೇ ಕಾಲದಲ್ಲಿ ಪರಮಾತ್ಮನೂ ನಿಯಾಮಕತನದಿಂದ ಅದೇ ವ್ಯಾಪಾರವನ್ನು ಮಾಡಬೇಕು. ಒಂದು ವ್ಯಾಪಾರವನ್ನು ಇಬ್ಬರು ಮಾಡಿದಂತಾಯಿತೇ ಹೊರತು ಜೀವನು ಮಾಡಲಿಲ್ಲವೆಂದಾಗುವುದಿಲ್ಲ. ಜೀವನು ಅಸ್ವತಂತ್ರನಾಗಿ ಮಾಡಿದುದರಿಂದ, (ರಾಜಾಜ್ಞಾಧಾರಕನಾದ ಭಟನು ದೇಶರಕ್ಷಣೆಮಾಡಿದಂತೆ) ಅಲ್ಪಪುಣ್ಯವನ್ನು ಹೊಂದುವನು; ಪರಮಾತ್ಮನು ಸ್ವತಂತ್ರನಾಗಿ ಮಾಡಿದುದರಿಂದ ಹೆಚ್ಚು ಫಲವನ್ನು ಹೊಂದುವನು. ವಸ್ತುತಃ, ಒಂದೊಂದು ಕಾರ್ಯವು ನೆರವೇರಬೇಕಾದರೂ **ಐದು** ಕಾರಣಗಳಿರುತ್ತವೆ ಎಂದು **ಪಂಚೈತಾನಿಮಹಾಬಾಹೋ** ಇತ್ಯಾದಿ ವಾಕ್ಯಗಳಲ್ಲಿ ಶ್ರೀಕೃಷ್ಣನು ಹೇಳಿರುವುದರಿಂದ, ಜೀವರುಗಳು ಪ್ರಯತ್ನಮಾಡದೆ ಸುಮ್ಮನೆ ಮಲಗಿರಲೆಂಬುದು ತಾಮಸ ಜನರ ಮಾತು. ಈ ವಿಷಯವನ್ನು ನಾವು ಪೂರ್ವದಲ್ಲೇ ನಿರೂಪಿಸಿರುತ್ತೇವೆ. "ಕರ್ತಾಶಾಸ್ತ್ರಾರ್ಥವತ್ವಾತ್" ಇತ್ಯಾದಿ ಬ್ರಹ್ಮಸೂತ್ರಗಳೂ, "ಪ್ರಯತ್ನಮೇಕಮನುಗ್ರತೋಽವಿಧಾಯಭೂತಿಮಾಪ್ನುಮಃ" ಇತ್ಯಾದಿ ಭೀಮಸೇನದೇವರ ವಚನಗಳೂ "ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ" ಮುಂತಾದ ಭಾರತನೀತಿಗಳೂ ಈ ವಿಷಯದಲ್ಲಿ ಪ್ರಮಾಣಗಳಾಗಿರುವುವು. ಸ್ವಾತಂತ್ರ್ಯವು ಮಾತ್ರ ಪರಮಾತ್ಮ ಮಾತ್ರ ವೃತ್ತಿಯಾದ ಧರ್ಮವು.

3

ಪರಬ್ರಹ್ಮನ ಅಧೀನನಾಗಿರುವುದರಿಂದಲೇ, ಜೀವನು ವಿಧಿಬಂಧಕ್ಕೆ ವಿಷಯನಾಗಿರುವನು. ಪರಾಧೀನತೆಯು ವಿಧಿಬದ್ಧತೆಯ ವಿಷಯದಲ್ಲಿ ಭೂಷಣವಾಗಿರುತ್ತದೆ. ಆದುದರಿಂದಲೇ ರಾಜನು ಪ್ರಜೆಗಳನ್ನು ನಿಯಮಿಸುವಂತೆ, ಶ್ರೀಕೃಷ್ಣನು ತನ್ನ ವಶರಾದ ಸರ್ವ ಚೇತನರಿಗೂ ವಿಧಿಸುತ್ತಾನೆ:—

(1) **ಯಃ ಶಾಸ್ತ್ರವಿಧಿಮುತ್ಸೃಜ್ಯವರ್ತತೇಕಾಮಕಾರತಃ ।**
ನಸಸಿದ್ಧಿಮವಾಪ್ನೋತಿನಸುಖಂನ ಪರಾಂಗತಿಂ ॥

ತಸ್ಮಾಚ್ಛಾಸ್ತ್ರಂಪ್ರಮಾಣಂತೇ ಕಾರ್ಯಾಕಾರ್ಯವ್ಯವಸ್ಥಿತೌ ||
ಜ್ಞಾತ್ವಾಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ||
—(16. 23-24.)

ಯಾವ ಜೀವನು ಶಾಸ್ತ್ರೋಕ್ತವಿಧಿಯನ್ನು ಪರಿತ್ಯಾಗಮಾಡಿ ತನ್ನ ಇಚ್ಛಾನುಸಾರ ಪ್ರವರ್ತಿಸುವನೋ ಅವನು ಬ್ರಹ್ಮಜ್ಞಾನವನ್ನು ಹೊಂದುವುದಿಲ್ಲ. ಅವನಿಗೆ ಇಹಲೋಕದಲ್ಲೂ ಸುಖವಿಲ್ಲ (ನಾಯಿ, ಕುರಿ, ಕೋಳಿ, ಸಿಂಹ, ವ್ಯಾಘ್ರಾದಿ ನಾನಾ ಯೋನಿಗಳು ಬರುವುದೆಂದು ಭಾವವು); ಮತ್ತು ಉತ್ತಮಗತಿಯೂ ಇಲ್ಲವು. ಆದುದರಿಂದ ಎಲೈ ಅರ್ಜುನನೇ ! ನೀನೇ ಮೊದಲಾದ ಪ್ರೇಕ್ಷಾವಂತರಾದ ಅಧಿಕಾರಿಗಳಿಗೆ ಇದು ಕರ್ತವ್ಯವು, ಇದು ಅಕರ್ತವ್ಯವು ಎಂದು ವ್ಯವಸ್ಥೆಮಾಡುವುದರಲ್ಲಿ ವೇದಾದಿರೂಪವಾದ ಶಾಸ್ತ್ರವೇ ಪ್ರಮಾಣವು (ಆಧಾರವು). ಆದುದರಿಂದ ಶಾಸ್ತ್ರವಿಧಿಗಳಿಗೆ ಸಮ್ಮತವಾದ ಕರ್ಮವನ್ನು * ತಿಳಿದುಕೊಂಡು ನೀನು ಕರ್ತವ್ಯಕರ್ಮವನ್ನು ಮಾಡಬೇಕು.

ಇಂಥಾ **ಕರ್ಮವಿಧಿ**ಗಳಿಂದ ಜೀವರ "ಅನುಚರತ್ವವು" ಎಂದರೆ ವಿಷ್ಣ್ವಧೀನತ್ವವು ನಿಸ್ಸಂಶಯವಾಗಿ ಸಿದ್ಧವಾಗುವುದು.

ತಮ್ಮಲ್ಲಿರುವ "ಅನುಚರತ್ವ" ವನ್ನು ಎಂದರೆ ವಿಧಿಬದ್ಧತೆಯನ್ನು ಮರೆತು ಕರ್ಮದಲ್ಲಿ ಪ್ರವರ್ತರಾದವರನ್ನು ಶ್ರೀ ಕೃಷ್ಣನು ನಿಂದಿಸುತ್ತಾನೆ. ಅವರ ಯಜ್ಞಾದಿಗಳು ತಾಮಸಗಳೆಂದೂ ಹೇಳುತ್ತಾನೆ :—

(2) **ವಿಧಿಹೀನಂ....ಯಜ್ಞಂ ತಾಮಸಂಪರಿಚಕ್ಷತೇ** |—(18. 13)

(ಪರಮಾತ್ಮನ ಆಜ್ಞಾರೂಪವಾದ) ವೇದವಿಧಿವಿಹಿತವಲ್ಲದಿರುವ ಯಜ್ಞವು ತಾಮಸವೆಂದು ಜ್ಞಾನಿಗಳು ಹೇಳುತ್ತಾರೆ.

(3) **ನಿಯತಸ್ಯ ತು ಸನ್ಯಾಸಃ ಕರ್ಮಣೋನೋಪಪದ್ಯತೇ |**
ಮೋಹಾತ್ತಸ್ಯ ಪರಿತ್ಯಾಗ ಸ್ತಾಮಸಃ ಪರಿಕೀರ್ತಿತಃ |—(18. 7.)

ವಿಧಿವಿಹಿತವಾದ ಕರ್ಮದ ಪರಿತ್ಯಾಗವು ಉಚಿತವಲ್ಲ. ಮಿಥ್ಯಾಜ್ಞಾನಕ್ಕೆ ವಶನಾಗಿ ಅದನ್ನು ಪರಿತ್ಯಜಿಸುವುದು ತಾಮಸತ್ಯಾಗವೆನ್ನಿಸುವುದು.

---

* ಶಾಸ್ತ್ರೋಕ್ತಂ ಎಂದು ಇಷ್ಟೇ ಹೇಳದೆ ಶ್ರೀ ಕೃಷ್ಣನು ಶಾಸ್ತ್ರವಿಧಾನೋಕ್ತಂ ಎಂದು ಹೇಳಿರುವನು. ಆಪಾತತಃ ಶಾಸ್ತ್ರವು ಕೆಲವು ವೇಳೆ ವಿರುದ್ಧವಿಷಯಗಳನ್ನು ಹೇಳುವುದಾಗಿ ಕಂಡರೂ, ಅದರ ವಿಧಾನವು ಎಂದರೆ ಅಭಿಪ್ರೇತವಾದ ವಿಧಿಯು ಒಂದೇ ಆಗಿರುವುದು ; ಅದನ್ನು ಪೂರ್ವಪರ ವಿಚಾರಮಾಡಿ ತಿಳಿದುಕೊಂಡು ಕರ್ಮಮಾಡು ಎಂದರ್ಥವು.

4

ನಾನು ಈಶ್ವರನ ಅನುಚರನಲ್ಲ ಮತ್ತು ಸ್ವತಂತ್ರನೆಂದು ತಿಳಿದವನನ್ನು ಶ್ರೀ ಕೃಷ್ಣನು ಬಹಳವಾಗಿ ಧಿಕ್ಕರಿಸುತ್ತಾನೆ :—

(1) **ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ಸುಖೀ ।**
ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ।
ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥
ಆತ್ಮಸಂಭಾವಿತಾಸ್ಸ್ತಬ್ಧಾ ಧನಮಾನಮದಾನ್ವಿತಾಃ ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಂ ।
ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।
ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ।
ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ।
ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ ॥

—(16. 14-20.)

ನಾನು ಸ್ವತಂತ್ರನಾದ ಈಶ್ವರನು, ನಾನು ಸ್ವತಂತ್ರಭೋಗ ಉಳ್ಳವನು, ನಾನು ಕೃತಕೃತ್ಯನು, ಸ್ವತಂತ್ರ ಬಲವುಳ್ಳವನು, ಸ್ವತಂತ್ರಸುಖಿಯು, ಸ್ವತಂತ್ರವಾಗಿ ಬಲಾದಿಸಂಪನ್ನನು, ಸತ್ಕುಲೀನನು, ನನಗೆ ಸಮಾನರಾದವರು ಯಾರು ಇದ್ದಾರೆ? ನಾನು ಸ್ವತಂತ್ರವಾಗಿ ಯಾಗಾದಿಗಳನ್ನು ಆಚರಿಸುತ್ತೇನೆ, ದಕ್ಷಿಣಾದಿಗಳನ್ನು ಕೊಡುತ್ತೇನೆ, ಸ್ವತಂತ್ರವಾಗಿ ಸಂತೋಷವನ್ನು ಹೊಂದುತ್ತೇನೆ; ಈ ರೀತಿ ವಿಪರೀತಜ್ಞಾನವುಳ್ಳವರಾಗಿ, ನಾನಾ ವಿಧವಾದ ಚಿಂತೆಗಳಿಂದ ವಿಶೇಷ ಭ್ರಾಂತರಾಗಿ, ದಾರಾ, ಪುತ್ರ, ಮಿತ್ರ, ದೇಶ, ಕೋಶಾದಿಗಳಲ್ಲಿ ದುಷ್ಟಮೋಹವೆಂಬ ಬಲೆಯಿಂದ ಆವೃತರಾಗಿ, ವಿಷಯಭೋಗಗಳಲ್ಲಿ ಅತ್ಯಂತ ಆಸಕ್ತರಾಗಿ, ಪರಮ ಕಶ್ಮಲವಾದ ನರಕದಲ್ಲಿ ಬೀಳುತ್ತಾರೆ. ನಾವು ಶ್ರೇಷ್ಠರು, ನಮಗೆ ಸಮಾನರು ಯಾರೆಂದು ತಮ್ಮನ್ನು ತಾವೇ ಬಹುಮಾನಮಾಡಿಕೊಳ್ಳುತ್ತಾ, ಗುರುಹಿರಿಯರಲ್ಲಿ ನಮ್ರರಾಗದೆ, ಧನನಿಮಿತ್ತಕವಾದ ಗರ್ವ ಮತ್ತು ದರ್ಪಗಳಿಂದ ಯುಕ್ತರಾಗಿ, **ಅವಿಧಿಪೂರ್ವಕಂ** ಎಂದರೆ ವಿಧಿವಿಹಿತಕ್ರಮವನ್ನು ಬಿಟ್ಟು, ತಮ್ಮ ಮಹತ್ವ

ವನ್ನು ಮಾತ್ರ ಪ್ರಕಟಮಾಡಬೇಕೆಂಬ ಉದ್ದೇಶದಿಂದ ಹೆಸರುಮಾತ್ರವುಳ್ಳ ಯಜ್ಞ* ಗಳನ್ನು ಮಾಡುತ್ತಾರೆ. "ಅಹಂಕಾರಂ" ಎಂದರೆ ಸ್ವತಂತ್ರವಾಗಿ ನಾನೇ ಕರ್ಮವನ್ನು ಮಾಡುವವನೆಂಬ ಅಭಿಮಾನವನ್ನೂ, ನಾನೇ ಸಮರ್ಥನೆಂಬ ಜ್ಞಾನ ವನ್ನೂ, ದರ್ಪವನ್ನೂ, ಕಾಮಕ್ರೋಧಗಳನ್ನೂ ಹೊಂದಿದವರಾಗಿ ಸ್ವದೇಹದ ಲ್ಲಿಯೂ, ಪರದೇಹಗಳಲ್ಲಿಯೂ ನಿಯಾಮಕನಾಗಿರುವ ನನ್ನನ್ನು ಅತ್ಯಂತ ದ್ವೇಷ† ಮಾಡುವವರಾಗಿ, ನಿರ್ದೋಷನಾದ ನನ್ನಲ್ಲಿ ದೋಷಗಳನ್ನು ಚಿಂತಿಸುವವರಾಗಿ ಇರುತ್ತಾರೆ. **ತಾನ್** ಎಂದರೆ ಈ ಪೂರ್ವೋಕ್ತ ವಿಷ್ಣುವಿನಲ್ಲಿ ಭೃತ್ಯಭಾವವನ್ನು ಹೊಂದದ ವಿಪರೀತಜ್ಞಾನ ಮತ್ತು ಕರ್ಮವುಳ್ಳ, ಕ್ರೂರರಾದ, ನನ್ನ ದ್ವೇಷಿ ಗಳಾದ,‡ ಅಯೋಗ್ಯರಾದ, ನರಾಧಮರನ್ನು ಸಂಸಾರದಲ್ಲಿ ಪುನಃ ಪುನಃ ದುರ್ಯೋನಿಗಳಲ್ಲಿ ಹುಟ್ಟಿಸುತ್ತೇನೆ. ಎಲೈ ಅರ್ಜುನನೇ! ತಾಮಸಸ್ವಭಾವವುಳ್ಳ ಈ ಜನರು ಅನೇಕ ಜನ್ಮಗಳಲ್ಲಿ ಅಸುರಸಂಬಂಧಿಯಾದ ತಾಮಸ ದೇಹವನ್ನು ಹೊಂ ದಿದವರಾಗಿ ನನ್ನನ್ನು ಹೊಂದದೆಯೇ **ಅಧಮಾಂಗತಿಂ** ಎಂದರೆ ನಿತ್ಯನರಕ ಲಕ್ಷಣವಾದ ಸ್ಥಾನವನ್ನು ಹೊಂದುತ್ತಾರೆ.

ಈರೀತಿಯಾಗಿ, ಶ್ರೀಕೃಷ್ಣನು ಪುನಃಪುನಃ ಕರ್ಮವಿಧಾನ ಮಾಡಿರುವುದ ರಿಂದಲೂ, ತನ್ಮಲ್ಲಿರುವ ಅನುಚರತ್ವವನ್ನು ತಿಳಿಯದೆ ಸ್ವಾತಂತ್ರ್ಯವನ್ನು ಆರೋ ಪಿಸಿಕೊಂಡಿರುವ ದುರ್ಜನರಿಗೆ ತಮಸ್ಸೆಂಬ ಘೋರಫಲವನ್ನು ಹೇಳಿರುವುದರಿಂ ದಲೂ, ಸರ್ವಚೇತನರೂ "ಹರೇರನುಚರಾಃ" ಎಂದರೆ ಹರಿಯ ಅಧೀನರು ಎಂದು ಹೇಳಿದ ನಮ್ಮ ಪ್ರತಿಜ್ಞೆಯು ಅತ್ಯಂತ ಪ್ರಾಮಾಣಿಕವೆಂದು ಶ್ರೀಕೃಷ್ಣನ ವಾಕ್ಯ

---

* ಅವರು ಮಾಡುವ ಯಾಗಗಳಿಗೆ 'ಯಜ್ಞ' ವೆಂಬ ಹೆಸರುಮಾತ್ರವೇ ಹೊರತು, ಪರಮಾ ತ್ಮನ ಪ್ರೀತಿ ದ್ವಾರಾ ಯಜ್ಞಫಲವು ಬರಲಾರದು. ಯಾತಕ್ಕೆಂದರೆ, ನಿಖಿಲಯಜ್ಞಭೋಕ್ತನಾದ ವಿಷ್ಣುವಾಗಲೀ ವಿಷ್ಣುಭಕ್ತರಾದ ದೇವತೆಗಳಾಗಲೀ ತಾಮಸರು ಕೊಡುವ ಹವಿರ್ಭಾಗಗಳನ್ನು ಸ್ವೀಕರಿಸುವುದಿಲ್ಲ.

† ಈಶ್ವರನೇ ಎಲ್ಲವನ್ನೂ ಮಾಡಿಸುವುದಾದರೆ, ಈಗ ಸುಮ್ಮನೆ ಕುಳಿತಿರುವ ನನ್ನನ್ನು ಎಬ್ಬಿಸಿ ಓಡಾಡಿಸಲಿ ; ಈಗ ಭೋಜನಾದಿಗಳನ್ನು ಮಾಡುತ್ತಿರುವ ನನ್ನನ್ನು ಮತ್ತೂ ನನ್ನ ಮಿತ್ರ ನನ್ನು ತಡೆಯಲಿ, ಎಂದು ಯುಕ್ತಿರಹಿತವಾದ ತರ್ಕಗಳಿಂದ ಈಶ್ವರನು ನಿಯಾಮಕನಲ್ಲವೆಂದು ಹೇಳುವುದೇ ಸ್ವದೇಹ ಪರದೇಹವರ್ತಿಯಾದ ಈಶ್ವರನ ದ್ವೇಷವೆನ್ನಿಸುವುದು.

‡ ಸ್ವಾಮಿಯಾದ ವಿಷ್ಣುವಿಗೆ ಮಾತ್ರ ಇರುವ ಸ್ವಾತಂತ್ರ್ಯವನ್ನು ತನ್ನಲ್ಲಿ ಆರೋಪಿಸಿ ಕೊಂಡು ಆತನ ವಿಧಿಗಳನ್ನು ಮೀರಿ ಕರ್ಮಾದಿಗಳನ್ನು ಮಾಡುವುದರಿಂದ, ಪೂರ್ವೋಕ್ತವ್ಯಾಪಾರ ವುಳ್ಳವರು ಆವನ ದ್ವೇಷಿಗಳೆಂದೆನಿಸುವರು.

ಗಳಿಂದಲೇ ನಿರ್ಣೀತವಾಯಿತು. ಇದರಿಂದಲೇ ಪಾರಮಾರ್ಥಿಕವಾಗಿ ನಾನು ಅನು ಚರನಲ್ಲ; ನಾನೇ ಬ್ರಹ್ಮನು ಎಂದು ಪ್ರತಿಪಾದನೆ ಮಾಡುವ ಅದ್ವೈತತತ್ವವು ಶ್ರೀ ಕೃಷ್ಣನಿಗೆ ಅತ್ಯಂತ ವಿರುದ್ಧವಾಗಿರುವುದೆಂದೂ ನಿಶ್ಚಿತವಾಗುವುದು; ಮತ್ತು ಅನುಚರರಿಗೆ ವಿಹಿತವಾದ ಕರ್ಮವಿಧಿಗಳ ಪರಿತ್ಯಾಗವು ತಾಮಸವೆಂದೂ ಕೃಷ್ಣನು ಸ್ಪಷ್ಟವಾಗಿ ಹೇಳಿರುತ್ತಾನೆ.

5

ಪ್ರಶ್ನೆ—ಸ್ವಾಮಿ! ಜ್ಞಾನಿಯು ಮಾತ್ರ ಕರ್ಮವನ್ನು ಮಾಡಕೂಡ ದೆಂದು ಅದ್ವೈತಿಗಳು ಹೇಳುತ್ತಾರೆ. ಅಜ್ಞಾನಾವಸ್ಥೆಯಲ್ಲಿ ಅವರ ಮತದರೀತ್ಯಾ ಕರ್ಮಮಾಡಬಹುದಷ್ಟೇ!

ಉತ್ತರ—ಹಾಗೆ ಹೇಳಿದರೆ ಜ್ಞಾನಿಯು ಪರಮಾತ್ಮನ ಅನುಚರನಲ್ಲ: ಅಜ್ಞಾನಿಯು ಪರಮಾತ್ಮನ ಅನುಚರನು ಎಂದು ಹೇಳಿದಂತಾಯಿತು. ಇಲ್ಲಿ ಸ್ವಲ್ಪ ಸೂಕ್ಷ್ಮವಾದ ಚರ್ಚೆಯು ಅವಶ್ಯಕವು. ನೋಡಿರಿ! 1. ನಾನು ಬ್ರಹ್ಮನ ಅನುಚರನೆಂಬ **ಭ್ರಾಂತಿಯಿಂದ** ಅದ್ವೈತಿಯು ವೇದವಿಹಿತಕರ್ಮದಲ್ಲಿ ಪ್ರವೃ ತ್ತನಾಗುತ್ತಾನೆ. ವಸ್ತುತಃ ಜೀವನೇ ಬ್ರಹ್ಮನು. ಜೀವನು ಯಾರಿಗೂ ಅನುಚರ ನಲ್ಲವೆಂಬುದು ಅವರ ಸಿದ್ಧಾಂತವು. ಜ್ಞಾನವಾದನಂತರ ಈ ಭ್ರಾಂತಿಯು ನಿವೃ ತ್ತವಾಗಿ ನಾನು ನಿಜವಾಗಿಯೂ ಬ್ರಹ್ಮನು: ಯಾರಿಗೂ ಅನುಚರನಲ್ಲ; ಇದು ವರೆವಿಗೂ ಮೂಢತನದಿಂದ ಕರ್ಮಗಳನ್ನು ಮಾಡುತ್ತಿದ್ದೆನು ಎಂದು ತಿಳಿದು ಕೊಳ್ಳುವನಾದುದರಿಂದ, ತದನಂತರ ಯಾವ ಕರ್ಮವನ್ನೂ ಮಾಡುವುದಿಲ್ಲ. ಶ್ರೀ ಕೃಷ್ಣನಾದರೋ ವಿಧ್ಯುಕ್ತಕರ್ಮಗಳನ್ನು ಮಾಡುವವನು ಸಾತ್ವಿಕನು, ವಿಧಿವಿಹಿತ ವಾದುದನ್ನು ಪರಿತ್ಯಾಗಮಾಡುವವನು ತಾಮಸನು ಎಂದು ಸ್ಪಷ್ಟವಾಗಿ ಹೇಳಿರು ವನು. ಆದುದರಿಂದ, ಅದ್ವೈತಿಗಳ ಅಭಿಪ್ರಾಯದಲ್ಲಿ ಭ್ರಾಂತನೆಂದು ಹೇಳಲ್ಪ ಡುವ ಕರ್ಮಿಯು ಶ್ರೀ ಕೃಷ್ಣನ ಅಭಿಪ್ರಾಯದಲ್ಲಿ ಸಾತ್ವಿಕನು (ಪ್ರೇಕ್ಷಾವಂ ತನು) ಎನ್ನಿಸುವನು; ಮತ್ತು ಅದ್ವೈತಿಗಳ ಅಭಿಪ್ರಾಯದಲ್ಲಿ ಯಾರು ಜ್ಞಾ ನಿಯೋ ಅತಏವ ಕರ್ಮಪರಿತ್ಯಾಗಮಾಡಿರುವನೋ ಅವನು ಶ್ರೀ ಕೃಷ್ಣನ ಅಭಿ ಪ್ರಾಯದಲ್ಲಿ ತಾಮಸನು ಮತ್ತು ಅಧೋಗತಿಗೆ ಯೋಗ್ಯನು ಎಂದು ಪ್ರಾಪ್ತ ವಾಯಿತು. 2. ಕಿಂಚ, ಬ್ರಹ್ಮೈಕ್ಯ ಜ್ಞಾನದಿಂದ ನಾನು ಮತ್ತೊಬ್ಬನ ಅನುಚ ರನು ಎಂಬ ಭ್ರಾಂತಿಯು ನಿವೃತ್ತವಾಗುವುದರಿಂದ ಜ್ಞಾನಿಯು ಕರ್ಮವನ್ನು ಬಿಡಬಹುದಾದರೆ, ಸರ್ವರೂ ಕರ್ಮವನ್ನು ಪರಿತ್ಯಾಗಮಾಡಬೇಕೆಂದು ಸಿದ್ಧವಾ

ಗುವುದು. ಹೇಗೆಂದರೆ ವಿಸ್ತಾರವಾದ ಒಂದು ಸವಳು (ಬಂಜರು) ಭೂಮಿಯನ್ನು ಇದು ಅತಿ ಫಲವತ್ತಾದ ಪ್ರದೇಶವೆಂದು ನಂಬಿದ ಒಬ್ಬ ಭ್ರಾಂತನು ಅದನ್ನು ಉತ್ತು, ಅದರಲ್ಲಿ ಸಸಿಗಳನ್ನು ನೆಟ್ಟು, ಬಹು ದ್ರವ್ಯವನ್ನು ಖರ್ಚುಮಾಡಿ, ವ್ಯವಸಾಯವನ್ನು ಮಾಡುವನು. ಒಂದು ವರ್ಷದನಂತರ ಯಾವ ಫಲವೂ ಪ್ರಾಪ್ತವಾಗದುದನ್ನು ನೋಡಿ, ಆ ರೈತನು ನಾನು ಭ್ರಾಂತನಾಗಿ ಈ ಹಾಳು ಭೂಮಿಗೆ ಇಷ್ಟು ಧನವನ್ನು ಖರ್ಚುಮಾಡಿ ನಷ್ಟವನ್ನು ಹೊಂದಿದೆನು; ಎಂದು ಜ್ಞಾನವನ್ನು ಹೊಂದಿ, ತಾನು ಅದರ ವ್ಯವಸಾಯವನ್ನು ಪರಿತ್ಯಾಗಮಾಡುವುದಲ್ಲದೆ, ತನ್ನ ಗ್ರಾಮಸ್ಥರಾದ ಇತರ ಜನರಿಗೂ ಉಪದೇಶಮಾಡುತ್ತಾನೆ. "ಅಣ್ಣಂದಿರುಗಳಿರಾ! ಇಂದ್ರನೀಲದ ಕಾಂತಿಯಂತೆ ಶೋಭಾಯಮಾನವಾದ ಈ ಮಹಾ ಮೈದಾನವು ಫಲವತ್ತಾದ ಭೂಪ್ರದೇಶವೆಂದು ಭ್ರಮಿಸಬೇಡಿರಿ! ನಾನು ಮೋಸಹೋದೆನು. ನೀವು ಹೊಟ್ಟೆಗಿಲ್ಲದೆ ಅಲೆದರೂ ಚಿಂತೆಯಿಲ್ಲ; ಇದ್ದ ಒಂದೆರಡು ಕಾಸುಗಳನ್ನು ಈ ಹಾಳುಭೂಮಿಯ ಉದ್ದಿಶ್ಯ ಕಳೆದುಕೊಳ್ಳಬೇಡಿರಿ" ಎಂದು ಹೇಳುವನು. ಆಗ ಅವನ ಯಥಾರ್ಥ ಉಪದೇಶವನ್ನು ನಂಬದ ಮೂಢರು ಕೃಷಿಕಾರ್ಯದಲ್ಲಿ ಆಸಕ್ತರಾದರೆ ಆಗಿಕೊಂಡುಹೋಗಲಿ! ಆತನನ್ನು ಆಪ್ತನು, ಸುಳ್ಳು ಹೇಳುವವನಲ್ಲವೆಂದು ನಂಬಿದವರೆಲ್ಲರೂ ಆ ಭೂಮಿಯ ವ್ಯವಸಾಯದಿಂದ ನಿವೃತ್ತರಾಗುತ್ತಾರೆ. ಹೀಗೆಯೇ, ಅದ್ವೈತಮತದಲ್ಲಿ ಜೀವರುಗಳು ಅನುಚರರೆಂಬುದು ಭ್ರಾಂತಿರೂಪವಾಗಿರುವುದರಿಂದ, ಅವರ ಮತರೀತ್ಯಾ ಈಗ ಮೌಢ್ಯದಿಂದ ಕರ್ಮಮಾರ್ಗದಲ್ಲಿ ಬಹು ಪ್ರಯಾಸಪಡುತ್ತಿರುವ ಮಂದಭಾಗ್ಯರೆಲ್ಲರೂ, ತಮಗೆ ಆಪ್ತತಮರಾದ ಶ್ರೀ ಶಂಕರಾಚಾರ್ಯರ ಅದ್ವೈತವಾಣಿಯನ್ನು ಕೇಳಿ, ಯಾವತ್ತೂ ಕರ್ಮಗಳು 'ಅನುಚರತ್ವ' ಭ್ರಾಂತಿಮೂಲಕವು, ವಸ್ತುತಃ ಚೇತನನು ಬ್ರಹ್ಮಸ್ವರೂಪನು ಎಂದು ಅವರ ಉಪದೇಶವನ್ನು ಪಡೆದನಂತರ, ಅವರ ಮಾತನ್ನು ನಂಬಿ ಅವಶ್ಯವಾಗಿ ಕರ್ಮಾದಿಗಳಿಂದ ನಿವೃತ್ತರಾಗಬೇಕಾಗುವುದು. ಶಂಕರಾಚಾರ್ಯರು ಸ್ಪಷ್ಟವಾಗಿ ಸಕಲ ಧರ್ಮಾನುಷ್ಠಾನವೂ ಭ್ರಾಂತಿಮೂಲವೆಂದು ನಿರೂಪಿಸುತ್ತಾರೆ.—

1. **ನವರ್ಣಾ ನವರ್ಣಾಶ್ರಮಾಚಾರಧರ್ಮಾಃ।**
2. **ನಶಾಸ್ತಾ ನಶಾಸ್ತ್ರಂ ನಶಿಷ್ಯೋ ನಶಿಕ್ಷಾ।**
3. **ಇದಂನುಸತ್ಯಂ ಮಮನಾಸ್ತಿವಿಕ್ರಿಯಾ ವಿಕಾರಹೇತುರ್ನಹಿಮೇ ದ್ವಯತ್ವತಃ।**

ನಪುಣ್ಯಪಾಪೇನಚ ಮೋಕ್ಷಬಂಧನೇನಚಾಸ್ತಿವರ್ಣಾಶ್ರಮಿತಾ ಶರೀರತಃ॥

4. **ನವೇದಾನಯಜ್ಞಾನತೀರ್ಥಂಬ್ರುವಂತಿ ।**

5. **ಅವಿದ್ಯಾವದ್ವಿಷಯಾಣ್ಯೇವ........ಶಾಸ್ತ್ರಾಣಿಚ '**

ಅರ್ಥವು—" ಬ್ರಾಹ್ಮಣಾದಿ ವರ್ಣಗಳು ಸತ್ಯವಲ್ಲ. (ಭ್ರಾಂತಿಕಲ್ಪಿತವು.) ವರ್ಣಾಶ್ರಮಾಚಾರ ಧರ್ಮಗಳು ಸತ್ಯವಲ್ಲ (ಭ್ರಾಂತಿಕಲ್ಪಿತವು.) ಶಾಸನಮಾಡುವ ಗುರುವು ಸತ್ಯನಲ್ಲ (ಭ್ರಾಂತಿಯಿಂದ ಇರುವಂತೆ ಕಾಣುವನು.) ವಿಧಿನಿಷೇಧಗಳನ್ನು ಹೇಳುವ ಶಾಸ್ತ್ರವು ಸತ್ಯವಲ್ಲ (ಭ್ರಾಂತಿಕಲ್ಪಿತವು.) ಶಿಷ್ಯನು ಸತ್ಯನಲ್ಲ. ಶಿಕ್ಷೆಯು (ನಾವು ಮಾಡುತ್ತಿರುವ ಉಪದೇಶವು) ಸತ್ಯವಲ್ಲ (ಭ್ರಾಂತಿಕಲ್ಪಿತವು.) ಇದು ಮಾತ್ರ ಸತ್ಯವು ; ಏನೆಂದರೆ ನಾನು ಅದ್ವಯನಾದ ಬ್ರಹ್ಮನಾದುದರಿಂದ ವಿಕಾರಹೇತುವಾದ ಪರಿಣಾಮಗಳು ನನಗೆ ಆಗಲಾರವು ; ನನಗೆ ಪುಣ್ಯವೂ ಇಲ್ಲ ಪಾಪವೂ ಇಲ್ಲ ; ಮೋಕ್ಷವೂ ಇಲ್ಲ; ಬಂಧಗಳೂ ಇಲ್ಲ : (ಮಿಥ್ಯಾ) ಶರೀರ ನಿಮಿತ್ತಕವಾಗಿ ಪ್ರಾಪ್ತವಾದ **ವರ್ಣಾಶ್ರಮ ಧರ್ಮಾನುಷ್ಠಾನವೂ ನನಗಿರುವುದಿಲ್ಲ.** ವೇದಗಳು ಇರುವುದಿಲ್ಲ (ಮಿಥ್ಯಾ) ; ಯಜ್ಞಗಳು ಇರುವುದಿಲ್ಲ ; ಪಾವನಕರವಾದ ತೀರ್ಥಗಳಿರುವುದಿಲ್ಲ. ಸರ್ವ ವಿಧಿನಿಷೇಧಪರವಾದ ಶಾಸ್ತ್ರಗಳೂ ಸುಳ್ಳೇ ಹೇಳುವುದಾದರೂ, ಅವಿದ್ಯೆಯಿಂದ ಅಜ್ಞರು ಸತ್ಯಬೋಧಕವೆಂದು ತಿಳಿದಿರುವರು. ಅಂಥವರ ಉದ್ದಿಶ್ಯವಾಗಿಯೇ ಆ ಶಾಸ್ತ್ರಗಳು ಇರುತ್ತವೆ."

ಹೀಗೆ ಹೇಳಿರುವುದರಿಂದ 3. ಅದ್ವೈತತತ್ವವು ತಿಳಿದ ದಿನವೇ ಸಕಲರೂ ಭ್ರಾಂತಿಮೂಲಕವಾದ ವರ್ಣಾಶ್ರಮ ಧರ್ಮಾನುಷ್ಠಾನಗಳನ್ನು ಪರಿತ್ಯಾಗಮಾಡಬೇಕು. ಹಾಗೆ ಮಾಡದವನು ಮಂದನು ; ಜ್ಞಾನಿಗಳಿಂದ ಶೋಚನೀಯನು. ಯದ್ಯಪಿ " ಶುಕ್ತಿರೂಪ್ಯ " ಭ್ರಮವುಳ್ಳ ಪುರುಷನು ಬೆಳ್ಳಿಯು ಸಿಕ್ಕುವುದೆಂಬ ಆಶೆಯಿಂದ ಪ್ರವರ್ತಿಸುವನು. ಆದರೆ **ಭ್ರಾಂತಿಕಾಲದಲ್ಲಿಯೂ ಕೂಡ** ಶುಕ್ತಿರೂಪ್ಯವಾಗಲೀ, ಬಿಸಿಲು ಕುದುರೆಯಾಗಲೀ ಪ್ರವೃತ್ತಿಗೆ **ಯೋಗ್ಯವಲ್ಲ:** ಬಾಧಜ್ಞಾನವು ಬಂದನಂತರ ಪುರುಷಪ್ರವೃತ್ತಿಯು ತಾನಾಗಿಯೇ ನಿಂತುಹೋಗುವುದು. ಭ್ರಾಂತಿಕಾಲದಲ್ಲಿಯೂ ಕೂಡ ಪ್ರವರ್ತಿಸದೇ ಇರುವುದು ಮೇಲು. ಶುಕ್ತಿರೂಪ್ಯವನ್ನು ನೋಡಿ ಅದು ಬೆಳ್ಳಿಗಟ್ಟಿಯೆಂದು ಭ್ರಾಂತನಾಗಿ, ಅದರಿಂದ ತನ್ನ ಪತ್ನಿಗೆ ದಿವ್ಯವಾದ ಡಾಬನ್ನು ಮಾಡಬೇಕೆಂದು ಪ್ರಯತ್ನಮಾಡುತ್ತಿರುವ, ಅಥವಾ ಬಿಸಿಲುಗುದುರೆಯನ್ನು ನೋಡಿ ತೃಷಾಪರಿಹಾರವನ್ನು ಬಯಸಿ ಓಡಿಹೋಗುತ್ತಿರುವ ಪುರುಷನನ್ನು ಕುರಿತು ಅಭಿಜ್ಞರು ಹೇಳುವರು. "ಎಲೈ ಮೂಢನೇ ! ಅಲ್ಲಿ ಫಲವು ಏನೂ ದೊರಕಲಾರದು. ಬೆಳ್ಳಿಯಾಗಲೀ, ನೀರಾಗಲೀ

ನಿನ್ನ ಉದ್ದಿಷ್ಟಸ್ಥಳದಲ್ಲಿ ಇರುವುದಿಲ್ಲ. ನೀನು ವೃಥಾ ಏತಕ್ಕೆ ಪ್ರಯಾಸಪಡುತ್ತೀ ?" ಈ ಮಾತನ್ನು ಕೇಳಿ ಆತನು ವಿವೇಕಿಯಾದರೆ, ತನ್ನ ಪ್ರಯತ್ನವನ್ನು ಬಿಟ್ಟು, ಸ್ವಸ್ಥಚಿತ್ತನಾಗುವನು. ಹಾಗೆ ಪ್ರವೃತ್ತಿಯಿಂದ ನಿವೃತ್ತನಾದ ಪುರುಷನನ್ನು ನೋಡಿ ಪ್ರಾಜ್ಞರೆಲ್ಲರೂ ಶ್ಲಾಘಿಸುವರು. "ಈತನು ಬಹು ಸೂಕ್ಷ್ಮಬುದ್ಧಿಯುಳ್ಳವನು ; ತನ್ನ ಪ್ರಯತ್ನವು ಭ್ರಾಂತಿಮೂಲಕವೆಂದು ಉಪದಿಷ್ಟವಾದ ಕ್ಷಣದಲ್ಲಿಯೇ ಶಾಂತಚಿತ್ತನಾದನು. ಈತನು ವಿವೇಕಿಯು ;" ಹೀಗೆ ಕೊಂಡಾಡುವರು. ಆ ರೀತಿ ಆಚರಿಸಿದೆ, ಸಂಶಯಚಿತ್ತನಾಗಿ, ಪುನಃ ಮರಳುಕಾಡಿನಲ್ಲಿ ಓಡಾಡುತ್ತಿರುವುದನ್ನು ನೋಡಿ ಜನರು ಅವನನ್ನು ಮೂಢನೆಂದು ನಿಂದಿಸುವುದಲ್ಲದೆ, ಅಪಹಾಸವನ್ನು ಮಾಡುವರು. ಹೀಗೆಯೇ ಪ್ರಕೃತದಲ್ಲಿ ಅನುಚರತ್ವಭ್ರಾಂತಿಯಿಂದ, ನಾನು ವಿಧಿಬದ್ಧಜೀವನೆಂದು ತಿಳಿದು, ಕಾಯಕ್ಲೇಶಕರವಾದ ತಪಸ್ಸಿನಲ್ಲಿ ರತನಾದ ಪುರುಷನು ಅದ್ವೈತಮತವನ್ನವಲಂಬಿಸಿ, ತಾನು ವಸ್ತುತಃ ಅನುಚರನಲ್ಲವೆಂದು ತಿಳಿದಕ್ಷಣವೇ ಕರ್ಮಾದಿಗಳನ್ನು ಪರಿತ್ಯಾಗಮಾಡುವನು. ಅದ್ವೈತತತ್ತ್ವೋಪದೇಶಕನಾದ ಗುರುವು ತನ್ನ ಶಿಷ್ಯನ ಪ್ರಾಜ್ಞತೆಯನ್ನೂ ವಿವೇಕವನ್ನೂ ನೋಡಿ ಆನಂದಪಡುವನು ಮತ್ತು ಸಭೆಗಳಲ್ಲಿ ಶ್ಲಾಘಿಸುವನು. ಹಾಗಿಲ್ಲದೆ ತತ್ತ್ವವನ್ನು ಒಪ್ಪಿಕೊಂಡು, ಇನ್ನೂ ಕರ್ಮಾದಿಗಳನ್ನು ಅನುಷ್ಠಾನಮಾಡುತ್ತಿದ್ದರೆ ಗುರುವು ತನ್ನ ಉಪದೇಶವನ್ನು ಆಚರಣೆಗೆ ತರದಿರುವ ಮಂದನಾದ ಶಿಷ್ಯನನ್ನು ನೋಡಿ ಖಿನ್ನನಾಗಬೇಕು.

"ದಂಡೋದಮುಯತಾಮಸ್ಮಿ" ಎಂದು ಹೇಳುವ ಶ್ರೀ ಕೃಷ್ಣನಾದರೋ ಕರ್ಮಪರಿತ್ಯಾಗಮಾಡುವವರು ದಂಡಧಾರಕನಾದ ತನ್ನ ಕೋಪಕ್ಕೆ ಪಾತ್ರರಾಗಿ ನರಕಾದ್ಯನರ್ಥಗಳನ್ನು ಅನುಭವಿಸುವರೆಂದೂ, ಕರ್ಮಾನುಷ್ಠಾನ ಮಾಡುವವರು ಜ್ಞಾನಾದಿ ಪುರುಷಾರ್ಥಗಳನ್ನು ಹೊಂದುವರೆಂದೂ ಪುನಃ ಪುನಃ ಉಪದೇಶಮಾಡಿರುತ್ತಾನೆ. ಮತ್ತು ತಾನು ಕರ್ಮಮಾಡದೆ ಹೋದರೆ, ಸ್ವತಂತ್ರನಾದ ತನ್ನನ್ನು ನೋಡಿಕೊಂಡು ವಿಧಿಬದ್ಧರಾದ ಜೀವರೂ ಕರ್ಮಪರಿತ್ಯಾಗ ಮಾಡಿದರೆ ವರ್ಣಸಾಂಕರ್ಯಾದಿ ಬಹಳ ಅನರ್ಥಗಳು ಬರಬಹುದೆಂಬ ಭಾವದಿಂದ, ಶ್ರೀ ಕೃಷ್ಣನು ನಾನೂ ಸಹ ಕರ್ಮಮಾರ್ಗದಲ್ಲಿ ಪ್ರವೃತ್ತನಾಗಿದ್ದೇನೆ ಎಂದು ಹೇಳುತ್ತಾನೆ :—

(1) **ನಮೇಪಾರ್ಥಾಸ್ತಿಕರ್ತವ್ಯಂ... ....ವರ್ತಏವಚ ಕರ್ಮಣಿ ।**
ಯದಿಹ್ಯಹಂ ನವರ್ತೇಯಂ ಜಾತುಕರ್ಮಣ್ಯ ತಂದ್ರಿತಃ ।

ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥಸರ್ವಶಃ ।
ಉತ್ಸೀದೇಯುರಿಮೇಲೋಕಾ ನಕುರ್ಯಾಂಕರ್ಮಚೇದಹಂ ।
ಸಂಕರಸ್ಯಚ ಕರ್ತಾಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥
—(3. 22-24.)

ನಾನು ಕರ್ಮಬದ್ಧನಲ್ಲ. ಆದರೂ ಕರ್ಮದಲ್ಲಿ ಪ್ರವರ್ತಿಸುತ್ತೇನೆ. ನಾನು ಆಲಸ್ಯಮಾಡಿ ಕರ್ಮಗಳನ್ನು ಆಚರಿಸದಿದ್ದರೆ, ಸರ್ವಮನುಷ್ಯರೂ ನನ್ನ ಮಾರ್ಗವನ್ನೇ ಅನುಸರಿಸಿಬಿಡುವರು. ಆದ್ದರಿಂದ ನಾನು ಕರ್ಮಮಾಡದಿದ್ದರೆ, ಈ ಲೋಕವೆಲ್ಲವೂ ನರಕವನ್ನು ಹೊಂದಬೇಕಾಗುವದು. ಕಿಂಚ ಕರ್ಮಲೋಪದಿಂದ ಬ್ರಹ್ಮಕ್ಷತ್ರಾದಿವರ್ಣಭೇದವು ನಾಶವಾಗಿ ವರ್ಣಸಾಂಕರ್ಯವನ್ನೂ ನಾನು ಉಂಟುಮಾಡಿದಂತಾಗುವುದು. ಈ ರೀತಿ ನಾನೇ ಸಕಲ ಪ್ರಜೆಗಳನ್ನೂ ಕೊಂದಹಾಗಾಗುವುದು.

ಕಿಂಚ 4. ಜ್ಞಾನಿಯು ಕರ್ಮಮಾಡಬೇಕಾದುದಿಲ್ಲ ಎಂಬ ಶಂಕರಾಚಾರ್ಯರ ಮಾತು ಕೇವಲ ಅಪ್ರಸಕ್ತಕಥನವು. ಹೇಗೆಂದರೆ ಪರೋಕ್ಷಜ್ಞಾನಿಯು ಕರ್ಮಮಾಡಬೇಕಾದುದಿಲ್ಲ ಎಂದು ಹೇಳಿದರೆ* ಸರ್ವರೂ ಕರ್ಮಪರಿತ್ಯಾಗಮಾಡಬೇಕು ಎಂದು ಕಂಠತಃ ಹೇಳಿದಂತಾಗುವುದು. ಆದುದರಿಂದ ಬ್ರಹ್ಮೈಕ್ಯಸಾಕ್ಷಾತ್ಕಾರ ಹೊಂದಿದ ಜ್ಞಾನಿಗಳು ಕರ್ಮಮಾಡಬೇಕಾದುದಿಲ್ಲ ಎಂದು ಶಂಕರಾಚಾರ್ಯರು ಹೇಳಬೇಕು. ಇದು ಅವರ ಶಾಸ್ತ್ರರೀತ್ಯಾ ಕೇವಲ ಅಪ್ರಸಕ್ತವಿಚಾರವು. ಹೇಗೆಂದರೆ ಬ್ರಹ್ಮೈಕ್ಯಜ್ಞಾನವು ಆದ ಕ್ಷಣದಲ್ಲಿಯೇ ಶುಕ್ತಿರಜತಭ್ರಮವನ್ನು ಹೊಂದಿದವನಿಗೆ ಅಧಿಷ್ಠಾನವಾದ ಶುಕ್ತಿಜ್ಞಾನವು ಬಂದಕ್ಷಣದಲ್ಲಿ ರಜತವು ಅದೃಶ್ಯವಾಗುವಂತೆ, ಜ್ಞಾನಿಗೆ ದೇಹಾದಿ ಸಕಲಮಿಥ್ಯಾಭೂತವಾದ ಬಂಧಗಳೂ ಮಾಯವಾಗಿ ಹೋಗಿ, ಆತನು ಬ್ರಹ್ಮೈಕ್ಯವನ್ನು ಹೊಂದಬೇಕು. ಪುನಃ ಸಂಸಾರದಲ್ಲಿ ಆತನ ಅವಸ್ಥಾನವು ಒಂದು ಕ್ಷಣವೂ

---

* “ಮುಮುಕ್ಷೋಃ ಕರ್ಮಸಂನ್ಯಾಸ ವಿಧಾನಾತ್” ಎಂದು ಮುಮುಕ್ಷುಸಾಮಾನ್ಯರು ಕರ್ಮಪರಿತ್ಯಾಗಮಾಡಬಹುದೆಂದು ತೀರ್ಮಾನಮಾಡಿರುತ್ತಾರೆ. ಸನ್ಯಾಸಿಗಳಂತೂ ಕರ್ಮವಿಧಿಯನ್ನು ಮೀರಿದವರು ಎಂದು ಹೇಳಿರುತ್ತಾರೆ. ಹೀಗಿದ್ದರೂ, ದೇವರ ದಯದಿಂದ, ಅದ್ವೈತಮತಾನುಯಾಯಿಗಳಾದ ಮುಮುಕ್ಷುಗಳು ತಮ್ಮ ಗುರುಗಳಾದ ಶಂಕರಾಚಾರ್ಯರ ಅಪ್ಪಣೆಯನ್ನು ಮೀರಿ, ವಿಧ್ಯುಕ್ತಕರ್ಮಾನುಷ್ಠಾನಮಾಡುತ್ತಿರುವರು. ಅನ್ಯಥಾ ವೈದಿಕ ಆಚರಣೆಗಳು ಸರ್ವಥಾ ಲುಪ್ತವಾಗಿ ವರ್ಣಸಾಂಕರ್ಯವು ಬಂದು ಹೋಗುತ್ತಿತ್ತು.

ಸಂಭವಿಸಲಾರದು.* ಪ್ರಾರಬ್ಧ ಕರ್ಮಾದಿಗಳು ಬ್ರಹ್ಮೈಕ್ಯಜ್ಞಾನವಾದ ನಂತರ ಇರಲಾರವು ಎಂದು ಅವರೇ ಹೇಳಿರುತ್ತಾರೆ.† ಆದುದರಿಂದ ಜ್ಞಾನಿಯು ಕರ್ಮಪರಿತ್ಯಾಗಮಾಡಬೇಕೆಂಬ ಅವರ ವಿಧಿಯು ವೇದಾಂತವನ್ನು ವ್ಯಾಸಂಗಮಾಡುತ್ತಿರುವ ಅಥವಾ ಶ್ರವಣಮಾಡಿರುವ ಪರೋಕ್ಷಜ್ಞಾನಿಯ ವಿಷಯವೆಂದೇ ಒಪ್ಪಬೇಕು. ಇದರಿಂದ ಪ್ರಾಜ್ಞರು ಕರ್ಮಾನುಷ್ಠಾನ ಮಾಡಕೂಡದೆಂದು ಶಂಕರಾಚಾರ್ಯರ ಅಭಿಪ್ರಾಯವಾದಂತೆ ತೋರುತ್ತದೆ.‡

---

* ಶ್ರೀಪಾದಒಡೆಯರ ಈ ಅಭಿಪ್ರಾಯವನ್ನೇ ಜಿ. ಡಾಂಡಾಯ್ ನಾಮಕ ವಿದ್ವಾಂಸನು ಆಂಗ್ಲೇಯಭಾಷೆಯಲ್ಲಿ ಈ ರೀತಿ ಬರೆದಿರುತ್ತಾನೆ:—

† The complete destruction of the main dream is only expected after death ;........Any experience of Monism....is esperience of the dead. In other words perfect knowleege and life are incompatible. Either the vidwan has complete Vidya ; then he is Brahman ; the world has altogether disappeared from his sight ; he is completely released. But from this state there is no return ; or the Vidwan is still alive ; then he has not complete Vidya. He still sees the world....(His) state implies duality.

G. Dandoy S. G. Culcutta.

ಅರ್ಥವು :—ಪೂರ್ಣವಾದ ಬ್ರಹ್ಮಜ್ಞಾನವು—ಪ್ರಧಾನವಾದ ಜಗತ್ಸ್ವಪ್ನದ ಸಂಪೂರ್ಣ ನಾಶವು—ದೇಹತ್ಯಾಗಾನಂತರದಲ್ಲಿಯೇ ಆಗುವುದೆಂದು (ಅದ್ವೈತಿಗಳಿಂದ) ನಿರ್ಣಯಿಸಲ್ಪಟ್ಟಿದೆ. (ಯಾತಕ್ಕೆಂದರೆ ಸರ್ವವೂ ಮಿಥ್ಯಾ ಆದುದರಿಂದ ಬ್ರಹ್ಮೈಕ್ಯಜ್ಞಾನದಲ್ಲಿ ತನ್ನ ದೇಹವು ತೋರುವುದು ಅಸಂಭಾವಿತವು. ಆದ್ದರಿಂದ ಐಕ್ಯಜ್ಞಾನವುಳ್ಳವನಿಗೆ ಸ್ವದೇಹಾದಿಗಳ ಅದರ್ಶನವು ಅವರ್ಜನೀಯವು). ಹೀಗೆ ಯಾವ ಐಕ್ಯಾನುಭವವಾದರೂ ದೇಹನಾಶಹೊಂದಿದ ಮೃತನ ಅನುಭವವೇ ಆಗಬೇಕು. ಹಾಗೆಂದರೆ, ಬ್ರಹ್ಮೈಕ್ಯಜ್ಞಾನವೂ, ಬದುಕಿರೋಣವೂ ಪರಸ್ಪರ ವಿರುದ್ಧವಾದುವುಗಳು. ಜ್ಞಾನಿಯು ಅಥವಾ ಸಮಗ್ರಬ್ರಹ್ಮಜ್ಞಾನವನ್ನು ಹೊಂದುವನು ; ಅಂದರೆ ಬ್ರಹ್ಮನೇ ಆಗುವನು ; ಸರ್ವಪ್ರಪಂಚವೂ ಅವನ ದೃಷ್ಟಿಗೆ ಅದೃಶ್ಯವಾಗಿ ಹೋಗುವುದು. ಅವನು ಸಂಪೂರ್ಣಮುಕ್ತನು ; ಆ ಸ್ಥಿತಿಯಿಂದ ಆತನಿಗೆ ಪುನರಾವರ್ತಿಯಿಲ್ಲವು ; ಅಥವಾ 2. ವಿದ್ವಾಂಸನು ಇನ್ನೂ ಬದುಕಿದ್ದಾನೆ. ಹಾಗಾದರೆ ಅವನಿಗೆ ಪೂರ್ಣವಾದ ಜ್ಞಾನವು (ಬ್ರಹ್ಮೈಕ್ಯಜ್ಞಾನವು) ಬಂದಿಲ್ಲ. ಅವನು ಇನ್ನೂ ಪ್ರಪಂಚವನ್ನು ನೋಡುತ್ತಾನೆ. ಅವನ ಸ್ಥಿತಿಯು ಅವನಿಗೆ ದ್ವೈತಜ್ಞಾನವಿರುವುದೆಂದೇ ಸೂಚಿಸುವುದು.

‡ ಶ್ರೀ ಶ್ರೀಗಳವರ ಈ ಅಭಿಪ್ರಾಯವು ಅದ್ವೈತ ಪಕ್ಷಪಾತಿಗಳಾದ ಆಂಗ್ಲೇಯ ವೇದಾಂತ ವಿದ್ವದಗ್ರಣಿಗಳಾದ ಕಲ್ಕತ್ತೆಯ ವಿಶ್ವವಿದ್ಯಾನಿಲಯದಲ್ಲಿ ಜಾರ್ಜ್ ಚಕ್ರವರ್ತಿಯವರ

ಇದು ಶ್ರೀಕೃಷ್ಣನಿಗೆ ಅತ್ಯಂತ ವಿರುದ್ಧವಾದ ಅಭಿಪ್ರಾಯವಿರುತ್ತದೆ. ಅನುಚರಭಾವವು ಸಂಸಾರದಲ್ಲಿ ಇರುವುದಲ್ಲದೆ ಮುಕ್ತಿಯಲ್ಲಿಯೂ ಅನುಸರಿಸಿಕೊಂಡು ಬರುವುದೆಂದು ಅನೇಕ ಗೀತಾವಾಕ್ಯಗಳಲ್ಲಿ ಸ್ಪಷ್ಟವಾಗಿರುವುದು. ಜ್ಞಾನಿಗಳೂ ಕೂಡ ಧ್ಯಾನಪ್ರವಚನರೂಪ ವಿಶೇಷ ಕರ್ಮಗಳಲ್ಲಿ ಆಸಕ್ತರಾಗಬೇಕು ಎಂದು ಶ್ರೀಕೃಷ್ಣನು ಹೇಳುತ್ತಾನೆ:—

(2) **ಯೋಗಾರೂಢಸ್ಯತಸ್ಯೈವಶಮಃಕಾರಣಮುಚ್ಯತೇ ।** —(6. 3.)

ಅಪರೋಕ್ಷಜ್ಞಾನಿಯಾದ ಮುನಿಗೆ ಪರಮಾತ್ಮಧ್ಯಾನವು (ಮುಕ್ತಿ) ಸುಖಾತಿಶಯಕ್ಕೆ ಕಾರಣವಾಗುತ್ತದೆ. ಪ್ರವಚನಕರ್ಮದಲ್ಲೂ ಜ್ಞಾನಿಗೆ ಅಧಿಕಾರವೆಂಬುದು ಶ್ರೀಕೃಷ್ಣನ ಮಾತಿನಿಂದ ಅನುಮಿತವಾಗುವುದು:—

(3) **ತದ್ವಿದ್ಧಿಪ್ರಣಿಪಾತೇನ ಪರಿಪ್ರಶ್ನೇನಸೇವಯಾ ।**
ಉಪದೇಕ್ಷ್ಯಂತಿತೇಜ್ಞಾನಂ ಜ್ಞಾನಿನಸ್ತತ್ವದರ್ಶಿನಃ ॥ —(4. 34.)

ಅರ್ಜುನ! ಧಂಡಪ್ರಣಾಮ, ವಿನಯಾನ್ವಿತವಾದ ಪ್ರಾರ್ಥನಾ ಮತ್ತು ನಾನಾ ವಿಧವಾದ ಸೇವೆಗಳಿಂದ ಈ ತತ್ವವನ್ನು ಜ್ಞಾನಿಗಳಿಂದ ತಿಳಿ. (ಜ್ಞಾನಿಗಳು ನಿರಪೇಕ್ಷರಾಗಿ ಸ್ಥಾಣುವಿನಂತೆ ಇರುವರಾದರೆ ಸಂಸಾರಿಯಾದ ನನ್ನ ಸಂಗಡ ಮಾತಾಡುವರೆ? ಎಂದರೆ ಹೇಳುತ್ತಾನೆ:—) ಯಥಾರ್ಥ ತತ್ವವನ್ನು ತಿಳಿದ ಜ್ಞಾನಿಗಳು ನಿನಗೆ ಜ್ಞಾತವ್ಯತತ್ವವನ್ನು ಅವಶ್ಯವಾಗಿಯೂ ಉಪದೇಶ ಮಾಡುತ್ತಾರೆ. (ಜ್ಞಾನಿಗಳು ಪ್ರವಚನ ಕರ್ಮದಲ್ಲಿ ಅನಾದರ ಮಾಡುವರಲ್ಲವೆಂದು ಭಾವವು.) ಪುನಃ:—

(4) **ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ।**
—(4. 20.)

ವೇದಾಂತ ಮಹೋಪಾಧ್ಯಾಯ ಪೀಠದಲ್ಲಿ ಸ್ಥಿತರಾದ, ಬಹುಗ್ರಂಥಗಳನ್ನು ರಚಿಸಿರುವ ಯಸ್. ರಾಧಾಕೃಷ್ಣರಿಂದಲೂ ಅನುಮೋದಿಸಲ್ಪಟ್ಟಿದೆ:—

"The Controversy with Mandana Misra shows that Shankara was opposed to the exclusive supremacy of The Vedic Ritualism." Indian Philosophy by S. Radhakrishnan, M.A., King George V Professor of Philosophy, Calcutta.

ಅರ್ಥವು:—ಶಂಕರ ಮಂಡನ ಮಿಶ್ರರ ಸಂವಾದವು ಶಂಕರಾಚಾರ್ಯರು ವೈದಿಕಕರ್ಮಾನುಷ್ಠಾನಗಳಿಗೆ ಅತಿಶಯವಾದ ಆಧಿಕ್ಯವನ್ನು ಕೊಡುವುದರಲ್ಲಿ ವಿರೋಧಿಗಳಾಗಿದ್ದರೆಂದು ತೋರಿಸುತ್ತದೆ.

ಲೋಕಮರ್ಯಾದಾರಕ್ಷಣಾರ್ಥವಾಗಿಯಾದರೂ (ಸಾಮಾನ್ಯ) ಕರ್ಮಗಳನ್ನೂ (ಕೂಡ) ನೀನು ಜ್ಞಾನಿಯಾದರೂ ಮಾಡಬೇಕು. ಬ್ರಹ್ಮಚರ್ಯಾಶ್ರಮವನ್ನು ಬಿಟ್ಟು, ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ಔಪಾಸನಾದಿ ಬೇರೆ ಕರ್ಮಗಳನ್ನು ಮಾಡುವ ಗೃಹಸ್ಥನಿಗೆ ಭಿಕ್ಷಾನ್ನಭೋಜನ ಮತ್ತು ಮೌಂಜಿಬಂಧನ ನಿವೃತ್ತಿಯಿಂದ ದೋಷವು ಇಲ್ಲದಂತೆ, ಅಪರೋಕ್ಷಜ್ಞಾನವನ್ನು ಹೊಂದಿದ ಜ್ಞಾನಿಗೆ ಧ್ಯಾನಪ್ರವಚನಾದಿ ಮಹಾ ಕರ್ಮಗಳಲ್ಲಿ ವಿಶೇಷ ಅಧಿಕಾರವೂ, ಸಂಧ್ಯಾವಂದನಾದಿ ಸಾಮಾನ್ಯ ಕರ್ಮಗಳ ಪರಿತ್ಯಾಗದಿಂದ ದೋಷಾಭಾವವೂ ಶಾಸ್ತ್ರೋಕ್ತವಾಗಿರುವುದು. ಹೀಗಿದ್ದರೂ, ಜ್ಞಾನಿಯು ಜನಸಂಘದಲ್ಲಿ ವಾಸಮಾಡುತ್ತಿದ್ದರೆ ತಾನೂ ಸಕಲ ಕರ್ಮಗಳನ್ನೂ ಆಚರಿಸಿ ಪ್ರಜೆಗಳಿಗೆ ಶಿಕ್ಷಿಸಬೇಕು. ಇಂಥಾ ಪ್ರಜಾಶಿಕ್ಷಣರೂಪವಾದ ಕರ್ಮವು ನಿಷ್ಫಲವಾಗಿದ್ದರೆ, ಜ್ಞಾನಿಯು ಕಾಯಕ್ಲೇಶಗಳನ್ನು ಸಹಿಸಿ ಯಾತಕ್ಕೆ ಅದನ್ನು ಮಾಡುವನು? ಆದುದರಿಂದ, ಕರ್ಮಮಾಡಿ ಪ್ರಜೆಗಳನ್ನು ಶಿಕ್ಷಿಸುವುದರಿಂದ ಪರಮಾತ್ಮನ ಪ್ರಸಾದ ವಿಶೇಷವೂ, ಮುಕ್ತಿಯಲ್ಲಿ ಸುಖಾತಿಶಯವೂ ಉಂಟೆಂದು ಶ್ರೀ ಕೃಷ್ಣನ ವಿಧಿಯಿಂದಲೇ ಸಿದ್ಧವಾಗುವುದು. ಶ್ರೀ ಕೃಷ್ಣನು ಹೇಳುತ್ತಾನೆ:—

(5) **ಕುರ್ಯಾದ್ವಿದ್ವಾಂಸ್ತಥಾ ಸಕ್ತಶ್ಚಿಕೀರ್ಷುರ್ಲೋಕಸಂಗ್ರಹಂ ।**
—(4. 25.)

ವಿದ್ವಾಂಸನು ಅಜ್ಞಾನಿಗಳಿಗೆ, ಅವರಿಗೆ ವಿಹಿತವಾದ ಸಾಮಾನ್ಯಕರ್ಮಗಳಲ್ಲಿ ಪ್ರವೃತ್ತಿಯನ್ನುಂಟುಮಾಡುವುದಕ್ಕಾಗಿ, ಫಲಾಪೇಕ್ಷೆರಹಿತನಾಗಿ (ಸಾಮಾನ್ಯ) ಕರ್ಮಗಳನ್ನು (ಕೂಡ) ಆಚರಿಸಬೇಕು. ಜ್ಞಾನಿಯು ಹೀಗೆ ಅವಶ್ಯವೂ ಮಾಡಬೇಕೆಂದು ಶ್ರೀಕೃಷ್ಣನು ವಿಧಿಸುತ್ತಾನೆ:—

(6) **ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಸ್ಸಮಾಚರನ್ ।**
—(3.26.)

ಭಗವಂತನಲ್ಲಿ ಮನೋಯೋಗವುಳ್ಳವನಾಗಿ ಜ್ಞಾನಿಯು ಸರ್ವಕರ್ಮಗಳನ್ನೂ ಆಚರಿಸುತ್ತಾ, ಇತರರೂ ಕರ್ಮದಲ್ಲಿ ಆಸಕ್ತರಾಗುವಂತೆ ಮಾಡಬೇಕು.

ಈ ವಾಕ್ಯಗಳಿಂದ ಧ್ಯಾನ, ಪ್ರವಚನ, ಅವಿದ್ವಜ್ಜನಶಿಕ್ಷಣ ಇವೇ ಮುಂತಾದುವುಗಳು ಜ್ಞಾನಿಯಿಂದ ಅನುಷ್ಠೇಯವಾದ ಧರ್ಮಗಳು. ಇವುಗಳಿಂದ ಪ್ರಸನ್ನನಾಗಿ ಪರಮಾತ್ಮನು ಮುಕ್ತಿಯಲ್ಲಿ ಸುಖಾತಿಶಯವನ್ನು ಕೊಡುತ್ತಾನೆಂದು ನಿಶ್ಚಿತವಾಗುವುದು. ಆದುದರಿಂದ ಅನುಚರಭಾವವು ಜ್ಞಾನಿಗೂ ತಪ್ಪಿದುದಲ್ಲ.

6

ಮುಕ್ತಿಯಲ್ಲೂ ಜೀವರುಗಳಿಗೆ ಸ್ವಾಭಾವಿಕವಾದ ಅನುಚರಭಾವವು ಇದ್ದೇ ಇರುವುದೆಂಬುದು **ಮುಕ್ತಾನಾಂ ಪರಮಾಗತಿಃ** ಎಂಬ ಶ್ರೀ ಕೃಷ್ಣನ ಹೆಸರೇ ತಿಳಿಸುವುದು.* **ಬ್ರಹ್ಮಣೋಹಿಪ್ರತಿಷ್ಠಾಹ ಮಮೃತಸ್ಯಾವ್ಯಯಸ್ಯಚ** ಇತ್ಯಾದಿ ವಾಕ್ಯಗಳು ದೃಢೀಕರಿಸುವುವು.

ಜ್ಞಾನಿಯಾದ ಅರ್ಜುನನೂ ಸರ್ವಪ್ರಾಣಿಗಳನ್ನೂ, ವಿಶ್ವರೂಪಿಯಾದ ಪರಮಾತ್ಮನ ಆಶ್ರಯದಲ್ಲಿ, ಕೈಮುಗಿದುಕೊಂಡು ಅನುಚರರಾಗಿರುವ ಹಾಗೆಯೇ ನೋಡಿರುತ್ತಾನೆ.

1. **ಅಮೀಹಿತ್ವಾಂಸುರಸಂಘಾವಿಶಂತಿ ಕೇಚಿದ್ಭೀತಾಃ ಪ್ರಾಂಜಲಯೋಗೃಣಂತಿ ।**
ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ ಸ್ತುವಂತಿತ್ವಾಂಸ್ತುತಿಭಿಃ ಪುಷ್ಕಲಾಭಿಃ ||—(11. 21.)

ಹೇ ದೇವ! ಸಕಲ ದೇವತಾಸಮೂಹವೂ† ನಿನ್ನನ್ನು ಪ್ರವೇಶಿಸುತ್ತಾರೆ. ಕೆಲವರು ಕೈಜೋಡಿಸಿಕೊಂಡು ಭೀತರಾಗಿ ನಿನ್ನನ್ನು ಸ್ತುತಿಸುತ್ತಾರೆ. ಮಹರ್ಷಿಗಳ ಮತ್ತು ಸಿದ್ಧರ ಸಮೂಹಗಳು ಸ್ವಸ್ತಿ! ಎಂದು ಹೇಳುತ್ತಾ ನಿನ್ನನ್ನು ಪುಷ್ಕಲವಾದ (ಗುಣಪೂರ್ಣನೆಂದು ಪ್ರತಿಪಾದಿಸುವ) ಸ್ತೋತ್ರಗಳಿಂದ ಸ್ತುತಿಸುತ್ತಾರೆ.

ಈ ರೀತಿಯಾಗಿ ವಿಷ್ಣುಸರ್ವೋತ್ತಮತ್ವಸಾಧಕವಾದ ಸಾಕ್ಷಾದ್ವಚನಗಳು ಮತ್ತು ಯುಕ್ತಿಗಳು; ಜೀವದಾಸ್ಯವನ್ನು ಪ್ರತಿಪಾದಿಸುವ ವಚನಗಳು ಮತ್ತು ಶಾಸ್ತ್ರವಿಧಾನವೇ ಮೊದಲಾದ ಯುಕ್ತಿಗಳು; ಜ್ಞಾನಿಗೂ ಕರ್ಮವಿಧಾನಮಾಡುವ ಶ್ರೀಕೃಷ್ಣನ ವಾಕ್ಯಗಳು; ಮುಕ್ತಿ ಮತ್ತು ಬ್ರಹ್ಮಾಪರೋಕ್ಷಜ್ಞಾನವರ್ಣನೆಯೂ;

---

* "**ಉತಾಮೃತತ್ವಸ್ಯೇಶಾನಃ**" ಎಂಬ ಶ್ರುತಿಯೂ "**ಮುಕ್ತೋಪಸೃಪ್ಯತ್ವವ್ಯಪದೇಶಾತ್**" ಮುಂತಾದ ಬ್ರಹಸೂತ್ರಗಳೂ ಮುಕ್ತಿಯಲ್ಲೂ ಸರ್ವಚೇತನರೂ ಪರಬ್ರಹ್ಮನ ಅಧೀನರಾಗಿಯೇ ಇರುವರೆಂದು ಹೇಳುವುವು.

† **ಪಶ್ಯಾಮಿದೇವಾನ್** ಎಂದು ನಾನು ದೇವತೆಗಳನ್ನು ನೋಡುತ್ತೇನೆ ಎಂದು ಪೂರ್ವದಲ್ಲೇ ಅರ್ಜುನನು ಹೇಳಿರುವುದರಿಂದ, ಈಗ ಪುನಃ ದೇವತಾಸಮೂಹವನ್ನು ನೋಡುತ್ತೇನೆಂಬ ವಾಕ್ಯವು **ಮುಕ್ತವರ್ಗ**ವನ್ನು ಬೋಧಿಸುವುದೆಂದು ತಿಳಿಯಬೇಕು. "ಪ್ರವೇಶೋ ನಿರ್ಗಮಶ್ಚೈವ ಮುಕ್ತಾನಾಂ ಸ್ವೇಚ್ಛಯಾಭವೇತ್" ಇತ್ಯಾದಿ ಪ್ರಮಾಣವಚನಗಳಿಂದಲೂ ಇದು ಸಿದ್ಧವಾಗುವುದು.

ಮತ್ತು ಅನುಚರ ಭಾವವನ್ನು ಅಂಗೀಕರಿಸದಿದ್ದರೆ ಇರುವ ಅನುಪಪತ್ತಿ ಸಮು ದಾಯವು ; ಇಷ್ಟರ ವಿಮರ್ಶೆಯಿಂದ ಅನಾದ್ಯನಂತ ಕಾಲದಲ್ಲೂ ರಮಾ ಬ್ರಹ್ಮಾದಿ ಸಕಲ ಚೇತನರೂ ಶ್ರೀಮನ್ನಾರಾಯಣನ ವಶರಾಗಿರುವರೇ ಹೊರತು, ಯಾವ ಪ್ರವೃತ್ತಿಯಲ್ಲಿಯೂ ಸ್ವಾತಂತ್ರ್ಯವುಳ್ಳವರಲ್ಲವೆಂಬುದು ದೇವೋತ್ತಮನಾದ ಶ್ರೀ ಕೃಷ್ಣನ ಅಭಿಪ್ರಾಯವಿರುತ್ತದೆ ಎಂದು ಸಿದ್ಧವಾಗುವುದು.

V

ತಾರತಮ್ಯಸಮರ್ಥನವು.

2 ರಿಂದ 5—8—1930 ರಲ್ಲಿ.

ಸಭಿಕರು—ಧರ್ಮಾಧಿಕಾರಿಗಳು, ವಿದ್ವಾಂಸರು ಮತ್ತು ವಿದ್ಯಾರ್ಥಿಗಳು.

1

ಶ್ರೀ ಶ್ರೀಗಳವರು—ಈ ದಿವಸ ಪ್ರಮಾಣಪ್ರಮಿತರಾದ ಅನಂತಚೇತನರು ಸಮಾನರಾಗಿರದೆ, " **ನೀಚೋಚ್ಚಭಾವಂಗತಾಃ** " ಎಂದರೆ ಬಹುಪ್ರಕಾರವಾದ ತಾರತಮ್ಯದಿಂದ ಸಹಿತರಾಗಿರುವರು ಎಂಬ ವಿಷಯವನ್ನು ಶ್ರೀಕೃಷ್ಣನ ಸರ್ವೋತ್ಕೃಷ್ಟ ವಾಕ್ಯಗಳಿಂದ ನಿರೂಪಿಸುತ್ತೇವೆ. ಆದರೆ ಅಷ್ಟರಿಂದಲೇ ಜೀವತಾರತಮ್ಯವು ಕೇವಲ ಆಗಮಗಮ್ಯವಾದ ಪ್ರಮೇಯವೆಂದು ನೀವು ತಿಳಿಯಬಾರದು. ಅನೇಕವಿಧರಾದ ಚೇತನರಿರುವುದೂ ಮತ್ತು ಒಂದೊಂದು ವಿಧ ಚೇತನಸಮೂಹದಲ್ಲಿಯೂ ಬಹು ತರತಮಭಾವವಿರುವುದೂ ಸಹ ಅನುಭವದಿಂದಲೇ ಸಿದ್ಧವಾಗುವುದು.

ಪ್ರಶ್ನೆ—ಸ್ವಾಮಿ! ಲೋಕದಲ್ಲಿ ಒಬ್ಬನು ಸಾರ್ವಭೌಮನು, ಮತ್ತೊಬ್ಬನು ಮಂತ್ರಿಯು, ಮತ್ತೊಬ್ಬನು ಭಿಕ್ಷುಕನು ಹೀಗೆ ದ್ರವ್ಯನಿಬಂಧನವಾದ ತಾರತಮ್ಯವು ಪ್ರತ್ಯಕ್ಷ ಗೋಚರವಾಗಿರುವುದು. ಒಬ್ಬನು ವೃದ್ಧನು, ಮತ್ತೊಬ್ಬನು ಕುಮಾರನು ಹೀಗೆ ವಯಸ್ಸಿನ ತಾರತಮ್ಯವೂ ಕಣ್ಣಿಗೆ ಕಾಣುವುದು. ಆದರೆ 'ಅಹಂ' ಪದಾರ್ಥಗಳಾದ ಜೀವರುಗಳು **ಸ್ವರೂಪೇಣ** ಉಚ್ಚ ನೀಚಭಾವದಿಂದ ಸಹಿತರಾಗಿರುವರೆಂಬುದು ಹೇಗೆ ?

ಶ್ರೀ ಶ್ರೀಗಳವರು—ವಯಸ್ಸಿನ ತಾರತಮ್ಯ ಮತ್ತು ಧನತಾರತಮ್ಯವಲ್ಲದೆ ಬೇರೆ ಯಾವ ವಿಧವಾದ ಉತ್ತಮಾಧಮಭಾವವೂ ಲೋಕದಲ್ಲಿ ಕಾಣುವುದಿಲ್ಲವೋ ?

ಉತ್ತರ—ವಿದ್ಯಾರ್ಥಿಗಳು—ಧನವಂತನು ದೊಡ್ಡವನು, ಗರೀಬನು ಅಲ್ಪನು. ಇನ್ನು ಯಾವ ತಾರತಮ್ಯವು ಇರುವದು ಮಹಾಸ್ವಾಮಿ ?

ಶ್ರೀ ಶ್ರೀಗಳವರು—ಹಾಗಲ್ಲ. ಅಧಿಕಾರ ತಾರತಮ್ಯವೂ ಕಂಡುಬರುವುದು. ಮತ್ತು ಕರ್ಮ ತಾರತಮ್ಯವೂ ಕಂಡುಬರುವುದು. ಕೆಲವರು ಹೆಚ್ಚು

ದೇಶಸೇವೆಯನ್ನು ಮಾಡುವರು. ಹೆಚ್ಚು ಇಂದ್ರಿಯ ಜಯಾದಿಗಳನ್ನು ಸಂಪಾದಿಸಿ ತಪಸ್ವಿಗಳಲ್ಲಿ ಅಗ್ರಗಣ್ಯರಾಗಿರುವರು. ಇತರರು ಸಂಸಾರದಲ್ಲಿ ಆಸಕ್ತರಾಗಿ ಸ್ವಾರ್ಥಪರರಾಗಿರುವರು. ಹೀಗೆ ಉತ್ಕೃಷ್ಟಾಪಕೃಷ್ಟ ಕರ್ಮದಿಂದ ಸಹಿತರಾದ ಅನೇಕ ಜೀವರುಗಳು ಈ ಲೋಕದಲ್ಲಿ ಇರುವರು. ಇನೂ ಹೆಚ್ಚು ವಿಮರ್ಶೆ ಮಾಡಿದರೆ ಜ್ಞಾನತಾರತಮ್ಯವೂ ಕಾಣಬರುವುದು. ಕೆಲವರು ಬಹು ಬುದ್ಧಿಶಾಲಿಗಳಾಗಿ, ಬಹುಬೇಗ ವಿದ್ಯಾವಂತರಾಗಿ ಗ್ರಂಥರಚನೆಯಲ್ಲಿ ಸಮರ್ಥರಾಗುವರು. ಇತರರು ಬುದ್ಧಿಮಾಂದ್ಯದಿಂದ ಸಹಿತರಾಗಿರುವರು. ಇಷ್ಟೇ ಅಲ್ಲದೆ ಜನರ ಕರ್ಮಗಳೂ, ಜ್ಞಾನಸಂಪಾದನೆಯೂ ಏಕಪ್ರಕಾರವಾಗಿರುವುದಿಲ್ಲ. ಕೆಲವರು ರಾಜ್ಯಪರಿಪಾಲನೆ ಮಾಡುವರು. ಕೆಲವರು ಕೈಗಾರಿಕೆ ಕೆಲಸದಲ್ಲಿ ಆಸಕ್ತರಾಗಿರುವರು. ಕೆಲವರು ವ್ಯವಸಾಯ ಮಾಡುವವರು. ಕೆಲವರು ತಪಶ್ಚರ್ಯೆಯಲ್ಲಿ ನಿರತರಾದವರು. ಈ ಒಂದೊಂದು ವಿಧದಲ್ಲಿಯೂ ಉತ್ತಮಾಧಮಭಾವವು ಇದ್ದೇ ಇರುವುದು. ಜ್ಞಾನಸಂಪಾದನೆಯಲ್ಲಿಯೂ ಸಹ ಕೆಲವರು ಸಂಗೀತವಿದ್ಯೆಯಲ್ಲಿ, ಕೆಲವರು ಗಣಿತಶಾಸ್ತ್ರದಲ್ಲಿ, ಕೆಲವರು ವೇದಾಂತ ಶಾಸ್ತ್ರದಲ್ಲಿ ಮತ್ತೆ ಕೆಲವರು ಸರ್ವಶಾಸ್ತ್ರದಲ್ಲಿಯೂ ಪಾಂಡಿತ್ಯವನ್ನು ಹೊಂದಿದವರಾಗಿ ಇರುವರು. ಮತ್ತು ಪೂರ್ವೋಕ್ತವಾದ ಒಂದೊಂದು ವಿದ್ಯಾಸಂಪಾದನೆಯಲ್ಲಿಯೂ, ಕೆಲವರು ಮೊದಲನೇ ತರಗತಿಯವರು, ಕೆಲವರು ಎರಡನೆಯ ದರ್ಜೆಗೆ ಸೇರಿದವರೆಂದು ತಾರತಮ್ಯವು ಇದ್ದೇ ಇರುವುದಷ್ಟೇ! ಇಷ್ಟೇ ಅಲ್ಲ! ದುರ್ಮಾರ್ಗದಲ್ಲಿಯೂ ತಾರತಮ್ಯವು ಇರುವುದು. ಕೆಲವರು ಭಯದಿಂದ ಕಳ್ಳತನ ಮಾಡುವರು. ಕೆಲವರು ಹಗಲು ಕಳ್ಳರು. ಕೆಲವರು ಸೈನ್ಯಸಮೇತರಾಗಿ ದೇಶವಿಧ್ವಂಸನವನ್ನೇ ಮಾಡುವರು. ವೇದವಿಧಿಯನ್ನು ಮೀರಿ ನಡೆಯುವವರೆಲ್ಲರೂ ಒಂದೇ ಪ್ರಕಾರವಾಗಿರುವುದಿಲ್ಲ. ಕೆಲವರು ವೇದವು ಸುಳ್ಳೆನ್ನುತ್ತಾ ಅಷ್ಟರಲ್ಲೇ ಸುಮ್ಮನಾಗುವರು. ಮತ್ತೆ ಕೆಲವರು ವಿಗ್ರಹಾದಿಗಳನ್ನು ನಾಶಮಾಡಿ ಇತರರಿಗೂ ಸಹ ವೇದಾತಿಕ್ರಮವು ಉಚಿತವೆಂದು ಬೋಧಿಸುವರು. ವೇದವಿರುದ್ಧ ಜ್ಞಾನದಲ್ಲಿಯೂ ಹೀಗೆಯೇ ತಾರತಮ್ಯವು ಇರುವುದು. ಆದುದರಿಂದ ಒಳ್ಳೆಯವರು ಕೆಟ್ಟವರು ಎಂಬ ವಿವೇಕವೂ, ಮತ್ತು ಒಳ್ಳೆಯವರಲ್ಲಿಯೂ ಕೆಟ್ಟವರಲ್ಲಿಯೂ ಬಹಳ ಅವಾಂತರ ತಾರತಮ್ಯವೂ ಲೋಕಾನುಭವಸಿದ್ಧವಾಗಿರುವುದನ್ನು ಅಪಲಾಪ ಮಾಡಕೂಡದು.

ಪ್ರಶ್ನೆ—ಸ್ವಾಮಿ! ತಾವು ಹೇಳಿದುದು ನಿಜ! ಆದರೆ ಈ ಕರ್ಮವೈಚಿತ್ರ್ಯ ತಾರತಮ್ಯಗಳು ಮತ್ತು ಜ್ಞಾನದಲ್ಲಿರುವ ವೈಚಿತ್ರ್ಯತಾರತಮ್ಯಗಳು ಇವು

ಗಳಿಂದ ಜೀವರುಗಳ ಸ್ವರೂಪವು ನಾನಾ ವಿಧವಾಗಿ ತಾರತಮ್ಯದಿಂದ ಯುಕ್ತ ವಾಗಿರುವುದೆಂದು ಹೇಳುವುದು ಹೇಗೆ?

ಶ್ರೀ ಶ್ರೀಗಳವರು—ಕೆಲವರು ಪ್ರಾಯೇಣ **ಸದಾ** ವೇದವಿರುದ್ಧ ಕರ್ಮ ದಲ್ಲಿಯೂ ಕೆಲವರು **ಸದಾ** ಸತ್ಕರ್ಮದಲ್ಲಿಯೂ ಆಸಕ್ತರಾಗಿರುವರು; ಇದಕ್ಕೆ ಕಾರಣವೇನು?

ವಿದ್ಯಾರ್ಥಿಗಳು—ಪಶುಗಳಂತೆ ಜ್ಞಾನಹೀನರಾದುದರಿಂದ ಸದಾ ದುಷ್ಕ ರ್ಮದಲ್ಲಿ ಆಸಕ್ತರಾಗುತ್ತಾರೆ. ಉತ್ತಮಸಂಗದಿಂದ ಜ್ಞಾನಸಂಪನ್ನರಾದವರು ಸತ್ಕರ್ಮದಲ್ಲಿ ಆಸಕ್ತರಾಗುತ್ತಾರೆ.

ಶ್ರೀ ಶ್ರೀಗಳವರು—ಇಂಥಾ ಜ್ಞಾನ ವೈಚಿತ್ರ್ಯಕ್ಕೆ ಕಾರಣವೇನು? ವೇದವನ್ನು ಸರ್ವದಾ ವಿರೋಧಿಸುವ ದುರ್ಬುದ್ಧಿಯು ಅವರಿಗೆ ಬಂದು ಇತರರಿಗೆ ಸದ್ವಿದ್ಯೆಯಲ್ಲಿಯೇ ಪ್ರವೃತ್ತಿಯುಂಟಾಗುವುದಕ್ಕೆ ಕಾರಣವೇನು?

ವಿದ್ಯಾರ್ಥಿಗಳು—ಹಾಗೇ ವಿಚಾರಮಾಡುತ್ತಾ ಹೋದರೆ ಅವರವರ ಪೂರ್ವಕೃತ ಕರ್ಮವು ಕಾರಣವು.

ಶ್ರೀ ಶ್ರೀಗಳವರು—ಪೂರ್ವಕೃತ ಕರ್ಮವೆಂದರೆ, ಪಿತ್ರಾರ್ಜಿತವಾದ ಜಮೀನಿನಂತೆ ಒಂದು ಬೇರೆ ಆಸ್ತಿಯೆಂದು ತಿಳಿಯಬಾರದು. ಪೂರ್ವಜನ್ಮದಲ್ಲಿ ಈ ಚೇತನನು **ಮಾಡಿದ** ಆಚರಣೆಯು ಎಂದರ್ಥವು. ಆ ಪೂರ್ವಜನ್ಮದಲ್ಲಿಯೂ ದುಷ್ಕರ್ಮಗಳನ್ನೇ ಕೆಲವು ಚೇತನರು ಆಚರಿಸುತ್ತಿದ್ದರು ಎಂದೂ, ಹೀಗೆಯೇ ಜನ್ಮ ಜನ್ಮಗಳಲ್ಲಿಯೂ ದುರಾಚಾರಗಳಲ್ಲಿರತರಾದವರು ಇರುತ್ತಾರೆಂಬುದೂ ಈ ನ್ಯಾಯದಿಂದ ಸಿದ್ಧವಾಗುವುದರಿಂದ, ಅಂತತಃ ಕರ್ಮಾನುಷ್ಠಾನಕ್ಕೆ ಆಯಾಯ ಚೇತನರ **ಸ್ವಭಾವವೇ** ಕಾರಣವು. ಒಳ್ಳೆಯ ಚೇತನರು ಸದಾ ಒಳ್ಳೆಯ ಕರ್ಮ ಗಳನ್ನೂ, ಕೆಟ್ಟ ಚೇತನರು ಸದಾ ಕೆಟ್ಟ ಕೆಲಸಗಳನ್ನೂ ಮಾಡುತ್ತಿರುವರೆಂಬುದು ಅನುಮಾನದಿಂದ ಸಿದ್ಧವಾಗುವುದು. ಆದುದರಿಂದ ಚೇತನದ್ವೈವಿಧ್ಯವನ್ನು ನೀವು ಅವಶ್ಯವಾಗಿಯೂ ಅಂಗೀಕರಿಸಬೇಕು.

ವಿದ್ಯಾರ್ಥಿಗಳು—ಸ್ವಾಮಿ! ಉತ್ಕೃಷ್ಟಕರ್ಮಗಳನ್ನು ಮಾಡುವುದರಿಂದ ಸ್ವಭಾವವು ಉತ್ಕೃಷ್ಟವೆಂದೂ, ಅಧಮಕರ್ಮವನ್ನು ಮಾಡುವುದರಿಂದ ಸ್ವಭಾ ವವು ಅಧಮವೆಂದೂ ನಿಶ್ಚಯಿಸುವುದರಲ್ಲಿ ಗೀತೆಯಲ್ಲಿ ಪ್ರಮಾಣವೇನು?

ಶ್ರೀ ಶ್ರೀಗಳವರು—ಶ್ರೀಕೃಷ್ಣನ ಆಶ್ರಯದಿಂದಲೇ ಸರ್ವ ಪ್ರಮೇಯಗ ಳನ್ನೂ ಸಾಧಿಸಿಕೊಡುವೆವು. ಸ್ವಭಾವವೇ ಕರ್ಮಗಳ ವೈಚಿತ್ರ್ಯಕ್ಕೆ ಮುಖ್ಯ ಕಾರಣವೆಂಬುದು ಕೃಷ್ಣಾರ್ಜುನರ ಈ ಸಂವಾದದಿಂದ ವಿದಿತವಾಗುವುದು.—

(1) ಅರ್ಜುನ ಉವಾಚ—**ಯೇ ಶಾಸ್ತ್ರವಿಧಿಮುತ್ಸೃಜ್ಯಯುಜಂತೇ ಶ್ರದ್ಧ ಯಾನ್ವಿತಾಃ ।**

ತೇಷಾಂನಿಷ್ಠಾತುಕಾಕೃಷ್ಣಸತ್ವಮಾಹೋರಜಸ್ತಮಃ ।

ಶ್ರೀಭಗವಾನುವಾಚ—**ತ್ರಿವಿಧಾಭವತಿಶ್ರದ್ಧಾದೇಹಿನಾಂಸಾಸ್ವಭಾವಜಾ ।**

ಸಾತ್ವಿಕೀರಾಜಸೀಚೈವ ತಾಮಸೀಚೇತಿತಾಂಶೃಣು ।

ಸತ್ವಾನುರೂಪಾಸರ್ವಸ್ಯ ಶ್ರದ್ಧಾಭವತಿಭಾರತ ।

ಶ್ರದ್ಧಾಮಯೋಯಂ ಪುರುಷೋಯೋಯಚ್ಛ್ರದ್ಧಸ್ಸಏವಸಃ ॥

(17. 1-3.)

ಅರ್ಜುನನು ಪ್ರಶ್ನೆಮಾಡುತ್ತಾನೆ:—ಹೇ ಸ್ವಾಮಿ! ಶಾಸ್ತ್ರವಿಧಿಯನ್ನು ತಿಳಿಯದೆ, ಶ್ರದ್ಧಾಮಾತ್ರದಿಂದ ಯಾರು ಯಜ್ಞವನ್ನು ಮಾಡುತ್ತಾರೆಯೋ, ಅವರ ಸ್ಥಿತಿಯು ಎಂಥಾದ್ದು ? ಅವರು ಸಾತ್ವಿಕಸ್ಥಿತಿಯುಳ್ಳವರೇ, ರಾಜಸಸ್ಥಿತಿಯುಳ್ಳವರೇ ? ಅಥವಾ ತಾಮಸಸ್ಥಿತಿಯುಳ್ಳವರೇ ? (ಅವರು ಸಾತ್ವಿಕರೇ, ರಾಜಸರೇ, ತಾಮಸರೇ ?)

ಶ್ರೀಕೃಷ್ಣನು ಹೇಳುತ್ತಾನೆ:—ಅರ್ಜುನ! ದೇಹಿಗಳ ಶ್ರದ್ಧೆಯು (ಆಸ್ತಿಕ್ಯಬುದ್ಧಿಯು) ಮೂರು ಪ್ರಕಾರವಾಗಿರುವುದು. **ಈ ಶ್ರದ್ಧೆಯು ಸ್ವಭಾವನಿಮಿತ್ತದಿಂದಲೇ ಉತ್ಪನ್ನವಾದುದು.** (ಜೀವಸ್ವರೂಪಭೂತವಾದ ಶ್ರದ್ಧೆಯೇ ಮನೋವೃತ್ತಿಯಾದ ಶ್ರದ್ಧೆಗೆ ಕಾರಣವಾಗುವುದೆಂದು ತಾತ್ಪರ್ಯವು). ಅದು ಸಾತ್ವಿಕ, ರಾಜಸ, ತಾಮಸ ಭೇದದಿಂದ ಮೂರು ಪ್ರಕಾರವಾಗಿರುವುದು. ಅದನ್ನು ಕೇಳು. ಎಲೈ ಅರ್ಜುನನೇ! ಸರ್ವದೇಹಿಗಳಿಗೂ ಶ್ರದ್ಧೆಯು **ಸತ್ವಾನುರೂಪಾ** ಎಂದರೆ ಜೀವಸ್ವರೂಪಾನುಗುಣವಾಗಿ ಇರುವುದು. ಈ ಜೀವನು **ಶ್ರದ್ಧಾತ್ಮಕನೇ** ಎಂದರೆ ಶ್ರದ್ಧಾಸ್ವರೂಪನೇ ಆಗಿರುವನು. ಅದರಲ್ಲಿ (ಸಾತ್ವಿಕ, ರಾಜಸ, ತಾಮಸ ಶ್ರದ್ಧೆಗಳಲ್ಲಿ) ಯಜ್ಞಮಾಡುವ ದೇಹಿಯು ಯಾವಶ್ರದ್ಧೆಯನ್ನು ಹೊಂದಿರುವನೋ ಅವನು ಆ ಶ್ರದ್ಧಾರೂಪನಾಗಿಯೇ ಇರುವನು. ಎಂದರೆ ಸಾತ್ವಿಕಶ್ರದ್ಧಾ ಉಳ್ಳವನು ಸ್ವರೂಪತಃ ಸಾತ್ವಿಕನೇ. ರಾಜಸಶ್ರದ್ಧೆಯುಳ್ಳವನು ರಾಜಸನೇ. ತಾಮಸಶ್ರದ್ಧೆಯನ್ನು ಹೊಂದಿದವನು ತಾಮಸನೇ ಎಂದರ್ಥವು.

ವೇದವಿಧಿಯನ್ನು ತಿಳಿಯದೆ, ಶ್ರದ್ಧಾಮಾತ್ರದಿಂದ ಯಜ್ಞಮಾಡುವವರು ಸಾತ್ವಿಕರೋ (ಮುಕ್ತಿಯೋಗ್ಯರೋ), ರಾಜಸರೋ (ನಿತ್ಯಸಂಸಾರಿಗಳೋ),

ಅಥವಾ ತಾಮಸರೋ (ತಮೋಯೋಗ್ಯರೋ) ಎಂದು ಅರ್ಜುನನ ಪ್ರಶ್ನೆಯು. ವೇದ ವಿಧಿಯನ್ನು ತಿಳಿಯದಿದ್ದರೂ ಸಾತ್ವಿಕಶ್ರದ್ಧಾಸಂಪನ್ನನು ಸಾತ್ವಿಕಸ್ವಭಾವವುಳ್ಳವನೇ; ರಾಜಸಶ್ರದ್ಧೆಯುಳ್ಳವನು ರಾಜಸನು; ತಾಮಸಶ್ರದ್ಧಾವಂತನು ತಾಮಸನು ಎಂದು ಶ್ರೀಕೃಷ್ಣನ ಉತ್ತರವು. ಜೀವಸ್ವರೂಪವೇ ತ್ರಿವಿಧವಾಗಿರುವುದೆಂದು ಈ ವಾಕ್ಯಗಳಿಂದ ಸಿದ್ಧವಾಗುವುದು.

ಹದಿನಾರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಸ್ಪಷ್ಟವಾಗಿ ಜೀವಸ್ವಭಾವ ಸಂಬಂಧಿಯಾದ ಸಂಪತ್ತುಗಳ ದ್ವೈವಿಧ್ಯವು ಇರುವುದೆಂದು ಹೇಳುತ್ತಾನೆ.—

(2) **ದ್ವೌಭೂತಸರ್ಗೌಲೋಕೇಸ್ಮಿನ್ದೈವ ಆಸುರ ಏವಚ ।**—(16. 6.)

ಈ ಲೋಕದಲ್ಲಿ ಪ್ರಾಣಿಗಳ ಸೃಷ್ಟಿಯು, ಅಥವಾ ಪ್ರಾಣಿಸ್ವಭಾವವು ದೇವಸಂಬಂಧಿ (ಮುಕ್ತಿಯೋಗ್ಯ ಚೇತನರ ಸೃಷ್ಟಿಯು) ಮತ್ತು ಅಸುರಸಂಬಂಧಿ (ತಮೋಯೋಗ್ಯರ ಸೃಷ್ಟಿಯು) ಎಂದು ಎರಡು ಪ್ರಕಾರವಾಗಿರುವುದು. ಎರಡು ವಿಧವಾದ ಚೇತನರು ಈ ಲೋಕದಲ್ಲಿ ಇರುತ್ತಾರೆ ಎಂದು ಇದರಿಂದ ಸಿದ್ಧವಾಗುವುದು. ಯದ್ಯಪಿ ಸಾತ್ವಿಕರಾಜಸ ತಾಮಸಭೇದೇನ ಸ್ವಭಾವವು ತ್ರಿವಿಧವಾಗಿರುವುದು. ಹಾಗಿದ್ದರೂ ಕೂಡ, ರಾಜಸ ಸ್ವಭಾವವು, ಸಾತ್ವಿಕ ಮತ್ತು ತಾಮಸ ಈ ಉಭಯವಿಧ ಸ್ವಭಾವಗಳ ಲಕ್ಷಣವನ್ನು ಹೊಂದಿರುವುದರಿಂದ ಅದನ್ನು ಪೃಥಙ್ನಿರ್ದೇಶ ಮಾಡಲಿಲ್ಲ.

ಈ ರೀತಿಯಾಗಿ, ಅಸುರ ಸಂಬಂಧಿ ಸ್ವಭಾವವನ್ನು ಹೊಂದಿದವರು ಕೆಲವರು, ದೇವಸಂಬಂಧಿ ಸ್ವಭಾವವನ್ನು ಹೊಂದಿದವರು ಕೆಲವರು ಎಂದು ಹೇಳಿ, ಶ್ರೀಕೃಷ್ಣನು ಅವರುಗಳ ಸ್ವಾಭಾವಿಕ ಗುಣಗಳನ್ನು ವಿವರಿಸುತ್ತಾನೆ.—

(3) ಶ್ರೀ ಭಗವಾನುವಾಚ—

ಅಭಯಂ ಸತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪಆರ್ಜವಂ ।
ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಂ ।
ದಯಾಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಂ ।
ತೇಜಃ ಕ್ಷಮಾಧೃತಿಶ್ಶೌಚಮದ್ರೋಹೋ ನಾತಿಮಾನಿತಾ ।
ಭವಂತಿಸಂಪದಂ ದೈವೀ ಮಭಿಜಾತಸ್ಯಭಾರತ ॥
ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವಚ ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥಸಂಪದಮಾಸುರೀಂ ।—(16. 1-4.)

ಶ್ರೀಕೃಷ್ಣನು ಹೇಳುತ್ತಾನೆ—ಅಭಯಂ= ಸಜ್ಜನರಿಗೆ ಭಯಪ್ರದನಾಗದೆ, ತಾನೂ ದುರ್ಜನರಿಂದ ಭಯಹೊಂದದೇ ಇರುವುದು; ಸತ್ವಸಂಶುದ್ಧಿಃ= ದುರ್ವಿಷಯಧ್ಯಾನರಹಿತವಾದ ಅಂತಃಕರಣವನ್ನು ಹೊಂದಿರುವುದು; ಜ್ಞಾನಯೋಗವ್ಯವಸ್ಥಿತಿಃ= ಪರಬ್ರಹ್ಮನ ಜ್ಞಾನವನ್ನು ಹೊಂದುವುದಕ್ಕೆ ಉಪಾಯರೂಪವಾದ ಶ್ರವಣಮನನಾದಿಗಳಲ್ಲಿ ನಿಷ್ಠೆಯು; ದಾನಂ= ಸತ್ಪಾತ್ರರಲ್ಲಿ ವಿಧ್ಯುಕ್ತರೀತಿಯಲ್ಲಿ ದ್ರವ್ಯತ್ಯಾಗವು; ಯಜ್ಞಶ್ಚ= ವಿಧ್ಯುಕ್ತರೀತಿಯಲ್ಲಿ ಯಾಗಾದ್ಯನುಷ್ಠಾನವು; ಸ್ವಾಧ್ಯಾಯಃ= ವಿಧ್ಯುಕ್ತರೀತಿಯಲ್ಲಿ ಗುರುಗಳಿಂದ ವೇದಾಧ್ಯಯನವನ್ನು ಮಾಡುವುದು; ತಪಃ= ವೇದವಿಹಿತ ರೀತಿಯಲ್ಲಿ, ಬ್ರಹ್ಮಚರ್ಯಾದಿ ತಪೋsನುಷ್ಠಾನವು; ಆರ್ಜವಂ= ಸ್ವವಿಹಿತ ವಿಷಯದಲ್ಲಿ ಮನೋವಾಕ್ಕರ್ಮಗಳಲ್ಲಿ ಏಕರೀತಿಯಾಗಿರುವುದು; ಅಹಿಂಸಾ= ಹಿಂಸಾ ಪರಿತ್ಯಾಗವು; ಸತ್ಯಂ= ವೇದೋಕ್ತರೀತಿಯಲ್ಲಿ ಯಥಾರ್ಥ ವಚನವು; ಅಕ್ರೋಧಃ= ಸಜ್ಜನರಿಗೆ ಉಪದ್ರವಕಾರಣವಾದ ಕೋಪವನ್ನು ಹೊಂದದಿರುವುದು; ತ್ಯಾಗಃ= ಸದ್ವಿಷಯಗಳಲ್ಲಿ ಔದಾರ್ಯವು; ಶಾಂತಿಃ= ಬುದ್ಧಿಯ ಭಗವನ್ನಿಷ್ಠತೆಯು; ಅಪೈಶುನಂ= ಸಜ್ಜನರ ನಾಶವನ್ನು ಇಚ್ಛಿಸಿ, ಸಜ್ಜನರ ಅಪರಾಧವನ್ನು ರಾಜಾಸ್ಥಾನಾದಿಗಳಲ್ಲಿ ಚಾಡಿ ಹೇಳದಿರುವುದು; ದಯಾಭೂತೇಷು= ಸರ್ವ ಸಜ್ಜನರ ದುಃಖಾಸಹನವು; ಅಲೋಲುತ್ವಂ= ವಿಷಯಗಳಲ್ಲಿ ರಾಗಾಭಾವವು; ಮಾರ್ದವಂ= ತನ್ನನ್ನು ಹಿಂಸೆಮಾಡುವವರಲ್ಲಿಯೂ ಕೂಡ ವಿರೋಧರಹಿತನಾಗಿರುವುದು; ಹ್ರೀಃ= ಅಕಾರ್ಯದಲ್ಲಿ ಲಜ್ಜೆಯು; ಅಚಾಪಲಂ= ಸನ್ಮಾರ್ಗದಿಂದ ಚಂಚಲನಾಗದೆ ಸ್ಥಿರವಾಗಿರುವುದು; ತೇಜಃ= ದುರ್ಜನರಿಂದ ಅಪರಾಜಯವು; ಕ್ಷಮಾ= ಸಜ್ಜನಾಪರಾಧದಿಂದ ಕ್ರೋಧವನ್ನೇ ಹೊಂದದಿರುವುದು; ಧೃತಿಃ= ಸಾತ್ವಿಕ ಮಾರ್ಗದಲ್ಲಿ ನಿರ್ಭಯನಾಗಿರುವುದು; ಶೌಚಂ= ವಿಧ್ಯುಕ್ತರೀತಿಯಲ್ಲಿ ಮೃತ್ತಿಕಾದಿಗಳಿಂದ ಬಾಹ್ಯಶೌಚಾಚರಣೆಯು; ಮತ್ತು ಭಗವತ್ಸ್ಮೃತ್ಯಾದಿಗಳಿಂದ ಅಂತಃಶುದ್ಧಿಯು; ಇವು ದೈವೀಸಂಪದಂ= ಮುಕ್ತಿಯೋಗ್ಯಸಂಬಂಧಿ ಸ್ವಭಾವವನ್ನು ಹೊಂದಿದವರಿಗೆ ಬರುತ್ತವೆ.

ದಂಭಃ= ತಾನು ಅಲ್ಪನೆಂದು ತಿಳಿದಿದ್ದರೂ ಮಹತ್ವವನ್ನು ಪ್ರದರ್ಶನೆ ಮಾಡುವುದು; ದರ್ಪಃ= ಭಯನಿಮಿತ್ತವು ಇದ್ದರೂ ಮದದಿಂದ ನಿರ್ಭಯನಂತೆ ಪ್ರದರ್ಶನಮಾಡುವುದು; ಅಭಿಮಾನಃ= ವಿಧ್ಯತಿಕ್ರಮವು; ಕ್ರೋಧಃ= ಸಜ್ಜನರಿಗೆ ಹಿಂಸಾಕರವಾದ ಕೋಪವು; ಪಾರುಷ್ಯಂ= ನಿಷ್ಠುರೋಕ್ತಿಯು;

ಅಜ್ಞಾನಂ— ಮಿಥ್ಯಾಜ್ಞಾನವು ಇವು ಅಸುರಸಂಬಂಧಿಸಂಪತ್ತನ್ನು (ತಮೋಯೋಗ್ಯಸ್ವಾಭಾವಿಕಲಕ್ಷಣಗಳನ್ನು) ಹೊಂದಿದವರಿಗೆ ಬರುತ್ತವೆ.

ಈ ಗುಣಗಳು ಕರ್ಮವಶಾತ್ ಬಂದಂಥಾ ಧರ್ಮಗಳು, ಸ್ವಭಾವಜನ್ಯವಲ್ಲವೆಂದು ಭ್ರಮಿಸಕೂಡದು. ಶ್ರೀ ಕೃಷ್ಣನ ಫಲಕಥನರೂಪವಾದ ಶ್ಲೋಕಗಳು **ನಿತ್ಯವಾಗಿಯೂ** ಈ ಧರ್ಮಗಳಿಂದ ಸಹಿತರಾದ ಉಭಯವಿಧಚೇತನರೂ ಇರುವರೆಂದು ಸೂಚಿಸುತ್ತವೆ.

(4) **ದೈವೀಸಂಪದ್ವಿಮೋಕ್ಷಾಯನಿಬಂಧಾಯಾಸುರೀಮತಾ ।**

—(16. 5.)

ದೇವಸಂಬಂಧಿ ಸಂಪತ್ತು (ಚತುರ್ವಿಧವಾದ) ಮುಕ್ತಿಗೆ ಕಾರಣವಾಗುವುದು; ಅಸುರಸಂಬಂಧಿಸಂಪತ್ತು ನಿಬಂಧಾಯ ಎಂದರೆ ಪುನರಾವೃತ್ತಿರಹಿತವಾದ ನಿತ್ಯದುಃಖಕ್ಕೆ ಕಾರಣವಾಗುವುದು; ಈ ವಾಕ್ಯವು ಸ್ವಲ್ಪ ಅಸ್ಪಷ್ಟವಾಗಿರುವುದು; ಶ್ರೀ ಕೃಷ್ಣನು ಅಸುರಸಂಪತ್ತನ್ನು ಹನ್ನೆರಡು ಶ್ಲೋಕಗಳಲ್ಲಿ ವರ್ಣನೆ ಮಾಡಿ ಸ್ಪಷ್ಟವಾಗಿ ಫಲವನ್ನು ಹೇಳುತ್ತಾನೆ:—

(5) **ಪ್ರವೃತ್ತಿಂಚ ನಿವೃತ್ತಿಂಚ ಜನಾನವಿದುರಾಸುರಾಃ ।** *
ನಶೌಚಂನಾಪಿಚಾಚಾರೋ ನಸತ್ಯಂತೇಷು ವಿದ್ಯತೇ ॥

---

* ಅರ್ಥವು:—ಅಸುರಸಂಬಂಧಿಸ್ವಭಾವವುಳ್ಳ ಜನರು ವಿಧಿವಿಹಿತವಿಷಯಗಳಲ್ಲಿ ಪ್ರವೃತ್ತಿಯನ್ನೂ, ನಿಷಿದ್ಧಪರಿತ್ಯಾಗವನ್ನೂ ತಿಳಿಯಲಾರರು. (ಅನುಷ್ಠಾನಮಾಡುವುದಿಲ್ಲವೆಂದರ್ಥವು). ಅವರುಗಳಲ್ಲಿ ಬಾಹ್ಯಾಂತಃ ಶೌಚಗಳೂ, ವೇದೋಕ್ತ ಆಚಾರಗಳೂ ಮತ್ತು ಸತ್ಯವೂ ಇರುವುದಿಲ್ಲ. ಅವರು ಜಗತ್ತು ಅಸತ್ಯವು, ಮಿಥ್ಯಾಭೂತವಾದುದು; ಅಥವಾ ಸತ್ಯನಾಮಕ ವಿಷ್ಣುವಿನಿಂದ ನಿಜವಾಗಿ ಸೃಷ್ಟಿಸಲ್ಪಟ್ಟಿಲ್ಲ ಎಂದು ಹೇಳುತ್ತಾರೆ. ಜಗತ್ತು ಅಪ್ರತಿಷ್ಠಂ ಎಂದರೆ (ಬ್ರಹ್ಮ) ಜ್ಞಾನದಿಂದ ಬಾಧ್ಯವು ಅಥವಾ ಪ್ರತಿಷ್ಠಾನಾಮಕ ವಿಷ್ಣುವಿನ ಆಧಾರರಹಿತವಾದುದು ಎಂದು ಹೇಳುತ್ತಾರೆ. ಜಗತ್ತು ಅನೀಶ್ವರಂ— ಸತ್ಯಭೂತನಾದ ಸ್ವಾಮಿರಹಿತವೆಂದು ಹೇಳುತ್ತಾರೆ. ಜಗತ್ತು ಪ್ರಕೃತ್ಯಾದಿ ಕಾರಣಗಳಿಂದ ಅಥವಾ "ಅನ್ನಾದ್ಭವಂತಿಭೂತಾನಿ" ಇತ್ಯಾದಿ ತೃತೀಯ ಅಧ್ಯಾಯದಲ್ಲಿ ಉಕ್ತರೀತಿಯಲ್ಲಿ ಹುಟ್ಟಿಲ್ಲವೆಂದು ಹೇಳುತ್ತಾರೆ. (ಪ್ರತೀತಿಕಾಲದಲ್ಲಿ ಮಾತ್ರ ಇರುವಂತೆ ತೋರುವುದೇ ಹೊರತು, ಪೂರ್ವದಿಂದಲೂ ವಿದ್ಯಮಾನವಾದ ಕಾರಣಸಾಮಗ್ರಿಗಳಿಂದ ಹುಟ್ಟಿರುವುದೆಂದು ಹೇಳುವುದಿಲ್ಲ ಎಂದರ್ಥವು). ಮತ್ತೇನೆಂದರೆ ಕಾಮಹೈತುಕಂ —ಬುದ್ಧಿಮಾತ್ರ ಕಲ್ಪಿತವು; ಅಥವಾ ಕಿಮನ್ಯತ್ —ಸದಸದ್ವಿಲಕ್ಷಣವು, ಕಾಮಹೈತುಕಂ —ಅವಿದ್ಯಾಪರಿಣಾಮವು, ಎಂದು ಹೇಳುತ್ತಾರೆ. ಇಂಥಾ ಜ್ಞಾನವನ್ನು ಆಶ್ರಯಿಸಿ ದುಷ್ಟಚಿತ್ತರಾಗಿ, ಅಲ್ಪಜ್ಞಾನವನ್ನು ಹೊಂದಿದ, ಉಗ್ರಕರ್ಮದಲ್ಲಿ ಆಸಕ್ತರಾದ ಈ ಅಸುರರು ಜಗತ್ತಿನ ಕ್ಷೇಮನಾಶಕ

ಅಸತ್ಯಮ ಪ್ರತಿಷ್ಠಂತೇ ಜಗದಾಹುರನೀಶ್ವರಂ ।
ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಂ ॥
ಏತಾಂದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯಜಗತೋಽಹಿತಾಃ ॥

ರಾಗಿ, ತಾವೂ ನರಕಾದ್ಯನರ್ಥಗಳನ್ನು ಹೊಂದುವುದಕ್ಕಾಗಿಯೇ ಭೂಮಿಯಲ್ಲಿ ಹುಟ್ಟುತ್ತಾರೆ. ಎಷ್ಟು ಪ್ರಾಪ್ತವಾದರೂ, ಪರಿಪೂರ್ತಿಯಾಗದ ದುಷ್ಟಕಾಮವನ್ನು ಆಶ್ರಯಿಸಿ, ದಂಭ, ಮಾನ, ಮದಗಳಿಂದ ಸಹಿತರಾಗಿ, ಮಿಥ್ಯಾಜ್ಞಾನಸ್ವಭಾವದಿಂದ ಶಾಸ್ತ್ರಕ್ಕೆ ವಿಪರೀತವಾದ ಅರ್ಥಗಳನ್ನೇ ತಿಳಿದುಕೊಂಡು, ವಿಧಿವಿರುದ್ಧನಿಯಮಗಳಲ್ಲಿ ಪ್ರವರ್ತಿಸುತ್ತಾರೆ. ಅಗಾಧವಾದ, ಮರಣಾಂತವಾದ ಆಲೋಚನೆಗಳಲ್ಲಿ ಮಗ್ನರಾಗಿ, ವಿಷಯಭೋಗೈಕರತರಾಗಿ, ಐಹಿಕಸುಖವೇ ಸಮಸ್ತವೂ, ಇನ್ನು ಮೇಲೆ ಯಾವುದೂ ಇಲ್ಲವೆಂದು ನಿಶ್ಚಯಿಸಿ, ಅನಂತ ಆಶಾಪಾಶಗಳಿಂದ ಬದ್ಧರಾಗಿ, ಕಾಮ ಕ್ರೋಧಗಳಿಂದ ಪೂರ್ಣರಾಗಿ, ತಮ್ಮ ವಿಷಯಭೋಗಾರ್ಥವಾಗಿ, ಅನ್ಯಾಯವಾಗಿ ದ್ರವ್ಯಾರ್ಜನೆ ಯನ್ನು ಮಾಡುತ್ತಾರೆ. (ಇವರ ಚಿಂತಾಪ್ರಕಾರವೂ ಅತಿದುಷ್ಟವಾದುದು:—) ಈ ಧನವು ಈ ದಿವಸ ನನ್ನಿಂದ ಲಬ್ಧವಾಯಿತು, ನನ್ನ ಈ ಮನೋರಥವನ್ನು ಹೊಂದುತ್ತೇನೆ. ಇಷ್ಟು ಧನವು ನನ್ನಲ್ಲಿರುವುದು. ಇನ್ನೂ ಅಧಿಕ ಧನವು ಪುನಃ ನನಗೆ ಬರುವುದು. ಈ ನನ್ನ ಶತ್ರುವು ನನ್ನಿಂದ ಸಂಹೃತನಾದನು. ಇನ್ನು ಇತರರನ್ನೂ ಸಂಹಾರಮಾಡಿಬಿಡುತ್ತೇನೆ. ನಾನು ಸ್ವತಂತ್ರನು ಅಥವಾ ನಾನೇ ಬ್ರಹ್ಮನು ; ಸ್ವತಂತ್ರಭೋಗವುಳ್ಳವನು ; ಕೃತಕೃತ್ಯನು ; ಸಮರ್ಥನು ; ಸುಖ ಪೂರ್ಣನು. ನಾನು ಧನಾದಿಸಂಪನ್ನನು, ಸತ್ಕುಲಪ್ರಸೂತನು ; ನನಗೆ ಸಮಾನರು ಯಾರು ಇರು ತ್ತಾರೆ? ನಾನೇ ಯಜ್ಞಮಾಡುತ್ತೇನೆ, ದಾನಮಾಡುತ್ತೇನೆ, ಆನಂದದಿಂದ ಇರುತ್ತೇನೆ, ಇತ್ಯಾದಿ ಪ್ರಕಾರವಾದ ಮಿಥ್ಯಾಜ್ಞಾನದಿಂದ ವಿಮೋಹಿತರಾಗಿ, ನಾನಾ ದುಷ್ಟ ಆಲೋಚನೆಗಳಿಂದ ಪೂರ್ಣ ವಾದ ಮನಸ್ಸುಳ್ಳವರಾಗಿ ಪುತ್ರಮಿತ್ರಾದಿ ವಿಷಯಕ ಮೋಹವೆಂಬ ಬಲೆಯಿಂದ ಸುತ್ತಲ್ಪಟ್ಟವ ರಾಗಿ, ವಿಷಯಭೋಗಗಳಲ್ಲಿ ಅತ್ಯಂತ ಆಸಕ್ತವಾದ ಮನಸ್ಸುಳ್ಳವರಾಗಿ, ಅತಿ ಕಶ್ಮಲವಾದ ನರಕ ದಲ್ಲಿ ಬೀಳುತ್ತಾರೆ. ತಮ್ಮಲ್ಲಿ ತಾವೇ ದೊಡ್ಡವರೆಂದು ತಿಳಿದುಕೊಂಡ, ಗುರುಹಿರಿಯರಲ್ಲಿ ಅವಿ ನೀತರಾದ, ಧನನಿಮಿತ್ತಕವಾದ ಗರ್ವದರ್ಪಗಳಿಂದ ಪೂರ್ಣರಾದ ಈ ಅಸುರಜನರು ದಂಭದಿಂದ ವೇದವಿಧಿಯನ್ನು ಮೀರಿ, (ವಿಷ್ಣುಭಕ್ತ್ಯಾದಿ ಗುಣಗಳಿಂದ ರಹಿತರಾಗಿ), ನಾಮಮಾತ್ರವಾದ ಯಜ್ಞ ಗಳನ್ನು ಮಾಡುತ್ತಾರೆ. ಅಹಂಕಾರ, ಬಲ, ದರ್ಪಗಳಿಂದ ಸಹಿತರಾಗಿ, ಕಾಮಕ್ರೋಧಗಳಿಂದ ಯುಕ್ತರಾಗಿ, ಸ್ವದೇಹದಲ್ಲಿಯೂ, ಪರದೇಹಗಳಲ್ಲಿಯೂ ನಿಯಾಮಕನಾಗಿರುವ ನನ್ನನ್ನು ದ್ವೇಷ ಮಾಡುತ್ತಾರೆ. (ಜೀವಭಿನ್ನನಾದ ಈಶ್ವರನು ದೇಹಗಳಲ್ಲಿ ನಿಯಾಮಕನಾಗಿರುವದಿಲ್ಲವೆಂದು ಅಪ ಲಾಪಮಾಡುತ್ತಾರೆ). ಮತ್ತು ನಿರ್ದೋಷನಾದ ನನ್ನಲ್ಲಿ ದೋಷವನ್ನು ಆರೋಪಿಸುತ್ತಾರೆ. (ಇಂಥಾ ದ್ವೇಷಿಗಳನ್ನು ನಾನು ನರಕದಲ್ಲಿಟ್ಟು, ಅಸುರಯೋನಿಗಳಲ್ಲಿ ಪುನಃ ಪುನಃ ಹುಟ್ಟಿಸಿ, ಅವರ ದ್ವೇಷವೃದ್ಧಿಯಾದನಂತರ, ಅಂತ್ಯದಲ್ಲಿ ಅವರನ್ನು ಅಂಧಂತಮಸ್ಸೆಂಬ ನಿತ್ಯನರಕದಲ್ಲಿ ಹಾಕುತ್ತೇನೆ).

ಕಾಮಮಾಶ್ರಿತ್ಯದುಷ್ಪೂರಂದಂಭಮಾನಮದಾನ್ವಿತಾಃ ।
ಮೋಹಾದ್ಗೃಹೀತ್ವಾಽಸದ್ಗ್ರಾಹಾನ್ ಪ್ರವರ್ತಂತೇಽಶುಚಿ
ವ್ರತಾಃ ॥
ಚಿಂತಾಮಪರಿಮೇಯಾಂಚ ಪ್ರಳಯಾಂತಾಮುಪಾಶ್ರಿತಾಃ ।
ಕಾಮೋಪಭೋಗಪರಮಾಏತಾವದಿತಿ ನಿಶ್ಚಿತಾಃ ॥
ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ ।
ಈಹಂತೇಕಾಮಭೋಗಾರ್ಥ ಮನ್ಯಾಯೇನಾರ್ಥ ಸಂಚಯಾನ್॥
ಇದಮದ್ಯ ಮಯಾಲಬ್ಧಂ ಇಮಂ ಪ್ರಾಪ್ಸ್ಯೇ ಮನೋರಥಂ ।
ಇದಮಸ್ತೀದಮಪಿಮೇ ಭವಿಷ್ಯತಿ ಪುನರ್ಧನಂ ॥
ಅಸೌಮಯಾ ಹತಶ್ಶತ್ರುರ್ಹನಿಷ್ಯೇಚಾಪರಾನಪಿ ।
ಈಶ್ವರೋಽಹ ಮಹಂಭೋಗೀ ಸಿದ್ಧೋಽಹಂಬಲವಾನ್ಸುಖೀ ॥
ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋಮಯಾ ।
ಯಕ್ಷ್ಯೇದಾಸ್ಯಾಮಿಮೋದಿಷ್ಯೇ ಇತ್ಯಜ್ಞಾನವಿಮೋಹಿತಾಃ ॥
ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿನರಕೇಽಶುಚೌ ॥
ಆತ್ಮಸಂಭಾವಿತಾಃಸ್ತಬ್ಧಾಃ ಧನಮಾನಮದಾನ್ವಿತಾಃ ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಂ ॥
ಅಹಂಕಾರಂ ಬಲಂದರ್ಪಂ ಕಾಮಂಕ್ರೋಧಂಚ ಸಂಶ್ರಿತಾಃ ।
ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥

ಎಂದು ಅಸುರಸ್ವಭಾವಸಂಬಂಧಿಗಳ ಸ್ವಾಭಾವಿಕ ಆಚರಣೆಗಳನ್ನು ವರ್ಣನೆಮಾಡಿ,

ತಾನಹಂದ್ವಿಷತಃ ಕ್ರೂರಾನ್ಸಂಸಾರೇಷುನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವಯೋನಿಷು ॥
ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋಯಾಂತ್ಯಧಮಾಂಗತಿಂ ॥

—(16. 7-20.)

ಎಂದು ಫಲವನ್ನು ಹೇಳಿರುತ್ತಾನೆ.

ಅರ್ಥವು—ಅಸುರಸಂಬಂಧಿಸ್ವಭಾವವುಳ್ಳವರು ವಿಧಿವಿಹಿತ ವಿಷಯಗಳಲ್ಲಿ ಪ್ರವೃತ್ತಿಯನ್ನೂ ವಿಧಿನಿಷಿದ್ಧಗಳ ಪರಿತ್ಯಾಗವನ್ನೂ ತಿಳಿಯಲಾರರು........ಅವರು

" ನಾನೇ ಈಶ್ವರ "ನೆನ್ನುವರು........ಇಂಥಾ ದ್ವೇಷಿಗಳನ್ನು ನಾನು ಪುನಃ ಪುನಃ ಅಸುರಸಂಬಂಧಿಯೋನಿಗಳಲ್ಲಿ ಇಡುತ್ತೇನೆ. ಈ ತಾಮಸಸ್ವಭಾವವುಳ್ಳವರು ಜನ್ಮ ಜನ್ಮದಲ್ಲಿಯೂ ಅಸುರಸಂಬಂಧಿಯೋನಿಯನ್ನು ಹೊಂದಿ, **ನನ್ನನ್ನು ಸರ್ವಥಾ (ಯಾವ ಕಾಲದಲ್ಲಿಯೂ) ಹೊಂದದೆಯೇ, ಕೊನೆಗೆ** ಅತಿ ನಿಕೃಷ್ಟವಾದ ಸ್ಥಾನವನ್ನು ನಿತ್ಯ (ನರಕವನ್ನು) ಹೊಂದುತ್ತಾರೆ.

ಈರೀತಿ, ಪುನರಾವೃತ್ತಿ ರಹಿತವಾದ ನಿತ್ಯನರಕಸ್ಥಾನವು ಪ್ರಾಪ್ತವಾಗುವುದೆಂದು ಈ ಶ್ಲೋಕದಿಂದ ತೋರುವ ಫಲವು, ಅಕಸ್ಮಾತ್ ಆಚರಿತವಾದ ಕರ್ಮಕ್ಕೆ ಉಚಿತವಲ್ಲವಾದುದರಿಂದ, ಅಸುರಸಂಬಂಧಿ ಸ್ವಭಾವವುಳ್ಳ, ದುರ್ಗತಿಗೆ ಯೋಗ್ಯರಾದ ಚೇತನರೇ ಬೇರೆ ಇರುತ್ತಾರೆ; ಸದ್ಗತಿಗೆ ಯೋಗ್ಯರಾದ ದೇವಸಂಬಂಧಿ ಸ್ವಭಾವವುಳ್ಳ ಚೇತನರೇ ಬೇರೆ ಇರುತ್ತಾರೆ ಎಂದು ಸಿದ್ಧವಾಗುವುದು. " ಶ್ರದ್ಧಾಮಯೋಽಯಂಪುರುಷಃ " " ಶ್ರದ್ಧಾ ಸಾಸ್ವಭಾವಜಾ " ಇತ್ಯಾದಿ ವಾಕ್ಯಗಳು ಈ ವಿಷಯವನ್ನು ನಿಸ್ಸಂಶಯವಾಗುವಂತೆ ದೃಢೀಕರಿಸುತ್ತವೆ.

ಪ್ರಶ್ನೆ—ಸ್ವಾಮಿ! " ಅಧಮಾಂಗತಿಂ " ಎಂದರೆ ಅತ್ಯಂತ ದುರ್ಗತಿಯನ್ನು ಎಂದು ಅರ್ಥಮಾಡದೆ, ನಿತ್ಯನರಕವನ್ನು ಹೊಂದುತ್ತಾರೆ ಎಂದು ಅರ್ಥ ಮಾಡುವುದಕ್ಕೆ ಕಾರಣವೇನು ?

ಶ್ರೀ ಶ್ರೀಗಳವರು—1. " ಪತಂತಿನರಕೇಽಶುಚೌ " ಎಂದೂ " ಆಸುರೀಷ್ವೇವಯೋನಿಷು " ಎಂದೂ ಸಾಮಾನ್ಯವಾದ ದುಷ್ಫಲವನ್ನು ಶ್ರೀಕೃಷ್ಣನು ಹಿಂದೆಯೇ ಹೇಳಿರುವುದರಿಂದ ಇಲ್ಲ ಹೇಳಿರುವ ಅದಕ್ಕಿಂತ ಹೆಚ್ಚಾದ ದುರ್ಗತಿಯು ನಿತ್ಯನರಕವೇ ಆಗಬೇಕು. 2. ಕಿಂಚ " **ಮಾಮಪ್ರಾಪ್ಯೈವಕೌಂತೇಯ** " ಎಂಬ ವಾಕ್ಯದಿಂದ ಶ್ರೀಕೃಷ್ಣನನ್ನು ಸರ್ವಥಾ ಎಂದರೆ ಅನಾದ್ಯನಂತ ಕಾಲದಲ್ಲಿ ಯಾವಾಗಲೂ, ಹೊಂದದೇ ಇರುವ ಚೇತನರು ಕೆಲವರು ಇರುವರೆಂದು ಸಿದ್ಧವಾಗುವುದು. ಎಲ್ಲರೂ ಮುಕ್ತಿಯೋಗ್ಯರಾಗಿದ್ದರೆ, ಯಾವುದಾದರೂ ಒಂದು ದಿನ ಶ್ರೀಕೃಷ್ಣನ ಪ್ರಾಪ್ತಿಯು ಆಗದೇ ಹೋಗಲಾರದು. ಆದುದರಿಂದ ಶ್ರೀಕೃಷ್ಣನ ಈ ವಾಕ್ಯದಿಂದ **ಸರ್ವಥಾ ಕೃಷ್ಣಪ್ರಾಪ್ತಿರಹಿತರಾದ** ನಿತ್ಯನರಕವನ್ನು ಹೊಂದುವ, ಕೆಲವು ಚೇತನರು ಇರಲೇಬೇಕೆಂದು ಸಿದ್ಧವಾಗುವುದು. ಈರೀತಿ ಈ ವಾಕ್ಯಗಳ ಪರ್ಯಾಲೋಚನೆಯಿಂದ ದೇವಸ್ವಭಾವವುಳ್ಳ ಚೇತನರು ಕೆಲವರು, ಅಸುರಸ್ವಭಾವವುಳ್ಳ ಚೇತನರು ಕೆಲವರು ಸರ್ವದಾ ಭಿನ್ನಲಕ್ಷಣಗಳಿಂದಲೇ ಸಹಿತರಾಗಿ ಇರುವರೆಂದು ನಿಶ್ಚಿತವಾಗುವುದು.

2

ಪ್ರಶ್ನೆ—ಸ್ವಾಮಿ! ಒಳ್ಳೆಯ ಚೇತನರು ಸದಾ ವಿಧಿವಿಹಿತ ವ್ಯಾಪಾರಗಳನ್ನೇ ಮಾಡುತ್ತಿರುವರೆಂದೂ, ದುಷ್ಟ ಚೇತನರು ಸದಾ ದುರಾಚರಣೆಯಲ್ಲಿ ರತರಾಗಿರುವರೆಂದೂ ಹೇಳುವುದಾದರೆ, ಅತ್ಯುತ್ತಮ ಚೇತನರಾದ ಅಜಾಮಿಳ ಮಾಧವಾದಿಗಳು ವಿಧಿವಿರುದ್ಧವಾದ ಕರ್ಮಗಳನ್ನು ಆಚರಿಸಲು ಕಾರಣವೇನು?

ಉತ್ತರ—ಇದು ಸಮಾಚೀನ ಪ್ರಶ್ನೆಯು. ಕೇಳಿರಿ. ಸಚ್ಚೇತನರು ಸದಾ ಸತ್ಕರ್ಮಗಳನ್ನೇ ಸ್ವಾಭಾವಿಕವಾಗಿ ಆಚರಿಸುತ್ತಾರೆ. ಹಿಮಕ್ಕೆ ಶೈತ್ಯ ನಿವಾರಕತ್ವವು ಹೇಗೆ ಸ್ವಾಭಾವಿಕವೋ, ಸೂಜಿಗಲ್ಲಿಗೆ ಲೋಹವನ್ನು ಆಕರ್ಷಿಸುವುದು ಹೇಗೆ ಸ್ವಭಾವದಿಂದ ಪ್ರಾಪ್ತವಾದುದೋ, ಚೆಂಡಿಗೆ ಅಪ್ಪಳಿಸಿ ಹೊಡೆದರೆ ಮೇಲಕ್ಕೆ ಪುಟ ಏಳುವುದು ಹೇಗೆ ಸ್ವಾಭಾವಿಕವೋ, ಹಾಗೆಯೇ ಸುಚೇತನರು ಸ್ವಾಭಾವಿಕವಾಗಿ ಸತ್ಕರ್ಮಗಳನ್ನೇ ಆಚರಿಸುತ್ತಾರೆ. ಆದರೆ **ಅಲ್ಪಶಕ್ತರಾದ** ಈ ಜೀವರುಗಳಿಗೆ **ಸಂಗವಶಾತ್** ಅಥವಾ **ದುಶ್ಶಾಸ್ತ್ರಾಭ್ಯಾಸದಿಂದ** ದುರ್ಬುದ್ಧಿಯು ಬರುವುದುಂಟು. ಇಂಥಾ ಸಂದರ್ಭದಲ್ಲಿ, ಒಳ್ಳೆಯ ಜೀವರುಗಳೂ ಕೂಡ ಭ್ರಮಕ್ಕೆ ವಶರಾಗಿ, ದುಷ್ಟಕರ್ಮಗಳನ್ನು ಮಾಡುವರು. ಆದರೆ ದುಸ್ಸಂಗವು ನಿವೃತ್ತವಾಗಿ ಸಜ್ಜನೋಪದೇಶವು ಪ್ರಾಪ್ತವಾದ ಒಡನೆಯೇ, ಇವರುಗಳ ಮನೋಮಾಲಿನ್ಯವು ನಾಶವಾಗಿ, ತಮ್ಮ ಸ್ವಭಾನುಗುಣವಾದ ವೃತ್ತಿಜ್ಞಾನದಿಂದಲೇ, ಪಶ್ಚಾತ್ತಾಪ ಪೂರ್ವಕವಾಗಿ ಸತ್ಕರ್ಮಗಳನ್ನು ಆಚರಿಸುವರು. ಇದಕ್ಕೆ ವಿರುದ್ಧಕ್ರಮದಲ್ಲಿ ದುರ್ಜನರ ಚರಿತ್ರೆಯನ್ನೂ ಹೀಗೆಯೇ ತಿಳಿಯಬೇಕು. ಸ್ವಾಭಾವಿಕಗುಣವು ಪ್ರತಿಬದ್ಧವಾದರೆ ಸ್ವಲ್ಪ ದಿವಸಗಳು ಪ್ರಕಾಶಿಸಲಾರದು. ಅಷ್ಟೇ ವಿನಹ ಸಜ್ಜನ ಚೇತನರು ಬಹುಕಾಲ ದುಷ್ಕರ್ಮವನ್ನು ಆಚರಿಸುವುದೂ, ದುರ್ಜನ ಚೇತನರು ಬಹುಕಾಲ ವಿಧ್ಯುಕ್ತ ಆಚರಣೆಯನ್ನು ಮಾಡುವುದೂ ಅಸಂಭಾವಿತವು.

ಪ್ರಶ್ನೆ—ಸ್ವಾಮಿ! ಈ ವಿಷಯವನ್ನು ಶ್ರೀಕೃಷ್ಣನು ಎಲ್ಲಿ ಹೇಳಿರುತ್ತಾನೆ?

ಉತ್ತರ—ಶ್ರೀ ಶ್ರೀಗಳವರು—ಎರಡನೆಯ ಮತ್ತು ಆರನೆಯ ಅಧ್ಯಾಯಗಳಲ್ಲಿ ಹೇಳಿರುತ್ತಾನೆ.—

(1) **ಧ್ಯಾಯತೋವಿಷಯಾನ್ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ಸಂಜಾಯತೇಕಾಮಃ ಕಾಮಾತ್ಕ್ರೋಧೋಭಿಜಾಯತೇ ।**

ಕ್ರೋಧಾದ್ಭವತಿಸಂಮೋಹಃ ಸಂಮೋಹಾತ್ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ॥

(2. 62-63.)

ಅರ್ಥವು—ದುಷ್ಟವಾದ ವಿಷಯಗಳನ್ನು ಧ್ಯಾನಮಾಡುವ ಚೇತನನಿಗೆ ಅವುಗಳಲ್ಲಿ ಆಸಕ್ತಿಯು ಹುಟ್ಟುವುದು. ಆ ಆಸಕ್ತಿಯಿಂದ ದುರಿಚ್ಛೆಯು ಉತ್ಪನ್ನವಾಗುವುದು; ಇಂಥಾ ಕಾಮವು ಮತ್ತೊಬ್ಬನ ಯತ್ನದಿಂದ ಪ್ರತಿರುದ್ಧವಾದರೆ, ಅವನ ವಿಷಯದಲ್ಲಿ ಉಲ್ಬಣವಾದ ಕ್ರೋಧವು ಉತ್ಪನ್ನವಾಗುವುದು; ಕ್ರೋಧದಿಂದ ಅಕಾರ್ಯೇಚ್ಛೆಯು ಪ್ರಾಪ್ತವಾಗುವುದು; ಅಕಾರ್ಯೇಚ್ಛೆಯಿಂದ ವಿಧಿನಿಷೇಧಗಳ ಜ್ಞಾನವು ನಷ್ಟವಾಗುವುದು; ಇಂಥಾ ಸ್ಮೃತಿವಿಭ್ರಮದಿಂದ ಅಕಾರ್ಯವನ್ನು ಮಾಡಬಾರದೆಂಬ ಪೂರ್ವದಲ್ಲಿದ್ದ ಯಥಾರ್ಥಜ್ಞಾನವು ಸರ್ವಾತ್ಮನಾ ನಾಶವಾಗುವುದು. ಯಥಾರ್ಥಜ್ಞಾನನಾಶದಿಂದ, ಪ್ರಣಶ್ಯತಿ ಎಂದರೆ ನರಕಾದ್ಯನರ್ಥಗಳನ್ನು ಹೊಂದುತ್ತಾನೆ.

ಹೀಗೆ ಒಳ್ಳೆಯ ಚೇತನರಿಗೆ ಅವರ ಸ್ವಭಾವಾನುಗುಣವಾದ, ಯಥಾರ್ಥಜ್ಞಾನಸಹಿತವಾದ ಮನಸ್ಸೇ ಇರುವುದು. ಆದರೆ ಪ್ರಬಲವಾದ, ಮೋಹಕವಾದ ವಿಷಯಸನ್ನಿಕರ್ಷದಿಂದಲೂ ದುರ್ಜನಸಂಗದಿಂದಲೂ, ಆ ಜ್ಞಾನವು ಸ್ವಲ್ಪಕಾಲ ಪ್ರಚಲಿತವಾಗುವುದು. ಸತ್ಸಂಗವು ಪ್ರಾಪ್ತವಾದ ಒಡನೆಯೇ, ಅಥವಾ ಮಾಡಿದ ದುಷ್ಕರ್ಮಗಳಿಗೆ ಶಿಕ್ಷೆಯನ್ನು ಅನುಭವಿಸಿದನಂತರ, ಸದ್ಬುದ್ಧಿಯು ಪುನಃ ಬಂದೇ ಬರುವುದು. ದುಷ್ಟಚೇತನರಿಗೆ ಪುನಃ ಪುನಃ ಅಸುರಸಂಬಂಧಿ ಕರ್ಮದಲ್ಲಿಯೇ ಆಸಕ್ತಿಯು ವೃದ್ಧಿಯಾಗುತ್ತಿರುವುದೆಂದು. ಶ್ರೀಕೃಷ್ಣನು ಹೇಳಿರುವುದನ್ನು, ಹಿಂದೆಯೇ ನಿರೂಪಿಸಿರುತ್ತೇವೆ.

ಈ ವಿಷಯವು ಅರ್ಜುನನ ಚರಿತ್ರಪರಾಮರ್ಶೆಯಿಂದಲೇ ತಿಳಿದುಬರುವುದು. ಭೂಭಾರಹರಣಾರ್ಥವಾಗಿ ಅವತರಿಸಿರುವ ಪರಬ್ರಹ್ಮನಾದ ಶ್ರೀಕೃಷ್ಣನ ಸೇವೆಯನ್ನು ಧರ್ಮಯುದ್ಧದಲ್ಲಿ, ದುಷ್ಟ ಕ್ಷತ್ರಿಯರ ಹನನರೂಪವಾದ ಸತ್ಕರ್ಮದ್ವಾರಾ ನೆರವೇರಿಸಬೇಕೆಂದು, ಉತ್ಸಾಹಶೀಲನಾದ ಅರ್ಜುನನು ಯುದ್ಧಾರಂಭಸಮಯದಲ್ಲಿ ಶತ್ರುಗಳ ನಿಶಾನವನ್ನು ತಿಳಿಯಬೇಕಾಗಿ, ಉಭಯಸೇನೆಗಳ ಮಧ್ಯಪ್ರದೇಶದಲ್ಲಿ ತನ್ನ ರಥವನ್ನು ನಿಲ್ಲಿಸಬೇಕೆಂದು ಸಾರಥಿಯಾದ ಜನಾರ್ದನನನ್ನು ಪ್ರಾರ್ಥಿಸಿದನು:—

(2) **ಸೇನಯೋರುಭಯೋರ್ಮಧ್ಯೇರಥಂಸ್ಥಾಪಯಮೇಽಚ್ಯುತ ।**
ಯೋತ್ಸ್ಯಮಾನಾನವೇಕ್ಷೇಹಂಯಏತೇಽತ್ರಸಮಾಗತಾಃ ।
ಧಾರ್ತರಾಷ್ಟ್ರಸ್ಯದುರ್ಬುದ್ಧೇರ್ಯುದ್ಧೇಪ್ರಿಯಚಿಕೀರ್ಷವಃ ॥
(1. 21-23.)

ಎಲೈ ಅಚ್ಯುತನೇ! ಉಭಯ ಸೇನೆಗಳ ಮಧ್ಯಪ್ರದೇಶದಲ್ಲಿ ನನ್ನ ರಥವನ್ನು ನಿಲ್ಲಿಸು. ದುರ್ಬುದ್ಧಿಯಾದ ಧೃತರಾಷ್ಟ್ರಪುತ್ರನಿಗೆ ಹಿತವನ್ನು ಮಾಡಬೇಕೆಂದು ಇಚ್ಛಿಸಿ ಯುದ್ಧಾರ್ಥವಾಗಿ ಇಲ್ಲಿ ಮಿಳಿತರಾದವರನ್ನು ನಾನು ನೋಡುತ್ತೇನೆ.

ಹೀಗೆ ಯುದ್ಧಾರಂಭದಲ್ಲಿ ಪಾರ್ಥನಿಗೆ ಆತನ ಸ್ವಭಾವಾನುಗುಣವಾದ, ದುರ್ಯೋಧನನೂ ಅವನ ಅನುಯಾಯಿಗಳೂ ಹನನಯೋಗ್ಯರೆಂಬ ಯಥಾರ್ಥವಾದ ಜ್ಞಾನವೇ ಇದ್ದಿತು. ಆದರೆ **ಬಂಧುದರ್ಶನ**ದಿಂದಲೂ ಅವರ ಸಂಗಡ ಆಚರಿಸಿದ ಸಲ್ಲಾಪಾದಿಸ್ಮೃತಿಯಿಂದಲೂ ಸಹ ಅವನ ಜ್ಞಾನವು ಚಲಿಸಿತು. ಹಾಗಾದರೂ ಶ್ರೀಕೃಷ್ಣನ ಉಪದೇಶದಿಂದ ಸ್ವಲ್ಪಕಾಲದಲ್ಲಿಯೇ ಆ ದುರ್ಬುದ್ಧಿಯು ನಿವೃತ್ತವಾಗಿ, ಪುನಃ ಯುದ್ಧಸನ್ನದ್ಧನಾದನು. ಅರ್ಜುನನು ಹೇಳುತ್ತಾನೆ:—

(3) **ನಷ್ಟೋಮೋಹಃ ಸ್ಮೃತಿರ್ಲಬ್ಧಾತ್ವತ್ಪ್ರಸಾದಾನ್ಮಯಾಚ್ಯುತ ।**
ಸ್ಥಿತೋಽಸ್ಮಿಗತಸಂದೇಹಃ ಕರಿಷ್ಯೇವಚನಂತವ ॥—(18. 73.)

ಎಲೈ ಅಚ್ಯುತನೇ! ನನಗೆ ಪೂರ್ವದಲ್ಲಿದ್ದ ವಿಪರೀತಜ್ಞಾನವು ನಷ್ಟವಾಯಿತು. ನಿನ್ನ ಪ್ರಸಾದದಿಂದ ನನಗೆ ನನ್ನ ಪೂರ್ವಜ್ಞಾನವು ಪ್ರಾಪ್ತವಾಯಿತು. ನನ್ನ ಸಂದೇಹಗಳು ಪರಿಹೃತವಾದುವು. ನಾನು ನಿನ್ನ ಅಪ್ಪಣೆಯನ್ನು ನಡೆಯಿಸುತ್ತೇನೆ.

ಒಳ್ಳೆಯ ಚೇತನನಾದುದರಿಂದಲೇ ಅರ್ಜುನನಿಗೆ ಪ್ರಾಪ್ತವಾದ ದುರ್ಬುದ್ಧಿಯು ಸ್ವಲ್ಪ ಉಪದೇಶದಿಂದ ನಿವೃತ್ತವಾಯಿತು. ದುಷ್ಟಚೇತನನಾದುದರಿಂದಲೇ ಪಾಂಡವದ್ವೇಷರೂಪವಾದ ದುರ್ಬುದ್ಧಿಯು ಭೀಷ್ಮ, ದ್ರೋಣ, ಪರಶುರಾಮದೇವರ, ನಾರದರೇ ಮೊದಲಾದ ಋಷಿಗಳ, ವಿದುರ, ಧೃತರಾಷ್ಟ್ರ, ಗಾಂಧಾರಿ, ಮತ್ತು ಶ್ರೀಕೃಷ್ಣನ ಪುನಃಪುನಃ ಮಾಡಿದ ಉಪದೇಶದಿಂದಲೂ ಚಲಿಸದೆ ದುರ್ಯೋಧನನು ಕೊನೆಗೆ ನಾಶವನ್ನೇ ಹೊಂದಿದನು. ಸಜ್ಜನರು ಯಾವಾಗಲೂ ಸತ್ಕರ್ಮ ಮಾಡುವವರೆಂಬ ಸಾಮಾನ್ಯ ನ್ಯಾಯವು ಇರುವುದರಿಂದಲೇ, ಅರ್ಜುನನ "ನನಗೆ ಇಂಥಾ ದುರ್ಬುದ್ಧಿಯು ಪ್ರಾಪ್ತವಾಯಿತಲ್ಲಾ ! ನಾನು ಮು

ಕ್ತಿಯೋಗ್ಯಚೇತಸನೋ ಅಲ್ಲವೋ?" ಎಂಬ ಶಂಕೆಯನ್ನು ಶ್ರೀಕೃಷ್ಣನು ತನ್ನ ಮಧುರವಾದ ವಾಗಮೃತದಿಂದ ಪರಿಹರಿಸಿರುತ್ತಾನೆ.

(4) **ಮಾಶುಚಃ ಸಂಪದಂದೈವೀಮಭಿಜಾತೋಽಸಿ ಪಾಂಡವ ।**

—(16. 5.)

ಎಲೈ ಅರ್ಜುನನೇ! ನೀನು ಶೋಕವನ್ನು ಹೊಂದಬೇಡ. ನೀನು ದೇವ ಸಂಬಂಧಿಯಾದ ಎಂದರೆ ಮುಕ್ತಿಯೋಗ್ಯವಾದ ಸ್ವಭಾವವನ್ನು ಹೊಂದಿದವನು.

ಆರನೆಯ ಅಧ್ಯಾಯದಲ್ಲಿಯೂ ಕೂಡ ಶ್ರೀಕೃಷ್ಣನು, ದುರ್ವಿಷಯಸ್ನೇಹ ವಶನಾಗಿ, ಸನ್ಮಾರ್ಗದಿಂದ ಚಲಿತನಾದ, ಒಳ್ಳೆಯ ಚೇತನನು ಪುನಃ ಉತ್ತಮ ರಾದ ಯೋಗಿಗಳ ಕುಲದಲ್ಲಿ ಹುಟ್ಟಿ, ಅವರ ಸಂಗಪ್ರಭಾವದಿಂದ ತನ್ನ ಪೂರ್ವ ಜ್ಞಾನವನ್ನು ಪಡೆದು, ಊರ್ಜಿತವಾದ ಸತ್ಕರ್ಮದಲ್ಲಿಯೇ ಆಸಕ್ತನಾಗುವನೆಂದು ಹೇಳುತ್ತಾನೆ:—

(5) **ಅಥವಾಯೋಗಿನಾಮೇವಕುಲೇಭವತಿಧೀಮತಾಂ ।**
ತತ್ರತಂಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಂ ।
ಯತತೇಚತತೋಭೂಯಃ ಸಂಸಿದ್ಧೌಕುರುನಂದನ ।

—(6.42—43.)

ಭಗವತ್ಸಂಬಂಧಿಯೋಗಾನುಷ್ಠಾನದಿಂದ ಚ್ಯುತನಾದ, ಒಳ್ಳೆಯ ಚೇತನನು ಜನ್ಮಾಂತರದಲ್ಲಿ ಜ್ಞಾನಿಗಳಾದ ಯೋಗಿಗಳ ವಂಶದಲ್ಲಿ ಅವತರಿಸುವನು. ಅಲ್ಲಿ (ಅಂಥಾ ಜ್ಞಾನಿಸಂಗಪ್ರಭಾವದಿಂದ) ತನ್ನ ಪೂರ್ವಜನ್ಮದಲ್ಲಿ ಭ್ರಷ್ಟನಾಗುವು ದಕ್ಕೆ ಮೊದಲು ಇದ್ದಂಥಾ ಜ್ಞಾನವನ್ನು ಪುನಃ ಸಂಪಾದಿಸುತ್ತಾನೆ. ತದನಂತರ, ಆ ಪೂರ್ವಜನ್ಮದಲ್ಲಿದ್ದ ಜ್ಞಾನಕ್ಕಿಂತಲೂ ಅಧಿಕವಾಗಿ ಜ್ಞಾನಸಂಪೂರ್ತಿಯನ್ನು ಹೊಂದುವುದಕ್ಕೆ ಪ್ರಯತ್ನಮಾಡುತ್ತಾನೆ. ಹೀಗೆ ಯೋಗೋಪಾಯದಿಂದ ಚಲಿತ ವಾದ ಜ್ಞಾನವುಳ್ಳ ಸಜ್ಜನನಿಗೆ ಅದೇ ಜನ್ಮದಲ್ಲಿ, ಅಥವಾ ಜನ್ಮಾಂತರದಲ್ಲಿ ಭಗವ ತ್ಸಂಬಂಧಿತತ್ವಜ್ಞಾನವು ಪ್ರಾಪ್ತವಾಗಿ, ಬ್ರಹ್ಮದರ್ಶನವು ಆಗುವುದು ನಿಶ್ಚಯವು.

ಅಸುರಸ್ವಭಾವವನ್ನು ಹೊಂದಿದವರಾದರೋ,

(6) **ಮಾಮಪ್ರಾಪ್ಯೈವಕೌಂತೇಯ ತತೋಯಾಂತ್ಯಧಮಾಂಗತಿಂ ।**

ನನ್ನನ್ನು (ಶ್ರೀಕೃಷ್ಣನನ್ನು) ಯಾವ ಕಾಲದಲ್ಲೂ ಹೊಂದದೆ, ಅಂತ್ಯದಲ್ಲಿ (ಅಂಧಂತಮಸ್ಸೆಂದು ಪ್ರಸಿದ್ಧವಾದ) ನಿತ್ಯವಾದ ನೀಚಸ್ಥಾನವನ್ನು ಹೊಂದು ತ್ತಾರೆ.

ಈ ರೀತಿಯಾಗಿ ಕೆಲವರು "ನೀಚ" ಚೇತನರೂ, ಕೆಲವರು "ಉಚ್ಚ" ಚೇತನರೂ ಇರುವರೆಂದು ಶ್ರೀಕೃಷ್ಣನ ವಾಕ್ಯಗಳಿಂದ ನಿಶ್ಚಿತವಾಯಿತು.

3

ಈ ಉಭಯ ಸ್ವಭಾವವುಳ್ಳ "ನೀಚೋಚ್ಚ" ಚೇತನರೂ ಕೆಲವರು ಇರುವರೆಂದೂ ಸಹ ನವಮಾಧ್ಯಾಯದಲ್ಲಿ ಶ್ರೀಕೃಷ್ಣನು ನಿರೂಪಿಸಿರುತ್ತಾನೆ :—

(1) **ತ್ರೈವಿದ್ಯಾಮಾಂ ಸೋಮಪಾಃ ಪೂತಪಾಪಾಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ ।**

ತೇಪುಣ್ಯಮಾಸಾದ್ಯಸುರೇಂದ್ರಲೋಕಮಶ್ನಂತಿದಿವ್ಯಾರ್ನ್ದಿವಿ ದೇವಭೋಗಾನ್ ॥

ತೇತಂಭುಕ್ತ್ವಾಸ್ವರ್ಗಲೋಕಂವಿಶಾಲಂ ಕ್ಷೀಣೇಪುಣ್ಯೇಮರ್ತ್ಯಲೋಕಂವಿಶಂತಿ ।

ಏವಂತ್ರಯೀಧರ್ಮಮನುಪ್ರಪನ್ನಾಗತಾಗತಂ ಕಾಮಕಾಮಾ ಲಭಂತೇ ।—(9. 20-21.)

ಅರ್ಥವು :—ತ್ರೈವಿದ್ಯರು ಎಂದರೆ ವೇದದಲ್ಲಿ ಆಪಾತತಃ ಪ್ರತೀಯಮಾನವಾದ ಸ್ವರ್ಗಾದ್ಯುದ್ದೇಶಕವಾದ ಕಾಮ್ಯಕರ್ಮದಲ್ಲಿ ಆಸಕ್ತರಾದವರು (ನಿತ್ಯಸಂಸಾರಿಗಳು) ನನ್ನನ್ನು ಯಜ್ಞಗಳಿಂದ ಆರಾಧಿಸಿ, ಯಜ್ಞದಲ್ಲಿ ಹುತಶೇಷವಾದ ಸೋಮರಸವನ್ನು ಪಾನಮಾಡುವುದರಿಂದ ನಷ್ಟವಾದ ಪಾಪವುಳ್ಳವರಾಗಿ, ಸ್ವರ್ಗಲೋಕವನ್ನು ಇಚ್ಛಿಸಿ ನನ್ನನ್ನು ಪ್ರಾರ್ಥಿಸುತ್ತಾರೆ. ಅವರು ಪುಣ್ಯಲಭ್ಯವಾದ ಸ್ವರ್ಗಲೋಕವನ್ನು ಹೊಂದಿ, ಅಲ್ಲಿ ಅಲೌಕಿಕವಾದ ಭೋಗಗಳನ್ನು ಅನುಭವಿಸುತ್ತಾರೆ. ಅವರು ಅಲ್ಲಿ ವಿಪುಲವಾದ ಸ್ವರ್ಗಸುಖವನ್ನು ಅನುಭವಿಸಿ, ತಾವು ಸಂಪಾದಿಸಿದ ಪುಣ್ಯದ ಕ್ಷಯವು ಆದನಂತರ ಪುನಃ ಭೂಲೋಕಕ್ಕೆ ಬರುತ್ತಾರೆ. ಹೀಗೆಯೇ ಪುನಃ ಪುನಃ ವೇದದ ಆಪಾತತಃ ತೋರುವ ಸ್ವರ್ಗಾದ್ಯುದ್ದೇಶಕ ಕಾಮ್ಯಕರ್ಮಗಳನ್ನು ಚರಿಸುವವರು ನಾನಾ ವಿಧವಾದ ಭೋಗೇಚ್ಛುಗಳಾಗಿ ಗತಾಗತಂ ಲಭಂತೇ—ಎಂದರೆ ಸ್ವರ್ಗಕ್ಕೆ ಹೋಗುವುದು, ಪುನಃ ಭೂಲೋಕಕ್ಕೆ ಬರುವುದು, ಹೀಗೆ ಮರಳಿ ಮರಳಿ ಪುನರಾವರ್ತಿಯನ್ನು ಹೊಂದುತ್ತಲೇ ಇರುವರು.

ಈ ಶ್ಲೋಕದಲ್ಲಿ ಶ್ರೀ ಕೃಷ್ಣನು ವರ್ಣಿಸುವ ಜನರು ನಿಷಿದ್ಧ ಕಾಮವುಳ್ಳವರಲ್ಲವಾದುದರಿಂದ ತಮೋಯೋಗ್ಯರಲ್ಲವೆಂದೂ, ನಿಷ್ಕಾಮ ಆರಾಧನೆಯಲ್ಲಿ ಆಸಕ್ತರಲ್ಲವಾದುದರಿಂದ ಮುಕ್ತಿಯೋಗ್ಯರಲ್ಲವೆಂದೂ ನಿಶ್ಚಿತವಾಗುವುದು. ಪರಿಶೇಷ

ದಿಂದ ಇದು ಸರ್ವದಾ ಕಾಮ್ಯಕರ್ಮಗಳಲ್ಲಿ ರತರಾದ ನಿತ್ಯಸಂಸಾರಿಗಳ ಪರವೆಂದು ತಿಳಿಯಬೇಕು. *

ಪ್ರಶ್ನೆ—ಸ್ವಾಮಿ! ಮುಕ್ತಿಯೋಗ್ಯರೂ ಪದೇ ಪದೇ ಸಂಗದೋಷದಿಂದ ಕಾಮ್ಯಕರ್ಮಗಳಲ್ಲಿ ಆಸಕ್ತರಾಗುತ್ತಿರುವುದು ಪ್ರಮಿತವಾಗಿರುವುದರಿಂದ ಇದು ನಿತ್ಯಸಂಸಾರಿಗಳ ಪರವೆಂದು ಹೇಗೆ ನಿರ್ಣಯಿಸುವುದು?

ಉತ್ತರ—ಈ ಶ್ಲೋಕದ ಮುಖ್ಯಾರ್ಥವಾದ **ನಿರಂತರ ಕಾಮ್ಯಕರ್ಮರತಿಯು** ನಿತ್ಯಸಂಸಾರಿಗಳಿಗೇ ಕೂಡುವುದು. ಮುಕ್ತಿಯೋಗ್ಯರಿಗೆ ಕೂಡುವುದಿಲ್ಲ. ದ್ವಿತೀಯಾಧ್ಯಾಯದಲ್ಲಿಯೂ ಕೂಡ ಇಂಥಾ ಜನರನ್ನು ಶ್ರೀಕೃಷ್ಣನು ವರ್ಣಿಸಿರುತ್ತಾನೆ—

(2) **ಯಾಮಿಮಾಂಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।**
ವೇದವಾದರತಾಃ ಪಾರ್ಥ ನಾನ್ಯದಸ್ತೀತಿವಾದಿನಃ ।
ಕಾಮಾತ್ಮಾನಃ ಸ್ವರ್ಗಪರಾಜನ್ಮಕರ್ಮಫಲಪ್ರದಾಂ ।
ಕ್ರಿಯಾವಿಶೇಷ ಬಹುಲಾಂ ಭೋಗೈಶ್ವರ್ಯಗತಿಂಪ್ರತಿ ।
ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಂ ।
ವ್ಯವಸಾಯಾತ್ಮಿಕಾಬುದ್ಧಿಃ ಸಮಾಧೌನವಿಧೀಯತೇ ॥

—(2. 42-44.)

ಅರ್ಥವು :—ಎಲೈ ಪಾರ್ಥನೆ! ಅಜ್ಞರಾದ, ವೇದದಲ್ಲಿ ಆಪಾತತಃ ಪ್ರತೀತವಾದ ಅರ್ಥದಲ್ಲೇ ಆಸಕ್ತರಾದ, ಯಾವತ್ತು ವೇದವು ಪುಷ್ಪಸದೃಶವಾದ ಅಲ್ಪ ಅಸ್ಥಿರ ಸುಖವುಳ್ಳ ಸ್ವರ್ಗಾದಿ ಫಲಕವಾದ ಪುನರ್ಜನ್ಮಾದಿಗಳಿಗೆ ಕಾರಣವಾದ ಕರ್ಮಾದಿಗಳನ್ನು ಪ್ರತಿಪಾದಿಸುವುವೆಂದು ಹೇಳುವ, ಸ್ವರ್ಗಾದಿ ಲೌಕಿಕಸುಖಕ್ಕಿಂತ ಭಿನ್ನವಾದ ಮೋಕ್ಷಸುಖವು ಇಲ್ಲವೆಂದು ಹೇಳುವ, **ಕಾಮಾತ್ಮಾನಃ**= ಕಾಮ್ಯಫಲದಲ್ಲಿಯೇ ಇಡಲ್ಪಟ್ಟ ಮನಸ್ಸುಳ್ಳ, ಸ್ವರ್ಗವೇ ಪರಮಪುರುಷಾರ್ಥವೆಂದು ಹೇಳುವ ಜನರು, ವೇದವು ಭೋಗ ಮತ್ತು ಐಶ್ವರ್ಯಪ್ರಾಪ್ತಿಗೆ ಕಾರಣವಾದ ಕ್ರಿಯಾವಿಶೇಷಗಳಿಂದ ಪೂರ್ಣವಾಗಿರುವುದೆಂದು ಹೇಳುತ್ತಾರೆ. ಇಂಥಾ ವೇದದ ಆಪಾತಾರ್ಥದಿಂದಲೇ ಮೋಹಿತವಾದ ಚಿತ್ತವುಳ್ಳ ಜನರಿಗೆ, ಮನಃ

---

* ಸ್ವರ್ಗಪ್ರಚುರರು, ನಿರಯಪ್ರಚುರರು, ಭೂಪ್ರಚುರರು ಎಂದು ನಿತ್ಯಸಂಸಾರಿಗಳು ತ್ರಿವಿಧರಾಗಿರುವರು. ಈ ಶ್ಲೋಕದಲ್ಲಿ ಶ್ರೀಕೃಷ್ಣನು ಹೇಳಿರುವ ನಿತ್ಯಸಂಸಾರಿಗಳು ಸ್ವರ್ಗಪ್ರಚುರರೆಂದು ತಿಳಿಯಬೇಕು.

ಸಮಾಧಾನಕ್ಕೆ ಬೇಕಾದ, ಪ್ರಮಾಣಗಳಿಂದ ನಿರ್ಣೀತವಾದ ನಿಶ್ಚಯಾತ್ಮಕಜ್ಞಾನವು ಹುಟ್ಟುವುದಿಲ್ಲ.

ಈ ಶ್ಲೋಕಗಳಲ್ಲಿ ವರ್ಣಿಸಿರುವ **ಕಾಮಾತ್ಮರು** ಎಂದರೇ ಕಾಮ್ಯಕರ್ಮರತರು ಅಥವಾ ಲೌಕಿಕಭೋಗೇಚ್ಛೆಯೇ ಸ್ವರೂಪವಾಗಿ ಉಳ್ಳವರು ನಿತ್ಯಸಂಸಾರಿಗಳೆಂದು ಶಾಸ್ತ್ರದಲ್ಲಿ ವ್ಯವಹರಿಸಲ್ಪಡುವರು.

ವಾಸುದೇವನೇ ಸರ್ವಾಂತರ್ಯಾಮಿಯೆಂದು ತಿಳಿಯದೆ, ಅನ್ಯದೇವತೆಗಳನ್ನು ಫಲಪ್ರದರೆಂದು ತಿಳಿದು ಭಜಿಸುವ ಕೆಲವು ಜನರನ್ನು ಶ್ರೀ ಕೃಷ್ಣನು ಏಳನೆಯ ಅಧ್ಯಾಯದಲ್ಲಿ ವರ್ಣಿಸಿರುತ್ತಾನೆ.—

(3) **ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ ।**
ತಂತಂನಿಯಮಮಾಸ್ಥಾಯ ಪ್ರಕೃತ್ಯಾನಿಯತಾಃಸ್ವಯಾ ।
ಲಭತೇಚತತಃಕಾಮಾನ್ ಮಯೈವವಿಹಿತಾನ್‌ಹಿತಾನ್ ।
ಅಂತವತ್ತುಫಲಂತೇಷಾಂ ತದ್ಭವತ್ಯಲ್ಪಮೇಧಸಾಂ ।
ದೇವಾನ್‌ದೇವ ಯಜೋಯಾಂತಿ ಮದ್ಭಕ್ತಾಯಾಂತಿ
ಮಾಮಪಿ ॥—(7. 20-24)

ಈ ಶ್ಲೋಕಾರ್ಥವು ಪೂರ್ವದಲ್ಲೇ ನಿರೂಪಿತವಾಗಿದೆ. ಈ ಶ್ಲೋಕೋಕ್ತರೀತಿಯಲ್ಲಿ ಪೂಜೆಮಾಡುವವರು ಕಾಮ್ಯಕರ್ಮಿಗಳಾದ ತ್ರೈವಿದ್ಯರೇ ಆಗುವರು. ಆದರೆ ಕೆಲವು ವೇಳೆ ಮೂಢಜನರ ಸಂಗದಿಂದ ಸಾತ್ವಿಕರಾದ ಮೋಕ್ಷಯೋಗ್ಯರೂ ಸಹ ಇಂಥಾ ಪೂಜೆಗಳನ್ನು ಮಾಡುವುದುಂಟು. ಆದುದರಿಂದಲೇ

(4) **ದೇವಾನ್‌ದೇವಯಜೋಯಾಂತಿ ಮದ್ಭಕ್ತಾಯಾಂತಿಮಾಮಪಿ ।**
—(7. 23.)

ಎಂದು ಶ್ರೀ ಕೃಷ್ಣನು ಹೇಳಿರುತ್ತಾನೆ.

ಇದರ ಅರ್ಥವು :— ದೇವತೆಗಳನ್ನು ಮಾತ್ರ ವಿಧ್ಯುಕ್ತರೀತಿಯಲ್ಲಿ ಆರಾಧಿಸುವವರು ದೇವತೆಗಳ ಲೋಕವನ್ನು (ಸ್ವಲ್ಪಕಾಲ) ಹೊಂದುತ್ತಾರೆ. ನನ್ನ (ವಿಷ್ಣುವಿನಲ್ಲಿ) ಭಕ್ತರಾಗಿ ದೇವತೆಗಳನ್ನು ವಿಧ್ಯುಕ್ತರೀತಿಯಲ್ಲಿ ಉಪಾಸನೆ ಮಾಡುವವರು ನನ್ನನ್ನೂ ಹೊಂದುತ್ತಾರೆ.

ಹೀಗೆ ಹೇಳಿರುವುದರಿಂದ, ವಿಷ್ಣುಭಕ್ತಿರಹಿತರಾದ ಈ ದೇವಯಾಜಿಗಳು ನಿತ್ಯಸಂಸಾರಿಗಳೆಂದು ನಿಶ್ಚಿತವಾಗುವುದು.* 'ದೇವಾನ್‌ಯಾಂತಿ' ಎಂದು ದೇವ

* ಉತ್ತಮದೇವತೆಗಳ ಆರಾಧನೆಯನ್ನು ಹೇಳಿರುವುದರಿಂದಲೂ "ತಂತಂನಿಯಮಮಾಸ್ಥಾಯ" ಎಂದು ವಿಧ್ಯುಕ್ತಪೂಜೆಯನ್ನು ಮಾಡುವವರೆಂದು ಹೇಳಿರುವುದರಿಂದಲೂ, ದೇವತೆಗಳ

ತೆಗಳ ಲೋಕಪ್ರಾಪ್ತಿಯು ಹೇಳಿರುವುದರಿಂದ ಇವರು ತಮೋಯೋಗ್ಯರಲ್ಲ. ಅನ್ಯದೇವತಾಪೂಜೆಯನ್ನು ಮಾಡಿದರೂ ಶ್ರೀ ಕೃಷ್ಣನಲ್ಲಿ ಭಕ್ತಿಮಾಡಿದ ವರಿಗೆ ಆಯಾಯ ದೇವತೆಗಳ ಪ್ರಸಾದ ದ್ವಾರಾ ಪರಮಾತ್ಮನ ಪ್ರಾಪ್ತಿಯೂ ಆಗುವುದು ; ಅದು ಸಂಗವಶಾತ್ ಕಾಮಿಗಳಾದ ಮುಕ್ತಿಯೋಗ್ಯರ ಚರಿತ್ರೆಯು. ಈ ಕೊನೆಯ ಶ್ಲೋಕದಲ್ಲಿ ಶ್ರೀ ಕೃಷ್ಣನು ಉಭಯರಿಗೂ ಆಗುವ ಫಲವನ್ನು ಪ್ರತ್ಯೇಕವಾಗಿ ನಿರೂಪಿಸಿರುತ್ತಾನೆ.

ಈ ರೀತಿಯಾಗಿ ಭಿನ್ನ ಭಿನ್ನ ಲಕ್ಷಣಗಳಿಂದ ಸಹಿತರಾದ ತ್ರಿವಿಧಜೀವರು ಇರುವರೆಂದು ಶ್ರೀ ಕೃಷ್ಣನ ವಾಕ್ಯಗಳಿಂದ ಸಿದ್ಧವಾಗುವುದು. ಇವರೆಲ್ಲರೂ ತಮ್ಮ ಸ್ವರೂಪಾನುಗುಣವಾದ ಮನೋವೃತ್ತಿಯಿಂದ ಸಹಿತರಾಗಿ **ಪ್ರಕೃತ್ಯಾ ನಿಯತಾಃ ಸ್ವಯಾ** ಎಂದು ಹೇಳಿರುವುದರಿಂದ, ಪ್ರಾಯೇಣಸ್ವರೂಪಾನು ಗುಣವಾದ ಕರ್ಮಗಳನ್ನೇ ಆಚರಿಸುತ್ತಾ ಸಂಸಾರದಲ್ಲಿ ನಮಗೆಲ್ಲರಿಗೂ ಅನು ಭವಕ್ಕೆ ಬರುವಂತೆ ಪರಿದೃಶ್ಯಮಾನರಾಗಿರುವರು. ಪ್ರಾಯೇಣ ಸಾತ್ವಿಕಗುಣವು ಮುಕ್ತಿಯೋಗ್ಯರಿಗೂ, ಪ್ರಾಯೇಣ ರಾಜಸವೃತ್ತಿಯು ನಿತ್ಯಸಂಸಾರಿಗಳಿಗೂ, ಪ್ರಾಯೇಣ ತಾಮಸವೃತ್ತಿಯು ದುರ್ಯೋಧನಾದಿ ದೈತ್ಯರಿಗೂ ಪ್ರಾಪ್ತವಾಗಿರು ವುದು. ಈ ಯಾವತ್ತು ಜೀವರಾಶಿಗಳೂ ಈ ರೀತಿಯಾಗಿ ತಮ್ಮ ಸ್ವಭಾವದಿಂ ದಲೂ, ಪ್ರಾಯೇಣ ಸ್ವಭಾವಾನುಸಾರಿಯಾದ ಪುರ್ವಸಂಸ್ಕಾರದಿಂದಲೂ ಪ್ರೇರಿತರಾಗಿ, ಸ್ವಯೋಗ್ಯವಾದ ಕರ್ಮಾದ್ಯನುಷ್ಠಾನಗಳಲ್ಲಿ ಆಸಕ್ತರಾಗಿರುವರು. "ಪ್ರಕೃತ್ಯಾನಿಯತಾಃಸ್ವಯಾ" ಎಂದರೆ ತಮ್ಮ ತಮ್ಮ ಸ್ವರೂಪಸ್ವಭಾವದಿಂ ದಲೂ ಮತ್ತು ಪೂರ್ವಸಂಸ್ಕಾರದಿಂದಲೂ ಪ್ರೇರಿತರಾಗಿ ದೇವತೆಗಳನ್ನು ಆರಾಧಿ ಸುತ್ತಾರೆ ಎಂದು ಶ್ರೀ ಕೃಷ್ಣನು ಹೇಳಿರುತ್ತಾನೆ. ತೃತಿಯಾಧ್ಯಾಯದ ಶ್ರೀ ಕೃಷ್ಣನ ವಾಕ್ಯವು ಬಹು ಸ್ಪಷ್ಟವಾಗಿದೆ. ಶ್ರೀ ಕೃಷ್ಣನು ಹೇಳುತ್ತಾನೆ :—

(5) **ಸದೃಶಂ ಚೇಷ್ಟತೇಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।**
ಪ್ರಕೃತಿಂಯಾಂತಿಭೂತಾನಿ ನಿಗ್ರಹಃಕಿಂಕರಿಷ್ಯತಿ ॥—(3. 33.)

ಲೋಕಪ್ರಾಪ್ತಿರೂಪಫಲಕಥನದಿಂದಲೂ, ಈ ನಿತ್ಯಸಂಸಾರಿಗಳೂ ಸ್ವರ್ಗಪ್ರಚುರರೆಂದೇ ತೋರು ವುದು. "**ಯಕ್ಷರಕ್ಷಾಂಸಿರಾಜಸಾಃ**"—(17. 4.) ಎಂಬ ಶ್ಲೋಕದಲ್ಲಿ **ರಾಜಸರು** ಯಕ್ಷರಾಕ್ಷಸರನ್ನು ಪೂಜಿಸುವರೆಂದು ಹೇಳಿರುತ್ತದೆ. ಈ ನಿತ್ಯಸಂಸಾರಿಗಳು ನಿರಯಪ್ರಚುರರೆಂದು ನಿಶ್ಚಯಿಸಬಹುದು.

ಅರ್ಥವು :—ತತ್ತ್ವೋಪದೇಶದಿಂದ ಉತ್ಪನ್ನವಾದ ಜ್ಞಾನವುಳ್ಳವನಾದರೂ ಸ್ವಭಾವಾನುಗುಣವಾಗಿಯೇ ಜೀವನು ಕರ್ಮಮಾಡುತ್ತಾನೆ. (ಉಪದೇಶಜನ್ಯ ಜ್ಞಾನಾನುಗುಣವಾಗಿ ಕರ್ಮವನ್ನು ಮಾಡುವುದಿಲ್ಲ. ಆದುದರಿಂದ ಸ್ವರೂಪತಃ ದುರ್ಜನರಾದವರಲ್ಲಿ ಉಪದೇಶವು ವ್ಯರ್ಥವು ಎಂದು ಭಾವವು). ಸರ್ವ ಪ್ರಾಣಿಗಳೂ ಸ್ವಭಾವವನ್ನೇ ಅನುಸರಿಸಿ ಕರ್ಮಗಳನ್ನು ಮಾಡುತ್ತಾರೆ. ಮನೋನಿಗ್ರಹವು ಆ ವಿಷಯದಲ್ಲಿ ಏನೂ ಮಾಡಲಾರದು.

ಇಷ್ಟು ಉಪನ್ಯಾಸದಿಂದ ಪ್ರಯತ್ನಾದಿಗಳಿಂದ ಸಂಪಾದಿತವಲ್ಲದ, ವಿವಿಧವಾದ ಆಚರಣೆಗಳಿಗೆ ಮೂಲಕಾರಣವಾದ ಜೀವಸ್ವಭಾವವೂ ಮೂರುಪ್ರಕಾರವಾಗಿ ನಿತ್ಯವಾಗಿರುವುದೆಂದು ಸಿದ್ಧವಾಗುವುದು.

4

ಸಾತ್ವಿಕಾದಿಸ್ವಭಾವಾನುಸಾರಿಯಾದ ಆಚರಣೆಗಳನ್ನು ಶ್ರೀ ಕೃಷ್ಣನು ಹದಿನಾರನೆಯ ಅಧ್ಯಾಯದಲ್ಲಿ ನಿರೂಪಿಸಿರುತ್ತಾನೆ. ಹದಿನೇಳನೆಯ ಮತ್ತು ಹದಿನೆಂಟನೆಯ ಅಧ್ಯಾಯಗಳಲ್ಲಿ ಇವುಗಳನ್ನು ವಿಸ್ತರಿಸುತ್ತಾನೆ:—

(1) **ಯಜಂತೇಸಾತ್ವಿಕಾದೇವಾನ್ ಯಕ್ಷರಕ್ಷಾಂಸಿರಾಜಸಾಃ ।**
ಪ್ರೇತಾನ್‌ಭೂತಗಣಾಂಶ್ಚಾನ್ಯೇಯಜಂತೇತಾಮಸಾಜನಾಃ ॥

—(17. 4.)

ಸಾತ್ವಿಕರು (ಮುಕ್ತಿಯೋಗ್ಯರು) ವಿಷ್ಣುವನ್ನು ಉದ್ದೇಶಮಾಡಿ, ದೇವತೆಗಳನ್ನು ಯಜ್ಞದಲ್ಲಿ ಆರಾಧಿಸುತ್ತಾರೆ. ರಾಜಸರು (ನಿತ್ಯಸಂಸಾರಿಗಳು) ಯಕ್ಷರಾಕ್ಷಸರನ್ನು ಆರಾಧಿಸುತ್ತಾರೆ. ಪಿಶಾಚಗಳನ್ನೂ ಮತ್ತು ಭೂತಗಣಗಳನ್ನೂ ತಾಮಸರು (ತಮೋಯೋಗ್ಯರು) ಯಜ್ಞದಲ್ಲಿ ಆರಾಧಿಸುತ್ತಾರೆ.*

* ತಾಮಸರು ಬ್ರಹ್ಮರುದ್ರೇಂದ್ರರುಗಳ ಹೆಸರು ಹೇಳಿ ಹೋಮಮಾಡಿದರೂ, ಆ ಹೋಮವನ್ನು ಬ್ರಹ್ಮಾದಿದೇವತೆಗಳ ಹೆಸರುಳ್ಳ ರಾಕ್ಷಸರು ಸ್ವೀಕಾರಮಾಡುವರೇ ಹೊರತು, ಸಾಕ್ಷಾದ್ವಿಷ್ಣುದಾಸರಾದ ದೇವತೆಗಳು ಅಭಕ್ತನಿಂದ ಮಾಡಲ್ಪಟ್ಟ ಆ ಯಾಗದ ಹವಿರ್ಭಾಗಗಳನ್ನು ಮುಟ್ಟುವುದಿಲ್ಲ. ಈ ವಿಷಯವು ವಿಸ್ತಾರವಾಗಿ ವರಾಹಾದಿ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುತ್ತದೆ. "ಅಶ್ರದ್ಧಯಾಹುತಂ............ಅಸದಿತ್ಯುಚ್ಯತೇಪಾರ್ಥ" "ಯಜಂತೇ ನಾಮಯಜ್ಞೈಸ್ತೇ........ಮಾಮಾತ್ಮಪರದೇಹೇಷುಪ್ರದ್ವಿಷಂತೋಽಭ್ಯಸೂಯಕಾಃ" ಇತ್ಯಾದಿ ವಾಕ್ಯಗಳಲ್ಲಿ ಶ್ರೀ ಕೃಷ್ಣನೂ ಸೂಚಿಸಿರುತ್ತಾನೆ. ದುರ್ಯೋಧನ, ಜರಾಸಂಧಾದಿಗಳ ಯಾಗದ ಫಲವೂ ಇದರಿಂದ ಉಕ್ತಪ್ರಾಯವೇ ಆಯಿತು.

ಅಸುರಸಂಬಂಧಿಸ್ವಭಾವವುಳ್ಳವರ ಲಕ್ಷಣಗಳನ್ನು ಶ್ರೀ ಕೃಷ್ಣನು ಸ್ಪಷ್ಟವಾಗಿ ವರ್ಣಿಸುತ್ತಾನೆ :—

(2) **ಅಶಾಸ್ತ್ರ ವಿಹಿತಂ ಘೋರಂ ತಪ್ಯಂತೇಯೇ ತಪೋಜನಾಃ।**
ದಂಭಾಹಂಕಾರಸಂಯುಕ್ತಾಃ ಕಾಮರಾಗಬಲಾನ್ವಿತಾಃ ॥
ಕರ್ಶಯಂತಃ ಶರೀರಸ್ಥಂ ಭೂತಗ್ರಾಮಮಚೇತಸಃ।
ಮಾಂಚೈವಾಂತಃ ಶರೀರಸ್ಥಂತಾನ್ ವಿದ್ಧ್ಯಾಸುರನಿಶ್ಚಯಾನ್ ॥

—(17. 5-6.)

ಯಾವ ಜನರು ವೇದಾದಿ ಶಾಸ್ತ್ರಗಳಿಗೆ ವಿರುದ್ಧವಾದ ಮತ್ತು ದುರಾಗಮಗಳಿಂದ ವಿಹಿತವಾದ, ಅತಿಕಷ್ಟಕರವಾದ, ತಪಸ್ಸನ್ನು ದಂಬಾಹಂಕಾರಗಳಿಂದಲೂ, ಕಾಮರಾಗಗಳಿಂದಲೂ, (ಎಂದರೆ ದುರಾಸಕ್ತಿ, ದುರಾಗ್ರಹಗಳಿಂದಲೂ), ಮಾಡುತ್ತಾರೆಯೋ ; ಮತ್ತು ಶರೀರದಲ್ಲಿ ಸರ್ವಕಾರ್ಯಪ್ರೇರಕರಾಗಿ ನಿಯಾಮಕರಾಗಿರುವ ತತ್ವಾಭಿಮಾನಿದೇವತೆಗಳನ್ನೂ ಮತ್ತು ಸರ್ವನಿಯಾಮಕನಾಗಿ ಶರೀರದಲ್ಲಿ ಸ್ಥಿತನಾದ ನನ್ನನ್ನೂ ಅಲ್ಪಗುಣವುಳ್ಳವನನ್ನಾಗಿ ತಿಳಿಯುವ ಅವಿವೇಕಿಗಳು ಯಾರೋ, ಅವರು ನಿಶ್ಚಯವಾಗಿ ಅಸುರಸಂಬಂಧಿ (ತಮೋಯೋಗ್ಯ) ಸ್ವಭಾವವನ್ನು ಹೊಂದಿದವರೆಂದು ತಿಳಿ.

ದೇವಸಂಬಂಧಿ (ಮುಕ್ತಿಯೋಗ್ಯ) ಸ್ವಭಾವವನ್ನು ಹೊಂದಿದವರನ್ನು ಶ್ರೀ ಕೃಷ್ಣನು ಪೂರ್ವದಲ್ಲಿಯೇ ನಿರೂಪಿಸಿರುತ್ತಾನೆ. ಇನ್ನು ಮೇಲೆ ಸಾತ್ವಿಕ ರಾಜಸ ತಾಮಸಸ್ವಭಾವವುಳ್ಳವರ ಆಹಾರಾದಿ ಅನೇಕ ಭೇದಗಳನ್ನು ಹದಿನೇಳನೆಯ ಅಧ್ಯಾಯದ ಉತ್ತರ ಶ್ಲೋಕಗಳಲ್ಲಿಯೂ, ಹದಿನೆಂಟನೆಯ ಅಧ್ಯಾಯದ ಅನೇಕ ಶ್ಲೋಕಗಳಿಂದಲೂ ಶ್ರೀಕೃಷ್ಣನು ಭಕ್ತಜನರು ತಮಗೆ ದುಸ್ಸಂಗಾದಿಗಳಿಂದ ಪ್ರಾಪ್ತವಾದ ತಾಮಸಧರ್ಮಗಳನ್ನು ಪರಿತ್ಯಾಗಮಾಡಿ ಸಾತ್ವಿಕಧರ್ಮಗಳನ್ನು ಆಚರಿಸಲೆಂಬ ಅಭಿಪ್ರಾಯದಿಂದ ವರ್ಣಿಸುತ್ತಾನೆ:—

(3) **ಆಹಾರಸ್ತ್ವಪಿಸರ್ವಸ್ಯ ತ್ರಿವಿಧೋಭವತಿಪ್ರಿಯಃ।**
ಯಜ್ಞಸ್ತಪಸ್ತಥಾದಾನಂತೇಷಾಂ ಭೇದಮಿಮಂಶೃಣು ॥

—(17. 7.)

ಸಾತ್ವಿಕಾದಿ ಜನರಿಗೆ ಪ್ರಿಯವಾದ ಆಹಾರವೂ ಕೂಡ ಮೂರು ಪ್ರಕಾರವಾಗಿರುವುದು. ಹಾಗೆಯೇ ಅವರುಗಳ ಯಜ್ಞ, ತಪಸ್ಸು ಮತ್ತು ದಾನವೂ ತ್ರಿವಿಧವಾಗಿರುವುದು. ಶ್ರವಣಮಾಡು.

ಶ್ರೀಕೃಷ್ಣನು ಮೂರು ಶ್ಲೋಕಗಳಿಂದ ಆಹಾರಭೇದವನ್ನು ನಿರೂಪಿಸು ತ್ತಾನೆ.—

(4) **ಆಯುಸ್ಸತ್ವಬಲಾರೋಗ್ಯ ಸುಖಪ್ರೀತಿವಿವರ್ಧನಾಃ ।**
ರಸ್ಯಾಃ ಸ್ನಿಗ್ಧಾಃ ಸ್ಥಿರಾಹೃದ್ಯಾ ಆಹಾರಾಃ ಸಾತ್ವಿಕಪ್ರಿಯಾಃ ।
ಕಟ್ವಾಮ್ಲಲವಣಾತ್ಯುಷ್ಣ ತೀಕ್ಷ್ಣರೂಕ್ಷವಿದಾಹಿನಃ ।
ಆಹಾರಾರಾಜಸಸ್ಯೇಷ್ಟಾದುಃಖಶೋಕಾಮಯಪ್ರದಾಃ ॥
ಯಾತಯಾಮಂಗತರಸಂ ಪೂತಿಪರ್ಯುಷಿತಂಚಯತ್ ।
ಉಚ್ಛಿಷ್ಟಮಪಿಚಾಮೇಧ್ಯಂಭೋಜನಂ ತಾಮಸಪ್ರಿಯಂ ॥
—(17. 8-10.)

ಆಯುಸ್ಸು, ಸಾಧುಗುಣ (ಚಿತ್ತಶುದ್ಧಿ), ಬಲ, ಆರೋಗ್ಯ, ಸೇವನಾನಂತರ ಬಹುಕಾಲೀನಸುಖ, ಭಕ್ಷಣಕಾಲದಲ್ಲಿಯೂ (ಇಂದ್ರಿಯ ಮತ್ತು ಮನಸ್ಸಿಗಳಿಗೆ) ಸುಖ ಇವುಗಳನ್ನು ವೃದ್ಧಿಹೊಂದಿಸುವ, ಮಿತವಾದ, ಷಡ್ರಸಯುಕ್ತವಾದ, ರಸವತ್ತಾಗಿಯೂ, ಸ್ನಿಗ್ಧವಾಗಿಯೂ, ಸ್ಥಿರವಾಗಿಯೂ, ಮನೋಹರವಾಗಿಯೂ ಇರುವ ಆಹಾರವು ಸಾತ್ವಿಕರಿಗೆ (ಮುಕ್ತಿಯೋಗ್ಯ ಸ್ವಭಾವವುಳ್ಳವರಿಗೆ, ಸಾತ್ವಿಕಗುಣಕಾರ್ಯವಾದ ದೇಹವುಳ್ಳವರಿಗೆ, ಪ್ರಿಯವಾದವುಗಳು.)*

---

* **ಉಚ್ಛಿಷ್ಟಭೋಜಿನೋ ದಾಸಾಸ್ತವಮಾಯಾಂ ಜಯೇಮಹಿ** ಎಂಬ ಉದ್ಧವನ ವಚನಾನುಸಾರ ವಿಧ್ಯುಕ್ತವಾಗಿ ಭಗವದರ್ಪಿತವಾದರೇನೇ ಪೂರ್ವೋಕ್ತ ಆಹಾರಗಳು ಸಾತ್ವಿಕವೆನ್ನಿಸುವುವು ಎಂದು ತಿಳಿಯಬೇಕು. ಈ ಅಭಿಪ್ರಾಯವು ''ಆಯುಸ್ಸತ್ವ ವಿವರ್ಧನಾಃ'' ಎಂಬ ವಿಶೇಷಣಗಳಿಂದ ಸೂಚಿತವಾಗುವುದು. ಭಗವದರ್ಪಿತವಲ್ಲದ ಆಹಾರವು ಆಯುರ್ವೃದ್ಧಿಯನ್ನಾಗಲೀ, ಚಿತ್ತಶುದ್ಧಿಯನ್ನಾಗಲೀ ಉಂಟುಮಾಡಲಾರವು. ಭಗವದನರ್ಪಿತಾನ್ನಭೋಜನದಿಂತ ಆಯುರ್ನಾಶವೂ, ಅಂತಃಕರಣ ಮಾಲಿನ್ಯವೂ ಅವಶ್ಯವಾಗಿ ಉಂಟಾಗುವುವು. ಶ್ರೀಕೃಷ್ಣನೂ ಸಹ

ಯಜ್ಞಶಿಷ್ಟಾಶಿನಸ್ಸಂತೋಮುಚ್ಯಂತೇ ಸರ್ವಕಿಲ್ಬಿಷೈಃ ।
ಭುಂಜತೇತೇತ್ವಘಂ ಪಾಪಾಯೇಪಚಂತ್ಯಾತ್ಮಕಾರಣಾತ್ ॥
—(3. 13.)

ಎಂದು ಹೇಳಿರುತ್ತಾನೆ.

ಈ ಶ್ಲೋಕಾರ್ಥವೇನೆಂದರೆ—ಪರಮಾತ್ಮ ಮತ್ತು ದೇವತೆಗಳ ಆರಾಧನಾನಂತರ ಅವಶಿಷ್ಟವಾದ ಅನ್ನವನ್ನು ಭೋಜನಮಾಡುವವರು ಸರ್ವ ಪಾಪಗಳಿಂದಲೂ ಮುಕ್ತರಾಗುತ್ತಾರೆ. ಸ್ವಾರ್ಥವಾಗಿ ಯಾರು ಪಾಕಮಾಡುತ್ತಾರೆಯೋ ಅವರು ಪಾಪವನ್ನೇ ಭೋಜನಮಾಡತಕ್ಕವರು ; ಅಂದರೆ ದೇವರ ನೈವೇದ್ಯ, ವೈಶ್ವದೇವ, ಬಲಿಹರಣ, ಅತಿಥಿಸತ್ಕಾರ ಇವುಗಳಿಲ್ಲದೆ; ಕೇವಲ ಉದರ

ಅತಿ ಖಾರಸಾಗಿಯೂ, ಅತಿ ಹುಳಿಯಾಗಿಯೂ, ಅತಿ ಲವಣಸಹಿತವಾಗಿಯೂ, ಅತ್ಯುಷ್ಣವಾಗಿಯೂ, ಅತಿ ತೀಕ್ಷ್ಣವಾಗಿಯೂ, ಬಹಳ ನೀರಸವಾಗಿಯೂ, ಭಕ್ಷಣಕಾಲದಲ್ಲಿ ಬಾಯನ್ನು ಸುಟ್ಟು ಸಂತಾಪವನ್ನು ಕೊಡುವುದಾಗಿಯೂ ಇರುವ ಆಹಾರಗಳು ರಾಜಸಸ್ವಭಾವವುಳ್ಳವರಿಗೆ ಪ್ರಿಯವಾದ ಆಹಾರಗಳು. ಯಾತಯಾಮವು, (ಪಾಕಾನಂತರ ಒಂದು ಯಾಮ ಕಳೆದಿರುವುದು), ಗತರಸವು (ನಷ್ಟವಾದ ರುಚಿಯುಳ್ಳದ್ದು), ದುರ್ಗಂಧಸಹಿತವಾಗಿರುವುದು, ಹಳಸಿಹೋದುದು ಮತ್ತು ಯಾವಯಾವದು ಉಚ್ಛಿಷ್ಟವೋ (ನೀಚರಿಂದ ಭಕ್ಷಿತವಾದ ಶೇಷ, ಅಥವಾ ಎಂಜಲೋ) ಮತ್ತು **ಅಪವಿತ್ರವೋ*** ಅವೆಲ್ಲವೂ ತಾಮಸಸ್ವಭಾವವುಳ್ಳವರಿಗೆ (ತಮೋಯೋಗ್ಯರಿಗೆ, ತಾಮಸಗುಣಕಾರ್ಯವಾದ ದೇಹವುಳ್ಳವರಿಗೆ) ಪ್ರಿಯವಾದ ಆಹಾರಗಳು.

ಶ್ರೀಕೃಷ್ಣನು ಸಾತ್ವಿಕಾದಿ **ಯಜ್ಞತ್ರೈವಿಧ್ಯವನ್ನು** ವಿವರಿಸುತ್ತಾನೆ—

(5) **ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋಯ ಇಜ್ಯತೇ ।**
ಯಷ್ಟವ್ಯಮೇವೇತಿಮನಃ ಸಮಾಧಾಯಸ ಸಾತ್ವಿಕಃ ॥
ಅಭಿಸಂಧಾಯತು ಫಲಂದಂಭಾರ್ಥಮಪಿಚೈವಯತ್ ।
ಇಜ್ಯತೇ ಭರತಶ್ರೇಷ್ಠತಂಯಜ್ಞಂ ವಿದ್ಧಿರಾಜಸಂ ।
ವಿಧಿಹೀನಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಂ ।
ಶ್ರದ್ಧಾವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ ॥

(17. 11-13.)

ಪೂರ್ತಿಗಾಗಿ ಪಾಕಮಾಡಿದ ಅನ್ನಭೋಜನವು ಬಹು ಪಾಪಗಳನ್ನು ಉಂಟುಮಾಡುವುದು ಎಂದು ಅರ್ಥವು. ಯಜ್ಞೋವಿಷ್ಣುಃ ಎಂದು ಶಂಕರಾಚಾರ್ಯರೂ. ಯಜ್ಞಶಬ್ದಾರ್ಥವು ವಿಷ್ಣುವೆಂದು ಈ ಅಧ್ಯಾಯದಲ್ಲಿ ಅರ್ಥಮಾಡಿರುತ್ತಾರೆ.

*"**ಅಮೇಧ್ಯಂ**" ಎಂದರೆ ಅಪವಿತ್ರಾನ್ನವು ತಾಮಸರಿಗೆ ಪ್ರಿಯವು ಎಂದು ಹೇಳಿರುವುದರಿಂದ ಪೂರ್ವೋಕ್ತ ಆಹಾರಗಳಲ್ಲದೆ ಇನ್ನೂ ಸಕಲ **ಭಗವದನರ್ಪಿತವಾದ** ಉತ್ತಮ ಭಕ್ಷಣದ್ರವ್ಯಗಳೂ, ಮತ್ತು **ವಿಧಿವಿರುದ್ಧವಾಗಿ** ಪ್ರಾಪ್ತವಾದ ವಿಕ್ರೀತಾನ್ನ (ಕೊಂಡುಕೊಂಡ ಅನ್ನ) ವೇ ಮೊದಲಾದ ಆಹಾರಗಳೂ ತಾಮಸವೆಂದೇ ನಿರ್ಧರಿಸಬೇಕು. ಭಗವದರ್ಪಿತವಾದ, ವಿಧಿವಿಹಿತವಾದ, ಮತ್ತು ವಿಧ್ಯುಕ್ತರೀತಿಯಲ್ಲಿ ಪಕ್ವವಾದ ಆಹಾರದ್ರವ್ಯಗಳು ಸಾತ್ವಿಕವೆಂದೂ, ಭಗವದನರ್ಪಿತವಾದ ಮತ್ತು ವಿಧಿನಿಷಿದ್ಧವಾದ ಭಕ್ಷಣದ್ರವ್ಯಗಳು ತಾಮಸವೆಂದೂ ಫಲಿತಾಂಶವು. ಸಾತ್ವಿಕಾನ್ನದಿಂದ ಪುಣ್ಯವೃದ್ಧಿಯೂ ಅಂತಃಕರಣಶುದ್ಧಿಯೂ ಉಂಟಾಗುವುವು. ತಾಮಸಾದ್ಯನ್ನಗಳಿಂದ ಪಾಪವೃದ್ಧಿಯೂ, ದುರ್ಬುದ್ಧಿಯೂ, ವಿಷಯಾಸಕ್ತಿಯೂ ಉಂಟಾಗುವುವು.

ಸ್ವರ್ಗಾದಿಫಲಾಕಾಂಕ್ಷಾರಹಿತರಾಗಿ, ವಿಧಿಜ್ಞಾನಪೂರ್ವಕವಾಗಿ, ಅವಶ್ಯವಾಗಿ ಮಾಡಿಯೇತೀರಬೇಕೆಂದು ಶ್ರದ್ಧಾಪೂರ್ವಕವಾಗಿ, ಪರಮಾತ್ಮನಲ್ಲಿ ಮನಸ್ಸನ್ನು ಇಟ್ಟು ಮಾಡಿದ ಯಜ್ಞವು ಸಾತ್ವಿಕವು (ಮುಕ್ತಿಯೋಗ್ಯಸ್ವಭಾವಾನುಗುಣವಾದುದು; ಸಾತ್ವಿಕಗುಣಕಾರ್ಯವು).

ಎಲೈ ಭರತಶ್ರೇಷ್ಠನೇ! ಸ್ವರ್ಗಾದಿ ಫಲಗಳನ್ನು ಆಕಾಂಕ್ಷೆಮಾಡಿ, ತನ್ನ ಮಹತ್ವವನ್ನು ಪ್ರದರ್ಶನೆಮಾಡುವ ಉದ್ದೇಶದಿಂದ ಸಹ ಮಾಡಿದ ಯಜ್ಞವು ರಾಜಸವು (ನಿತ್ಯಸಂಸಾರಿಗಳು ಮಾಡುವುದು.) ವಿಧ್ಯುಕ್ತರೀತಿಯನ್ನು ಬಿಟ್ಟು,* ಅನ್ನದಾನವರ್ಜಿತವಾಗಿ, ವಿಹಿತಮಂತ್ರಪಠನಾದಿಗಳಿಲ್ಲದೆ, ದಕ್ಷಿಣಾದಾನದಿಂದ ರಹಿತವಾಗಿ ಮಾಡಿದ ಶ್ರದ್ಧಾವಿರಹಿತವಾದ ಯಜ್ಞವು ತಾಮಸವೆಂದು ಜ್ಞಾನಿಗಳು ಹೇಳುತ್ತಾರೆ.

ತಪಸ್ಸಿನಲ್ಲೂ ತ್ರೈವಿಧ್ಯವುಂಟೆಂದು ಶ್ರೀ ಕೃಷ್ಣನು ಹೇಳುತ್ತಾನೆ:—

(6) **ದೇವದ್ವಿಜ ಗುರುಪ್ರಾಜ್ಞ ಪೂಜನಂ ಶೌಚಮಾರ್ಜವಂ ।**
ಬ್ರಹ್ಮಚರ್ಯ ಮಹಿಂಸಾ ಚ ಶಾರೀರಂ ತಪಉಚ್ಯತೇ ॥
ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯ ಹಿತಂಚಯತ್ ।
ಸ್ವಾಧ್ಯಾಯಾಭ್ಯಸನಂಚೈವ ವಾಙ್ಮಯಂ ತಪ ಉಚ್ಯತೇ ॥
ಮನಃ ಪ್ರಸಾದ ಸೌಮ್ಯತ್ವಂ ಮೌನಮಾತ್ಮ ವಿನಿಗ್ರಹಃ ।
ಭಾವಸಂಶುದ್ಧಿರಿತ್ಯೇತತ್ತಪೋಮಾನಸಮುಚ್ಯತೇ ॥
ಶ್ರದ್ಧಯಾ ಪರಯಾತಪ್ತಂ ತಪಸ್ತತ್ತ್ರಿವಿಧಂನರೈಃ ।
ಅಫಲಾ ಕಾಂಕ್ಷಿಭಿರ್ಯುಕ್ತೈಃ ಸಾತ್ವಿಕಂಪರಿಚಕ್ಷತೇ ॥
ಸತ್ಕಾರಮಾನಪೂಜಾರ್ಥಂ ತಪೋದಂಭೇನಚೈವಯತ್ ।
ಕ್ರಿಯತೇತದಿಹ ಪ್ರೋಕ್ತಂ ರಾಜಸಂಚಲಮಧ್ರುವಂ ॥

---

* "**ವಿಧಿಹೀನಂ**" ಎಂದರೆ ವಿಧ್ಯುಕ್ತರೀತಿಯನ್ನು ಬಿಟ್ಟು ಎಂಬ ವಿಶೇಷಣವು ಪ್ರತಿಯೊಂದು ತಾಮಸಕಾರ್ಯಕ್ಕೂ ಅನ್ವಯಿಸುವುದು. ವಿಧ್ಯುಕ್ತರೀತಿಯಲ್ಲಿ ಮಂತ್ರಪಠನಮಾಡದೆ, ವಿಧ್ಯುಕ್ತರೀತಿಯಲ್ಲಿ ದಕ್ಷಿಣಾದಿಗಳನ್ನು ಕೊಡದೆ, ಸ್ವಾತ್ವಿಕ ಶ್ರದ್ಧಾದಿಂದ ರಹಿತವಾದ ಯಜ್ಞವು ತಮೋಯೋಗ್ಯಸ್ವಭಾವವುಳ್ಳವರು ಮಾಡುವುದು. ಜರಾಸಂಧನ ಮನಸ್ಸಿನಲ್ಲಿ ಸಂಕಲ್ಪಿತವಾದ ನರಮೇಧಯಜ್ಞವೂ, ದುರ್ಯೋಧನನ ಪೌಂಡರೀಕಯಾಗವೂ ಎಷ್ಟು ಗುಣಗಳಿಂದ ಯುಕ್ತವಾಗಿದ್ದರೂ, ವಿಷ್ಣುಭಕ್ತ್ಯಾದಿ ವಿಧ್ಯುಕ್ತಧರ್ಮಗಳಿಂದ ರಹಿತವಾಗಿ, ಪಾಂಡವದ್ವೇಷಾದಿ ದುರುದ್ದೇಶದಿಂದ ಊರ್ಜಿತವಾದುದರಿಂದ ತಾಮಸವೆಂದೇ ನಿಶ್ಚಯಿಸಬೇಕು.

ಮೂಢ ಗ್ರಾಹೇಣಾತ್ಮನೋಯತ್ಪೀಡಯಾ ಕ್ರಿಯತೇತಪಃ |

...ಂ ||

(17. 14-19.)



C. B. I & PHOTO FRAMING WORKS,
CAR-STREET, UDIPI.

...ಾಗಿ)* ಅವ
...ರಿಸ್ಮರಣಪೂ
... ಉತ್ತಮ
...ಹಿಂಸೆಯು,
...ಗಕರವಲ್ಲದ,
... ಸಜ್ಜನರಿಗೆ
... ಮಾತುಗಳ
...ನ್ನ ಮಾಡು
...ನ್ನ ವಿಷಯ
..., ಪರಮಾ
...ಕಾಮರಾಹಿ
... ಸಾತ್ವಿಕಾದಿ
...ಂಕ್ಷೆಯಿಂದ
...ಕಾರಿಗಳಿಂದ
...ಸಿ ಸಾತ್ವಿಕ
...ಸಾತ್ವಿಕಗುಣ
...ವುದಕ್ಕೋ
... ಬೇಗ ಕ್ಷೀ
...ವು ಮನು

...ಕ್ತಿಯೋಗ್ಯರು
...ರ್ಣೀಶೋ "
...ವತದರ್ಥೀ
...ವು ಸಾತ್ವಿಕವು
...ನಃ " ಎಂದು
... ಇಲ್ಲಿ ಯಜ್ಞ
ಶಬ್ದಾರ್ಥವು ವಿಷ್ಣುವೆಂದು ಹೇಳಿರುತ್ತಾರೆ.

ಷ್ಯರ ಸ್ವಭಾವಾನುಗುಣವಾದುದು, ರಾಜಸಗುಣಕಾರ್ಯವು.) ಅವಿವೇಕ ಸಹಿತ ದುರಾಗ್ರಹದಿಂದ, ತನಗೂ ಬಹು ಹಿಂಸಾಪ್ರದವಾಗಿ, ಶತ್ರುವಿನ ನಾಶವನ್ನು ಬಯಸಿ ಆಚರಿಸಲ್ಪಡುವ ತಪಸ್ಸು ತಾಮಸವು (ತಮೋಯೋಗ್ಯಸ್ವಭಾವಾನುಗುಣ ವಾದುದು, ತಾಮಸಗುಣಕಾರ್ಯವು.)

ಶ್ರೀಕೃಷ್ಣನು ಸಾತ್ವಿಕಾದಿ ತ್ರಿವಿಧಜೀವರುಗಳ ದಾನವೈಲಕ್ಷಣ್ಯವನ್ನೂ ನಿರೂಪಿಸುತ್ತಾನೆ.—

(7) **ದಾತವ್ಯಮಿತಿಯದ್ದಾನಂ ದೀಯತೇಽನುಪಕಾರಿಣೇ ।**
ದೇಶೇಕಾಲೇಚಪಾತ್ರೇಚತದ್ದಾನಂಸಾತ್ವಿಕಂಸ್ಮೃತಂ ॥
ಯತ್ತುಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯವಾಪುನಃ ।
ದೀಯತೇಚಪರಿಕ್ಲಿಷ್ಟಂತದ್ದಾನಂ ರಾಜಸಂಸ್ಮೃತಂ ॥
ಅದೇಶಕಾಲೇಯದ್ದಾನಮಪಾತ್ರೇಭ್ಯಶ್ಚದೀಯತೇ ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಂ ॥

—(17. 20-22)

ಅವಶ್ಯವಾಗಿ ಕೊಡಬೇಕೆಂಬ ಆಸ್ತಿಕ್ಯಬುದ್ಧಿಯಿಂದ, ಪಾತ್ರನಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸದೇ, ವಿದ್ಯುಕ್ತ ದೇಶಕಾಲಗಳಲ್ಲಿ ಸತ್ಪಾತ್ರನಿಗೆ ಕೊಡಲ್ಪಟ್ಟ ನ್ಯಾಯಾರ್ಜಿತ ದ್ರವ್ಯದಾನವು ಸಾತ್ವಿಕವೆನ್ನಿಸುವುದು. (ಮುಕ್ತಿ ಯೋಗ್ಯ ಸ್ವಭಾವಾನುಗುಣವಾದುದು ; ಸಾತ್ವಿಕ ಗುಣಕಾರ್ಯವು.) ಯಾವುದು ಪ್ರತ್ಯುಪಕಾರವನ್ನು ನಿರೀಕ್ಷಣೆ ಮಾಡಿ, ಅಥವಾ ಸ್ವರ್ಗಾದಿ ಫಲಗಳನ್ನು ಅಪೇ ಕ್ಷಿಸಿ ಮಾಡಿದ, ಅನ್ಯಾಯಾರ್ಜಿತವಾದ ದ್ರವ್ಯದ ತ್ಯಾಗವೋ ಅದು ರಾಜಸವೆನ್ನಿ ಸುವುದು. ಅಶುಚಿ ದೇಶದಲ್ಲಿಯೂ, ನಿಷಿದ್ಧ ಕಾಲದಲ್ಲಿಯೂ, ಅಪಾತ್ರರಿಗೆ ಕೊಡಲ್ಪಟ್ಟ ದಾನವು ಮತ್ತು ನಮಸ್ಕಾರಾದಿ ಸತ್ಕಾರ ರಹಿತವಾಗಿ ಅವಮಾನಪೂರ್ವಕವಾಗಿ ಮಾಡಿದ ದ್ರವ್ಯತ್ಯಾಗವು ತಾಮಸವು (ತಮೋಯೋಗ್ಯ ಸ್ವಭಾವಾನುಗುಣವಾ ದುದು, ತಾಮಸಗುಣಕಾರ್ಯವು.)

ಮುಕ್ತಿಯೋಗ್ಯರ ಮತ್ತು ತಮೋಯೋಗ್ಯರ ಪ್ರಬಲವಾದ ಧರ್ಮವೈಲ ಕ್ಷಣ್ಯವನ್ನು ಶ್ರೀಕೃಷ್ಣನು ಸಂಗ್ರಹವಾಗಿ ಹದಿನೇಳನೆಯ ಅಧ್ಯಾಯದ ಅಂತ್ಯ ಶ್ಲೋಕಗಳಲ್ಲಿ ನಿರೂಪಿಸಿರುತ್ತಾನೆ.—

(೮) **ಓಂ ತತ್ಸದಿತಿನಿರ್ದೇಶೋ ಬ್ರಹ್ಮಣಸ್ತ್ರಿವಿಧಃಸ್ಮೃತಃ ।**
ಬ್ರಾಹ್ಮಣಾಸ್ತೇನವೇದಾಶ್ಚಯಜ್ಞಾಶ್ಚವಿಹಿತಾಃ ಪುರಾ ॥

ತಸ್ಮಾದೋಮಿತ್ಯುದಾಹೃತ್ಯಯಜ್ಞದಾನ ತಪಃಕ್ರಿಯಾಃ ।
ಪ್ರವರ್ತಂತೇ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಂ ।
ತದಿತ್ಯನಭಿಸಂಧಾಯಫಲಂ ಯಜ್ಞತಪಃ ಕ್ರಿಯಾಃ ।
ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ ।
ಯಜ್ಞೇತಪಸಿದಾನೇಚಸ್ಥಿತಿಃ ಸದಿತಿಚೋಚ್ಯತೇ ।
ಕರ್ಮಚೈವತದರ್ಥೀಯಂ ಸದಿತ್ಯೇವಾಭಿಧೀಯತೇ ॥
ಅಶ್ರದ್ಧಯಾಹುತಂದತ್ತಂ ತಪಸ್ತಪ್ತಂ ಕೃತಂಚಯತ್ ।
ಅಸದಿತ್ಯುಚ್ಯತೇ ಪಾರ್ಥನಚತತ್ಪ್ರೇತ್ಯನೋ ಇಹ ॥

—(17. 23-28.)

ಪರಬ್ರಹ್ಮನಿಗೆ **ಓಂ** † ಎಂತಲೂ, **ತತ್** ‡ ಎಂತಲೂ, **ಸತ್** § ಎಂತಲೂ ಮೂರು ಹೆಸರುಗಳುಂಟು. ಅಂಥಾ ಪರಬ್ರಹ್ಮನಿಂದ ಬ್ರಾಹ್ಮಣರೂ, ವೇದಗಳೂ, ಯಜ್ಞಗಳೂ ಸೃಷ್ಟಿಕಾಲದಲ್ಲಿ ಸೃಷ್ಟಿಸಲ್ಪಟ್ಟವು. * ಆದುದರಿಂದ ಓಂ ಎಂದು ಭಗವನ್ನಾಮದ ಉಚ್ಚಾರಪೂರ್ವಕವಾಗಿಯೇ ಬ್ರಹ್ಮವಾದಿಗಳ ಸರ್ವ ಯಜ್ಞಾದಿ ವಿಧ್ಯುಕ್ತಕ್ರಿಯೆಗಳೂ ನಡೆಯಲ್ಪಡುವುವು. (ಇದರಿಂದ ಓಂಕಾರಾರ್ಥ ಜ್ಞಾನದಿಂದ ಸಹಿತವಾದ ಭಗವಂತನ ನಾಮೋಚ್ಚಾರಣಪೂರ್ವಕವಾಗಿ ಮಾಡಿದ ವಿಧ್ಯುಕ್ತ ಕರ್ಮಾದ್ಯನುಷ್ಠಾನವು ಸಾತ್ವಿಕವು ಎಂದರೆ ಮುಕ್ತಿಯೋಗ್ಯರ ಆಚರಣೆಯು ಎಂದು ಸಿದ್ಧವಾಗುವುದು.) ವೇದೈಕಗಮ್ಯನಾದ ಪರಬ್ರಹ್ಮನು ನನಗೆ ಆಶ್ರಯದಾತನಾಗಲೀ ಎಂದು ಇತರ ಫಲಾಪೇಕ್ಷೆರಹಿತವಾಗಿ, **ತತ್** ಎಂದು ಭಗವನ್ನಾಮೋಚ್ಚಾರಣ ಪೂರ್ವಕವಾಗಿ ತಪಸ್ಸು, ದಾನವೇ ಮೊದಲಾದ ನಾನಾ ಕ್ರಿಯೆಗಳು ಮೋಕ್ಷಕಾಂಕ್ಷಿಗಳಾದ ಮುಕ್ತಿಯೋಗ್ಯರಿಂದ ಆಚರಿಸಲ್ಪಡುವುವು. (ಮುಖ್ಯವಾಗಿ) ಯಜ್ಞದ ವಿಷಯದಲ್ಲಾಗಲೀ, ತಪೋವಿಷಯದಲ್ಲಾಗಲೀ, ದಾನವಿಷಯದಲ್ಲಾಗಲೀ **ಭಗವನ್ನಿಷ್ಠತೆಯು** (ಎಂದರೆ, ಭಗವಂತನೇ ಸ್ವತಂತ್ರಪ್ರೇರಕನು ಭಗವಂತನೇ ಫಲದಾತೃವು ಎಂಬ ನಿಶ್ಚಯವು) ಮತ್ತು ಭಗವತ್ಪ್ರೀತ್ಯರ್ಥವಾಗಿ ಮಾಡಿದ ಕರ್ಮವೂ ಸಹ ಸಚ್ಛಬ್ದವಾಚ್ಯವಾ

---

† **ಓಂ** ಎಂದರೆ ಸರ್ವ ಜಗದಾಧಾರನು ಎಂದರ್ಥವು; ಅಥವಾ ಸರ್ವ ಜಗತ್ತಿನಲ್ಲೂ ಅಂತರ್ಯಾಮಿತನದಿಂದೆ ಪ್ರವಿಷ್ಟನಾದವನು ಅಥವಾ ಸರ್ವ ರಕ್ಷಕನು ಎಂದರ್ಥವಾಗುವುದು.

‡ **ತತ್** ಎಂದರೆ ಗುಣಭರಿತನಾದವನು ಎಂದು ಅಥವಾ ಪರೋಕ್ಷನು ಎಂದರೆ ವೇದೈಕಗಮ್ಯನು ಎಂದಾಗಲೀ ಅರ್ಥವಾಗುವುದು.

§ **ಸತ್** ಎಂದರೆ ನಿರ್ದೋಷ ಸರ್ವ ಶುಭಗುಣ ಪೂರ್ಣನು ಎಂದರ್ಥವು.

* ವೇದಗಳಿಗೆ **ಅಭಿವ್ಯಕ್ತಿಯೇ** ಸೃಷ್ಟಿಯು.

ದುದು. ಭಗವಂತನಲ್ಲಿ ಶ್ರದ್ಧೆಯಿಲ್ಲದೆ ಮಾಡಿದ ಹೋಮವು, ದಾನವು, ತಪಸ್ಸು, ಕರ್ಮವು ಇವುಗಳೂ ಕೂಡ 'ಅಸತ್' ಎಂದರೆ ತಮೋಯೋಗ್ಯ ಸಂಬಂಧಿ ಧರ್ಮವೆನ್ನಿಸುವುದು. ಎಲೈ ಪಾರ್ಥನೇ! ಅಂಥಾ ಕರ್ಮವು ಇಹಲೋಕದಲ್ಲಿ ಯಾಗಲೀ ಪರಲೋಕದಲ್ಲಾಗಲೀ ಕಲ್ಯಾಣಪ್ರದವಾಗುವುದಿಲ್ಲ.

ಇನ್ನು ಮೇಲೆ ಶ್ರೀಕೃಷ್ಣನು ಮುಕ್ತಿಯೋಗ್ಯ, ನಿತ್ಯಸಂಸಾರಿ, ತಮೋ ಯೋಗ್ಯರ ಸ್ವಾಭಾವಿಕವಾದ ತ್ಯಾಗ, ಸನ್ಯಾಸ, ಜ್ಞಾನ, ಕರ್ಮ, ಬುದ್ಧಿ, ಧೃತಿ, ಸುಖ ಇವುಗಳ ಪ್ರಭೇದವನ್ನು ನಿರೂಪಿಸುತ್ತಾನೆ. ಯದ್ಯಪಿ ಈ ಧರ್ಮಗಳೆಲ್ಲಾ ಸತ್ವರಜಸ್ತಮೋಗುಣಗಳ ಸಂಗದಿಂದ ಜೀವರುಗಳಿಗೆ ಬಂದೊದ ಗುವುವು. ಆದರೆ ಸೂಕ್ಷ್ಮವಾಗಿ ವಿಚಾರಮಾಡಿದರೆ ಈ ಗುಣಸಂಗದ ವೈಚಿತ್ರ್ಯ ಕ್ಕೂ, ಅದರಿಂದ ಉತ್ಪನ್ನವಾದ ಕರ್ಮಾದಿಗಳ ವೈಚಿತ್ರ್ಯಕ್ಕೂ ಜೀವರುಗಳ ಸ್ವಭಾವವೈಚಿತ್ರ್ಯವೇ ಪ್ರಧಾನಕಾರಣವಾದುದರಿಂದ ಈ ಪ್ರಕರಣದಲ್ಲಿ ಸಾತ್ವಿಕ ವೆಂದರೆ ಮುಕ್ತಿಯೋಗ್ಯಸಂಬಂಧವಾದ ಧರ್ಮವೆಂದೂ, ರಾಜಸವೆಂದರೆ ನಿತ್ಯ ಬದ್ಧರಾದ ಮನುಷ್ಯರ ಸಂಬಂಧಿ ಆಚರಣೆಯೆಂದೂ, ತಾಮಸವೆಂದರೆ ತಮೋ ಯೋಗ್ಯಸಂಬಂಧಿ ಅನುಷ್ಠಾನಗಳೆಂದೂ ಹೇಳುವುದು ಉಚಿತವೇ. ಶ್ರೀಕೃಷ್ಣನ ಈ ಪ್ರಮೇಯವನ್ನು ಉಪಸಂಹಾರಮಾಡುವ ಎರಡರ್ಥವುಳ್ಳ ಶ್ಲೋಕವೇ ತ್ಯಾಗಾದಿಗಳ ತ್ರೈವಿಧ್ಯವು ಕೇವಲ ಗುಣನಿಮಿತ್ತವಲ್ಲ, ಮತ್ತೇನೆಂದರೆ ಸ್ವಭಾವ ಸಿದ್ಧವಾದ ಸಾತ್ವಿಕಾದಿ ಜೀವಭೇದ ಪ್ರಯುಕ್ತವೆಂದು ಸೂಚಿಸುವುದು.

(9) **ನತದಸ್ತಿ ಪೃಥಿವ್ಯಾಂ ವಾ ದಿವಿದೇವೇಷು ವಾಪುನಃ ।**
ಸತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃಸ್ಯಾತ್ತ್ರಿಭಿರ್ಗುಣೈಃ ॥

(18. 40.)

ಅರ್ಜುನ! ಭೂಲೋಕದಲ್ಲಿ, ಅಥವಾ ದೇವಲೋಕದಲ್ಲಿ ದೇವತೆಗಳಲ್ಲಿಯೂ ಸಹ ಪ್ರಕೃತಿಜೈಃ= **ಜೀವಸ್ವಭಾವಾನುಸಾರಿಯಾದ** ಅಥವಾ ಜಡಪ್ರಕೃ ತಿಯಿಂದ ಉತ್ಪನ್ನವಾದ, **ಏಭಿಃ ತ್ರಿಭಿರ್ಗುಣೈಃ= ಈ ಪ್ರಸಿದ್ಧವಾದ ಜೀವ ಸ್ವಾಭಾವಿಕ** ಧರ್ಮತ್ರಯಗಳಿಂದ ಅಥವಾ ಜಡವಾದ ಗುಣತ್ರಯಗ ಳಿಂದ, ಮುಕ್ತಂ ಸತ್ವಂನಾಸ್ತಿ= ರಹಿತನಾದ ಜೀವನು ಇಲ್ಲ, ಅಥವಾ ಬದ್ಧನಲ್ಲದ ಪ್ರಾಣಿಯಿಲ್ಲ.†

---

†ಪ್ರಪಂಚದಲ್ಲಿ ಸರ್ವತ್ರ ಪೂರ್ವೋಕ್ತ ಮೂರುವಿಧದಲ್ಲಿ ಯಾವುದಾದರೂ ಒಂದು ಸ್ವಾಭಾ ವಿಕಗುಣದಿಂದ ಸಹಿತನಾಗದ ಜೀವಸ್ವರೂಪವು ಇರುವುದಿಲ್ಲ ಎಂದು ಸಂದರ್ಭವು. ಪ್ರಪಂಚದಲ್ಲಿ

ಇನ್ನು ಸಾತ್ವಿಕಾದಿ ಜೀವಸ್ವಭಾವಾನುಗುಣವಾದ ತ್ಯಾಗಾದಿಗಳ ತ್ರೈವಿಧ್ಯವನ್ನು ಶ್ರೀ ಕೃಷ್ಣನು ನಿರೂಪಿಸುತ್ತಾನೆ:—

(10) **ತ್ಯಾಗೋ ಹಿ ಪುರುಷವ್ಯಾಘ್ರತ್ರಿವಿಧಃ ಸಂಪ್ರಕೀರ್ತಿತಃ ।**
ನಿಯತಸ್ಯತುಸಂನ್ಯಾಸಃ ಕರ್ಮಣೋನೋಪಪದ್ಯತೇ ।
ಮೋಹಾತ್ತಸ್ಯಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥
ದುಃಖಮಿತ್ಯೇವಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।
ಸ ಕೃತ್ವಾರಾಜಸಂತ್ಯಾಗಂನೈವತ್ಯಾಗಫಲಂಲಭೇತ್ ।
ಕಾರ್ಯಮಿತ್ಯೇವಯತ್ಕರ್ಮನಿಯತಂ ಕುರುತೇಽರ್ಜುನ ।
ಸಂಗಂತ್ಯಕ್ತ್ವಾಫಲಂಚೈವ ಸತ್ಯಾಗಃಸಾತ್ವಿಕೋಮತಃ ॥

(18.4-9.)

ಎಲೈ ಪುರುಷಶ್ರೇಷ್ಠನೇ ! ತ್ಯಾಗವು ಸಾತ್ವಿಕ, ರಾಜಸ, ತಾಮಸವೆಂದು, ಮೂರುಪ್ರಕಾರವೆಂದು ಹೇಳಲ್ಪಟ್ಟಿರುತ್ತದೆ. ವರ್ಣಾಶ್ರಮೋಚಿತವಾದ ಕರ್ಮಗಳ ಪರಿತ್ಯಾಗವು ಯುಕ್ತವಲ್ಲ. ಮಿಥ್ಯಾಜ್ಞಾನದಿಂದ ವಿಧ್ಯುಕ್ತ ವರ್ಣಾಶ್ರಮಧರ್ಮಗಳ ಪರಿತ್ಯಾಗವು ತಾಮಸವು (ತಮೋಯೋಗ್ಯರ ಸ್ವಭಾವಾನುಗುಣವಾದುದು ; ತಮೋಗುಣಕಾರ್ಯವು ;) ಎನ್ನಿಸಲ್ಪಡುವುದು. ಕರ್ಮಮಾಡುವುದು ದುಃಖಸಾಧನವೆಂದು ದೇಹಾಯಾಸ ಭಯದಿಂದ ಕರ್ಮಗಳನ್ನು ಪರಿತ್ಯಾಗ ಮಾಡುವುದು ರಾಜಸತ್ಯಾಗವೆನ್ನಿಸುವುದು. ಈ ಭಾವದಿಂದ ಕರ್ಮಪರಿತ್ಯಾಗ ಮಾಡಿದವನು ಭಗವತ್ಪ್ರೀತಿರೂಪವಾದ ತ್ಯಾಗಫಲವನ್ನು ಹೊಂದಲಾರನು. ವರ್ಣಾಶ್ರಮೋಚಿತವಾದ ಕರ್ಮವು ಅವಶ್ಯವಾಗಿ ಮಾಡಲ್ಪಡತಕ್ಕದ್ದು, (ಅದು ಈಶ್ವರ

ಜೀವರುಗಳು ಮುಕ್ತಿಯೋಗ್ಯರೋ, ನಿತ್ಯಸಂಸಾರಿಗಳೋ, ತಮೋಯೋಗ್ಯರೋ ಆಗಿರುವರು ಎಂದರ್ಥವು. ಪ್ರಪಂಚದಲ್ಲಿ ಜಡಪ್ರಕೃತಿಯಿಂದ ಉತ್ಪನ್ನವಾದ ಗುಣತ್ರಯಗಳಿಂದ ಬದ್ಧರಾಗದ ಪ್ರಾಣಿಯು ಇರುವುದಿಲ್ಲ ಎಂದು ಎರಡನೆಯ ಅರ್ಥವು. "ಸತ್ವಾನುರೂಪಾಸರ್ವಸ್ಯ ಶ್ರದ್ಧಾಭವತಿ ಭಾರತ | ಶ್ರದ್ಧಾಮಯೋಯಂ ಪುರುಷೋಯೋ ಯಚ್ಛ್ರದ್ಧಸ್ಸಯೇವಸಃ ||" "ಪ್ರಕೃತ್ಯಾನಿಯತಾಃ ಸ್ವಯಾ" "ಸದೃಶಂಚೇಷ್ಟತೇಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ" ಇತ್ಯಾದಿ ಶ್ಲೋಕಗಳೂ, "ಸತ್ವಂ ಜೀವಃ ಕ್ವಚಿತ್ಪ್ರೋಕ್ತಃ" ಇತ್ಯಾದಿ ಬಹುಪ್ರಮಾಣಗಳೂ ಮೊದಲನೆಯ ಅರ್ಥಕ್ಕೆ ಸಾಧಕವಾಗಿರುತ್ತವೆ. "ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ | ನಿಬಧ್ನಂತಿ" ಇತ್ಯಾದಿಗಳು ಪ್ರಥಮಾರ್ಥಕ್ಕೆ ಅವಿರುದ್ಧವಾಗಿ ದ್ವಿತೀಯಾರ್ಥಕ್ಕೆ ಸಾಧಕವಾಗಿರುತ್ತವೆ. ಮತ್ತು ತ್ರಿವಿಧ ಜೀವರು ಇಲ್ಲ ; ಸರ್ವರೂ ನನ್ನನ್ನು ಹೊಂದುತ್ತಾರೆ ; ಎಂದು ಶ್ರೀಕೃಷ್ಣನು ಎಲ್ಲಿಯೂ ಹೇಳಿಲ್ಲ.

ಪ್ರೀತಿಸಾಧನವು) ಎಂದು ತಿಳಿದು ವಿಧ್ಯುಕ್ತ ಕರ್ಮವನ್ನು ಅಹಂತಾಮಮತೆಗ ಳಿಂದ ಮತ್ತೂ ಫಲಾಪೇಕ್ಷೆಯಿಂದ ರಹಿತವಾಗಿ ಮಾಡುವುದು ಸಾತ್ವಿಕತ್ಯಾಗ ವೆನ್ನಿಸುವದು (ಮುಕ್ತಿಯೋಗ್ಯರ ಸ್ವಭಾವಾನುಗುಣವಾದುದು; ಸಾತ್ವಿಕಗುಣ ಕಾರ್ಯವು.)

ಸಾತ್ವಿಕಾದಿ ಜೀವರುಗಳ ಜ್ಞಾನತ್ರೈವಿಧ್ಯವನ್ನು ಶ್ರೀಕೃಷ್ಣನು ಹೀಗೆ ಹೇಳಿರುತ್ತಾನೆ:—

(11) **ಸರ್ವಭೂತೇಷುಯೇನೈಕಂ ಭಾವಮವ್ಯಯಮೀಕ್ಷತೇ ।**
ಅವಿಭಕ್ತಂವಿಭಕ್ತೇಷುತದ್ಜ್ಞಾನಂ ವಿದ್ಧಿಸಾತ್ವಿಕಂ ॥
ಪೃಥಕ್ತ್ವೇನತುಯಜ್ಜ್ಞಾನಂ ನಾನಾಭಾವಾನ್ಪೃಥಗ್ವಿಧಾನ್ ।
ವೇತ್ತಿಸರ್ವೇಷುಭೂತೇಷು ತದ್ಜ್ಞಾನಂವಿದ್ಧಿರಾಜಸಂ ॥
ಯತ್ತುಕೃತ್ಸ್ನವದೇಕಸ್ಮಿನ್ಕಾರ್ಯೇಸಕ್ತಮಹೈತುಕಂ ।
ಅತತ್ವಾರ್ಥವದಲ್ಪಂಚತತ್ತಾಮಸಮುದಾಹೃತಂ ॥

(18 20-22.)

ವಿಭಕ್ತೇಷು= ಎಂದರೆ ಪರಸ್ಪರ ಭಿನ್ನರಾದ ಮತ್ತು ತಾರತಮ್ಯೋಪೇತ ರಾದ ಜೀವಜಡಾತ್ಮಕ **ಸರ್ವಪದಾರ್ಥಗಳಲ್ಲಿಯೂ** ಇರುವ ಭಾವಂ= ನಿತ್ಯನಾದ ಬ್ರಹ್ಮನು ಅವಿಭಕ್ತಂ= ಎಂದರೆ ಅಧಿಷ್ಠಾನಭೇದನಿಮಿತ್ತವಾಗಿ ಸ್ವಗತ ಭೇದವನ್ನು ಹೊಂದದೆ ಇರುವವನು, (ಸರ್ವತ್ರ ಬ್ರಹ್ಮನು ನಿರ್ದೋಷಗುಣಪೂ ರ್ಣನು) ಮತ್ತು ಅವ್ಯಯನು ಎಂದರೆ ಅಧಿಷ್ಠಾನವು ನಾಶಹೊಂದಿದರೂ ತಾನು ನಾಶಹೊಂದತಕ್ಕವನಲ್ಲ ಎಂದು ಯಾವ ಜ್ಞಾನವು ತಿಳಿಯುತ್ತದೆಯೋ (ವಿಷಯೀ ಕರಿಸುತ್ತದೆಯೋ) ಅದು ಸಾತ್ವಿಕವು (ಮೋಕ್ಷಯೋಗ್ಯಸ್ವಭಾನುಗುಣವಾ ದುದು; ಸಾತ್ವಿಕಗುಣಕಾರ್ಯವು). ವಿಭಿನ್ನವಾದ, ತಾರತಮ್ಯೋಪೇತವಾದ, ಅನೇಕ ಅಧಿಷ್ಠಾನಗಳಲ್ಲಿರುವ ಪರಮಾತ್ಮನು ಸರ್ವತ್ರ ನಿರ್ದೋಷಗುಣಪೂರ್ಣನಾಗಿ ಸಮ ನಾಗಿರುವನು ಎಂದು ಫಲಿತಾರ್ಥವು. ಯಾವ ಜ್ಞಾನವು ಸರ್ವಜೀವ ಜಡಪದಾ ರ್ಥಗಳನ್ನು ಪರಸ್ಪರವಾಗಿ ಭಿನ್ನವೆಂದು ತಿಳಿಯುವುದೋ ಮತ್ತು ಪರಮಾತ್ಮ ನನ್ನು ಸರಿಯಾಗಿ ತಿಳಿಯುವುದಿಲ್ಲವೋ (ಯಥಾರ್ಥವಾಗಿ ಲೌಕಿಕ ವಿಷಯಗಳನ್ನು ಮಾತ್ರ ವಿಷಯೀಕರಿಸಿ, ಪ್ರಧಾನತತ್ವವಾದ ಪರಬ್ರಹ್ಮನ ವಿಷಯದಲ್ಲಿ ಸಂದಿಗ್ಧ ವಾಗಿದೆಯೋ) ಅದು ರಾಜಸಜ್ಞಾನವೆನ್ನಿಸುವುದು. ಒಬ್ಬ ಜೀವನ ವಿಷಯದಲ್ಲಿ ಪರಿಪೂರ್ಣನಾದ ಬ್ರಹ್ಮನೆಂದು ತಿಳಿಯುವ, ಅಥವಾ ಒಬ್ಬ ಜೀವನೇ ಸಂಪೂರ್ಣ

ಜಗದಾತ್ಮಕನು (ಎಂದರೆ ಒಂದೇ ಚೈತನ್ಯವು ಇರುವುದು, ಆಚೈತನ್ಯಾತ್ಮಕವೇ ಸರ್ವ ಜಗತ್ತೂ ಆಗಿರುವುದು) ಎಂದು ತಿಳಿಯುವ, ಅಥವಾ ಒಬ್ಬ ಜೀವನೇ ಈ ಪೂರ್ಣಜಗದಾತ್ಮಕನು, ಎಂದರೆ ಈ ಯಾವತ್ತೂ ಜಗತ್ತು ಏಕಜೀವನಿಂದ ಸಹಿತ ವಾದುದು ಎಂದು ತಿಳಿಯುವ, ಯುಕ್ತಿಶೂನ್ಯವಾದ, ಅಸತ್ಯವಿಷಯುಕವಾದ ಜ್ಞಾನವು ತಾಮಸವು (ತಮೋ ಯೋಗ್ಯಸ್ವಭಾವಾನುಗುಣವಾದುದು; ತಾಮಸಗುಣಕಾರ್ಯವು.)

ಇಲ್ಲಿ ಉದಾಹೃತವಾದ ಇಪ್ಪತ್ತನೆಯ ಶ್ಲೋಕದಲ್ಲಿ ಸರ್ವತ್ರ ಇರುವ ಪರಮಾತ್ಮನು ಅಭಿನ್ನನು ಎಂದು ತಿಳಿಯುವ ಜ್ಞಾನವು ಸಾತ್ವಿಕವು ಎಂದು ನಮ್ಮಿಂದ ನಿರೂಪಿತವಾಯಿತು. ಈ ಅರ್ಥದಲ್ಲಿ 1. **ಸಮಂಪಶ್ಯನ್ಹಿಸರ್ವತ್ರಸಮವಸ್ಥಿತಮೀಶ್ವರಂ** 2. **ಸಮಂಹಿಸರ್ವಭೂತೇಷುತಿಷ್ಠಂತಂ ಪರಮೇಶ್ವರಂ** 3. **ಅವಿಭಕ್ತಂವಿಭಕ್ತೇಷು ವಿಭಕ್ತಮಿವಚಸ್ಥಿತಂ"** ಇತ್ಯಾದಿ ಅನೇಕ ಗೀತಾವಾಕ್ಯಗಳು ಸಮಾಖ್ಯಾರೂಪವಾಗಿರುವುವು. ಮತ್ತು ಈ ಮೂಲಶ್ಲೋಕವೇ ನಿರವಕಾಶವಾಗಿ "ವಿಭಕ್ತವಾದ ಸರ್ವಭೂತಗಳಲ್ಲಿ ಅವಿಭಕ್ತವಾದ ಒಂದು ವಸ್ತುವನ್ನು ತಿಳಿಯುವ ಜ್ಞಾನವು ಸಾತ್ವಿಕವು" ಎಂದು ಸ್ಪಷ್ಟವಾಗಿ ಹೇಳುತ್ತದೆ. ಆದುದರಿಂದ ಇದರಿಂದ ಜೀವಬ್ರಹ್ಮರ ಭೇದಜ್ಞಾನವೇ ಸಾತ್ವಿಕವೆಂದು ಸಿದ್ಧವಾಯಿತು.

ಆದರೆ ಇಲ್ಲಿ ಆಶ್ಚರ್ಯವೇನೆಂದರೆ, ಶಂಕರಾಚಾರ್ಯರು ಶ್ಲೋಕಾರ್ಥವನ್ನು ಪ್ರಾಯೇಣ ಹೀಗೆಯೇ ನಿರೂಪಿಸಿ, ಅದ್ವೈತಾತ್ಮಜ್ಞಾನವು ಸಾತ್ವಿಕವು ಎಂದು ಕೊನೆಯಲ್ಲಿ ಅತ್ಯಂತ ಅಸಂಗತವಾದ ಸ್ವಂತನಿಶ್ಚಯವನ್ನು ಬರೆದಿರುತ್ತಾರೆ. ಇದು ಅವರ ಮಾತು:—**ಸರ್ವಭೂತೇಷು ಅವ್ಯಕ್ತಾದಿಸ್ಥಾವರಾಂತೇಷು ಭೂತೇಷು, ಯೇನಜ್ಞಾನೇನ ಏಕಂಭಾವಂವಸ್ತು....ಅವ್ಯಯಂ ನವ್ಯೇತಿಸ್ವಾತ್ಮನಾ ಸ್ವಧರ್ಮೇಣವಾ, ಕೂಟಸ್ಥಂ ಇತ್ಯರ್ಥಃ ಈಕ್ಷತೇ ಪಶ್ಯತಿ ; ಯೇನಜ್ಞಾನೇನ, ತಂಚಭಾವಂ ಅವಿಭಕ್ತಂ ಪ್ರತಿದೇಹಂ, ವಿಭಕ್ತೇಷು ದೇಹಭೇದೇಷು ನ ವಿಭಕ್ತಂ....(ಪಶ್ಯತಿ) ತತ್ ಅದ್ವೈತಾತ್ಮವಿಷಯಂ ಸಾತ್ವಿಕಂವಿದ್ಧಿ.**

ಅರ್ಥವು—"ಅವ್ಯಕ್ತತತ್ವವು ಮೊದಲುಗೊಂಡು ಸ್ಥಾವರಾಂತವಾದ ಸಕಲ **ಭೂತಗಳಲ್ಲಿಯೂ** ಯಾವ ಜ್ಞಾನವು, ತನ್ನ ಸ್ವರೂಪದಿಂದಲಾಗಲೀ, ಸ್ವಧರ್ಮದಿಂದಲಾಗಲೀ ನಾಶಹೊಂದದ ನಿರ್ವಿಕಾರವಾದ **ಒಂದು ವಸ್ತು**

ವನ್ನು ತಿಳಿಯುತ್ತದೆಯೋ, ಮತ್ತು ಆ ವಸ್ತುವು ಪ್ರತಿದೇಹದಲ್ಲಿಯೂ ಭಿನ್ನವಾಗಿರದೇ, ಭಿನ್ನದೇಹಗಳಲ್ಲಿದ್ದರೂ ಭೇದರಹಿತವಾಗಿರುವುದೆಂದು ತಿಳಿಯುವುದೋ ಅಂಥಾ **ಅದ್ವೈತಾತ್ಮಾ**ವಗಾಹಿಯಾದ ಜ್ಞಾನವು ಸಾತ್ವಿಕವು."

ಈ ವ್ಯಾಖ್ಯಾನವು ಬಹು ದೋಷಗಳಿಂದ ಯುಕ್ತವಾಗಿರುವುದು. 1. ವಿಭಕ್ತವಾದ ಅನೇಕ ಭೂತಗಳಲ್ಲಿ ಪರಮಾತ್ಮನು ಅಭಿನ್ನನಾಗಿ ಇರುವನು ಎಂಬ ಜ್ಞಾನವು ಭೇದಜ್ಞಾನವೇ ಆಯಿತು. ಭೇದರಹಿತವಾದ ಅದ್ವೈತಾತ್ಮಜ್ಞಾನವಾಗಲಿಲ್ಲ. 2. ಮತ್ತು ಅದ್ವೈತಮತದ ರೀತ್ಯಾ ಈ ಅರ್ಥವು ಅತ್ಯಂತ ಅಸಂಗತವಾದುದು. ಅದ್ವೈತಾತ್ಮವಿಷಯಕವಾದ ಜ್ಞಾನದಲ್ಲಿ ಅವ್ಯಕ್ತಾದಿ ಸ್ಥಾವರಾಂತ ಭೂತಗಳು **ಒಂದೂ ಇಲ್ಲವೆಂದೇ** ತೋರುವುದು. ವಿಭಿನ್ನವಾದ ಭೂತಗಳಲ್ಲಿ ಆತ್ಮನು ಇರುವನೆಂದು ತೋರುವುದಿಲ್ಲ. **ತತ್ವಮಸ್ಯಾದಿವಾಕ್ಯೋತ್ಥಂ ಸಮ್ಯಗ್ಧೀಜನ್ಮಮಾತ್ರತಃ । ಅವಿದ್ಯಾಸಹಕಾರ್ಯೇಣನಾಸೀದಸ್ತಿಭವಿಷ್ಯತಿ ॥** ಎಂದು ಅದ್ವೈತಿಗಳು ಹೇಳಿರುತ್ತಾರೆ. ಇದರ ಅರ್ಥವು:—"ತತ್ವಮಸ್ಯಾದಿ ವಾಕ್ಯಗಳಿಂದ ಸಮೀಚೀನ (ಅದ್ವೈತಾತ್ಮವಿಷಯಕ) ಜ್ಞಾನವು ಉತ್ಪನ್ನವಾದ ಕ್ಷಣವೇ ಅವ್ಯಕ್ತಾದಿಸ್ಥಾವರಾಂತವಾದ ಕಾರ್ಯಗಳಿಂದ ಸಹಿತವಾದ ಅವಿದ್ಯೆಯು ಹಿಂದೂ ಇರುವುದಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ." ಸರ್ವವೂ ವಿಲೀನವಾಗಿ ಹೋಗುವುದೆಂದು ಅರ್ಥವು. ಕೇನೋಪನಿಷಚ್ಛಾಂಕರಭಾಷ್ಯದ **ಆನಂದಗಿರಿ ಟೀಕೆಯಲ್ಲಿ**ಯೂ ಹೀಗಿರುತ್ತದೆ:—"**ಲೋಕೇಶುಕ್ತ್ಯಾದಿತತ್ವಂ ವಿಜಾನತಾಂ ಯತೋಽಧ್ಯಸ್ತಂ ರೂಪ್ಯಾದ್ಯವಿಜ್ಞಾತಂ ಭವತಿ. ಅಜಾನತಾಮೇವತ್ವಧ್ಯಸ್ತಂ ವಿಜ್ಞಾತಂ ಭವತೀತಿಪ್ರಸಿದ್ಧಂ. ತಥಾಬ್ರಹ್ಮಣಿಜ್ಞೇಯತ್ವಸ್ಯಾಧ್ಯಸ್ತತ್ವಾದೇವತತ್ವವಿದೋನಜ್ಞಾತಂ ಬ್ರಹ್ಮಪಶ್ಯಂತಿ.** P. 17.

ಇದರ ಅರ್ಥವು—"ಲೋಕದಲ್ಲಿ ಶುಕ್ತಿರಜತಭ್ರಮದಲ್ಲಿ ಅಧಿಷ್ಠಾನವಾದ ಶುಕ್ತಿಯನ್ನು (ಶುಕ್ತಿತ್ವೇನ) ತಿಳಿದವನಿಗೆ ಆರೋಪಿತವಾದ ರಜತವು ತೋರುವುದಿಲ್ಲ. (ಶುಕ್ತಿತ್ವೇನ) ಶುಕ್ತಿಜ್ಞಾನವಿಲ್ಲದವನಿಗೆ ಆರೋಪಿತವಾದ ರೂಪ್ಯಜ್ಞಾನವು ಬರಬಹುದು. ಹೀಗೆ ಬ್ರಹ್ಮಜ್ಞಾನಿಗಳು ಬ್ರಹ್ಮನನ್ನು ಸರಿಯಾಗಿ ತಿಳಿದರೆ, ಅವರಿಗೆ ಆರೋಪಿತವಾದ ಜ್ಞೇಯತ್ವಾದಿ ಧರ್ಮಗಳು ತೋರುವುದೇ ಇಲ್ಲ."

ಹೀಗೆ ಅದ್ವೈತಮತದಲ್ಲಿ ಸಮೀಚೀನವಾದ ಅದ್ವೈತಾತ್ಮಜ್ಞಾನವು ಒಂದಾಗ ಸರ್ವಜ್ಞತ್ವ, ಸೃಷ್ಟಿಕರ್ತೃತ್ವ, ಜ್ಞೇಯತ್ವಾದಿ ಬ್ರಹ್ಮಧರ್ಮಗಳೇ ತೋರದೆ

ಹೋದಮೇಲೆ, ಅವ್ಯಕ್ತಾದಿಸ್ಥಾವರಾಂತವಾದ ಸಕಲ ಭೂತಗಳು ತೋರುವುದು ಸರ್ವಥಾ ಅಸಂಭಾವಿತವು. ಹೀಗಿರುವಲ್ಲಿ ಸರ್ವಭೂತಗಳಲ್ಲಿ ಅದ್ವೈತಾತ್ಮನನ್ನು ತಿಳಿಯುವುದು ಗಗನಾರವಿಂದದಲ್ಲಿ ಮಾಧುರ್ಯವನ್ನು ತಿಳಿಯುವುದು ಹೇಗೋ ಹಾಗೆಯೇ ಅತ್ಯಂತ ಅಸಂಭಾವಿತವು. ಅದ್ವೈತಮತದಲ್ಲಿ ಸರ್ವಭೂತಗಳೂ ಅದ್ವೈತಾತ್ಮನಲ್ಲಿ ಆರೋಪಿತವಾಗಿರುವುದರಿಂದ, ಅದ್ವೈತಾತ್ಮಜ್ಞಾನವಾದರೆ ಸರ್ವಭೂತಜ್ಞಾನವಾಗಲಾರದು. ಸರ್ವಭೂತಗಳ ಜ್ಞಾನವು ಬಂದರೆ ಅದ್ವೈತಾತ್ಮಜ್ಞಾನವು ಬರಲಾರದು. ಆದುದರಿಂದ ಅದ್ವೈತಾತ್ಮವಿಷಯಕವಾದ ಜ್ಞಾನವು ಸಾತ್ವಿಕವೆಂದು ಗೀತಾಶ್ಲೋಕವು ಹೇಳುತ್ತದೆ ಎಂಬ ಶಂಕರಾಚಾರ್ಯರ ನಿಶ್ಚಯವು ಅತ್ಯಂತ ಅಸಂಗತವಾದುದು.

2. ಶ್ರೀ ಕೃಷ್ಣನು ಸ್ಪಷ್ಟವಾಗಿ ಸರ್ವಭೂತಗಳಲ್ಲಿ ಒಂದು (ಆತ್ಮ)ವಸ್ತುವನ್ನು ತಿಳಿಯುವ ಜ್ಞಾನವು ಸಾತ್ವಿಕವೆಂದು ಹೇಳಿರುತ್ತಾನೆ. ಇದರಿಂದ ಭೂತಗಳಿಗೂ ಆತ್ಮನಿಗೂ ಭೇದವೇ ಪ್ರಾಪ್ತವಾಗುವುದರಿಂದ ಭೇದಜ್ಞಾನವೇ ಸಾತ್ವಿಕವೆಂದು ಶ್ರೀಕೃಷ್ಣನ ನಿಶ್ಚಯವಿರುತ್ತದೆ. "ಭೂತ" ಪದವು ಕೇವಲ ಜಡತತ್ವಗಳನ್ನು ನಿರೂಪಿಸುವುದಿಲ್ಲ,

1. **ದ್ವೌಭೂತಸರ್ಗೌಲೋಕೇಸ್ಮಿನ್** ।—(16. 6.)
ಪ್ರಾಣಿಗಳ ಸೃಷ್ಟಿಯು ಎರಡು ಪ್ರಕಾರವಾಗಿರುವುದು.

2. **ಕ್ಷರಃ ಸರ್ವಾಣಿಭೂತಾನಿ** ।—(15. 16.)
ಸರ್ವ ಪ್ರಾಣಿಗಳೂ ಕ್ಷರಪುರುಷರು.

3. **ಯತಃ ಪ್ರವೃತ್ತಿರ್ಭೂತಾನಾಂ** ।—(18.46.)
ಪ್ರಾಣಿಗಳಿಗೆ ಪರಮಾತ್ಮನಿಂದ ಪ್ರವೃತ್ತಿಯುಂಟಾಗುವುದು.

4. **ಸರ್ವಾಣಿಭೂತಾನಿ ನತ್ವಂ ಶೋಚಿತುಮರ್ಹಸಿ** ।—(2. 30.)
ಸರ್ವ ಪ್ರಾಣಿಗಳನ್ನೂ ಕುರಿತು ನೀನು ಶೋಕಪಡಬೇಡ.

5. **ಅಕೀರ್ತಿಂ ಚಾಪಿಭೂತಾನಿ ಕಥಯಿಷ್ಯಂತಿತೇಽವ್ಯಯಂ** ।
—(2. 34.)
ಪ್ರಾಣಿಗಳು ನಿನ್ನ ಶಾಶ್ವತವಾದ ಅಪಕೀರ್ತಿಯನ್ನು ಕಥನಮಾಡುತ್ತಾರೆ.

6. **ಯಾ ನಿಶಾಸರ್ವಭೂತಾನಾಂ ತಸ್ಯಾಂಜಾಗರ್ತಿಸಂಯಮೀ** ।
ಯಸ್ಯಾಂ ಜಾಗ್ರತಿಭೂತಾನಿ ಸಾನಿಶಾ ಪಶ್ಯತೋಮುನೇಃ ॥
—(2. 69.)

7. **ಅನ್ನಾದ್ಭವಂತಿ ಭೂತಾನಿ ।**—(3. 14.)

8. **ಪ್ರಕೃತಿಂಯಾಂತಿಭೂತಾನಿ ।**—(3. 33.)

9. **ಭೂತಾನಾ ಮೀಶ್ವರೋಪಿಸರ್ ।**—(4. 6.)

10. **ಸುಹೃದಂಸರ್ವಭೂತಾನಾಂ ಜ್ಞಾತ್ವಾಮಾಂಶಾಂತಿಮೃಚ್ಛತಿ ।**
—(5. 29.)

11. **ಸಮಃ ಸರ್ವೇಷುಭೂತೇಷು ಮದ್ಭಕ್ತಿಂಲಭತೇಪರಾಂ ।**
—(18. 54.)

12. **ಭವಂತಿಭಾವಾಭೂತಾನಾಂ ಮತ್ತ ಏವ ಪೃಥಗ್ವಿಧಾಃ ।**
—(10. 5.)

ಇತ್ಯಾದಿ ಬಹು ಸ್ಥಳಗಳಲ್ಲಿ "ಭೂತಂ" ಎಂದರೆ ಪ್ರಾಣಿಯು ಎಂಬ ಅರ್ಥವು ನಿರವಕಾಶವಾಗಿ ಬರುವುದು. ಭಗವದ್ಗೀತೆಯಲ್ಲಿ ಭೂತಶಬ್ದದಿಂದ ಕೇವಲ ಜಡವನ್ನು ತೆಗೆದುಕೊಳ್ಳಬೇಕಾಗುವ ಸ್ಥಳಗಳು ಅತಿ ವಿರಳವಾಗಿರುವುವು. ಇಷ್ಟು ವಿವಾದವು ಯಾತಕ್ಕೆ? ಇದೇ ಅರ್ಥವನ್ನು ನಿರೂಪಿಸುವ ಹದಿನೆಂಟನೆಯ ಅಧ್ಯಾಯದಲ್ಲಿ, ಪ್ರಾಣಿಯು ಎಂಬ ನಿರವಕಾಶವಾದ ಅರ್ಥದಲ್ಲಿಯೇ "ಭೂತ" ಶಬ್ದವನ್ನು ಪ್ರಯೋಗಮಾಡಿ, ಸಮಸ್ತ ಭೂತಗಳಲ್ಲಿಯೂ ಒಬ್ಬನೇ ಈಶ್ವರನು ನಿಯಾಮಕನಾಗಿರುತ್ತಾನೆ ಎಂದು ಶ್ರೀ ಕೃಷ್ಣನು ಹೇಳಿರುತ್ತಾನೆ:—

13. **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ ।**
ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿಮಾಯಯಾ ॥
—(18. 61.)

ಪರಮಾತ್ಮನು **ಸರ್ವ ಪ್ರಾಣಿಗಳ ಹೃದಯಪ್ರದೇಶದಲ್ಲಿ** ದೇಹಾರೂಢರಾದ ಸರ್ವ ಪ್ರಾಣಿಗಳನ್ನೂ ನಾನಾ ವ್ಯಾಪಾರಗಳಲ್ಲಿ ಪ್ರವರ್ತಿಸುವವನಾಗಿ ಕುಳಿತಿರುತ್ತಾನೆ.

ಇಲ್ಲಿ ಭೂತಶಬ್ದದಿಂದ ಜಡಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಜಡಗಳಿಗೆ ಹೃದಯಪ್ರದೇಶವೆಲ್ಲಿಂದ ಬಂತು? ಕರ್ಮದಲ್ಲಿ ಪ್ರವೃತ್ತಿಯು ತಾನೇ ಹೇಗೆ ಬರುವುದು? ಶ್ರೀ ಕೃಷ್ಣನು ಸರ್ವಪ್ರಾಣಿಗಳಲ್ಲೂ ಪರಮಾತ್ಮನು ಒಬ್ಬನೇ ಇರುವನು ಎಂದು ಹೇಳಿರುತ್ತಾನಾದುದರಿಂದ, ಸರ್ವಪ್ರಾಣಿಗಳಲ್ಲಿಯೂ ಒಬ್ಬನೇ ಪರಮಾತ್ಮನು ಅಧಿಷ್ಠಾನಗಳು ಭಿನ್ನವಾದರೂ ತಾನು ಅಭಿನ್ನನಾಗಿಯೇ ಇರುವನು ಎಂಬ ಜ್ಞಾನವು ಸಾತ್ವಿಕವು" ಎಂದೇ ಈ ಶ್ಲೋಕಾರ್ಥವನ್ನು ಮಾಡಬೇಕು.

ಪ್ರಶ್ನೆ—"ಯತ್ತುಕೃತ್ಸ್ನವದೇಕಸ್ಮಿನ್ ಕಾರ್ಯೇಸಕ್ತಂ" ಎಂಬ ವಾಕ್ಯದಲ್ಲಿ ಒಂದು ಕಾರ್ಯದಲ್ಲಿ "ಸರ್ವ"ದರಂತೆ ಅಥವಾ "ಪೂರ್ಣ"ದಂತೆ ತಿಳಿಯುವ ಜ್ಞಾನವು ತಾಮಸವು ಎಂದು ಇರುವುದು. ಒಂದು ಕಾರ್ಯವನ್ನು ಕೃತ್ಸ್ನವು (ಸರ್ವವು) ಎಂದು ತಿಳಿಯುವ ಜ್ಞಾನವು ತಾಮಸವು ಎಂದು ಅರ್ಥ ಮಾಡಬಹುದು. ಒಬ್ಬ ಜೀವನು ಪೂರ್ಣಬ್ರಹ್ಮನು ಎಂದು ತಿಳಿಯುವ ಜ್ಞಾನವು ತಾಮಸವು ಎಂದು ಅರ್ಥಮಾಡುವುದರಲ್ಲಿ ಕಾರಣವೇನು?

ಉತ್ತರ—ಒಂದು ಕಾರ್ಯದಲ್ಲಿ "ಪೂರ್ಣ" ದಂತೆ ತಿಳಿಯುವ ಜ್ಞಾನವು ತಾಮಸವು ಎಂದೇ ನಾವೂ ಅರ್ಥಮಾಡುತ್ತೇವೆ. ಆದರೆ ಇಲ್ಲಿ "ಕಾರ್ಯ"ವೆಂಬ ಪದಕ್ಕೆ, ಜೀವನೆಂಬ ಅರ್ಥವನ್ನು ಮಾಡಬೇಕಾಗಿರುವುದರಿಂದ ಒಂದು ಜೀವನ ವಿಷಯದಲ್ಲಿ 'ಕೃತ್ಸ್ನವತ್' ಜ್ಞಾನವು ಜೀವನೇ ಬ್ರಹ್ಮನು ಎಂಬ ಜ್ಞಾನವು; ಅಥವಾ ಒಂದು ಚೇತನವೇ ಸರ್ವವೂ (ಒಂದು ಚೇತನಾತಿರಿಕ್ತವಾಗಿ ಯಾವುದೂ ಇಲ್ಲ) ಎಂಬ ಜ್ಞಾನವು; ಅಥವಾ ಏಕಜೀವವೇ ಎಲ್ಲವೂ (ಬಹುಜೀವರುಗಳಿಲ್ಲ) ಇತ್ಯಾದಿ ರೀತಿಯಾದ ಜ್ಞಾನವು ತಾಮಸವು ಎಂದು ಅರ್ಥವಾಗುವುದು.

ಪ್ರಶ್ನೆ—ಇಲ್ಲಿ ಕಾರ್ಯಪದಕ್ಕೆ 'ಜೀವ'ನೆಂದು ಅರ್ಥಮಾಡುವುದಕ್ಕೆ ಕಾರಣಗಳೇನು?

ಉತ್ತರ—1. ಸರ್ವಜೀವರುಗಳಲ್ಲಿಯೂ ಒಬ್ಬ ಬ್ರಹ್ಮನು ಇರುವನು ಎಂದು ತಿಳಿಯುವುದು ಸಾತ್ವಿಕಜ್ಞಾನವು ಎಂದು ಶ್ರೀ ಕೃಷ್ಣನು ಹೇಳಿರುತ್ತಾನೆ. ತಾಮಸಜ್ಞಾನವು ಅದಕ್ಕೆ ವಿರುದ್ಧವಾದುದಾಗಬೇಕು. ಅದಕ್ಕೆ ವಿರುದ್ಧವು ಯಾವುದು? ಎಲ್ಲಾ ಪ್ರಾಣಿಗಳಲ್ಲೂ ಇರುವವನು ಒಬ್ಬ ಬ್ರಹ್ಮನು ಎಂಬುದಕ್ಕೆ ಒಂದೇ ಪ್ರಾಣಿಯು ಬ್ರಹ್ಮನು; ಒಂದೊಂದು ಪ್ರಾಣಿಯೂ ಬ್ರಹ್ಮನು ಇತ್ಯಾದಿ ರೀತಿಯಾದ ಜ್ಞಾನವಷ್ಟೇ ವಿರುದ್ಧವಾಗುವುದು! ಆದುದರಿಂದ ಈ ಶ್ಲೋಕದ ಕಾರ್ಯ ಶಬ್ದವೂ "ಸರ್ವಭೂತೇಷು" ಎಂಬ ಶ್ಲೋಕದ ಭೂತಶಬ್ದವೂ ಸಮಾನಾರ್ಥವುಳ್ಳವು, ಎಂದರೆ ಉಭಯತ್ರ ಪ್ರಾಣಿಯು, ಜೀವನು ಎಂದು ಅರ್ಥವು. 2. ಕಿಂಚ ಇದು ಚೇತನಪ್ರಕರಣವು; ಆದುದರಿಂದ ಒಬ್ಬ ಚೇತನನ ವಿಷಯದಲ್ಲಿ ಪೂರ್ಣಬ್ರಹ್ಮನಂತೆ ಜ್ಞಾನವು ತಾಮಸವು ಎಂದೇ ಅರ್ಥಮಾಡಬೇಕು. ಅದು ಹೇಗೆಂದರೆ, ತಾಮಸಜ್ಞಾನವು ಕೃಷ್ಣದ್ವೇಷರೂಪವಾಗಿ ಅಧೋಗತಿಗೆ ಕಾರಣವಾಗುವುದೆಂದು ಶ್ರೀ ಕೃಷ್ಣನು ಹದಿನಾರನೆಯ ಮತ್ತು ಹದಿನೇಳನೆಯ ಅಧ್ಯಾ

ಯುಗಳಲ್ಲಿ ಹೇಳಿರುತ್ತಾನೆ. ಹೀಗಿರುವಲ್ಲಿ, ಒಂದು ಕಾರ್ಯವನ್ನು ಸರ್ವವೆಂದು ತಿಳಿಯುವುದು ತಾಮಸಜ್ಞಾನವು ಎನ್ನುವುದಕ್ಕೆ ಒಂದು ಗಡಿಗೆಯನ್ನು ಪರ್ವತದಂತೆ ತಿಳಿಯುವ ಜ್ಞಾನವು ತಾಮಸವು ಎಂದು ಅರ್ಥಮಾಡುವುದು ಹೇಗೆ ಉಚಿತವಾಗುವುದು ? ಒಂದು ಬಂಡೆಕಲ್ಲನ್ನು ದೊಡ್ಡ ಬೆಟ್ಟವೆಂದು ತಿಳಿಯುವನು ಭ್ರಾಂತನೆಂದೆನಿಸುವನು. ಆದರೆ ಅದು ಅಧೋಗತಿಗೆ ಕಾರಣವಾಗುವಂಥಾ ತಾಮಸಜ್ಞಾನವಲ್ಲ. ಒಬ್ಬ ಚೇತನನನ್ನು ಪೂರ್ಣಬ್ರಹ್ಮನೆಂದು ತಿಳಿದರೆ, ಪರಬ್ರಹ್ಮದ್ವೇಷರೂಪವಾದ ಅಂಥಾ ಜ್ಞಾನವು ನರಕಾದ್ಯನರ್ಥಗಳಿಗೆ ಕಾರಣವಾಗಬಹುದು. ಆದುದರಿಂದ ಇಲ್ಲಿ ವಿವಕ್ಷಿತವಾದ ತಾಮಸಜ್ಞಾನವು ಚೇತನವಿಷಯಕವಾದುದು ಎಂದು ನಿಶ್ಚಯಿಸಬೇಕು. ಆದುದರಿಂದ ಒಂದು ಕಾರ್ಯದಲ್ಲಿ ಕೃತ್ಸ್ನದಂತೆ ಜ್ಞಾನವುಎಂದರೆ ಒಂದು ಚೇತನನಲ್ಲಿ ಪೂರ್ಣಬ್ರಹ್ಮನಂತೆ ಜ್ಞಾನವು ಇತ್ಯಾದಿ ರೀತಿಯಲ್ಲಿಯೇ ಅರ್ಥಮಾಡಬೇಕು. 3. ಇಲ್ಲಿ ಜೀವನನ್ನು 'ಕಾರ್ಯ' ಪದದಿಂದ ಕರೆದಿರುವುದಕ್ಕೆ ಕಾರಣವುಂಟು "ಅನ್ಯಥಾಕರಣೀಯತ್ವಾತ್ಕಾರ್ಯಃ" ಎಂಬ ವ್ಯುತ್ಪತ್ತಿಯಿಂದ ಸಂಸಾರವಸ್ಥೆಯಿಂದ ಬಿಡಿಸಲ್ಪಟ್ಟು ಮುಕ್ತ್ಯವಸ್ಥೆಯನ್ನು ಹೊಂದಿಸಲ್ಪಡುವವನಾದುದರಿಂದ ಜೀವನು ಕಾರ್ಯನೆನ್ನಿಸುವನು. ಕಾರ್ಯದೇಹವುಳ್ಳವನಾದುದರಿಂದಲಾದರೂ ಕಾರ್ಯವೆಂದು ಜೀವನನ್ನು ಕರೆಯಬಹುದು. ಈ ಗೀತಾ ಶ್ಲೋಕಾರ್ಥವನ್ನು ವಿವರಿಸುವ ಪದ್ಮಪುರಾಣ ವಚನವು ಮೊದಲನೆಯ ಅರ್ಥದಲ್ಲಿ ಸಹಾಯಕವಾಗಿರುತ್ತದೆ.

ಅನ್ಯಥಾಕರಣೀಯತ್ವಾತ್ಕಾರ್ಯಾಖ್ಯಂಜೀವಮೇವಯಃ ।
ಅಕಾರ್ಯಂಬ್ರಹ್ಮಜಾನಾತಿ ಸವಿನಾಖಿಲಮಿತ್ಯಪಿ ।
ಏಕಜೀವಪರಿಜ್ಞಾನಾತ್ಕೃತ್ಸ್ನಜ್ಞೋಽಸ್ಮೀತಿಮನ್ಯತೇ ।
ಸಮುಖ್ಯತಾಮಸಜ್ಞಾನೀ........................॥ ಪಾದ್ಮೇ ॥

ಅರ್ಥವು—"ಸಂಸಾರಾವಸ್ಥೆಯಿಂದ ಮುಕ್ತನಾಗಿ ಮಾಡಲ್ಪಡುವುದರಿಂದ ಕಾರ್ಯನೆಂದು ಕರೆಯಲ್ಪಡುವ ಜೀವನನ್ನು ಅಕಾರ್ಯನಾದ (ಅವಸ್ಥಾಭೇದವಿಲ್ಲದೆ ಶಶ್ವದೇಕ ಪ್ರಕಾರವಾಗಿರುವ) ಬ್ರಹ್ಮನೆಂದು ತಿಳಿಯುವನು; ಅಥವಾ ಒಂದು ಜೀವನನ್ನು ತಿಳಿಯುವುದರಿಂದ ಸರ್ವವನ್ನೂ ತಿಳಿದಂತಾಯಿತೆಂದು ತಿಳಿಯುವವನು; ಇವರು ತಾಮಸಜ್ಞಾನವುಳ್ಳವರು."

ಜೀವನಿಗೆ ಮುಕ್ತಿಯು ಮುಂದೆ ಬರುವುದೆಂಬುದರಲ್ಲಿ "ಶಾಂತಿಮಾಪ್ನೋತಿನೈಷ್ಠಿಕೀಂ," "ವಿಶತೇತದನಂತರಂ" "ಸರ್ವಪಾಪೇಭ್ಯೋ ಮೋಕ್ಷಯಿ

ಷ್ಯಾಮಿ" ಇತ್ಯಾದಿ ಶ್ರೀಕೃಷ್ಣನ ಅನೇಕ ವಾಕ್ಯಗಳು ಆಧಾರವಾಗಿರುತ್ತವೆ.
4. ಅಥವಾ "ಕಾರ್ಯೇ" ಎಂಬ ಪದಕ್ಕೆ "ದೇಹೇ" ಎಂದರೆ ದೇಹ ವಿಷಯು ದಲ್ಲಿ ಎಂದೇ ಅರ್ಥಮಾಡಬೇಕೆಂದು ನಿರ್ಬಂಧಪಿರುವ ಪಕ್ಷಕ್ಕೆ, ಈ ಶ್ಲೋಕವನ್ನು ಮತ್ತೊಂದು ವಿಧವಾಗಿ ಯೋಜನೆ ಮಾಡಿ ಅರ್ಥಹೇಳಬಹುದು. "ಯತ್ತುಕೃತ್ಸ್ನವದೇಕಸ್ಮಿನ್" ಎಂದೂ "ಕಾರ್ಯೇಸಕ್ತಂ" ಎಂದೂ ಬಿಡಿಸಿ ಅರ್ಥಮಾಡಬಹುದು. ಆಗ ಅನಾಯಾಸವಾಗಿ ಯಾವ ಜ್ಞಾನವು ಒಂದು ಚೇತನ ವಿಷಯುದಲ್ಲಿ ಪೂರ್ಣನಾದ ಬ್ರಹ್ಮನಂತೆ ತಿಳಿಯುವುದೋ ಮತ್ತು ದೇಹದಲ್ಲಿ ಅಭಿಮಾನದಿಂದ ಆಸಕ್ತವಾಗಿರುವುದೋ ಅದು ತಾಮಸವು ಎಂದು ಅರ್ಥವಾಗುವುದು. "ಈಶ್ವರೋಽಹಂ" "ಮಾಮಾತ್ಮ ಪರದೇಹೇಷುಪ್ರದ್ವಿಷಂತಃ" ಎಂಬ ಮತ್ತು "ಸಕ್ತಾಃ ಕರ್ಮಣ್ಯವಿದ್ವಾಂಸೋ" ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು" ಇತ್ಯಾದಿ ಶ್ರೀಕೃಷ್ಣನ ವಾಕ್ಯಗಳು ಈ ವಿಷಯುದಲ್ಲಿ ಆಧಾರವಾಗಿರುವುವು. ಹೀಗೆ ಜೀವಬ್ರಹ್ಮರ ಭೇದಜ್ಞಾನವು ಸಾತ್ವಿಕವೆಂದೂ, ಜೀವನೇ ಬ್ರಹ್ಮನೆಂಬ ಜ್ಞಾನವು ತಾಮಸವು ಎಂದೂ ಸಿದ್ಧವಾಯಿತು.

ಕರ್ಮತ್ರೈವಿಧ್ಯವು ಶ್ರೀ ಕೃಷ್ಣನಿಂದ ಈ ರೀತಿ ನಿರೂಪಿಸಲ್ಪಟ್ಟಿರುವುದು :—

(12) **ನಿಯತಂ ಸಂಗರಹಿತ ಮರಾಗದ್ವೇಷತಃಕೃತಂ ।**
ಅಫಲ ಪ್ರೇಪ್ಸುನಾ ಕರ್ಮಯತ್ತತ್ಸಾತ್ವಿಕ ಮುಚ್ಯತೇ ।
ಯತ್ತುಕಾಮೇಪ್ಸುನಾ ಕರ್ಮಸಾಹಂಕಾರೇಣವಾಪುನಃ ।
ಕ್ರಿಯತೇ ಬಹುಲಾಯಾಸಂ ತದ್ರಾಜಸಮುದಾಹೃತಂ ।
ಅನುಬಂಧಂ ಕ್ಷಯಂಹಿಂಸಾ ಮನಪೇಕ್ಷ್ಯಚ ಪೌರುಷಂ ।
ಮೋಹಾದಾರಭ್ಯತೇ ಕರ್ಮಯತ್ತ ತ್ತಾಸ್ತ್ವಿಕಮುಚ್ಯತೇ ॥

—(18. 23-25.)

ನಿಯತವಾದ,* ಕರ್ಮಕರಣದಲ್ಲಿ ಸ್ವಾತಂತ್ರ್ಯಾಭಿಮಾನವಿಲ್ಲದೆ, ರಾಗದ್ವೇಷಗಳನ್ನು ಬಿಟ್ಟು, ಫಲಾಪೇಕ್ಷೆರಹಿತನಾದವನಿಂದ ಮಾಡಲ್ಪಟ್ಟ ಕರ್ಮವು ಸಾತ್ವಿ

---

* ಹರಿಸರ್ವೋತ್ತಮತ್ವಜ್ಞಾನಪೂರ್ವಕವಾಗಿ, ಭಗವದ್ಭಕ್ತಿಪೂರ್ವಕವಾಗಿ, ಭಗವದರ್ಪಣಬುದ್ಧಿಯಿಂದ ಮಾಡಲ್ಪಡುವ ವೇದೋಕ್ತಸ್ವವರ್ಣಾಶ್ರಮೋಚಿತವಾದ ಕರ್ಮವು ನಿಯತಕರ್ಮವೆನ್ನಿಸುವುದು. ಇಂಥಾ ನಿಯತಕರ್ಮವು ವೇದವಿಧಿ ಬದ್ಧರಲ್ಲದ ಮುಕ್ತರಿಗೆ ಸಂಭವಿಸುವುದಿಲ್ಲವಾದುದರಿಂದ ಈ ಪ್ರಕರಣಗಳು ಜೀವಸ್ವಭಾವಗುಣಗಳನ್ನು ಹೇಳುವುದಿಲ್ಲವೆಂದು ಭ್ರಮಿಸಕೂಡದು. ಮುಕ್ತರೂ ಸಹ ವೇದೋಕ್ತವಿಹಿತ ಕರ್ಮಗಳನ್ನು ಭಗವದ್ಭಕ್ತಿಪೂರ್ವಕವಾಗಿ ಫಲಾಪೇಕ್ಷೆಯಿಂದ

ಕವು (ಮುಕ್ತಿಯೋಗ್ಯ ಜೀವಸ್ವಭಾವಾನುಗುಣವಾದುದು; ಸಾತ್ವಿಕಗುಣಕಾರ್ಯವು); ಸ್ವರ್ಗಾದಿಫಲಾಪೇಕ್ಷೆಯಿಂದ ಸಹಿತನಾದ ಮತ್ತು ಕರ್ತೃತ್ವಾಭಿಮಾನದಿಂದ ಯುಕ್ತನಾದ ಪುರುಷನಿಂದ ಮಾಡಲ್ಪಟ್ಟ, ಅಲ್ಪಫಲಕ್ಕೋಸ್ಕರ ಬಹಳಾಯಾಸದಿಂದ ಯುಕ್ತವಾದ ಕರ್ಮವು ರಾಜಸವೆನ್ನಿಸುವುದು. ಈ ಕರ್ಮಮಾಡಿದರೆ ಇದರಿಂದ ಮತ್ತೊಂದು ಉತ್ಕೃಷ್ಟಕರ್ಮವು ಪ್ರತಿಬದ್ಧವಾಗುವುದು ಎಂದು ಪರ್ಯಾಲೋಚಿಸದೆ, ತಾನು ಮಾಡುವ ಕರ್ಮದಿಂದ ಪರರಿಗೆ ಕ್ಷಯವೂ (ನಾಶವೂ), ಹಿಂಸೆಯೂ ಆಗುವುದನ್ನೂ ಗಣನೆಗೆ ತರದೆ, ತನ್ನ ಸಾಮರ್ಥ್ಯವು ಆ ಕಾರ್ಯಪರಿಸಮಾಪ್ತಿಗೆ ಆಗುವಷ್ಟು ಇಲ್ಲವೆಂಬುದನ್ನೂ ವಿಮರ್ಶೆಮಾಡದೆ, ಮೋಹದಿಂದ ಎಂದರೆ ನಾನೇ ಸ್ವತಂತ್ರಕರ್ತನೆಂಬ ಮಿಥ್ಯಾಜ್ಞಾನದಿಂದ ಆರಬ್ಧವಾದ ಕರ್ಮವು ತಾಮಸವೆನ್ನಿಸುವುದು ; (ತಮೋಯೋಗ್ಯಸ್ವಭಾವಾನುಗುಣವಾದುದು ; ತಾಮಸಗುಣಕಾರ್ಯವು.)

ಕರ್ಮಾಚರಣೆಯಲ್ಲಿ ತತ್ಪರರಾದ ಕರ್ತೃತ್ರೈವಿಧ್ಯವನ್ನು ಶ್ರೀ ಕೃಷ್ಣನು ನಿರೂಪಿಸುತ್ತಾನೆ :—

(13) **ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹ ಸಮನ್ವಿತಃ ।**
ಸಿಧ್ಯಸಿಧ್ಯೋರ್ನಿರ್ವಿಕಾರಃ ಕರ್ತಾ ಸಾತ್ವಿಕ ಉಚ್ಯತೇ ॥

ರಹಿತರಾಗಿ ನಿರಂತರವೂ ಅನುಷ್ಠಾನಮಾಡುತ್ತಲೇ ಇರುವರು. 1. **ನಿರಂತರ,** 2. ಸಂಪೂರ್ಣ **ಫಲಾಪೇಕ್ಷೆಯಿಂದ ರಹಿತರಾ**, 3. **ಅಹಂತಾಮಮತಾದಿಗಳನ್ನು ಪೂರ್ಣವಾಗಿ ಬಿಟ್ಟು,** 4. **ನಿಯಮೇನ,** ಭಗವದ್ಧ್ಯಾನಪೂರ್ವಕವಾಗಿ ಕರ್ಮಮಾಡುವವರು ಮುಖ್ಯವಾಗಿ ಮುಕ್ತರೇ ಆಗಿರುವುದರಿಂದ ಈ ಶ್ಲೋಕಗಳು ಮುಖ್ಯವಾಗಿ ಸಾತ್ವಿಕಜೀವಸ್ವರೂಪಾನುಗುಣವಾದ ಕರ್ಮಾಚರಣೆಯನ್ನು ಪ್ರತಿಪಾದಿಸುವುವು. ಅಮುಖ್ಯವಾಗಿ ಸಾತ್ವಿಕಗುಣದಿಂದ ಸಹಿತರಾದವರ ಕರ್ಮವನ್ನು ನಿರೂಪಿಸುವುವು. ಹಾಗಾದರೆ ಮುಕ್ತಿಯಲ್ಲಿಯೂ ಕರ್ಮಬಂಧವು ತಪ್ಪದೇ ಇದ್ದಮೇಲೆ ಮುಕ್ತಿಯು ಹೇಗೆ ಪುರುಷಾರ್ಥವಾಗುವುದು ಎಂದು ಶಂಕಿಸಕೂಡದು. ಮುಕ್ತರು ಕರ್ಮ**ಬದ್ಧರಲ್ಲ.** ಅವರು ಕರ್ಮಪರಿತ್ಯಾಗಮಾಡಿದರೆ ಪರಮಾತ್ಮನು ಅವರನು ದಂಡಿಸುವುದಿಲ್ಲ. ಹೀಗಿದ್ದರೂ ಕಾಮಿನಿಯು ಪ್ರಣಯಭರದಿಂದ ತನ್ನ ಭರ್ತನನ್ನು ಸೇವಿಸುವಂತೆ ತಾಯಿಯು ಪ್ರೀತಿಯಿಂದ ಪುತ್ರರಕ್ಷಣೆಯಲ್ಲಿ ತತ್ಪರಳಾಗುವಂತೆ ಪರಮಾತ್ಮಲ್ಲಿರುವ ಉಜ್ಜ್ವಲವಾದ ತಮ್ಮ ಭಕ್ತಿಯಿಂದಲೇ ಸರ್ವಮುಕ್ತರೂ ತಮಗೆ ಇಷ್ಟವಾದ ವಿಧವಿಧವಾದ ಕರ್ಮಗಳನ್ನು ಮಾಡಿ ಪರಮಾತ್ಮನನ್ನು ಓಲೈಸುವರು. ಆನಂದದಿಂದ ಗಾಯನಮಾಡುವವನಿಗೆ ಆಯಾಸವು ಇಲ್ಲದಿರುವಂತೆ, ಮುಕ್ತರಿಗೆ ಕರ್ಮಾನುಷ್ಠಾನದಿಂದ ಆಯಾಸವು ಇಲ್ಲ. ಸುಖೋದ್ರೇಕವೇ ಇರುವುದು. ಈ ಪ್ರಮೇಯಗಳೆಲ್ಲಾ "ಬ್ರಹ್ಮಾತ್ಮೋವದತಿಜಾತವಿದ್ಯಾಂ" ಇತ್ಯಾದಿ ಶ್ರುತಿಗಳಿಂದ ಸಿದ್ಧವಾಗುವುದು.

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾರಾಜಸಃ ಪರಿಕೀರ್ತಿತಃ ।
ಅಯುಕ್ತಃಪ್ರಾಕೃತಃಸ್ತಬ್ಧಃ ಶಠೋನೈಕೃತಿಕೋಽಲಸಃ ।
ವಿಷಾದೀದೀರ್ಘಸೂತ್ರೀಚ ಕರ್ತಾತಾಮಸಉಚ್ಯತೇ ॥

(18.26-28.)

ಕರ್ಮಫಲದಲ್ಲಿ ಸ್ನೇಹರಹಿತನಾಗಿ, ಕರ್ಮಮಾಡುವುದರಲ್ಲಿ ನಾನು ಸ್ವತಂತ್ರಕರ್ತನೆಂದು ತಿಳಿಯದೆ, ಧೈರ್ಯೋತ್ಸಾಹಗಳಿಂದ ಯುಕ್ತನಾಗಿ, ತಾನು ಮಾಡತಕ್ಕ ಕಾರ್ಯಕ್ಕೆ ಲೌಕಿಕ ಫಲಗಳು ಅವರ್ಜನೀಯವಾಗಿ ಬಂದರೆ ಸಂತೋಷಪಡದೆ, ಬರದಿದ್ದರೆ ದುಃಖವನ್ನು ಹೊಂದದೆ, ನಿರ್ವಿಕಾರನಾಗಿರುವ ಕರ್ತನು ಸಾತ್ವಿಕನು (ಮುಕ್ತಿಯೋಗ್ಯಸ್ವಭಾವವುಳ್ಳವನು ; ಸಾತ್ವಿಕಗುಣವುಳ್ಳವನು); ಕೀರ್ತ್ಯಾದಿಕಾಮವುಳ್ಳ, (ಸ್ವರ್ಗಾದಿ) ಕರ್ಮಫಲದಲ್ಲಿ ಅಪೇಕ್ಷೆಯುಳ್ಳ, ಕರ್ಮಫಲಪ್ರಾಪ್ತಿಗೆ ಬೇಕಾಗುವಷ್ಟು ಧನವ್ಯಯವನ್ನು ಮಾಡದ, (ಪಶ್ವಾದಿಗಳ) ಹಿಂಸಾಮಾಡುವ ಸ್ವಭಾವವುಳ್ಳ, ಅಶುಚಿಯಾದ ಮತ್ತು ಕರ್ಮಫಲವು ಪ್ರಾಪ್ತವಾದರೆ ಆನಂದ ಭರಿತನೂ, ಫಲಪ್ರಾಪ್ತವಾಗದಿದ್ದರೆ ವಿಷಾದಗ್ರಸ್ತನೂ ಆಗುವ, ಕರ್ತನು ರಾಜಸನೆನ್ನಿಸುವನು. ಭಗವದರ್ಪಣಾದಿ ಕರ್ಮಫಲಪ್ರಾಪ್ತ್ಯುಪಾಯಗಳಿಂದ ರಹಿತನಾದ, ಪುಣ್ಯಹೀನನಾದ ಅಥವಾ ಅಜ್ಞನಾದ, ಗುರುಹಿರಿಯರಲ್ಲಿ ನಮ್ರನಾಗದ, ಗೂಢದ್ವೇಷದಿಂದ ಕರ್ಮಮಾಡುವ, ನೀಚಕರ್ಮದಲ್ಲಿ ನಿರತನಾದ, ಕರ್ಮಕರ್ತವ್ಯಕಾಲದಲ್ಲಿ ಆಲಸ್ಯಮಾಡುವ, ವಿಷಾದದಿಂದ ಸಹಿತನಾದ (ಸ್ವಲ್ಪ ದುಃಖವಾದರೆ ತಲೆಯಮೇಲೆ ಕೈಯಿಟ್ಟುಕೊಂಡು, ಸರ್ವಕಾರ್ಯಗಳನ್ನೂ ಪರಿತ್ಯಾಗಮಾಡಿಕೂಡುವ), ಪರರ ಅಲ್ಪದೋಷಗಳನ್ನೂ ಸಹ ಬಹುಕಾಲ ಸ್ಮರಣೆಯಲ್ಲಿಟ್ಟುಕೊಂಡು, ಅನುಚಿತವೇಳೆಯಲ್ಲಿ ಅದನ್ನು ಉದ್ಘೋಷಿಸಿ, ಅವರಿಗೆ ಹಾನಿಯನ್ನುಂಟುಮಾಡುವ ಕರ್ತನು ತಾಮಸನು (ತಮೋಯೋಗ್ಯ ಸ್ವಭಾವವುಳ್ಳವನು ; ತಾಮಸಗುಣವುಳ್ಳವನು).

ಶ್ರೀಕೃಷ್ಣನು ಉತ್ತರ ಶ್ಲೋಕಗಳಲ್ಲಿ ಬುದ್ಧಿತ್ರೈವಿಧ್ಯವನ್ನು ನಿರೂಪಿಸುತ್ತಾನೆ :—

(14) **ಪ್ರವೃತ್ತಿಂಚನಿವೃತ್ತಿಂಚ ಕಾರ್ಯಾಕಾರ್ಯೇಭಯಾಭಯೇ ।**
ಬಂಧಂಮೋಕ್ಷಂಚಯಾವೇತ್ತಿ ಬುದ್ಧಿಃಸಾಪಾರ್ಥಸಾತ್ವಿಕೀ ।
ಯಯಾಧರ್ಮಮಧರ್ಮಂಚ ಕಾರ್ಯಂಚಾಕಾರ್ಯಮೇವಚ ।
ಅಯಥಾವತ್ಪ್ರಜಾನಾತಿ ಬುದ್ಧಿಃಸಾಪಾರ್ಥರಾಜಸೀ ॥

ಅಧರ್ಮಂಧರ್ಮಮಿತಿಯಾಮನ್ಯತೇತಮಸಾವೃತಾ ।
ಸರ್ವಾರ್ಥಾನ್ವಿಪರೀತಾಂಶ್ಚ ಬುದ್ಧಿಃ ಸಾಪಾರ್ಥತಾಮಸೀ ॥
(18.30-32.)

ಸಂಸಾರಹೇತುಭೂತವಾದ ಧರ್ಮಗಳು ಯಾವುವು, ಸಂಸಾರತಾರಕವಾದ ಧರ್ಮಗಳು ಯಾವುವು ಎಂದು ತಿಳಿಯುವ, ಕರ್ತವ್ಯಾಕರ್ತವ್ಯಗಳನ್ನು ವಿವೇಕದಿಂದ ತಿಳಿಯುವ, ಮತ್ತು ಕರ್ತವ್ಯಕರ್ಮಾನುಷ್ಠಾನ, ತದಭಾವಗಳಿಂದ ಆಗುವ ಅಭಯ ಕಾರಣವನ್ನೂ ಭಯಸ್ಥಾನಗಳನ್ನೂ ತಿಳಿಯುವ, ಮತ್ತೂ **ಬಂಧಂಮೋಕ್ಷಂ ಚಯಾವೇತ್ತಿ*** ಬಂಧಪ್ರಕಾರವನ್ನೂ, ಅದರಿಂದ ಬಿಡುಗಡೆಯಾಗುವ ಪ್ರಕಾರವನ್ನೂ, ತಿಳಿಯುವ ಬುದ್ಧಿಯು ಸಾತ್ವಿಕವು (ಮೋಕ್ಷಯೋಗ್ಯ ಜೀವಸ್ವಭಾವಾನುಗುಣವಾದುದು; ಸಾತ್ವಿಕ ಗುಣಕಾರ್ಯವು.) ಯಾವ ಬುದ್ಧಿಯು ಅಧರ್ಮವನ್ನೂ ಧರ್ಮವನ್ನೂ, ಕಾರ್ಯಾಕಾರ್ಯಗಳನ್ನೂ ನಿಯಮೇನ ಯಥಾರ್ಥವಾಗಿ ತಿಳಿಯದೆ, ಸ್ವಲ್ಪ ಯಥಾರ್ಥವಾಗಿಯೂ ಸ್ವಲ್ಪ ಅಯಥಾರ್ಥವಾಗಿಯೂ ತಿಳಿಯುವುದೋ ಆ ಬುದ್ಧಿಯು ರಾಜಸವೆನ್ನಿಸುವುದು. ಅಧರ್ಮವೆಂದು ತಿಳಿಯುವ ಮತ್ತು ಮಿಥ್ಯಾಜ್ಞಾನದಿಂದ ಸಹಿತವಾದುದರಿಂದ ಸರ್ವಪ್ರಮೇಯಗಳನ್ನೂ ವಿಪರೀತವಾಗಿ ನಿಶ್ಚಯಿಸುವ ಬುದ್ಧಿಯು ತಾಮಸವೆನ್ನಿಸುವುದು (ತಮೋಯೋಗ್ಯ ಜೀವಸ್ವಭಾವಾನುಗುಣವಾದುದು ; ತಾಮಸಗುಣಕಾರ್ಯವು).

ಇನ್ನು ಮುಂದೆ ಶ್ರೀ ಕೃಷ್ಣನು ಧೃತಿಭೇದವನ್ನು ನಿರೂಪಿಸುತ್ತಾನೆ :—

(15) **ಧೃತ್ಯಾಯಯಾಧಾರಯತೇಮನಃ ಪ್ರಾಣೇಂದ್ರಿಯಕ್ರಿಯಾಃ ।**
ಯೋಗೇನಾವ್ಯಭಿಚಾರಿಣ್ಯಾಧೃತಿಃ ಸಾಪಾರ್ಥಸಾತ್ವಿಕೀ ॥
ಯಯಾತುಧರ್ಮಕಾಮಾರ್ಥಾನ್ ಧೃತ್ಯಾಧಾರಯತೇಽರ್ಜುನ।
ಪ್ರಸಂಗೇನಫಲಾಕಾಂಕ್ಷೀ ಧೃತಿಃಸಾಪಾರ್ಥರಾಜಸೀ ॥

---

* ಶ್ರೀಕೃಷ್ಣನು ಸತ್ಯವಾದ ಬಂಧಮೋಕ್ಷಗಳನ್ನು ತಿಳಿಯುವ ಬುದ್ಧಿಯು ಸಾತ್ವಿಕವೆಂದು ಹೇಳಿರುವನು. ಶಂಕರಾಚಾರ್ಯರು “ **ನಬಂಧೋನಮೋಕ್ಷಃ** ” ಎಂದು ಬಂಧಮೋಕ್ಷಗಳನ್ನು ತಿಳಿಯಬಾರದೆಂದು ಹೇಳಿರುವರು. ಶ್ರೀಕೃಷ್ಣನು ಬ್ರಹ್ಮವಿಚಾರಕ್ಕೆ ಮೊದಲಿರುವ ಬುದ್ಧಿಯನ್ನು ವರ್ಣಿಸಿರುವನೆಂದು ತಿಳಿಯಬಾರದು. **ವಿಚಾರಮಾಡುವುದೇ** ಬುದ್ಧಿಕಾರ್ಯವು. ಅದಲ್ಲಿಯೂ ಸಾತ್ವಿಕ ಬುದ್ಧಿಯು ಸುಳ್ಳನ್ನು ವಿಷಯೀಕರಿಸಲಾರದು. ಬಂಧಮೋಕ್ಷಗಳನ್ನು ಭಿನ್ನಭಿನ್ನವಾಗಿ ಚೆನ್ನಾಗಿ ತಿಳಿಯುವ ಬುದ್ಧಿಯು ಸಾತ್ವಿಕವೆಂದು ಶ್ರೀಕೃಷ್ಣನೇ ಹೇಳಿರುವುದರಿಂದ, ಬಂಧಮಿಥ್ಯಾತ್ವಾದಿಗಳನ್ನು ಹೇಳುವ ಮತವು ಆತನಿಗೆ ಪರಮವಿರುದ್ಧವೆಂದು ತಿಳಿದುಬರುತ್ತದೆ.

ಯಯಾಸ್ವಪ್ನಂ ಭಯಂಶೋಕಂ ವಿಷಾದಂ ಮದಮೇವಚ ।
ನವಿಮುಂಚತಿದುರ್ಮೇಧಾಃ ಧೃತಿಃ ಸಾಪಾರ್ಥತಾಮಸೀ ॥

—(18. 33-35.)

ಎಲೈ ಪಾರ್ಥನೇ ! ವಿಧಿವಿಹಿತವಿಷಯದಲ್ಲಿ ಮನಸ್ಸಿನ, ಪ್ರಾಣಗಳ, ಮತ್ತು ಇಂದ್ರಿಯಗಳ ವ್ಯಾಪಾರಗಳನ್ನು ಹಿಡಿದು ನಿಲ್ಲಿಸುವ, ಅನನ್ಯವಾದ ಭಗವದ್ಭಕ್ತಿ ರೂಪವಾದ ಉಪಾಯದಿಂದ ಸಹಿತವಾದ, ಧೈರ್ಯವು ಸಾತ್ವಿಕವೆನ್ನಿಸುವುದು (ಮುಕ್ತಿಯೋಗ್ಯಸ್ವಭಾವಾನುಗುಣವಾದುದು, ಸಾತ್ವಿಕಗುಣಕಾರ್ಯವು). ಧರ್ಮ ಕಾಮ ವಿಷಯಕ ಉದ್ಯೋಗದಲ್ಲಿ ಮನ ಆದಿ ಇಂದ್ರಿಯಗಳ ಕ್ರಿಯೆಗಳನ್ನು ಧರಿಸಿರುವ, ಅಭಿಮಾನದಿಂದ ಕರ್ಮಫಲದಲ್ಲಿ ಅಪೇಕ್ಷೆಯುಳ್ಳ ಧೃತಿಯು ಸಾತ್ವಿಕ ಧೃತಿಯೆನ್ನಿಸುವುದು. ದುಷ್ಟಬುದ್ಧಿಗೆ ವಶನಾದ ಪುರುಷನು, ಯಾವ ಧೈರ್ಯವನ್ನು ಅವಲಂಬಿಸಿ ಅತಿನಿದ್ರಾ, ಭಯ, ಶೋಕ, ವಿಷಾದ, ಮದಗಳನ್ನು ಬಿಡುವುದಿಲ್ಲವೋ, ಅಂಥಾ ಧೃತಿಯು ತಾಮಸವು (ತಮೋಯೋಗ್ಯಸ್ವಭಾವಾನುಗುಣವಾದುದು; ತಾಮಸಗುಣಕಾರ್ಯವು).

ಮುಂದಿನ ಶ್ಲೋಕಗಳಲ್ಲಿ, ಶ್ರೀ ಕೃಷ್ಣನು ಸಾತ್ವಿಕಾದಿ ಜೀವರುಗಳು ಸಂಸಾರದಲ್ಲಿ ಅನುಭವಿಸುವ ಸುಖದ ತ್ರೈವಿಧ್ಯವನ್ನು ನಿರೂಪಿಸುತ್ತಾನೆ:—

(16) **ಯತ್ತದಗ್ರೇವಿಷಮಿವ ಪರಿಣಾಮೇಽಮೃತೋಪಮಂ ।**
ತತ್ಸುಖಂಸಾತ್ವಿಕಂಪ್ರೋಕ್ತಮಾತ್ಮಬುದ್ಧಿಪ್ರಸಾದಜಂ ॥
ವಿಷಯೇಂದ್ರಿಯ ಸಂಯೋಗಾದ್ಯತ್ತದಗ್ರೇಽಮೃತೋಪಮಂ ।
ಪರಿಣಾಮೇ ವಿಷಮಿವ ತತ್ಸುಖಂರಾಜಸಂಸ್ಮೃತಂ ॥
ಯದಗ್ರೇಚಾನುಬಂಧೇಚ ಸುಖಂಮೋಹನಮಾತ್ಮನಃ ।
ನಿದ್ರಾಲಸ್ಯಪ್ರಮಾದೋತ್ಥಂ ತತ್ತಾಮಸಮುದಾಹೃತಂ ॥

—(18. 37-39.)

ಆರಂಭದಲ್ಲಿ ಆಯಾಸಸಾಧ್ಯವಾದುದರಿಂದ ವಿಷದಂತೆ ಕಂಡುಬಂದರೂ, ಬ್ರಹ್ಮಜ್ಞಾನ ಮತ್ತು ಮನಃ ಪ್ರಸಾದ (ವಿಷಯಗಳಲ್ಲಿ ಮನಸ್ಸು ಹೋಗದೇ ಇರುವುದು,) ಇವುಗಳಿಂದ ಉತ್ಪನ್ನವಾಗಿ, ಪರಿಣಾಮದಲ್ಲಿ ಅಮೃತಸದೃಶವಾಗಿ, ಅತ್ಯಂತ ಹಿತಕರವಾದ ಸುಖವು ಸಾತ್ವಿಕವು (ಮೋಕ್ಷಯೋಗ್ಯರು ಅನುಭವಿಸುವ ಸ್ವಭಾವಾನುಗುಣವಾದ ಸುಖವು; ಸಾತ್ವಿಕಗುಣಕಾರ್ಯವು). ಶಬ್ದಾದಿ ವಿಷಯಗಳಿಗೂ ಶ್ರೋತ್ರಾದಿ ಇಂದ್ರಿಯಗಳಿಗೂ ಸನ್ನಿಕರ್ಷದಿಂದ ಉತ್ಪನ್ನವಾಗಿ, ಆರಂ

ಭದಲ್ಲಿ ಬಹು ಹಿತಕರವಾಗಿ, ಪರಿಣಾಮದಲ್ಲಿ ಬಹು ದುಃಖಕರವಾದ ಸುಖವು ರಾಜಸವೆಂದು ಹೇಳಲ್ಪಡುವುದು. ಯಾವುದು ಆರಂಭಕಾಲದಲ್ಲಿಯೂ ಪರಿಣಾಮದಲ್ಲಿಯೂ ಆತ್ಮಮೋಹಕರವೋ, ಎಂದರೆ ತನ್ನನ್ನೇ ಪರವಶನನ್ನಾಗಿ ಮಾಡುವುದೋ ಅಂಥಾ ನಿದ್ರಾ, ಆಲಸ್ಯ, ಪ್ರಮಾದಗಳಿಂದ ಉತ್ಪನ್ನವಾದ ಸುಖವು ತಾಮಸವು (ತಮೋಯೋಗ್ಯರು ಸಂಸಾರದಲ್ಲಿ ಅನುಭವಿಸುವ ಸುಖವು; ತಾಮಸಗುಣಕಾರ್ಯವು).

ಈ ವಾಕ್ಯಗಳ ಪರ್ಯಾಲೋಚನೆಯಿಂದ ತ್ರಿವಿಧರಾದ ಜೀವರುಗಳು ಸ್ವರೂಪಸಿದ್ಧವಾದ ಧರ್ಮಗಳಿಂದ ಸಹಿತರಾಗಿ ಸಂಸಾರದಲ್ಲಿಯೂ ಕೂಡ ಪ್ರಾಯೇಣ ಸ್ವಭಾವಾನುಗುಣವಾದ ಆಹಾರ, ಬುದ್ಧಿ, ಕರ್ಮಾದಿಗಳಿಂದ ಯುಕ್ತರಾಗಿರುವರೆಂದು ನಿಶ್ಚಿತವಾಗುವುದು. ಮುಕ್ತಿಯೋಗ್ಯರ ಪ್ರಬಲವಾದ ವೈಲಕ್ಷಣ್ಯವು ನವಮಾಧ್ಯಾಯದಲ್ಲಿ ಶ್ರೀ ಕೃಷ್ಣನಿಂದ ನಿರೂಪಿತವಾಗಿರುತ್ತದೆ. ಅಸುರಸ್ವಭಾವವನ್ನು ಹೊಂದಿದವರು (ತಮೋಯೋಗ್ಯರು) ಪರಮಾತ್ಮನನ್ನು ತಿಳಿಯುವ ಪ್ರಕಾರವನ್ನು ಶ್ರೀ ಕೃಷ್ಣನು ಹೇಳುತ್ತಾನೆ:—

(17) **ಅವಜಾನಂತಿಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ।**
ಪರಂಭಾವಮಜಾನಂತೋ ಮಮಭೂತಮಹೇಶ್ವರಂ ।
ಮೋಘಾಶಾಮೋಘ ಕರ್ಮಾಣೋಮೋಘ ಜ್ಞಾನಾ
ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥
(9. 11-12.)

ಈ ಶ್ಲೋಕಗಳು ಪೂರ್ವದಲ್ಲೇ ವಿವೃತವಾಗಿರುವುವು. ಇಲ್ಲಿ ಶ್ರೀಕೃಷ್ಣನನ್ನು ಸರ್ವೋತ್ತಮನಾದ ಪರಬ್ರಹ್ಮನೆಂದು ತಿಳಿಯದೆ, ಮನುಷ್ಯಮಾತ್ರನೆಂದು ತಿಳಿಯುವವರು ಬುದ್ಧಿಭ್ರಂಶಕರವಾದ ಅಸುರ **ಸ್ವಭಾವವನ್ನು** ಹೊಂದಿದವರು ಎಂದು ಸ್ಪಷ್ಟವಾಗಿ ಬಂದಿರುತ್ತದೆ.

ಮುಕ್ತಿಯೋಗ್ಯರು ಪರಮಾತ್ಮನನ್ನು ತಿಳಿಯುವ ಪ್ರಕಾರವು ಉತ್ತರ ಶ್ಲೋಕಗಳಲ್ಲಿ ಶ್ರೀಕೃಷ್ಣನಿಂದ ನಿರೂಪಿತವಾಗಿರುವುದು—

(18) **ಮಹಾತ್ಮಾನಸ್ತುಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।**
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿ ಮವ್ಯಯಂ ।

ಸತತಂ ಕೀರ್ತಯಂತೋಮಾಂ ಯತಂತಶ್ಚದೃಢವ್ರತಾಃ ।
ನಮಸ್ಯಂತಶ್ಚಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥
(9. 13-14.)

ಈ ಶ್ಲೋಕಗಳ ವ್ಯಾಖ್ಯಾನವೂ ಪೂರ್ವದಲ್ಲಿಯೇ ಮಾಡಲ್ಪಟ್ಟಿರುವುದು. ಇಲ್ಲಿ ಶ್ರೀಕೃಷ್ಣನನ್ನು ಅನನ್ಯವಾಗಿ ಭಜನೆಮಾಡುವವರು ದೈವೀಸ್ವಭಾವವನ್ನು ಹೊಂದಿದವರು ಎಂದರೆ ಮುಕ್ತಿಯೋಗ್ಯಚೇತನರೆಂದು ಸ್ಪಷ್ಟವಾಗಿ ಹೇಳಿರುತ್ತದೆ.

ಇದರಿಂದ ಮುಕ್ತಿಯೋಗ್ಯರು ಸಂಸಾರಾವಸ್ಥೆಯಲ್ಲಿಯೂ ಕೂಡ ಕೃಷ್ಣೋಪಾಸ್ತಿಯಲ್ಲಿ ಲೋಲುಪರಾಗಿ ಭಗವದ್ಭಕ್ತ್ಯಾದಿ ಸದ್ಗುಣಗಳಿಂದ ಯುಕ್ತರಾಗಿರುತ್ತಾರೆ; ತಮೋಯೋಗ್ಯರು ಸಂಸಾರಾವಸ್ಥೆಯಲ್ಲಿ ಕೂಡ ವಿಷ್ಣು ಮಾಹಾತ್ಮ್ಯವನ್ನು ತಿಳಿಯಲಾರದೆ, ಪರಬ್ರಹ್ಮನನ್ನು ಅವಮಾನಮಾಡುತ್ತಾರೆ ಎಂದು ಸಿದ್ಧವಾಯಿತು. ಶ್ರೀಕೃಷ್ಣನು ಅಂಥಾ ದುರ್ಜನರ ಅಭಿಲಾಷೆಗಳೊಂದೂ ಕೈಗೂಡಲಾರದೆಂದು ಸ್ಪಷ್ಟವಾಗಿ ಹೇಳಿರುತ್ತಾನೆ. ಈ ಉಭಯವಿಧ ಚೇತನರನ್ನೂ ಕಂಡುಹಿಡಿಯುವುದಕ್ಕೆ ನಾವು ಬಹುದೂರ ಹೋಗಬೇಕಾಗಿಲ್ಲ. ಯೋಗಿಗಳಿಗೂ ಬಹು ಪ್ರಯತ್ನದಿಂದ ಗಮ್ಯನಾದ ಸಾಕ್ಷಾಜ್ಜಗನ್ನಾಥನು ತಾನೇ ರಾಯಭಾರಿಯಾಗಿ ಬಂದು, ವಿಶ್ವರೂಪವನ್ನು ತೋರಿಸಿದರೂ ಸಹ ವಿಮೂಢನಾದ ದುರ್ಯೋಧನನು ಅವನ ದಿವ್ಯವಾದ ಅಪ್ರಾಕೃತಸ್ವರೂಪವನ್ನು ತಿಳಿಯಲಾರದೆ, ಹದಿನಾಲ್ಕು ಲೋಕಗಳನ್ನೂ ಕರ್ಮಬಂಧದಲ್ಲಿ ಬಿಗಿದಿರುವ ಪರಬ್ರಹ್ಮನನ್ನು ಮಾರುದ್ದ ಸೆಣಬಿನ ಹಗ್ಗದಿಂದ ಬಂಧಿಸುವುದಕ್ಕೆ ಯತ್ನಮಾಡಿದನು; ಮತ್ತು ಯುದ್ಧಭೂಮಿಯಲ್ಲಿಯೂ ಸಹ ಅವ್ಯಯನಾದ ಶ್ರೀಕೃಷ್ಣನ ನಾಶವನ್ನು ಇಚ್ಛೈಸಿದನು. ಈ ಲಕ್ಷಣಗಳಿಂದಲೇ ದುರ್ಯೋಧನಾದಿಗಳು ಅಸುರಸ್ವಭಾವವನ್ನು ಹೊಂದಿದ ತಮೋಯೋಗ್ಯರೆಂದು ನಿಶ್ಚಯಿಸಬಹುದು. ಇತಿಹಾಸ, ಪುರಾಣಗಳಲ್ಲಿಯೂ ಕೂಡ ಕಲ್ಯಾದಿ ದೈತ್ಯರೇ ದುರ್ಯೋಧನಾದಿಗಳಾಗಿ ಹುಟ್ಟಿದ್ದರೆಂದು ಸ್ಪಷ್ಟ ವಚನಗಳಿರುತ್ತವೆ.

ಕೃಷ್ಣಭಕ್ತರಾದ ಅರ್ಜುನಾದಿ ಪಾಂಡವರಾದರೋ, ಶ್ರೀಕೃಷ್ಣನ ದಿವ್ಯ ಪ್ರಭಾವವನ್ನು ತಿಳಿದವರಾದುದರಿಂದ, ದೈವೀಪ್ರಕೃತಿಯನ್ನು ಆಶ್ರಯಿಸಿದವರೆಂದು ನಿಶ್ಚಿತವಾಗುವುದು. ಅರ್ಜುನನು ಶ್ರೀಕೃಷ್ಣನನ್ನು ಪರಬ್ರಹ್ಮನೆಂದೇ ಕರೆದಿರುವನು.—

(19) **ಪರಂಬ್ರಹ್ಮಪರಂಧಾಮ ಪವಿತ್ರಂ ಪರಮಂಭವಾನ್**—(10. 12.)

ಹೇ ಸ್ವಾಮಿ! ನೀನು ಪರಬ್ರಹ್ಮನು, ಉತ್ತಮಾಶ್ರಯನು, ಪವಿತ್ರನು, ಸರ್ವೋತ್ತಮನು. ಶ್ರೀಕೃಷ್ಣನೂ ಕೂಡ,

(20) **ಸಂಪದಂದೈವೀಮಭಿಜಾತೋಽಸಿಪಾಂಡವ ।**—(16. 5.)

ಎಂದರೆ ನೀನು ಮುಕ್ತಿಯೋಗ್ಯ ಸ್ವಭಾವವನ್ನು ಹೊಂದಿದವನು; ಎಂದು ಹೇಳಿರುತ್ತಾನೆ.

ಈ ರೀತಿಯಾಗಿ ತ್ರಿವಿಧಚೇತನರು, ಅವರ ಬ್ರಹ್ಮಜ್ಞಾನ ವೈಲಕ್ಷಣ್ಯವು ಆಹಾರ, ಶ್ರದ್ಧಾದಿ ಸ್ವಾಭಾವಿಕ ಧರ್ಮವೈಚಿತ್ರ್ಯವು ಮತ್ತು ಅವರಿಗಾಗುವ ಫಲ ಭೇದವೂ ಸಹ ನಿರೂಪಿಸಲ್ಪಟ್ಟಿತು.

5

ಇನ್ನು "ಉಚ್ಚ" ಚೇತನರ ತಾರತಮ್ಯವನ್ನು ಶ್ರೀಕೃಷ್ಣನ ವಾಕ್ಯಗಳಿಂದ ಸಾಧಿಸಬೇಕಾಗಿರುವುದು. ಅಭೀಷ್ಟತತ್ವಗಳನ್ನು ಕೊಡುವುದರಲ್ಲಿ ಕಲ್ಪವೃಕ್ಷದೋಪಾದಿಯಲ್ಲಿರುವ ಹದಿನೈದನೆಯ ಅಧ್ಯಾಯದ ಅಂತ್ಯಶ್ಲೋಕಗಳು ಪುರುಷೋತ್ತಮನಾದ ಶ್ರೀಕೃಷ್ಣನು ಚೇತನ ತಾರತಮ್ಯಕ್ಕೆ ಮೂರ್ಧನ್ಯಸ್ಥಾನದಲ್ಲಿ ಇರುವವನೆಂದು ನಿರೂಪಿಸುತ್ತವೆ. ಮತ್ತು ಇವೇ ವಾಕ್ಯಗಳಿಂದ ಕೂಟಸ್ಥಳಾದ ಅವ್ಯಾಕೃತಾಕಾಶಾಭಿಮಾನಿಯಾದ ಲಕ್ಷ್ಮೀದೇವಿಯು ಪರಮಾತ್ಮನಿಗಿಂತ ಅವರಳು ಎಂದೂ ಮತ್ತು ಉತ್ಪನ್ನಶರೀರವುಳ್ಳ ಬ್ರಹ್ಮಾದಿ ದೇವತೆಗಳು ಆಕೆಗಿಂತಲೂ ಅಧಮರೆಂದೂ ಸಿದ್ಧವಾಗುವುದು.

(1) **ದ್ವಾವಿಮೌಪುರುಷೌಲೋಕೇಕ್ಷರಶ್ಚಾಕ್ಷರ ಏವಚ ।**
ಕ್ಷರಃಸರ್ವಾಣಿಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ।
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
—(15. 16-17.)

ಈ ವಾಕ್ಯಗಳಿಂದ ಸರ್ವ ಚೇತನೋತ್ತಮನು ಪರಮ ಚೇತನನಾದ ಶ್ರೀಮನ್ನಾರಾಯಣನೆಂದು ಸಿದ್ಧಿಸುವುದು.

(2) **ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇ**
ಪ್ಯಪ್ರತಿಮಪ್ರಭಾವ ।—(11. 43.)

(3) **ಮತ್ತಃ ಪರತರಂನಾನ್ಯತ್ಕಿಂಚಿದಸ್ತಿ ಧನಂಜಯ ।**—(7. 7.)

(4) **ಯೋ ಬುದ್ಧೇಃ ಪರತಸ್ತುಸಃ ।**—(3. 42.)

ಎಂಬ ವಾಕ್ಯಗಳಿಂದಲೂ ಪ್ರಪಂಚದಲ್ಲಿರುವ ಸಕಲ ಚೇತನರಿಗಿಂತಲೂ ಪರಮಾತ್ಮನು ಶ್ರೇಷ್ಠನು ಎಂದು ಸಿದ್ಧವಾಗುವುದು.

ಪರಮಾತ್ಮಾತಿರಿಕ್ತ ಸರ್ವಚೇತನರಿಗಿಂತಲೂ ಲಕ್ಷ್ಮೀದೇವಿಯು ಶ್ರೇಷ್ಠಳೆಂತಲೂ ಈ ಪ್ರಕರಣದಲ್ಲಿಯೇ ಇರುವುದು.

(5) **ಯಸ್ಮಾತ್ಕ್ಷರಮತೀತೋಽಹಮಕ್ಷರಾದಪಿಚೋತ್ತಮಃ ।**

(15. 18.)

ಎಂಬಲ್ಲಿ ಶ್ರೀಕೃಷ್ಣನು ನಾನು ಕ್ಷರಪುರುಷರಿಗಿಂತ ಉತ್ತಮನು; **ಅಕ್ಷರಾದಪಿ** ಎಂದರೆ ಅಕ್ಷರಪುರುಷಳಿಗಿಂತಲೂ ಕೂಡ ಉತ್ತಮನು ಎಂದು ನಿರೂಪಿಸುವಾಗ, ಲಕ್ಷ್ಮೀದೇವಿಯು ಕ್ಷರಪುರುಷಳಿಗಿಂತ ಉತ್ತಮಳೆಂಬುದನ್ನು ಸೂಚಿಸಿರುತ್ತಾನೆ.

(6) **ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿಮೇಪರಾಂ ।**
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ
ಜಗತ್ ।—(7. 5.)

ಈ ವಾಕ್ಯದಲ್ಲಿ ಚೇತನಪ್ರಕೃತಿಯು ಭಗವದಧೀನಳಾಗಿಯೂ, ಸರ್ವತತ್ವಾಭಿಮಾನಿದೇವತೆಗಳಿಗಿಂತ ಶ್ರೇಷ್ಠಳಾಗಿಯೂ ಇರುವಳೆಂದು ಸ್ಪಷ್ಟವಾಗಿ ಹೇಳಿರುವುದು. "ಕ್ಷೇತ್ರ ಕ್ಷೇತ್ರಜ್ಞಸಂಯೋಗಾತ್" "ಮಮಯೋನಿರ್ಮಹದ್ಬ್ರಹ್ಮ" "ಬ್ರಹ್ಮಭೂಯಾಯಕಲ್ಪತೇ" "ಬ್ರಹ್ಮಣೋಹಿ ಪ್ರತಿಷ್ಠಾಹಂ" ಇತ್ಯಾದಿ ಸ್ಥಳಗಳಲ್ಲಿ ಲಕ್ಷ್ಮೀದೇವಿಯು ಜಗನ್ಮಾತೆಯೆಂತಲೂ, ಆಕೆಯ ದ್ವಾರಾ ಸರ್ವರಿಗೂ ಮುಕ್ತಿಯಾಗುವುದೆಂತಲೂ, ಬ್ರಹ್ಮಾದಿ ಸರ್ವ ಜೀವರುಗಳಿಗಿಂತ ಆಕೆಯು ಉತ್ತಮಳೆಂಬಲ್ಲಿ ಯುಕ್ತಿಸಹಿತವಾಗಿ ಹೇಳಲ್ಪಟ್ಟಿರುವುದು, ಆದುದರಿಂದಲೇ,

(7) **ಯೋ ಬುದ್ಧೇಃಪರತಸ್ತುಸಃ ।**—(3. 42.)

ಎಂಬ ಶ್ಲೋಕದಲ್ಲಿ ಪರಮಾತ್ಮನು ಬುದ್ಧಿನಾಮಕ ಸರಸ್ವತೀದೇವಿಗಿಂತ ಉತ್ತಮನು ಎಂದು ಹೇಳಿದ್ದರೂ, ಬುದ್ಧಿಗಿಂತ ಬುದ್ಧಿಪತಿಯಾದ ಬ್ರಹ್ಮದೇವರು ಉತ್ತಮರು; ಬ್ರಹ್ಮದೇವರಿಗೂ ತಾಯಿಯಾದ ಲಕ್ಷ್ಮೀದೇವಿಯು ಬ್ರಹ್ಮದೇವನಿಗಿಂತ ಉತ್ತಮಳು ಎಂದು (ಏಳನೆಯದೇ ಮೊದಲಾದ ಅಧ್ಯಾಯ ಶ್ಲೋಕಗಳ ಬಲದಿಂದ), ಅಧ್ಯಾಹಾರಮಾಡಿ ಅಂಥಾ ಅವ್ಯಕ್ತನಾಮಕ ಲಕ್ಷ್ಮೀದೇವಿಗಿಂತ ಪರತಃ= ಶ್ರೇಷ್ಠನಾದವನು, ಸಃ= ಪರಬ್ರಹ್ಮನು (ಶ್ರೀ ಕೃಷ್ಣನು) ಎಂದು

ಯೋಜನೆಯನ್ನು ಮಾಡಬೇಕು. ಈ ಗೀತಾವಾಕ್ಯಕ್ಕೆ ಮೂಲಭೂತವಾದ ಕಾಠಕಶ್ರುತಿಯೂ ಕೂಡ ಹೀಗೆಯೇ ಅರ್ಥಮಾಡಬೇಕೆಂದು ನಿಶ್ಚಯಮಾಡುವುದರಲ್ಲಿ ಸಹಾಯವಾಗಿರುತ್ತದೆ.

ಬುದ್ಧೇರಾತ್ಮಾ ಮಹಾನ್ ಪರಃ ಮಹತಃ ಪರಮವ್ಯಕ್ತಂ ಅವ್ಯಕ್ತಾತ್ಪುರುಷಃಪರಃ। ಪುರುಷಾನ್ನಪರಂಕಿಂಚಿತ್ ಸಾಕಾಷ್ಠಾಸಾಪರಾಗತಿಃ ॥

ಅರ್ಥವು :—ಬುದ್ಧಿಗಿಂತ (ಬುದ್ಧಿತತ್ವಾಭಿಮಾನಿಯಾದ ಸರಸ್ವತೀದೇವಿಗಿಂತ) ಮಹತ್ತತ್ವಾಭಿಮಾನಿಯಾದ ಬ್ರಹ್ಮದೇವರು ಶ್ರೇಷ್ಠರು. ಮಹತ್ತತ್ವಾಭಿಮಾನಿಯಾದ ಬ್ರಹ್ಮದೇವರಿಗಿಂತ ಅವ್ಯಕ್ತತತ್ವಾಭಿಮಾನಿಯಾದ ಲಕ್ಷ್ಮೀದೇವಿಯು ಶ್ರೇಷ್ಠಳು; ಅವ್ಯಕ್ತನಾಮಕ ಲಕ್ಷ್ಮೀದೇವಿಗಿಂತ ಪರಬ್ರಹ್ಮನು ಶ್ರೇಷ್ಠನು. ಪರಬ್ರಹ್ಮನಿಗಿಂತ ಶ್ರೇಷ್ಠರು ಯಾರೂ ಇಲ್ಲ. ಅವನೇ ತಾರತಮ್ಯಕ್ಕೆ ಕೊನೆಯ ಅವಧಿಯು; ಅತ್ಯುತ್ತಮನಾದಗಮ್ಯನು. ವಿಷ್ಣುವಿಗಿಂತ ಭಿನ್ನನಾದ ಮತ್ತು ಶ್ರೇಷ್ಠನಾದ ನಿರ್ಗುಣಬ್ರಹ್ಮನು ಇಲ್ಲವೆಂದೂ ಈ ಗೀತಾವಾಕ್ಯದಿಂದ ಸಿದ್ಧವಾಗುವುದು. ಹೇಗೆಂದರೆ—"ಬುದ್ಧೇಃ ಪರತಸ್ತು ಸಃ" ಎಂಬ ವಾಕ್ಯದಲ್ಲಿ ಶ್ರೀಕೃಷ್ಣನು ಸರ್ವದೇವತೆಗಳಿಂದಲೂ ತಾನೇ ಶ್ರೇಷ್ಠನೆಂದು ನಿರೂಪಿಸಿದನು. ಆ ಗೀತಾವಾಕ್ಯಕ್ಕೆ ಮೂಲಭೂತವಾದ ಶ್ರುತಿಯು ಇನ್ನೂ ಸ್ಪಷ್ಟವಾಗಿ "ಪುರುಷಾನ್ನ ಪರಂ ಕಿಂಚಿತ್" ಎಂದರೆ ಪೂರ್ಣನಾದ ವಿಷ್ಣುವಿಗಿಂತ ಅಧಿಕವಸ್ತುವು ಮತ್ತೊಂದು ಇಲ್ಲ ಎಂದು ಹೇಳಿ "ಸಾಪರಾಗತಿಃ", ಅವನೇ ಪರಮಗತಿಯು ಎಂದು ಹೇತುಗರ್ಭವಾದ ಸ್ತುತಿಯನ್ನು ಮಾಡಿರುವುದು. ಪುರುಷನಾಮಕ ವಿಷ್ಣುವೇ ಮೋಕ್ಷದಲ್ಲಿ ಗಮ್ಯನು ಎಂದರ್ಥವು. ಮುಕ್ತಿಪ್ರಾಪ್ಯನಷ್ಟೇ ಪರಬ್ರಹ್ಮನು! ಆದುದರಿಂದ ಮುಕ್ತಿಗಮ್ಯನಾದ ಶ್ರೀ ಕೃಷ್ಣನೇ ಸರ್ವಶ್ರೇಷ್ಠನಾದ ಪರಬ್ರಹ್ಮನೆಂದು ನಿರ್ಣಯಿಸಬೇಕು.

ಈ ರೀತಿಯಲ್ಲಿ ತಾರತಮ್ಯದಲ್ಲಿ ಸರ್ವಶ್ರೇಷ್ಠನು ವಿಷ್ಣುವು; ನಂತರ ಲಕ್ಷ್ಮೀದೇವಿಯು, ನಂತರ ಬ್ರಹ್ಮದೇವರು, ನಂತರ ಸರಸ್ವತೀದೇವತೆಯು ಕ್ರಮವಾಗಿ ಅವರರೆಂದು ನಿಶ್ಚಿತವಾಗುವುದು.*

---

* ಅಗ್ನಿರ್ವೈದೇವಾನಾಮವಮಃ ವಿಷ್ಣುಃಪರಮಃ।
ತದಂತರೇಣ ಅನ್ಯಾಃಸರ್ವಾದೇವತಾಃ ॥
ಎಂಬ ಶ್ರುತಿಯು ಈ ಅರ್ಥವನ್ನೇ ಬೋಧಿಸುವುದು.

(1) ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವಚ ।
ಇಂದ್ರಿಯಾಣಿ ದಶೈಕಂ ಚ ಪಂಚಚೇಂದ್ರಿಯಗೋಚರಾಃ ॥

—(13. 6,)

ಎಂಬಲ್ಲಿ ಶ್ರೀ ಕೃಷ್ಣನು ದೇವತೆಗಳನ್ನು ಅವರಿಂದ ಅಭಿಮನ್ಯವಾದ ತತ್ವದ ನಾಮಗಳಿಂದ ಸಾಮಾನ್ಯವಾಗಿ ನಿರ್ದೇಶಮಾಡಿರುತ್ತಾನೆ. "ಭೂತಂ ಭೂತಾಭಿಮಾನೀ ಚ ತದ್ದೇಹೋಽಂತರ್ನಿಯಾಮಕಃ" ಇತ್ಯಾದಿ ಶ್ಲೋಕೋಕ್ತ ನ್ಯಾಯಾನುಸಾರವಾಗಿ ಪ್ರತಿಯೊಂದು ಶಬ್ದವೂ **ಮುಖ್ಯವಾಗಿ ಚೇತನನನ್ನು ಬೋಧಿಸುವುದು;** ಅಮುಖ್ಯವಾಗಿ ಜಡವನ್ನು ಬೋಧಿಸುವುದು; ಆದುದರಿಂದ ಇಪ್ಪತ್ತುನಾಲ್ಕು ತತ್ವಗಳನ್ನು ನಿರ್ದೇಶಮಾಡಿರುವ ಈ ಶ್ಲೋಕಗಳಲ್ಲಿ ಆಯಾಯ ತತ್ವಾಭಿಮಾನಿ ದೇವತೆಗಳಿಂದ ಸಹಿತವಾದ ಜಡತತ್ವರಾಶಿಗಳನ್ನು ಮಹಾ ಭೂತಾದಿ ಪದಗಳಿಂದ ತೆಗೆದುಕೊಳ್ಳಬೇಕು.* ಆದುದರಿಂದ ಶ್ಲೋಕಾರ್ಥವು ಶ್ರೀಮದಾಚಾರ್ಯರಿಂದ ಸಪ್ರಮಾಣವಾಗಿ ಹೀಗೆ ನಿರೂಪಿತವಾಗಿರುವುದು.

ಕ್ಷೇತ್ರವು ಪಂಚಮಹಾಭೂತಗಳು, ಅಹಂಕಾರತತ್ವವು, ಬುದ್ಧಿತತ್ವವು, ಅವ್ಯಕ್ತತತ್ವವು, ಹತ್ತು ಇಂದ್ರಿಯತತ್ವಗಳು, ಪಂಚತನ್ಮಾತ್ರಗಳು ಹೀಗೆ ಇಪ್ಪತ್ತುನಾಲ್ಕು ರೂಪವಾಗಿರುವುದು. ಭಗವನ್ನಿವಾಸಭೂತರಾದುದರಿಂದಲೂ, ಜಡಕ್ಷೇತ್ರಾಭಿಮಾನಿಗಳಾದುದರಿಂದಲೂ ಕ್ಷೇತ್ರಶಬ್ದವಾಚ್ಯರಾದ ತತ್ವಾಭಿಮಾನಿ ದೇವತೆಗಳು ಯಾರೆಂದರೆ :—

1. ಪೃಥಿವೀ ಅಭಿಮಾನಿಯು ಭೂದೇವತೆಯು; 2. ಅಬಭಿಮಾನಿಯು ವರುಣನು; 3. ತೇಜಸ್ತತ್ವಾಭಿಮಾನಿಯು ಅಗ್ನಿಯು; 4. ವಾಯ್ವಭಿಮಾನಿ ದೇವತೆಯು ಮುಖ್ಯ ವಾಯುಪುತ್ರನಾದ ಮರೀಚಿವಾಯುವು; 5. ಆಕಾಶಾಭಿಮಾನಿಯು ಗಣೇಶನು; 6-10. ಶಬ್ದಾದಿ ಪಂಚತನ್ಮಾತ್ರಗಳಿಗೆ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನರೆಂಬ ಪಂಚಮರುತ್ತುಗಳು ಅಭಿಮಾನಿಗಳು; 11. ಶ್ರೋತ್ರಾಭಿಮಾನಿಯು ಚಂದ್ರನು ಮತ್ತು ದಿಗ್ದೇವತೆಗಳು; 12. ಚಕ್ಷುರಭಿ

---

*ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಂ ।

ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ಈ ವಿಷಯವು ನಿರ್ಣೀತವಾಗಿರುವುದು. "**ಯಃ ಪೃಥಿವ್ಯಾಂ ತಿಷ್ಠನ್**" ಎಂಬುದೇ ಮೊದಲಾದ ಬೃಹದಾರಣ್ಯಕ ಶ್ರುತಿಯಲ್ಲಿ ಪೃಥಿವ್ಯಾದಿಪದಗಳಿಂದ ಭೂದೇವತೆಯೇ ಮೊದಲಾದ ದೇವತೆಗಳನ್ನು ತೆಗೆದುಕೊಳ್ಳಬೇಕೆಂದು ಶಂಕರಾಚಾರ್ಯರೂ ಸಹ ಅರ್ಥಮಾಡಿರುವರು.

ಮಾನಿಯು ಸೂರ್ಯನು; 13. ಸ್ಪರ್ಶೇಂದ್ರಿಯಾಭಿಮಾನಿಯು ಅಹಂಕಾರ ಪ್ರಾಣನೆಂಬ ವಾಯುಪುತ್ರನು; 14. ರಸನೇಂದ್ರಿಯಾಭಿಮಾನಿಯು ವರುಣನು; 15. ಘ್ರಾಣಾಭಿಮಾನಿಗಳು ಅಶ್ವಿನೀದೇವತೆಗಳು; 16. ವಾಗಿಂದ್ರಿಯಾಭಿಮಾನಿಯು ಅಗ್ನಿಯು; 17. ಹಸ್ತಾಭಿಮಾನಿಯು ದಕ್ಷನು, ಮತ್ತು ವಾಯುಸುತರಾದ ಮರುತ್ತುಗಳು; 18. ಪಾದಾಭಿಮಾನಿಗಳು ವಿಷ್ಣುವಿನ ಆವೇಶಸಹಿತರಾದ ಯಜ್ಞ, ಶಂಭುನಾಮಕರಾದ ಶಚೀಪುತ್ರರು; 19. ಪಾಯು ಇಂದ್ರಿಯಾಭಿಮಾನಿಯು ಯಮನು; 20. ಉಪಸ್ಥೇಂದ್ರಿಯಾಭಿಮಾನಿಯು ಮಹಾದೇವರು; 21. ಮನಸ್ತತ್ವಾಭಿಮಾನಿಯು ಇಂದ್ರ, ಕಾಮಾನಿರುದ್ಧಾದಿಗಳು; 22. ಅಹಂಕಾರತತ್ವಾಭಿಮಾನಿದೇವತೆಯೂ ಮಹಾದೇವರು; 23. ಮಹತ್ತತ್ವಾಭಿಮಾನಿಯು ಚತುರ್ಮುಖಬ್ರಹ್ಮದೇವರು; 24. ಅವ್ಯಕ್ತತತ್ವಾಭಿಮಾನಿದೇವತೆಯು ಲಕ್ಷ್ಮೀದೇವಿಯು ಹೀಗೆ ಇಪ್ಪತ್ತುನಾಲ್ಕು ತತ್ವಾಭಿಮಾನಿದೇವತೆಗಳೂ ಕ್ಷೇತ್ರಶಬ್ದ ವಾಚ್ಯರಾಗಿರುವರು. ಮತ್ತು ಕ್ಷೇತ್ರವಿಕಾರಗಳಾದ ಇಚ್ಛಾ, ದ್ವೇಷ, ಸುಖ, ದುಃಖ, ಸಂಘಾತ (ದೇಹ), ಚೇತನಾ (ಚಿತ್ತವ್ಯಾಪ್ತಿ), ಧೃತ್ಯಾದಿಗಳಿಗೂ **ನಿಯಾಮಕರಾದುದರಿಂದ** ವಿಕಾರಶಬ್ದವಾಚ್ಯರಾಗಿರುವರು. ಆದುದರಿಂದ,

(9) **ಏತತ್ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಂ** |—(13. 7.)

ಎಂಬ ಶ್ಲೋಕಕ್ಕೆ ಈ ರೀತಿಯಾಗಿ ಅರ್ಥಮಾಡಬೇಕು.—ಎಲೈ ಅರ್ಜುನನೇ! ಇಪ್ಪತ್ತುನಾಲ್ಕು ಭಗವನ್ನಿವಾಸಭೂತರಾದ, ಮತ್ತು ಪಂಚಭೂತಾದಿತತ್ವನಿಯಾಮಕರಾದ ದೇವತೆಗಳು, ಇಚ್ಛಾದಿ ವಿಕಾರನಿಯಾಮಕರಾದ ದೇವತೆಗಳಿಂದ ಸಹಿತವಾಗಿ ನನ್ನಿಂದ ನಿನಗೆ ನಿರೂಪಿಸಲ್ಪಟ್ಟಿತು: ಮತ್ತು 2. ಇಪ್ಪತ್ತುನಾಲ್ಕು ತತ್ವಗಳು ಇಚ್ಛಾದ್ವೇಷಾದಿವಿಕಾರಗಳಿಂದ ಸಹಿತವಾಗಿ ನನ್ನಿಂದ ನಿನಗೆ ನಿರೂಪಿಸಲ್ಪಟ್ಟಿತು. ಈ ರೀತಿಯಾಗಿಯೇ ಅರ್ಥಮಾಡಬೇಕೆಂದು **ತದಧೀನತ್ವಾದರ್ಥವತ್; ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಂ** ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ನಿರ್ಣೀತವಾಗಿರುವುದು.

ಇದೇ ರೀತಿಯಲ್ಲಿ ಈ ಕೆಳಗೆ ಉದಾಹೃತವಾದ ಏಳನೆಯ ಅಧ್ಯಾಯದ ಶ್ಲೋಕಗಳಿಂದಲೂ ದೇವತಾಸಮುದಾಯವನ್ನು ತಿಳಿಯಬಹುದು.

(10) **ಭೂಮಿರಾಪೋಽನಲೋವಾಯುಃ ಖಂಮನೋಬುದ್ಧಿರೇವಚ।**
ಅಹಂಕಾರ ಇತೀಯಂಮೇಭಿನ್ನಾಪ್ರಕೃತಿರಷ್ಟಧಾ ॥

—(7. 4.)

ಈ ಶ್ಲೋಕಗಳಿಂದ ಅನೇಕ ದೇವತಾಸದ್ಭಾವವು ಸಿದ್ಧವಾದರೂ ಅವರುಗಳ ಪರಸ್ಪರ ತಾರತಮ್ಯವು ಸ್ಪಷ್ಟವಾಗುವದಿಲ್ಲ. ಹತ್ತು, ಹನ್ನೊಂದನೆಯ ಅಧ್ಯಾಯಗಳಿಂದ ಇಂದ್ರನು ದೇವಶ್ರೇಷ್ಠನೆಂದು ಆಪಾತತಃ ತೋರುವುದು.

(11) 1. **ದೇವಾನಾಮಸ್ಮಿವಾಸವಃ ||**—(10. 22.)

ದೇವತೆಗಳಲ್ಲಿ ಇಂದ್ರನಿಗೆ ಆಧಿಕ್ಯಪ್ರದನಾಗಿ ನಾನು ಇಂದ್ರನಲ್ಲಿದ್ದೇನೆ.

2. **ಮಯಾಪ್ರಸನ್ನೇನತವಾರ್ಜುನೇದಂ ರೂಪಂಪರಂದ ರ್ಶಿತಮಾತ್ಮಯೋಗಾತ್ |**
...............ಯನ್ಮೇತ್ವದನ್ಯೇನ ನ ದೃಷ್ಟಪೂರ್ವಂ ||
ನವೇದಯಜ್ಞಾಧ್ಯಯನೈರ್ನದಾನೈರ್ನಚಕ್ರಿಯಾಭಿರ್ನತಪೋಭಿರುಗ್ರೈಃ|
ಏವಂರೂಪಶ್ಶಕ್ಯ ಅಹಂನೃಲೋಕೇದ್ರಷ್ಟುಂತ್ವದನ್ಯೇನ ಕುರುಪ್ರವೀರ |—(11. 47-48.)

ಎಲೈ ಅರ್ಜುನನೇ! ನಿನ್ನ ವಿಷಯದಲ್ಲಿ ಪ್ರಸನ್ನನಾದ ನಾನು ನಿನ್ನ ಹೊರತು ಯಾರೂ ನೋಡದಿರುವ ಈ ರೂಪವನ್ನು ನನ್ನ ಸ್ವರೂಪಭೂತವಾದ ಸಾಮರ್ಥ್ಯದಿಂದ ನಿನಗೆ ತೋರಿಸಿರುತ್ತೇನೆ. ಎಲೈ ಕುರುಶ್ರೇಷ್ಠನೇ! ವೇದಾಧ್ಯಯನದಿಂದಲಾಗಲೀ, ಯಜ್ಞಾದಿ ಇತರ ಸಾಧನಗಳಿಂದಾಗಲೀ ಈ ರೂಪವುಳ್ಳ ನನ್ನನ್ನು ನಿನ್ನ ಹೊರತು ಇತರರು ನೋಡುವುದಕ್ಕೆ ಶಕ್ತರಲ್ಲ.

ಈ ವಾಕ್ಯಗಳಿಂದ ಅರ್ಜುನನು ಎಂದರೆ ಇಂದ್ರನು ಸರ್ವ ದೇವತೆಗಳಿಗಿಂತ ಶ್ರೇಷ್ಠನೆಂದು ತೋರುವುದು. ಆದರೆ ಮನಸ್ತತ್ವಾಭಿಮಾನಿಯಾದ ಇಂದ್ರನು ಇತರ ಸರ್ವ ದೇವತೆಗಳಿಗಿಂತಲೂ ಶ್ರೇಷ್ಠನಾದರೂ, ಮಹದಹಂಕಾರಾದಿತತ್ವಾಭಿಮಾನಿಗಳಾದ ಬ್ರಹ್ಮರುದ್ರರು ಮತ್ತು ಅವರ ಪತ್ನಿಯರಿಗಿಂತಲೂ ಅಧಮನೆಂಬುದು ದೇವತಾತಾರತಮ್ಯವನ್ನು ನಿರೂಪಿಸುವ ತೃತೀಯಾಧ್ಯಾಯದ ಅಂತ್ಯ ಶ್ಲೋಕಗಳಿಂದ ವ್ಯಕ್ತವಾಗುವುದು.

(12) **ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ |**
ಮನಸಸ್ತು ಪರಾಬುದ್ಧಿರ್ಯೋಽಬುದ್ಧೇಃ ಪರತಸ್ತುಸಃ ||
(3. 42.)

ಇಲ್ಲಿ, ಇಂದ್ರಿಯಾಭಿಮಾನಿ ದೇವತೆಗಳಿಗಿಂತ ಮನೋಽಭಿಮಾನಿದೇವತೆಗಳು ಶ್ರೇಷ್ಠರು ಎಂದು ಇದ್ದರೂ, ಇದಕ್ಕೆ ಮೂಲಭೂತವಾದ ಕಾಠಕಶ್ರುತ್ಯನು

ಸಾರವಾಗಿ "ಇಂದ್ರಿಯೇಭ್ಯಃ ಪರಾಹ್ಯರ್ಥಾಃ ಅರ್ಥೇಭ್ಯಶ್ಚ ಪರಂಮನಃ" ಎಂದು ಅಧ್ಯಾಹಾರಪೂರ್ವಕವಾಗಿ ಶ್ಲೋಕಾರ್ಥವನ್ನು ಯೋಜನೆಮಾಡಬೇಕು. :—ಶರೀರಮಾನಿದೇವತೆಗಳಿಗಿಂತ ಇಂದ್ರಿಯಾಭಿಮಾನಿದೇವತೆಗಳು (ಚಂದ್ರಾದಿಗಳು) ಶ್ರೇಷ್ಠರು. ಇಂದ್ರಿಯಾಭಿಮಾನಿದೇವತೆಗಳಿಗಿಂತ ಅರ್ಥಾಭಿಮಾನಿಗಳಾದ ಸೌಪರ್ಣೀವಾರುಣೀ ಪಾರ್ವತೀಶಚ್ಯಾದಿಗಳು ಶ್ರೇಷ್ಠರು. ಇವರುಗಳಿಗಿಂತ ಮನೋಭಿಮಾನಿಗಳಾದ ಗರುಡಶೇಷ, ರುದ್ರೇಂದ್ರಾದಿಗಳು ಶ್ರೇಷ್ಠರು. ಮನೋಽಭಿಮಾನಿದೇವತೆಗಳಿಗಿಂತ ಬುದ್ಧಿಗೆ ಅಭಿಮಾನಿಯಾದ ಸರಸ್ವತಿಯು ಶ್ರೇಷ್ಠಳು. ಬುಧ್ಯಭಿಮಾನಿಗಿಂತ ಮಹತ್ತತ್ವಾಭಿಮಾನಿಯಾದ ಚತುರ್ಮುಖ ಬ್ರಹ್ಮದೇವರು ಶ್ರೇಷ್ಠರು. ಮಹತ್ತತ್ವಾಭಿಮಾನಿಗಿಂತ ಅವ್ಯಕ್ತತತ್ವಾಭಿಮಾನಿಯಾದ ಲಕ್ಷ್ಮೀದೇವಿಯು ಶ್ರೇಷ್ಠಳು. ಅವ್ಯಕ್ತಾಭಿಮಾನಿಗಿಂತ ಪರಬ್ರಹ್ಮನು ಶ್ರೇಷ್ಠನು.

ಈ ರೀತಿಯಾಗಿ ವಿಷ್ಣುವು, ಲಕ್ಷ್ಮೀದೇವಿಯು, ಚತುರ್ಮುಖಬ್ರಹ್ಮದೇವರು, ಸರಸ್ವತೀದೇವಿಯು, ಗರುಡ ಶೇಷ ರುದ್ರರು, ಸೌಪರ್ಣೀ ವಾರುಣೀ ಪಾರ್ವತಿಗಳು, ಇಂದ್ರನು, ದಕ್ಷಾದಿ ದೇವತೆಗಳು ಕ್ರಮವಾಗಿ ಅವರೋಹಣ ಕ್ರಮದಲ್ಲಿ ತಾರತಮ್ಯೋಪೇತರೆಂದು ಪ್ರಾಪ್ತವಾಗುವುದು. ಹೀಗಿರುವುದರಿಂದ ಅರ್ಜುನನ್ನು ಕುರಿತು, "ನಿನ್ನ ಹೊರತು ಯಾರೂ ಈ ರೂಪವನ್ನು ನೋಡಲಾರರು" ಎಂಬ ಶ್ರೀಕೃಷ್ಣನ ಮಾತುಗಳಿಗೆ "ಬ್ರಹ್ಮ ರುದ್ರಾದಿ ಉತ್ತಮದೇವತೆಗಳು ವಿನಹ, ನಿನ್ನಿಂದ ಅಧಮರಾದ ದಕ್ಷಾದಿ ದೇವತೆಗಳು ನಿನಗೆ ನಾನು ತೋರಿಸಿರುವ ಈ ರೂಪವನ್ನು ನೋಡಲಾರರು" ಎಂದು ಅರ್ಥಮಾಡಬೇಕು. ಸ್ವರ್ಗಲೋಕಾಧಿಪತಿಯಾದ ಇಂದ್ರನಿಗೆ ಉಮಾದೇವಿಯು ಗುರುವೆಂಬುದು ಕೇನೋಪನಿಷತ್ತಿನಿಂದಲೇ ತಿಳಿದುಬರುವುದು. "ರುದ್ರಂ ಸಮಾಶ್ರಿತಾದೇವಾಃ ರುದ್ರೋಬ್ರಹ್ಮಾಣಮಾಶ್ರಿತಃ ಬ್ರಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂಕಂಚಿದುಪಾಶ್ರಿತಃ" ಎಂಬ ಅನ್ಯತ್ರೋಕ್ತ ಶ್ರೀಕೃಷ್ಣವಚನಗಳು ಸ್ಪಷ್ಟವಾಗಿಯೂ ತಾರತಮ್ಯವನ್ನು ನಿರೂಪಿಸುವುವು.

6.

ಒಬ್ಬನೇ ಈಶ್ವರನು ಬ್ರಹ್ಮ, ವಿಷ್ಣು, ರುದ್ರರೆಂಬ ಮೂರು ರೂಪಗಳನ್ನು, ಸೃಷ್ಟಿ ಸ್ಥಿತಿ ಸಂಹಾರರೂಪವಾದ ಕಾರ್ಯಭೇದವನ್ನು ನಿಮಿತ್ತಮಾಡಿಕೊಂಡು, ಹೊಂದಿರುವನೆಂದು ಅದ್ವೈತಿಗಳ ಮತವು. ತ್ರಿಮೂರ್ತಿಗಳಿಗೆ ಐಕ್ಯವನ್ನು ಹೇಳುವುದು ಬಹುಪ್ರಮಾಣಗಳಿಗೆ ವಿರುದ್ಧವು. 1. ತ್ರಿಮೂರ್ತಿಗಳು ಒಂದೇ ಚೇತನನ

ಮೂರು ರೂಪಗಳಾಗಿದ್ದರೆ, ಒಬ್ಬನಿಗೆ ಸುಖವಾದರೆ ತತ್ಕಾಲದಲ್ಲಿ ಮತ್ತಿಬ್ಬರಿಗೂ ಸುಖವಾಗಬೇಕು; ಒಬ್ಬನಿಗೆ ದುಃಖವಾದರೆ ಮತ್ತಿಬ್ಬರೂ ಅದೇ ದುಃಖವನ್ನು ಅನುಭವಿಸಬೇಕು. ಚೇತನೈಕ್ಯವು ಇದ್ದರೆ ಸುಖದುಃಖಭೋಗಸಾಂಕರ್ಯವು ಅವರ್ಜನೀಯವು.* 2. ಮತ್ತು ಪತ್ನೀಭೇದ, ವಾಸಸ್ಥಾನಗಳ ಭೇದ, ರುದ್ರಾದಿಗಳ ಸೇವೆಯಿಂದ ಅಲ್ಪ ಫಲ ಮತ್ತು ವಿಷ್ಣುಪೂಜೆಯಿಂದ ಮೋಕ್ಷಫಲ ಹೀಗೆ ಪ್ರಾಪ್ತವಾಗುವ ಫಲಭೇದ, ಬ್ರಹ್ಮದೇವರಿಗೆ ವಿಷ್ಣುವಿನ ನಾಭಿಕಮಲದಿಂದ ಉತ್ಪತ್ತಿ, ರುದ್ರದೇವರಿಗೆ ಬ್ರಹ್ಮದೇವರ ಲಲಾಟದಿಂದ ಉತ್ಪತ್ತಿ ಇತ್ಯಾದಿಗಳನ್ನು ನಿರೂಪಿಸುವ ಶ್ರುತಿ, ಸ್ಮೃತಿ ಇತಿಹಾಸ ಪುರಾಣಗಳು ನಾರಾಯಣನ ಪುತ್ರ ಪೌತ್ರಸ್ಥಾನೀಯರಾದ ಬ್ರಹ್ಮರುದ್ರಾದಿಗಳಿಗೆ ನಾರಾಯಣೈಕ್ಯವನ್ನು ಒಡಂಬಡಲಾರವು. "ಬ್ರಹ್ಮಣಿ ಬ್ರಹ್ಮರೂಪೋಸೌ ಶಿವರೂಪೀ ಶಿವೇಸ್ಥಿತಃ" ಇತ್ಯಾದಿ ಪ್ರಮಾಣವಚನಗಳಿಂದ ನಾರಾಯಣನೇ ಚತುರ್ಮುಖಬ್ರಹ್ಮನಲ್ಲಿ ಬ್ರಹ್ಮನಾಮಕನಾಗಿಯೂ, ರುದ್ರನಲ್ಲಿ ರುದ್ರನಾಮಕನಾಗಿಯೂ ಒಂದೊಂದು ರೂಪಿನಿಂದ ಸ್ಥಿತನಾಗಿದ್ದು ಸೃಷ್ಟಿ ಸಂಹಾರರೂಪವಾದ ಕಾರ್ಯಗಳನ್ನು ನಿರ್ವಹಿಸುವನೆಂದು ತಿಳಿದುಬರುತ್ತದೆ. "ಗಾಮಾವಿಶ್ಯಚಭೂತಾನಿ ಧಾರಯಾಮ್ಯಹಮೋಜಸಾ" "ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ" ಇತ್ಯಾದಿ ಶ್ರೀಕೃಷ್ಣನ ವಾಕ್ಯಗಳೂ ಈ ವಿಷಯದಲ್ಲಿ ಪ್ರಮಾಣವಾಗಿರುತ್ತವೆ. ಮತ್ತು ಭಗವದ್ಗೀತೆಯಲ್ಲಿ ಆಸುರಮಾಯಾನಿವಾರಕವಾದ ಅಸ್ತ್ರವಿದ್ಯಾಪಾರಂಗತನಿಂದ ಪ್ರಯುಕ್ತವಾದ ವಿಜ್ಞಾನಾಸ್ತ್ರದಂತಿರುವ, ತ್ರಿಮೂರ್ತ್ಯೈಕ್ಯ ಭ್ರಮವನ್ನು ಪರಿಹರಿಸುವುದರಲ್ಲಿ ನಿಸ್ಸೀಮಶಕ್ತಿಯುಳ್ಳ, ಒಂದು ವಾಕ್ಯವು ದಿವ್ಯದೃಷ್ಟಿಯಿಂದ ಭಗವತ್ಸ್ವರೂಪವನ್ನು ಸಾಕ್ಷಾತ್ತಾಗಿ ನೋಡುತ್ತಿರುವ ಅರ್ಜುನನ ಮುಖದಿಂದ ಉದ್ಗತವಾಗಿರುವುದು. ಅರ್ಜುನನು ಹೇಳುತ್ತಾನೆ:—

---

* ಸ್ಥಾನಭೇದಾದಿಗಳು ಔಪಾಧಿಕವು, ವಸ್ತುತಃ ಚೈತನ್ಯವು ಒಂದೇ ಎಂದು ಹೇಳುವುದಾದರೆ ಈ ರೀತಿಯಲ್ಲಿ ಸರ್ವಜೀವೈಕ್ಯವನ್ನೂ ಅಂಗೀಕರಿಸಿರುವ ಅದ್ವೈತಿಗಳು, ತ್ರಿಮೂರ್ತ್ಯೈಕ್ಯವನ್ನು ಮಾತ್ರ ಹೇಳುವುದಕ್ಕೆ ಕಾರಣವಿರುವುದಿಲ್ಲ. ಯಾತಕ್ಕೆಂದರೆ ಅದ್ವೈತಮತದಲ್ಲಿ ಚೈತನ್ಯವು ಒಂದೇ; ಭೇದವು ಅಂತಃಕರಣರೂಪವಾದ ಉಪಾಧಿಭೇದದಿಂದ ಇರುವಂತೆ ತೋರುವುದು. ಹೀಗಿರುವಲ್ಲಿ ಸರ್ವೈಕ್ಯವನ್ನೂ ಒಪ್ಪಿ, ತ್ರಿಮೂರ್ತ್ಯೈಕ್ಯವನ್ನು ಮಾತ್ರ ಪ್ರತ್ಯೇಕವಾಗಿ ಶಾಸ್ತ್ರದಲ್ಲಿ ಪ್ರತಿಪಾದಿಸಿರುವುದರಿಂದ ಸೌಭರ್ಯಾದಿ ಋಷಿಗಳಿಗೆ ನಾನಾರೂಪಗಳು ಇರುವಂತೆ ವಿಷ್ಣು, ಬ್ರಹ್ಮ, ರುದ್ರರು, ಒಬ್ಬನೇ ಈಶ್ವರನ ಮೂರು ರೂಪಗಳೆಂದು ಅವರ ತಾತ್ಪರ್ಯವಿರಬೇಕು. ಹಾಗೆ ಹೇಳಿದರೆ ಸುಖದುಃಖಭೋಗಸಾಂಕರ್ಯಾದಿ ಪೂರ್ವೋಕ್ತ ದೋಷಗಳು ಬಂದೇ ಬರುವುವು.

(1) **ಪಶ್ಯಾಮಿದೇವಾಂಸ್ತವದೇವದೇಹೇ ಸರ್ವಾ೯............... ।**
ಬ್ರಹ್ಮಾಣಮೀಶಂಕಮಲಾಸನಸ್ಥಂ ಋಷೀಂಶ್ಚಸರ್ವಾನುರಗಾಂ ಶ್ಚದಿವ್ಯಾ೯ ।—(11. 15.)

ಎಲೈ ಸ್ವಾಮಿಯೇ! ನಿನ್ನ **ದೇಹದಲ್ಲಿ**, ಸರ್ವ ದೇವತೆಗಳನ್ನೂ........ **ಬ್ರಹ್ಮಾಣಂ**= ಬ್ರಹ್ಮದೇವರನ್ನೂ, **ಈಶಂಕಮಲಾಸನಸ್ಥಂ**= ಚತುರ್ಮುಖ ಬ್ರಹ್ಮದೇವರಲ್ಲಿ (ತೊಡೆಯ ಮೇಲೆ) ಕುಳಿತಿರುವ ಈಶ್ವರನನ್ನೂ,........ ನೋಡುತ್ತೇನೆ.

ವಿಷ್ಣುಂಸಮಾಶ್ರಿತೋ ಬ್ರಹ್ಮಾಬ್ರಹ್ಮಣೋಽಂಕಗತೋಹರಃ ।
ಹರಸ್ಯಾಂಗವಿಶೇಷೇಷುದೇವಾಸ್ಸರ್ವೇಽಪಿಸಂಸ್ಥಿತಾಃ ॥

ಎಂಬ ಪದ್ಮ ಪುರಾಣ ವಚನವೂ ಈ ಗೀತಾಶ್ಲೋಕಕ್ಕೆ ಸಮಾಖ್ಯಾರೂಪವಾಗಿರುವದು. ರುದ್ರಾಣಾಂಶಂಕರಶ್ಚಾಸ್ಮಿ ಎಂಬ ಶ್ರೀಕೃಷ್ಣನ ವಾಕ್ಯದಿಂದಲೂ ರುದ್ರದೇವರಿಗೆ ಆಧಿಕ್ಯಪ್ರದನಾಗಿ ಒಂದು ರೂಪದಿಂದ ಅವರಲ್ಲಿ ಪರಮಾತ್ಮನು ಸ್ಥಿತನಾಗಿರುವನೆಂದು ನಿಶ್ಚಿತವಾಗುವುದು.

7

ಬ್ರಹ್ಮಾದಿ ಚೇತನರು ಸಮಾನರಾಗಿರುವುದಿಲ್ಲ; ಮತ್ತು ತಾರತಮ್ಯೋಪೇತರಾಗಿರುವರು; ಎಂಬುದು ಬ್ರಹ್ಮಸಾಕ್ಷಾತ್ಕಾರಾರ್ಥವಾಗಿ ಆಯಾಯ ಚೇತನರಿಗೆ ವಿಹಿತವಾದ ಸಾಧನತಾರತಮ್ಯದಿಂದಲೂ ವ್ಯಕ್ತವಾಗುವುದು. ಸರ್ವ ಚೇತನರೂ ಸಮಾನರಾಗಿದ್ದರೆ, ಸಮಾನ ತಪಸ್ಸು, ಶ್ರವಣ, ಮನನಾದಿ ಸಾಧನಗಳಿಂದ ಸಮಾನ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿ, ಸಮಾನವಾದ ಸುಖವನ್ನು ಮುಕ್ತಿಯಲ್ಲಿ ಅನುಭವಿಸಬೇಕು. ಶ್ರೀಕೃಷ್ಣನು ಸಾಧನತಾರತಮ್ಯವನ್ನೂ, ಬ್ರಹ್ಮಸಾಕ್ಷಾತ್ಕಾರ ತಾರತಮ್ಯವನ್ನೂ ಸ್ಪಷ್ಟವಾಗಿ ನಿರೂಪಿಸಿರುತ್ತಾನೆ. ಶ್ರೀಕೃಷ್ಣನು ಹೇಳುತ್ತಾನೆ.—

(1) **ಧ್ಯಾನೇನಾತ್ಮನಿಪಶ್ಯಂತಿಕೇಚಿದಾತ್ಮಾನಮಾತ್ಮನಾ ।**
ಅನ್ಯೇಸಾಂಖ್ಯೇನಯೋಗೇನ ಕರ್ಮಯೋಗೇನಚಾಪರೇ ।
ಅನ್ಯೇತ್ವೇವಮಜಾನಂತಃ ಶ್ರುತ್ವಾನ್ಯೇಭ್ಯ ಉಪಾಸತೇ ।
ತೇಽಪಿಚಾತಿತರಂತ್ಯೇವಮೃತ್ಯುಂಶ್ರುತಿಪರಾಯಣಾಃ ॥

—(13. 25-26.)

ಅರ್ಥವು :—ಕೆಲವರು (ಋಷ್ಯಾದಿಗಳು, ಶ್ರವಣಸಹಕೃತವಾದ ಸ್ವಪ್ರತಿಭೆ ಯಿಂದ ಪರಮಾತ್ಮನನ್ನು ತಿಳಿದವರಾಗಿ) ಧ್ಯಾನದಿಂದ ಪರಮಾತ್ಮನನ್ನು ಸ್ವದೇಹ ದಲ್ಲಿ ನೋಡುತ್ತಾರೆ. ಮತ್ತು (ಧ್ಯಾನಪ್ರಯತ್ನವಿಲ್ಲದೆ), ಕೆಲವರು (ದೇವತೆಗಳು, ವಿಷ್ಣುಪ್ರಸಾದ ಲಬ್ಧವಾದ) ಪ್ರತಿಭಾರೂಪವಾದ ಜ್ಞಾನದಿಂದಲೇ ಪರಮಾತ್ಮ ನನ್ನು ನೋಡುತ್ತಾರೆ. ಇನ್ನು ಕೆಲವರು (ಸ್ವಲ್ಪ ಶ್ರವಣಸಹಕೃತವಾದ ಸ್ವಪ್ರ ತಿಭೆಯಿಂದ ಪರಮಾತ್ಮನನ್ನು ತಿಳಿದು) ಅಶ್ವಮೇಧಾದಿ ಕರ್ಮರೂಪವಾದ ಉಪಾ ಯದಿಂದ ಪರಮಾತ್ಮನನ್ನು ನೋಡುತ್ತಾರೆ. ಮತ್ತೂ ಕೆಲವರು ಈ ರೀತಿ (ಸ್ವಪ್ರತಿಭೆಯಿಂದ ಮತ್ತು ಸಾಕ್ಷಾತ್ ಧ್ಯಾನಾದಿ ಉಪಾಯಗಳಿಂದ) ಪರ ಮಾತ್ಮನನ್ನು ತಿಳಿಯಲಾರದೆ, ಅನ್ಯರಿಂದ ಪರಮಾತ್ಮಸ್ವರೂಪವನ್ನು ಶ್ರವಣ ಮಾಡಿ, ಮನನಧ್ಯಾನರೂಪವಾದ ಉಪಾಸನೆಯನ್ನು ಮಾಡುತ್ತಾರೆ. ಶ್ರವಣೋ ಪಾಯವೇ ಪ್ರಚುರರಾದ ಇಂಥವರೂ ಕೂಡ ಪರಮಾತ್ಮನನ್ನು ದರ್ಶನಮಾಡಿ ಸಂಸಾರವನ್ನು ದಾಟಿಯೇ ದಾಟುತ್ತಾರೆ.

ಈ ವಾಕ್ಯಗಳಲ್ಲಿ ಪರಮಾತ್ಮದರ್ಶನ ಮತ್ತು ಸಂಸಾರಕಾರಣ (ಮುಕ್ತಿ) ರೂಪವಾದ ಒಂದೇ ಫಲದ ಉದ್ದಿಶ್ಯ, ನಾಲ್ಕುವಿಧವಾದ ಉಪಾಸಕರು ಹೇಳಲ್ಪ ಟ್ಟಿರುವುದು. ಕೆಲವರು ಧ್ಯಾನಪ್ರಯತ್ನವುಳ್ಳವರು. ಕೆಲವರು ಸಾಕ್ಷಾತ್ ತಮ್ಮ ಪ್ರತಿಭಾಲಬ್ಧಜ್ಞಾನದಿಂದ ಉಪಾಸನೆಮಾಡುವವರು ; ಆದುದರಿಂದ ಇವರು ಪ್ರಬ ಲರು. ಕೆಲವರು ಕಠಿಣವಾದ ಧ್ಯಾನರೂಪಪ್ರಯತ್ನವನ್ನು ಮಾಡಲಾರದೆ, ಮತ್ತು ಸಾಕ್ಷಾತ್ ದೇವರ ದರ್ಶನವನ್ನು ಮಾಡಿಸುವ ಮಹಾಜ್ಞಾನರೂಪಪ್ರತಿಭೆಯನ್ನು ಹೊಂದದೆ, ಸ್ವಪ್ರತಿಭೆಯಿಂದ ಬ್ರಹ್ಮನ ಸ್ವರೂಪವನ್ನು ತಿಳಿದು ಭಗವದ್ದರ್ಶನಾ ರ್ಥವಾಗಿ ಪ್ರಚುರವಾದ ಕರ್ಮೋಪಾಯ ಉಳ್ಳವರು ; ಆದುದರಿಂದ ಇವರು ಹಿಂದೆ ಹೇಳಿರುವ ಉಭಯವರ್ಗದ ಚೇತನರಿಗಿಂತಲೂ ದುರ್ಬಲರು. ಈ ಮೂರು ಪಂಗಡದವರೂ ಪ್ರತಿಭಾಬಲವನ್ನು ಹೊಂದಿದವರು. ನಾಲ್ಕನೆಯ ಗುಂಪಿಗೆ ಸೇರಿದ ಶ್ರುತಿಪರಾಯಣರು ಪ್ರತಿಭೆಯಿಂದ ವಿಷ್ಣುಸದ್ಭಾವವನ್ನು ತಿಳಿಯಲಾರದೆ, ಕ್ರಮ ವಾಗಿ ಶ್ರವಣ, ಮನನಾದಿಗಳನ್ನು ಮಾಡಿ ಧ್ಯಾನಮಾಡಿ ಪರಮಾತ್ಮನನ್ನು ನೋಡುವರು. ಆದುದರಿಂದ ಇವರು ಸರ್ವಾಪೇಕ್ಷೆಯಾ ಅವರರು. ಈ ನಾಲ್ಕು ಪಂಗಡದವರೂ ಕ್ರಮವಾಗಿ ಋಷಿಗಳು, ದೇವತೆಗಳು, ನಾಭಿಯೇ ಮೊದಲಾದ ಚಕ್ರವರ್ತಿಶ್ರೇಷ್ಠರು, ಮತ್ತು ಇತರರ ಮನುಷ್ಯಾದಿಗಳು ಎಂದು ಶಾಸ್ತ್ರದಲ್ಲಿ ನಿಶ್ಚಿತವಾಗಿರುವುದು. "ಋಷಯೋ ಅಂತಃ ಪ್ರಕಾಶಾಃ" ಇತ್ಯಾದಿ ಶ್ರುತಿಗಳಲ್ಲಿ

ಬ್ರಹ್ಮಸಾಕ್ಷಾತ್ಕಾರದ ತಾರತಮ್ಯವೂ ವಿದಿತವಾಗಿರುವುದು. ಹನ್ನೊಂದನೆಯ ಅಧ್ಯಾಯದಲ್ಲಿ ಅರ್ಜುನನಿಗೆ ಹೇಳಿರುವ ಶ್ರೀ ಕೃಷ್ಣನ "ದೃಷ್ಟವಾನಸಿಮಾಂ ಯಥಾ" ಇತ್ಯಾದಿ ಮಾತುಗಳಿಂದ ಅರ್ಜುನನಿಗೆ ಆಗಿರುವಷ್ಟು ಬ್ರಹ್ಮಸಾಕ್ಷಾತ್ಕಾರವು ಇತರ ಅಲ್ಪದೇವತೆಗಳಿಗೆ ಸಹ ಆಗಲಾರದೆಂದು ಸ್ಪಷ್ಟವಾಗುವುದು.

ಮುಕ್ತಿಯಲ್ಲಿಯೂ ಕೂಡ, ಭಗವತ್ಪ್ರಾಪ್ತಿಯು ಏಕಪ್ರಕಾರವಾಗಿರುವುದಿಲ್ಲ. ಸಾಯುಜ್ಯ, ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ ಎಂದು ಮುಕ್ತಿಯು ಚತುರ್ವಿಧವು ಎಂದು ಶ್ರುತಿಗಳಲ್ಲಿ ನಿಶ್ಚಿತವಾಗಿರುವುದು. ಶ್ರೀಕೃಷ್ಣನೂ "ವಿಶತೇತದನಂತರಂ" ಎಂಬಲ್ಲಿ ಸಾಯುಜ್ಯ ಮುಕ್ತಿಯನ್ನೂ, "ಮಮಸಾಧರ್ಮ್ಯಮಾಗತಾಃ" ಎಂಬಲ್ಲಿ ಸಾರೂಪ್ಯಮುಕ್ತಿಯನ್ನೂ, "ಶಾಶ್ವತಂಪದಮವ್ಯಯಂ" ಇತ್ಯಾದಿ ಸ್ಥಳಗಳಲ್ಲಿ ಸಾಮೀಪ್ಯ, ಸಾಲೋಕ್ಯ ಮುಕ್ತಿಪ್ರಾಪ್ತಿಯನ್ನೂ ನಿರೂಪಿಸಿರುತ್ತಾನೆ. ಇವುಗಳು ಕ್ರಮವಾಗಿ ಒಂದರಿಂದ ಒಂದು ಕಡಿಮೆಯು ಎಂಬುದು ಪ್ರಮಾಣಪ್ರಮಿತವಾಗಿರುವುದರಿಂದ ಅವುಗಳನ್ನು ಹೊಂದತಕ್ಕ ಚೇತನರೂ ಸಹ ಸ್ವಭಾವದಿಂದಲೇ ನ್ಯೂನಾಧಿಕಭಾವದಿಂದ (ತಾರತಮ್ಯದಿಂದ) ಯುಕ್ತರಾಗಿರಬೇಕೆಂದು ಅನುಮಾನದಿಂದ ಸಿದ್ಧವಾಗುವುದು.

8

ಚೇತನರಲ್ಲಿ ತಾರತಮ್ಯವನ್ನು ಒಪ್ಪದೆ ಎಲ್ಲರೂ ಸಮಾನರೆಂದು ಹೇಳಿರುವವರು, ಅಥವಾ ಒಂದೇ ಚೇತನವು ಇರುವುದರಿಂದ ಭೇದಶಂಕೆಯನ್ನೂ ಮಾಡಬಾರದೆಂದು ಆಗ್ರಹದಿಂದ ವಾದಮಾಡುವವರು, ಅನೇಕ ಅನಿಷ್ಟಗಳನ್ನು ಅಂಗೀಕರಿಸಬೇಕಾಗುವುದು. ಮುಖ್ಯವಾದ ಒಂದು ದೋಷವನ್ನು ತೋರಿಸಿ ಈ ಉಪನ್ಯಾಸವನ್ನು ಉಪರಮಹೊಂದಿಸುವೆವು. ಸರ್ವ ಚೇತನರೂ ಸಮಾನರು, ಅಥವಾ ಚೇತನವು ಒಂದೇ ಎಂದು ಹೇಳುವುದಾದರೆ, ಬಹು ವೈಚಿತ್ರ್ಯದಿಂದಲೂ, ತಾರತಮ್ಯದಿಂದಲೂ ಸಹಿತವಾಗಿ ಈ ಜಗತ್ತನ್ನು ಸೃಷ್ಟಿಮಾಡಿರುವ ಪರಮಾತ್ಮನು **ವೈಷಮ್ಯನೈರ್ಘೃಣ್ಯಾದಿ** ದೋಷಯುಕ್ತನಾಗಬೇಕಾಗುವುದು. ಜೀವರುಗಳ ಕರ್ಮವೈಚಿತ್ರ್ಯ ತಾರತಮ್ಯಗಳನ್ನು ನಿಮಿತ್ತಮಾಡಿ ಪರಮಾತ್ಮನು ಅನೇಕ ಜೀವರುಗಳಿಗೆ ವಿಚಿತ್ರವಾಗಿ ತಾರತಮ್ಯೋಪೇತವಾಗಿ ಫಲವನ್ನು ಕೊಡುವನೆಂದು ಯದ್ಯಪಿ ಹೇಳಬಹುದು. ಆದರೂ ಇದು ಸಮಗ್ರವಾದ ಉತ್ತರವಲ್ಲ. ಜೀವರುಗಳು ವಿಚಿತ್ರರಾಗಿದ್ದರಷ್ಟೇ ವಿಚಿತ್ರಕರ್ಮಗಳನ್ನು ಮಾಡುವರು! ಜೀವರುಗಳು ತಾರತಮ್ಯೋಪೇತರಾಗಿದ್ದರಷ್ಟೇ ತಾರತಮ್ಯೋಪೇತವಾದ ಕರ್ಮಗಳನ್ನು ಮಾಡುವರು! ಕರ್ಮವು ಹುಟ್ಟಿಗೆ

ಯಲ್ಲಿರುವ ಧನದಂತೆ, ಅಥವಾ ನಾಲೆಕೆಳಗಿರುವ ಜಮೀನಿನಂತೆ, ಜೀವನಿಂದ ಬಹು ದೂರ ಇರುವ ಬಹಿರ್ಭೂತವಾದ ಆಸ್ತಿಯಲ್ಲ. ಮತ್ತೇನೆಂದರೆ, ಜೀವನು ತನ್ನ ಸ್ವರೂಪಭೂತವಾದ ಇಂದ್ರಿಯಗಳಿಂದ ಜಡಶರೀರವನ್ನು ಪ್ರೇರಣೆಮಾಡಿ **ಮಾಡಿರುವ** ವ್ಯಾಪಾರವು. ಹೀಗಿರುವಲ್ಲಿ ಒಬ್ಬ ಜೀವನು ಉತ್ತಮ ವ್ಯಾಪಾರವನ್ನು ಮಾಡುವುದರಲ್ಲಿಯೂ, ಮತ್ತೊಬ್ಬ ಜೀವನು ಅಧಮವ್ಯಾಪಾರವನ್ನು ಮಾಡುವುದರಲ್ಲಿಯೂ ಪ್ರಯತ್ನ ಮಾಡುವುದರಲ್ಲಿ ಜೀವರುಗಳ ಸ್ವರೂಪವೈಚಿತ್ರ್ಯ ತಾರತಮ್ಯಗಳೇ ಕಾರಣವೆಂದು ಅಂತತಃ ಒಪ್ಪಬೇಕಾಗುವುದು. ಅನಾದ್ಯವಿದ್ಯೆಯಿಂದ * ಅನಭಿವ್ಯಕ್ತವಾದ ಸ್ವರೂಪಜ್ಞಾನವುಳ್ಳವರಾಗಿ ಬಾಹ್ಯಜ್ಞಾನಕ್ಕೆ ವಶರಾಗಿ ನಾನಾ ಉತ್ತಮಾಧಮ ವ್ಯಾಪಾರಗಳನ್ನು ಸಮಾನರಾದ ಜೀವರುಗಳೇ ಮಾಡುವರೆಂದೂ ಹೇಳಲಾಗುವುದಿಲ್ಲ. ಹಾಗಾಗುವದಾದರೆ, ಅವಿದ್ಯೆಯು ಸರ್ವರನ್ನೂ **ಏಕರೀತಿಯಿಂದ** ಬಂಧಿಸಿ, ಸರ್ವರೂ ಏಕಾಕಾರವಾದ ವ್ಯಾಪಾರಗಳಲ್ಲಿ ಪ್ರವರ್ತಿಸಬೇಕಾಗುವುದು. ಉತ್ತಮಾಧಮ ವ್ಯಾಪಾರಗಳಾಗಲೀ, ವಿಚಿತ್ರವ್ಯಾಪಾರಗಳಾಗಲೀ ಲೋಕದಲ್ಲಿ ಇರದೇ ಹೋಗಬೇಕಾದೀತು! ಲೋಕದಲ್ಲಿ ಅತಿವೈಚಿತ್ರ್ಯವೂ, ಬಹು ತಾರತಮ್ಯವೂ ಕಂಡುಬಂದಿರುವುವು. ಇಂಥಾ ಸ್ವರೂಪಭೂತವಾದ ವೈಚಿತ್ರ್ಯತಾರತಮ್ಯಾನುಗುಣವಾಗಿ ಪ್ರಾಪ್ತವಾಗಿರುವ ಅವಿದ್ಯಾ, ಕಾಮ, ಕರ್ಮಾದಿಗಳನ್ನು ನಿಮಿತ್ತಮಾಡಿ, ಪರಮಾತ್ಮನು ಪ್ರಪಂಚದಲ್ಲಿ ನಾನಾ ವೈಚಿತ್ರ್ಯತಾರತಮ್ಯಗಳನ್ನು ನಿರ್ಮಾಣಮಾಡುವನೆಂದು ಹೇಳಿದರೆ, ಲೋಕದಲ್ಲಿ ಸ್ತೇನನನ್ನು ಬಂಧಿಸಿ, ನಿರಪರಾಧಿಯಾದವನನ್ನು ಬಿಡುಗಡೆಮಾಡುವ ನ್ಯಾಯಾಧಿಪತಿಯಂತೆ, ಆತನು ನಿಷ್ಪಕ್ಷಪಾತನೆಂದೇ ಎನ್ನಿಸುವನು; ಮತ್ತು "ವೈಷಮ್ಯನೈರ್ಘೃಣ್ಯೇ ನಸಾಪೇಕ್ಷತ್ವಾತ್" ಎಂಬ ಬ್ರಹ್ಮ ಸೂತ್ರಾರ್ಥವೂ ಸಮಂಜಸವಾಗುವುದು. ಹಾಗಿಲ್ಲದಿದ್ದರೆ, ಸಮಾನರಾದ ಜೀವರುಗಳಿಗೆ ವಿಷಮಫಲವನ್ನು ಕೊಡುವ, ಮತ್ತು ವಿಚಿತ್ರಫಲವನ್ನು ಕೊಡುವ ಪರಮಾತ್ಮನು ಪಕ್ಷಪಾತಿಯು ಅಥವಾ ಕುಹಕಪುರುಷನು ಎಂದೆನಿಸುವನು.

---

* ಅವಿದ್ಯೆಯು ಅನಾದಿ ಎಂದು ಹೇಳುವುದರಿಂದ ತೋಂದರೆಯು ಪರಿಹೃತವಾಗಲಿಲ್ಲ. ಆಗಲೂ ಜೀವಸ್ವಭಾವಕ್ಕೂ ಅವಿದ್ಯಾದಿ ಬಂಧಗಳಿಗೂ ಕಾರ್ಯಕಾರಣಭಾವವು ಅಶಕ್ಯವಾದರೂ, ಪ್ರಯೋಜ್ಯಪ್ರಯೋಜಕ ಭಾವವು ಇದ್ದೇ ಇರುವುದು. ಜೀವಸ್ವಭಾವಾನುಗುಣವಾಗಿರತಕ್ಕದ್ದು ಬಂಧವು. ಹಾಗಿಲ್ಲದಿದ್ದರೆ "ಬ್ರಹ್ಮ" ಜೀವನಿಗೆ "ಇಂದ್ರ" ಜೀವನ ಬಂಧವು ಬರಲಿ ಇತ್ಯಾದಿ ನಾನಾ ಅಪಾದನೆಗಳು ಪ್ರಾಪ್ತವಾಗುವುವು.

2. ಮತ್ತು ಇಹಲೋಕದಲ್ಲಿ ವಿಷಮಸಾಧನೆಗಳು ಇದ್ದರೂ, ಜೀವಸಾಮ್ಯವನ್ನು ಮುಕ್ತಿಯಲ್ಲಿ ಪ್ರಕಟನೆಮಾಡಿ, ಮುಕ್ತಿಯಲ್ಲಿ ಸರ್ವಜೀವರಿಗೂ ಸಮಸುಖವನ್ನು ಪರಮಾತ್ಮನು ಕೊಡುವನೆಂದು ಹೇಳಿದರೂ, ಆತನಿಗೆ ವೈಷಮ್ಯದೋಷವು ತಪ್ಪಲಿಲ್ಲ. ಹೇಗೆಂದರೆ ಹತ್ತು, ಇಪ್ಪತ್ತು ಕಲ್ಪಗಳ ಪರ್ಯಂತ ಕಷ್ಟಪಟ್ಟು ಸಾಧನೆಮಾಡಿದ ಪುರುಷನೂ, ಒಂದೇ ಕಲ್ಪದಲ್ಲಿ ಅಲ್ಪಕಷ್ಟದಿಂದ ಮುಕ್ತನಾದವನೂ, ಸಮಾನವಾದ ಸುಖವನ್ನು ಅನುಭವಿಸುವುದಾದರೆ, ವಿಷಮಸಾಧನೆಗಳಿಗೆ ಸಮಫಲವನ್ನು ಕೊಡುವ ಪರಬ್ರಹ್ಮನು "**ನ್ಯಾಯಃ**" ಮತ್ತು "**ಧರ್ಮೋಧರ್ಮವಿದುತ್ತಮಃ**" ಇತ್ಯಾದಿ ತನ್ನ ಸುಪ್ರಸಿದ್ಧ ನಾಮಗಳನ್ನು ತೊರೆದು ಅನ್ಯಾಯ ಮಾಡುವುದರಲ್ಲಿ ಅಗ್ರಗಣ್ಯನೆಂದೆನಿಸಬೇಕಾಗುವುದು.

3. ಕಿಂಚ ಜೀವಸಾಮ್ಯವನ್ನು ಪ್ರಧಾನವಾಗಿಟ್ಟುಕೊಂಡು, ಸಾಧನ ತಾರತಮ್ಯವನ್ನು ಗಣನೆಗೆ ತರದೇ ಹೋಗುವುದೂ ಒಂದು ನ್ಯಾಯವಾಗುವುದಾದರೆ, ಲೋಕದಲ್ಲಿಯೂ ಕೂಡ ಜೀವಸಾಮ್ಯವು ಸದಾ ಇರುವುದನ್ನು ನಿಮಿತ್ತಮಾಡಿ, ಧರ್ಮಶಾಸ್ತ್ರಕಾರರು, ಬ್ರಾಹ್ಮಣಾದಿ ವರ್ಣಗಳಲ್ಲಿ **ಸಾಮ್ಯವನ್ನು** ಉಂಟುಮಾಡುವುದೇ ಕ್ಷತ್ರಿಯರಿಗೆ ಪರಮಧರ್ಮವೆಂದು ವಿಧಿಸಬೇಕಾಗಿದ್ದಿತು. ವಿದ್ಯಾಕರ್ಮಗಳ ತಾರತಮ್ಯಾನುಸಾರವಾಗಿ ಮಹಾರಾಜನು ಪ್ರಜೆಗಳಿಗೆ ಆಶ್ರಯಕೊಟ್ಟು ಪಾಲಿಸಬೇಕೆಂದು ಧರ್ಮಶಾಸ್ತ್ರದ ನಿರ್ಣಯವಿರುತ್ತದೆ. ಸರ್ವಜೀವರುಗಳೂ ಸಮಾನರಾಗಿದ್ದರೆ, ಅಕಿಂಚಿತ್ಕರವಾದ ಕರ್ಮಾದಿಗಳ ತಾರತಮ್ಯವನ್ನು ಗಣನೆಗೆ ತಾರದೆ, ಲೋಕದಲ್ಲಿಯೂ ಕೂಡ ತತ್ತದ್ವರ್ಣಸ್ಥ ಜನರಲ್ಲಿ ಸಾಮ್ಯೋತ್ಪಾದನವೇ ಶಾಸ್ತ್ರಾನುಗ್ರಹೀತವಾದ ನಿರ್ಣಯವಾಗುತ್ತಿತ್ತು.

4. ಕಿಂಚ ಫಲಸಾಮ್ಯವು ಮುಕ್ತಿಯಲ್ಲಿ ಸಿದ್ಧವಾಗಿರುವುದೆಂಬ ಮತವು ಲೋಕದಲ್ಲೂ ಸಮುನ್ನದ್ಧವಾದ ಉತ್ಸಾಹಸಹಿತವಾದ ಸಾಧನೆಗಳಿಗೆ ಕಾರಣವಾಗಲಾರದು. ಎಂದಾದರೂ ಒಂದು ದಿನ ಸರ್ವರಿಗೂ ಸಮಾನ ಮುಕ್ತಿಯು ಸಿದ್ಧವಾಗಿರುವುದೆಂದು ತಿಳಿದ ಪುರುಷನು ಗೃಹಾಪತ್ಯ ಪುತ್ರಾದಿಗಳನ್ನು ಪರಿತ್ಯಾಗಮಾಡಿ, ಕಷ್ಟಕರವಾದ ಸಾಧನೆಯನ್ನು ಈಗಲೇ ಮಾಡಬೇಕೆಂಬ ನಿರ್ಬಂಧಕ್ಕೆ ವಶನಾಗಲಾರನು. ಭಕ್ತಾಗ್ರಣಿಯಾದ ಪ್ರಹ್ಲಾದನಾದರೋ "**ಆಬಾಲಾತ್ ಹರಿಭಕ್ತಿಃ**" ಎಂದರೆ ಬಾಲ್ಯ ಮೊದಲುಗೊಂಡು ಒಂದು ಕ್ಷಣವೂ ಹರಿಪಾದವನ್ನು ಬಿಡಬಾರದೆಂದು ಹೇಳಿರುತ್ತಾನೆ. "ಕೌಮಾರ ಆಚರೇತ್ ಪ್ರಾಜ್ಞಃ ಧರ್ಮಾನ್ ಭಾಗವತಾನಿಹ" ಎಂಬ ಪ್ರಮಾಣವಚನವೂ ಇದೇ ಅರ್ಥವನ್ನು ನಿರೂಪಿಸುತ್ತದೆ.

5. ಶ್ರೀ ಕೃಷ್ಣನೂ ಸಹ ತಾನು ವೈಷಮ್ಯಾದಿದೋಷಶೂನ್ಯನೆಂದೂ, ಸಾಧನಾನುಗುಣವಾಗಿ ತರತಮಭಾವದಿಂದ ಫಲವನ್ನು ವಿತರಣೆಮಾಡತಕ್ಕವನೆಂದೂ ಹೇಳಿರುತ್ತಾನೆ:—

(1) **ಸಮೋಽಹಂ ಸರ್ವಭೂತೇಷು ನಮೇದ್ವೇಷ್ಯೋಽಸ್ತಿನಪ್ರಿಯಃ ।**
ಯೇಭಜಂತಿತು ಮಾಂಭಕ್ತ್ಯಾ ಮಯಿತೇತೇಷುಚಾಪ್ಯಹಂ ॥

(9. 29.)

ಅರ್ಥವು:—ಎಲೈ ಅರ್ಜುನನೇ! ನಾನು ಸರ್ವ ಪ್ರಾಣಿಗಳ ವಿಷಯದಲ್ಲಿಯೂ ಸಮನು ಎಂದರೆ ವೈಷಮ್ಯಾದಿದೋಷಗಳುಳ್ಳವನಲ್ಲ, ಅಧಿಕಾರಿಯು ತನ್ನ ದ್ವೇಷಕ್ಕಿಂತ ಅಧಿಕವಾಗಿ ನನ್ನಿಂದ ದ್ವೇಷಿಸಲ್ಪಡುವುದಿಲ್ಲ; ಮತ್ತು ಭಕ್ತನು, ತನ್ನ ಪ್ರೀತಿಗಿಂತ ಅಧಿಕವಾಗಿ ನನ್ನಿಂದ ಪ್ರೀತಿಸಲ್ಪಡುವುದಿಲ್ಲ. (ಅವರವರ ದ್ವೇಷಪ್ರೀತಿಗಳಿಗೆ ಅನುಗುಣವಾಗಿ ತತ್ತತ್ಸದೃಶ ಫಲಗಳನ್ನು ಕೊಡುವುದರಿಂದಲೇ ನಾನು ಸಮನು ಎಂದು ಭಾವವು. ಇದನ್ನೇ ಉತ್ತರಾರ್ಧದಲ್ಲಿ ವಿವರಿಸುತ್ತಾನೆ.) ಯಾರು ನನ್ನನ್ನು ಭಕ್ತಿಯಿಂದ ಸೇವಿಸುತ್ತಾರೆಯೋ ಅವರು ನನ್ನಲ್ಲಿಯೇ ಇರುತ್ತಾರೆ ಎಂದರೆ ಸರ್ವದಾ ನನ್ನಲ್ಲಿಯೇ ಇಡಲ್ಪಟ್ಟ **ಚಿತ್ತವುಳ್ಳವರಾಗಿರುತ್ತಾರೆ** ಅಥವಾ ಸರ್ವದಾ ನನ್ನ ಅಧೀನರಾಗಿರುತ್ತಾರೆ. ನಾನೂ ಕೂಡ ಸರ್ವದಾ ಅವರಲ್ಲಿಯೇ ಇರುತ್ತೇನೆ; ಎಂದರೆ ಸರ್ವದಾ ಅವರ ವಶನಾಗಿ, ಅವರಲ್ಲಿ ಅನುಗ್ರಹೋನ್ಮುಖನಾಗಿರುತ್ತೇನೆ ಎಂದು ಅರ್ಥವು.

ಪ್ರಶ್ನೆ—ಸ್ವಾಮಿ! ಈ ಶ್ಲೋಕದಲ್ಲಿ ನಾನು ಸರ್ವರಲ್ಲೂ ಸಮನು! ನನಗೆ ದ್ವೇಷಯೋಗ್ಯರೂ ಪ್ರೀತಿಪಾತ್ರರೂ ಯಾರೂ ಇಲ್ಲವೆಂದು ಸ್ಪಷ್ಟವಾಗಿ ಶ್ರೀ ಕೃಷ್ಣನು ಹೇಳಿರುತ್ತಾನೆ. ಹೀಗಿರುವಲ್ಲಿ ದ್ವೇಷಮಾಡುವವರ ದ್ವೇಷಕ್ಕಿಂತ ಹೆಚ್ಚು ದ್ವೇಷಮಾಡುವುದಿಲ್ಲ; ಪ್ರೀತಿಮಾಡುವವರ ಪ್ರೀತಿಗಿಂತ ಹೆಚ್ಚು ಪ್ರೀತಿಮಾಡುವುದಿಲ್ಲ ಎಂಬ ತಮ್ಮ ವಿಚಿತ್ರಕಲ್ಪನೆಗೆ ಕಾರಣವೇನು?

ಶ್ರೀ ಶ್ರೀಗಳವರು—ವಾಕ್ಯತಾತ್ಪರ್ಯ ನಿರ್ಣಯಜ್ಞರು ಹೀಗೆಯೇ ಅರ್ಥಮಾಡುವರು. 1. ಇದು ಕೌರವದ್ವೇಷಿಯೂ ಪಾಂಡವಪ್ರಿಯನೂ ಆದ, ತನ್ನ ಭಕ್ತಪರವಶತೆಯನ್ನು ಮೂರುಲೋಕಕ್ಕೂ ತೋರಿಸುವುದಕ್ಕಾಗಿ ತನ್ನ ಭೃತ್ಯನ ಸಾರಥ್ಯಕರ್ಮದಲ್ಲಿ ಉದ್ಯುಕ್ತನಾದ, ಶ್ರೀ ಕೃಷ್ಣನ ಮಾತು. ದ್ವೇಷಕಾರ್ಯವನ್ನೂ, ಪ್ರೀತಿಕಾರ್ಯವನ್ನೂ ಮಾಡುತ್ತಿರುವ ಪರಮಾತ್ಮನು ನನಗೆ ದ್ವೇಷಪ್ರೀತಿಗಳಿಲ್ಲವೆಂದು ಹೇಳಿದರೆ ಆ ಪದಗಳಿಗೆ ಪ್ರಕರಣೋಚಿತವಾದ ಅರ್ಥವನ್ನು

ಕಲ್ಪಿಸತಕ್ಕದ್ದು ಅವಶ್ಯಕವು. 2. ಕಿಂಚ, ಲೋಕದಲ್ಲೂ ದ್ವೇಷಪ್ರೀತಿಗಳಿಗೆ ಅನುಗುಣವಾಗಿ ಫಲಪ್ರದನಾದ ಯಮನು **ಸಮವರ್ತೀ** ಎಂಬ ಪ್ರಸಿದ್ಧ ಹೆಸರುಳ್ಳವನಾಗಿರುವನು. ದುರ್ಜನರನ್ನು ದಂಡನಮಾಡಿ, ಸಾಧುಗಳಿಗೆ ಸುಖಪ್ರದನಾದ ಯಮನನ್ನು ಧರ್ಮರಾಜನೆಂದೂ, ವೈಷಮ್ಯರಹಿತನೆಂದೂ ಸ್ತುತಿಸುತ್ತಾರೆ. 3. ಮತ್ತು ಶ್ರೀಕೃಷ್ಣನ ಈ ವಾಕ್ಯಕ್ಕೆ "ನಾನು ಸರ್ವಾತ್ಮನಾ ದ್ವೇಷರಹಿತನು, ಸರ್ವಾತ್ಮನಾ ಪ್ರೀತಿರಹಿತನು" ಎಂದು ಅರ್ಥಮಾಡಿದರೆ, "ಯೇ ಭಜಂತಿತುಮಾಂ ಭಕ್ತ್ಯಾಮಯಿತೇ ತೇಷುಚಾಪ್ಯಹಂ" ಎಂಬ ಉತ್ತರಾರ್ಧವು ಉನ್ಮತ್ತಪ್ರಲಾಪಕ್ಕೆ ಸದೃಶವಾಗುವುದು. ನಾನು ಪ್ರೀತಿರಹಿತನು ಎಂದು ಹೇಳಿ, ನಾನು ನನ್ನ ಭಕ್ತರಲ್ಲಿ ಅತಿಶಯಿತ ಪ್ರೀತಿ ಉಳ್ಳವನು ಎಂದು ಹೇಳುವುದು ವಿರುದ್ಧೋಕ್ತಿಯಾಗುವುದಿಲ್ಲವೇ? 3. ಆದುದರಿಂದ ಲೋಕದಲ್ಲಿ ಪ್ರಾಕೃತಜನರಿಗೆ ಇರುವಂಥಾ, ದುಷ್ಟವಾದ, ಮೋಹನಿಮಿತ್ತಕವಾದ ಪ್ರೀತಿದ್ವೇಷಗಳು ಪರಮಾತ್ಮನಿಗೆ ಇಲ್ಲ; ಮತ್ತು ತತ್ತಜ್ಜೀವರುಗಳ ಸ್ವಭಾವಯೋಗ್ಯತಾ, ಕರ್ಮಾದಿಗಳ ಅನುಸಾರವಾದ ನ್ಯಾಯವಾದ ಪ್ರೀತಿದ್ವೇಷಗಳು ಪರಮಾತ್ಮನಿಗೆ ಉಂಟು ಎಂದು ಈ ಶ್ಲೋಕಕ್ಕೆ ಅರ್ಥಮಾಡಬೇಕು.

5. ಪರಂತು ಸರ್ವಥಾ ದ್ವೇಷ ಪ್ರೀತಿಗಳಿಂದ ರಹಿತವಾದ, ಹೃದಯಶೂನ್ಯವಾದ ಬಂಡೆಯು ಕಲ್ಲಿನಂತಿರುವ ಪರಬ್ರಹ್ಮವಸ್ತುವನ್ನು ಯಾವ ಪ್ರೇಕ್ಷಾವಂತನಾದ ಯೋಗಿಯು ಹೃದಯಕಮಲದಲ್ಲಿ ಆಲಂಗಿಸಿಕೊಂಡು ಆನಂದವನ್ನು ಹೊಂದುವನು? "**ಪ್ರಹಸನ್ನಿವ ಭಾರತ**" ಎಂದು ಸಂಜಯನು ಹೇಳುವಂತೆ ಮಂದಹಾಸ ಸಹಿತನಾದ, ಅರವಿಂದನಯನನು ತನ್ನ ಭಕ್ತರು ತನಗೆ ಪ್ರಾಣಕ್ಕಿಂತ ಪ್ರಿಯರೆಂದು ಹೇಳುತ್ತಾನೆ.—

(2) **ಮಯ್ಯರ್ಪಿತಮನೋಬುದ್ಧಿರ್ಯೋಮದ್ಭಕ್ತಸ್ಸಮೇಪ್ರಿಯಃ ।**

—(12. 13-14.)

ಯಾರು ಸರ್ವ ಪ್ರಾಣಿಗಳಲ್ಲಿ ದ್ವೇಷರಾಹಿತ್ಯಾದಿ ಗುಣವುಳ್ಳವನಾಗಿ........ ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸುಳ್ಳ ಭಕ್ತನೋ ಅವನು ನನ್ನ ಪ್ರೀತಿವಿಷಯನು.

(3) **ಹರ್ಷಾಮರ್ಷಭಯೋದ್ವೇಗೈರ್ಮುಕ್ತೋಯಸ್ಸಚಮೇ ಪ್ರಿಯಃ ॥**—(12. 15.)

ಹರ್ಷ (ಅಧರ್ಮಾರ್ಥವಾಗಿ ಮನಃಪ್ರವೃತ್ತಿ), ರೋಷ ಭಯೋದ್ವೇಗಾದಿಗಳಿಂದ ರಹಿತವಾದ ನನ್ನ ಭಕ್ತನು ನನಗೆ ಪ್ರೀತಿವಿಷಯನು

(4) **ಸರ್ವಾರಂಭಪರಿತ್ಯಾಗೀಯೋಮದ್ಭಕ್ತಸ್ಸಮೇಪ್ರಿಯಃ ।**
—(12. 16.)

ಭಗವಂತನಿಗೆ ವಿರುದ್ಧವಾದ ಸಕಲ ಉದ್ಯೋಗಗಳನ್ನು ಪರಿತ್ಯಾಗಮಾಡಿ ನನ್ನ (ಶ್ರೀಕೃಷ್ಣನ) ಭಕ್ತನಾದವನು ನನಗೆ ಪ್ರೀತಿವಿಷಯನು.

(5) **ಶುಭಾಶುಭಪರಿತ್ಯಾಗೀ ಭಕ್ತಿಮಾನ್ಯಸ್ಸಮೇಪ್ರಿಯಃ ।**
—(12. 17.)

ಭಗವತ್ಪ್ರಾಪ್ತಿಗೆ ಸಾಧಕವಾಗದಿರುವ ಸರ್ವ ಕಾಮ್ಯ ಶುಭ ಗಳನ್ನೂ ಮತ್ತು ಸರ್ವ ಅಶುಭಗಳನ್ನೂ ಪರಿತ್ಯಾಗಮಾಡಿ ನನ್ನಲ್ಲಿ ಭಕ್ತಿಯುಳ್ಳವನು ನನಗೆ ಪ್ರೀತಿವಿಷಯನು.

(6) **ಅನಿಕೇತಸ್ಥಿರಮತಿರ್ಭಕ್ತಿಮಾನ್ಮೇಪ್ರಿಯೋನರಃ ।**—(12. 19.)

ಭಗವದಿತರರನ್ನು ಆಶ್ರಯಿಸದೆ, ಕುತರ್ಕಗಳಿಂದ ಚಾಂಚಲ್ಯರಹಿತವಾದ ಜ್ಞಾನವುಳ್ಳ ನನ್ನ ಭಕ್ತನು ನನಗೆ ಪ್ರೀತಿವಿಷಯನು.

(7) **ಯೇತು........ಮತ್ಪರಮಾಭಕ್ತಾಸ್ತೇಽತೀವಮೇ ಪ್ರಿಯಾಃ ।**
(12. 20.)

ಭಗವತ್ಸಂಬಂಧಿಯಾದ, ಮುಕ್ತಿಸಾಧನವಾದ, ನನ್ನಿಂದ ಉಪದಿಷ್ಟವಾದ ಈ ತತ್ವವನ್ನು, ಆಸ್ತಿಕ್ಯಬುದ್ಧಿಯಿಂದ ಸಹಿತವಾಗಿ, ನನ್ನನ್ನೇ ಸರ್ವೋತ್ತಮನೆಂದು ತಿಳಿದು, ಯಾರು ಉಪಾಸನೆಮಾಡುತ್ತಾರೆಯೋ ಅಂಥಾ ಭಕ್ತರು ನನಗೆ ಅತ್ಯಂತ ಪ್ರೀತಿವಿಷಯರು.

(8) **ಪ್ರಿಯೋಹಿಜ್ಞಾನಿನೋಽತ್ಯರ್ಥಮಹಂಸಚಮಮಪ್ರಿಯಃ ।**
(7. 17.)

ಜ್ಞಾನಿಗೆ ನಾನು ಅತ್ಯಂತ ಪ್ರೀತಿವಿಷಯನು. ನನಗೆ ಆ ಜ್ಞಾನಿಯು ಅತ್ಯಂತ ಪ್ರೀತಿವಿಷಯನು.

(9) ... .**ಜ್ಞಾನೀತ್ವಾತ್ಮೈವಮೇಮತಂ ।**—(7. 18.)

ಜ್ಞಾನಿಯು ನಾನೇ, ನನ್ನ ದೇಹವೇ ಎಂದು ನನ್ನ ಮತವು. " **ಮಮ ಪ್ರಾಣಾಹಿ ಪಾಂಡವಾಃ** " ಎಂಬ ಶ್ರೀಕೃಷ್ಣನ ವಾಕ್ಯವು ಇದಕ್ಕೆ ಸಮಾ ಖ್ಯಾರೂಪವಾಗಿರುವುದು. ಜ್ಞಾನಿಯು ನನಗೆ ಅತ್ಯಂತ ಪ್ರಿಯನು ಎಂದರ್ಥವು.

(10) **ಇಷ್ಟೋಽಸಿಮೇದೃಢಮಿತಿ ತತೋವಕ್ಷ್ಯಾಮಿತೇಹಿತಂ ।**
(18. 64.)

ಅರ್ಜುನ! ನೀನು ನನಗೆ ನಿಶ್ಚಯವಾಗಿಯೂ ಪ್ರೀತಿವಿಷಯನಾದುದ ರಿಂದ ನಿನಗೆ ಹಿತವನ್ನು ಹೇಳುವೆನು.

(11) ......**ಪ್ರತಿಜಾನೇ ಪ್ರಿಯೋಽಸಿಮೇ ।**—(18. 65.)

ಅರ್ಜುನ! ನೀನು ನನಗೆ ಪ್ರೀತಿವಿಷಯನು. ಆದುದರಿಂದ ನೀನು ನನ್ನಲ್ಲಿ ಭಕ್ತಿಮಾಡು. ನೀನು ನನ್ನನ್ನೇ ಹೊಂದುತ್ತೀಯೆ ಎಂದು ಪ್ರತಿಜ್ಞೆಮಾಡುತ್ತೇನೆ.

(12) **ಯ ಇದಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿದಾಸ್ಯತಿ ।**
ನಚತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।
ಭವಿತಾನಚಮೇ ತಸ್ಮಾದನ್ಯಃ ಪ್ರಿಯತರೋಭುವಿ ॥

(18. 67-68.)

ನನ್ನಿಂದ ಉಪದಿಷ್ಟವಾದ ಈ ತತ್ವವನ್ನು **ನನ್ನ ಭಕ್ತರಿಗೆ** ಯಾರು ದಾನಮಾಡುತ್ತಾರೆಯೋ, ಮನುಷ್ಯರಲ್ಲಿ ಅಂಥವನಿಗಿಂತ ಹೆಚ್ಚು ಇಷ್ಟಕಾರ್ಯ ವನ್ನು ನನಗೆ ಮಾಡಿದವರಿಲ್ಲ. ಆದುದರಿಂದ ಅವನಿಗಿಂತ ನನಗೆ ಹೆಚ್ಚು ಪ್ರೀತಿ ಪಾತ್ರನು ಹಿಂದೆ ಇರಲಿಲ್ಲ. ಈಗಲೂ ಇಲ್ಲ. ಮುಂದೂ ಇರುವುದಿಲ್ಲ. ಈ ರೀತಿ ಶ್ರೀ ಪರಮಾತ್ಮನೂ ಭಕ್ತರೂ, ಜ್ಞಾನಿಗಳೂ ತನಗೆ ಪ್ರೀತಿಪಾತ್ರರೆಂದು ತಿಳಿಸಿ, ಅಲ್ಲಲ್ಲಿ ತಾನು ಅವರನ್ನು ಸರ್ವಥಾ ರಕ್ಷಿಸುತ್ತಿರುವೆನೆಂದೂ ಹೇಳುತ್ತಾನೆ:—

(13)........**ನಮೇಭಕ್ತಃ ಪ್ರಣಶ್ಯತಿ ।**—(9. 31.)

ಅರ್ಜುನ! ನನ್ನ ಭಕ್ತನು ಎಂದಿಗೂ ನರಕಾದ್ಯನರ್ಥಗಳನ್ನು ಹೊಂದುವು ದಿಲ್ಲ.

(14) **ಅನನ್ಯಾಶ್ಚಿಂತಯಂತೋಮಾಂ ಯೇಜನಾಃಪರ್ಯುಪಾಸತೇ ।**
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯ ಹಂ ।—(9. 21.)

ಅನನ್ಯಮನಸ್ಕರಾಗಿ ಸಂತತ ನನ್ನನ್ನು ಯಾರು ಉಪಾಸನೆಮಾಡುತ್ತಾ ರೆಯೋ ಅಂಥವರ ಯೋಗಕ್ಷೇಮವನ್ನು ನಾನು ಧರಿಸುತ್ತೇನೆ. ಎಂದರೆ ಅವರಿಗೆ ಇರುವ ಜ್ಞಾನಭಕ್ತ್ಯಾದಿಗಳನ್ನು ರಕ್ಷಿಸುತ್ತಾ, ಮುಂದೆ ಮೋಕ್ಷಾದಿ ಪುರುಷಾ ರ್ಥಗಳನ್ನು ಪ್ರಾಪ್ತವಾಗುವಂತೆ ಮಾಡುತ್ತೇನೆ ಎಂದರ್ಥವು.

(15) **ಯೇತು ಸರ್ವಾಣಿ ಕರ್ಮಾಣಿ ಮಯಿಸನ್ನ್ಯಸ್ಯಮತ್ಪರಾಃ ।**
ತೇಷಾ ಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನಚಿರಾತ್ ಪಾರ್ಥ ಮಯ್ಯಾವೇಶಿತ ಚೇತಸಾಂ ।

—(12. 6-7.)

ನನ್ನಲ್ಲಿ ಸರ್ವ ಸತ್ಕರ್ಮಗಳನ್ನೂ ಸಮರ್ಪಿಸಿ, ನನ್ನನ್ನೇ ಸರ್ವೋತ್ತಮನೆಂದು ತಿಳಿದು, ನನ್ನಲ್ಲೇ ಇಡಲ್ಪಟ್ಟ ಮನಸ್ಸುಳ್ಳವರನ್ನು ನಾನು ಶೀಘ್ರದಲ್ಲಿಯೇ ಮೃತ್ಯುರೂಪ ಸಂಸಾರಸಾಗರದಿಂದ ಉದ್ಧಾರಮಾಡುವವನಾಗುತ್ತೇನೆ. ಭಕ್ತರು ಪ್ರೀತಿಯಿಂದ ಕೊಟ್ಟದ್ದನ್ನು ಸ್ವೀಕರಿಸುತ್ತೇನೆಂದೂ ಹೇಳುತ್ತಾನೆ :—

(16) **ಪತ್ರಂ ಪುಷ್ಪಂ ಫಲಂ ತೋಯಂ ಯೋಮೇಭಕ್ತ್ಯಾ ಪ್ರಯುಚ್ಛತಿ ।**
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯಾತಾತ್ಮನಃ ॥
—(9. 26.)

ಅನಿಷಿದ್ಧವಾದ ತುಲಸ್ಯಾದಿ ಪತ್ರಗಳು, ಕಮಲಾದಿ ಪುಷ್ಪಗಳು, ಫಲ, ಉದಕ, ಇವುಗಳನ್ನು ಸಹ ನನಗೆ ಭಕ್ತಿಯಿಂದ ಯಾರು ನಿವೇದನಮಾಡುತ್ತಾರೆಯೋ, ಅಂಥಾ **ವಿಷಯವಿರಕ್ತನಿಂದ** ಭಕ್ತಿಪೂರ್ವಕವಾಗಿ ಕೊಡಲ್ಪಟ್ಟ ಪತ್ರಾದಿಗಳನ್ನು ನಾನು ಸ್ವೀಕರಿಸುತ್ತೇನೆ.

ಶ್ರೀ ಕೃಷ್ಣನು ಇಂಥಾ ಭಕ್ತರಲ್ಲೂ ತಾರತಮ್ಯವನ್ನು ನಿರೂಪಿಸುತ್ತಾನೆ.

(17) **ಚತುರ್ವಿಧಾಭಜಂತೇ ಮಾಂಜನಾಃ ಸುಕೃತಿನೋಽರ್ಜುನ ।**
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀಚಭರತರ್ಷಭ ॥
ತೇಷಾಂ ಜ್ಞಾನೀನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ ।
(7. 16-17.)

ಎಲೈ ಭರತಶ್ರೇಷ್ಠನೇ ! ನಾಲ್ಕು ವಿಧರಾದ ಪುಣ್ಯವಂತರು ನನ್ನನ್ನು ಸೇವಿಸುತ್ತಾರೆ :—ರೋಗಾದಿಗಳಿಂದ ಪೀಡಿತರಾದವರು, ತತ್ವಜ್ಞಾನಾಪೇಕ್ಷೆಯುಳ್ಳವನು, ಧನಾಭಿಲಾಷೆಯುಳ್ಳವನು, ಮತ್ತು ತತ್ವಜ್ಞಾನಸಂಪನ್ನನಾದ ಜ್ಞಾನಿಯು. ಇವರುಗಳ ಮಧ್ಯದಲ್ಲಿ ಸದಾ ಭಗವಧ್ಯಾನದಲ್ಲಿ ಆಸಕ್ತನಾದ ನನ್ನನ್ನೇ ಪ್ರಧಾನನೆಂದು ತಿಳಿದು ಭಕ್ತಿಯನ್ನು ಹೊಂದಿರುವ ಜ್ಞಾನಿಯು ಶ್ರೇಷ್ಠನು. ನವಮಾಧ್ಯಾಯದಲ್ಲಿ ಭಕ್ತ ತಾರತಮ್ಯವನ್ನು ಶ್ರೀ ಕೃಷ್ಣನು ಸ್ಫುಟವಾಗಿ ವಿವರಿಸುತ್ತಾನೆ.

(18) **ಮಾಂಹಿಪಾರ್ಥವ್ಯಪಾಶ್ರಿತ್ಯಯೇಽಪಿಸ್ಯುಃ ಪಾಪಯೋನಯಃ ।**
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿಯಾಂತಿಪರಾಂಗತಿಂ ।
ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾಭಕ್ತಾರಾಜರ್ಷಯಸ್ತಥಾ ॥
—(9. 32-33.)

ಎಲೈ ಪಾರ್ಥನೇ! ನನ್ನನ್ನು ಆಶ್ರಯಿಸಿ ಸ್ತ್ರೀ, ವೈಶ್ಯ, ಶೂದ್ರಾದಿ ಅಧಮ ಯೋನಿಗಳಲ್ಲಿ ಹುಟ್ಟಿದವರೂ ಕೂಡ ಉತ್ತಮಗತಿಯನ್ನು ಹೊಂದುತ್ತಾರೆ. ಇನ್ನು ಉತ್ತಮರಾದ ಬ್ರಾಹ್ಮಣರೂ ರಾಜರ್ಷಿಗಳೂ ಭಕ್ತರಾಗಿ ಮೋಕ್ಷವನ್ನು ಹೊಂದುವರೆಂದು ಹೇಳುವುದೇನು? *

ಪ್ರಶ್ನೆ—ಸ್ವಾಮಿ! ಭಕ್ತರಲ್ಲಿ ಪರಮಾತ್ಮನು ಪ್ರೀತಿಮಾಡುವನೆಂದೂ, ಅದರಲ್ಲೂ ತಾರತಮ್ಯವು ಇರುವುದೆಂದೂ ನಿರೂಪಿತವಾಯಿತು. ಪ್ರೀತಿಯು ಸದ್ಗುಣವು. ಪರಮಾತ್ಮನಿಗೆ ಅದು ಇರಲಿ. ಕ್ರೂರವಾದ ದ್ವೇಷವು ಪರಮಾತ್ಮನಿಗೆ ಇರುವುದು ಹೇಗೆ? ಶ್ರೀ ಕೃಷ್ಣನು ತನಗೆ ದ್ವೇಷವುಂಟೆಂದು ಎಲ್ಲಿ ಹೇಳಿರುತ್ತಾನೆ?

ಶ್ರೀ ಶ್ರೀಗಳವರು—ದೋಷಹೀನರಲ್ಲಿ ದ್ವೇಷವು ದುರ್ಗುಣವೆನ್ನಿಸುವುದು. ದೋಷಿಗಳ ದ್ವೇಷವು ನಿರ್ದೋಷನಾದ ಪರಮಾತ್ಮನಿಗೆ ಉಚಿತವೇ ಸರಿ. ಮಲಾದಿಗಳನ್ನು ಕಂಡರೆ ಮೂಗು ಮುಚ್ಚಿಕೊಳ್ಳುವುದು ತಪ್ಪೇ! ದುಷ್ಟಶಬ್ದವನ್ನು ಕೇಳಿದಾಗ ಮನುಷ್ಯರು ಅದರಲ್ಲಿ ಅಪ್ರೀತಿಯಿಂದ ಕಿವಿಮುಚ್ಚಿಕೊಳ್ಳುವರು. ಇದು ಉತ್ತಮಗುಣವೆಂದು ಲೋಕದಲ್ಲಿ ಪ್ರಸಿದ್ಧವಾಗಿರುವುದು. ಹೀಗೆಯೇ ಗುಣಪೂರ್ಣನಾದ ಪರಮಾತ್ಮನು ದುರ್ಜನರಲ್ಲಿ ದ್ವೇಷವನ್ನು ಎಂದರೆ ಅಪ್ರೀತಿಯನ್ನು ಮಾಡುವನು; ಮತ್ತು ಅವರಿಗೆ ದುರ್ಗತಿಯನ್ನೂ ಕೊಡುವನು. ಈ ವಿಷಯವನ್ನು ಹದಿನಾರನೆಯ ಅಧ್ಯಾಯದಲ್ಲಿ ತಾನೇ ನಿರೂಪಿಸಿರುತ್ತಾನೆ:—

(19) **ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।**
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವಯೋನಿಷು ।
ಮಾಮಪ್ರಾಪ್ಯೈವ ಕೌಂತೇಯ ತತೋಯಾಂತ್ಯಧಮಾಂ ಗತಿಂ॥—(16. 18-20.)

ಈ ಶ್ಲೋಕಾರ್ಥಗಳು ಪೂರ್ವದಲ್ಲೇ ವ್ಯಾಖ್ಯಾತವಾಗಿರುವುವು.

ಈ ಶ್ಲೋಕಗಳಲ್ಲಿ ನನ್ನನ್ನು ದ್ವೇಷಮಾಡುವವರಿಗೆ ದುರ್ಗತಿಯನ್ನು ನಾನೇ ಕೊಡುವೆನೆಂದು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳಿರುತ್ತಾನೆ. ಆದುದರಿಂದ "ಸಮೋಹಂಸರ್ವಭೂತೇಷು ನಮೇದ್ವೇಷ್ಯೋಸ್ತಿನಪ್ರಿಯಃ" ಎಂಬ ಶ್ರೀಕೃಷ್ಣನ ವಾಕ್ಯಗಳಿಗೆ ಮೂರು ರೀತಿಯಲ್ಲಿ ಅರ್ಥವನ್ನು ಹೇಳಬಹುದು. 1. ನಾನು ಲೌಕಿಕಜನರಂತೆ ಅಭಿಮಾನದಿಂದ ದ್ವೇಷಪ್ರೀತಿಗಳನ್ನು ಮಾಡುವವನಲ್ಲ ಎಂದು ಒಂದು ಅರ್ಥವು. 2. ಅಥವಾ ದ್ವೇಷಿಗಳ ದ್ವೇಷದಿಂದ ನನಗೆ ಹಾನಿಯೂ, ಭಕ್ತರ

---

* ಈ ಶ್ಲೋಕಕ್ಕೆ ಇನ್ನೂ ಸೂಕ್ಷ್ಮವಾದ ಅರ್ಥವಿರುವುದು.

ಪತ್ರಾದಿ ದಾಸದಿಂದ ಸನಗೆ ಆಸಂದವೃದ್ಧಿಯೂ ಇಲ್ಲದೆ ನಾಸು ಸರ್ವದಾ ಆಸಂದ ಪೂರ್ಣನಾಗಿರುವುದರಿಂದ, ಸನಗೆ ಈ ವಿವಕ್ಷೆಯಿಂದ ದ್ವೇಷಕ್ಕೆ ವಿಷಯರೂ, ಪ್ರೀತಿಗೆ ವಿಷಯರೂ ಇಲ್ಲವೆಂದರ್ಥವು. 3. ಅಥವಾ ಅಧಿಕಾರಿಗಳ ಸ್ವರೂಪ ಯೋಗ್ಯತಾ ಕರ್ಮಾದಿಗಳಸ್ನು ಅತಿಕ್ರಮಿಸಿ ಅಸುಗ್ರಹ ನಿಗ್ರಹಗಳಸ್ನು ನಾಸು ಮಾಡುವವನಲ್ಲ. ನಾಸು ವೈಷಮ್ಯರಹಿತನು ಎಂದರ್ಥವು.* ಈ ಅರ್ಥವಸ್ನು ಮಾಡುವುದರಲ್ಲಿ ಶ್ರೀಕೃಷ್ಣನ ವಾಕ್ಯವೇ ಆಧಾರವಾಗಿರುವುದು.

(20) **ಯೇಯಥಾಮಾಂಪ್ರಪದ್ಯಂತೇ ತಾಂಸ್ತಥೈವಭಜಾಮ್ಯಹಂ ।**

—(4. 11.)

ಯಾರು ಯಾರು ಸನ್ನಸ್ನು ಯಾವಪ್ರಕಾರವಾಗಿ ಸೇವೆಮಾಡುತ್ತಾರೆಯೋ, ನಾಸೂ ಅವರಸ್ನು ಅವರುಗಳ ಭಜನಾನುಸಾರ ಸೇವಿಸುತ್ತೇನೆ. ಎಂದರೆ ಪ್ರೀತಿಮಾಡುವವರಸ್ನು ಪ್ರೀತಿಮಾಡುತ್ತೇನೆ. ದ್ವೇಷಿಗಳಸ್ನು ದ್ವೇಷಿಸುತ್ತೇನೆ. ಅವರ ಸೇವಾನುಸಾರವಾಗಿ ಫಲಪ್ರದನಾಗುತ್ತೇನೆ, ಎಂದು ಅರ್ಥವು.

ಇಷ್ಟು ಉಪಸ್ಯಾಸದಿಂದ ಐದಾರು ವಿಷಯುಗಳು ಸಿದ್ಧವಾದುವು. ಅನಾದಿ ನಿತ್ಯರಾದ ತ್ರಿವಿಧಚೇತನರು ಭಿನ್ನ ಭಿನ್ನ ಫಲ ಯೋಗ್ಯತೆಯನ್ನು ಹೊಂದಿ, ಭಿನ್ನ ಭಿನ್ನವಾದ ಉಪಾಸನೆಯಲ್ಲಿ ತತ್ಪರರಾಗಿ ಭಗವದಧೀನವಾದ ಈ ಪ್ರಪಂಚದಲ್ಲಿ ಇರುತ್ತಾರೆ. ಕೆಲವರು ನಿಷ್ಕಾಮತೆಯಿಂದ, ಕೃಷ್ಣೋಪಾಸ್ತಿಯಲ್ಲಿ ರತರಾದ, ಸಾತ್ವಿಕ ಆಹಾರ, ಶ್ರದ್ಧಾ, ಜ್ಞಾನಾದಿಗಳಿಂದ ಸಹಿತರಾದ ಮುಕ್ತಿಯೋಗ್ಯರು; ಕೆಲವರು "ಈಶ್ವರೋಹಂ" ಇತ್ಯಾದಿ ದುಷ್ಟೋಪಾಸನೆಯಲ್ಲಿ ಆಸಕ್ತರಾಗಿ, ಜನ್ಮಜನ್ಮದಲ್ಲಿ ಅಭಿವೃದ್ಧವಾದ ಕೃಷ್ಣದ್ವೇಷದಿಂದ ಸಹಿತರಾದ ತಮೋಯೋಗ್ಯರು. ಮತ್ತು ಕೆಲವರು ಕಾಮ್ಯಕರ್ಮಿಗಳಾದ, ವೇದದ ಆಪಾತಾರ್ಥದಲ್ಲಿ ರತರಾದ ತ್ರೈವಿದ್ಯರು. ಮುಕ್ತಿಯೋಗ್ಯರಿಗೆ ಪರಮಾತ್ಮನಲ್ಲಿ ಪ್ರವೇಶಾದಿ ರೂಪವಾದ ಪರಮಮುಕ್ತಿಯೂ, ತಮೋಯೋಗ್ಯರಿಗೆ ಕೃಷ್ಣಪ್ರಾಪ್ತಿರಹಿತವಾದ ಅಧಮಗತಿಯು ಎಂದರೆ ಅಂಧಂತಮಸ್ಸೆಂದು ಶ್ರುತಿಪುರಾಣಗಳಲ್ಲಿ ಸಿದ್ಧವಾದ ನಿತ್ಯನರಕವೂ, ತ್ರೈವಿದ್ಯರಿಗೆ ನಿತ್ಯವೂ ಸಂಸಾರಪ್ರಾಪ್ತಿಯೂ ಫಲರೂಪವಾಗಿ ಹೇಳಲ್ಪಟ್ಟಿರುತ್ತದೆ. ಈ ಯಾವತ್ತು ಅಧಿಕಾರಿಗಳು ಸಮಾನರಾಗಿ ಇರದೆ, ಬಹು ತರ

---

* "ಸಮೋಹಂ" ಇತ್ಯಾದಿ ರೀತಿಯಾದ ಶ್ರೀಕೃಷ್ಣನ ಅನ್ಯತ್ರ ಇರುವ ವಾಕ್ಯಗಳಿಗೆ **"ನಿರ್ದೋಷಂಹಿಸಮಂಬ್ರಹ್ಮ"** ಇತ್ಯಾದಿ ಶ್ಲೋಕಗಳಲ್ಲಿ ಮತ್ತೊಂದು ವ್ಯಾಖ್ಯಾನವೂ ಸೂಚಿತವಾಗಿರುವುದು. ಆದರೆ ಈ ಶ್ಲೋಕದಲ್ಲಿ ಅದು ಪ್ರಕೃತವಾಗಿರುವುದಿಲ್ಲ.

ತಮಭಾವದಿಂದ ಸಹಿತರಾಗಿದ್ದು ಸಾಧನಾನುಷ್ಠಾನದಲ್ಲೂ ತಾರತಮ್ಯೋಪೇತ ರಾಗಿಯೇ ಇರುವರೆಂದೂ ತಿಳಿದುಬರುತ್ತದೆ.

ಮತ್ತು ಜ್ಞಾನಿಯಾದ ಅರ್ಜುನನೂ ಕೂಡ ತನ್ನ ದಿವ್ಯದೃಷ್ಟಿಯಲ್ಲಿ ಬ್ರಹ್ಮರುದ್ರಾದಿ ಸಕಲ ಪ್ರಾಣಿಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ವಿಭಿನ್ನ ಫಲ ಗಳನ್ನು ಹೊಂದುತ್ತಿರುವಂತೆಯೇ ನೋಡಿರುವನು :—

(21) **ಅಮೀಚತ್ವಾಂಧೃತ ರಾಷ್ಟ್ರಸ್ಯ ಪುತ್ರಾಃ ಸರ್ವೇಸಹೈವಾವನಿ ಪಾಲಸಂಘೈಃ ।**
ವಕ್ತ್ರಾಣಿತೇತ್ವರಮಾಣಾವಿಶಂತಿ ದಂಷ್ಟ್ರಾಕರಾಲಾನಿಭಯಾನ ಕಾನಿ ।—(11. 26.)

ಇತ್ಯಾದಿ ಶ್ಲೋಕಗಳಿಂದ ಭೂಭಾರಹರಣಾರ್ಥವಾಗಿ ಅವತರಿಸಿರುವ ಶ್ರೀ ಕೃಷ್ಣನ ದ್ವೇಷಕ್ಕೆ ಪಾತ್ರರಾಗಿ, ಈ ಯಾವತ್ತು ದುಷ್ಟಕ್ಷತ್ರಿಯರು ಕೃಷ್ಣನಿಂದ "ನಿಹತ" ರಾಗಿರುತ್ತಾರೆಂದು ನಿಶ್ಚಿತವಾಗುವುದು. ಪಾಂಡವರನ್ನು ಮಾತ್ರ ಭಕ್ತವತ್ಸಲನಾದ ಪರಮಾತ್ಮನು ರಕ್ಷಿಸಿರುತ್ತಾನೆ. ಮುಕ್ತಿಯಲ್ಲೂ ತರತಮ ಭಾವವು ನಾಶಹೊಂದತಕ್ಕದ್ದಲ್ಲವೆಂಬಲ್ಲಿ ಸಾಯುಜ್ಯಾದಿ ಮುಕ್ತಿಸ್ಥಾನವನ್ನು ವರ್ಣಿಸುವ ಶ್ಲೋಕಗಳು ಪ್ರಮಾಣವಾಗಿರುತ್ತವೆ. ಮುಕ್ತಿಯಲ್ಲಿ ಸಾಮ್ಯವನ್ನು ಹೇಳಿದರೆ ಪರಮಾತ್ಮನಲ್ಲಿ ವೈಷಮ್ಯಾದಿದೋಷಪ್ರಾಪ್ತಿಯನ್ನೂ ಒಪ್ಪಬೇಕಾಗು ವುದರಿಂದ **"ಸಾಮ್ಯವಾದವು"** ಯುಕ್ತಿಪರಾಹತವಾಗುವುದು. ಮತ್ತು ಪ್ರಪಂಚದಲ್ಲಿರುವ ಅನಂತ ದುರವಸ್ಥೆಗಳಿಗೆ ಕಾರಣವನ್ನು ನಿರೂಪಿಸುವುದರಲ್ಲಿ ಅಶಕ್ತವಾಗಿರುವುದು. ಆದುದರಿಂದ, ಈ ಯಾವತ್ತು ಜಗತ್ತಿನಲ್ಲಿರುವ ವೈಚಿತ್ರ್ಯ ತಾರತಮ್ಯಗಳಿಗೆ ಅನಾದ್ಯನಂತಕಾಲದಿಂದಲೂ ತಾನೊಬ್ಬನೇ ನಿಯಾಮಕನಾಗಿ, ಪರಮಚೇತನನಾದುದರಿಂದಲೇ ಚೇತನ ತಾರತಮ್ಯಕ್ಕೆ ಶಿಖರಸ್ಥಾನದಲ್ಲಿರುವ, ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನು, ಸಕಲ ಮುಕ್ತಿಯೋಗ್ಯರೂ ದುಸ್ಸಂಗ ಮತ್ತು ದುಶ್ಶಾಸ್ತ್ರಾಭ್ಯಾಸದೋಷದಿಂದ ತಮ್ಮ ಮನಸ್ಸಿನಲ್ಲಿ ಪ್ರಾಪ್ತವಾಗಿರುವ ಮನೋವಿಕಾರಗಳನ್ನು ಇಂಥಾ ಉಪದೇಶಗಳಿಂದ ಪರಿಹರಿಸಿಕೊಂಡು, ತಮ್ಮ ಸ್ವಭಾವಾನುಗುಣವಾದ ನಿಷ್ಕಾಮವಾದ ಸಾತ್ವಿಕಧರ್ಮಗಳಿಂದ ಸೇವಿಸಿ, ತಮ್ಮ ಯೋಗ್ಯತಾನುಗುಣವಾದ ನೈಜಸುಖವನ್ನು ಮುಕ್ತಿಯಲ್ಲಿ ಅನುಭವಿಸುವರೆಂಬಲ್ಲಿ ಸಂಶಯವಿಲ್ಲ. **ಪ್ರತಿಜಾನೇ ಪ್ರಿಯೋಽಸಿಮೇ** ಎಂಬ ಶ್ರೀ ಕೃಷ್ಣನ ಪ್ರತಿಜ್ಞಾ ಪೂರ್ವಕವಾದ ವಚನವು ಸತ್ಯವೆಂದು ಪುನಃ ಶಪಥಪೂರ್ವಕವಾಗಿ ನಿರೂಪಿಸಿರು ತ್ತೇವೆ.

VI

ಮುಕ್ತಿಸ್ವರೂಪನಿರೂಪಣವು.

---

5 ರಿಂದ 7—8—1930 ರಲ್ಲಿ,

ಸಭಿಕರು—ಧರ್ಮಾಧಿಕಾರಿಗಳು, ವಿದ್ವಾಂಸರು ಮತ್ತು ವಿದ್ಯಾರ್ಥಿಗಳು.

ಪ್ರಶ್ನೆ—ಸ್ವಾಮಿ! ತಾವು ಈ ದಿವಸ, ಶ್ರೀಮನ್ಮಧ್ವಮತದಲ್ಲಿ ಪ್ರತಿಪಾದಿತವಾದ ಮುಕ್ತಿಸ್ವರೂಪವನ್ನು ಶ್ರೀಕೃಷ್ಣನ ವಾಕ್ಯಗಳಿಂದಲೇ ಸಾವಕಾಶವಾಗಿ ನಿರೂಪಿಸಬೇಕು?

ಶ್ರೀ ಶ್ರೀಗಳವರು—**ಮುಕ್ತಿರ್ನೈಜಸುಖಾನುಭೂತಿಃ** ಎಂಬ ಶ್ಲೋಕಭಾಗದಲ್ಲಿ, ನಿರ್ಗಳಿತವಾದ ಮುಕ್ತಿಲಕ್ಷಣವನ್ನು ವ್ಯಾಸರಾಯರು ನಿರೂಪಿಸಿರುವರು. ಇನ್ನೂ ವಿಶದವಾಗಿ ಹೇಳಿದರೆ, ಅವಿದ್ಯಾಬಂಧನಿವೃತ್ತಿ ಪೂರ್ವಕವಾದ ಸ್ವರೂಪಾನಂದಾವಿರ್ಭಾವವು ಮುಕ್ತಿಯೆನ್ನಿಸುವುದು. ಇದು ಚತುರ್ವಿಧ ಪುರುಷಾರ್ಥಗಳಲ್ಲಿ ಪ್ರಧಾನವೆಂದು ಸುಪ್ರಸಿದ್ಧವಾದುದು.

ಪ್ರಶ್ನೆ—ಸ್ವಾಮಿ! ಸ್ವಲ್ಪ ಅವಕಾಶಕೊಡಬೇಕು. "ಅವಿದ್ಯಾಸ್ತಮಯೋಮೋಕ್ಷಃ ಸಾಸಂಸಾರಉದಾಹೃತಃ" ಎಂಬ ಅದ್ವೈತಿಗಳ ವಾಕ್ಯೋಕ್ತರೀತಿಯಲ್ಲಿ, ಅವಿದ್ಯಾನಿವೃತ್ತಿಪೂರ್ವಕವಾದ ಸ್ವರೂಪಭೂತವಾದ ಬ್ರಹ್ಮಾನಂದ ಪ್ರಕಟನೆಯೇ ಮುಕ್ತಿಯೆಂದು ಅದ್ವೈತಮತದಲ್ಲಿ ಹೇಳಿರುತ್ತದೆ. 1. ಅವಿದ್ಯಾಬಂಧನಿವೃತ್ತಿ. 2. ಮತ್ತು ಸ್ವರೂಪಾನಂದಾವಿರ್ಭಾವವು ಇವೆರಡು ದಳಗಳಿಂದ ಸಹಿತವಾದ ವಿಶಿಷ್ಟಮುಕ್ತಿಯು ಉಭಯಮತಸಂಪ್ರತಿಪನ್ನವಾದುದರಿಂದ "ಮುಕ್ತಿ" ಯಲ್ಲಾದರೂ ದ್ವೈತಾದ್ವೈತ ವಾದಗಳಿಗೆ ಕಲಹವು ಶಾಂತಿಯಾಗುವಂತೆ ತೋರುತ್ತದೆ.

ಶ್ರೀ ಶ್ರೀಗಳವರು—"ಮುಕ್ತಿ" ವಿಷಯದಲ್ಲಿ ದ್ವೈತಿಗಳಿಗೂ ಅದ್ವೈತಿಗಳಿಗೂ ಅತಿಭಯಂಕರವಾದ ವಿವಾದವು ನಡೆದಿರುತ್ತದೆ. ಮುಕ್ತಿ ಎಂದರೆ ಬಂಧದಿಂದ ಬಿಡುಗಡೆಯೆಂದು ಯೌಗಿಕವಾದ ಅರ್ಥವು; ಸ್ವರೂಪಾನಂದದ ಆವಿರ್ಭಾವವೆಂದು **ಮುಕ್ತಿರ್ಹಿತ್ವಾನ್ಯಥಾರೂಪಂ ಸ್ವರೂಪೇಣವ್ಯವಸ್ಥಿತಿಃ** ಇತ್ಯಾದಿ

ಭಾಗವತ ಪ್ರಯೋಗಾನುಸಾರ ರೂಢಿಯಿಂದ ಪ್ರಾಪ್ತವಾದ ಅರ್ಥವು. ಈ ಉಭಯಾರ್ಥಗಳೂ ದ್ವೈತಿಗಳಿಂದ ಪ್ರತಿಪಾದಿತವಾದ ಮುಕ್ತಿಯಲ್ಲಿ ಸಮಗ್ರವಾಗಿ ಇರುವುವು. ಅನಾದಿಯಾದ, ಸತ್ಯಭೂತವಾದ ಬಹುದುಃಖಪ್ರದವಾದ, ಅವಿದ್ಯಾದಿ ಬಂಧದಿಂದ ಆವೃತನಾದ ಈ ಜೀವನು ಬ್ರಹ್ಮಜ್ಞಾನವನ್ನು ಸಂಪಾದಿಸಿ, ಪರಮಾತ್ಮನ ಅನುಗ್ರಹವನ್ನು ಹೊಂದಿದನಂತರ, ಪ್ರಸನ್ನನಾದ ಪರಮಾತ್ಮನು "ವಿಮೋಚಯಾಮಿ" ಎಂಬ ತನ್ನ ಸಂಕಲ್ಪಾನುಸಾರವಾಗಿ ಈ ಜೀವನನ್ನು ಸಂಕೋಲೆಯಂತೆ ಬಂಧಿಸಿರುವ, ಅವಿದ್ಯಾದಿ ಆವರಣಗಳನ್ನು ತೆಗೆದುಬಿಡುವನು. ಅನಂತರ ಜೀವನು ಪರಮಾತ್ಮನ ಪರಿಪೂರ್ಣವಾದ ಅನುಗ್ರಹಕ್ಕೆ ಪಾತ್ರನಾಗಿ ಅಭಿವ್ಯಕ್ತವಾದ ತನ್ನ ಸ್ವರೂಪಭೂತವಾದ ಆನಂದವನ್ನೇ ಅನುಭವಿಸುತ್ತಾ, ನಿತ್ಯವಾದ ವೈಕುಂಠಾದಿ ಸ್ಥಾನಗಳಲ್ಲಿ ಪರಮಾತ್ಮನ ಅಧೀನತೆಯಲ್ಲಿಯೇ ರಮಿಸುತ್ತಿರುವನು. ಇದು ದ್ವೈತಮತದಲ್ಲಿ ಪ್ರಮಾಣಗಳಿಂದ ನಿಶ್ಚಿತವಾದ ಮುಕ್ತಿಸ್ವರೂಪವು. ಇದೇ ಪ್ರಧಾನಪುರುಷಾರ್ಥವು.

ಅದ್ವೈತಮತದಲ್ಲಿ 1. ಮುಕ್ತಿವಿಷಯಕವಾದ ಪ್ರಶ್ನೋತ್ತರಗಳಿಗೇ ಅವಕಾಶವಿರುವುದಿಲ್ಲ. ನಿತ್ಯಮುಕ್ತನಾದ ಪರಬ್ರಹ್ಮನು ಒಂದೇ ನಿಜತತ್ವವೆಂದು ಅದ್ವೈತಮತದ ಸಿದ್ಧಾಂತವು. ಸಚ್ಚಿದಾನಂದ ಸ್ವರೂಪನಾದ ಬ್ರಹ್ಮನಿಂದ ಅತಿರಿಕ್ತ ಚೈತನ್ಯವಾಗಲೀ, ಜಡವಾಗಲೀ, ಈಗ ಇರುವುದಿಲ್ಲ, ಹಿಂದೆಯೂ ಇರಲಿಲ್ಲ, ಮುಂದೂ ಇರುವುದಿಲ್ಲ. ಹೀಗಿರುವಾಗ ಯಾರಿಗೆ ಮುಕ್ತಿಯಾಗಬೇಕು ? ಜಡಕ್ಕೆ ಮುಕ್ತಿಯಾಗುವುದೆಂದು ಯಾವ ವಾದಿಯು ಧೈರ್ಯದಿಂದ ಹೇಳುವನು ? ಚೇತನನಿಗೆ ಮುಕ್ತಿಯು ಎಂದು ಸರ್ವರೂ ಒಪ್ಪಿರುತ್ತಾರೆ. ಅದರಲ್ಲಿ ನಿತ್ಯಮುಕ್ತನಾದ ಒಂದೇ ಚೇತನನು ಇರುವುದಾದರೆ ಮುಕ್ತಿಯನ್ನು ಹೊಂದುವ ಅಧಿಕಾರಿಗಳೇ ಇಲ್ಲದುದರಿಂದ ಅದ್ವೈತಮತದಲ್ಲಿ ಮುಕ್ತಿವಾರ್ತೆಯೇ ಲುಪ್ತವಾಗಬೇಕು. ಹೀಗಿರುವಲ್ಲಿ ಉಭಯದಳಾತ್ಮಕವಾದ ಮುಕ್ತಿಯನ್ನು ಅದ್ವೈತಿಗಳು ಒಪ್ಪುವುದಕ್ಕಾಗುವುದೇ ? 2. ಬ್ರಹ್ಮಚೈತನ್ಯನಿಗೆ ಮುಕ್ತಿಯಾಗುವುದೆಂದು ಹೇಳುವುದು ಸರ್ವಥಾ ಅನುಚಿತವು. ಹೇಗೆಂದರೆ ಪರಬ್ರಹ್ಮನು ನಿತ್ಯಮುಕ್ತನು. ಮುಕ್ತನಿಗೆ ಮುಕ್ತಿಯಾಗುವುದು ಎಂಬುದು ಅಸಂಗತವು. ಸಿದ್ಧವಾದ ಮುಕ್ತಿಯನ್ನು ಸಾಧ್ಯವೆಂದು ಹೇಳುವುದು ಸರಿಯಲ್ಲ. 3. ಬ್ರಹ್ಮಚೈತನ್ಯವು ನಿತ್ಯಮುಕ್ತನಾದರೂ, ತನ್ನ ಆನಂದವು ಅವಿದ್ಯಾವೃತವಾಗಿರುವುದರಿಂದ ಆನಂದಾವಿರ್ಭಾವವು ಇನ್ನೂ ಪ್ರಾಪ್ತವಾಗಿಲ್ಲ. ಅವಿದ್ಯಾನಿವೃತ್ತಿ ದ್ವಾರಾ ಅಂಥಾ ಸ್ವರೂಪಭೂತವಾದ ಆನಂ

ದದ ಆವಿರ್ಭಾವವು ಪ್ರಾಪ್ತವಾಗುವುದು. ಅದೇ ಮುಕ್ತಿಯು ಎಂದು ಅದ್ವೈತಿಗಳು ಹೇಳಲಾಗುವುದಿಲ್ಲ. ಹೇಗೆಂದರೆ ಅದ್ವೈತಮತದಲ್ಲಿ ಬ್ರಹ್ಮನೇ ಆನಂದನು. ಆನಂದ = ಬ್ರಹ್ಮನು. ಹೀಗಿರುವಲ್ಲಿ ಆನಂದಾವಿರ್ಭಾವವು ಈಗ ಇರುವುದಿಲ್ಲ, ಮುಂದೆ ಆಗುವುದು ಎಂಬ ವಾಕ್ಯಕ್ಕೆ **ಈಗ ಬ್ರಹ್ಮನು ಆವಿರ್ಭವಿಸಿರುವುದಿಲ್ಲ** ಮುಂದೆ ಬ್ರಹ್ಮನು ಆವಿರ್ಭವಿಸುವನು ಎಂದು ಅರ್ಥವಾಗುವುದು. ಇದು ಅದ್ವೈತಿಗಳಿಗೆ ಸಮ್ಮತವಾದ ತತ್ವವಲ್ಲ. 4. ಅಥವಾ ಬ್ರಹ್ಮನಿಗೆ ಆನಂದದ ಅನುಭವವು ಈಗ ಇರುವುದಿಲ್ಲ, ಮುಂದೆ ಬರುವುದು ಎಂದು ನಿಮ್ಮ ಪ್ರಶ್ನಾಭಿಪ್ರಾಯವಿರಬಹುದು. ಅದೂ ಅದ್ವೈತತತ್ವವಲ್ಲ. ಆನಂದಾನುಭವರೂಪನಾದ ಬ್ರಹ್ಮನು ಇರುವನೆಂಬುದು ಅದ್ವೈತಮತವಲ್ಲ. ಯಾತಕ್ಕೆಂದರೆ, ಆನಂದಾನುಭವವೆಂದರೆ ಆನಂದದ ಅನುಭವವು (ಆನಂದವಿಷಯಕ ಅನುಭವವು) ಎಂದರ್ಥವು. ಹಾಗೆಂದರೆ, ಆನಂದವೆಂಬ ವಿಷಯವನ್ನು ಭೋಗಿಸುವ ಬ್ರಹ್ಮನು ಎಂಬ ಅರ್ಥವಾಗುವುದು. ಆಗ ದ್ವೈತವು ಪ್ರಾಪ್ತವಾಗುವುದು, ಮತ್ತು ಕರ್ತೃಕರ್ಮವಿರೋಧವೂ ಬರುವುದೆಂದು ಅದ್ವೈತಿಗಳು ಆನಂದನೇ ಬ್ರಹ್ಮನು ಎಂದು ತೀರ್ಮಾನಮಾಡಿರುತ್ತಾರೆ. 5. ಪರಂತು ಈ ಉಭಯಪಕ್ಷದಲ್ಲೂ ಮತ್ತೊಂದು ಸಾಮಾನ್ಯವಾದ ದೋಷವು ಇದ್ದೇ ಇರುವುದು. ಬ್ರಹ್ಮನು ನಿತ್ಯಮುಕ್ತನು ಎಂದು ಹೇಳಿ, ಈಗ ಅವಿದ್ಯಾವೃತನಾಗಿರುವನು ಈಗ ಮುಕ್ತನಲ್ಲ ಎಂದು ಹೇಳುವುದು ಹೇಗೆ? ಆದುದರಿಂದ ಬ್ರಹ್ಮನು ನಿತ್ಯಮುಕ್ತನೆಂದು ಹೇಳಿದರೆ ಅವಿದ್ಯಾವೃತನಾಗುವನು ಎಂದು ಹೇಳಕೂಡದು: ಬ್ರಹ್ಮನು ಅವಿದ್ಯಾವೃತನಾಗಿರುವನು ಎಂದು ಹೇಳಿದರೆ ನಿತ್ಯಮುಕ್ತನೆಂಬ ಮತವನ್ನು ಪರಿತ್ಯಾಗಮಾಡಬೇಕು. ನಿತ್ಯಮುಕ್ತತ್ವವೂ ಅವಿದ್ಯಾವೃತತ್ವವೂ ಒಂದು ವಸ್ತುವಿನಲ್ಲಿ ಬರಲಾರವು. 6. ಕಿಂಚ, ಸ್ವರೂಪಾನಂದದ ಆವಿರ್ಭಾವವು ಮುಕ್ತಿಯು ಎಂಬ ಮಾತು ನಿರ್ವಿಶೇಷಬ್ರಹ್ಮವಾದವಾದ ಅದ್ವೈತಮತದಲ್ಲಿ ಅಸಮಂಜಸವಾಗುವುದು. ಆವಿರ್ಭಾವ, ಅನಾವಿರ್ಭಾವವೆಂಬ ವಿಶೇಷ (ಧರ್ಮ) ಗಳು ಬ್ರಹ್ಮಸ್ವರೂಪಭೂತವಾದ ಆನಂದದಲ್ಲಿರುವುದೆಂದು ಅದ್ವೈತಿಗಳು ಒಪ್ಪಿರುವುದಿಲ್ಲ. ಅಷ್ಟೇ ಅಲ್ಲ! ಅವಿದ್ಯೆಯಿಂದ ಆವ್ರಿಯಮಾಣತ್ವವೆಂಬ (ಆವರಿಸಲ್ಪಡುವುದೆಂಬ) ಧರ್ಮವೂ ಅವನಲ್ಲಿಲ್ಲ. 7. ಪರಂತು ಪರಿಪೂರ್ಣವಾದ ಬ್ರಹ್ಮಾನಂದವು ಅವಿದ್ಯಾವೃತವಾಗುವುದಾದರೆ ಅದಕ್ಕೆ ಪೂರ್ಣತ್ವವೇ ಸಂಭವಿಸಲಾರದು. 8. ಮತ್ತು ಬ್ರಹ್ಮನು ಅವಿದ್ಯಾವೃತನು ಎಂಬ ಉಕ್ತಿಯು ಸೂರ್ಯನು ಅಂಧಕಾರದಿಂದ ಆವೃತನಾದನು ಎಂಬಂತೆ ಅತ್ಯಂತ ಅಪಹಸನೀಯಪ್ರಕ್ರಿಯೆಯು.

ಈ ರೀತಿಯಾಗಿ ಅದ್ವೈತಮತದರೀತ್ಯಾ ಸ್ವರೂಪಾನಂದಾವಿರ್ಭಾವವು, ಅವಿದ್ಯಾದಿ ಬಂಧನಿವೃತ್ತಿಯು ಎಂಬ ಮುಕ್ತಿಯ ಎರಡು ದಳಗಳಲ್ಲಿ ಒಂದು ಭಗ್ನವಾಗಿ ಹೋಯಿತು. ಇನ್ನು ಅವಿದ್ಯಾನಿವೃತ್ತಿಯು ಮುಕ್ತಿಯುಎಂಬ ಲಕ್ಷಣವೂ ಅದ್ವೈತಮತದ ರೀತಿಯಲ್ಲಿ ಸಂಭವಿಸಲಾರದು. ಹೇಗೆಂದರೆ 9. ಅವಿದ್ಯಾನಿವೃತ್ತಿಯು ಜಡಕ್ಕೇ ಅಥವಾ ಚೇತನನಿಗೇ ? ಅಂತಃಕರಣಾದಿ ಜಡಗಳಿಗೆ ಆವರಕವಾದ ಅವಿದ್ಯೆಯು ನಿವೃತ್ತವಾಗುವುದು; ಅದು ಮುಕ್ತಿಯು ಎಂದು ಹೇಳುವುದಾದರೆ, ಅಂತಃಕರಣವು ಮುಕ್ತವಾಯಿತು, ಘಟವು ಮುಕ್ತವಾಯಿತು ಇತ್ಯಾದಿ ವ್ಯವಹಾರಗಳು ಪರಿದೃಶ್ಯಮಾನವಾಗಬೇಕು. ಲೋಕದಲ್ಲಿ ಹಾಗಿಲ್ಲ. ಮುಕ್ತಿಎಂಬುದು **ಚೇತನನಿಗೆ** ಆವರಕವಾದ ಅವಿದ್ಯೆಯ ನಿವೃತ್ತಿಯು ಎಂದು ಹೇಳಿದರೂ ಅದ್ವೈತಮತದಲ್ಲಿ ಬಹು ದೋಷಗಳು ಬರುವುವು. ಒಂದೇ ಬ್ರಹ್ಮಚೈತನ್ಯವು ಅವಿದ್ಯಾಬದ್ಧವಾಗಲಾರದೆಂದು ನಾವು ನಿರೂಪಿಸಿರುತ್ತೇವೆ. ಹೀಗೆ ಅವಿದ್ಯೆಗೆ ಬಂಧಕತ್ವವೇ ದುರ್ನಿರೂಪವಾದುದರಿಂದ ಅವಿದ್ಯಾನಿವೃತ್ತಿಯು ಮುಕ್ತಿಯೆನ್ನಿಸಲಾರದು. 10. ಅಥವಾ ವ್ಯಾಪ್ತವಾದ ಬ್ರಹ್ಮಚೈತನ್ಯನಿಗೆ **ಬಂಧಕವಾಗದಂತೆ** ಅವಿದ್ಯೆಯು, ಆಕಾಶದಲ್ಲಿ ಮೇಘದಂತೆ ಇದ್ದು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುತ್ತಿರುವುದು; ಇದೇ "ಅವಿದ್ಯಾನಿವೃತ್ತಿಯು" ಎಂದೆನಿಸುವುದಾದರೆ, ಅಂಥಾ ಅವಿದ್ಯಾನಿವೃತ್ತಿಯನ್ನು ಪುರುಷಾರ್ಥವೆಂದು ಯಾವ ಚೇತನನೂ ತಿಳಿಯಲಾರನು. ನಮಗೆ ಸ್ವಲ್ಪವೂ ತೊಂದರೆಕೊಡದಂತೆ ಇರುವ, ಮನೆಯ ಹೆಂಚಿನಮೇಲಿನ ಒಂದು ಹುಲ್ಲುಕಡ್ಡಿಯು ಮತ್ತೊಂದು ಹೆಂಚಿನ ಮೇಲಕ್ಕೆ ಹಾರಿ ಹೋಗಿ ಕುಳಿತರೆ ನಮಗೇನಾಯಿತು? ಇದೇ ರೀತಿಯಲ್ಲಿ, ವ್ಯಾಪ್ತಬ್ರಹ್ಮಚೈತನ್ಯನ ಆಶ್ರಯದಲ್ಲಿರುವ ಅವಿದ್ಯೆಯು ಸ್ಥಳದಿಂದ ಸ್ಥಳಕ್ಕೆ ಓಡಾಡುತ್ತಿದ್ದರೆ, ಅಥವಾ ಸ್ವರೂಪೇಣ ನಾಶವನ್ನು ಹೊಂದಿದರೂ ಸಹ, ಯಾವ ಚೇತನನಿಗೂ ಬಂಧಪ್ರಸಕ್ತಿಯೇ ಇಲ್ಲದಿರುವುದರಿಂದ ಅಂಥಾ ಅವಿದ್ಯಾನಿವೃತ್ತಿಯು ಮುಕ್ತಿ ಎಂದೆನಿಸಲಾರದು. ತನ್ನಿಂದ ಅಪ್ರಿಯಮಾಣನಾದ ಚೇತನನಲ್ಲಿ ಯಾವ ವಿಶೇಷವನ್ನೂ ಸಮರ್ಪಣೆಮಾಡದೇ ಇರುವ ಅವಿದ್ಯೆಯ ಓಡಾಟವು, (ಚೇತನನ ಬಂಧನಿವೃತ್ತಿರೂಪವಾಗಿಲ್ಲದುದರಿಂದಲೇ) ಮುಕ್ತಿ ಎಂದೆನಿಸಲಾರದು. 11. ಮತ್ತು ಅದ್ವೈತಮತದಲ್ಲಿ ಬ್ರಹ್ಮನಿಗೆ ಅವಿದ್ಯಾಬದ್ಧತೆಯು ಹೇಗೆ ಕೂಡುವುದಿಲ್ಲವೋ, ಹಾಗೆಯೇ ಅವಿದ್ಯೆಗೂ ಬ್ರಹ್ಮಬಂಧಕತ್ವವು ಕೂಡುವುದಿಲ್ಲ. ನಿತ್ಯಮುಕ್ತನಾದ ಜ್ಞಾನಾನಂದಸ್ವರೂಪನಾದ ಬ್ರಹ್ಮನನ್ನು **ಸ್ವಯಂಮಿಥ್ಯಾಭೂತವಾದ** ಅವಿದ್ಯೆಯು ಹೇಗೆತಾನೇ ಬಂಧಿ

ಸಿಗುವುದಕ್ಕೆ ಸಮರ್ಥನಾದೀತು ?* ಹೀಗೆ ಸರ್ವ ಪ್ರಕಾರದಿಂದಲೂ ಅನುಪಪನ್ನ

---

* ಅನಾದಿಯಾದ ಅವಿದ್ಯೆ (ಮಾಯೆ) ಯಿಂದ ಬ್ರಹ್ಮಕ್ಕೆ ತನ್ನ ರೂಪವಾದ ಆನಂದವು ಅವ್ಯಕ್ತವಾಗಿರುವುದೆಂಬ ಈ ವಾದವು ಶ್ರೀಭಾಷ್ಯಕಾರರಾದ ರಾಮಾನುಜಾಚಾರ್ಯರಿಂದಲೂ ಸವಿಸ್ತರವಾಗಿ ಖಂಡಿಸಲ್ಪಟ್ಟಿದೆ. ಅವರು ಏಳು ಅನುಪಪತ್ತಿಗಳನ್ನು ಹೇಳಿರುವರು. 1. **ಆಶ್ರಯಾನುಪಪತ್ತಿ** : ಅವಿದ್ಯೆಯು ಎಲ್ಲಿದ್ದು ಬಂಧವನ್ನು (ಸಂಸಾರಭ್ರಾಂತಿಯನ್ನು) ಉಂಟುಮಾಡುವುದು. ಜೀವನಲ್ಲಿ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಜೀವನೂ ಸಹ ಅವಿದ್ಯಾಕಲ್ಪಿತನು. ಆದುದರಿಂದ ಬ್ರಹ್ಮನ ಆಶ್ರಯದಲ್ಲಿಯೇ ಇದ್ದು ತಾನು ಸಂಸಾರಿಯಾದ ಜೀವನು ಎಂಬ ಭ್ರಾಂತಿಯನ್ನು ಬ್ರಹ್ಮನಿಗೇ ಉಂಟುಮಾಡುವುದು ಎಂದು ಹೇಳಬೇಕು. ಇದು ಅಸಂಭಾವಿತವು. ಸೂರ್ಯನಲ್ಲಿ ಅಂಧಕಾರವು ಹೇಗೆ ಇರುವುದು ಅಸಂಭಾವಿತವೋ, ಹಾಗೆಯೇ ಸ್ವಪ್ರಕಾಶಜ್ಞಾನಸ್ವರೂಪನಾದ ಪರಬ್ರಹ್ಮನು ಅವಿದ್ಯೆಗೆ ಆಶ್ರಯನಾಗಲಾರನು. ಆದುದರಿಂದ 'ಅವಿದ್ಯಾ' ವಾದವು ಅಪ್ರಮಾಣಿಕವು.

2. **ತಿರೋಧಾನಾನುಪಪತ್ತಿ.** ಅವಿದ್ಯೆಯು ಬ್ರಹ್ಮನನ್ನು ಯಾವ ರೀತಿಯಿಂದಲೂ ಆವರಿಸಲಾರದು. ಏಕೆಂದರೆ, ಅವಿದ್ಯೆಯು ಬ್ರಹ್ಮನನ್ನಾಗಲೀ, ಬ್ರಹ್ಮನ ಆನಂದವನ್ನಾಗಲೀ ಸ್ವಪ್ರಕಾಶತ್ವವನ್ನಾಗಲೀ ತಿರೋಧಾನಹೊಂದಿಸಲಾರದು. (ಮುಚ್ಚಲಾರದು.) **ನಿತ್ಯನಾದ** ಮತ್ತು ಸತ್ಯನಾದ ಸ್ವಪ್ರಕಾಶತ್ವಾದಿ ಧರ್ಮಗಳುಳ್ಳ ಬ್ರಹ್ಮನು ಆವರಿಸಲ್ಪಡುವುದಕ್ಕೆ (ಅಥವಾ ಬಂಧಿಸಲ್ಪಡುವುದಕ್ಕೆ) ಯೋಗ್ಯನಾಗದ ವಸ್ತುವಾದುದರಿಂದ ಅವಿದ್ಯೆಯು ಬ್ರಹ್ಮನನ್ನು ಆವರಿಸುವುದು ಎಂದು ಹೇಳುವ ವಾದವು ಅಪ್ರಾಮಾಣಿಕವು.

3. **ಸ್ವರೂಪಾನುಪಪತ್ತಿ.** ಅವಿದ್ಯೆಯು "ಸತ್" ಪದಾರ್ಥವಾದರೆ ಬ್ರಹ್ಮನೊಬ್ಬನೇ "ಸತ್" ಪದಾರ್ಥವು ಎಂದು ಹೇಳುವ ಅದ್ವೈತಮತಕ್ಕೆ ಭಂಗವು ಬರುವುದು. ಅವಿದ್ಯೆಯು 'ಅಸತ್' ಪದಾರ್ಥವಾದರೆ ಅದಕ್ಕೆ ಬಂಧಕತ್ವವು ಕೂಡುವುದಿಲ್ಲ. ಕಿಂಚ ಅವಿದ್ಯೆಯು ಬ್ರಹ್ಮಭಿನ್ನವಾದರೆ, "ಬ್ರಹ್ಮಭಿನ್ನವಾದ ಸರ್ವವೂ "ಮಿಥ್ಯಾ" ಆದುದರಿಂದ, ತಾನೂ ಮಿಥ್ಯಾ ಆಗಿ, ಪರಬ್ರಹ್ಮನನ್ನು ಬಂಧಿಸಿ ಅವನಿಗೆ ಭ್ರಾಂತಿಯನ್ನು ಹುಟ್ಟಿಸಲಾರದು. ಅವಿದ್ಯೆಯು ಬ್ರಹ್ಮಾತ್ಮಕವೇ ಆಗಿಹೋದರೆ, ಬ್ರಹ್ಮನೇ ಅವಿದ್ಯಾಸ್ವರೂಪನು— ಬ್ರಹ್ಮನೇ ಅಜ್ಞಾನನು— ಬ್ರಹ್ಮನೇ ಸ್ವರೂಪತಃ ಭ್ರಾಂತನು ಎಂದು ಪ್ರಾಪ್ತವಾಗುವುದು. ಆಗ ಬ್ರಹ್ಮನು ನಿತ್ಯನಾದಂತೆ, ಬ್ರಹ್ಮಸ್ವರೂಪವಾದ ಅವಿದ್ಯೆಯೂ ನಿತ್ಯವಾಗಿ ಅದರ ನಿವೃತ್ತಿಯು ದುರ್ಘಟವಾಗಿ, ಮೋಕ್ಷವಾರ್ತೆಯೇ ಲುಪ್ತವಾಗಬೇಕಾದೀತು ! ಅವಿದ್ಯಾಸ್ವರೂಪವು ಅದ್ವೈತಮತದಲ್ಲಿ ಹೇಳುವುದಕ್ಕೆ ಬರುವುದಿಲ್ಲವಾದುದರಿಂದ "ಅವಿದ್ಯಾ" ವಾದವು ಅಪ್ರಾಮಾಣಿಕವು.

4. **ಅನಿರ್ವಚನೀಯಾನುಪಪತ್ತಿ.** ಅವಿದ್ಯೆಯು 'ಸತ್' ಪದಾರ್ಥವೂ 'ಅಸತ್' ಪದಾರ್ಥವೂ ಅಲ್ಲವೆಂದು ಅದ್ವೈತಿಗಳು ಹೇಳುತ್ತಾರೆ. ಇದು ತಪ್ಪು. ಸದಸದ್ವಿಲಕ್ಷಣವಾದ ವಸ್ತುವು ಅಪ್ರಸಿದ್ಧವಾದುದರಿಂದ, ಸದಸದ್ವಿಲಕ್ಷಣವಾದ ಅವಿದ್ಯೆಯೂ ವಂಧ್ಯೆಯ ಪುತ್ರನಂತೆ ಅಪ್ರಾಮಾಣಿಕವು.

5. **ಪ್ರಮಾಣಾನುಪಪತ್ತಿ.** ಇಂಥಾ ವಿಧವಾದ ಬ್ರಹ್ಮನನ್ನು ಬಂಧಿಸುವ ಅವಿದ್ಯೆಯು ಇರುವುದು ಎಂಬಲ್ಲಿ ಯಾವ ಪ್ರಮಾಣವೂ ಇರುವುದಿಲ್ಲವಾದುದರಿಂದ ಅವಿದ್ಯೆಯು ಅಪ್ರಾಮಾಣಿಕವು

6. **ನಿವರ್ತಕಾನುಪಪತ್ತಿ.** ನಿಷ್ಪ್ರಕಾರಕವಾದ ಬ್ರಹ್ಮಜ್ಞಾನದಿಂದ ಅವಿದ್ಯೆಯು ನಾಶವಾಗುವುದೆಂದು ಅದ್ವೈತಿಗಳು ಹೇಳುತ್ತಾರೆ. ನಿರ್ಗುಣಬ್ರಹ್ಮನೆಂಬ ಪದಾರ್ಥವೇ ಅಪ್ರಾಮಾಣಿಕವು. ನಿರ್ಗುಣಬ್ರಹ್ಮವಿಷಯಕವಾದ ನಿಷ್ಪ್ರಕಾರಕವಾದ ಬ್ರಹ್ಮಜ್ಞಾನವೂ ಅತ್ಯಂತ ಅಪ್ರಸಿದ್ಧವಾದುದರಿಂದ, ಅದ್ವೈತಿಗಳ ಅವಿದ್ಯಾವಾದವು ಅಪ್ರಮಾಣಿಕವು.

7. **ನಿವೃತ್ತ್ಯಾನುಪಪತ್ತಿ.** ಅವಿದ್ಯಾನಾಶಮಾತ್ರದಿಂದ ಸಂಸಾರ ನಿವೃತ್ತಿಯಾಗಿ ಮುಕ್ತಿಯಾಗುವುದೆಂಬುದೂ ಸುಳ್ಳು. ಅದು ಕೇವಲ ನಿಷ್ಪ್ರಕಾರಕಜ್ಞಾನದಿಂದ ಓಡಿಹೋಗಲಾರದು. ಪರಮಾತ್ಮನ ಅನುಗ್ರಹದಿಂದಲೇ ಅವಿದ್ಯೆಯು ಬಿಟ್ಟು ಹೋಗಬೇಕು. ಹೀಗೆ ಸಂಸಾರಬಂಧವು ಅವಿದ್ಯಾನಿವೃತ್ತಿಮಾತ್ರದಿಂದ ನಾಶಹೊಂದುವುದಿಲ್ಲವಾದುದರಿಂದ, ಅವಿದ್ಯೆಯೇ ಸಂಸಾರವು, ಅದರ ನಿವೃತ್ತಿಯೇ ಮುಕ್ತಿಯು ಎಂಬ **“ಅವಿದ್ಯಾ”** ವಾದವು ಅತ್ಯಂತ ಅಪ್ರಾಮಾಣಿಕವು.

ಈ ವಿಷಯಗಳ ನಿರೂಪಣೆಯಲ್ಲಿ ರಾಮಾನುಜಾಚಾರ್ಯರು ಮಾಡಿರುವ ಚರ್ಚೆಯು ಸೂಕ್ಷ್ಮವಾಗಿರುವುದೆಂದೂ, ಅವರು ಪ್ರದರ್ಶಿಸಿರುವ ಅನುಪಪತ್ತಿಗಳು ನ್ಯಾಯವಾಗಿಯೂ ಅವಿದ್ಯಾವಾದವನ್ನು ತಿರಸ್ಕರಿಸುವುದರಲ್ಲಿ ಅತ್ಯಂತ ಸಮರ್ಥವಾಗಿರುವುವೆಂದೂ **ಥಿಬೋ ; ಉರ್ಕುಹಾರ್ಟ್ ; ಓಟೋ** ಮುಂತಾದ ಪಾಶ್ಚಾತ್ಯಗ್ರಂಥಕರ್ತರೂ ಸ್ಪಷ್ಟವಾಗಿ ಬರೆದಿರುತ್ತಾರೆ. **ಓಟೋ**ಸಾಹೇಬನ ವರ್ಣನೆಯು ಮನೋಹರವಾಗಿರುತ್ತದೆ :—

“And now begins the struggle of proposition against proposition, assertion against assertion, a struggle in the truest sense, breast to breast, and knee to knee, a struggle of the utmost intensity without pause to take breath, until limb by limb the opponent is overcome and crushed to the earth. Siddhanta of Ramanuja by Otto.

(ಅದ್ವೈತತತ್ತ್ವವಾದ ಮಾಯಾವಾದಕ್ಕೂ ರಾಮಾನುಜಾಚಾರ್ಯರಿಗೂ) ಈಗ ಯುದ್ಧವು ಆರಂಭವಾಗುತ್ತದೆ. ವಿಷಯವಿಷಯಗಳಿಗೇ ಪರಸ್ಪರ ಯುದ್ಧವು ; (ಅದ್ವೈತಿಗಳ) ಒಂದೊಂದು ವಾಕ್ಯಕ್ಕೂ (ರಾಮಾನುಜಾಚಾರ್ಯರ) ಪ್ರತಿವಾಕ್ಯದಿಂದ ಯುದ್ಧವು. ಇದು ತಮಾಷೆ ಕಲಹವಲ್ಲ. ಸತ್ಯವಾದ ನಿಜವಾದ ಯುದ್ಧವು. ಎದೆಗೆ ಎದೆಯನ್ನು ಕೊಟ್ಟು, ಮಂಡಿಗೆ ಮಂಡಿಯನ್ನು ಚಾಚಿ ನಡೆಸಿದ ಅತ್ಯಂತ ಘೋರಯುದ್ಧವು. (ಅತಿ ಸೂಕ್ಷ್ಮವಾಗಿ ಸಮಂಜಸವಾಗಿ ನಡೆದ ವಿಷಯ ಚರ್ಚೆಯು ಎಂದರ್ಥವು.) ಶ್ವಾಸ ಬಿಡುವುದಕ್ಕೂ ಅವಸರವಿಲ್ಲದಂತೆ ನಡೆಸಿದ, ಈ ನಿರಂತರ ಸಂಗ್ರಾಮದಲ್ಲಿ, ಒಂದು ಅವಯವದನಂತರ ಒಂದು ಅವಯುವವು ಕ್ರಮವಾಗಿ ಜಯಿಸಲ್ಪಟ್ಟು ಕೊನೆಗೆ ಪೂರ್ವಪಕ್ಷಿಯು (ಅದ್ವೈತಿಗಳ ಮಾಯಾವಾದವು) ನೆಲಸಮನಾಗಿ ಮಾಡಲ್ಪಟ್ಟಿರುವನು.

ರಾಮಾನುಜಾಚಾರ್ಯರು ಶಂಕರಾಚಾರ್ಯರ ಮಾಯಾವಾದದಲ್ಲಿರುವ ಒಂದೊಂದು ವಾಕ್ಯವನ್ನೂ ಪ್ರತ್ಯೇಕವಾಗಿ, ಅತಿಸೂಕ್ಷ್ಮವಾಗಿ ಮತ್ತು ಪ್ರಾಮಾಣಿಕವಾಗಿಯೇ ಚರ್ಚಿಸಿ, ಒಂದೊಂದು ವಿಷಯದ ಮತ್ತು ಒಂದೊಂದು ವಾಕ್ಯದ ದೋಷವನ್ನು ತೋರಿಸಿ ಅದನ್ನು ಪ್ರಾಮಾಣಿಕವಾಗಿಯೇ ನಿರಾಕರಣೆಮಾಡಿರುತ್ತಾರೆ ಎಂದು ಅರ್ಥವು.

ವಾದುದರಿಂದ, "ಅವಿದ್ಯಾನಿವೃತ್ತಿ" ಎಂಬುದೂ ಸಹ ಅದ್ವೈತಮತದಲ್ಲಿ ಮುಕ್ತಿ ಎಂದೆನಿಸಲಾರದು. ಅದ್ವೈತವಾದದಲ್ಲಿ ದಳದ್ವಯಾತ್ಮಕವಾದ ಮುಕ್ತಿಯು ಪಕ್ಷದ್ವಯ ರಹಿತವಾದ ಪಕ್ಷಿಯು ಅವಸ್ಥೆಯನ್ನು ಹೊಂದಿರುವುದು. ಪ್ರಕ್ರಿಯೆಯೇ ಹಾಗಿರುವುದು; ನಾವೇನು ಮಾಡೋಣ.

ಪ್ರಶ್ನೆ—ಸ್ವಾಮಿ! ಬ್ರಹ್ಮಚೈತನ್ಯವು ಒಂದೇ ಎಂದು ಇಟ್ಟುಕೊಂಡು, ತಾವು ಇಷ್ಟೆಲ್ಲಾ ಅನುಪಪತ್ತಿಗಳನ್ನು ತೋರಿಸಿರುತ್ತೀರಿ. "ನಾನು" "ನಾನು" ಎಂಬ ಜ್ಞಾನಗೋಚರರಾದ ಜೀವರುಗಳಾದ ನಮಗೇ ಮುಕ್ತಿಯು. ನಮಗೇ ಅವಿದ್ಯಾಬಂಧವು; ಅದರ ನಿವೃತ್ತಿಯಿಂದ ನಮಗೇ ಬ್ರಹ್ಮೈಕ್ಯಪ್ರಾಪ್ತಿರೂಪವಾದ ಮುಕ್ತಿಯು ಎಂದು ಯಾತಕ್ಕೆ ಹೇಳಬಾರದು?

ಶ್ರೀ ಶ್ರೀಗಳವರು—ಬಂಡೆಯುಕಲ್ಲನ್ನು ಕಟ್ಟಿಕೊಂಡು ಈಜಾಡುವುದು ಅಶಕ್ಯವಾಗುವಂತೆ, ನಿತ್ಯಮುಕ್ತವಾದ ಸ್ವಪ್ರಕಾಶ ಬ್ರಹ್ಮಚೈತನ್ಯವು ಒಂದೇ ಸತ್ಯವಾದುದು ಎಂದು ಹೇಳುವ ಅದ್ವೈತತತ್ವವನ್ನು ಅವಲಂಬಿಸಿ, ನೀವು ಯಾವ ರೀತಿಯಿಂದಲಾದರೂ ಮುಕ್ತಿಸ್ವರೂಪವನ್ನು ಪ್ರತಿಪಾದನೆಮಾಡುವುದು ದುರ್ಘಟವೇ ಆಗುವುದು 1. "ನಾನು" "ನಾನು" ಎಂಬ ವಸ್ತುವಿಗೇ ಬಂಧವು ಮತ್ತು ಮುಕ್ತಿಯು ಎಂದು ಹೇಳುವುದು ದ್ವೈತಿಗಳಿಗೆ ಅತ್ಯಂತ ಸಮ್ಮತವಾದುದು. ಆದರೆ ಅದ್ವೈತಮತದ ರೀತಿಯಿಂದ ಇದು ಕೂಡುವುದಿಲ್ಲ. ಹೇಗೆಂದರೆ ಅವರ ಮತದ ಪ್ರಕಾರ "ನಾನು" ಎಂಬ ಪದಾರ್ಥವು **ಅಹಂಕಾರ ವಿಶಿಷ್ಟಚೈತನ್ಯವು**. ಜಡವಾದ ಅಹಂಕಾರವು+ಬ್ರಹ್ಮಚೈತನ್ಯವು ಇವೆರಡೂ ಸೇರಿದ ವಸ್ತುವೇ "ನಾನು" ಎಂಬ ಜ್ಞಾನಕ್ಕೆ ವಿಷಯವಾದ ಜೀವನು ಎಂದು ಹೇಳುತ್ತಾರೆ. ಇದರಲ್ಲಿ ಬಂಧವು ಯಾರಿಗೆ ಅಥವಾ ಮುಕ್ತಿಯು ಯಾರಿಗೆ? ಚೈತನ್ಯಾಂಶಕ್ಕೇ ಅವಿದ್ಯಾ (ಅದರ ಪರಿಣಾಮವಾದ, ಅಂತಃಕರಣ, ಅಹಂಕಾರಾದಿ) ನಿವೃತ್ತಿರೂಪವಾದ ಮುಕ್ತಿಯು ಆಗುವುದೆಂದು ಹೇಳುವುದಾದರೆ, ವ್ಯಾಪ್ತಬ್ರಹ್ಮಚೈತನ್ಯನಿಗೆ ಬಂಧವಾಗಲೀ ಮುಕ್ತಿಯಾಗಲೀ ಸಂಭವಿಸಲಾರದೆಂಬಲ್ಲಿ ನಾವು ಮೇಲೆ ಹೇಳಿದ ಏಳೆಂಟು ದೋಷಗಳೂ ಬಂದೊದಗುವುವು. ಜಡವಾದ ಅಹಂಕಾರ ಅಥವಾ ಅಂತಃಕರಣಕ್ಕೇ ಮುಕ್ತಿಯು ಎಂದು ಹೇಳುವುದಾದರೆ, ಕಲ್ಲಿಗೂ ಬಂಧ ಮುಕ್ತಿಗಳು ಯಾತಕ್ಕೆ ಆಗಬಾರದು? ಬ್ರಹ್ಮಚೈತನ್ಯದ ಸಂಬಂಧವು ಕಲ್ಲಿನಲ್ಲಿಲ್ಲ; ಅಹಂಕಾರಾದಿರೂಪವಾದ ಅಂತಃಕರಣಕ್ಕೆ ಇರುವುದು ಎಂದು ಹೇಳಲಾಗುವುದಿಲ್ಲ. ಕಲ್ಲಿಗೂ ಬ್ರಹ್ಮಚೈತನ್ಯಕ್ಕೂ ಎಷ್ಟು ಸಂಬಂಧವೋ,

ಅಷ್ಟೇ ಸಂಬಂಧವುಳ್ಳ ಅಸಂಗನಾದ ಸ್ವಪ್ರಕಾಶನಾದ ಬ್ರಹ್ಮನಿಗೂ ಅಂತಃಕರಣಾದಿ ಜಡವಸ್ತುಗಳಿಗೂ ಇರುವುದು. ೩. ನಿರ್ವಿಶೇಷಬ್ರಹ್ಮನು ಯಾವ ರೀತಿಯಿಂದಲೂ "ನಾನು" "ನಾನು" ಎಂಬ ಅನುಭವವಿಷಯನಾದ ಸಂಸಾರಬಂಧಕ್ಕೆ ಪ್ರ ದವಾದ ಜೀವಭಾವವನ್ನು ಹೊಂದಲಾರನು. ಆದುದರಿಂದ "ನಾನು" ಎಂಬ ಅನುಭವವಿದ್ದವನಾದ ಜೀವರುಗಳು ನಿತ್ಯವಿಭೂತಿ ನಿರಾಕಾರನಿತ್ಯಮುಕ್ತನಾದ ಬ್ರಹ್ಮನಿಂದ ಅತ್ಯಂತ **ಭಿನ್ನರಾದ ಅಲ್ಪರಾದ ನಾವುಗಳೇ** ಎಂದು ಅರಿತ ರುವದೆ ಸಂಸಾರ ಮತ್ತು ಅವಿದ್ಯಾದಿ ಬಂಧವೂ ಸಂಭವಿಸುವುದು. ಇದರಿಂದ ಬಿಡುಗಡೆಯಾದವನಾದ ಮುಕ್ತನಿಗೂ ಸಾಕ್ಷಾತ್ಕಾರವಾಗುವುದು. "ನಾನು" ಎಂಬ ವಸ್ತುವಿಗೆ ಬ್ರಹ್ಮೈಕ್ಯಪ್ರಾಪ್ತಿಯು ಮುಕ್ತಿಯು ಎಂದಷ್ಟೇ ನೀವು ಹೇಳಿದಿರಿ! ಹಾಗೆಂದರೇನು? ನಿಮ್ಮ ಅಭಿಪ್ರಾಯವನ್ನು ವಿವರಿಸಿ.

ಪ್ರಶ್ನೆಕಾರರು—"ನಾನು" "ನಾನು" ಎಂಬ ಜೀವಭಾವವನ್ನು ತೊರೆದು ಚಿನ್ಮಾತ್ರನಾದ ಬ್ರಹ್ಮನಲ್ಲಿ ಐಕ್ಯವನ್ನು ಹೊಂದುವುದೇ ಮುಕ್ತಿಯು ಎಂದು ನನ್ನ ಮಾತಿನ ಅಭಿಪ್ರಾಯವು.

ಶ್ರೀ ಶ್ರೀಗಳವರು—ಚಿನ್ಮಾತ್ರನಲ್ಲಿ ಐಕ್ಯವನ್ನು **ಹೊಂದುವುದು** ಮುಕ್ತಿಯೆಂದು ನೀವು ಹೇಳುತ್ತೀರಿ. ೩ ಚೇತನನು ಚಿನ್ಮಾತ್ರನಾಗಿಯೇ ಆಗಲೂ ಇರುವನು. ೪. ಅಥವಾ ನಾನು ಎಂಬ ಜೀವಭಾವದ ನಾಶವು ಮುಕ್ತಿಯು ಎಂದು ನೀವು ಹೇಳುವಿರಿ. ಅದ್ವೈತತತ್ವವು ಇಲ್ಲಿಗೆ ಬಂದು ಇಳಿಯಿತು. ಎಂದರೆ ನನ್ನ ನಾಶವು ನನಗೆ ಮುಕ್ತಿಯು ಎಂದು ಪ್ರಾಪ್ತವಾಯಿತು. ಇದು ಪ್ರಮಾಣ ವಿರುದ್ಧವಾದ ಪ್ರಕ್ರಿಯೆಯು ಎಂದು ಹೇಳುವುದು ಹಾಗಿರಲಿ. ಲೌಕಿಕ ರೀತಿಯೇ ಈ ಮತವನ್ನು ನಿಂದಿಸುವುದು.

ಸರ್ವನಾಶೇಸಮುತ್ಪನ್ನೇ ಅರ್ಧಂತ್ಯಜತಿಪಂಡಿತಾಃ ।
ಆತ್ಮನಾಶೇಸಮುತ್ಪನ್ನೇ ಸರ್ವಂತ್ಯಜತಿಪಂಡಿತಾಃ ॥

ಎಂದರೆ ತನ್ನ ಸರ್ವ ಧನವೂ ಶತ್ರುವಿನಿಂದ ನಾಶವಾಗುವ ಸ್ಥಿತಿಯು ಪ್ರಾಪ್ತವಾದರೆ ವಿವೇಕಿಯು ಅರ್ಧವನ್ನು ಶತ್ರುವಿಗೆ ಕೊಟ್ಟು ಶಾಂತಿಮಾಡಿಕೊಳ್ಳುವನು. ತಾನೇ ನಾಶವಾಗುವ ಸ್ಥಿತಿಯು ಪ್ರಾಪ್ತವಾದರೆ, ತನ್ನ ಸರ್ವಸ್ವವನ್ನೂ ಪರಿತ್ಯಾಗಮಾಡಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವನು. "ಆತ್ಮಾರ್ಥಂಹಿಸರ್ವಂ" ಎಂದರೆ ಉಕ್ತಿಯಂತೆ, ಧನಾದಿ ಸಕಲ ಪದಾರ್ಥಗಳೂ **ನನ್ನ** ಸುಖಾರ್ಥವಾಗಿ ನನ್ನಿಂದ ಅಪೇಕ್ಷಿತವಾಗಿರುವುವು. ದೇಹವನ್ನೇ ಗುಣವನ್ನೇ

ದೈವಸೇವೆಯನ್ನು ಮಾಡುವವನೂ ಸಹ ಅಂಥಾ ಸೇವೆಯಿಂದ **ತನಗೆ** ಸುಖ ವಾಗುವುದೆಂದು ಮಾಡುತ್ತಾನೆ. ಸ್ವಾರ್ಥತ್ಯಾಗವಾದಿ ತನ್ನ ಮೂಳೆಯನ್ನು ದೇವತೆಗಳಿಗೆ ದಾನಮಾಡಿದ ದಧೀಚಮುನಿಯೂ ಕೂಡ "**ತನಗೆ**" ಪರಮಾತ್ಮ ಪ್ರಸಾದದಿಂದ ಸುಖವಾಗುವುದೆಂದು ತಿಳಿದನು. ಕೆಲವರು ಪರಲೋಕ್ಕಾಗಿ ಸತ್ಕ ರ್ಮಗಳನ್ನು ಮಾಡುವರು. ಅಂಥವರೂ ಕೂಡ **ತಾವು** ಪರಮಾತ್ಮನ ಆಜ್ಞಾರೂ ಪವಾದ ವಿಧಿಯನ್ನು ನೆರವೇರಿಸಿದ ಪ್ರಯುಕ್ತವಾಗಿ ಬರುವ ಸಾಯುಜ್ಯಾದಿಮುಕ್ತಿಯು **ತಮಗೆ** ಬರುವುದೆಂದು ಉಗ್ರವಾದ ತಪಶ್ಚರ್ಯೆಗಳಲ್ಲಿ ನಿರತರಾಗಿರುತ್ತಾರೆ. ಬ್ರಹ್ಮೈ ಕ್ಯಕ್ಕೋ ಅಥವಾ ಜ್ಞಾನ ಪ್ರಧಾನವಾದ ಮುಕ್ತಿಯಾದರೂ ಸರಿ, **ನನಗೆ** ಹಿತವಾಗಿ ರುವುದಾದರೆ **ನನಗೆ** ಬೇಕು. ಹೀಗಿರುವುದರಿಂದ '**ನನ್ನ**' ನಾಶರೂಪವಾದ ಮುಕ್ತಿಯನ್ನು ನಾನು ಒಪ್ಪಲಾರೆನು. 5. ಪುರುಷಾರ್ಥವೆಂಬ ಮುಕ್ತಿಯ ಹೆಸರೇ ಈ ಅರ್ಥವನ್ನು ಸೂಚಿಸುವುದು. ಪುರುಷಾರ್ಥವೆಂದರೆ ಜೀವನಿಗೆ ಇಷ್ಟವಾ ದುದು, ಜೀವರುಗಳ ಇಚ್ಛೆಗೆ ವಿಷಯವಾದುದು ಎಂದು ಅರ್ಥವು. ಬ್ರಹ್ಮೈಕ್ಯ ಮುಕ್ತಿಯು ಎಂದು ಹೇಳುವರು ಮುಂದಿನ ವಾಕ್ಯದಲ್ಲಿಯೇ ಅದು ಪುರುಷಾ ರ್ಥವಲ್ಲವೆಂದು ಒಪ್ಪಬೇಕಾಗುವುದು. ಹೇಗೆಂದರೆ ನಾನು ಇರುವವರೆಗೂ ಸಂಸಾ ರದಲ್ಲಿ ಬಹು ಕಷ್ಟಪಟ್ಟಿರುತ್ತೇನೆ. ನನಗೆ ಬ್ರಹ್ಮೈಕ್ಯ ಪ್ರಾಪ್ತವಾದರೆ ಈ ಕಷ್ಟವು ನಿವೃತ್ತವಾಗಿ ಸುಖಾನುಭವವು ಬರುವುದು ಎಂದು ತಿಳಿದರೆ, ಅಂಥಾ ಬ್ರಹ್ಮೈ ಕ್ಯವನ್ನು ನಾವೆಲ್ಲರೂ ಅಪೇಕ್ಷಿಸುವುದು. ಸರ್ವಪ್ರಕಾರದಿಂದಲೂ ತನ್ನ ಸ್ವರೂಪ ನಾಶರೂಪವಾದ ಬ್ರಹ್ಮೈಕ್ಯವನ್ನು ಯಾವ ಪ್ರಾಜ್ಞನು ಅಪೇಕ್ಷಿಸುವನು? ಮತ್ತು ಸರ್ವಥಾ ಅನುಸಂಧಾನರಹಿತವಾದ ಬರಿಯ ಕಲ್ಲಿನಂತೆ ಅಚೇತನವಾದ ಬ್ರಹ್ಮಭಾವ ವನ್ನು ಯಾವ ಪ್ರೇಕ್ಷಾವಂತನು ಅಪೇಕ್ಷಿಸುವನು?† ಆದುದರಿಂದ ಬ್ರಹ್ಮೈಕ್ಯ

---

† ಮೋಕ್ಷದಲ್ಲಿ ನಾನು ಸುಖವಾಗಿರುತ್ತೇನೆ ಎಂಬ ಜ್ಞಾನವು ಇಲ್ಲವಾದುದರಿಂದ ಅದು ಪುರು ಷಾರ್ಥವಾಗಲಾರದು ಎಂಬುದು ದ್ವೈತಿಗಳ ಇಂಗಿತವು. ಒಂದು ಅದ್ವೈತಗ್ರಂಥದಲ್ಲಿ 'ನಾನು ಸುಖವಾಗಿದ್ದೇನೆ' ಎಂಬ ಅನುಸಂಧಾನವಿಲ್ಲದವರಿಗೆ ಐಕ್ಯರೂಪವಾದ ಮುಕ್ತಿಯು ಪುರುಷನಿಂದ ಅಪೇಕ್ಷಿತವಾಗಲಾರದು ಎಂದು ದೃಷ್ಟಾಂತಪೂರ್ವಕವಾಗಿ ಉಪಪಾದಿಸುತ್ತಾರೆ.—

'ಮೋಕ್ಷೇ ಸುಖಾನುಭವಾಭಾವೇ ಸಂಸಾರಾಭಾವೇನ ಜಡಾತ್ಮೈಕ್ಯಲಕ್ಷಣೇಽಪಿ ಜಡ ಭಾವೇ ಇವ ಮನುಷ್ಯಾಣಾಂ ಪ್ರವೃತ್ತಿರ್ನ ಸ್ಯಾತ್ | ದೈವಯೋಗೇನ ಮನುಷ್ಯಾ ಣಾಂ ಪರಮಾನಂದೈಕತಾನಾತ್ಮಕತಾಂ ಪರಾಂ ಪ್ರಾಪ್ತಾನಾಂ ಮೋಕ್ಷೇ ಮೋಕ್ಷ ಭಾವನಾಮಾತ್ರಂ ಸುಖಾನುಸಂಧಾನಾಭಾವಸ್ಯ ಪರಿತಾಪಹೇತುತ್ವಾತ್ | ಅತ ಏವ ಮೋಕ್ಷಂ ಪ್ರತಿ ಪ್ರವೃತ್ತಿರ್ನ ಸ್ಯಾದಿತಿ :—

........ಏತಾವತ್ಸಖಿವೇದ್ಮಿಕೇವಲಮಹಂತಸ್ಯಾಂಗಸಂಗೇಪುನಃ ।
ಕೋಸೌಕಾಸ್ಮಿರತಂಚಕೀದೃಶಮಿತಿಸ್ವಲ್ಪಾಪಿನೋನಸ್ಮೃತಿಃ ॥

ಇತ್ಯಾದಿ.

ತಾತ್ಪರ್ಯವು :—(ಅದ್ವೈತಿಗಳ) ಮೋಕ್ಷದಲ್ಲಿ ನಾನು ಸುಖವಾಗಿರುತ್ತೇನೆ ಎಂಬ ಅನುಸಂಧಾನವು ಇಲ್ಲದಿದ್ದರೆ, ಜಡದಿಂದ ವೈಲಕ್ಷಣ್ಯವು ಬರದೆ, ಜಡತ್ವವು (ಕಲ್ಲೇ ಆಗಿಹೋಗುವುದು) ಹೇಗೆ ಮನುಷ್ಯರಿಗ ಇಷ್ಟವಲ್ಲವೋ ಹಾಗೆಯೇ ಇಂಥಾ ಮುಕ್ತಿಯೂ ಜೀವರುಗಳಿಂದ ಅಪೇಕ್ಷಿತವಾಗಲಾರದು ; ಎಂದು ಹೇಳಕೂಡದು. ವೈಷಯಿಕಸುಖದಲ್ಲಿಯೇ ಸುಖವನ್ನು ಅನುಭವಿಸುವವನು, ಸುಖಪ್ರದಳಾದ ಕಾಂತೆಯು ; ಭೋಗವು ಈ ರೀತಿಯಾದ ಭೋಕ್ತೃ, ಭೋಗ್ಯ, ಭೋಗಗಳೆಂಬ ಮೂರು ಪದಾರ್ಥಗಳೂ ಉಪಕ್ಷಯವನ್ನು ಹೊಂದಿ ಐಕ್ಯವು ಪ್ರಾಪ್ತವಾಗುವುದು. ಮಿಥುನ ಸೌಖ್ಯದ ಪರಾಕಾಷ್ಠತೆಯನ್ನು ಬಲ್ಲ ರಸಿಕಾಗ್ರರಿಗೆ ಅನುಭವಸಿದ್ಧವಾಗಿರುವುದು. ಭರತ ಶಾಸ್ತ್ರದಲ್ಲಿ ಒಬ್ಬಳು ನಾಯಕಿಯು ತನ್ನ ಪತಿಯ ಸಂಗದಿಂದುಂಟಾದ ಸೌಖ್ಯವನ್ನು ತನ್ನ ಸಖಿಗೆ ವರ್ಣಿಸುತ್ತಾಳೆ. "ಎಲೈ ಸಖಿಯೇ ನಾನು ನನ್ನ ಭರ್ತನ ಅಂಗಸಂಗವಾದುದೊಂದನ್ನು ಬಲ್ಲೆನು. ನಂತರ ಆತನು ಯಾರೋ, ನಾನು ಯಾರೋ, ಆ ಸುಖವು ಯಾವುದೋ, ಎಂಥಾದ್ದೋ ಸ್ವಲ್ಪವೂ ನನಗೆ ತಿಳಿಯದು" ಎಂದು ಹೇಳಿರುತ್ತಾಳೆ. ಹೀಗೆ ಸಾಮಾನ್ಯವಾದ ವೈಷಯಿಕಸುಖವೇ ಭೋಕ್ತೃಭೋಗ್ಯಭೋಗವೆಂಬ ತ್ರಿಪುಟಿಯಿಂದ ರಹಿತವಾದರೂ ಸರ್ವರಸಿಕರಿಂದಲೂ ಅಪೇಕ್ಷಿತವಾಗಿರುವಾಗ, ಮಹಾಬ್ರಹ್ಮಾನಂದಭಾವವು ಹೇಗೆತಾನೆ ವಿದ್ವಜ್ಜನರಿಂದ ಅನಪೇಕ್ಷಿತವಾಗಿರುವುದು. ಆದುದದರಿಂದ ಬ್ರಹ್ಮೈಕ್ಯರೂಪವಾದ ಮುಕ್ತಿಯು ಪುರುಷಾರ್ಥವೇ ಸರಿ." ಹೀಗೆ ಹೇಳಿರುತ್ತದೆ.

ಶಂಕಚಾರ್ಯರೂ ಸಹ ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಹೀಗೆ ಬರೆದಿರುತ್ತಾರೆ ;—

ತತ್ತತ್ರಯಥಾಲೋಕೇಪ್ರಿಯಯೇಷ್ಟಯಾಸ್ತ್ರಿಯಾ....ಸಮ್ಯಕ್ಪರಿಷ್ವಕ್ತಃ ಕಾಮಯಂತ್ಯಾಕಾಮುಕಃ ಸನ್ನಬಾಹ್ಯಮಾತ್ಮನಃ........ಕಿಂಚಿದಪಿವೇದ । ಮತ್ತೋನ್ಯದ್ವಸ್ತ್ವಿತಿನಚಾಂತರಮಯಮಹಮಸ್ಮಿಸುಖೀದುಃಖೀವೇತಿ । ಅಪರಿಷ್ವಕ್ತಸ್ತುತಯಾಪ್ರವಿಭಕ್ತೋಜಾನಾತಿಸರ್ವಮೇವಬಾಹ್ಯಮಾಭ್ಯಂತರಂಚ । ಪರಿಷ್ವಂಗೋತ್ತರಕಾಲಂತ್ವೇಕತ್ವಾಪತ್ತೇರ್ನಜಾನಾತಿ । ಏವಮೇವ ಆತ್ಮನಾ....ಏಕೀಭೂತಃ ನ ಬಾಹ್ಯಂಕಿಂಚ ನ ವಸ್ತ್ವಂತರಂನಾಪ್ಯಾಂತರಮಾತ್ಮನ್ಯಯಮಹಮಸ್ಮಿ ಸುಖೀದುಃಖೀವೇತ್ತಿವೇದ. p. 607.

ಅರ್ಥವು :—ಹೇಗೆ ಲೋಕದಲ್ಲಿ ಕಾಮಿನಿಯಾದ ಸ್ತ್ರೀಯಿಂದ ಆಲಿಂಗಿತನಾದ ಕಾಮುಕ ಪುರುಷನು ನನಗಿಂತ ಭಿನ್ನವಸ್ತುವಿರುವುದೆಂದಾಗಲೀ, ನನಗಿಂತ ಈಕೆಯು ಭಿನ್ನವಸ್ತುವೆಂದಾಗಲೀ, ಇವಳು ಕಾಂತೆಯು, ನಾನು ನಾನು ಎಂದಾಗಲೀ, ನಾನು ಸುಖವಾಗಿರುತ್ತೇನೆ ದುಃಖವಾಗಿರುತ್ತೇನೆ ಎಂದಾಗಲೀ ತಿಳಿಯುವುದಿಲ್ಲ. ಅನಾಲಿಂಗಿತನಾದಾಗ ಅವಳಿಂದ ಭಿನ್ನನಾಗಿ ಬಾಹ್ಯಾಭ್ಯಂತರವಾದ ಸರ್ವವನ್ನೂ ತಿಳಿಯುತ್ತಾನೆ. **ಆಲಿಂಗನನಾದ ನಂತರ ಐಕ್ಯವನ್ನು ಹೊಂ**

ದುವುದರಿಂದ ಯಾವುದನ್ನೂ ತಿಳಿಯುವುದಿಲ್ಲ. ಹೀಗೆಯೇ ಆತ್ಮೈಕ್ಯವನ್ನು ಹೊಂದಿದವನು ತನ್ನನ್ನೂ, ಪರಮಾತ್ಮನನ್ನೂ, ಭೇದವನ್ನೂ ಮತ್ತು ನಾನು ಸುಖಿಯಾಗಿರುತ್ತೇನೆ ಎಂದು ಕೂಡ ತಿಳಿಯುವುದಿಲ್ಲ. ಬ್ರಹ್ಮೈಕ್ಯವಾದದ ದುಸ್ಥಿತಿಯು ಇಲ್ಲಿಗೆ ತಿಳಿಯಿತು. ಈ ವಾಕ್ಯಗಳಲ್ಲಿ ಶಂಕರಾಚಾರ್ಯರು ಪ್ರಣಯಭರದಿಂದ ಸಂಗಮವನ್ನು ಹೊಂದುವ ದಂಪತಿಗಳು ಐಕ್ಯವನ್ನು ಹೊಂದುವರೆಂದು ಸ್ಪಷ್ಟವಾಗಿ ಬರೆದಿರುತ್ತಾರೆ. ಮತ್ತು ಇವಳು ನನ್ನ ಕಾಂತೆಯು, ನಾನು ಭೋಗಿಸುವವನು, ನಾನು ಸುಖಿಯಾಗಿರುತ್ತೇನೆ, ನಾವಿಬ್ಬರೂ ಭಿನ್ನರು ಎಂಬ ಜ್ಞಾನವು ಸರ್ವಾತ್ಮನಾ ಇರುವುದಿಲ್ಲ ಎಂದೂ ಬರೆದಿರುತ್ತಾರೆ. ಈ ಎರಡು ವಿಷಯಗಳ ವ್ಯವಸ್ಥೆಯನ್ನು ಮಾಡುವುದಕ್ಕೆ ಮಿಥುನಸೌಖ್ಯದಲ್ಲಿ ಅತ್ಯಂತರತರಾದ ನಟಪುರುಷರನ್ನು ಸಾಕ್ಷಿ ಕರೆಯಬೇಕಾಯಿತು. ಆದರೆ ಅಷ್ಟು ಪ್ರಯಾಸವು ಅವಶ್ಯಕವಿಲ್ಲ. ದೇವರ ದಯದಿಂದ ಪ್ರತಿಯೊಬ್ಬ ಗೃಹಸ್ಥನೂ ಭೋಗಕಾಲದಲ್ಲಿ ತನ್ನ ಪತ್ನಿಯಿಂದ ಐಕ್ಯವನ್ನು ಹೊಂದುವುದಿಲ್ಲವೆಂದು ತಿಳಿದಿರುತ್ತಾನೆ. ಮತ್ತು ಭೋಗಕಾಲದಲ್ಲಿ ನಾನು ಸುಖಿಯಾಗಿರುತ್ತೇನೆ ಎಂಬ ಜ್ಞಾನವುಳ್ಳವನಾಗಿಯೇ ಇರುತ್ತಾನೆ. ನಾನು ನಾನು; ಈಕೆಯು ನನ್ನ ಕಾಂತೆಯು ಎಂದು ಸ್ಫುಟವಾಗಿ ತಿಳಿದಿರುತ್ತಾನೆ. ಆದರೆ ಕಾಂತೆಯಿಂದ ಭಿನ್ನವಾದ ಯಾವ ವಸ್ತುಜ್ಞಾನವೂ ಇರುವುದಿಲ್ಲ. 2. ಅಷ್ಟು ವಿಚಾರವು ಯಾತಕ್ಕೆ? ಪತಿಪತ್ನಿಯರಿಗೆ ಲೋಕದಲ್ಲಿರುವ ಐಕ್ಯದಂತೆ ಜೀವಬ್ರಹ್ಮರ ಐಕ್ಯವು ಇರುವುದಾದರೆ, ದ್ವೈತಿಗಳು ಅತಿ ಸಂತೋಷದಿಂದ ಈ ನಿರ್ಣಯವನ್ನು ಒಪ್ಪುವುದರಲ್ಲಿ ಸಂಶಯವಿಲ್ಲ. ಆದರೂ ವಸ್ತುತಃ ಭೋಕ್ತೃಭೋಗ್ಯಭೋಗಗಳೆಂಬ ವಿವೇಕಜ್ಞಾನವು ಭೋಗಕಾಲದಲ್ಲಿ ತೋರುವುದಿಲ್ಲವೆಂದು ಹೇಳುವುದು ಅನುಭವವಿರುದ್ಧವು. 3. ಶ್ರೀಕೃಷ್ಣನು ಸ್ತ್ರೀಸಂಗಸುಖಕ್ಕಿಂತ ಹೆಚ್ಚು ಸುಖದಲ್ಲಿ ಮಗ್ನನಾದ ಸಮಾಧಿಯೋಗಿಯು "**ಸುಖಮಾತ್ಯಂತಿಕಂ ಯತ್ತದ್ಬುದ್ಧಿಗ್ರಾಹ್ಯಮತೀಂದ್ರಿಯಂವೇತ್ತಿ** ಎಂದು ಹೇಳಿರುತ್ತಾನೆ. ಧ್ಯಾನಾರೂಢನು ಅನುಭವದಿಂದಲೇ ತಿಳಿಯುವುದಕ್ಕೆ ಅರ್ಹವಾದ ಅತೀಂದ್ರಿಯವಾದ **ಸುಖನ್ನು** ವೇತ್ತಿ = ತಿಳಿಯುತ್ತಾನೆ, ಅನುಭವಿಸುತ್ತಾನೆ ಎಂದು ಅರ್ಥವು. ಅತ್ಯಂತ ಪ್ರೀತಿಯಿಂದ ನಾವು ಒಂದು ಭೋಗ್ಯದ್ರವ್ಯದಲ್ಲಿ ಆಸಕ್ತರಾದರೆ ತದತಿರಿಕ್ತವಾದ ಪದಾರ್ಥಗಳ ಸ್ಮೃತಿಯು ಇರುವುದಿಲ್ಲ. ಸಂಪೂರ್ಣವಾದ ಮನಸ್ಸಿನಿಂದ ಭೋಗ್ಯವಸ್ತುವಿನಲ್ಲಿ ಆಸಕ್ತರಾಗಿ ಉತ್ಪನ್ನವಾದ ಸೌಖ್ಯವನ್ನು ಅನುಭವಿಸುತ್ತಲೇ ಇರುತ್ತೇವೆ. ಅಷ್ಟೇವಿನಃ ಭೋಗ್ಯದ್ರವ್ಯಜ್ಞಾನವೇ ನಾಶವಾಗುವುದಿಲ್ಲ. 3. ಭರತಶಾಸ್ತ್ರದ ಕವಿತೆಯು ಲಜ್ಜೆಯಿಂದ ಸುಖಾತಿಶಯವನ್ನು ವರ್ಣಿಸುವ ನಾಯಕಿಯ ಮಾತು. 4. ಕಿಂಚ "ಅಸೌ" "ಅಹಂ" "ರತಿಃ" ಇತ್ಯಾದಿ ಪ್ರತ್ಯೇಕ ನಿರ್ದೇಶದಿಂದ ಭೇದಜ್ಞಾನವು ಭೋಗಕಾಲದಲ್ಲಿ ಅವಳಿಗೂ ಇದ್ದಿತೆಂದು ತಿಳಿದುಬರುವುದು. ಸುಷುಪ್ತಿ, ವೈಷಯಿಕಭೋಗವೇ ಮೊದಲಾದ ಸಮಸ್ತ ಅವಸ್ಥೆಗಳಲ್ಲಿ ಭೋಗ್ಯಜ್ಞಾನವು, ನಾನು ಭೋಕ್ತನು ಎಂಬ ಜ್ಞಾನವೂ ಇರುವುದೆಂದು ಉತ್ತರಕಾಲೀನ ಪರಾಮರ್ಶಮತ್ತು ವರ್ಣನೆಗಳಿಂದ ಗೊತ್ತಾಗುವುದು. ಆದುದರಿಂದ ಜೀವಭಾವನಾಶಕವಾದ ತಾದಾತ್ಮ್ಯವಾಗಲೀ, ಜಡಭಾವಪ್ರಾಪ್ತಿಗೆ ಸದೃಶವಾದ ಸರ್ವಥಾ ಅನುಸಂಧಾನರಹಿತವಾದ ಬ್ರಹ್ಮೈಕ್ಯಪ್ರಾಪ್ತಿಯಾಗಲೀ ಪುರುಷಾರ್ಥವಲ್ಲವೆಂದು ಸಿದ್ಧವಾಗುವುದು. ಪ್ರಮಾಣಪ್ರಮಿತವಾದ ದುಃಖಪ್ರಚುರವಾದ ಪ್ರಪಂಚವನ್ನು ಮಿಥ್ಯಾ ಎಂದು ಹೇಳಿ "ಆತ್ಮನಾಶವನ್ನೇ" ಮುಕ್ತಿಯೆಂದು ಪ್ರತಿಪಾದನೆಮಾಡುವ

ಪುರುಷಾರ್ಥವನ್ನು ಕೊಡುವದಾದರೆ ಬ್ರಹ್ಮ ಸಂಬಂಧದಿಂದ ಜನಿತವಾದ ಆನಂದವು ಬ್ರಹ್ಮನನ್ನು ಹೊಂದಿದ ಜೀವನಿಗೊಬ್ಬನಿಗೆ ವಿಷಯವಾಗಬೇಕು. ವಿಷಯವಿಷಯಿಭಾವದಿಂದ ರಹಿತವಾದ ಆನಂದಾತ್ಮಕತೆಯು ಮತ್ತು "ನಾನು" ಎಂಬ ಆತ್ಮನಾಶವಾತ್ರದಲ್ಲಿ ಪ್ರಯೋಜನವಾಗುವ ನಿತ್ಯಸುಖಪ್ರಾಪ್ತಿಯು ಇವೆರಡೂ ಮುಮುಕ್ಷುಗಳಿಂದ ಪ್ರಾರ್ಥಿತವಾಗಲಾರವು. ಆದುದರಿಂದ ಅಂಥಾ ಮೋಕ್ಷವು ಪುರುಷಾರ್ಥವಲ್ಲವೆಂದು ಸಿದ್ಧವಾಗುವದು.

ಮಾತು 6. ಬಂಧವಿದ್ದರಲ್ಲವೇ ಮುಕ್ತಿಯುಂಟಾಗುವದು. ಪರಮಾರ್ಥವಾಗಿ ನೋಡಿದ್ದಾದರೆ ಬಂಧವು ಈಗಲೂ ಇಲ್ಲ ಹಿಂದೆಯೂ ಇಲ್ಲ ಮುಂದೆಯೂ ಇರುವದಿಲ್ಲವೆಂದು ಸ್ಪಷ್ಟವಾಗಿ ಅದ್ವೈತಗ್ರಂಥಗಳಲ್ಲಿ ಹೇಳುತ್ತದೆ. "ನಬಂಧೋ ನಾಪಿಮೋಕ್ಷಃ" ಎಂಬ ಶಂಕರಾಚಾರ್ಯರ ವಾಕ್ಯಗಳು ಈ ವಿಷಯದಲ್ಲಿ ಸಿದ್ಧಾಂತವಾಗಿರುವವು.

ಅದ್ವೈತಾರ್ಥವಾದ ದರ್ಶನದಲ್ಲಿ ಬಹಳ ತಪ್ಪುಗಳನ್ನು ಹೊಂದಿ. ಸುಪ್ರಸಿದ್ಧನಾದ **ಬೋಸ್** ನಾಮಕಗ್ರಂಥಕರ್ತನು (ಹಿಂದೂತತ್ವವು ಅದ್ವೈತಾರ್ಥವಾಗಿದ್ದೇ ಎಂದು ಪ್ರಮಾಣ) ಹೀಗೆ ಬರೆದಿರುತ್ತಾನೆ :—

"Hindu Philosophy is Pessimism. It begins with a recognition of human sorrow, goes out in vain in quest of a proper remedy, and ultimately arrives at annihilation as the goal where human misery terminates only in the extinction of life."—Hindu philosophy by Bose.

ಅರ್ಥವು—"ಹಿಂದೂ (ಅದ್ವೈತ) ತತ್ವವು ನೈರಾಶ್ಯವಾದವು (ಯಾವುದರಿಂದಲೂ ಏನೂ ಸಿಗುವದಿಲ್ಲವೆಂಬ ಜ್ಞಾನವನ್ನು ಹುಟ್ಟಿಸತಕ್ಕ ತತ್ವವು) ಅದು ಮನುಷ್ಯನ ದುಃಖವು ಮುಖ್ಯವೆಂದು ಆರಂಭದಲ್ಲಿ ಅಂಗೀಕರಿಸಿ, ಅದಕ್ಕೆ ಅನುಗುಣವಾದ ಔಷಧವನ್ನು ನಿರರ್ಥಕವಾಗಿ ಹುಡುಕುವದಕ್ಕೆ ಹೊರಡುವದು. (ಅಂದರೆ ದುಃಖವು ದುಃಖನಾಶಕವೆಂದು ಅದ್ವೈತಿಗಳು ಹೇಳುತ್ತಾರೆ. ಅಂಥಾ ಅದ್ವೈತವು ಅಂಥಾ ಪ್ರಮಾಣದಿಂದ ಈ ಹುಡುಕುವ ಕೆಲಸವು ಶಾಶ್ವತವಾಗಿ—ನಿಷ್ಪ್ರಯೋಜನವೇ ಎಂದು ಭಾವವು). ಮತ್ತು ಕೊನೆಯಲ್ಲಿ ಯಾವ **ಜೀವನಾಶದಲ್ಲಿಯೇ** ಮನುಷ್ಯ ದುಃಖಗಳು ನಿರಸನವಾಗುವವೋ ಅಂಥ ಸರ್ವನಾಶವನ್ನೇ ಅಂತ್ಯಗತಿಯೆಂದು ನಿಶ್ಚಯಿಸುವದು."

ಬೋಸ್ ಮಹಾಶಯನಿಗೆ ಇದೇ ಹಿಂದೂತತ್ವವಲ್ಲವೆಂದು ಹೇಳಬೇಕಾಗಿರುವದು. ಅದು ಹಾಗಿರಲಿ. ಇದರಿಂದ ಅದ್ವೈತಿಗಳಿಂದ ಅಂಗೀಕೃತವಾದ ಮೋಕ್ಷವು ಪುರುಷಾರ್ಥವಲ್ಲವೆಂದು ನಿಶ್ಚಿತವಾಗುವದು.

[illegible]

2

"ಮುಕ್ತಾನಾಂ ಪರಮಾಗತಿಃ" [illegible]

(1) ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ |—(8. 11.)

[illegible]

[illegible]

(2) ಯಾವಾನರ್ಥ ಉದಪಾನೇ ಸರ್ವತಸ್ಸಂಪ್ಲುತೋದಕೇ |
ತಾವಾನ್ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ |
—(2. 46.)

(3) ವೇದೇಷು ಯಜ್ಞೇಷು ತಪಸ್ಸು ಚೈವ ದಾನೇಷು ಯತ್ಪುಣ್ಯ
ಫಲಂಪ್ರದಿಷ್ಟಂ |
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ಯೋಗೀ ಪರಂ ಸ್ಥಾನಮುಪೈತಿ
ಚಾದ್ಯಂ |—(8. 28.)

ಈ ಶ್ಲೋಕಗಳು (ತೊಂಭತ್ತೊಂಭತ್ತನೆಯ ಪುಟದಲ್ಲಿ) ವ್ಯಾಖ್ಯಾತವಾಗಿರುವುವು.

ಮೋಕ್ಷಸುಖಾನುಭವಪ್ರಕಾರವನ್ನು ಸಮಾಧಿಯೋಗದ ಪರಿಪಾಕಾವಸ್ಥೆಯನ್ನು ಹೊಂದಿದ ಬ್ರಹ್ಮಾಪರೋಕ್ಷಜ್ಞಾನಿಯ ಸುಖಾನುಭವದ ದೃಷ್ಟಾಂತದಿಂದ ತಿಳಿಯಬಹುದು. ಶ್ರೀಕೃಷ್ಣನು ಹೇಳುತ್ತಾನೆ.—

(4) **ಯಸ್ತ್ವಾತ್ಮರತಿರೇವಸ್ಯಾದಾತ್ಮತೃಪ್ತಶ್ಚಮಾನವಃ ।**
ಆತ್ಮನ್ಯೇವಚ ಸಂತುಷ್ಟಃ............॥—(3. 17,)

(ಈ ಶ್ಲೋಕಾರ್ಥವು 157 ನೆಯ ಪುಟದಲ್ಲಿರುತ್ತದೆ.) ಷಷ್ಠಾಧ್ಯಾಯದ ವರ್ಣನೆಯು ಇನ್ನೂ ವಿಸ್ತಾರವಾದುದು :—

(5) **ಯತ್ರಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿತುಷ್ಯತಿ ।**—(6. 20.)
ಸುಖಮಾತ್ಯಂತಿಕಂಯತ್ತದ್ಬುದ್ಧಿಗ್ರಾಹ್ಯಮತೀಂದ್ರಿಯಂ ।
ವೇತ್ತಿಯತ್ರ ನ ಚೈವಾಯಂ ಸ್ಥಿತಶ್ಚಲತಿತತ್ವತಃ ।
ಯಂಲಬ್ಧ್ವಾಚಾಪರಂಲಾಭಂ ಮನ್ಯತೇನಾಧಿಕಂತತಃ ।
ಯಸ್ಮಿನ್ಸ್ಥಿತೋ ನ ದುಃಖೇನ ಗುರುಣಾಪಿವಿಚಾಲ್ಯತೇ ॥
—(6. 20-22.)

(ಈ ಶ್ಲೋಕಗಳು 158 ನೆಯ ಪುಟದಲ್ಲಿ) ವಿವೃತವಾಗಿರುವುವು. ದಂಪತಿಗಳಿಗೆ ಆಲಿಂಗನಕಾಲದಲ್ಲಿ ಐಕ್ಯವು ಪ್ರಾಪ್ತವಾಗುವಂತೆ ಜೀವಬ್ರಹ್ಮರುಗಳಿಗೆ ಐಕ್ಯವು ಇರುವುದೆಂದು ಶಂಕರಾಚಾರ್ಯರು ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಬರೆದಿರುತ್ತಾರೆ. ಇಲ್ಲಿ ನಿರೂಪಿತವಾಗಿರುವ ಸಮಾಧಿಯೋಗಿಯು ಮತ್ತು ಧ್ಯೇಯಪರಮಾತ್ಮನ ಆಲಿಂಗನವು ಅದಕ್ಕಿಂತಲೂ ನಿಬಿಡತರವಾದುದು. ಹೇಗೆಂದರೆ ದಂಪತಿಗಳ ಗಾಢಾಲಿಂಗನವೂ ಕೂಡ ಭೇರಿತಾಡನನಾದದಿಂದ ಅಥವಾ ಘಟಸರ್ಪದರ್ಶನದಿಂದ ಬಿಟ್ಟುಹೋಗುತ್ತದೆ. ಜ್ಞಾನಿಯ ಬ್ರಹ್ಮಾಲಿಂಗನವು "ನದುಃಖೇನಗುರುಣಾಪಿ ವಿಚಾಲ್ಯತೇ" ಎಂದರೆ ಪ್ರಬಲವಾದ ದುಃಖಹೇತುವಿನಿಂದಲೂ ಚಲಿಸುವುದಿಲ್ಲ. ವಾಲ್ಮೀಕಾದಿ ಋಷಿಗಳು ಸಮಾಧಿಯೋಗದಲ್ಲಿದ್ದಾಗ, ಅವರ ದೇಹವನ್ನೆಲ್ಲಾ ಹುಳುಗಳು ತಿಂದು ಸುತ್ತಲೂ ಹುತ್ತವು ಬೆಳೆದಿತ್ತು. ಪರೀಕ್ಷಿದ್ರಾಜನು ಸಮಾಧಿಧ್ಯಾನದಲ್ಲಿ ಆಸಕ್ತರಾದ ಶಮೀಕಋಷಿಗಳ ಕೊರಳಿಗೆ ಸತ್ತ ಸರ್ಪವನ್ನು ಸುತ್ತಿದರೂ ಸಹ ಅವರು ಎಚ್ಚರವನ್ನು ಹೊಂದಲಿಲ್ಲ. ನಿದ್ರೆಯಲ್ಲಿ ಅದ್ವೈತಿಗಳು ಉಂಟೆಂದು ಹೇಳುವ ಬ್ರಹ್ಮೈಕ್ಯಕ್ಕಿಂತಲೂ ಇದು ವಿಲಕ್ಷಣವಾದ ಸುಖರೂಪವಾದ ಸ್ಥಿತಿಯಾಗ

ಬೇಕು. ಇಂಥಾ ಸ್ಥಿತಿಯಲ್ಲೂ ಕೂಡ " **ಆತ್ಯಂತಿಕಂ ಬುದ್ಧಿಗ್ರಾಹ್ಯಂಸುಖಂ ವೇತ್ತಿ** " ಎಂದು ಶ್ರೀಕೃಷ್ಣನು ಹೇಳಿರುವುದರಿಂದ, ಅತ್ಯತಿಶಯುವಾದ ಬಾಹ್ಯ ವಸ್ತು ಜ್ಞಾನರಾಹಿತ್ಯದಿಂದ ಸಹಿತವಾದ ಪರಮಾತ್ಮ ದರ್ಶನಜನಿತ ಸುಖದ ಅನುಭವವೇ ಮುಕ್ತಿಯು; ಇದಕ್ಕಿಂತ ಭಿನ್ನವಾದ ಭೋಗಕರ್ತನಾದ ಜೀವಭಾವದ ನಾಶವು ಮುಕ್ತಿಯಲ್ಲವೆಂದು ಈ ದೃಷ್ಟಾಂತಗಳಿಂದ ಸಿದ್ಧಿಸುವುದು. ಯೋಗಿಯು ಎಂಥಾ ಸ್ಥಿತಿಯನ್ನು ಹೊಂದಿ ಆನಂದವನ್ನು ಅನುಭವಿಸುವನೋ, ಅಂಥಾ ಸ್ಥಿತಿಯು ಇನ್ನೂ ಅಧಿಕವಾಗಿ ಬಂಧರಹಿತನಾದ ಜೀವನಿಗೆ **ನಿರಂತರ** ಇರುವುದೆಂದು ದ್ವೈತಿಗಳ ಮತವು. ಇನ್ನೂ ಸ್ಪಷ್ಟವಾದ ಸಮಾಧಿಸ್ಥಿತಿಯ ವರ್ಣನೆಯು ಇಲ್ಲಿಯೇ ಇರುತ್ತದೆ.—

(6) **ಪ್ರಶಾಂತಮನಸಂಹ್ಯೇನಂಯೋಗಿನಂ ಸುಖಮುತ್ತಮಂ ।**
ಉಪೈತಿಶಾಂತರಜಸಂ ಬ್ರಹ್ಮಭೂತಮಕಲ್ಮಷಂ ॥—(6. 27.)

ಸ್ವತಃ ವಿಷಯಗಳಲ್ಲಿ ಅಪ್ರವೃತ್ತನಾದ ಮನಸ್ಸುಳ್ಳ, ರಜಸ್ತಮೋಗುಣ ಶೂನ್ಯನಾದ, ಪಾಪರಹಿತನಾದ, **ಬ್ರಹ್ಮಭೂತನಾದ**— ಬ್ರಹ್ಮನಲ್ಲಿ ಸ್ಥಿತನಾದಯೋಗಿಯನ್ನು ಉತ್ತಮಂಸುಖಂ ಉಪೈತಿ— ಉತ್ತಮಸುಖವು ಬಂದು ಸೇರುತ್ತದೆ. ಈ ವಾಕ್ಯದಲ್ಲಿ ಬ್ರಹ್ಮಭೂತನಾದವನನ್ನು ಉತ್ತಮಸುಖವು ಬಂದು ಸೇರುವುದು ಎಂದು ಹೇಳಿರುವುದರಿಂದ, ಈ ಅವಸ್ಥೆಯಲ್ಲಿ ಬ್ರಹ್ಮೈಕ್ಯವು ಪ್ರಾಪ್ತವಾಗುತ್ತದೆ ಎಂದು ಹೇಳುವುದಾದರೆ, ಜ್ಞಾನಿಗೆ ಸುಖವು ಬಂದು ಸೇರುವುದಕ್ಕೆ (ಸುಖ ವಿಷಯಕ ಅನುಭವಕ್ಕೆ) ವಿರೋಧವಲ್ಲದ ಬ್ರಹ್ಮಪ್ರಾಪ್ತಿಯನ್ನು ಹೇಳಬೇಕು. ಅಂಥಾ ಬ್ರಹ್ಮಪ್ರಾಪ್ತಿಯು, ಬಾಹ್ಯಜ್ಞಾನದಿಂದ ರಹಿತವಾದ ಕೇವಲ ಬ್ರಹ್ಮದರ್ಶನದಲ್ಲಿ ಆಸಕ್ತವಾಗಿರುವ ಅವಸ್ಥೆಯು. ಈ ಅವಸ್ಥೆಯಲ್ಲಿ ಬ್ರಹ್ಮನು ಜ್ಞಾನಿಗಿಂತ ಭಿನ್ನನಾಗಿಯೇ ಇರುವನೆಂಬುದು ಉತ್ತರಶ್ಲೋಕದಿಂದ ಇನ್ನೂ ಸ್ಪಷ್ಟವಾಗಿ ವಿದಿತವಾಗುವುದು. ಶ್ರೀ ಕೃಷ್ಣನು ಹೇಳುತ್ತಾನೆ:

(7) **ಯುಂಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ ।**
ಸುಖೇನಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ।—(6. 28.)

ರಾಗಾದಿರಹಿತನಾದ, ಸದಾ ಈ ರೀತಿಯಲ್ಲಿ ಧ್ಯಾನಯೋಗನಿರತನಾದ ಯೋಗಿಯು, ಆತ್ಮಾನಂ ಯುಂಜನ್— ಪರಮಾತ್ಮನನ್ನು ಧ್ಯಾನಮಾಡತಕ್ಕವನಾಗಿ ಅಥವಾ ಹೊಂದಿದವನಾಗಿ, ಅನಾಯಾಸದಿಂದ **ಬ್ರಹ್ಮಸಂಸ್ಪರ್ಶಂ ಅತ್ಯಂತಂಸುಖಂ**— ಬ್ರಹ್ಮಸಂಬಂಧದಿಂದ ಪ್ರಾಪ್ತವಾದ ಅತ್ಯುತ್ತಮಸುಖವನ್ನು, **ಅಶ್ನುತೇ**— ಅನುಭವಿಸುತ್ತಾನೆ.

ಈ ಅವಸ್ಥೆಯಲ್ಲಿ ಸುಖಭೋಕ್ತನಾದ ಯೋಗಿ ಜೀವನು, ಭೋಗ್ಯವಾದ ಬ್ರಹ್ಮಸಂಯೋಗದಿಂದ ಅಭಿವ್ಯಕ್ತವಾದ ಅತ್ಯುತ್ತಮ ಸುಖವು, ಮತ್ತು ಇಂಥಾ ಸುಖವನ್ನು ಅನುಭವಿಸುವ ಜ್ಞಾನಿಯ ಭೋಗವು ಇವೂ ಮೂರೂ ಪ್ರತ್ಯೇಕ ವಾಗಿ ನಿರೂಪಿತವಾಗಿರುವುವು. ವಿಷಯವಿಷಯಿಭಾವದಿಂದ ರಹಿತವಾದ ಭೋಕ್ತೃ ಭೋಗ್ಯಭೋಗೈಕ್ಯವು ಪ್ರಾಪ್ತವಾಗುವುದೆಂದು ಇಲ್ಲಿ ಹೇಳಿರುವುದಿಲ್ಲ. ಕಾಂತಾ ಪರಿರಂಭಣದಲ್ಲೂ, ಕಾಮಿನೀಸಂಸ್ಪರ್ಶಜನಿತ ಉತ್ತಮ ಸುಖವು ಮನೆಯಲ್ಲಿ ಕಳ್ಳರು ಬಂದರೂ ತಿಳಿಯಲಾರದಷ್ಟು ಬಾಹ್ಯವಸ್ತುಜ್ಞಾನಶೂನ್ಯನಾದ, ಅತಿಶಯಿತವಾಗಿ ಕಾಂತೆಯಲ್ಲಿಯೇ ಆಸಕ್ತವಾದ ಚಿತ್ತವುಳ್ಳ, ಕಾಮುಕನಿಗೆ ಬಂದು ಸೇರುವುದು. ಆದುದರಿಂದ ಹೀಗೆಯೇ "**ಯಥಾಪ್ರಿಯಯಾಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನವೇದನಾಂತರಂ**" ಎಂಬ ಶ್ರುತಿಯಲ್ಲಿರುವ ದೃಷ್ಟಾಂತ ವಾಕ್ಯಕ್ಕೆ ಅರ್ಥಮಾಡಬೇಕು. ಕಾಮುಕನು ಕಾಮಿನೀಸಂಗ ಕಾಲದಲ್ಲಿ ಬಾಹ್ಯವಾದ ಘಟಪಟಗಳನ್ನಾಗಲೀ, ಆಂತರವಾದ ಎಂದರೆ ಮನೋಗತವಾದ ಇತರ ವಿಷಯಕ ಚಿಂತೆಗಳನ್ನಾಗಲೀ ತಿಳಿಯುವುದಿಲ್ಲ. ಕೇವಲ ಸ್ತ್ರೀ ಧ್ಯಾನದಲ್ಲಿ ಆಸಕ್ತನಾಗಿ ತತ್ಸಂಗಜನಿತಸುಖವನ್ನು ಭೋಗಮಾಡುತ್ತಿರುತ್ತಾನೆ. ಹೀಗೆಯೇ ಪರಮಾತ್ಮನಿಂದ ಆಲಿಂಗಿತನಾದವನು ಕೇವಲ ಪರಮಾತ್ಮಧ್ಯಾನದಲ್ಲಿ ಮಗ್ನನಾಗಿ ತತ್ಸ್ಪರ್ಶದಿಂದ ಪ್ರಾಪ್ತವಾದ ಅತಿಶಯಿತವಾದ ಆನಂದವನ್ನು ಭೋಗಿಸುತ್ತಿರುತ್ತಾನೆ ಎಂದು ದಾರ್ಷ್ಟಾಂತಿಕ ವಾಕ್ಯವಾದ "**ಏವ ಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾಸಂಪರಿಷ್ವಕ್ತೋ ನ ಬಾಹ್ಯಂ ಕಿಂಚ ನ ವೇದ ನಾಂತರಂ**" ಎಂಬ ಶ್ರುತಿಗೆ ಅರ್ಥವನ್ನು ಮಾಡಬೇಕು.

ಸುಖವಿಷಯಕ ಅನುಭವವೇ ಪರಮಮುಕ್ತಿಯೆಂದು ಶ್ರೀ ಕೃಷ್ಣನು ಅತಿ ಸ್ಪಷ್ಟವಾಗಿ ನಿರೂಪಿಸುತ್ತಾನೆ:—

(8) **ಸಬ್ರಹ್ಮಯೋಗ ಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ।**

—(5. 21.)

ಪರಬ್ರಹ್ಮನ ಧ್ಯಾನದಲ್ಲಿ ಆಸಕ್ತವಾದ ಚಿತ್ತವುಳ್ಳ ಜ್ಞಾನಿಯು **ಅಕ್ಷಯ್ಯಂ** ನಾಶರಹಿತವಾದ, ನಿತ್ಯವಾದ, **ಸುಖಂ ಅಶ್ನುತೇ**— ಸುಖವನ್ನು ಭೋಗಿಸುತ್ತಾನೆ.

ನಾಶರಹಿತವಾದ ನಿರಂತರ ಸುಖಭೋಗವು ಸಂಸಾರಾವಸ್ಥೆಯಲ್ಲಿ ಇಲ್ಲದುದರಿಂದ ಇದು ಮುಕ್ತ್ಯವಸ್ಥೆಯ ವರ್ಣನೆಯು ಎಂದು ಸಿದ್ಧವಾಗುವುದು. ಹೀಗೆ

ಮುಕ್ತಿಯಲ್ಲಿ ಭೋಕ್ತೃಭೋಗ್ಯ ಭೋಗವಿವೇಕವು ಇರುವುದು ಎಂದೂ, "ಅಹಂ" ಪದಾರ್ಥಕ್ಕೆ ನಾಶವು ಇಲ್ಲವೆಂದೂ, ಮತ್ತು ಅಹಂಪದಾರ್ಥವಾದ ಜೀವನಿಗೆ ಸಂಸಾರದಲ್ಲಿರುವಂಥಾ ದುಃಖಸಂಬಂಧವು ತಪ್ಪಿ, ವಿಚ್ಛೇದವಿಲ್ಲದ ನಿರಂತರ ಸುಖವು ಭೋಗಕ್ಕೆ ಬಂದು ಒದಗುತ್ತಿರುವುದೆಂದೂ ಈ ವಾಕ್ಯದಿಂದ ನಿಶ್ಚಿತವಾಗುವುದು. "ಮುಕ್ತಿರ್ಹಿತ್ವಾನ್ಯಥಾರೂಪಂಸ್ವರೂಪೇಣ ವ್ಯವಸ್ಥಿತಿಃ" ಎಂಬ ಭಾಗವತಶ್ಲೋಕವು ಇದೇ ಅರ್ಥವನ್ನು ಬೋಧಿಸುವುದು. ಜೀವನು ಪದೇಪದೇ ದುಃಖಭೋಗದಿಂದ ಸಹಿತವಾದ ಸ್ಥಿತಿಯನ್ನು ಪರಿತ್ಯಜಿಸಿ ಕೇವಲ ಸುಖಾನುಭವರೂಪವಾದ ತನ್ನ ಸ್ವರೂಪ (ಸ್ವಾಭಾವಿಕ) ಸ್ಥಿತಿಯನ್ನು ಹೊಂದುತ್ತಾನೆ; ಇದು ಮುಕ್ತಿಯು ಎಂದು ಈ ಶ್ಲೋಕದ ಅರ್ಥವು. ಅದ್ವೈತಮತದಲ್ಲಿ ನಿರ್ವಿಕಾರನಾದ ಬ್ರಹ್ಮಚೇತನನಿಗೆ ಅನ್ಯಥಾ ರೂಪಪ್ರಾಪ್ತಿಯೇ ಇಲ್ಲವಾದುದರಿಂದ, ಅದರಿಂದ ಬಿಡುಗಡೆಯಾಗಲೀ ಪುನಃ ಸ್ವಾಭಾವಿಕ ರೂಪವನ್ನು ಹೊಂದುವುದಾಗಲೀ ಅಸಂಭಾವಿತವು. ಬ್ರಹ್ಮಾತಿರಿಕ್ತ ಚೇತನರು ಇರುವುದೇ ಇಲ್ಲ. "ಅಹಂ" ಪದಾರ್ಥರಾದ ಜೀವರುಗಳು ಸಂಸಾರದಲ್ಲಿ ಪ್ರಾಪ್ತವಾಗಿರುವ ಅನ್ಯಥಾಕಾರವನ್ನು ಪರಿತ್ಯಜಿಸಿ ಸ್ವಾಭಾವಿಕಸ್ಥಿತಿಯನ್ನು ಹೊಂದುವರೆಂದು ಅರ್ಥಮಾಡುವುದಾದರೆ, ನಮ್ಮಿಂದ ನಿರೂಪಿತವಾದ ಅರ್ಥವೇ ಪ್ರಾಮಾಣಿಕವಾಗಿಯೂ, ಗೀತಾವಾಕ್ಯಗಳಿಗೆ ಅನುಗುಣವಾಗಿಯೂ ಇರುವುದು. ಸ್ವರೂಪತಃ ಸುಖರೂಪನಾದ ಜೀವನಿಗೆ ನಿರಂತರ ಸುಖಾನುಭವವು ಸ್ವಾಭಾವಿಕ ಸ್ಥಿತಿಯಾಗುವುದು; ಆದರೆ ಜೀವನು ಸ್ವರೂಪತಃ ಅಬ್ರಹ್ಮನಾದುದರಿಂದ ಬ್ರಹ್ಮತ್ವಪ್ರಾಪ್ತಿಯು ಸ್ವಾಭಾವಿಕ ಸ್ಥಿತಿಯೆಂದೆನಿಸಲಾರದು. ಆದುದರಿಂದ ಜೀವನಿಗೆ ಜೀವತ್ವನಾಶದಿಂದ ರಹಿತವಾದ ಸ್ವರೂಪಸುಖಭೋಗವೇ ಮುಕ್ತಿಯೆಂದು ಸಿದ್ಧವಾಗುವುದು.

ಜೀವನು ಮುಕ್ತಿಯಲ್ಲಿ ಸ್ವರೂಪಭೂತವಾದ ಆನಂದದ ಆವಿರ್ಭಾವವನ್ನು ಹೊಂದುವನು; ಎಂದರೆ ಬಂಧನಿವೃತ್ತಿಯಾದ ನಂತರ, ಅಭಿವ್ಯಕ್ತವಾದ ತನ್ನ ಸ್ವರೂಪಸುಖವನ್ನೇ ಭೋಗಿಸುವನು ಎಂಬ ಪ್ರಮೇಯವೂ ಕೂಡ ಶ್ರೀಕೃಷ್ಣನ ವಾಕ್ಯದಿಂದಲೇ ಸೂಚಿತವಾಗಿರುವುದು. ಅಕ್ಷಯ್ಯಂ ಸುಖಮಶ್ನುತೇ ಎಂದರೆ ನಾಶರಹಿವಾದ(ನಿತ್ಯವಾದ) ಸುಖವನ್ನು ಮುಕ್ತನು ಅನುಭವಿಸುತ್ತಾನೆ ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. ಈ ಸುಖವು ಬ್ರಹ್ಮಸ್ವರೂಪಭೂತವಾದ ಸುಖವಲ್ಲ. ಬ್ರಹ್ಮಸ್ವರೂಪಾನಂದವನ್ನು ಜೀವನು ಭೋಗಿಸುವುದು ಅಸಂಭಾವಿತವು. ಬ್ರಹ್ಮಸ್ವರೂಪಭೂತವಾದ ಆನಂದವನ್ನು ಬ್ರಹ್ಮನು ಅನುಭವಿಸುವನು. ಬ್ರಹ್ಮಭಿನ್ನನಾದ ಜೀವಚೇ

ತನನಿಗೆ ಅದರ ಭೋಗವು ಕೂಡುವುದಿಲ್ಲ. ಇದು ಜಡಸುಖವು ಎಂದು ಹೇಳುವುದೂ ಕಷ್ಟವಾಗಿರುತ್ತದೆ. ಜಡಸುಖವು 'ಅಕ್ಷಯ್ಯ' ವಾಗಿರಲಾರದು. ಜಡಸುಖಗಳು ಉತ್ಪನ್ನವಾಗಿ ನಾಶವಾಗುವ ಸ್ವಭಾವವುಳ್ಳವು. ಆದುದರಿಂದ ಪರಿಶೇಷದಿಂದ ಜೀವನು ತನ್ನ ಸ್ವರೂಪಭೂತವಾದ ನಾಶರಹಿತವಾದ ನಿತ್ಯಸುಖವನ್ನೇ ಅನುಭವಿಸುವನು; ಅಂಥಾ ಸ್ವರೂಪಸುಖದ ಅಭಿವ್ಯಕ್ತಿಗೆ ಬ್ರಹ್ಮಸಂಬಂಧವೂ ಮತ್ತು ಸಾತ್ವಿಕವಾದ ಜಡದ್ರವ್ಯಸಂಯೋಗವೂ ಕಾರಣವಾಗಬಹುದು.

ಪುನಃ ಶ್ರೀಕೃಷ್ಣನು ಹೇಳುತ್ತಾನೆ.—

(9) **ಯುಕ್ತಃ ಕರ್ಮಫಲಂತ್ಯಕ್ತ್ವಾಶಾಂತಿಮಾಪ್ನೋತಿನೈಷ್ಠಿಕೀಂ ।**

—(5. 12.)

ಭಗವದರ್ಪಣ ಬುದ್ಧಿಯಿಂದ ಕರ್ಮಾನುಷ್ಠಾನ ಮಾಡುವ ಯೋಗಿಯು ಕರ್ಮಫಲದಲ್ಲಿ ಸ್ನೇಹವನ್ನು ಪರಿತ್ಯಾಗಮಾಡಿ, ನೈಷ್ಠಿಕೀಂಶಾಂತಿಂ, ಎಂದರೆ ಸ್ವಾಭಾವಿಕವಾದ ಅತ್ಯುತ್ತಮ ಸುಖವನ್ನು, ಎಂದರೆ ಸ್ವರೂಪಾನಂದಾವಿರ್ಭಾವ ಲಕ್ಷಣ ಮುಕ್ತಿಯನ್ನು ಹೊಂದುತ್ತಾನೆ.

3

ಪ್ರಶ್ನೆ—ಸ್ವಾಮಿ! ಅವಿದ್ಯಾದಿ ಬಂಧನಿವೃತ್ತಿಯೂ ಮುಕ್ತಿಪದಾರ್ಥವೆಂದು ತಮ್ಮಿಂದ ನಿರೂಪಿತವಾಯಿತು. ಜ್ಞಾನಸ್ವರೂಪನಾದ ಜೀವಚೇತನನಿಗೆ ಅವಿದ್ಯಾದಿ ಬಂಧಗಳು ಬರುವುದು ಹೇಗೆ? ಜ್ಞಾನಸ್ವರೂಪನಾದ ಪರಬ್ರಹ್ಮನಿಗೆ ಅಂಧಕಾರದಂತಿರುವ ಅವಿದ್ಯೆಯು ಆವರಣವಾಗುವುದು ಅಸಂಭಾವಿತವೆಂದು ತಾವು ಪೂರ್ವದಲ್ಲಿ ಹೇಳಿರುವ ದೋಷವು ದ್ವೈತಮತದಲ್ಲೂ ಪ್ರಾಪ್ತವಾಯಿತಲ್ಲವೇ?

ಶ್ರೀ ಶ್ರೀಗಳವರು—ಪೂರ್ಣಪ್ರಕಾಶಸ್ವರೂಪನಾದ ಸೂರ್ಯನಿಗೆ ಅಂಧಕಾರವು ಆವರಿಸುವುದು ಅಸಂಭಾವಿತವು. ಆದರೆ, ಬಹು ಧೂಮಸಹಿತವಾದ ಅಲ್ಪಪ್ರಕಾಶವುಳ್ಳ ಮಿಣುಕುದೀಪಕ್ಕೆ ಅಂಧಕಾರವು ಆವರಿಸಬಹುದು; ಎಂದರೆ ಪ್ರಬಲವಾದ ಅಂಧಕಾರವನ್ನು ಅಲ್ಪವಾದ ಶೀಮೆಯೆಣ್ಣೆಯ ದೀಪವು ನಾಶ ಮಾಡುವುದರಲ್ಲಿ ಸಾಮರ್ಥ್ಯಹೀನವಾದುದರಿಂದ ಅದು ಘಟಪಟಾದಿವಸ್ತುಗಳನ್ನು ಪ್ರಕಾಶಪಡಿಸಲಾರದು. ಹೀಗೆಯೇ ಅಲ್ಪಜ್ಞಾನ ಮತ್ತು ಅಲ್ಪಶಕ್ತಿಯುಳ್ಳ ಜೀವನು ಅನಾದಿಕಾಲದಿಂದ ಭಯಂಕರವಾದ ತ್ರಿಗುಣಾತ್ಮಕಪ್ರಕೃತಿಯೇ ಮೊದಲಾದ ಬಂಧಕ್ಕೆ ವಶನಾಗಿ ತನ್ನ ಸ್ವರೂಪಜ್ಞಾನವನ್ನು (ನಾನು ಇದ್ದೇನೆ ಎಂದು)

ಮಾತ್ರ ಉಳ್ಳವನಾಗಿ ತನ್ನ ಸ್ವರೂಪಭೂತವಾದ ಧರ್ಮಗಳನ್ನು ಸಹ ತಿಳಿದು ಕೊಳ್ಳುವುದಕ್ಕೆ ಸಮರ್ಥನಾಗಿರುವುದಿಲ್ಲ. ಕವಚವನ್ನು ಧರಿಸಿರುವ ಪುರುಷನು ತನ್ನ ದೇಹವನ್ನು ಸಾಮಾನ್ಯವಾಗಿ ತಿಳಿದರೂ, ತನ್ನ ಎದೆಯ ಮೇಲಿರುವ ಮಚ್ಚೆ ಯನ್ನು ಹೇಗೆ ಕವಚವನ್ನು ತೆಗೆಯುವ ವರೆವಿಗೂ ನೋಡಲಾರನೋ, ಹಾಗೆಯೇ ಜೀವನೂ ಸಹ ತನ್ನ ಸ್ವರೂಪ, ಕ್ರಿಯಾಶಕ್ತಿ, ಭೋಗಶಕ್ತಿಗಳನ್ನು ಸಾಮಾನ್ಯ ವಾಗಿ ತಿಳಿದರೂ ತನ್ನ ಧರ್ಮಗಳಾದ ಜ್ಞಾನ ಆನಂದಾದಿಗಳನ್ನು ತಾನೇ ತಿಳಿಯ ಲಾರನು. ಶ್ರೀ ಕೃಷ್ಣನು ಹೇಳುತ್ತಾನೆ :—

(1) **ಅಜ್ಞಾನೇನಾವೃತಂ ಜ್ಞಾನಂ ತೇನಮುಹ್ಯಂತಿಜಂತವಃ ।**

—(5. 15.)

ಜೀವನ ಸ್ವರೂಭೂತವಾದ ಜ್ಞಾನವು ಅಜ್ಞಾನದಿಂದ (ಅವಿದ್ಯಾದಿಬಂಧ ಗಳಿಂದ) ಆವೃತವಾಗಿರುವುದು. ಆದುದರಿಂದ **ಜಂತವಃ**= ಎಂದರೆ ಅಲ್ಪರಾದ ಜೀವಚೇತನರು ಮುಹ್ಯಂತಿ= ತಮ್ಮ ಅಂತರ್ಯಾಮಿಯಾಮಕನಾದ ಭಗವಂತನನ್ನು ತಿಳಿಯಲಾರರು, ಅಸ್ವಾತಂತ್ರ್ಯಾದಿ ತಮ್ಮ ಸ್ವರೂಪಭೂತವಾದ ಧರ್ಮಗಳನ್ನು ಸಾಕ್ಷಾತ್ತಾಗಿ ತಿಳಿಯಲಾರರು.

ಜೀವನ ಸ್ವರೂಪೇಂದ್ರಿಯವು ಅಂತರ್ಯಾಮಿಯಾಮಕನಾದ ಪರಮಾತ್ಮನನ್ನು ತಿಳಿಯುವುದಕ್ಕೂ, ಜ್ಞಾನ, ಆನಂದಾದಿ ತನ್ನ ಸ್ವರೂಪಧರ್ಮಗಳನ್ನು ತಿಳಿಯುವು ದಕ್ಕೂ ಸಮರ್ಥವಾದರೂ, ಪ್ರಬಲವಾದ ಬಾಹ್ಯವಾದ, ಭಾವರೂಪಅಜ್ಞಾನದಿಂದ ಆವೃತವಾಗಿ ಪರಮಾತ್ಮನನ್ನೂ ತನ್ನ ಸ್ವರೂಪಧರ್ಮಗಳನ್ನೂ ತಿಳಿಯುವುದರಲ್ಲಿ ಅಸಮರ್ಥವಾಗಿರುವುದು.

ಪ್ರಶ್ನೆ—ಸ್ವಾಮಿ ! ಇಂಥಾ ಅಜ್ಞಾನಾದಿ ಬಂಧನಿವೃತ್ತಿಯು ಆದನಂತರ ಜೀವನು ತನ್ನ ಸ್ವರೂಪಜ್ಞಾನದಿಂದಲೇ ಪರಬ್ರಹ್ಮನನ್ನು ತಿಳಿಯುವನೋ ?

ಶ್ರೀ ಶ್ರೀಗಳವರು—ಹೌದು. ಅದೇ ಮುಕ್ತಿಯು. ಹಾಗೆಯೇ ಶ್ರೀ ಕೃಷ್ಣನು ಹೇಳುತ್ತಾನೆ :—

(2) **ಜ್ಞಾನೇನತುತದಜ್ಞಾನಂ ಯೇಷಾಂನಾಶಿತಮಾತ್ಮನಃ ।**
ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿತತ್ಪರಂ ॥

—(5. 16.)

ಜ್ಞಾನಸ್ವರೂಪನಾದ ಜೀವನಿಗೆ ಆವರಕವಾದ ಅಜ್ಞಾನವು ಪರೋಕ್ಷ ವೃತ್ತಿಜ್ಞಾನವು ಯಾರಿಗೆ ನಾಶಮಾಡಲ್ಪಟ್ಟಿರುವುದೋ, (ಎಂದರೆ ಅವಿದ್ಯಾನಾಶ

ವನ್ನು ಹೊಂದಿ ಯಾರು ಮುಕ್ತರಾಗುವರೋ) ಅಂಥವರ ಸ್ವರೂಪಜ್ಞಾನವು ತೇಜೋಮೂರ್ತಿಯಾದ ಸೂರ್ಯನಂತೆ, ಪರಬ್ರಹ್ಮನನ್ನು ವಿಷಯೀಕರಿಸುತ್ತದೆ (ತಿಳಿಯುತ್ತದೆ).

ವೃತ್ತಿಜ್ಞಾನ (ವೃತ್ತಿರೂಪವಾದ ಬ್ರಹ್ಮಾಪರೋಕ್ಷಜ್ಞಾನ) ಪ್ರಭಾವದಿಂದ ಅವಿದ್ಯಾನಾಶವು ಉಂಟಾದ ಮೇಲೆ, ಭಗವದನುಗ್ರಹಕ್ಕೆ ಪಾತ್ರನಾಗಿ, ಈ ಜೀವನು ಆವಿರ್ಭೂತಸ್ವರೂಪಜ್ಞಾನವುಳ್ಳವನಾಗಿ, ಭಗವಂತನನ್ನು ಸಾಕ್ಷಾತ್ತಾಗಿಯೇ ತಿಳಿಯುವನು ಎಂದರ್ಥವು. ಮುಕ್ತರೆಲ್ಲರೂ ತಮ್ಮ ಸ್ವರೂಪಭೂತವಾದ ಜ್ಞಾನದಿಂದಲೇ ಶ್ರೀ ಪರಮಾತ್ಮನನ್ನು ತಿಳಿಯುತ್ತಾರೆ. ಸ್ವರೂಪಜ್ಞಾನವು ಅಂತರ್ನಿಯಾಮಕನಾದ ಸಾಕ್ಷಾತ್ಪರಬ್ರಹ್ಮನನ್ನೇ ವಿಷಯೀಕರಿಸಿದ ಮೇಲೆ ಅಸ್ವಾತಂತ್ರ್ಯಾದಿ ತಮ್ಮ ಸ್ವರೂಪಭೂತಧರ್ಮಗಳನ್ನು ಪ್ರಕಾಶಪಡಿಸುವುದೆಂದು ಕೈಮುತ್ಯನ್ಯಾಯದಿಂದ ಸಿದ್ಧವಾಗುವುದು. ಈ ರೀತಿಯಾಗಿ ಶ್ರೀ ಕೃಷ್ಣನ ವಾಕ್ಯಗಳಿಂದಲೇ ಅವಿದ್ಯಾದಿ ಬಂಧನಿವೃತ್ತಿಯೂ ಮುಕ್ತಿಶಬ್ದಾರ್ಥವೆಂದು ನಿಶ್ಚಿತವಾಯಿತು.

ಪ್ರಶ್ನೆ—ಸ್ವಾಮಿ! ಜೀವನು ಸ್ವಾಭಾವಿಕವಾಗಿ ಜ್ಞಾನಸ್ವರೂಪನು ಎಂದು ತಮ್ಮಿಂದ ನಿರೂಪಿತವಾಯಿತು. ಇಂಥಾ ಸ್ವರೂಪಜ್ಞಾನವು ಈಗ ಸಂಸಾರಾವಸ್ಥೆಯಲ್ಲಿ ಅವಿದ್ಯಾದಿ ಆವರಣಗಳಿಂದ ಪ್ರತಿಬದ್ಧವಾಗಿ ಪರಬ್ರಹ್ಮನನ್ನಾಗಲೀ, ಅಸ್ವಾತಂತ್ರ್ಯಾದಿ ಸ್ವಕೀಯಧರ್ಮಗಳನ್ನಾಗಲೀ ಪ್ರಕಾಶಪಡಿಸಲಾರದು. ಅಷ್ಟೇ ಅಲ್ಲ. ಅಂಧಕಾರದಂತಿರುವ ಅವಿದ್ಯೆಯನ್ನು ನಾಶಹೊಂದಿಸುವುದಕ್ಕೂ ಸಮರ್ಥವಲ್ಲ. ಅಜ್ಞಾನನಾಶಕತ್ವವು ಜ್ಞಾನಕ್ಕೆ ಸ್ವಾಭಾವಿಕವಾದ ಧರ್ಮವು. ಸ್ವರೂಪಜ್ಞಾನಕ್ಕೆ ಅಜ್ಞಾನನಾಶಕತ್ವಗುಣವು ಇರುವುದಾದರೆ ಅವಿದ್ಯಾದಿ ಆವರಣಗಳನ್ನು ತನ್ನ ಸ್ವಪ್ರತಿಭೆಯಿಂದಲೇ ಈಗಲೂ ನಾಶಮಾಡಬೇಕು. ತದರ್ಥವಾಗಿ ವೃತ್ತಿಜ್ಞಾನವನ್ನು ಅಪೇಕ್ಷಿಸುವುದಕ್ಕೆ ಕಾರಣವಿಲ್ಲ. ಅಜ್ಞಾನನಾಶಕತ್ವರೂಪಸಾಮರ್ಥ್ಯವಿಲ್ಲದಿದ್ದರೆ ಅದು **ಜ್ಞಾನ**ವೆಂದು ಕರೆಯಲ್ಪಡುವುದಕ್ಕೇ ಅರ್ಹವಾದ ಪದಾರ್ಥವಲ್ಲ. ಅಂಧಕಾರವನ್ನು ಪರಿಹರಿಸದಿರುವ ಪದಾರ್ಥವು ದೀಪವೆಂದೆನಿಸುವುದೇ? ಹೀಗಿರುವಲ್ಲಿ ಮುಕ್ತಿಯಲ್ಲೂ ಪರಬ್ರಹ್ಮನನ್ನು ತಾನೇ ಅದು ಹೇಗೆ ಸಾಕ್ಷಾತ್ಕರಿಸುವುದು? ಆದುದರಿಂದ ಜೀವನು ಜ್ಞಾನಸ್ವರೂಪನು ಎಂಬ ತಮ್ಮ ನಿರೂಪಣೆಯು ಬಹು ಸಂಶಯಾಸ್ಪದವಾಗಿರುವುದು. ಜೀವನು ಜ್ಞಾನಸ್ವರೂಪನಾಗಿದ್ದರೆ ಅವಿದ್ಯಾನಾಶಾರ್ಥವಾಗಿ ಜ್ಞಾನಾಂತರವನ್ನು ಅಪೇಕ್ಷಿಸಲಾರನು.

ಉತ್ತರ—ಲೋಕಾನುಭವ ವಿಚಕ್ಷಣರು ಹೀಗೆ ಸಂದೇಹಪಡಲಾರರು. ಒಂದು ಕಥೆಯನ್ನು ಕೇಳಿರಿ. ಗರಡಿಸಾಧನೆಯನ್ನು ಮಾಡಿ ಬಲಸಂಪನ್ನನಾದ ಒಬ್ಬ ಮಲ್ಲನು ವೃಷಭದಂತೆ ಠೀವಿಯಿಂದ ಸಂಚರಿಸುತ್ತಾ, ತನ್ನ ಭುಜಗಳನ್ನು ಕಟಾಕ್ಷದಿಂದ ನೋಡಿಕೊಳ್ಳುತ್ತಾ, ರಾಜಮಾರ್ಗದಲ್ಲಿ ರಾಜದರ್ಶನಾರ್ಥವಾಗಿ ಪ್ರಯಾಣ ಮಾಡುತ್ತಿದ್ದನು. ಆಗ ಅವನ ದುರದೃಷ್ಟದಿಂದ ಪೂರ್ವದಲ್ಲಿಯೇ ಅಶನಿಘಾತದಿಂದ ಶಿಥಿಲವಾದ ತಳಪಾಯವುಳ್ಳ ಒಂದು ದೊಡ್ಡ ಮಹಡಿಮನೆಯ ಗೋಡೆಯು ಅವನ ಮೈಮೇಲೆ ಬಿತ್ತು. ಗೋಡೆಯು ಮಲ್ಲನ ಮೈಮೇಲೆ ಬಿದ್ದು ತಾನೂ ಛಿನ್ನಭಿನ್ನವಾಗಿ ಒಡೆದುಹೋಯಿತು. ಮಲ್ಲನು ಮಣ್ಣಿನಿಂದ ಮುಚ್ಚಲ್ಪಟ್ಟನು. ಆದರೂ ಆಜಾನುದೀರ್ಘವಾದ ಅವನ ಎರಡು ಬಾಹುಗಳು ಮಣ್ಣಿನಿಂದ ಮುಚ್ಚಲ್ಪಡದೆ ಹೊರಗೆ ಉಳಿದವು. ಸ್ವಲ್ಪಕಾಲ ಮೂರ್ಛೆಹೊಂದಿದ ಮಲ್ಲನು ಎಚ್ಚೆತ್ತು, ಬಹು ಶ್ರಮದಿಂದ ತನ್ನ ಎರಡೂ ಹೊರಗಿರುವ ಕೈಗಳಿಂದ ತನ್ನ ಮೈಮೇಲಿರುವ ಮಣ್ಣುಗುಪ್ಪೆಗಳನ್ನು ತೆಗೆಯುವುದಕ್ಕೆ ಆರಂಭಿಸಿದನು. ಮಲ್ಲನು ಬಲಿಷ್ಠನಾದರೂ ಈಕಾರ್ಯವು ಅವನಿಂದ ದುರ್ಘಟವಾಯಿತು. ಸ್ವಲ್ಪ ಕಾಲದಲ್ಲಿಯೇ ದಯಾಳುಗಳಾದ ಪಥಿಕರೂ, ಪಥಿಕರಿಂದ ನಡೆದ ಅನಾಹುತವನ್ನು ತಿಳಿದು ರಾಜನಿಂದ ಆಜ್ಞಪ್ತರಾಗಿ ಕ್ಷಿಪ್ರದಲ್ಲಿ ಪ್ರಾಪ್ತರಾದ ರಾಜಭಟರೂ ಸೇರಿ ಮಲ್ಲನ ಬೆನ್ನಿನ ಮೇಲಿರುವ ಭಾರವನ್ನು ಉಪಾಯದಿಂದ ಕ್ರಮವಾಗಿ ತೆಗೆದರು. ಭಾರವು ಕಮ್ಮಿಯಾದ ಹಾಗೆಲ್ಲಾ ಮಲ್ಲನು ತನ್ನ ದೇಹಬಲವನ್ನು ಉಪಯೋಗಿಸುವುದಕ್ಕೆ ಆರಂಭಿಸಿದನು. ಕೊನೆಗೆ ಇನ್ನೂ ಒಂದೆರಡು ಕಲ್ಲುತುಂಡುಗಳು ತನ್ನನ್ನು ಅದಿಮಿಕೊಂಡಿರುವಾಗಲೇ ಧೀರನಾದ ಮಲ್ಲನು ಈ ಅವಮಾನವನ್ನು ಸಹಿಸಲಾರದೆ ಆ ಯಾವತ್ತು ಭಾರವನ್ನು ಝಾಡಿಸಿ ಆಚೆಗೆ ತಳ್ಳಿ ಎದ್ದು, ರಾಹುಮುಕ್ತನಾದ ಸೂರ್ಯನಂತೆ ಹೊರಗೆ ನಿಂತನು. ಮಹಾರಾಜರು ಮೈಮೇಲೆ ಮನೆಯೇ ಬಿದ್ದರೂ ಮರಣವನ್ನು ಹೊಂದದ ತಮ್ಮ ಸಂಸ್ಥಾನದ ಮಲ್ಲನ ಬಲಪರಾಕ್ರಮಗಳಿಂದಲೂ ರಾಜಭಕ್ತಿಯಿಂದಲೂ ಸುಪ್ರೀತರಾಗಿ ಬಹುಮಾನ ಕೊಟ್ಟು ಯಾವಜ್ಜೀವವೂ ಕಾರ್ಪಣ್ಯವಿಲ್ಲದೆ ಜೀವಿಸುವುದಕ್ಕೆ ಅನುಕೂಲವಾಗುವಂತೆ ವೇತನವನ್ನು ಕಲ್ಪಿಸಿದರು. ಮೊದಲೇ ಧೀರನಾದ ಮಲ್ಲನು ರಾಜಬಹುಮಾನದಿಂದ ಕೃತಕೃತ್ಯನಾಗಿ ಕೊಬ್ಬಿದ ಮದ್ದಾನೆಯಂತೆ ರಾಜಧಾನಿಯಲ್ಲಿ ಸುಖದಿಂದ ಸಂಚರಿಸುತ್ತಿದ್ದನು.

ಮುಕ್ತಿಯೋಗ್ಯ ಜೀವನಚರಿತ್ರೆಯೂ ಹೀಗೆಯೇ ಇರುವುದು. ಸ್ವರೂಪದಿಂದಲೇ ಜೀವನು ಜ್ಞಾನ, ಆನಂದ, ಬಲಾದಿ ಬಹು ಗುಣಸಂಪನ್ನನಾಗಿ ಪರ

ಮಾತ್ಮನ ಅಧೀನವಾಗಿಯೇ ಅನಾದಿಕಾಲದಿಂದಲೂ ಇರುವನು. ಆದರೆ ಇವನ ಪರಾಕ್ರಮಕ್ಕೂ ಮಿಾರಿದ, ಎಂದರೆ ಇವನ ಸ್ವರೂಪಜ್ಞಾನದಿಂದ ನಾಶವಾಗ ದಷ್ಟು ಪ್ರಬಲವಾದ, ಮತ್ತು ಇವನ ಸ್ವರೂಪಜ್ಞಾನವನ್ನೂ ಪ್ರತಿಬದ್ಧವನ್ನಾಗಿ ಮಾಡುವಷ್ಟು ಸಾಮರ್ಥ್ಯೋಪೇತವಾದ ಪ್ರಕೃತಿ, ಅವಿದ್ಯಾ,-ಕಾಮ, ಕರ್ಮಾದಿ ರೂಪವಾದ ಅನೇಕ ಆವರಣಗಳಿರುವುವು. ಅಷ್ಟೇ ಅಲ್ಲ! ಬಂಧಕವಾದ ಈಶ್ವರೇ ಚ್ಛೆಯೇ ಒಂದು ಆವರಣವಾಗಿರುವುದು. ಈ ಆವರಣಗಳಿಂದ, ಕವಚದಿಂದ ಆವೃತ ನಾದವನಿಗೆ ತನ್ನ ಶರೀರವೇ ಕಾಣದಂತೆ, ಜೀವನಿಗೆ ತನ್ನ ಸ್ವರೂಪಧರ್ಮಗಳ ಜ್ಞಾನವೇ ಆಗಲಾರದು. ಸ್ವರೂಪಸುಖವೂ ಅಭಿವ್ಯಕ್ತವಾಗಲಾರದು. ಮತ್ತು ಸ್ವರೂಪಜ್ಞಾನದಿಂದ ಪರಮಾತ್ಮನನ್ನೂ, ತನ್ನ ಅಸ್ವಾತಂತ್ರ್ಯಾದಿ ಧರ್ಮಗಳನ್ನೂ ತಿಳಿಯಲಾರನು. "ಅಹಂ" "ಅಹಂ" ಎಂದರೆ "ನಾನು ಇದ್ದೇನೆ" ಎಂಬ ಜ್ಞಾನವು ಒಂದು ಇರುವುದು. ನಾನು ಇದ್ದೇನೋ ಇಲ್ಲವೋ ಎಂಬ ಸಂಶಯವು ಯಾರಿಗೂ ಯಾವ ಕಾಲದಲ್ಲೂ ಬರಲಾರದು. ಜಾಗ್ರತ್ಸ್ವಪ್ನಸುಷುಪ್ತಿ ಮೂರ್ಛಾ ಮರಣಾದಿ ಸರ್ವ ಅವಸ್ಥೆಗಳಲ್ಲಿಯೂ "ನಾನು ಇದ್ದೇನೆ" ಎಂಬ ಸ್ವರೂಪ ಜ್ಞಾನವು ಸ್ವಲ್ಪವೂ ಲೋಪವನ್ನು ಹೊಂದದಂತೆ ತೃಣಾಂತ ಸರ್ವ ಜೀವರುಗ ಳಿಗೂ ಇರುವುದು.* ಇಂಥಾ "ಅಹಂ" ಜ್ಞಾನವು ಪಂಚೇಂದ್ರಿಯಗಳಿಂದ ಜನ್ಯ ವಾದುದಲ್ಲ. ಮನಸ್ಸಿನ ಆಲೋಚನೆಯಿಂದಲಾಗಲೀ ಅನುಮಾನದಿಂದಲಾಗಲೀ ಹುಟ್ಟಿದ್ದಲ್ಲ. ಆಗಮಗಳಿಂದಲೂ ಉತ್ಪನ್ನವಾದುದಲ್ಲ. ಇದು ಸಾಕ್ಷಾತ್ಸ್ವರೂಪ ಭೂತವಾದ ಜ್ಞಾನವು. ತನ್ನ ಸ್ವರೂಪಭೂತವಾದ ಮನಸ್ಸಿನಿಂದ "ನಾನು ಇದ್ದೇನೆ" ಎಂದು ಜೀವನು ನಿಸ್ಸಂಶಯವಾಗಿ ತನ್ನನ್ನು ತಾನೇ ತಿಳಿಯುತ್ತಾನೆ.† ಆದರೂ ಜ್ಞಾನ ಆನಂದಾದಿ ತನ್ನ ವಿಶೇಷಧರ್ಮಗಳನ್ನು ತಿಳಿಯಲಾರನು. ಮತ್ತು ಪ್ರಕೃತ್ಯಾದಿ ಆವರಣಗಳಲ್ಲಿ ಸಿಕ್ಕಿಬಿದ್ದು, ಪ್ರಕೃತಿಕಾರ್ಯನಿರ್ಮಿತವಾದ ನಾನಾ ದೇಹಗಳಲ್ಲಿ ವಿಷಯಸಂಯೋಗಾದಿಗಳಿಂದ ಉತ್ಪನ್ನವಾದ ಸುಖದುಃಖಗಳನ್ನು ತನ್ನ ಸ್ವರೂಪೇಂದ್ರಿಯಗಳಿಂದಲೇ ಅನುಭವಿಸುತ್ತಾ ಇರುತ್ತಾನೆ. ಈ ಭೋಗ

---

* ಬೋಸ್ ನಾಮಕ ಸುಪ್ರಸಿದ್ಧನಾದ ಬಂಗಾಳಾದೇಶದ ಭೌತಿಕ ಶಾಸ್ತ್ರಜ್ಞನು, ವೃಕ್ಷ ಗಳೂ ಕೂಡ, ಕೊಡಲಿಯನ್ನು ಹಿಡಿದುಕೊಂಡು ಎದುರಿಗೆ ಬರುವ ಪುರುಷನನ್ನು ನೋಡಿ. ಭೀತಿ ಯಿಂದ ಸಂಕೋಚವನ್ನು ಹೊಂದುತ್ತವೆ ಎಂದು ಪರೀಕ್ಷಾಪೂರ್ವಕವಾಗಿ ತೋರಿಸಿಸುತ್ತಾನೆ.

† ಶಂಕರಾಚಾರ್ಯರೂ ಸಹ ದ್ವೈತಿಗಳು ಹೇಳುವಂತೆಯೇ "ನಾನು" ಇರುತ್ತೇನೆಯೋ ಇಲ್ಲವೋ ಎಂದು ಯಾರೂ ಯಾವಾಗಲೂ ಸಂಶಯವನ್ನು ಹೊಂದುವುದಿಲ್ಲವೆಂದು ಅಂಗೀಕರಿಸಿ ರುತ್ತಾರೆ.

ಶಕ್ತಿಯೂ ಜೀವನಸ್ವರೂಪಭೂತವಾದುದು; ಮತ್ತು ಸರ್ವ ಚೇತನರಿಗೂ ಸರ್ವಾವಸ್ಥೆಗಳಲ್ಲಿಯೂ ಸರ್ವಕಾಲದಲ್ಲಿಯೂ ಜೊತೆಯಲ್ಲಿಯೇ ಇರುವುದು. ಹಾಗೂ ತನ್ನ ದೇಹಾದಿಗಳನ್ನು **ಪ್ರೇರಣೆ**ಮಾಡುವುಕ್ಕೆ ಬೇಕಾಗುವ ಕ್ರಿಯಾಶಕ್ತಿಯು ಅತ್ಯಲ್ಪವಾಗಿ (ಪ್ರತಿರುದ್ಧವಾದ ಮಲ್ಲನ ದೇಹಬಲದಂತೆ) ಪ್ರಕಟವಾಗಿರುವುದು.

ಈ ರೀತಿಯಾಗಿ ತನ್ನ ಸ್ವರೂಪಧರ್ಮಗಳ ಜ್ಞಾನವಿಲ್ಲದೆ, ಸ್ವರೂಪಸುಖಾನುಭವರಹಿತನಾಗಿ ಕುತ್ಸಿತವಾದ ದೇಹಬಂಧದಲ್ಲಿ ಸಿಕ್ಕಿಬಿದ್ದಿರುವ ಜೀವನು ಕಾರುಣಿಕರಾದ ಪಥಿಕರಂತಿರುವ ಕೃಷ್ಣವೇದವ್ಯಾಸರು, ಬ್ರಹ್ಮಾದಿ ದೇವತೆಗಳು ಮತ್ತು ಶ್ರೀಮದಾನಂದತೀರ್ಥರೇ ಮೊದಲಾದ ಗುರುಗಳಿಂದ ಉಪದಿಷ್ಟವಾದ ಯಥಾರ್ಥವಾದ ಬಾಹ್ಯಜ್ಞಾನವುಳ್ಳವನಾಗಿ, ತನ್ನ ನಿಜಸುಖವನ್ನು ಪಡೆಯಬೇಕೆಂಬ ಉತ್ಸಾಹದಿಂದ ಸಹಿತನಾಗಿ, ಅತ್ಯಲ್ಪವಾದ ಸ್ವರೂಪಭೂತವಾದ ತನ್ನ ಕ್ರಿಯಾಕರಣ ಶಕ್ತಿಯಿಂದ ಮನ ಆದಿ ಇಂದ್ರಿಯಗಳನ್ನು ಪ್ರೇರಿಸಿ ಸಂಧ್ಯಾದಿ ನಿತ್ಯಕರ್ಮಗಳು, ಶ್ರವಣ, ಮನನ, ಭಗವದ್ಭಕ್ತಿಯೋಗವೇ ಮೊದಲಾದ ಪರಬ್ರಹ್ಮನ ಪ್ರಸಾದಜನಕವಾದ ಸ್ವಭಾವಾನುಗುಣವಾದ ಆಚರಣೆಯಲ್ಲಿ ರತನಾಗುತ್ತಾನೆ. ಈ ರೀತಿಯಾದ ಸದಾಚಾರದಿಂದಲೂ, ಜ್ಞಾನಭಕ್ತಿಗಳಿಂದ ಸಹಿತವಾದ ತಪಸ್ಸಿನಿಂದಲೂ ಪ್ರೀತನಾದ ಪರಮಾತ್ಮನು ತತ್ವನಿಯಾಮಕರಾದ ದೇವತೆಗಳ ವಿಜ್ಞಾಪನೆಯನ್ನೂ ಆದರಿಸಿ, "ವಿಸಂಮೋಚಯಾಮಿ" ಎಂದು ಸಂಕಲ್ಪಪೂರ್ವಕವಾಗಿ ಈ ಜೀವನಿಗೆ ಬ್ರಹ್ಮಾಪರೋಕ್ಷಜ್ಞಾನವನ್ನು ಕೊಟ್ಟು, ಪ್ರಕೃತಿಬಂಧನನ್ನು ಬಿಡಿಸಿ ನಿರಂತರ ನಿಜಾನಂದಾನುಭವವನ್ನು ಅನುಗ್ರಹಿಸುವನು. ಎಂದರೆ ಆಯಾಯ ಜೀವನಿಗೆ ತನ್ನ ತನ್ನ ಸ್ವರೂಪಭೂತವಾದ ಜ್ಞಾನಸುಖಾದಿ ಸರ್ವ ಧರ್ಮಗಳನ್ನೂ ಅಭಿವ್ಯಕ್ತವಾಗುವಂತೆ ಮಾಡಿ ಶಾಶ್ವತವಾದ ವೈಕುಂಠಾದಿ ಉತ್ತಮ ಸ್ಥಾನಗಳಲ್ಲಿ ಅವರಿಗೆ ವಾಸವನ್ನೂ ಕಲ್ಪಿಸುವನು. ಮತ್ತು ನಿಜಭೃತ್ಯಭಾವದಿಂದ ಸಹಿತರಾದ ಮುಕ್ತರಿಂದ ಈಡ್ಯನಾಗಿ ಸರ್ವಕಾಲದಲ್ಲೂ ಸರ್ವೇಶ್ವರನಾಗಿರುವನು.

ಪ್ರಕೃತಿಬಂಧದಿಂದ ನಾನಾ ದುಃಖಗಳನ್ನು ಅನುಭವಿಸಿದರೂ ಜೀವಸ್ವರೂಪವು ಮರಣಹೊಂದದ ನಿತ್ಯವಸ್ತುವಾದುದರಿಂದ ಸ್ವರೂಪನಾಶವಾಗತಕ್ಕ ಯಾವ ವಿಕಾರವನ್ನೂ ಹೊಂದಲಿಲ್ಲ. ಸ್ವಲ್ಪಭಾರವನ್ನು ಮೇಲಿಟ್ಟು ಅಮುಕಿದರೆ ರಬ್ಬರಿನ ಚೆಂಡು ಸಂಕೋಚಭಾವವನ್ನು ಹೊಂದುವುದು. ಭಾರವನ್ನು ತೆಗೆದು ಬಿಟ್ಟರೆ ದುಂಡಾಗಿ ತನ್ನ ಪೂರ್ವಸ್ಥಿತಿಯನ್ನು ಹೊಂದುವುದು. ಇದೇ ರೀತಿ ಸಂಸಾರಾವಸ್ಥೆಯಲ್ಲಿ ದುಃಖಭೋಗಗಳಿಂದ ಅನಿಷ್ಟವಾದ ಸಂಕೋಚಭಾವವನ್ನು ಪಡೇ

ಪದೇ ಹೊಂದುತ್ತಿದ್ದ ಈ ಜೀವನು ಪ್ರಕೃತಿಬಂಧವು ನಿರ್ಮುಕ್ತವಾದನಂತರ ಮೇಘಸಮೂಹವನ್ನು ನಾಶಮಾಡಿ ಮೇಲೆ ಉದಯಿಸುವ ಸೂರ್ಯನಂತೆ, ಅಥವಾ ಮಣ್ಣಿನ ರಾಶಿಯನ್ನು ಕೊಡಹಿಕೊಂಡು ಮೇಲಕ್ಕೇಳುವ ಮಲ್ಲನಂತೆ, **ತನ್ನ ನಿಜಸ್ವರೂಪದ ಆವಿರ್ಭಾವವನ್ನು ಸಮಗ್ರವಾಗಿ ಹೊಂದಿ ಸ್ವಯೋಗ್ಯವಾದ ಸುಖದಿಂದ ಪೂರ್ಣನಾಗಿರುವನು.**

ಇಲ್ಲಿ ತಾನೇ ವಿಚಾರವು! 'ಅಹಂ' ಪದಾರ್ಥನಾದ ಈ ಚೇತನನು ಸ್ವಭಾವತಃ ಪರಬ್ರಹ್ಮನೇ ಆಗಿದ್ದರೆ, ಪ್ರಕೃತಿಬಂಧದಿಂದ ಅನಭಿವ್ಯಕ್ತವಾಗದ ಬ್ರಹ್ಮತ್ವವುಳ್ಳವನಾಗಿ ಪ್ರಕೃತಿಬಂಧವು ವಿನಿರ್ಮುಕ್ತವಾದನಂತರ ಪುನಃ ತನ್ನ ಸ್ವಾಭಾವಿಕವಾದ ಬ್ರಹ್ಮತ್ವವನ್ನು ಹೊಂದುವನು ಎಂದು ಹೇಳಬಹುದಾಗಿತ್ತು.* ಅಥವಾ ರಾಮಾನುಜಾಚಾರ್ಯರಮತವು ನಿಜವಾಗಿದ್ದರೆ, ಪ್ರಕೃತಿಬಂಧದಿಂದ ಪ್ರತಿರುದ್ಧವಾದ **ಪರಬ್ರಹ್ಮಸಾಮ್ಯವು** ಬಂಧನಿವೃತ್ತಿಯಾದ ನಂತರ ಆವಿರ್ಭವಿಸುವುದೆಂದು ಹೇಳಬಹುದು. ಆದರೆ ಇವೆರಡೂ ದುರಂತ ದೋಷದೂಷಿತವಾದ ದುಸ್ತತ್ವಗಳು. "ಪೂರ್ಣಮದಃ" "ದೇವಮಹಿಮ್ನಃ ಪರಮಂತಮಾಪ" ಇತ್ಯಾದಿ ಶ್ರುತಿವಿರೋಧವು ಹಾಗಿರಲಿ. ಈ ಮತಗಳ ತುಚ್ಛತೆಯನ್ನು ಒಂದೇ ಒಂದು

---

*ಯದ್ಯಪಿ ಇದು ಅದ್ವೈತತತ್ವವಲ್ಲ. ನಿರ್ವಿಕಾರನಾದ ಬ್ರಹ್ಮನು ಅನಭಿವ್ಯಕ್ತನಾಗಿರುವುದು, ನಂತರ ಅಭಿವ್ಯಕ್ತನಾಗುವುದು ಎಂಬ ಅವಸ್ಥಾವಿಶೇಷವನ್ನು ಅದ್ವೈತಿಗಳು ಕಂಠತಃ ಒಪ್ಪಲಾರರು. ಈ ಸಂಕಟ ಪರಿಹಾರಾರ್ಥವಾಗಿ ಅವರು ಪ್ರಕೃತಿಬಂಧಾದಿಗಳು ಮಿಥ್ಯಾ (ಇರುವುದೇ ಇಲ್ಲ) ಎಂದು ವಾದಿಸುತ್ತಾರೆ. ಜಗನ್ಮಿಥ್ಯಾತ್ವವು "ವಿಶ್ವಂಸತ್ಯಂ" ಮುಂತಾದ ಆಗಮಗಳಿಂದ ನಾನು ಸುಖದುಃಖವನ್ನು ಅನುಭವಿಸುವವನು ಇತ್ಯಾದಿ ಚೇತನಾನುಭವಗಳಿಂದ ಮತ್ತು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಹತವಾದ ದುಸ್ತತ್ವವು. ಆದುದರಿಂದ ಜಗತ್ತು ಸತ್ಯವಾದಮೇಲೆ, ಸತ್ಯಬಂಧದಲ್ಲಿ ಸಿಕ್ಕಿ ಬಿದ್ದಿರುವ 'ಬ್ರಹ್ಮ' ನೆಂಬ ಒಬ್ಬ ಚೇತನನು ಇರುವನು ಎಂಬ ಸ್ಥಿತಿಗೆ ಅದ್ವೈತಮತವು ಪ್ರಾಪ್ತವಾಯಿತು. ಅಂಥಾ ಚೇತನನು "ನಾನು ಇದ್ದೇನೆ" ಎಂದು ಸಾಮಾನ್ಯವಾಗಿ ತನ್ನನ್ನು ಈಗ ತಿಳಿಯುತ್ತಾನೆಯೇ ಹೊರತು "ನಾನು ಬ್ರಹ್ಮನು" ಎಂದು ಈಗ ತಿಳಿಯಲಾರನು ಎಂಬುದು ಅನುಭವಸಿದ್ಧವಾಗಿರುವುದರಿಂದ ಚೇತನನ ಬ್ರಹ್ಮತ್ವವು ಈಗ ಪ್ರಕಟವಾಗಿರುವುದಿಲ್ಲ ಮುಂದೆ ಪ್ರಕಟವಾಗುವುದು ಎಂದೇ ಅವಶ್ಯವಾಗಿ ಒಪ್ಪಬೇಕಾಗುವುದು. ಇಂಥಾ ಫಲಿತಾರ್ಥವು ಇಲ್ಲಿ ನಿರೂಪಿಸಲ್ಪಟ್ಟಿರುವುದು. ನಾನು ಎಂಬುದು ಚೇತನವೇ ಅಲ್ಲ. ಅಂತಃಕರಣವೇ 'ನಾನು' ಎಂಬ ಪದಾರ್ಥವು ಎಂದು ಹೇಳುವುದು ಉಳಿಯಿತು. ಅದು ಶುದ್ಧಸಾಂಖ್ಯವಾದವು. ಶಂಕರಾಚಾರ್ಯರು ತಮ್ಮ ಮತವೂ ಅಷ್ಟರಲ್ಲೇ ಪರ್ಯವಸಾನವಾಗುವುದೆಂದು ತಿಳಿಯದೆ ಸಾಂಖ್ಯಮತವನ್ನು ಖಂಡಿಸಿದರು. ಜಡಕ್ಕೆ ಬಂಧವು ಜಡಕ್ಕೆ ಮುಕ್ತಿಯು ಎಂದು ಹೇಳುವ ಈ ಮತದಲ್ಲಿ ಅನಂತ ದೋಷಗಳಿರುತ್ತವೆ.

ಯುಕ್ತಿಯಿಂದ ತಿಳಿಯಬಹುದು. ಹೇಗೆಂದರೆ, ಪರಬ್ರಹ್ಮನೆಂದರೆ ಅನಾದಿಸಿದ್ಧನಾದ ಪರಿಪೂರ್ಣ ವಸ್ತುವೆಂದರ್ಥವು. ಅದು ನಿರ್ಗುಣವೋ ಸದ್ಗುಣಭರಿತವೋ ಆದರ ವಿಚಾರವೂ ಹಾಗಿರಲಿ. **ಯಾವಪ್ರಕಾರದಲ್ಲಿಯಾದರೂ** ಪರಿಪೂರ್ಣವಾದ ನಿರ್ವಿಕಾರವಾದ ಸ್ವಯಂಪ್ರಕಾಶವಾದ ಬ್ರಹ್ಮವಸ್ತುವು **ಬಂಧಕ್ಕೆ ವಶವಾಗಲಾರದು** ಅಥವಾ **ಅನಭಿವ್ಯಕ್ತತೆಯನ್ನು** ಹೊಂದಲಾರದು. ಇತರ ಸರ್ವ ಧರ್ಮಗಳೂ ಪ್ರತಿಬದ್ಧವಾಗಿ ಅಲ್ಪತೆಯನ್ನು ಹೊಂದಬಹುದು. **ಬ್ರಹ್ಮತ್ವ**ವೆಂಬ ಧರ್ಮವು ಆತ್ಮನಾಶವಾಗದಂತೆ ಅನಭಿವ್ಯಕ್ತತೆಯನ್ನು ಹೊಂದಲಾರದು. ಬ್ರಹ್ಮತ್ವವು ಎಂದರೆ ಪರಿಪೂರ್ಣತೆಯು. ಅದು ಪ್ರತಿರುದ್ಧವಾಯಿತು ಎಂದು ಹೇಳಿದರೆ ವಿದ್ವಾಂಸರು ಹೇಳುವರು.—"ಪ್ರತಿರುದ್ಧವಾಗುವ ಅಂಥಾ ದುರ್ಬಲ ಧರ್ಮವನ್ನು ಪೂರ್ಣತ್ವವೆಂದು ಕರೆಯಬಹುದೇ? ಪೂರ್ಣವಾದ ವಸ್ತುವು ಪ್ರತಿರುದ್ಧವಾದ ಸ್ಥಿತಿಯನ್ನು ಹೊಂದಲಾರದು. ಪ್ರತಿರುದ್ಧವಾದರೆ ಅದು ಪೂರ್ಣವಸ್ತುವೇ ಅಲ್ಲ. ಅಲ್ಪಬಲವು, ಅಲ್ಪಜ್ಞಾನವು, ಅಲ್ಪಸುಖವು ಪ್ರತಿಬದ್ಧವಾಗಿ ಅನಭಿವ್ಯಕ್ತವಾದ ಅವಸ್ಥೆಯನ್ನು ಹೊಂದಬಹುದು. ಪೂರ್ಣಬಲಸ್ವರೂಪವು, ಪೂರ್ಣಜ್ಞಾನಸ್ವರೂಪವು ಅಥವಾ ಪೂರ್ಣಾನಂದಸ್ವರೂಪವು ಯಾವ ಕಾರಣದಿಂದಲೂ ತನ್ನ ಸ್ವರೂಪನಾಶವು ಆಗದಂತೆ ಅವಸ್ಥಾಂತರವನ್ನು (ಅನಭಿವ್ಯಕ್ತತೆ ಎಂಬ ಬೇರೆ ಅವಸ್ಥೆಯನ್ನು) ಹೊಂದಲಾರದು," ಎಂದು ಕೇಳುವರು. ಈ ದೂಷಣೆಗೆ ಸಮಾಧಾನವನ್ನು ಮೂರು ಲೋಕದಲ್ಲಿ ಯಾರೂ ಹೇಳಲಾರರು. ಭೀಮಗದೆಯಂತಿರುವ ಈ ದೋಷವು ರಾಮಾನುಜಾಚಾರ್ಯರ "ಬ್ರಹ್ಮಸಾಮ್ಯ"ವಾದದ ಮೇಲೂ ಬಂದೊದಗುವುದು. ಹೇಗೆಂದರೆ,(ಆನಂದದಲ್ಲಿ)ಬ್ರಹ್ಮಸಾಮ್ಯವೆಂದರೆ **ಬ್ರಹ್ಮನಂತೆ ಪೂರ್ಣತೆಯು** ಎಂದರ್ಥವು. ಹಾಗಾದಮೇಲೆ ಬ್ರಹ್ಮನ ಬ್ರಹ್ಮತ್ವವು ಪ್ರತಿರುದ್ಧವಾಗುವುದು, ಅಥವಾ ಅನಭಿವ್ಯಕ್ತತೆ ಎಂಬ ಅವಸ್ಥೆಯನ್ನು ಹೊಂದುವುದು ಎಂದು ಹೇಳುವ ಮತದಲ್ಲಿ ಪ್ರಾಪ್ತವಾದ ಸರ್ವ ದೋಷವೂ ನಿರ್ವಿವಾದವಾಗಿ ಪ್ರಾಪ್ತವಾಗುವುದರಿಂದ ಈ ಮತವೂ ಪ್ರಾಜ್ಞರಿಂದ ಹೇಯವಾದುದು. ಕಿಂಚ ಈ ಮತದ ರೀತಿಯಿಂದ ಸ್ವರೂಪತಃ ಬ್ರಹ್ಮಸಮಾನನಾದ ಒಬ್ಬ ಚೇತನನು ಸಂಸಾರ ಬಂಧದಲ್ಲಿ ಸಿಕ್ಕಿಬಿದ್ದು ಬಿಡಿಸಿಕೊಳ್ಳುವುದಕ್ಕೆ ಸಾಮರ್ಥ್ಯವಿಲ್ಲದೇ ತನ್ನ ಸಮಾನನಾದ ವೈಕುಂಠಾದಿ ಲೋಕಗಳಲ್ಲಿರುವ (ವಿಷ್ಣುವೆಂಬ) ಮತ್ತೊಬ್ಬ ಚೇತನನನ್ನು ಸಹಾಯಾರ್ಥವಾಗಿ ಕೂಗುವನು. ಆ ವಿಷ್ಣುವೂ ಪ್ರಕೃತಿಬದ್ಧನಾದ ಜೀವನಿಗೆ ಇರುವಷ್ಟೇ ಬಲವುಳ್ಳವನಾದುದರಿಂದ, ಅವನು ತಾನೇ ಮೃತ್ಯುರೂಪವಾದ

ಸಂಸಾರಸಾಗರದಿಂದ ತನ್ನ ಸಮಾನರಾದ ಚೇತನರನ್ನು ಉದ್ಧರಿಸುವುದು ಹೇಗೆ ಸಾಧ್ಯವಾಗುವುದು.* ಆದುದರಿಂದ ಈ ಮತದ ರೀತಿಯಲ್ಲಿ ಒಬ್ಬರಿಗೂ ಮುಕ್ತಿಯೇ ಇಲ್ಲವೆಂದು ಪ್ರಾಪ್ತವಾಗುವುದರಿಂದ ಇದನ್ನೂ ಸರ್ವಥಾ ನಿರಾಕರಿಸಬೇಕಾಯಿತು.

ಅಥವಾ ಈಗ ಪೂರ್ಣತೆಯು ಜೀವನಿಗೆ ಸರ್ವಥಾ (ಅನಭಿವ್ಯಕ್ತ ಸ್ಥಿತಿಯಲ್ಲಿಯೂ ಕೂಡ) ಇರುವುದೇ ಇಲ್ಲ. **ನೂತನವಾಗಿ** ಪ್ರಕೃತಿಬಂಧವು ನಿವೃತ್ತಿಯಾದನಂತರ ಜೀವರುಗಳಿಗೆ ಪರಮಾತ್ಮನ ಅನುಗ್ರಹದಿಂದ ಬರುವುದು ಎಂದು ಹೇಳುವುದು ಸರ್ವಥಾ ಅನ್ಯಾಯವಾದುದು. ಅಸತ್ಕಾರ್ಯವಾದಿಗಳಿಗೆ ಉಚಿತವಾದ ಇಂಥಾ ಸಮಾಧಾನವನ್ನು ರಾಮಾನುಜಾಚಾರ್ಯರೇ ಒಪ್ಪಲಾರರು. ಕಿಂಚ ಒಪ್ಪುವುದಾದರೂ ಇದು ಅಸಂಭಾವಿತ ಪ್ರಕ್ರಿಯೆಯು. ಹೇಗಂದರೆ—ವೀರಾಗ್ರಣಿಯಾದ ಮಲ್ಲನ ಪರಾಕ್ರಮದಿಂದ ಸಂತುಷ್ಟನಾದ ರಾಜನು ಆತನ ಭಕ್ತಿ ವಿಶ್ವಾಸಗಳಿಂದ ಪ್ರಸನ್ನನಾಗಿ ಜಹಗೀರಿಯನ್ನು ಕೊಡಬಹುದು ಅಥವಾ ಪ್ರಬಲವಾದ ಸೇನಾಧಿಪತ್ಯವೇ ಮುಂತಾದ ಅಧಿಕಾರವನ್ನಾದರೂ ಕೊಡಬಹುದು. ತನ್ನ ಉತ್ತಮತ್ವಕ್ಕೇ ನಾಶಕವಾದ ತನ್ನ ಸಾಮ್ಯವನ್ನೂ, ಸಮಾನ ಭೋಗವನ್ನೂ ಹೇಗೆತಾನೇ

---

* **ಪ್ರಶ್ನೆ**—ಸ್ವಾಮಿ! ಇದೇನು ತಮ್ಮ ಮಾತು? ನನ್ನ ಶರೀರದ ಮೇಲೆ ಭಾರವಾದ ಗೋಣಿಚೀಲದ ಮೂಟೆಯು ಬಂದು ಬಿದ್ದರೆ, ಕೆಳಗಿರುವ ನಾನು ಎತ್ತುವುದು ಕಷ್ಟವಾದರೂ ನನ್ನ ಸಮಾನ ಬಲವುಳ್ಳ ಹೊರಗಿರುವ ಮತ್ತೊಬ್ಬ ನನ್ನ ಮಿತ್ರನು ಅದನ್ನು ತೆಗೆಯಲು ಸಮರ್ಥನಾಗುವನು. ಅಥವಾ ಅವನೂ ನಾನೂ ಇಬ್ಬರೂ ಸೇರಿ ಆ ಭಾರವನ್ನು ನೂಕಬಹುದು. ಹೀಗಿರುವಲ್ಲಿ ಬ್ರಹ್ಮಸಮಾನನಾದ ಶರೀರಸ್ಥಜೀವಚೇತನನು ಸಂಸಾರಬಂಧವನ್ನು ಬಿಡಿಸಿಕೊಳ್ಳುವುದರಲ್ಲಿ ಸಮರ್ಥನಾಗದಿದ್ದರೂ, ಸಂಸಾರದಿಂದ ಹೊರಗಿರುವ ಜೀವಚೇತನನ ಸಮಾನನೇ ಆದ ವೈಕುಂಠಸ್ಥ ವಿಷ್ಣುಚೇತನನು ಎಲ್ಲಾ ಜೀವರುಗಳನ್ನು ಉದ್ಧಾರಮಾಡುವುದರಲ್ಲಿ ಅನುಪಪತ್ತಿಯು ಏನು?

ಉತ್ತರ—ನಿಮಗೆ ಭಾರವಾದ ಮೂಟೆಯನ್ನು ತಳ್ಳಲು ಸಾಮರ್ಥ್ಯವಿಲ್ಲದಿದ್ದರೆ, ನಿಮ್ಮ ಸಮಾನರಾದ ಮತ್ತೊಬ್ಬರಿಗೂ ಅದನ್ನು ಎತ್ತಿಡುವುದು ಸ್ವಲ್ಪ ದುರ್ಘಟವೇ! ಅದು ಹಾಗಿರಲಿ. ಬ್ರಹ್ಮತ್ವವು (ಪೂರ್ಣತ್ವವು), ಅಥವಾ ಬ್ರಹ್ಮಸಮಾನಧರ್ಮವು ಪ್ರತಿರುದ್ಧವಾಗುವುದೆಂದು ಹೇಳುವುದು ವಿರುದ್ಧೋಕ್ತಿಯು. ಬ್ರಹ್ಮಸಮಾನಧರ್ಮವುಳ್ಳ ಚೇತನರು ದುರ್ಬಲವಾದ ಪ್ರಕೃತಿಬಂಧಕ್ಕೆ ಸಿಕ್ಕಿಬಿದ್ದುದು, ಸಿಕ್ಕಿಬಿದ್ದರೂ ಅದರ ನಿವೃತ್ತಿಗಾಗಿ ಪುರುಷಾಂತರನನ್ನು ಪ್ರಾರ್ಥಿಸುವುದು, ಇವೆಲ್ಲಾ ಅಪಹಸನೀಯಪ್ರಕ್ರಿಯೆಯು. **ಮುಕ್ತನಿಗೆ ಆನಂದ ಸಾಮ್ಯವು ಉಂಟು, ಬಲಸಾಮ್ಯವು ಇಲ್ಲವೆಂದು ಹೇಳಕೂಡದು. ಆನಂದವು ಸಮಾನವಾದರೆ ಬಲ ಜ್ಞಾನಾದಿ ಸಕಲ ಐಶ್ವರ್ಯಗಳೂ ಸಮಾನವಾಗಿರಬೇಕು. ಆನಂದಕ್ಕೂ ಐಶ್ವರ್ಯಾದಿಗಳಿಗೂ ಪ್ರಯೋಜ್ಯಪ್ರಯೋಜಕಭಾವವನ್ನೂ ಸರ್ವರೂ ಒಪ್ಪಲೇಬೇಕು.**

ಕೊಡುವನು? ಇದೇ ರೀತಿಯಲ್ಲಿ ಭಕ್ತನ ಕೈಂಕರ್ಯಭಾವದಿಂದ ಪ್ರಸನ್ನನಾದ ಪರಬ್ರಹ್ಮನಾದ ವಿಷ್ಣುವು ಅರ್ಜುನಾದಿಗಳನ್ನು ಸಂಸಾರದಿಂದ ಉದ್ಧರಿಸಿ ಅವರಿಗೆ ಯಥೇಷ್ಟವಾದ ಸುಖಗಳನ್ನು ಕಲ್ಪಿಸುವನು. ಆದರೆ ತನ್ನ **ಬ್ರಹ್ಮತ್ವಕ್ಕೇ** ನಾಶಕವಾದ ಸಾಮ್ಯಭೋಗವನ್ನೂ ಕೈಂಕರ್ಯಭಾವರಾಹಿತ್ಯವನ್ನೂ ಅವನು ಕೊಡುವುದುಂಟಾನೇ ಹೇಗೆ? ಕಾಮಾದಿಗಳಿಂದ ವರ್ಜಿತರಾದ ಮುಕ್ತ ಅರ್ಜುನಾದಿ ಚೇತನರೂ ತಮ್ಮ ಸ್ವಭಾವದಲ್ಲಿಲ್ಲದ ಅಂಥಾ ಬ್ರಹ್ಮಸಾಮ್ಯರೂಪವಾದ ಫಲವನ್ನು ಕೇಳುವರು ತಾನೇ ಯಾತಕ್ಕೆ? ಉತ್ತಮ ಪುತ್ರನು, ಪಿತನು ಅತಿಪ್ರಸನ್ನನಾದರೆ ಪಿತನ ತೊಡೆಯ ಮೇಲೆ ಕುಳಿತುಕೊಳ್ಳಲು ಅಪೇಕ್ಷಿಸುವನು. ತಂದೆಯೂ ಸಹ ತನ್ನ ಕುಮಾರನನ್ನು ಆಶೀರ್ವದಿಸುತ್ತಾ, ಅವನ ಯೋಗ್ಯತಾನುಗುಣವಾಗಿ ಅವನನ್ನು ಆದರಿಸುವನು. ಆದುದರಿಂದ ಸ್ವರೂಪತಃ ಬ್ರಹ್ಮಸಾಮ್ಯವು ಜೀವಚೇತನರಲ್ಲಿ ಸ್ವಭಾವದಿಂದಲೇ ಇಲ್ಲದಿದ್ದರೆ, ಪರಬ್ರಹ್ಮನು ನೂತನವಾಗಿ ಅಂಥಾ ಫಲವನ್ನು ಕೊಡುವುದು ಅಸಂಭಾವಿತವು.

ಹೀಗೆ ಉಭಯ ಮತಗಳೂ ಯುಕ್ತಿಪರಾಹತವಾಗಿರುವುದರಿಂದ, "ಅಹಂ" ಪದಾರ್ಥವಾದ ಜೀವನು ಜೀವನೇ. ಅವನು ಯಾವಾಗಲೂ ಯಾವ ವಿಷಯದಲ್ಲೂ ಬ್ರಹ್ಮತ್ವವನ್ನು ಹೊಂದಲಾರನು. ಯಾತಕ್ಕೆಂದರೆ ಅದು ಅವನ ಸ್ವರೂಪಭೂತವಾದ ಆಸ್ತಿಯಲ್ಲ. ಅಲ್ಪಜ್ಞಾನ ಸ್ವರೂಪನೂ ಅಲ್ಪಸುಖ ಸ್ವರೂಪನೂ ಜೀವನು ಆಗಿರುವನು. ಆದುದರಿಂದ ಮುಕ್ತಿಯಲ್ಲಿ ಜೀವಚೇತನನು ತನ್ನ ಸ್ವರೂಪಭೂತವಾದ ಯಾವತ್ತೂ ಸುಖವನ್ನೂ ಜ್ಞಾನವನ್ನೂ ಹೊಂದಿ (ಅಭಿವ್ಯಕ್ತವಾದ ಜ್ಞಾನಾನಂದ ಸ್ವರೂಪನಾಗಿ), ಪರಿಪೂರ್ಣನಾದ, ಇವನ ಮನಸ್ಸಿಗೂ ನಿಲುಕದಷ್ಟು ಜ್ಞಾನಾನಂದಾದಿ ವೈಭವಗಳಿಂದ ವಿಶಿಷ್ಟನಾದ ಪರಬ್ರಹ್ಮನನ್ನು ಸೇವಿಸುತ್ತಲೇ ಸುಖಿಯಾಗಿರುವನೆಂದು ಹೇಳಬೇಕು. ಪರಮಾತ್ಮನು ಪೂರ್ಣ ಶಕ್ತಿಯುಳ್ಳವನಾದುದರಿಂದಲೇ, ಬಹು ದುಃಖಸಾಗರದಲ್ಲಿ ಮುಳುಗಿರುವ ಅಲ್ಪಶಕ್ತರಾದ ಜೀವರುಗಳನ್ನು ಉದ್ಧರಿಸುವುದರಲ್ಲಿ ನಿಸ್ಸೀಮನಾಗಿರುವನು. ಶ್ರೀ ಕೃಷ್ಣನು ಹೇಳುತ್ತಾನೆ.—

(3) **ಮಾಮೇವಯೇಪ್ರಪದ್ಯಂತೇ ಮಾಯಾಮೇತಾಂತರಂತಿತೇ ।**

—(7. 14.)

ನನ್ನನ್ನೇ ಯಾರು ಶರಣುಹೊಂದುತ್ತಾರೋ, ಅಂಥವರೇ ಈ ಪ್ರಕೃತಿ ಬಂಧನನ್ನು ದಾಟುತ್ತಾರೆ. (ನನ್ನಲ್ಲಿ ಶರಣಾಗತರಾದವರ ಪ್ರಕೃತಿಬಂಧವನ್ನು ನಾನು ಬಿಡಿಸುತ್ತೇನೆಂದು ತಾತ್ಪರ್ಯವು.)

(4) **ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।**
ಭವಾಮಿನಚಿರಾತ್ಪಾರ್ಥ ಮಯ್ಯಾವೇಶಿತ ಚೇತಸಾಂ ॥

—(12. 7.)

ನನ್ನ ಉಪಾಸಕರನ್ನು ನಾನು ಶೀಘ್ರವಾಗಿ ಮೃತ್ಯುರೂಪವಾದ ಸಂಸಾರದಿಂದ ಉದ್ಧರಿಸುತ್ತೇನೆ.

(5) **ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ ।**

—(18. 58.)

ನನ್ನ ಪ್ರಸಾದದಿಂದ ಜೀವಚೇತನನು ನಾಶರಹಿತವಾದ ಏಕಪ್ರಕಾರವಾಗಿರುವ ಸ್ವರೂಪಾನಂದಾವಿರ್ಭಾವರೂಪವಾದ ತನ್ನ ನಿಜಸ್ವರೂಪವನ್ನು ಹೊಂದುತ್ತಾನೆ.

(6) **ಮಚ್ಚಿತ್ತಸ್ಸರ್ವ ದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ।**

—(18. 58.)

ನನ್ನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾಗಿ ನನ್ನ ಪ್ರಸಾದದಿಂದ ಸರ್ವ ಕ್ಲೇಶಗಳನ್ನೂ ದಾಟುತ್ತೀಯೆ.

(7) **ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ॥**

—(18. 66.)

ಎಲೈ ಅರ್ಜುನನೇ! ನಾನು ನಿನ್ನನ್ನು ಸರ್ವ ಪಾಪಗಳಿಂದಲೂ ಬಿಡಿಸಿಬಿಡುತ್ತೇನೆ. ನೀನು ದುಃಖಪಡಬೇಡ. ನಿನ್ನ ಶತ್ರುಹನನಾದಿ ರೂಪಸೇವೆಯಿಂದ ಪ್ರಸನ್ನನಾಗಿ ನಿನಗೆ ಸಕಲ ಬಂಧನಿವೃತ್ತಿರೂಪವಾದ ಮುಕ್ತಿಯನ್ನು ಕೊಡುತ್ತೇನೆಂದು ಭಾವವು. ಜೀವರುಗಳು ಅಲ್ಪಶಕ್ತರು, ಪರಮಾತ್ಮನೊಬ್ಬನೇ ನಿರವಧಿಕ ಸಾಮರ್ಥ್ಯವುಳ್ಳವನೆಂಬುದು ಜೀವರುಗಳ ಬಂಧನಿವೃತ್ತಿವ್ಯವಸ್ಥೆಯಿಂದ ಮಾತ್ರವೇ ಗೊತ್ತಾಗುವುದಿಲ್ಲ. ಪ್ರಬಲರಾದ ಕಂಸಾದಿದೈತ್ಯರ ಬಾಧೆಯಿಂದ ಸಜ್ಜನರ ಬಾಧೆಯನ್ನು ಪರಿಹರಿಸಲಾರದೆ, ಗೋರೂಪಧಾರಿಣಿಯಾದ ಭೂದೇವಿಯಿಂದ ಪ್ರಾರ್ಥಿತರಾಗಿ, ಅಸಮರ್ಥರಾದ ಬ್ರಹ್ಮರುದ್ರಾದಿದೇವತೆಗಳೆಲ್ಲರೂ ಜಗನ್ನಾಥನಾದ ನಾರಾಯಣನನ್ನು ಶರಣುಹೊಂದಿರುವರು. ಸಮಸ್ತ ದೇವತೆಗಳಿಂದಲೂ ಅಶಕ್ಯವಾದ ಕಾರ್ಯವಾದರೂ ಶ್ರೀ ವಿಷ್ಣುವಿಗೆ ತೃಣಪ್ರಾಯವು. ಅಚಿಂತ್ಯಶಕ್ತನಾದ ಪರಬ್ರಹ್ಮನು ತಾನೇ ಅವತರಿಸಿ ಭೂಭಾರವನ್ನು ಪರಿಹರಿಸಿರುತ್ತಾನೆ. ಅರ್ಜುನಾದಿಗಳು ತಾವು ಮಾಡಿದ ಹನನಾದಿ ಕಾರ್ಯದಲ್ಲಿ ಸ್ವತಂತ್ರರಲ್ಲ. ಶ್ರೀ ಕೃಷ್ಣನು ಹೇಳುತ್ತಾನೆ :—

(8)..........**ನಿಮಿತ್ತಮಾತ್ರಂ ಭವಸವ್ಯಸಾಚಿ‌ನ್ ।**—(11. 34.)

(9) **ಮಯಾಹತಾಂಸ್ತ್ವಂಜಹಿಮಾವ್ಯಥಿಷ್ಠಾಃ ।**—(11. 34.)

ಎಲೈ ಅರ್ಜುನನೇ ! ನಾನೇ ಸ್ವತಂತ್ರನಾಗಿ ಮಾಡುವ ಸಂಹಾರಕಾರ್ಯ ದಲ್ಲಿ ನೀನು ನಿಮಿತ್ತಮಾತ್ರನಾಗು. ನನ್ನಿಂದಲೇ ಸ್ವತಂತ್ರವಾಗಿ ಸಂಹರಿಸಲ್ಪಟ್ಟ ವರನ್ನು ನೀನು ಸಂಹರಿಸು. ಎಂದರೆ ನಿನಗೆ ಸ್ವತಂತ್ರಶಕ್ತಿಯು ಇಲ್ಲದಿದ್ದರೂ ನಿನ್ನಲ್ಲಿ ನಿಂತು ನಾನು ಶತ್ರುಸಂಹಾರವನ್ನು ಮಾಡುತ್ತೇನೆ. ನೀನು ವ್ಯಥೆಪಡ ಬೇಡ ಎಂದು ಅರ್ಥವು.

ಭೂಭಾರಹರಣರೂಪವಾದ ಮಹಾಕಾರ್ಯವನ್ನು ನಾನೇ ಮಾಡುವೆನೆಂದು ಶ್ರೀ ಕೃಷ್ಣನು ಹೇಳುತ್ತಾನೆ :—

(10) **ಯದಾಯದಾಹಿಧರ್ಮಸ್ಯ ಗ್ಲಾನಿರ್ಭವತಿಭಾರತ ।**
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂಸೃಜಾಮ್ಯಹಂ ॥
ಪರಿತ್ರಾಣಾಯಸಾಧೂನಾಂ ವಿನಾಶಾಯಚದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ॥
(4. 7-8.)

ಎಲೈ ಅರ್ಜುನನೇ ! ಯಾವಾಗ ಧರ್ಮಕ್ಕೆ ಹ್ರಾಸವೂ ಅಧರ್ಮಕ್ಕೆ ವೃದ್ಧಿ ಯೂ ಆಗುವುದೋ ಆಗ ನಾನು ಅವತರಿಸುತ್ತೇನೆ. ಸಾಧುಗಳ ರಕ್ಷಣಾರ್ಥವಾ ಗಿಯೂ ಪಾಪಿಗಳ ವಿನಾಶಾರ್ಥವಾಗಿಯೂ ಧರ್ಮಸಂಸ್ಥಾಪನವನ್ನು ಮಾಡು ವುದಕ್ಕೂ ನಾನು ಆಯಾಯಕಾಲಗಳಲ್ಲಿ ಅವತರಿಸುತ್ತೇನೆ.

ಈ ರೀತಿಯಾಗಿ "ಭವಪಾಶಾಚ್ಚ ಮೋಚಕಃ" ಎಂಬ ಶ್ರೀಮದಾಚಾ ರ್ಯರು ಉದಾಹರಿಸಿರುವ ಪ್ರಮಾಣವಚನಾನುಸಾರ, ಅನಾದಿಯಾದ ಭವಪಾಶ ದಲ್ಲಿ ಬದ್ಧರಾದ ತಮಗೆ ಪ್ರಾಪ್ತವಾದ ದುಃಖನಿವೃತ್ತಿಯಲ್ಲಿ ಸ್ವತಃ ಅಸಮರ್ಥ ರಾದ ಅನಂತ ಚೇತನರುಗಳ ಕಟ್ಟುಗಳನ್ನು ದುರಂತವೀರ್ಯನಾದ ಶ್ರೀಹರಿಯು ತಾನೇ ಸ್ವತಂತ್ರನಾಗಿ ಬಿಚ್ಚಿ, ಮುಕ್ತಸ್ಥಾನದಲ್ಲಿಟ್ಟು, ಅವರ ಸ್ವರೂಪಾನಂದದ ಭೋಗಕ್ಕೂ ಸಹ ನಿಯಾಮಕನಾಗಿರುವನೆಂದು ಸಿದ್ಧವಾಯಿತು.

4

ಪ್ರಶ್ನೆ—ಸ್ವಾಮಿ ! ಜೀವನ ಸ್ವರೂಪಭೂತವಾದ ಆನಂದಾನುಭವಕ್ಕೆ ಪ್ರತಿಬಂಧಕಗಳಾದ ಆವರಣಗಳು ಯಾವುವು ? ಮತ್ತು ಪ್ರತಿಬಂಧಕವು ನಿವೃ ತ್ತಿಯಾದ ನಂತರ ಪ್ರಾಪ್ತವಾಗುವ ಮುಕ್ತಿಯು ಎಷ್ಟುಪ್ರಕಾರವಾಗಿರುವುದು ?

ಉತ್ತರ—ಶ್ರೀ ಭಗವಾನ್—ಶ್ರೀ ಕೃಷ್ಣನು ಹೇಳುತ್ತಾನೆ :—

(1)............**ಸರ್ವಮಿದಂ ಜಗತ್ ।**

ಮೋಹಿತಂನಾಭಿಜಾನಾತಿಮಾಮೇಭ್ಯಃ ಪರಮವ್ಯಯಂ ॥

ದೈವೀಹ್ಯೇಷಾಗುಣಮಯೀ ಮಮಮಾಯಾದುರತ್ಯಯಾ ।

—(7. 13-14.)

ಈ ಯಾವತ್ತು ಪ್ರಾಣಿಗಳು ಮಿಥ್ಯಾಜ್ಞಾನದಿಂದ ಮೋಹಿತವಾಗಿ ಪ್ರಕೃತಿ ವಿಲಕ್ಷಣವಾದ ನನ್ನ ಸ್ವರೂಪವನ್ನು ತಿಳಿಯಲಾರರು. (ಇದಕ್ಕೆ ಕಾರಣವೇನೆಂದರೆ ಹೇಳುತ್ತಾನೆ :—) ಕ್ರೀಡಾದಿಗುಣವಿಶಿಷ್ಟನಾದ ನನ್ನ ಸಂಬಂಧಿಯಾದ, (= ನನ್ನ ಇಚ್ಛೆಯಿಂದ ಸಹಕೃತವಾದ), ನನ್ನ ಅಧೀನವಾದ ತ್ರಿಗುಣಾತ್ಮಕ ಪ್ರಕೃತಿಗೆ ಅಭಿಮಾನಿಯಾದ ಚೇತನಪ್ರಕೃತಿಯು (ದುರ್ಗಾದೇವಿಯು) ಮತ್ತು ತ್ರಿಗುಣಾತ್ಮಕವಾದ ಜಡಪ್ರಕೃತಿಯು ನನ್ನ ವಿಷಯಕ ಯಥಾರ್ಥಜ್ಞಾನಕ್ಕೆ ಪ್ರತಿಬಂಧಕವಾಗಿರುವುದು ; ಮತ್ತು ದುರತ್ಯಯಾ= ದಾಟುವುದಕ್ಕೆ ಅಶಕ್ಯವಾದುದು.

ಈ ಶ್ಲೋಕಗಳಿಂದ ಜ್ಞಾನಸ್ವರೂಪನಾದ ಜೀವನು ಪರಬ್ರಹ್ಮನನ್ನು ತಿಳಿಯದೆ ಇರುವುದಕ್ಕೂ, ಪರಮಾತ್ಮನು ಎಲ್ಲರಂತೆ ಒಬ್ಬ ಸಾಮಾನ್ಯಮನುಷ್ಯನೆಂದು ವಿಪರೀತವಾಗಿ ತಿಳಿಯುವುದಕ್ಕೂ ಮೂರು ಕಾರಣಗಳು ತೋರಿಬರುತ್ತವೆ. ಕ್ರೀಡಾದಿಗುಣವಿಶಿಷ್ಟನಾದ ಪರಮಾತ್ಮನ ಇಚ್ಛೆಯು ಒಂದನೆಯ ಕಾರಣವು. ತ್ರಿಗುಣಗಳಿಗೆ ಅಭಿಮಾನಿಯಾದ ದುರ್ಗಾದೇವಿಯು ಎರಡನೆಯ ಕಾರಣವು. ತ್ರಿಗುಣಾತ್ಮಕವಾದ ಜಡಪ್ರಕೃತಿಯೇ ಮೂರನೆಯ ಕಾರಣವು. "ಅನಾದಿಮಾಯಯಾಸುಪ್ತಃ" ಎಂಬ ಶ್ರುತ್ಯನುಸಾರವಾಗಿ ಈ ಮೂರು ಆವರಣಗಳೂ ಅನಾದಿ ಎಂದು ನಿರ್ಧರಿಸಬೇಕು. ಪ್ರಕೃತಿಬಂಧವು ಸರ್ವ ಜೀವರಿಗೂ ಇರುವುದೆಂದು ಇನ್ನೂ ಎರಡು ಕಡೆಗಳಲ್ಲಿ ಶ್ರೀ ಕೃಷ್ಣನು ಹೇಳಿರುತ್ತಾನೆ :—

(2) **ಪುರುಷಃ ಪ್ರಕೃತಿಸ್ಥೋಹಿಭುಂಕ್ತೇಪ್ರಕೃತಿಜಾನ್ಗುಣಾನ್ ।**

—(13. 22.)

(3) **ನತದಸ್ತಿಪೃಥಿವ್ಯಾಂವಾ ದಿವಿದೇವೇಷುವಾಪುನಃ ।**

ಸತ್ವಂಪ್ರಕೃತಿಜೈರ್ಮುಕ್ತಂಯದೇಭಿಃಸ್ಯಾತ್ತ್ರಿಭಿರ್ಗುಣೈಃ ॥

—(18. 40.)

(4) ....**ಪ್ರಕೃತಿಸ್ತ್ವಾಂನಿಯೋಕ್ಷ್ಯತಿ ।**—(18. 59.)

ಈ ಶ್ಲೋಕಾರ್ಥಗಳು (45 ಮತ್ತು 224 ನೆಯ ಪುಟಗಳಲ್ಲಿ) ವಿಸ್ತೃತವಾಗಿರುವುವು.

ಅಜ್ಞಾನವೂ ಒಂದು ಬಂಧವೆಂದು ಐದನೆಯ ಅಧ್ಯಾಯದ ಶ್ಲೋಕದಿಂದ ನಿಶ್ಚಿತವಾಗುವುದು.

(5) **ಅಜ್ಞಾನೇನಾವೃತಂಜ್ಞಾನಂ ತೇನಮುಹ್ಯಂತಿ ಜಂತವಃ ।**

—(5. 15.)

ಕಾಮವು ಒಂದು ಪ್ರಬಲವಾದ ಬಂಧವೆಂದು ಮೂರನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣನು ಹೇಳುತ್ತಾನೆ:—

(6) **ಕಾಮಏಷಕ್ರೋಧಏಷರಜೋಗುಣಸಮುದ್ಭವಃ ।**
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹವೈರಿಣಂ ॥
ಧೂಮೇನಾವ್ರಿಯತೇವಹ್ನಿ ರ್ಯಥಾದರ್ಶೋಮಲೇನಚ ।
ಯಥೋಲ್ಬೇನಾವೃತೋ ಗರ್ಭ ಸ್ತಥಾತೇನೇದಮಾವೃತಂ ॥
ಆವೃತಂಜ್ಞಾನಮೇತೇನ ಜ್ಞಾನಿನೋನಿತ್ಯವೈರಿಣಾ ।
ಕಾಮರೂಪೇಣಕೌಂತೇಯ ದುಷ್ಪೂರೇಣಾನಲೇನಚ ॥

—(3. 37-39.)

ಎಲೈ ಅರ್ಜುನನೇ ! ಕಾಮವೇ ಪಾಪಕರ್ಮಗಳಿಗೆ ಪ್ರಬಲವಾದ ಪ್ರವರ್ತಕವು. ಕಾಮವು ರಜೋಗುಣದಿಂದ ಉತ್ಪನ್ನವಾಗುವ ಕ್ರೋಧಕ್ಕೂ ಕಾರಣವು. ಈ ಕಾಮವು ಅನಂತವಿಷಯಾಭಿಲಾಷೆಗಳಿಂದ ಪೂರ್ಣವಾದುದು. ಬ್ರಹ್ಮಹತ್ಯಾದಿ ಮಹಾಪಾಪಗಳಿಗೆ ಮೂಲಭೂತವಾದುದು. ಕಾಮವೇ ಮೋಕ್ಷಾದಿಪುರುಷಾರ್ಥಪ್ರಾಪ್ತಿಗೆ ಮುಖ್ಯಪ್ರತಿಬಂಧಕವೆಂದು ತಿಳಿ. ಅಗ್ನಿಯು ಧೂಮದಿಂದ ಆವರಿಸಲ್ಪಡುವಹಾಗೆ ಮುಕ್ತಿಯೋಗ್ಯಚೇತನರು ಈ ಕಾಮದಿಂದ ಆವರಿಸಲ್ಪಟ್ಟಿರುವರು. ಕನ್ನಡಿಯು ಧೂಳಿನಿಂದ ಆವರಿಸಲ್ಪಡುವಂತೆ ಮಧ್ಯಮಜೀವರುಗಳು ಈ ಕಾಮದಿಂದ ಆವರಿಸಲ್ಪಟ್ಟಿರುವರು. ಗರ್ಭಸ್ಥ ಶಿಶುವು ಚರ್ಮಮಯವಾದ ಗರ್ಭಚೀಲದಿಂದ ಬಿಗಿಯಲ್ಪಟ್ಟಿರುವಂತೆ ತಮೋಯೋಗ್ಯರಾದ ಚೇತನರು ಕಾಮರೂಪ ಆವರಣದಿಂದ ಬಂಧಿಸಲ್ಪಟ್ಟಿರುವರು. (ಕಾಮವು ಕೇವಲ ಜೀವಸ್ವರೂಪವನ್ನು ಮಾತ್ರ ಆವರಿಸಿರುವುದಿಲ್ಲ. ಶಾಸ್ತ್ರಜನ್ಯಜ್ಞಾನವನ್ನು ಸಹ ಆವರಿಸಿ ಬ್ರಹ್ಮಾಪರೋಕ್ಷಜ್ಞಾನಕ್ಕೆ ಪ್ರತಿಬಂಧಕವಾಗಿರುವುದು ಎಂದು ಹೇಳುತ್ತಾನೆ:—) ಸದಾ ಅಪರೋಕ್ಷಜ್ಞಾನಕ್ಕೆ ಪ್ರತಿಬಂಧಕವಾದ, ಎಷ್ಟು ಪ್ರಾಪ್ತವಾದರೂ ಪರಿಸಮಾಪ್ತಿ

ಯಿಲ್ಲದೆ, ತೃಪ್ತಿರಹಿತವಾದ ಕಾಮವೆಂಬ ಹೆಸರುಳ್ಳ ಈ ಶತ್ರುವಿನಿಂದ ಶಾಸ್ತ್ರಜನ್ಯ ಜ್ಞಾನವುಳ್ಳ ಜ್ಞಾನಿಯ ಜ್ಞಾನವೂ ಕೂಡ ಆವರಿಸಲ್ಪಟ್ಟಿರುವುದು.

ರಾಗದ್ವೇಷಗಳೂ ಮತ್ತು ದ್ವಂದ್ವಮೋಹವೂ ಚೇತನನಿಗೆ ಬ್ರಹ್ಮಜ್ಞಾನವು ಬರುವುದರಲ್ಲಿಯೂ, ತನ್ನ ಸ್ವರೂಪಜ್ಞಾನವು ಬರುವುದರಲ್ಲಿಯೂ ಪ್ರತಿಬಂಧಕವೆಂದು ಏಳನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣನು ಹೇಳುತ್ತಾನೆ:—

(7) **ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನಭಾರತ ।**
ಸರ್ವಭೂತಾನಿ ಸಂಮೋಹಂ ಸರ್ಗೇಯಾಂತಿ ಪರಂತಪ ॥

—(7. 27.)

ಅನುಕೂಲವೆಂದು ತೋರಿದ ವಿಷಯಗಳಲ್ಲೆಲ್ಲಾ ಇಚ್ಛೆಯು, ಪ್ರತಿಕೂಲವೆಂದು ತೋರಿದ ವಿಷಯಗಳಲ್ಲೆಲ್ಲಾ ದ್ವೇಷವು ಇಂಥಾ ಇಚ್ಛಾದ್ವೇಷಗಳಿಂದ ಉತ್ಪನ್ನವಾದ ಸುಖದುಃಖ, ಲಾಭಾಲಾಭ ಶೀತೋಷ್ಣವೆಂಬ ದ್ವಂದ್ವವಿಷಯಕ ಮಿಥ್ಯಾಜ್ಞಾನದಿಂದ ಮತ್ತು ಜೀವೇಶ್ವರರ ವಿರುದ್ಧಧರ್ಮಗಳಾದ ಸರ್ವಜ್ಞತ್ವಾಲ್ಪಜ್ಞತ್ವ, ಪೂರ್ಣತ್ವಾಪೂರ್ಣತ್ವ ಇತ್ಯಾದಿ ದ್ವಂದ್ವವಿಷಯಕ (ವಿರುದ್ಧಧರ್ಮಗಳೆಲ್ಲಾ ಸುಳ್ಳು, ನಾನೇ ಪೂರ್ಣನಾದ ಈಶ್ವರನು ಇತ್ಯಾದಿ ರೂಪ) ಮಿಥ್ಯಾಜ್ಞಾನದಿಂದ ಸರ್ವ ಪ್ರಾಣಿಗಳೂ ಸೃಷ್ಟಿಕಾಲದಲ್ಲಿ ವಿಶೇಷವಾಗಿ ಸಂಮೋಹವನ್ನು (ಅಕಾರ್ಯೇಚ್ಛೆಯನ್ನು) ಹೊಂದುವುವು.

ಅನಾದಿಕರ್ಮವೂ ಒಂದು ಬಂಧವೆಂದು ಶ್ರೀಕೃಷ್ಣನು ನಿರೂಪಿಸುತ್ತಾನೆ:—

(8) **ಸ್ವಭಾವಜೇನ ಕೌಂತೇಯನಿಬದ್ಧಸ್ಸ್ವೇನಕರ್ಮಣಾ ।**
ಕರ್ತುಂನೇಚ್ಛಸಿಯನ್ಮೋಹಾತ್ ಕರಿಷ್ಯಸ್ಯವಶೋಽಪಿತತ್ ॥

—(18. 60.)

ಎಲೈ ಕುಂತೀಪುತ್ರನೇ ! ಸ್ವಭಾವಾನುಸಾರಿಯಾಗಿ ಉತ್ಪನ್ನವಾದ ಅಥವಾ ಪೂರ್ವಸಂಸ್ಕಾರದಿಂದ ಉತ್ಪನ್ನವಾದ ಸ್ವಕೀಯಕರ್ಮದಿಂದ ನೀನು ಅತ್ಯಂತವಾಗಿ ಬಂಧಿಸಲ್ಪಟ್ಟಿರುತ್ತೀಯೆ. ಅದುದರಿಂದ ಯಾವ ಕರ್ಮವನ್ನು ನೀನು ಬಂಧುಸ್ನೇಹರೂಪವಾದ ಮೋಹದಿಂದ ಮಾಡುವುದಕ್ಕೆ ಅಪೇಕ್ಷಿಸುವುದಿಲ್ಲವೋ ಅದನ್ನು ಅವಶ್ಯವಾಗಿ (ಕರ್ಮಾನುಗುಣವಾಗಿ ಪ್ರೇರಿಸುವ ಪರಬ್ರಹ್ಮನ ಅಧೀನವಾಗಿ) ನೀನು ಮಾಡುವವನಾಗುತ್ತೀಯೆ.

ಈ ರೀತಿಯಾಗಿ, ಸ್ವರೂಪತಃ ಜ್ಞಾನಸ್ವರೂಪನಾದರೂ ಜೀವನು ಅನಾದಿಯಾದ ಅನೇಕ ಬಂಧಗಳಿಂದ ಸಹಿತನಾಗಿ, "ಸುಹೃದಂಸರ್ವಭೂತಾನಾಂ"

ಎಂದು ಹೇಳಿರುವಂತೆ ಸರ್ವಜೀವರಿಗೂ ಅನಿಮಿತ್ತಬಂಧುವಾಗಿ, ತನ್ನ ಹೃದಯ ಪ್ರದೇಶದಲ್ಲಿಯೇ ಸದಾಸ್ಥಿತನಾಗಿ, ತನ್ನ ಯಾವತ್ತು ಸ್ವರೂಪ, ಪ್ರಮಿತಿ, ಪ್ರವೃತ್ಯಾದಿಗಳಿಗೆ ನಿಯಾಮಕನಾಗಿರುವ ಪರಮೇಶ್ವರನನ್ನು ಕಾಣದೆ, ತನ್ನ ಸ್ವಾಭಾವಿಕವಾದ ಜ್ಞಾನಾನಂದಾದಿಗಳನ್ನೂ ತಿಳಿಯಲಾರದೆ ಸಂಸಾರದಲ್ಲಿ ನಾನಾಯೋನಿಗಳನ್ನು ಹೊಂದುತ್ತಾ ಸಂಕಟಪಡುತ್ತಾನೆ. ಪರಮೇಶ್ವರನ ಪ್ರಸಾದದಿಂದ ಈ ಬಂಧವು ನಿವೃತ್ತವಾಗುವುದು. ಅದೇ ಮುಕ್ತಿಯು. ಇಷ್ಟು ವಿಷಯವನ್ನೂ ಸಂಕ್ಷೇಪವಾಗಿ ಶ್ರೀಕೃಷ್ಣನು "ಸುಖಂಬಂಧಾತ್ಪ್ರಮುಚ್ಯತೇ," "ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ" ಎಂಬ ವಾಕ್ಯಗಳಲ್ಲಿ ಉಪದೇಶಮಾಡಿರುತ್ತಾನೆ. ಇದರಿಂದ ಜೀವನಿಗೆ ಅನೇಕ ಬಂಧಗಳು ಇರುವುವೆಂದೂ ಪರಮಾತ್ಮಪ್ರಸಾದದಿಂದ ಅವುಗಳು ನಿವೃತ್ತವಾಗುವುವೆಂದೂ ಸಿದ್ಧವಾಗುವುದು.

5

ಮುಕ್ತಿಯು ಚತುರ್ವಿಧವಾಗಿರುವುದೆಂದು ಶಾಸ್ತ್ರದಲ್ಲಿ ನಿಶ್ಚಿತವಾಗಿರುವುದು. **"ದೈವೀಸಂಪದ್ವಿಮೋಕ್ಷಾಯ"** ಇತ್ಯಾದಿ ಸ್ಥಳಗಳಲ್ಲಿ ಶ್ರೀಕೃಷ್ಣನು ಮುಕ್ತಿಯಲ್ಲಿ ಅವಾಂತರವೈಚಿತ್ರ್ಯವು ಇರುವುದೆಂದು ಸೂಚಿಸಿರುತ್ತಾನೆ. ಚತುರ್ವಿಧಮುಕ್ತಿಪ್ರದನೆಂದು ವಾಸುದೇವನಿಗೆ ಬಿರುದು ಇರುವುದು. ಪರಬ್ರಹ್ಮನ ಶರೀರದಲ್ಲಿ ಪ್ರವೇಶಿಸಿ ಭೋಗವನ್ನು ಅನುಭವಿಸುವುದು ಸಾಯುಜ್ಯಮುಕ್ತಿಯೆನ್ನಿಸುವುದು. ಪರಬ್ರಹ್ಮನ ರೂಪದಂತೆ ರೂಪಪ್ರಾಪ್ತಿಯು ಸಾರೂಪ್ಯಮುಕ್ತಿಯು. ಸಾಮೀಪ್ಯವೆಂದರೆ ಪರಮಾತ್ಮನ ದರ್ಶನವನ್ನು ಹೊಂದುತ್ತಾ, ವೈಕುಂಠಾದಿ ಲೋಕಗಳಲ್ಲಿ ಅವನ ಸಮೀಪದಲ್ಲಿರುವುದು ; ಸಾಲೋಕ್ಯವೆಂದರೆ ಪರಮಾತ್ಮಸಲೋಕದಲ್ಲಿ ಪರಮಾತ್ಮದರ್ಶನದಿಂದ ಸಹಿತವಾದ ಭೋಗವನ್ನು ಹೊಂದುವುದು. ನಾಲ್ಕುವಿಧವಾದ ಮುಕ್ತರೂ ಬಂಧನಿವೃತ್ತಿಯನ್ನು ಪಡೆದು, ಪರಬ್ರಹ್ಮನನ್ನು ಹೊಂದಿ ಸ್ವರೂಪಾನಂದವನ್ನು ಅನುಭವಿಸುತ್ತಿರುವರು. ಆದುದರಿಂದ ಮುಕ್ತಿಯನ್ನು ವರ್ಣಿಸುವ ಅನೇಕ ವಾಕ್ಯಗಳು ಸಾಮಾನ್ಯಾಕಾರವಾಗಿ ಯಾವ ವಿಧವಾದ ಮುಕ್ತಿಪರವಾಗಿಯಾದರೂ ಯೋಜನೆಮಾಡುವುದಕ್ಕೆ ಅನುಕೂಲವಾಗಿರುವುವು. ತಥಾಹಿ :—

ಸಕಲ ಪಾಪಕ್ಷಯವು (ಮತ್ತು ಕರ್ಮನಿವೃತ್ತಿಯು) ಮುಕ್ತಿಯೆಂದು ಅನೇಕ ವಾಕ್ಯಗಳಲ್ಲಿ ಶ್ರೀಕೃಷ್ಣನು ಹೇಳಿರುತ್ತಾನೆ.—

(1) **ಯಜ್ಞಶಿಷ್ಟಾಶಿನಸ್ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।**

—(3. 13.)

ಭಗವನ್ನಿವೇದನ, ವೈಶ್ವದೇವ, ಬಲಿಹರಣ, ಅತಿಥಿಪೂಜಾ ನಂತರ ಉಳಿದ ಅನ್ನವನ್ನು ಭೋಜನಮಾಡುವವನು (ಜ್ಞಾನವನ್ನು ಹೊಂದಿ) ಸಕಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

(2) **ನಮಾಂಕರ್ಮಾಣಿಲಿಂಪಂತಿ ನಮೇಕರ್ಮಫಲೇಸ್ಪೃಹಾ ।**
ಇತಿಮಾಂಯೋಭಿಜಾನಾತಿಕರ್ಮಭಿರ್ನಸಬಧ್ಯತೇ ॥—(4. 14.)

ನನಗೆ (ಶ್ರೀಕೃಷ್ಣನಿಗೆ) ಕರ್ಮಲೇಪವು ಇರುವುದಿಲ್ಲ. ಮತ್ತು ಕರ್ಮಫಲದಲ್ಲಿ ಅಪೇಕ್ಷೆಯೂ ಇರುವುದಿಲ್ಲವೆಂದು ತಿಳಿದವನು ಕೂಡ (ಅಪರೋಕ್ಷಜ್ಞಾನದ್ವಾರಾ) ಕರ್ಮಗಳಿಂದ ಬಂಧಿಸಲ್ಪಡುವುದಿಲ್ಲ. ಮುಕ್ತನಾಗುತ್ತಾನೆಂದರ್ಥವು.

(3) **ತತ್ತೇಕರ್ಮಪ್ರವಕ್ಷ್ಯಾಮಿಯಜ್ಜ್ಞಾತ್ವಾಮೋಕ್ಷ್ಯಸೇಽಶುಭಾತ್ ।**—(4. 16.)

ಯಾವುದನ್ನು ತಿಳಿದರೆ ನೀನು (ಅಪರೋಕ್ಷಜ್ಞಾನ ದ್ವಾರಾ) ಸಕಲ ಪಾಪಗಳಿಂದಲೂ ಮುಕ್ತನಾಗುವಿಯೋ ಅಂಥಾ ಕರ್ಮಸ್ವರೂಪವನ್ನು ನಿನಗೆ ಉಪದೇಶಮಾಡುತ್ತೇನೆ.

(4) **ಸರ್ವಂ ಜ್ಞಾನಪ್ಲವೇನೈವವೃಜಿನಂಸಂತರಿಷ್ಯಸಿ ।**—(4. 36.)

ಜ್ಞಾನರೂಪವಾದ ನಾವೆಯಿಂದ ನೀನು ಸಕಲ ಪಾಪಗಳನ್ನೂ ದಾಟುತ್ತೀಯೆ. (ಮುಕ್ತನಾಗುವಿ ಎಂದರ್ಥವು.)

(5) **ಇದಂತುತೇ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಮೋಕ್ಷ್ಯಸೇಽಶುಭಾತ್**—(9. 1.)

ಯಾವುದರ ಜ್ಞಾನದಿಂದ ಸಕಲ ಪಾಪಗಳಿಂದಲೂ ಬಿಡಲ್ಪಡುವಿಯೋ (ಮುಕ್ತನಾಗುವಿಯೋ) ಅಂಥಾ ಗುಹ್ಯತತ್ವೋಪದೇಶವನ್ನು ನಾನು ನಿನಗೆ ಮಾಡುತ್ತೇನೆ.

(6) **ಯೋಮಾಮಜಮನಾದಿಂಚವೇತ್ತಿ ಲೋಕಮಹೇಶ್ವರಂ ।**
ಅಸಂಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥

—(10. 3.)

ನಾನು (ಶ್ರೀ ಕೃಷ್ಣನು) ಅಜನು, ಅನಾದಿಯು, ಸರ್ವಲೋಕಸ್ವಾಮಿಯು ಎಂದು ತಿಳಿದವನು. ಸರ್ವಪಾಪಗಳಿಂದಲೂ ಬಿಡಲ್ಪಡುತ್ತಾನೆ (ಮುಕ್ತನಾಗುತ್ತಾನೆ.

(7) **ಮಚ್ಚಿತ್ತಃ ಸರ್ವದುರ್ಗಾಣಿಮತ್ಪ್ರಸಾದಾತ್ತರಿಷ್ಯಸಿ ।**

—(18. 58.)

ನನ್ನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನು ನನ್ನ ಪ್ರಸಾದದಿಂದ ಸಕಲ ಕ್ಲೇಶಗಳನ್ನೂ ಪರಿಹರಿಸಿಕೊಳ್ಳುತ್ತಾನೆ. (ಸಕಲ ಕರ್ಮಕ್ಷಯವನ್ನೂ ಹೊಂದಿ ಮುಕ್ತನಾಗುತ್ತಾನೆಂದರ್ಥವು.)

(8) **ಅಹಂತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ।**

(18. 66.)

ನಾನು ನಿನ್ನನ್ನು ಸರ್ವಪಾಪಗಳಿಂದಲೂ ಬಿಡಿಸಿಬಿಡುತ್ತೇನೆ. (ನಿನ್ನನ್ನು ಮುಕ್ತನನ್ನಾಗಿ ಮಾಡುತ್ತೇನೆ, ನೀನು ಶೋಕಪಡಬೇಡ.

ಬಂಧನಿವೃತ್ತಿಯು ಮುಕ್ತಿಯೆಂದು ಶ್ರೀ ಕೃಷ್ಣನು ಮೂರು ನಾಲ್ಕು ಸ್ಥಳಗಳಲ್ಲಿ ಹೇಳಿರುತ್ತಾನೆ:—

(9) **ನಿರ್ದ್ವಂದ್ವೋಹಿಮಹಾಬಾಹೋ ಸುಖಂ ಬಂಧಾತ್ಪ್ರ ಮುಚ್ಯತೇ ।**—(5. 3.)

ದ್ವಂದ್ವ ಪ್ರಯುಕ್ತವಿಕಾರರಹಿತನಾದ ಜ್ಞಾನಿಯು ಸುಖವಾಗಿ ಬಂಧದಿಂದ ಬಿಡಲ್ಪಡುತ್ತಾನೆ.

(10) **ದೈವೀಹ್ಯೇಷಾಗುಣಮಯೀ ಮಮಮಾಯಾದುರತ್ಯಯಾ ।**
ಮಾಮೇವ ಯೇಪ್ರಪದ್ಯಂತೇ ಮಾಯಾಮೇತಾಂತರಂತಿತೇ ॥

(7. 14.)

ನನ್ನ ಇಚ್ಛಾಧೀನವಾದ ತ್ರಿಗುಣಾತ್ಮಕವಾದ ದುರ್ಗಾದೇವಿಯಿಂದ ಅಭಿಷುಸ್ಯವಾದ ಪ್ರಕೃತಿಬಂಧವು ನನ್ನ ಪ್ರಸಾದಹೊರತು ದಾಟುವುದಕ್ಕೆ ಅಶಕ್ಯವು. ನನ್ನನ್ನೇ ಯಾರು ಶರಣುಹೊಂದುತ್ತಾರೆಯೋ ಅವರೇ ಈ ಪ್ರಕೃತಿಬಂಧವನ್ನು ದಾಟುತ್ತಾರೆ.

(11) **ಭೂತಪ್ರಕೃತಿಮೋಕ್ಷಂ ಚಯೇವಿದು ರ್ಯಾಂತಿತೇ ಪರಂ ।**

—(13. 34.)

ಪ್ರಾಣಿಗಳಿಗೆ ಪ್ರಕೃತಿಬಂಧದಿಂದ ಬಿಡುಗಡೆಯಾಗುವ ಪ್ರಕಾರವನ್ನು ತಿಳಿದ ಜ್ಞಾನಿಗಳು ಪರಮಾತ್ಮನನ್ನು ಹೊಂದುತ್ತಾರೆ.

ಪರಮಾತ್ಮನ ಪ್ರಾಪ್ತಿಯು ಮುಕ್ತಿಯೆಂದು ಅನೇಕ ಸ್ಥಳಗಳಲ್ಲಿ ಶ್ರೀ ಕೃಷ್ಣನು ಹೇಳಿರುತ್ತಾನೆ:—

(12) **ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ।**

—(2. 72.)

ಪೂರ್ವೋಕ್ತರೀತಿಯಲ್ಲಿ ಬ್ರಹ್ಮಧ್ಯಾನಮಾಡಿದೇಹತ್ಯಾಗಮಾಡುವವನು ಪ್ರಾಕೃತಶರೀರ ರಹಿತನಾದ ಬ್ರಹ್ಮನನ್ನು ಹೊಂದುತ್ತಾನೆ.

(13) **ಅಸಕ್ತೋಹ್ಯಾಚರನ್ಕರ್ಮ ಪರಮಾಪ್ನೋತಿ ಪೂರುಷಃ ।**

—(3. 19.)

ಫಲಾಪೇಕ್ಷೆಯಿಂದ ರಹಿತನಾಗಿ ನಿಯತಕರ್ಮವನ್ನು ಮಾಡುವವನು (ಜ್ಞಾನದ್ವಾರಾ) ಪರಮಾತ್ಮನನ್ನು ಹೊಂದುತ್ತಾನೆ.

(14) **ಜನ್ಮಕರ್ಮ ಚ ಮೇ ದಿವ್ಯಮೇವಂ ಯೋವೇತ್ತಿತತ್ವತಃ ।**
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿಮಾಮೇತಿಸೋಽರ್ಜುನ ॥

—(14. 9.)

ಲೋಕವಿಲಕ್ಷಣವಾದ ನನ್ನ ಅವತಾರಗಳನ್ನೂ ಸೃಷ್ಟ್ಯಾದಿ ಕರ್ಮಗಳನ್ನೂ ಯಥಾರ್ಥವಾಗಿ ತಿಳಿದವನು....ನನ್ನನ್ನು ಹೊಂದುತ್ತಾನೆ.

(15) **ಯಜ್ಞಶಿಷ್ಟಾಮೃತ ಭುಜೋಯಾಂತಿ ಬ್ರಹ್ಮಸನಾತನಂ ।**

—(4. 31.)

ಯಜ್ಞಮಾಡಿ ಹವಿಶ್ಶೇಷವನ್ನು ಭೋಜನಮಾಡುವವರು ಅನಾದಿ ನಿತ್ಯನಾದ ಬ್ರಹ್ಮನನ್ನು ಹೊಂದುತ್ತಾರೆ.

(16) **ಯೋಗಯುಕ್ತೋಮುನಿ ಬ್ರಹ್ಮನಚಿರೇಣಾಧಿಗಚ್ಛತಿ ।**

—(5. 6.)

ವಿಹಿತಕರ್ಮಾನುಷ್ಠಾನರೂಪವಾದ ಉಪಾಯದಿಂದ ಸಹಿತನಾದ ಮನನಶೀಲನಾದ ಯೋಗಿಯು ಕ್ಷಿಪ್ರದಲ್ಲಿ ಬ್ರಹ್ಮನನ್ನು ಹೊಂದುತ್ತಾನೆ.

(17) **ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ।**

—(5. 24.)

ಬ್ರಹ್ಮನಲ್ಲಿ ಸದಾ ಆಸಕ್ತಚಿತ್ತವುಳ್ಳ ಯೋಗಿಯು ಪ್ರಾಕೃತಶರೀರರಹಿತನಾದ ಬ್ರಹ್ಮನನ್ನು ಹೊಂದುತ್ತಾನೆ.

(18) **ಆಸ್ಥಿತಃ ಸಹಿಯುಕ್ತಾತ್ಮಾ ಮಾಮೇವಾನುತ್ತಮಾಂಗತಿಂ ।**

—(7. 18.)

ಜ್ಞಾನಿಯು ಸರ್ವೋತ್ತಮ ಸ್ಥಿತಿರೂಪವಾದ ಮುಕ್ತಿಯನ್ನು ಉದ್ದೇಶಮಾಡಿ ಸಮಾಧಿಯುಕ್ತವಾದ ಮನಸ್ಸುಳ್ಳವನಾಗಿ ನನ್ನನ್ನು ಹೊಂದುವವನಾಗಿದ್ದಾನೆ.

(19) **ಮದ್ಭಕ್ತಾಯಾಂತಿಮಾಮಪಿ ।**—(7. 23.)

ನನ್ನ ಭಕ್ತರು ನನ್ನನ್ನು ಹೊಂದುತ್ತಾರೆ.

(20) **ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಃ ।**

—(8. 7.)

ನನ್ನಲ್ಲಿಯೇ ಸಮರ್ಪಿತವಾದ ಮನೋಬುದ್ಧಿಯುಳ್ಳವನು ನನ್ನನ್ನೇ ಹೊಂದುವನು. ಇದರಲ್ಲಿ ಸಂಶಯವಿಲ್ಲ.

(21) **ಅಭ್ಯಾಸಯೋಗಯುಕ್ತೇನ ಚೇತಸಾನಾನ್ಯಗಾಮಿನಾ ।**
ಪರಮಂಪುರುಷಂದಿವ್ಯಂ ಯಾತಿಪಾರ್ಥಾನುಚಿಂತಯನ್ ॥

—(8. 8.)

ಪುನಃ ಪುನಃ ಆವರ್ತನರೂಪವಾದ ಉಪಾಯದಿಂದ ಸಹಿತವಾದ, ಮತ್ತು ವಿಷಯಾಂತರಸಂಚಾರರಹಿತವಾದ ಮನಸ್ಸಿನಿಂದ ಕ್ರೀಡಾದಿ ಗುಣವಿಶಿಷ್ಟನಾದ ಪರಮಪುರುಷನನ್ನು ಧ್ಯಾನಮಾಡುವವನು ಪರಮಾತ್ಮನನ್ನು ಹೊಂದುತ್ತಾನೆ.

(22) ....**ಸತಂಪರಂಪುರುಷಮುಪೈತಿದಿವ್ಯಂ ।**—(8. 10.)

ಪರಮಾತ್ಮನನ್ನು ಸ್ಮರಿಸುತ್ತಾ ಅಂತ್ಯಕಾಲದಲ್ಲಿ ಯೋಗಬಲದಿಂದ ದೇಹತ್ಯಾಗಮಾಡುವ ಯೋಗಿಯು ಕ್ರೀಡಾದಿ ಗುಣವಿಶಿಷ್ಟನಾದ ಪರಮಪುರುಷನನ್ನು ಹೊಂದುತ್ತಾನೆ.

(23) **ಮಾಮುಪೇತ್ಯಪುನರ್ಜನ್ಮ........ನಾಪ್ನುವಂತಿ....।**—(8. 15.)

ನನ್ನನ್ನು ಹೊಂದಿದವರು ಪುನರ್ಜನ್ಮವನ್ನು ಹೊಂದುವುದಿಲ್ಲ.

(24) **ಮಾಮುಪೇತ್ಯತುಕೌಂತೇಯ ಪುನರ್ಜನ್ಮನವಿದ್ಯತೇ ।**

—(8. 16.)

ಎಲೈ ಕೌಂತೇಯನೇ! ನನ್ನನ್ನು ಹೊಂದಿದವರಿಗೆ ಪುನರ್ಜನ್ಮವು ಇರುವುದಿಲ್ಲ.

(25) ....ಯಾಂತಿಮದ್ಯಾಜಿನೋಽಪಿಮಾಂ ।—(9. 25.)

ನನ್ನ ಪೂಜಕರು (ಜ್ಞಾನವನ್ನು ಸಂಪಾದಿಸಿ) ನನ್ನನ್ನೇ ಹೊಂದುತ್ತಾರೆ.

(26) **ಸನ್ಯಾಸಯೋಗಯುಕ್ತಾತ್ಮಾವಿಮುಕ್ತೋಮಾಮುಪೈಷ್ಯಸಿ ।**
—(9. 28.)

ಫಲತ್ಯಾಗರೂಪವಾದ ಸನ್ಯಾಸ, ವಿಹಿತ ಕರ್ಮಾನುಷ್ಠಾನರೂಪವಾದ ಯೋಗ ಇವುಗಳಿಂದ ಸಹಿತವಾದ ಉತ್ತಮ ಮನಸ್ಸುಳ್ಳ ಯೋಗಿಯು ಜ್ಞಾನವನ್ನು ಸಂಪಾದಿಸಿ ಭವಬಂಧದಿಂದ ಬಿಡಲ್ಪಟ್ಟು ನನ್ನನ್ನು ಹೊಂದುತ್ತಾನೆ.

(27) **ಮಾಮೇವೈಷ್ಯಸಿಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ।**
—(9. 34.)

ನನ್ನನ್ನೇ ಆಶ್ರಯಿಸಿ, ನನ್ನಲ್ಲಿಯೇ ನಿಯುಕ್ತವಾದ ಮನಸ್ಸುಳ್ಳ ಜ್ಞಾನಿಯು ನನ್ನನ್ನೇ ಹೊಂದುತ್ತಾನೆ.

(28) **ನಿರ್ವೈರಸ್ಸರ್ವಭೂತೇಷು ಯಸ್ಸಮಾಮೇತಿಪಾಂಡವ ।**
—(11. 55.)

ಸಕಲ ಸಜ್ಜನರಲ್ಲಿಯೂ ವಿರೋಧರಹಿತನಾದ ಜ್ಞಾನಿಯು ನನ್ನನ್ನು ಹೊಂದುತ್ತಾನೆ.

(29) **ಯದಾಭೂತಪೃಥಗ್ಭಾವ ಮೇಕಸ್ಥಮನುಪಶ್ಯತಿ ।**
ತತಏವಚವಿಸ್ತಾರಂ ಬ್ರಹ್ಮಸಂಪದ್ಯತೇತದಾ ॥—(13. 31.)

ಪರಮಾತ್ಮನಿಂದ ಭಿನ್ನರಾದ ಅನಂತ ಪ್ರಾಣಿಸಮೂಹವು ಒಬ್ಬ ಪರಮಾತ್ಮನಲ್ಲಿ ಆಶ್ರಯಿಸಿಕೊಂಡಿರುವುವೆಂದು ತಿಳಿಯುವವನು ಮತ್ತು ಪರಮಾತ್ಮನಿಂದಲೇ ಪ್ರಾಣಿಗಳಿಗೆ ಸೃಷ್ಟ್ಯಾದಿಗಳು ಆಗುವುವೆಂದು ತಿಳಿಯುವವನು ಪರಬ್ರಹ್ಮನನ್ನು ಹೊಂದುತ್ತಾನೆ.

(30) **ಗಚ್ಛಂತ್ಯಮೂಢಾಃ ಪದಮವ್ಯಯಂತತ್ ।**—(15. 5.)

ಜ್ಞಾನಿಗಳು ಅವ್ಯಯನಾದ ಪರಮಾತ್ಮನನ್ನು ಹೊಂದುತ್ತಾರೆ.

(31) **ಮಾಮೇವೈಷ್ಯಸಿಸತ್ಯಂತೇ ಪ್ರತಿಜಾನೇಪ್ರಿಯೋಽಸಿಮೇ ।**
—(18. 65.

ನೀನು ನನ್ನ ಭಕ್ತನಾಗಿ ನನ್ನನ್ನು ಸೇವಿಸಿದರೆ ನೀನು ನನ್ನನ್ನೇ ಹೊಂದು ತ್ತೀಯೆ. ಇದು ಸತ್ಯವೆಂದು ಪ್ರತಿಜ್ಞೆಮಾಡಿ ಹೇಳುತ್ತೇನೆ. ನೀನು ನನಗೆ ಪ್ರಿಯನು.

(32) **ಭಕ್ತಿಂಮಯಿಪರಾಂಕೃತ್ವಾ ಮಾಮೇವೈಷ್ಯತ್ಯಸಂಶಯಃ ।**

—(18. 68.)

ಭಗವದ್ಗೀತೆಯನ್ನು ವಿಷ್ಣುಭಕ್ತರಿಗೆ ಉಪದೇಶಮಾಡುವವನು ಉತ್ಕೃಷ್ಟ ಭಕ್ತಿಯನ್ನು ಹೊಂದಿ ನಿಸ್ಸಂಶಯವಾಗಿ ನನ್ನನ್ನೇ ಹೊಂದುತ್ತಾನೆ.

ಪುನರ್ಜನ್ಮಾಭಾವವು (ಮೃತ್ಯುತರಣವು ಮತ್ತು ಸಂಸಾರನಿವೃತ್ತಿ ಯು) ಮುಕ್ತಿಯೆಂದು ಅನೇಕ ಸ್ಥಳಗಳಲ್ಲಿ ಶ್ರೀಕೃಷ್ಣನು ನಿರೂಪಿಸಿರುತ್ತಾನೆ :—

(33) **ಸಮದುಃಖಸುಖಂಧೀರಂ ಸೋಽಮೃತತ್ವಾಯಕಲ್ಪತೇ ।**

—(2. 15.)

ಲೌಕಿಕಸುಖಗಳಿಂದ ಉಬ್ಬದೆ, ದುಃಖಗಳಿಂದ ಕುಗ್ಗದೆ ವಿಷಯ ಸನ್ನಿಕರ್ಷ ದಿಂದ ಚಿತ್ತವಿಕಾರರಹಿತನಾದ ಜ್ಞಾನಿಯು ಮರಣರಹಿತವಾದ ಮುಕ್ತಿಯನ್ನು ಹೊಂದುವುದಕ್ಕೆ ಸಮರ್ಥನಾಗುವನು.

(34) **ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ।**

—(5. 17.)

ಬ್ರಹ್ಮಾಪರೋಕ್ಷದಿಂದ ದಗ್ಧಪಾಪವುಳ್ಳ ಜ್ಞಾನಿಗಳು ಪುನರ್ಜನ್ಮರಹಿತ ವಾದ ಮುಕ್ತಿಯನ್ನು ಹೊಂದುತ್ತಾರೆ.

(35) **ಮಾಮುಪೇತ್ಯ ಪುನರ್ಜನ್ಮ ದುಃಖಾಲಯ ಮಶಾಶ್ವತಂ ।**
ನಾಪ್ನುವಂತಿ... ....॥—(8. 15.)

ನನ್ನನ್ನು ಹೊಂದಿದ ಮುಕ್ತರು ಪುನರ್ಜನ್ಮವನ್ನು ಹೊಂದುವುದಿಲ್ಲ.

(36) **ಮಾಮುಪೇತ್ಯತುಕೌಂತೇಯ ಪುನರ್ಜನ್ಮನವಿದ್ಯತೇ ।**

—(8. 16.)

ನನ್ನನ್ನು ಹೊಂದಿದ ಮುಕ್ತರಿಗೆ ಪುನರ್ಜನ್ಮವು ಇರುವುದಿಲ್ಲ.

(37) **ಯಂಪ್ರಾಪ್ಯನನಿವರ್ತಂತೇ ತದ್ಧಾಮಪರಮಂಮಮ ।**

—(8. 21.)

ಯಾರನ್ನು ಹೊಂದಿದ ನಂತರ ಪುನಃ ಸಂಸಾರಕ್ಕೆ ಹಿಂತಿರುಗಿ ಬರುವುದಿ ಲ್ಲವೋ ಅಂಥಾದ್ದು ನನ್ನ ಸರ್ವೋತ್ತಮರೂಪವು.

(38) ....ಏಕಯಾಯಾತ್ಯನಾವೃತ್ತಿಂ ।—(8. 26.)

ಉತ್ತರಾಯಣ ಮಾರ್ಗದಲ್ಲಿ ಪ್ರಯಾಣಮಾಡಿದ ಜ್ಞಾನಿಗಳು ಅಪುನರಾವೃತ್ತಿಯನ್ನು ಹೊಂದುತ್ತಾರೆ.

(39) **ತೇಷಾಮಹಂ ಸಮುದ್ಧರ್ತಾಮೃತ್ಯುಸಂಸಾರಸಾಗರಾತ್ ।**
ಭವಾಮಿ ನಚಿರಾತ್ಪಾರ್ಥಮಯ್ಯಾವೇಶಿತಚೇತಸಾಂ ॥
—(12. 7.)

ನನ್ನ ಉಪಾಸಕರನ್ನು ನಾನು ಮೃತ್ಯುರೂಪವಾದ ಸಂಸಾರದ ದೆಸೆಯಿಂದ ಉದ್ಧರಿಸುತ್ತೇನೆ. (ಮುಕ್ತರನ್ನಾಗಿ ಮಾಡುತ್ತೇನೆಂದರ್ಥವು.)

(40) **ಯ ಏವಂವೇತ್ತಿಪುರುಷಂ........ನಸಭೂಯೋಽಭಿಜಾಯತೇ ।**
—(13. 24.)

ಪ್ರಕೃತಿ ಪುರುಷಸ್ವರೂಪವನ್ನು ವಿವಿಕ್ತವಾಗಿ ತಿಳಿದ ಜ್ಞಾನಿಯು ಕಾರಣಾಂತರದಿಂದ ದುರಾಚಾರಗಳನ್ನು ಮಾಡಿದರೂ ಪುನರ್ಜನ್ಮವನ್ನು ಹೊಂದುವುದಿಲ್ಲ. (ಮುಕ್ತನಾಗಿಯೇ ಆಗುತ್ತಾನೆಂದರ್ಥವು.)

(41) **ತೇಪಿಚಾತಿತರಂತ್ಯೇವಮೃತ್ಯುಂಶ್ರುತಿ ಪರಾಯಣಾಃ ।**
—(13. 26.)

ಶ್ರವಣೋಪಾಸನೆಯೇ ಪ್ರಚುರವಾಗಿ ಉಳ್ಳಂಥಾ ಕರ್ಮಯೋಗಿಗಳು ಸಹ ಮೃತ್ಯುವನ್ನು ದಾಟುತ್ತಾರೆ. (ಸಂಸಾರನಿವೃತ್ತಿಯನ್ನು ಹೊಂದುತ್ತಾರೆ.)

(42) **ಸರ್ಗೇಽಪಿನೋಪಜಾಯಂತೇ ಪ್ರಳಯೇನವ್ಯಥಂತಿಚ ।**
—(14. 2.)

ನನ್ನ ಸಾಧರ್ಮ್ಯವನ್ನು ಹೊಂದಿದ ಮುಕ್ತರು ಸೃಷ್ಟಿಕಾಲದಲ್ಲಿ ಹುಟ್ಟುವುದಿಲ್ಲ. ಪ್ರಳಯದಲ್ಲಿ ಮರಣಾದಿರೂಪವ್ಯಥೆಯನ್ನು ಹೊಂದುವದಿಲ್ಲ.

(43) **ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ।**
—(14. 20.)

ಗುಣಾತೀತನಾದ ಮುಕ್ತನು ಜನನ, ಮರಣ, ಜರಾ, ದುಃಖಗಳಿಂದ ಬಿಡಲ್ಪಟ್ಟು ಮುಕ್ತಿಯನ್ನು ಹೊಂದುತ್ತಾನೆ.

(44) **ತತಃ ಪರಂ ತತ್ಪರಿ ಮಾರ್ಗಿತವ್ಯಂಯಸ್ಮಿನ್ಗತಾನನಿವರ್ತಂತಿ ಭೂಯಃ ।**—(15. 4.)

ಪರಾಪರತತ್ವ ವಿವೇಕವನ್ನು ಹೊಂದಿದವನು, ಅನಂತರದಲ್ಲಿ ಯಾವನನ್ನು ಹೊಂದಿದವರು ಪುನಃ ಗರ್ಭಯಾತನೆಯನ್ನು ಹೊಂದುವುದಿಲ್ಲವೋ ಅಂಥಾ ಪರ ಬ್ರಹ್ಮನನ್ನು ಶ್ರವಣಮನನಾದಿಗಳಿಂದ ತಿಳಿದುಕೊಳ್ಳಬೇಕು.

ಮುಕ್ತಿಯು **ಸುಖಪ್ರಾಪ್ತಿರೂಪ**ವಾದುದೆಂದು ಕೆಲವು ಶ್ಲೋಕಗಳಲ್ಲಿ ಶ್ರೀ ಕೃಷ್ಣನು ಹೇಳಿರುತ್ತಾನೆ.

(45) **ಯುಕ್ತಃಕರ್ಮಫಲಂತ್ಯಕ್ತ್ವಾ ಶಾಂತಿಮಾಪ್ನೋತಿನೈಷ್ಠಿಕೀಂ ।** —(5. 12.)

ಭಗವದರ್ಪಣಬುದ್ಧಿಯಿಂದ ಕರ್ಮಾನುಷ್ಠಾನಮಾಡುವ ಯೋಗಿಯು ಕರ್ಮ ಫಲದಲ್ಲಿ ಸ್ನೇಹವನ್ನು ಬಿಟ್ಟು ಸ್ವರೂಪಭೂತವಾದ ಅತ್ಯುತ್ತಮವಾದ ಸುಖವನ್ನು ಹೊಂದುತ್ತಾನೆ. (ಸ್ವರೂಪಾನಂದಾವಿರ್ಭಾವರೂಪವಾದ ಮುಕ್ತಿಯನ್ನು ಹೊಂದುತ್ತಾನೆ ಎಂದರ್ಥವು.)

(46) **ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ।** —(5. 21.)

ಭಗವದ್ಧ್ಯಾನಮಾಡುವ ಯೋಗಿಯು ಮುಕ್ತನಾಗಿ ಶಾಶ್ವತವಾದ ನಿತ್ಯ ಸುಖವನ್ನು ಅನುಭವಿಸುತ್ತಾನೆ.

ಕೆಲವು ಶ್ಲೋಕಗಳು ಮುಕ್ತಿಯು ಶಾಂತಿರೂಪವೆಂದೂ, ಮುಕ್ತಿಯು ಪರಮಸಂಸಿದ್ಧಿಯೆಂದೂ, ಪರಮಗತಿಯೆಂದೂ, ಪರಮಶ್ರೇಯಸ್ಸೆಂದೂ ವರ್ಣನೆ ಮಾಡುತ್ತವೆ. ಈ ಧರ್ಮಗಳು ಚತುರ್ವಿಧಮುಕ್ತಿಗೂ ಸಾಮಾನ್ಯವಾದುವುಗಳು. ಶ್ರೀ ಕೃಷ್ಣನು ಹೇಳುತ್ತಾನೆ:—

(47) **ಸಶಾಂತಿಮಾಪ್ನೋತಿ ನ ಕಾಮಕಾಮೀ ।**—(2. 70.)

ವಿಷಯಾಭಿಲಾಷೆಯಿಂದ ರಹಿತನಾದವನು ಶಾಂತಿಯನ್ನು ಎಂದರೆ ಮೋಕ್ಷವನ್ನು ಹೊಂದುತ್ತಾನೆ. ಭೋಗಾಪೇಕ್ಷೆಯುಳ್ಳವನು ಮುಕ್ತನಾಗ ಲಾರನು.

(48) **ನಿರ್ಮಮೋ ನಿರಹಂಕಾರಃ ಸಶಾಂತಿಮಧಿಗಚ್ಛತಿ ।**—(2. 71.)

ಮಮತಾಹಂಕಾರಗಳಿಂದ ರಹಿತನಾದ ಜ್ಞಾನಿಯು ಶಾಂತಿಯನ್ನು ಎಂದರೆ ಮೋಕ್ಷವನ್ನು ಹೊಂದುತ್ತಾನೆ.

(49) **ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।**
ನಚಸನ್ಯಸನಾದೇವ ಸಿದ್ಧಿಂಸಮಧಿಗಚ್ಛತಿ ॥—(3. 4.)

ಕರ್ಮಾಕರಣದಿಂದ **ನೈಷ್ಕರ್ಮ್ಯವೆಂಬ** ಹೆಸರುಳ್ಳ ಮುಕ್ತಿಯನ್ನು ಜೀವನು ಹೊಂದುವುದಿಲ್ಲ. ಕೇವಲ ಸನ್ಯಾಸದಿಂದಲೂ **ಸಿದ್ಧಿ**ಯನ್ನು (ಮೋಕ್ಷವನ್ನು) ಹೊಂದುವುದಿಲ್ಲ.

(50) **ಪರಸ್ಪರಂಭಾವಯಂತಃ ಶ್ರೇಯಃಪರಮವಾಪ್ಸ್ಯಥ।**
—(3. 11.)

ದೇವತೆಗಳೂ ನೀವೂ (ಮನುಷ್ಯರೂ) ಅನ್ಯೋನ್ಯಪ್ರೀತಿಮಾಡುವವರಾಗಿ ಪರಮಶ್ರೇಯಸ್ಸನ್ನು (ಮೋಕ್ಷವನ್ನು) ಹೊಂದುತ್ತೀರಿ.

(51) ....**ಏವಂಜ್ಞಾತ್ವಾ ವಿಮೋಕ್ಷ್ಯಸೇ।**—(4. 32.)

ಪೂರ್ವೋಕ್ತ ಬ್ರಹ್ಮೋಪಾಸನೆಯೇ ಮೊದಲಾದ ಸರ್ವಯಜ್ಞಗಳೂ ಕರ್ಮರೂಪವೆಂದು ತಿಳಿದು ಸ್ವವಿಹಿತಕರ್ಮವನ್ನು ಅನುಷ್ಠಾನಮಾಡುವ ನೀನು ಜ್ಞಾನಿಯಾಗಿ ಮುಕ್ತನಾಗುತ್ತೀಯೆ.

(52) **ಜ್ಞಾನಂ ಲಬ್ಧ್ವಾ ಪರಾಂ ಶಾಂತಿ ಮಚಿರೇಣಾಧಿಗಚ್ಛತಿ।**
—(4. 39.)

ಜ್ಞಾನವನ್ನು ಸಂಪಾದಿಸಿದನಂತರ ಶೀಘ್ರದಲ್ಲಿಯೇ ಶಾಂತಿಯನ್ನು (ಅತ್ಯುತ್ತಮಮೋಕ್ಷಸುಖವನ್ನು) ಹೊಂದುತ್ತಾನೆ.

(53) **ಸುಹೃದಂ ಸರ್ವಭೂತಾನಾಂ ಜ್ಞಾತ್ವಾಮಾಂಶಾಂತಿಮೃಚ್ಛತಿ।**
—(5. 29.)

ನನ್ನ ಭಕ್ತನು ಸರ್ವಪ್ರಾಣಿಗಳಿಗೂ ಅನಿಮಿತ್ತಬಂಧುವಾದ ನನ್ನನ್ನು ತಿಳಿದು ಶಾಂತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ.

(54) ....**ಯೋಗೀನಿಯತಮಾನಸಃ।**
ಶಾಂತಿಂನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ।
—(6. 15.)

ಜಿತಮನಸ್ಸುಳ್ಳಯೋಗಿಯು ದೇಹತ್ಯಾಗಾನಂತರದಲ್ಲಿ ಪ್ರಾಪ್ತವಾಗುವ **ನನ್ನಲ್ಲಿ ಸ್ಥಿತಿರೂಪವಾದ** ಶಾಂತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ.

(55) **ಅನೇಕ ಜನ್ಮಸಂಸಿದ್ಧಸ್ತತೋ ಯಾತಿಪರಾಂಗತಿಂ।**—(6. 45.)

ಯೋಗಿಯು ಬಹುಜನ್ಮಗಳ ಪ್ರಯತ್ನದಿಂದ ಜ್ಞಾನಸಂಪನ್ನನಾಗಿ ನಂತರ ಪರಮಗತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ.

(56) ....**ಸಯಾತಿಪರಮಾಂಗತಿಂ।**—(8. 13.)

ಪ್ರಣವವನ್ನು ಜಪಿಸುತ್ತಾ ಪರಬ್ರಹ್ಮನನ್ನು ಧ್ಯಾನಮಾಡಿ ದೇಹ ಬಿಡುವ ಯೋಗಿಯು ಪರಮಗತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ.

(57) **ನಿವಸಿಷ್ಯಸಿಮಯ್ಯೇವ ಅತಊರ್ಧ್ವಂನ ಸಂಶಯಃ ।**

—(12. 8.)

ನನ್ನ ಜ್ಞಾನವಾದ ಮೇಲೆ ನನ್ನಲ್ಲಿ ಸ್ಥಿತಿಯನ್ನು (ನಿರ್ದುಃಖಾನಂದಾನು ಭವಾತ್ಮಕವಾದ ಮೋಕ್ಷವನ್ನು) ಹೊಂದುತ್ತೀಯೆ.

(58) **ಮದರ್ಥಮಪಿಕರ್ಮಾಣಿ ಕುರ್ವನ್ಸಿದ್ಧಿಮವಾಪ್ಸ್ಯಸಿ ।**

—(12. 10)

ನನ್ನ ಪ್ರೀತ್ಯರ್ಥವಾಗಿ ಕರ್ಮಗಳನ್ನು ಮಾಡುವವನಾಗಿ ನೀನು (ಜ್ಞಾನ ವನ್ನು ಹೊಂದಿ) ಸಿದ್ಧಿಯನ್ನು (ಮೋಕ್ಷವನ್ನು) ಹೊಂದುತ್ತೀಯೆ.

(59) ....**ತ್ಯಾಗಾಚ್ಛಾಂತಿರನಂತರಂ ।**—(12. 12.)

ಕರ್ಮಫಲತ್ಯಾಗಪೂರ್ವಕವಾಗಿ ಭಗವಧ್ಯಾನಮಾಡುವ ಜ್ಞಾನಿಯು ಅನಂ ತರದಲ್ಲಿ ಶಾಂತಿಯನ್ನು (ಮೋಕ್ಷವನ್ನು) ಹೊಂದುವನು.

(60) ....**ಯದ್ಜ್ಞಾತ್ವಾಮೃತಮಶ್ನುತೇ ।**—(13. 13.)

ಪರಬ್ರಹ್ಮನನ್ನು ತಿಳಿದ ಮೇಲೆ ಅಧಿಕಾರಿಯು ಮೋಕ್ಷವನ್ನು ಹೊಂದು ತ್ತಾನೆ.

(61) ....**ತತೋಯಾತಿಪರಾಂಗತಿಂ ।**—(13. 29.)

ಸರ್ವತ್ರಸಮನಾದ ಭಗವಂತನನ್ನು ತಿಳಿಯುವವನು ನರಕಾದ್ಯನರ್ಥಗಳಿಗೆ ಗುರಿಯಾಗದೆ ಕೊನೆಯಲ್ಲಿ ಪರಮಗತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ.

(62) **ಯದ್ಜ್ಞಾತ್ವಾಮುನಯಃ ಸರ್ವೇಪರಾಂಸಿದ್ಧಿಮಿತೋಗತಾಃ ।**

—(14. 1.)

ಈ ತತ್ವವನ್ನು ತಿಳಿದು ಸರ್ವ ಮನನಶೀಲರೂ ಸಂಸಾರಬಂಧದಿಂದ ಬಿಡಲ್ಪಟ್ಟು ಪರಮಸಿದ್ಧಿಯನ್ನು (ಮೋಕ್ಷವನ್ನು) ಹೊಂದಿದರು.

(63) **ಏತದ್ಬುಧ್ವಾಬುದ್ಧಿಮಾನ್ಸ್ಯಾತ್ ಕೃತಕೃತ್ಯಶ್ಚಭಾರತ ।**

—(15. 20.)

ಪರಮಾತ್ಮನ ಪುರುಷೋತ್ತಮತ್ವವನ್ನು ತಿಳಿದವನು ಅಪರೋಕ್ಷಜ್ಞಾನ ವನ್ನು ಹೊಂದಿ ನಂತರ ಕೃತಕೃತ್ಯನಾಗುತ್ತಾನೆ. (ಮುಕ್ತನಾಗುತ್ತಾನೆ.)

(64) ....**ತತೋಯಾತಿಪರಾಂಗತಿಂ ।**—(16. 22.)

ಕಾಮಕ್ರೋಧಲೋಭಗಳಿಂದ ರಹಿತನಾದವನು ತನಗೆ ಬೇಕಾದ ಪುರುಷಾರ್ಥಸಾಧನೆಯನ್ನು ಮಾಡಿಕೊಂಡು ನಂತರ ಉತ್ತಮಗತಿಯನ್ನು ಹೊಂದುತ್ತಾನೆ. (ಮುಕ್ತನಾಗುತ್ತಾನೆ.)

ಈ ರೀತಿಯಾಗಿ ಪರಮಗತಿ, ಪರಮಪದ, ಪರಮಸಂಸಿದ್ಧಿ, ಶಾಂತಿ, ನೈಷ್ಕರ್ಮ್ಯ, ಪರಮಶ್ರೇಯಸ್ಸು ಇತ್ಯಾದಿ ನಾನಾನಾಮಗಳು ಸಕಲ ಕರ್ಮಕ್ಷಯ, ಬಂಧನಿವೃತ್ತಿ, ಬ್ರಹ್ಮಪ್ರಾಪ್ತಿ, ಶಾಶ್ವತಲೋಕವಾಸ, ಪುನರ್ಜನ್ಮಾಭಾವ, ನಿತ್ಯಸುಖಾನುಭವವೇ ಮುಂತಾದ ಅನೇಕ ಧರ್ಮಗಳು ಚತುರ್ವಿಧದಲ್ಲಿ ಯಾವ ವಿಧವಾದ ಮುಕ್ತಿಯನ್ನು ಹೊಂದಿದವರಿಗೂ ತಪ್ಪದೇ ಇರುವವು. ಆದರೂ ಮೂರು ನಾಲ್ಕು ಸ್ಥಳಗಳಲ್ಲಿ ಪರಮಾತ್ಮನಲ್ಲಿ ಪ್ರವೇಶರೂಪವಾದ **ಸಾಯುಜ್ಯ** ಮುಕ್ತಿಯೂ ಇರುವವೆಂದು ಶ್ರೀ ಕೃಷ್ಣನು ಸೂಚಿಸಿರುತ್ತಾನೆ:—

(1) **ವಿಶಂತಿ ಯದ್ಯತಯೋ ವೀತರಾಗಾಃ ।**—(8. 11.)

ರಾಗಾದಿದೋಷರಹಿತರಾದ ಜ್ಞಾನಿಗಳು ಯಾವನನ್ನು ಪ್ರವೇಶಿಸುತ್ತಾರೆಯೋ (ಅಂಥಾ ಪರಮಾತ್ಮ ಸ್ವರೂಪವನ್ನು ಹೇಳುತ್ತೇನೆ.)

(2) **ಭಕ್ತ್ಯಾತ್ವನನ್ಯಯಾಶಕ್ಯ ಅಹಮೇವಂ ವಿಧೋಽರ್ಜುನ ।**
ಜ್ಞಾತುಂದ್ರಷ್ಟುಂ ಚತತ್ವೇನ ಪ್ರವೇಷ್ಟುಂಚಪರಂತಪ ॥

—(11. 54.)

ಎಲೈ ಪರಂತಪನೇ! ಅನನ್ಯಭಕ್ತಿಯಿಂದ ನನ್ನನ್ನು ತಿಳಿಯುವುದಕ್ಕೂ, ಪ್ರತ್ಯಕ್ಷವಾಗಿ ನೋಡುವುದಕ್ಕೂ, ನಂತರ ಮುಕ್ತಿಯಲ್ಲಿ ಪ್ರವೇಶಿಸುವುದಕ್ಕೂ ನಿನಗೆ ಸಾಧ್ಯವಾಗುವುದು.

(3) **ತತೋಮಾಂತತ್ವತೋ ಜ್ಞಾತ್ವಾವಿಶತೇತದನಂತರಂ ।**

—(18. 55.)

ಅಧಿಕಾರಿಯು ಭಕ್ತಿಯಿಂದ ನನ್ನನ್ನು ಯಥಾರ್ಥವಾಗಿ ತಿಳಿದನಂತರ, ಮುಕ್ತಿಯಲ್ಲಿ ನನ್ನನ್ನು ಪ್ರವೇಶಿಸುತ್ತಾನೆ.

ಮದ್ಭಾವಮಾಗತಾಃ—(4. 19.)
ಮದ್ಭಾವಾಯೋಪಪದ್ಯತೇ—(14. 19.)
ಮದ್ಭಾವಂ ಸೋಧಿಗಚ್ಛತಿ—(14. 19.)

ಇತ್ಯಾದಿ ಸ್ಥಳಗಳಲ್ಲಿ ನನ್ನಭಾವ ವನ್ನು ಎಂದರೆ ನನ್ನ ರೂಪದಂತೆ ರೂಪವನ್ನೂ ಭಕ್ತನು ಹೊಂದುತ್ತಾನೆ ಎಂದು **ಸಾರೂಪ್ಯ**ಮುಕ್ತಿಯನ್ನು ಶ್ರೀ

ಕೃಷ್ಣನು ವರ್ಣಿಸಿರುತ್ತಾನೆ. ಆದರೆ ಈ ಶ್ಲೋಕಗಳಲ್ಲಿ ಮುಖ್ಯಭಾವಂ ಮುದ್ಧ್ಯಾನಂ ಎಂದು ವಿಗ್ರಹ ಮಾಡಿದರೆ ನನ್ನಲ್ಲಿ ಸ್ಥಿತಿಯನ್ನು ಹೊಂದುತ್ತಾನೆ ಎಂದೂ ಅರ್ಥವಾಗಬಹುದಾದುದರಿಂದ ಈ ವಾಕ್ಯಗಳು ನಿರಪಕಾಶವಾಗಿ ಸಾರೂಪ್ಯಮುಕ್ತಿಯನ್ನೇ ವರ್ಣಿಸುವುವೆಂದು ಹೇಳಲಾಗುವುದಿಲ್ಲ. ಹದಿನಾಲ್ಕನೆಯ ಅಧ್ಯಾಯದ ದ್ವಿತೀಯ ಶ್ಲೋಕವು ಬಹಳ ಸ್ಪಷ್ಟವಾಗಿರುತ್ತದೆ. ಶ್ರೀಕೃಷ್ಣನು ಹೇಳುತ್ತಾನೆ :—

(4) ಇದಂ ಜ್ಞಾನಮುಪಾಶ್ರಿತ್ಯಮಮಸಾಧರ್ಮ್ಯಮಾಗತಾಃ ।
ಸರ್ಗೇಽಪಿನೋಪಜಾಯಂತೇ ಪ್ರಳಯೇನವ್ಯಥಂತಿಚ ॥

—(14. 2.)

ನನ್ನಿಂದ (ಶ್ರೀ ಕೃಷ್ಣನಿಂದ) ಉಪದಿಷ್ಟವಾದ ತತ್ವವನ್ನು ತಿಳಿದವರು ನನ್ನ ಸಮಾನ ಧರ್ಮವನ್ನು* ಹೊಂದಿದವರಾಗಿ, (ಚತುರ್ಬಾಹುಗಳನ್ನು ಧರಿಸಿ ಪೀತಾಂಬರವನಮಾಲಾದಿಗಳನ್ನು ಧಾರಣಮಾಡಿ ವಿಷ್ಣುರೂಪಕ್ಕೆ ಸದೃಶವಾದ

---

* ಸೃಷ್ಟಿಗೆ ಪೂರ್ವದಲ್ಲಿ ಪದ್ಮನಾಭದೇವರ ನಾಭಿಕಮಲದಿಂದ ಉತ್ಪನ್ನರಾದ ಚತುರ್ಮುಖಬ್ರಹ್ಮದೇವರು "ತಪ, ತಪ" ಎಂಬ ಪರಮಾತ್ಮನ ಆದೇಶಾನುಸಾರವಾಗಿ ಪ್ರಳಯೋದಕದ ಮಧ್ಯದಲ್ಲಿದ್ದ ಕಮಲದಲ್ಲಿಯೇ ಕುಳಿತು ದಿವ್ಯಸಹಸ್ರವರ್ಷಗಳಪರ್ಯಂತ ಉಗ್ರವಾದ ತಪಶ್ಚರ್ಯೆಯನ್ನು ಮಾಡಿದರು. ಬ್ರಹ್ಮದೇವರ ಭಕ್ತಿಪೂರ್ವಕವಾದ ತಪಸ್ಸಿನಿಂದ ಸುಪ್ರೀತನಾದ ವಿಷ್ಣುವು ತನ್ನ ಪರಿವಾರಭೂತರಾದ ಮುಕ್ತದೇವತೆಗಳಿಂದ ಸಹಿತನಾಗಿ, ಲಕ್ಷ್ಮಿಯಿಂದ ಒಡಗೂಡಿ, ತನ್ನ ನಿಜವೈಭವವನ್ನು ಬ್ರಹ್ಮದೇವರಿಗೆ ದರ್ಶನಮಾಡಿಸಿದನು. ಪರಮಾತ್ಮನ ಜೊತೆಯಲ್ಲಿ ಬಂದಿದ್ದ ಮುಕ್ತರೆಲ್ಲರೂ ಉತ್ತಮಯೋಗ್ಯತೆಯನ್ನು ಹೊಂದಿದವರಾದುದರಿಂದ ಆ ಪರಮಾತ್ಮನ ಸಾರೂಪ್ಯವನ್ನು ಹೊಂದಿದವರು. ಭಾಗವತ ದ್ವಿತೀಯಸ್ಕಂಧದ ಒಂಭತ್ತನೆಯ ಅಧ್ಯಾಯದಲ್ಲಿ ಇದು ವರ್ಣಿತವಾಗಿರುವುದು. "**ನಯತ್ರಮಾಯಾ**" ಎಂದರೆ ಮಾಯಾರಹಿತವಾದ ತನ್ನ ಲೋಕವನ್ನು ಶ್ರೀವಿಷ್ಣುವು ಬ್ರಹ್ಮದೇವರಿಗೆ ತೋರಿಸಿದನು ಎಂದು ಹೇಳಿರುತ್ತದೆ.

"ತಸ್ಮೈ ಸ್ವಲೋಕಂ ಭಗವಾನ್ ಸಭಾಜಿತಃ ಸಂದರ್ಶಯಾಮಾಸ ಪರಂನಯತ್ಪದಂ । ವ್ಯಪೇತಸಂಕ್ಲೇಶ ವಿಮೋಹಸಾಧ್ವಸಂ ಸಂದೃಷ್ಟವದ್ಭಿರ್ವಿಬುಧೈರಭಿಷ್ಟುತಂ ॥9॥ ....ನಯತ್ರಮಾಯಾಕಿಮುತಾಪರೇಹರೇರನುವ್ರತಾಯತ್ರ ಸುರಾಸುರಾರ್ಚಿತಾಃ ॥10॥ ಶ್ಯಾಮಾವದಾತಾಃ ಶತಪತ್ರಲೋಚನಾಃ ಪಿಶಂಗ ವಸ್ತ್ರಾಃ ಸುರುಚಃಸುಪೇಶಸಃ । ಸರ್ವೇಽಚತುರ್ಬಾಹವ ಉನ್ಮಿಷನ್ಮಣಿಪ್ರವೇಕ ನಿಷ್ಕಾಭರಣಾಃ ಸುವರ್ಚಸಃ ॥11—14॥
ಇತ್ಯಾದಿ ಶ್ಲೋಕಗಳು ಈ ವಿಷಯದಲ್ಲಿ ಪ್ರಮಾಣವಾಗಿರುತ್ತವೆ.

ರೂಪ ಉಳ್ಳವರಾಗಿ), ಸೃಷ್ಟಿಕಾಲದಲ್ಲಿ ಪುನಃ ಉತ್ಪನ್ನರಾಗುವುದಿಲ್ಲ; ಪ್ರಳಯದಲ್ಲಿ ಮರಣವನ್ನು ಹೊಂದುವುದಿಲ್ಲ.

ಸಾಮೀಪ್ಯಮುಕ್ತಿಯನ್ನು ಪ್ರತ್ಯೇಕವಾಗಿ ನಿರ್ದೇಶಮಾಡಿ ಹೇಳುವ ಸ್ಪಷ್ಟವಾದ ವಾಕ್ಯಗಳಿರುವುದಿಲ್ಲ. ಆದರೂ,

(5) **ಶಾಂತಿಂ ನಿರ್ವಾಣ ಪರಮಾಂ ಮತ್ಸಂಸ್ಥಾಮಧಿಗಚ್ಛತಿ ।**

—(6. 15.)

(6) **ನಿವಸಿಷ್ಯಸಿಮಯ್ಯೇವ ಅತಊರ್ಧ್ವಂ ನಸಂಶಯಃ ॥**—(12. 8.)

ಇತ್ಯಾದಿ ಕೆಲವು ವಾಕ್ಯಗಳಲ್ಲಿ "ಸಮೀಪದಲ್ಲಿ" ಎಂದು ಅರ್ಥವನ್ನು ಕೊಡುವ ಸಪ್ತಮೀವಿಭಕ್ತಿಪ್ರತ್ಯಯಾದಿಗಳನ್ನು ಉಪಯೋಗಿಸಿರುತ್ತಾನೆ. ಪ್ರಕೃತಿಬಂಧನಿವೃತ್ತಿಯಾದನಂತರ ಜ್ಞಾನಿಯು ನನ್ನಲ್ಲಿ ಸ್ಥಿತಿಯನ್ನು ಎಂದರೆ ನನ್ನ ಲೋಕದಲ್ಲಿ ನನ್ನ ಸಮೀಪದಲ್ಲಿ ಸ್ಥಿತಿಯನ್ನು ಹೊಂದುತ್ತಾನೆ; ಎಂದು ತಾತ್ಪರ್ಯವು.

ಸಾಲೋಕ್ಯಮುಕ್ತರು ವಾಸಮಾಡುವ ಸ್ಥಾನವಿಶೇಷವು ಇರುವುದೆಂದು ಸೂಚಿಸುವ ಕೆಲವು ವಾಕ್ಯಗಳನ್ನು ಶ್ರೀಕೃಷ್ಣನು ನಿರೂಪಿಸಿರುತ್ತಾನೆ.

(7) ....**ಮನೀಷಿಣಃ**.......**ಪದಂಗಚ್ಛಂತ್ಯನಾಮಯಂ ।**—(2. 51.)

ಜ್ಞಾನಿಗಳು ನಿರ್ದುಃಖವಾದ ಸ್ಥಾನವನ್ನು ಹೊಂದುತ್ತಾರೆ.

(8) ....**ಯೋಗೀಪರಂ ಸ್ಥಾನಮುಪೈತಿಚಾದ್ಯಂ ।**—(8. 28.)

ಜ್ಞಾನಿಯು ಸನಾತನವಾದ ಅತ್ಯುತ್ತಮ ಲೋಕವನ್ನು ಹೊಂದುತ್ತಾನೆ.

(9) **ದ್ವಂದ್ವೈರ್ವಿಮುಕ್ತಾ ಸ್ಸುಖದುಃಖಸಂಜ್ಞೈ ರ್ಗಚ್ಛಂತ್ಯಮೂಢಾಃ ಪದಮವ್ಯಯಂತತ್ ।**—(15. 5.)

ದ್ವಂದ್ವಾತೀತರಾದ ಜ್ಞಾನಿಗಳು ಅನಿತ್ಯವಾದ ಸ್ಥಾನವನ್ನು ಹೊಂದುತ್ತಾರೆ.

(10) **ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ ।**

—(18. 56.)

ನನ್ನ ಪ್ರಸಾದದಿಂದ ಜ್ಞಾನಿಯು ಶಾಶ್ವತವಾದ ನಿತ್ಯಸ್ಥಾನವನ್ನು ಹೊಂದುತ್ತಾನೆ.

(11) **ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿಶಾಶ್ವತಂ ।**

—(18. 62.)

ಈಶ್ವರನ (ಶ್ರೀಕೃಷ್ಣನ) ಪ್ರಸಾದದಿಂದ ಜ್ಞಾನಿಗೆ ಅತ್ಯುತ್ಕೃಷ್ಟವು ವುಳ್ಳ ಶಾಶ್ವತಸ್ಥಾನವು ಪ್ರಾಪ್ತವಾಗುವುದು.

ಈ ಸ್ಥಾನವು ಕರ್ಮಿಗಳಿಗೆ ಪ್ರಾಪ್ತವಾಗತಕ್ಕ ಲೋಕಗಳಿಗಿಂತ ಭಿನ್ನವಾಗಿರುವುದೆಂದು ಇದೇ ಅಧ್ಯಾಯದ ಶ್ರೀ ಕೃಷ್ಣನ ವಾಕ್ಯದಿಂದ ಸಿದ್ಧಿತವಾಗುವುದು.

(12) **ಶ್ರದ್ಧಾವಾನ ನಸೂಯಶ್ಚ ಶೃಣುಯಾದಪಿಯೋನರಃ ।**
ಸೋಽಪಿ ಮುಕ್ತಃಶುಭಾ್ಁ ಲೋಕಾ್ಁ ಪ್ರಾಪ್ನುಯಾತ್ಪುಣ್ಯ
ಕರ್ಮಣಾಂ ॥—(18. 71.)

ಶ್ರದ್ಧೆಯಿಂದ, ಅಸೂಯಾರಹಿತನಾಗಿ, ಗುರುಮುಖದಿಂದ ಭಗವದ್ಗೀತೆಯನ್ನು ಶ್ರವಣಮಾಡುವವನೂ ಕೂಡ ಪುಣ್ಯಕರ್ಮಗಳನ್ನು ಆಚರಿಸುವವರು ಹೊಂದತಕ್ಕ ಸುಖಪ್ರದವಾದ ಲೋಕಗಳನ್ನು ಹೊಂದುತ್ತಾನೆ.

ಈ ವಾಕ್ಯದಿಂದ ಜ್ಞಾನಿ ಪ್ರಾಪ್ಯವಾದ ಪರಮಪದವು ಇತರ ಲೋಕಗಳಿಗಿಂತ ಭಿನ್ನವಾದ ಅನ್ಯಾಯವಾದ ಅತ್ಯುತ್ತಮಸ್ಥಾನವೆಂದು ಸಿದ್ಧವಾಗುವುದು.

ಪ್ರಶ್ನೆ—ಸ್ವಾಮಿ! ತಾವು ಉದಾಹರಿಸಿರುವ ಈ ವಾಕ್ಯಗಳಲ್ಲಿ ಸಾಯುಜ್ಯಾದಿ ನಾಮಗ್ರಹಣಮಾಡಿ ಅವುಗಳ ಲಕ್ಷಣವನ್ನು ಶ್ರೀಕೃಷ್ಣನು ಎಲ್ಲಿಯೂ ನಿರೂಪಿಸಿರುವುದಿಲ್ಲ. ಇದೆಲ್ಲಾ ಬಹುಕಲ್ಪನೆಯ ಕೆಲಸದಂತೆ ತೋರುವುದಿಲ್ಲವೇ ?

ಉತ್ತರ—ಸಾಯುಜ್ಯಾದಿ ಮುಕ್ತಿಸ್ವರೂಪವನ್ನು ಅವುಗಳ ನಾಮನಿರ್ದೇಶಪೂರ್ವಕವಾಗಿ ಶ್ರೀ ಕೃಷ್ಣನು ವರ್ಣಿಸಿರುವುದಿಲ್ಲ. ನಾಮೋದ್ದೇಶಪೂರ್ವಕವಾದ ಲಕ್ಷಣೋಕ್ತಿಯು ಅಥವಾ ಸ್ಪಷ್ಟವಾದ ವಾಕ್ಯಗಳು ಇರುವುದಿಲ್ಲವೆಂಬುದು ಸತ್ಯವು. ಹದಿನೆಂಟು ಅಧ್ಯಾಯದ ಸಣ್ಣ ಗ್ರಂಥದಲ್ಲಿ ಒಂದೊಂದು ತತ್ವವನ್ನೂ ಪ್ರತ್ಯೇಕಪ್ರತ್ಯೇಕವಾಗಿ ಅದರ ಹೆಸರಿನಿಂದ ಗ್ರಹಣಮಾಡಿ ಲಕ್ಷಣಗಳನ್ನು ಹೇಳುವುದು ಅಶಕ್ಯವು. ಆದುದರಿಂದ ವೇದಾದಿ ಪ್ರಮಾಣಾಂತರಗಳಲ್ಲಿ ನಿರವಕಾಶವಾಗಿ ಸ್ಪಷ್ಟವಾಗಿ ಪ್ರತಿಪಾದಿತವಾದ ಪ್ರಮೇಯವನ್ನು ಶ್ರೀಕೃಷ್ಣನು ಇಲ್ಲಿ ಸೂಚಿಸಿರುತ್ತಾನೆ. ಬಂಧನಿವೃತ್ತಿಪೂರ್ವಕವಾದ ಯೋಗ್ಯತಾನುಗುಣವಾದ ನಿರಂತರ ಸುಖಾನುಭವವು ಮುಕ್ತಿಯು. ಅದ್ವೈತಮತದಲ್ಲಿ ಹೇಳಿರುವಂತೆ ಜೀವಭಾವನಾಶರೂಪವಾದ ಬ್ರಹ್ಮೈಕ್ಯವಲ್ಲ. ಇಷ್ಟು ಪ್ರಮೇಯವು ನಿರ್ವಿವಾದವಾಗಿ ಭಗವದ್ಗೀತಾವಾಕ್ಯಗಳಿಂದ ಸಿದ್ಧವಾಗುವುದು.

6

ಅದ್ವೈತಾದಿ ಸಕಲ ವಾದಗಳಿಗೆ ಪರಮವಿರುದ್ಧವಾದ ಕೇವಲ ದ್ವೈತ ತತ್ವೋಪಪಾದಕವಾದ ಮುಕ್ತಿಯನ್ನೇ ಶ್ರೀ ಕೃಷ್ಣನು ಪ್ರತಿಪಾದಿಸಿರುತ್ತಾ ನೆಂದು ನಾವು ಪ್ರತಿಜ್ಞಾಪೂರ್ವಕವಾಗಿ ಹೇಳಬಲ್ಲೆವು.

1 ಸತತೋರ್ಧ್ವಗಮನವು ಮುಕ್ತಿಯೆಂದು ಜೈನವಾದಿಗಳು ಹೇಳು ತ್ತಾರೆ. ಅನೇಕ ಗೀತಾವಾಕ್ಯಗಳಿಂದ ಈ ಮತವು ಶ್ರೀ ಕೃಷ್ಣನಿಗೆ ಸಮ್ಮತವಲ್ಲ ವೆಂದು ನಿಶ್ಚಯಿಸಬಹುದು.

ಪ್ರಶ್ನೆ—ಸ್ವಾಮಿ! "ಊರ್ಧ್ವಂಗಚ್ಛಂತಿಸತ್ವಸ್ಥಾಃ" ಎಂದರೆ ಸಾತ್ವಿಕ ಗುಣಸಂಪನ್ನರಾದವರು ಮೇಲಕ್ಕೆ ಹೋಗುತ್ತಾರೆ ಎಂದು ಶ್ರೀ ಕೃಷ್ಣನೇ ಹೇಳಿ ರುವುದಿಲ್ಲವೇ?

ಉತ್ತರ—ಈ ಶ್ಲೋಕಕ್ಕೆ ಊರ್ಧ್ವಲೋಕಗಳನ್ನು ಹೊಂದುತ್ತಾನೆ ಎಂದರ್ಥವು. ಸಾತ್ವಿಕಗುಣಸಂಪನ್ನನಾದವನು ಜ್ಞಾನಿಯಾಗಿದ್ದರೆ **"ಅಗ್ನಿ ಜ್ಯೋತಿರಹಃ ಶುಕ್ಲಃಷಣ್ಮಾಸಾಉತ್ತರಾಯಣಂ"** ಎಂಬ ಶ್ಲೋಕೋ ಕ್ತ ಊರ್ಧ್ವಲೋಕಗಳನ್ನು ಹೊಂದಿ, "ತತ್ರಪ್ರಯಾತಾಗಚ್ಛಂತಿಬ್ರಹ್ಮ" ಎಂದು ಹೇಳಿರುವಂತೆ, ಪರಬ್ರಹ್ಮನನ್ನು ಸೇರುತ್ತಾರೆ ಎಂದು ಅರ್ಥವು. ಅಥವಾ ಸಾತ್ವಿಕಗುಣಸಂಪನ್ನನು ಕರ್ಮಿಯಾಗಿದ್ದರೆ, "ಧೂಮೋರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾದಕ್ಷಿಣಾಯನಂ|" ಎಂಬ ಶ್ಲೋಕೋಕ್ತ **ಊರ್ಧ್ವ** ಲೋಕಗಳನ್ನು ಹೊಂದಿ "ತತ್ರಚಾಂದ್ರಮಸಂ ಜ್ಯೋತಿಃ" ಎಂದು ಹೇಳಿರುವ ಚಂದ್ರಾದಿಗಳು ವಾಸಮಾಡುವ ಸ್ವರ್ಗಲೋಕವನ್ನು ಹೊಂದುತ್ತಾನೆ ಎಂದು ಅರ್ಥವು. ಊರ್ಧ್ವಂಗಚ್ಛಂತಿ ಸತ್ವಸ್ಥಾಃ ಎಂಬ ಶ್ಲೋಕದಲ್ಲಿ ಸಾತ್ವಿಕರು ಊರ್ಧ್ವದಲ್ಲಿ ರುವ ಲೋಕಗಳನ್ನು ಹೊಂದುತ್ತಾರೆ ಎಂದು ಅರ್ಥವಾಗುವುದೇ ಹೊರತು, ಸಂತತ ಆಕಾಶದಲ್ಲಿ ಮೇಲಕ್ಕೆ ಹೋಗುತ್ತಲೇ ಇರುವರು ಎಂಬ ಅರ್ಥವು ಆಗುವುದಿಲ್ಲ. ಭುವರ್ಲೋಕ, ಸುವರ್ಲೋಕ, ಮಹೋಲೋಕ, ಜನೋಲೋಕ, ತಪೋಲೋಕ, ಸತ್ಯಲೋಕವೂ ಮತ್ತು ವೈಕುಂಠಾದಿ ಮುಕ್ತಸ್ಥಾನಗಳೂ ಭೂಲೋಕಾಪೇಕ್ಷಯಾಮೇಲೆ ಇರುವುವೆಂದು ಶ್ರುತಿ, ಸ್ಮೃತಿ, ಇತಿಹಾಸ, ಪುರಾ ಣಗಳಲ್ಲಿ ಪ್ರಸಿದ್ಧವಾಗಿರುವುದು. ಇವೆಲ್ಲಾ ಭೋಗ್ಯದ್ರವ್ಯಗಳಿಂದ ಸಹಿತವಾದ ಸ್ಥಾನಗಳು. ಆದುದರಿಂದ ಇಲ್ಲಿ ಸುಖವು ಜೀವನಿಗೆ ಆಗುವುದೆಂದು ಹೇಳಬಹುದು. ಸ್ವರೂಪೇಂದ್ರಿಯಗಳಿಂದ ಭೋಗ್ಯದ್ರವ್ಯಭೋಗದಿಂದ ರಹಿತವಾದ ಸಂತತ

ಊರ್ಧ್ವಗಮನವು ಸುಖರೂಪವಾಗಿರುವುದೆಂಬಲ್ಲಿ ಪ್ರಮಾಣವೇನು? ಅಷ್ಟೇ ಅಲ್ಲ! ಯುಕ್ತಿವಿಚಾರಮಾಡಿದರೆ ಸುಮ್ಮನೆ ಮೇಲೆ ಮೇಲೆ ಹಾರುತ್ತಿರುವ ಪಕ್ಷಿಯು ಆಯಾಸದಿಂದ ಧೊಪ್ಪನೆ ನೆಲದಮೇಲೆ ಬೀಳುವಂತೆ ಸತತೋರ್ಧ್ವಗಮನಶೀಲಿಯಾದ ಜೈನಮುಕ್ತನು ಉಸಿರು ಕಟ್ಟಿ ದಮ್ಮು ಹಿಡಿದು ಪತನವನ್ನು ಹೊಂದಿದರೂ ಹೊಂದಬಹುದು; ಅಥವಾ ತನಗೆ ಹಿತಕರವಾದ ಸರ್ವಪ್ರಿಯ ವಸ್ತುಗಳನ್ನೂ, ಪ್ರಿಯರಾದ ಬಾಂಧವರನ್ನೂ, ಜ್ಞಾನಿಸಂಗವನ್ನೂ ಪರಿತ್ಯಜಿಸಿ ಸಂತತ ಊರ್ಧ್ವಮುಖವಾಗಿ ಒಯ್ಯಲ್ಪಡುವ ಈ ಜೈನಮುಕ್ತನು ಗುರುತರವಾದ ದುಃಖವನ್ನು ಸಹ ಅನುಭವಿಸುವನೆಂದು ಹೇಳಬಹುದು.* ಪರಂತು ಇವೆಲ್ಲಾ ಆಗಮಗಳಿಂದ ಸಿದ್ಧವಾಗತಕ್ಕ ಪ್ರಮೇಯಗಳು. ಪ್ರಮಾಣತಮವಾದ ಗೀತಾ ಗ್ರಂಥದಲ್ಲಿ ಶ್ರೀಕೃಷ್ಣನು ಸ್ಪಷ್ಟವಾಗಿ ನಿತ್ಯವಾದ ಸ್ಥಾನದ ಪ್ರಾಪ್ತಿಯೇ ಮುಕ್ತನಿಗೆ ಲಭಿಸುವುದೆಂದು ಹೇಳಿರುತ್ತಾನೆ :—

(1) **ಮತ್ಪ್ರಸಾದಾದವಾಪ್ನೋತಿಶಾಶ್ವತಂಪದಮವ್ಯಯಂ ।**

—(18. 56.)

ನನ್ನ ಪ್ರಸಾದದಿಂದ ಭಕ್ತನು ಶಾಶ್ವತವಾದ ನಾಶರಹಿತವಾದ ಲೋಕವನ್ನು ಹೊಂದುತ್ತಾನೆ.

2 ಶೂನ್ಯವಾದಿಗಳಾದ ಬೌದ್ಧರು **ನಿರ್ವಾಣವೇ** ಪರಮಮುಕ್ತಿಯೆಂದು ಹೇಳುತ್ತಾರೆ. ಹಾಗೆಂದರೆ ಜೀವಜಡಾತ್ಮಕವಾದ ಈ ಯಾವತ್ತು ಪ್ರಪಂಚವೂ ಜ್ಞಾನದಲ್ಲಿ ಕಲ್ಪಿತವಾಗಿರುವುದು. ಇದು ಅತ್ಯಂತ ಅಸತ್ಯವಾದುದು. ಉರಿಯುವ ಪಂಜನ್ನು ಗರಗರನೆ ತಿರುಗಿಸಿದರೆ ಚಕ್ರಾಕಾರವಾಗಿ ಬೆಂಕಿಯು ಇರುವಂತೆ ತೋರುವುದು. ವಸ್ತುತಃ ಬೆಂಕಿಯು ಚಕ್ರಾಕಾರವಾಗಿರುವುದಿಲ್ಲ. ಇಂಥಾ ಅಲಾತಚಕ್ರಭ್ರಮೆಯಂತೆ, ಈ ಸರ್ವಜಗತ್ತು ಸತ್ಯವೆಂಬ ಜ್ಞಾನವು ಭ್ರಮವು. ಅಲಾತಚಕ್ರಶಾಂತಿಗೆ ಸದೃಶವಾದ ಪ್ರಪಂಚದ ನಾಶರೂಪವಾದ ಮುಕ್ತಿ

---

* ಅಥವಾ "**ಊರ್ಧ್ವಪವಿತ್ರಃ**" ಎಂಬ ಶ್ರುತಿಯಲ್ಲಿಯೂ, "**ಊರ್ಧ್ವಮೂಲಂ**" ಎಂಬ ಗೀತಾಶ್ಲೋಕದಲ್ಲಿಯೂ 'ಊರ್ಧ್ವ' ಶಬ್ದವು ಪರಬ್ರಹ್ಮನು, ವಿಷ್ಣುವು ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುವುದು. ಆ ಅರ್ಥವನ್ನು ಇಲ್ಲಿ ಇಟ್ಟುಕೊಂಡರೆ ಊರ್ಧ್ವಂಗಚ್ಛಂತಿ ಎಂದರೆ ಬ್ರಹ್ಮನನ್ನು ಹೊಂದುತ್ತಾರೆ, ವಿಷ್ಣುವನ್ನು ಹೊಂದುತ್ತಾರೆ ಎಂಬ ಅರ್ಥವು ಬರುವುದು. "ಪರಂಪುರುಷಮುಪೈತಿದಿವ್ಯಂ" "ಗಚ್ಛಂತಿಬ್ರಹ್ಮ" "ಬ್ರಹ್ಮಾಧಿಗಚ್ಛತಿ" "ಮಾಮೇವೈಷ್ಯಸ್ಯಸಂಶಯಃ" ಎಂದು ಬ್ರಹ್ಮಪ್ರಾಪ್ತಿಯನ್ನೇ ಮುಕ್ತಿಯೆಂದು ವರ್ಣಿಸುವ ಅನೇಕ ಶ್ಲೋಕಗಳು ಈ ಅರ್ಥಮಾಡುವುದರಲ್ಲಿ ಅನುಕೂಲವಾಗಿರುವುವು.

ಯು ಜ್ಞಾನದಿಂದಾಗುವುದು. ಕಾದಹಂಚಿನಮೇಲೆ ಜಲಬಿಂದುವನ್ನು ಹಾಕಿದರೆ ತತ್ಕಾಲದಲ್ಲಿ ಅದೃಶ್ಯವಾಗುವಂತೆ ಈ ಯಾವತ್ತು ಪ್ರಪಂಚವೂ ಇರುವಂತೆ ಈಗ ತೋರುತ್ತಾ, ತಾನಾಗಿ ಜ್ಞಾನವು ಹುಟ್ಟಿದನಂತರ ಅದೃಶ್ಯವಾಗುವುದು, ಜೀವ ಭಾವವೂ ನಾಶವಾಗುವುದು. ಇಂಥಾ ಶೂನ್ಯಸದೃಶವಾದ ನಿರ್ವಿಶೇಷಜ್ಞಾನಭಾವವು ನಿರ್ವಾಣವೆನ್ನಿಸುವುದು. ಇದು ಮುಕ್ತಿಯು ಎಂದು ಬೌದ್ಧರು ಹೇಳುತ್ತಾರೆ.

ಪ್ರಶ್ನೆ—ಸ್ವಾಮಿ! ಶ್ರೀಕೃಷ್ಣನೂಕೂಡ "ಶಾಂತಿಮಾಪ್ನೋತಿ," "ನಿರ್ವಾಣಮಧಿಗಚ್ಛತಿ" ಇತ್ಯಾದಿ ಅನೇಕ ಸ್ಥಳಗಳಲ್ಲಿ ಇಂಥಾ ಮುಕ್ತಿಯನ್ನೂ ಹೇಳಿರುವಂತೆ ತೋರುವುದಿಲ್ಲವೇ?

ಉತ್ತರ—ಶೂನ್ಯಸದೃಶವಾದ ಜ್ಞಾನವನ್ನು ಅಂಗೀಕರಿಸುವ ವಾದಕ್ಕಿಂತ ನಿರರ್ಥಕವಾದ ತತ್ವವು ಮತ್ತೊಂದಿಲ್ಲ. ಸತಾಂಗತಿಯೂ ಸಾಕ್ಷಾತ್ಪರಬ್ರಹ್ಮನೂ ಆದ ಶ್ರೀಕೃಷ್ಣನು ನಿರ್ವಿಶೇಷಜ್ಞಾನವು ತತ್ವವೆಂತಲೂ, ಶೂನ್ಯತೆಯು ಮುಕ್ತಿಯೆಂತಲೂ ಹೇಳುವನೇ? ಶ್ರೀಕೃಷ್ಣನು ಕೇವಲ ನಿರ್ವಾಣ ಪದವನ್ನು ಮುಕ್ತಿವಾಚಕವಾಗಿ ಉಪಯೋಗಿಸಿರುವುದಿಲ್ಲ. **"ನಿರ್ವಾಣಂಬ್ರಹ್ಮಅಧಿಗಚ್ಛತಿ"** ಎಂದೂ, **"ಶಾಂತಿಂಮತ್ಸಂಸ್ಥಾಂ"** ಎಂದೂ ಹೇಳಿರುತ್ತಾನೆ. ಜ್ಞಾನಿಯು ನಿರ್ವಾಣ **ಬ್ರಹ್ಮನನ್ನು** ಹೊಂದುತ್ತಾನೆ ಎಂತಲೂ, **ನನ್ನಲ್ಲಿ ಸ್ಥಿತಿರೂಪವಾದ** ಶಾಂತಿಯನ್ನು ಹೊಂದುತ್ತಾನೆಂತಲೂ ಹೇಳಿರುವನು.

ಪರಂತು ಸೃಷ್ಟಿಕರ್ತನಾದ, ಪರಬ್ರಹ್ಮನು ತಾನು ಸೃಷ್ಟಿಸಿದ ಬ್ರಹ್ಮಾಂಡವೂ, ತದರ್ಗಂತವಾದ ಕಾರ್ಯಗಳೂ ಅಸತ್ಯನೆಂದು ಹೇಳುವನೇ? ಸಕಲ ಜಗದ್ರಕ್ಷಕನಾದ ಶ್ರೀಹರಿಯು ತನ್ನ ಕಂಸಹನನಾದಿ ಕಾರ್ಯಗಳೂ, ಕುರುಕ್ಷೇತ್ರ ಯುದ್ಧಾದಿ ಸಕಲ ವ್ಯಾಪಾರವೂ ಅಸತ್ಯವೆಂದು ಹೇಳುವನೇ? ಮತ್ತು ತಾನು ಅಂತರ್ಯಾಮಿತನದಿಂದ ಪ್ರವೇಶಿಸಿ ಪ್ರವೃತ್ತ್ಯಾದಿಗಳನ್ನು ಉಂಟುಮಾಡುತ್ತಾ, ನಿಯಮಿಸುತ್ತಿರುವ ಪ್ರಾಣಿಸಮೂಹವೆಲ್ಲವೂ ಜ್ಞಾನದಲ್ಲಿ ಕಲ್ಪಿತವೆಂದು ಹೇಳುವನೇ? ಪ್ರಕೃತ್ಯಾದಿ ಬಂಧವು ಸುಳ್ಳು, ಕರ್ಮವು ಸುಳ್ಳು, ವೇದಾದಿ ಶಾಸ್ತ್ರಗಳು ಸುಳ್ಳು, ಪ್ರಯತ್ನವು ಸುಳ್ಳು, ಮುಕ್ತಿಯೂ ಸುಳ್ಳು, ಪ್ರತ್ಯಕ್ಷಾದಿ ಪ್ರಮಾಣಗಳೂ ಸುಳ್ಳು ಎಂದು ಹೇಳುವ ಶಾಸ್ತ್ರವು ತಾನೂ ಸುಳ್ಳೆಂದು ಪ್ರಾಜ್ಞರಿಂದ ಉಪೇಕ್ಷಿತವಾಗಿರುತ್ತದೆ. ಅಧಿಕವಿಚಾರದಿಂದೇನು? ಈ ಶೂನ್ಯವಾದವೂ, ಇದಕ್ಕೆ ಅತ್ಯಂತ ಸದೃಶವಾದ ಅದ್ವೈತವಾದವೂ ತನಗೆ ಭರ್ತನೂ, ಮಾಂಗಲ್ಯದಾತನೂ ಆದ ಪತಿಯನ್ನು ಸಂಹರಿಸಿ ಸ್ವಯಂ ಹತಶೋಭಳಾದ ದುಷ್ಟವಿಧವೆಯಂತೆ,

ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ ಅರ್ಥವ್ಯವಸ್ಥಾಪಕವಾದ * ಮೂರು ಪ್ರಮಾಣಗಳನ್ನೂ ಅತಿಕ್ರಮಿಸಿ ಮತ್ತು ಹಿಂಸೆ ಮಾಡಿ ತಾವೂ ಅಪ್ರಾಮಾಣಿಕತೆಯನ್ನು ಹೊಂದಿರುವುವು. ಪರಂತು ನಿರ್ವಾಣ ಭಾವವು ಮುಕ್ತಿಯು ಎಂಬ ಮತದಲ್ಲಿ, ಜೀವಭಾವನಾಶರೂಪವಾದ ಬ್ರಹ್ಮೈಕ್ಯವು ಮುಕ್ತಿಯಾಗಲಾರದೆಂಬಲ್ಲಿ ನಾವು ತೋರಿಸಿದ ದೋಷಗಳೆಲ್ಲಾ ನವಜೀವನವನ್ನು ಹೊಂದಿ ಪ್ರಾದುರ್ಭವಿಸುವುವು.

3 ಪೃಥಿವ್ಯಾದಿಪ್ರತ್ಯಕ್ಷಸಿದ್ಧವಾದ ಭೂತಸಮುದಾಯವೇ ದೇಹವು. ಅದೇ ಆತ್ಮನು, ದೇಹಾತಿರಿಕ್ತ ಆತ್ಮನೂ, ಅತೀಂದ್ರಿಯವಾದ ಲೋಕಗಳೂ ಪುನರ್ಜನ್ಮಾದಿಗಳೂ ಇರುವುದಿಲ್ಲ. **ದೇಹನಾಶವೇ ಮುಕ್ತಿಯು** ಎಂದು ಹೇಳುವ ಚಾರ್ವಾಕಮತವೂ ಶ್ರೀಕೃಷ್ಣನ ವಾಕ್ಯಾಗ್ನಿಯಿಂದ ಭಸ್ಮೀಭೂತವಾಗಿರುವುದು.

(1) ....**ಮಾಮನುಸ್ಮರನ್ ।**
ಯಃ ಪ್ರಯಾತಿತ್ಯಜನ್‌ದೇಹಂಸಯಾತಿಪರಮಾಂಗತಿಂ ॥
—(8. 13.)

ಎಂದು ಹೇಳಿರುವನು. ನನ್ನನ್ನು ಸ್ಮರಣೆಮಾಡಿ ಸತ್ತಮೇಲೆ ಪರಮಗತಿಯನ್ನು ಹೊಂದುತ್ತಾನೆ ಎಂದು ಅರ್ಥವು.

(2) **ಅಂತಕಾಲೇಚಮಾಮೇವಸ್ಮರನ್ಮುಕ್ತ್ವಾಕಳೇವರಂ ।**
ಯಃ ಪ್ರಯಾತಿಸಮದ್ಭಾವಂಯಾತಿನಾಸ್ತ್ಯತ್ರಸಂಶಯಃ ॥
—(8. 5.)

---

* ಪ್ರಾಜ್ಞರಾದ ರಾಧಾಕೃಷ್ಣರೂ ಗೌಡಪಾದರ ತತ್ವನಿರೂಪಣಾವಸರದಲ್ಲಿ ಹೀಗೆಯೇ ಬರೆದಿರುತ್ತಾರೆ :—**The general idea pervading Goudapada's work, that bondage and liberation, the individual soul and the world, are all unreal, makes the caustic critic observe that the theory which has nothing better to say than that an unreal soul is trying to escape from an unreal bondage in an unreal world to accomplish an unreal supreme good may itself be an unreality. It is one thing to say that the secret of existence . . . is a mystery, and another to dismiss the whole changing universe as a mere mirage. . . . The greatest condemnation of such a theory is that we are obliged to occupy ourselves with objects, the existenee and value of which, we are continually denying in theory." Indian Philosophy Vol. II. P. 463.**

(3) **ಸ್ಥಿತ್ವಾಸ್ಯಾಮಂತಕಾಲೇಪಿಬ್ರಹ್ಮನಿರ್ವಾಣಮೃಚ್ಛತಿ ।**—(2. 72.)
ಈ ಶ್ಲೋಕಗಳು (133 ಮತ್ತು 131 ನೆಯ ಪುಟಗಳಲ್ಲಿ) ವ್ಯಾಖ್ಯಾತವಾಗಿರುವುವು. ಇವುಗಳಲ್ಲಿ ದೇಹನಾಶಾನಂತರ ಜ್ಞಾನಿಗೆ ಪರಮಾತ್ಮನ ಪ್ರಾಪ್ತಿಯು ಆಗುವುದೆಂದೂ, ಅದೇ ಮುಕ್ತಿಯೆಂದೂ ಹೇಳಲ್ಪಟ್ಟಿರುವುದು.

4 ನ್ಯಾಯಶಾಸ್ತ್ರದಲ್ಲಿ ಮುಕ್ತಿಸ್ವರೂಪವು ಹೀಗೆ ವರ್ಣಿಸಲ್ಪಟ್ಟಿರುತ್ತದೆ:- ಪ್ರಪಂಚವು ದುಃಖ ಮತ್ತು ಇಪ್ಪತ್ತುವಿಧವಾದ ದುಃಖಜನಕವಾದ ಸಾಮಗ್ರಿಗಳಿಂದ ಪೂರ್ಣವಾಗಿರುವುದು. ಇವುಗಳನ್ನು ಒಟ್ಟುಗೂಡಿಸಿ ಇಪ್ಪತ್ತೊಂದು "ದುಃಖ"ಗಳೆಂದು ಕರೆಯುವರು. ಅವರ ಮತದ ಪ್ರಕಾರ ಲೋಕದಲ್ಲಿ ದುಃಖಕಾರಣವಲ್ಲದ ವಸ್ತುವು ಒಂದೂ ಇರುವುದಿಲ್ಲ. ಸುಖವೂ ದುಃಖಕಾರಣವೇ ಆಗುತ್ತದೆ ಎಂದು ಹೇಳುತ್ತಾರೆ. ಸುಖವು ಬೇಗ ನಾಶವಾಗುವುದಲ್ಲಾ ಎಂಬ ಭೀತಿಯಿಂದಲೂ, ಸುಖಕ್ಷಯವಾದನಂತರ ದುಃಖಪರಿವರ್ತನೆಯು ಅವರ್ಜನೀಯವೆಂಬ ಜ್ಞಾನದಿಂದಲೂ ಜ್ಞಾನಿಗೆ ಸುಖವೂ ದುಃಖಕಾರಣವೇ ಆಗುವುದು. ದುಃಖಗಳು ಇಪ್ಪತ್ತೊಂದು ವಿಧವಾಗಿರುತ್ತವೆ. **"ಶರೀರಂ, ಷಡಿಂದ್ರಿಯಾಣಿ, ಷಡ್ವಿಷಯಾಃ, ಷಡ್ಬುದ್ಧಯಃ, ಸುಖಂದುಃಖಂಚೇತಿ ಏಕವಿಂಶತಿಃ"** ಪಾಂಚಭೌತಿಕ ಶರೀರವು, ಚಕ್ಷುಶ್ಶ್ರೋತ್ರತ್ವಗ್ಜಿಹ್ವಾಘ್ರಾಣಗಳು ಮತ್ತು ಮನಸ್ಸು ಎಂಬ ಆರು ಇಂದ್ರಿಯಗಳು, ರೂಪಶಬ್ದಸ್ಪರ್ಶರಸಗಂಧಸ್ಮೃತಿರಾಗಗಳೆಂಬ ಈ ಆರು ಇಂದ್ರಿಯಗಳ ವಿಷಯಗಳು, ಈ ಆರು ಇಂದ್ರಿಯಗಳಿಗೂ ವಿಷಯಗಳಿಗೂ ಸನ್ನಿಕರ್ಷದಿಂದ ಉಂಟಾಗುವ ಆರು ವಿಧವಾದ ಅನುಭವಗಳು (ಜ್ಞಾನಗಳು), ಸುಖವು, ಹೀಗೆ ಇಪ್ಪತ್ತು ಪದಾರ್ಥಗಳು ದುಃಖವನ್ನು ಉಂಟುಮಾಡುವುವು. ದುಃಖವೆಂಬ ಪದಾರ್ಥದಿಂದ ಸಹಿತವಾಗಿ ಒಟ್ಟು ಇಪ್ಪತ್ತೊಂದು ದುಃಖಗಳಾಗುವುವು. **"ಏಕವಿಂಶತಿದುಃಖಧ್ವಂಸೋಮುಕ್ತಿಃ"** ಈ ಇಪ್ಪತ್ತೊಂದು ದುಃಖಗಳ ಆತ್ಯಂತಿಕ ನಾಶವು ಮುಕ್ತಿಯೆನ್ನಿಸುವುದು. ಈ ದುಃಖಧ್ವಂಸವು ಉಂಟಾಗುವ ಕ್ರಮವೂ ಕೂಡ ನ್ಯಾಯಸೂತ್ರದಲ್ಲಿಯೇ ನಿರೂಪಿತವಾಗಿರುವುದು. ಅದು ಮುಂದಿನ ಅಧ್ಯಾಯದ ವಿಷಯವು. ಸದ್ಯದಲ್ಲಿ, ನೈಯಾಯಿಕ ಮತದಲ್ಲಿ, ಆತ್ಯಂತಿಕ ಸಕಲದುಃಖನಿವೃತ್ತಿಯು ಮುಕ್ತಿಯು ಎಂದು ಸಿದ್ಧವಾಯಿತು.

ಆತ್ಯಂತಿಕ ದುಃಖಾಭಾವವು ಮುಕ್ತಿಯಲ್ಲಿರುವುದೆಂದು ನಾವೂ ಒಪ್ಪಿರುತ್ತೇವೆ.* ಆದರೆ ದುಃಖಾಭಾವವೇ ಮುಕ್ತಿಯು ಮತ್ತು ಸುಖಭೋಗವು

---

* ನೈಯಾಯಿಕರ ಇಪ್ಪತ್ತೊಂದು ವಿಧ ದುಃಖದ ಪರಿಗಣನೆಯೇ ಮುಂತಾದ ಪ್ರಕ್ರಿಯೆಯು ಸ್ವಲ್ಪ ಶಾಸ್ತ್ರಕ್ಕೆ ವಿರುದ್ಧವೇ.

ಮುಕ್ತಿಯಲ್ಲಿರುವುದಿಲ್ಲವೆಂಬ ಅಭಿನಿವೇಶವು ಶ್ರೀಕೃಷ್ಣನಿಗೆ ಸರ್ವಥಾ ಸಮ್ಮತವಲ್ಲ. ಮುಕ್ತಿಯು ನಿರಂತರ ಸುಖಾನುಭವರೂಪವಾದುದೆಂದು ಶ್ರೀಕೃಷ್ಣನು ಹೇಳುತ್ತಾನೆ:—

(1) **ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ।**

—(5. 21.)

ಧ್ಯಾನಯೋಗದಲ್ಲಿರತನಾದ ಜ್ಞಾನಿಯು ನಾಶರಹಿತವಾದ (ನಿತ್ಯವಾದ) ಸುಖವನ್ನು ಹೊಂದುತ್ತಾನೆ.

ನೈಯಾಯಿಕರ ಮುಕ್ತಿಯು ನಾಯಿಗಳಿಗೂ ಅಪೇಕ್ಷಿತವಲ್ಲ. ಜ್ಞಾನಸುಖದಿಂದ ಪೂರ್ಣರಾದ ಧ್ಯಾನಯೋಗಿಗಳು ಹೇಗೆತಾನೇ ಅಪೇಕ್ಷಿಸುವರು? ಉತ್ತಮಸುಖವು ಪ್ರಾಪ್ತವಾಗುವುದಾದರೆ ಜ್ಞಾನಿಗಳೂ ಕೂಡ ಸ್ವಲ್ಪ ದುಃಖವನ್ನು ಸಹಿಸುವರು, ಅಥವಾ ಸುಖಕ್ಕೆ ಸಮಾನವಾದ ದುಃಖವನ್ನಾದರೂ ಸಹಿಸುವರು. ಕೇವಲ ದುಃಖನಿವೃತ್ತಿಯು ಮುಕ್ತಿಯಾಗುವುದಾದರೆ, ಪ್ರಾಜ್ಞರು ಶ್ರವಣಾದಿ ಸುಖದಿಂದ ಸಹಿತವಾದ ದುಃಖವಿಶಿಷ್ಟವಾಗಿರುವ ಸಂಸಾರವನ್ನೇ ಇಚ್ಛಿಸುವರು. ಸರ್ವಥಾ ಸುಖಪ್ರಾಪ್ತಿಯಿಂದ ರಹಿತವಾದ ಮೋಕ್ಷವನ್ನು ಬಯಸಲಾರರು. ಮತ್ತು ಸಂಸಾರದಲ್ಲಿ ಸ್ವಲ್ಪ ಸುಖವು ಇರುವುದು. ಮುಕ್ತಿಯಾದರೆ ಇದು ಸರ್ವಾತ್ಮನಾನಾಶವಾಗುವುದೆಂಬ ಭೀತಿಯಿಂದ ಸಂಸಾರದಲ್ಲೇ ಆದಷ್ಟು ದುಃಖವು ಕಡಿಮೆಯಾಗುವ ಉಪಾಯವನ್ನು ಮಾಡುವರೇ ಹೊರತು, ಈಗ ತಾವು ಅನುಭವಿಸುತ್ತಿರುವ ಸುಖವೂ ನಾಶವಾಗುವಂಥಾ ಮುಕ್ತಿಯನ್ನು ಅಪೇಕ್ಷಿಸಿ ತದರ್ಥವಾಗಿ ಪ್ರಯತ್ನಪಡಲಾರರು. ಆದುದರಿಂದ ಕೇವಲ ದುಃಖಾಭಾವವು ಪ್ರಧಾನಪುರುಷಾರ್ಥವೆನ್ನಿಸಲಾರದು. ಮತ್ತು ಕೇವಲ ದುಃಖಾಭಾವರೂಪವಾದ ಮುಕ್ತಿಗಿಂತ ಬಹು ಸುಖಸಹಿತವಾದ ಅಲ್ಪದುಃಖದಿಂದ ಯುಕ್ತವಾದ ಸ್ವರ್ಗವಾದರೂ ಮೇಲೆಂದು ವಾದಿಸಬಹುದು.

5 ಮೀಮಾಂಸಕ ಮತದಲ್ಲಿ ಸ್ವರ್ಗವೇ ಮುಕ್ತಿಯು. ಇಂಥಾ ಮತವನ್ನು ಶ್ರೀಕೃಷ್ಣನು ದ್ವಿತೀಯಾಧ್ಯಾಯದಲ್ಲಿಯೇ ನಿಂದಿಸಿರುತ್ತಾನೆ:—

(1) **ಯಾಮಿಮಾಂ ಪುಷ್ಪಿತಾಂವಾಂಚಂ ಪ್ರವದಂತ್ಯವಿಪಶ್ಚಿತಃ ।**
ವೇದ ವಾದರತಾಃ ಪಾರ್ಥನಾನ್ಯದಸ್ತೀತಿವಾದಿನಃ ।
ಕಾಮಾತ್ಮಾನಃ ಸ್ವರ್ಗಪರಾ....ತಯಾಪಹೃತಚೇತಸಾಂ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌನ ವಿಧೀಯತೇ ॥

—(2. 42-44.)

ಈ ಶ್ಲೋಕಗಳು (213 ನೆಯ ಪುಟದಲ್ಲಿ) ವ್ಯಾಖ್ಯಾತವಾಗಿರುವುವು. ಇವುಗಳಲ್ಲಿ ಶ್ರೀಕೃಷ್ಣನು ಸ್ವರ್ಗಕ್ಕಿಂತ ಉತ್ತಮವಾದ ಗನ್ತವ್ಯಸ್ಥಾನವಿಲ್ಲವೆಂದು ತಿಳಿಯುವವರು ಅವಿಪಶ್ಚಿತರು ಎಂದರೆ ಅಜ್ಞಾನಿಗಳೆಂದೂ, ಅಂಥವರಿಗೆ ಮೋಕ್ಷೋಪಯೋಗಿಯಾದ ನಿಶ್ಚಯಾತ್ಮಕವಾದ ಯಥಾರ್ಥಜ್ಞಾನವು ಹುಟ್ಟುವುದಿಲ್ಲವೆಂದು ಹೇಳಿರುತ್ತಾನೆ.

ಸ್ವರ್ಗಲೋಕವು ಅನಿತ್ಯವಾದ ಅಲ್ಪಸುಖವನ್ನು ಕೊಡುವ ಸ್ಥಾನವೆಂದು ನವಮಾಧ್ಯಾಯದ ಶ್ರೀಕೃಷ್ಣನ ವಾಕ್ಯಗಳಿಂದ ನಿಶ್ಚಿತವಾಗುವುದು. ಶ್ರೀಕೃಷ್ಣನು ಹೇಳುತ್ತಾನೆ—

(2) **ತೇತಂಭುಕ್ತ್ವಾಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇಮರ್ತ್ಯಲೋಕಂವಿಶಂತಿ।**—(9. 20-21.)

ಸ್ವರ್ಗವನ್ನು ಹೊಂದಿದ ತ್ರೈವಿದ್ಯರು ತಮ್ಮಿಂದ ಸಂಚಿತವಾದ ಪುಣ್ಯಕ್ಷಯವು ಆದನಂತರ ಪುನಃ ಭೂಲೋಕಕ್ಕೆ ಜನನಾರ್ಥವಾಗಿ ಬರುತ್ತಾರೆ.

ಅಷ್ಟಮಾಧ್ಯಾಯದಲ್ಲಿ ಶ್ರೀಕೃಷ್ಣನು ತನ್ನ ಪ್ರಾಪ್ತಿಯೇ ಮುಕ್ತಿಯೆಂದೂ ತನ್ನ ಪ್ರಾಪ್ತಿರಹಿತವಾದ ಸ್ವರ್ಗಾದಿ ಸಕಲಲೋಕಪ್ರಾಪ್ತಿಗಳು ಪುನರಾವೃತ್ತಿಗೆ ಕಾರಣವಾಗುವುವೆಂದೂ ಹೇಳುತ್ತಾನೆ.

(3) **ಆಬ್ರಹ್ಮಭವನಾಲ್ಲೋಕಾಃ ಪುನರಾವರ್ತಿನೋಽರ್ಜುನ।**
ಮಾಮುಪೇತ್ಯತುಕೌಂತೇಯಪುನರ್ಜನ್ಮನವಿದ್ಯತೇ ॥

—(8. 16.)

ಎಲೈ ಅರ್ಜುನನೇ! ಬ್ರಹ್ಮಸದನಮೊದಲುಗೊಂಡು ಸಮಸ್ತ ಲೋಕಪ್ರಾಪ್ತಿಯೂ ಪುನರಾವೃತ್ತಿಯುಳ್ಳವುಗಳು. ಆದರೆ **ನನ್ನನ್ನು ಹೊಂದಿದವನಿಗೆ ಮಾತ್ರ ಪುನರ್ಜನ್ಮವು** ಇರುವುದಿಲ್ಲ.

ಇಷ್ಟರಿಂದ ಕ್ಷಯಿಷ್ಣುವಾದ ಸ್ವರ್ಗಲೋಕಪ್ರಾಪ್ತಿಯು ಮುಕ್ತಿಯಲ್ಲವೆಂದೂ, ಪರಮಾತ್ಮಪ್ರಾಪ್ತಿಯೇ ಮುಕ್ತಿಯೆಂದೂ ಸಿದ್ಧವಾಯಿತು. ಕಿಂಚ ಸೃಷ್ಟಿಕಾಲದಲ್ಲಿ ಹುಟ್ಟುತ್ತಾ ಪ್ರಳಯದಲ್ಲಿ ನಾಶವನ್ನು ಹೊಂದತಕ್ಕ ಈ ಅನಿತ್ಯಲೋಕಗಳ ಪ್ರಾಪ್ತಿಯು ಹೇಗೆತಾನೇ ಭಯರಹಿತವಾದ ಅಮೃತರೆಂದು ಕರೆಯಲ್ಪಡುವ ಮುಕ್ತರಿಗೆ ವಾಸಸ್ಥಾನವಾಗುವುದು?

6 ರಾಮಾನುಜಭಾಷ್ಯದಲ್ಲಿ ನಿರೂಪಿತವಾದ ಮುಕ್ತರಿಗೆ ಬ್ರಹ್ಮಾನಂದಸಾಮ್ಯವೂ ಜೀವಯೋಗ್ಯತಾತಾರತಮ್ಯವನ್ನೂ ಸಾಧನತಾರತಮ್ಯವನ್ನೂ ಪ್ರತಿಪಾ

ದನೆ ಮಾಡಿರುವ ಶ್ರೀಕೃಷ್ಣನಿಗೆ ಸಮ್ಮತವಲ್ಲವು. “**ದೈವೀಸಂಪದ್ವಿಮೋಕ್ಷಾಯ**” ಇತ್ಯಾದಿ ಶ್ಲೋಕಗಳಲ್ಲಿ ಶ್ರೀ ಕೃಷ್ಣನು ತೈತ್ತಿರೀಯಶ್ರುತ್ಯುಕ್ತ ಆನಂದತಾರತಮ್ಯವು ಮುಕ್ತರಲ್ಲೂ ಇರುವುದೆಂದು ಸೂಚಿಸಿರುತ್ತಾನೆ.

ಪ್ರಶ್ನೆ—ಸ್ವಾಮಿ! “ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ” ಎಂಬ ಶ್ರುತಿಯಲ್ಲಿ ಪರಬ್ರಹ್ಮನನ್ನು ದರ್ಶನ ಮಾಡಿದ ಜ್ಞಾನಿಯು ಲೌಕಿಕ ಪುಣ್ಯಪಾಪಗಳಿಂದ ವಿನಿರ್ಮುಕ್ತನಾಗಿ **ಪರಮ ಸಾಮ್ಯವನ್ನು** ಹೊಂದುತ್ತಾನೆ ಎಂದು ಸ್ಪಷ್ಟವಾಗಿರುವುದು. ಶ್ರೀಕೃಷ್ಣನೂ ಸಹ ಹೇಳುತ್ತಾನೆ :—

(1) **ಇದಂ ಜ್ಞಾನಮುಪಾಶ್ರಿತ್ಯ ಮಮಸಾಧರ್ಮ್ಯಮಾಗತಾಃ ।**
ಸರ್ಗೇಽಪಿನೋಪಜಾಯಂತೇ ಪ್ರಳಯೇನವ್ಯಥಂತಿಚ ॥

—(14. 2.)

ನನ್ನಿಂದ ಉಪದಿಷ್ಟತತ್ವವನ್ನು ತಿಳಿದವರು ನನ್ನ ಸಮಾನ ಧರ್ಮವನ್ನು ಹೊಂದಿದವರಾಗಿ ಸೃಷ್ಟಿಕಾಲದಲ್ಲಿ ಪುನಃ ಹುಟ್ಟುವುದಿಲ್ಲ. ಪ್ರಳಯದಲ್ಲಿ ಮರಣಾದಿ ನಿಮಿತ್ತಕವಾದ ವ್ಯಥೆಯನ್ನು ಹೊಂದುವುದಿಲ್ಲ. ಇದರಿಂದಲೂ ಮುಕ್ತನಿಗೆ ಈಶ್ವರ ಸಮಾನ ಧರ್ಮವು ಬರುವುದೆಂದು ಪ್ರಮಿತವಾಗಿರುವುದು. ಹೀಗಿರುವಲ್ಲಿ ಸಾಮ್ಯವಾದವನ್ನು ಶ್ರೀಕೃಷ್ಣನು ನಿರಾಕರಣೆಮಾಡಿರುವನೆಂದು ಹೇಗೆ ಹೇಳುವುದು ?

ಉತ್ತರ—ಪರಮಂಸಾಮ್ಯಮುಪೈತಿ ಎಂಬ ಶ್ರುತಿಯೇ ಜೀವನಿಗೆ ಪ್ರಾಪ್ತವಾಗುವ ಪರಮಸಾಮ್ಯವನ್ನು ಹಿಂದಿನ “ಪುಣ್ಯಪಾಪೇವಿಧೂಯನಿರಂಜನಃ” ಎಂಬ ವಿಶೇಷಣಗಳಿಂದ ವಿವರಿಸಿರುವುದು. ಜೀವನಿಗೆ ಪ್ರಾಪ್ತವಾಗುವ ಈಶ್ವರ ಸಾಮ್ಯವು ಅನಿಷ್ಟವಾದ ಪುಣ್ಯಪಾಪಗಳ ರಾಹಿತ್ಯ ಮತ್ತೂ ದೋಷ ರಾಹಿತ್ಯ ಇವೆರಡು ವಿಷಯಗಳಲ್ಲಿ ಮಾತ್ರವೆಂದೇ ಪ್ರದರ್ಶನೆ ಮಾಡಿ, ಈರೀತಿಯಾದ ಸಾಮ್ಯವನ್ನು (ನಿರ್ದೋಷತ್ವವನ್ನು) ಹೊಂದುವ ಮುಕ್ತರೂ ಸಹ ತಾರತಮ್ಯೋಪೇತರಾಗಿರುವರೆಂದು, ಉಪೈತಿ ಎಂಬ ಪದದಲ್ಲಿರುವ **ಉಪ** ಎಂಬ **ಉ**ಪಸರ್ಗದಿಂದ ಸೂಚಿಸಿರುವುದು. ಮುಕ್ತರೂ ಯಥಾಯೋಗ್ಯವಾಗಿ ಪರಮಾತ್ಮನ ಸಮೀಪವನ್ನು ಹೊಂದುತ್ತಾರೆ ಎಂದು ಅರ್ಥವು. ಭಗವದ್ಗೀತೆಯಲ್ಲಿಯೂ ಕೂಡ ಮುಕ್ತರಿಗೆ ಪ್ರಾಪ್ತವಾಗುವ ಶ್ರೀಕೃಷ್ಣನ ಸಮಾನ ಧರ್ಮವು ಯಾವ ವಿಷಯದಲ್ಲಿ ಎಂಬುದನ್ನು ‘ಸರ್ಗೇಽಪಿನೋಪಜಾಯಂತೇ ಪ್ರಳಯೇನವ್ಯ

ಥಂತಿಚ ' ಎಂಬ ಉತ್ತರಾರ್ಧದಲ್ಲಿ ವಿವರಿಸಿರುತ್ತಾನೆ. ಸೃಷ್ಟಿಪ್ರಳಯಗಳಿಂದ ವಿಕಾರವಿಲ್ಲದ, ಅಪುನರಾವೃತ್ತಿತ್ವವೇ ಮುಕ್ತರಿಗೆ ಪ್ರಾಪ್ತವಾಗುವ ಈಶ್ವರನ ಸಾಧರ್ಮ್ಯವು.

ಪರಂತು ಪರಮಸಾಮ್ಯವು ಜೀವಾತ್ಮನಿಗೆ ಬರಲಾರದೆಂಬುದನ್ನು ರಾಮಾನುಜ ಮತಾನುಯಾಯಿಗಳೂ ಸಹ ಅವಶ್ಯಕವಾಗಿ ಒಪ್ಪಬೇಕು. ಪರಮಾತ್ಮನು **ನಿತ್ಯಮುಕ್ತನು**; ಜೀವಾತ್ಮನು **ಕದಾಚಿನ್ಮುಕ್ತನು** ಇಷ್ಟು ತಾರತಮ್ಯವು ಸಿದ್ಧವಾಗಿರುವುದಷ್ಟೆ! ಮೂರು ಕಾಲದಲ್ಲೂ ಮುಕ್ತನಾಗಿರುವ ಪರಬ್ರಹ್ಮನ ಪರಮಸಾಮ್ಯವನ್ನು ಜೀವನು ಹೊಂದುವನೆಂದು ಹೇಳಿದರೆ ಜೀವನೂ ಮೂರು ಕಾಲದಲ್ಲೂ ಮುಕ್ತತ್ವರೂಪವಾದ ಧರ್ಮವನ್ನು ಹೊಂದುವನು ಎಂದು ಅರ್ಥಮಾಡದೆ, ಯುಕ್ತಿವಿರುದ್ಧವಾದುದರಿಂದ **ಉತ್ತರಕಾಲದಲ್ಲಿಮಾತ್ರ** ಸಾಮ್ಯವನ್ನು ಹೊಂದುವನು ಎಂದು **ಅರ್ಥಸಂಕೋಚವನ್ನು** ಮಾಡಬೇಕು. ಇಷ್ಟೇ ಅಲ್ಲ! ಜೀವಾತ್ಮನಿಗೆ ಮುಕ್ತನಾದರೂ ಕೂಡ ಲಕ್ಷ್ಮೀಪತಿತ್ವ, ಸೃಷ್ಟಿಕರ್ತೃತ್ವ, ಸ್ಥಿತಿ ಕರ್ತೃತ್ವ, ಸಂಹಾರ ಕರ್ತೃತ್ವ, ನಿಯಮನ ಕರ್ತೃತ್ವ, ಮೋಕ್ಷಪ್ರದತ್ವವೇ ಮೊದಲಾದ ಅನಂತ ವಿಷ್ಣುಧರ್ಮಗಳು ಬರುವುದಿಲ್ಲವೆಂದು ಶ್ರೀಭಾಷ್ಯಕಾರರೇ ಒಪ್ಪಿರುತ್ತಾರೆ. ಈ ಧರ್ಮಗಳು ವಿಷ್ಣುವಿಗೆ ಪ್ರಧಾನಧರ್ಮಗಳು. ಹೇಗೆಂದರೆ, ಪ್ರಥಮಸೂತ್ರದಲ್ಲಿ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ಸೂತ್ರಕಾರರು ಹೇಳಿದರು ; ಅದರ ಮೇಲೆ ಆ ಬ್ರಹ್ಮನು ಯಾರೆಂದು ಪ್ರಶ್ನೆಮಾಡಲು “ ಜನ್ಮಾದ್ಯಸ್ಯಯತಃ ” ಎಂದರೆ ಸೃಷ್ಟಿಸ್ಥಿತಿಸಂಹಾರಾದಿಗಳನ್ನು ಮಾಡುವವನು ಬ್ರಹ್ಮನು ಎಂದು ಹೇಳಿರುವರು. ಆದುದರಿಂದ ಇವುಗಳು ಪರಬ್ರಹ್ಮನಿಗೆ ಪ್ರಧಾನ ಲಕ್ಷಣಗಳು. ಜೀವಾತ್ಮನು ಪರಮಸಾಮ್ಯವನ್ನು ಹೊಂದಬೇಕಾದರೆ, ಇಂಥಾ ಪ್ರಧಾನವಾದ ವಿಷ್ಣುಧರ್ಮಗಳನ್ನು ಹೊಂದಬೇಕು. ಏವಂಚ ಜೀವನು ಮುಕ್ತಿಯಲ್ಲಿ ಪರಮಸಾಮ್ಯವನ್ನು ಹೊಂದುತ್ತಾನೆ ಎಂದರೆ ಸೃಷ್ಟ್ಯಾದಿಗಳನ್ನು ಇದುವರೆವಿಗೂ ಮಾಡುವುದಕ್ಕೆ ಅಸಮರ್ಥನಾದರೂ ಇನ್ನು ಮುಂದೆ ಅಂಥಾ ಸಾಮರ್ಥ್ಯವನ್ನು ಹೊಂದುವನು ಎಂದು ಅರ್ಥವಾಗುವುದು. ಹಾಗಿದ್ದಮೇಲೆ, ಮುಕ್ತರಿಂದಲೇ ಜಗತ್ತಿಗೆ ಸೃಷ್ಟ್ಯಾದಿಗಳು ಒಂದೊಂದುಸಾರಿಯಾದರೂ ಆಗಬಹುದೆಂದು ಒಪ್ಪಬೇಕಾಗುವುದು. ಕಿಂಚ ಇದು ಲೌಕಿಕನ್ಯಾಯದಿಂದಲೂ ಸಮಂಜಸವೇ ಆಗಿರುವುದು. ಹೇಗೆಂದರೆ, ಗೃಹಕೃತ್ಯನಿರ್ವಾಹದಲ್ಲಿ ಅಸಮರ್ಥನಾದ ಶಿಶುವನ್ನು, ಪಿತನು ಅನ್ನಾದಿಗಳಿಂದ ಪೋಷಿಸಿ, ಪುತ್ರನು ಸಮರ್ಥನಾದ ನಂತರ

ಯಾವತ್ತು ಸಂಸಾರಭರಣಕಾರ್ಯವನ್ನು ಉತ್ಸಾಹಶಾಲಿಯಾದ ಯೌವನಸ್ಥನಾದ ಪುತ್ರನ ಕೈಲಿ ಇಟ್ಟು, ತಂದೆಯು ತಾನೂ ಆ ಕಾರ್ಯದಲ್ಲಿ ಸಾಮರ್ಥ್ಯೋಪೇತ ನಾಗಿದ್ದರೂ, ಪುತ್ರಕಾರ್ಯವನ್ನು ಆನಂದದಿಂದ ನೋಡುತ್ತಿರುವನು. ಹೀಗೆಯೇ ಶ್ರೀವಿಷ್ಣುವೂ ಸಹ ಸಂಸಾರದಿಂದ ಅಸಮರ್ಥರಾದ ಜೀವರನ್ನು ಉದ್ಧಾರಮಾಡಿ ಅವರಿಗೆ ಪರಮಸಾಮ್ಯವನ್ನು ಕೊಟ್ಟಮೇಲೆ, ಅವರಿಂದಲೇ ಸೃಷ್ಟ್ಯಾದಿಗಳನ್ನು ಮಾಡಿಸಿ ತಾನು ನೋಡುತ್ತಲೆ ಆನಂದಪಡಬೇಕು. ಹಾಗೆ ಶ್ರೀ ಪರಮಾತ್ಮನು ಮಾಡಿಲ್ಲವಾದುದರಿಂದ, ಜೀವರುಗಳು ಮುಕ್ತರಾದರೂ ಇಂಥಾ ಸಾಮರ್ಥ್ಯ ವನ್ನು ಹೊಂದಿಲ್ಲವೆಂದು ಅವಶ್ಯವಾಗಿಯೂ ಒಪ್ಪಬೇಕು. "ಪರಮಂಸಾಮ್ಯ ಮುಪೈತಿ" ಎಂಬ ಶ್ರುತಿಗೆ ಸೃಷ್ಟಿಕರ್ತೃತ್ವಾದಿ ರೂಪಗಳಿಂದ ವಿನಹ ಇತರ ಧರ್ಮಗಳಿಂದ ಸಾಮ್ಯವನ್ನು ಹೊಂದುವನು ಎಂದು ಹೇಳುವಂತೆ, ಸೃಷ್ಟಿಸಾ ಮರ್ಥ್ಯ, ಪೂರ್ಣಾನಂದತ್ವವೇ ಮುಂತಾದ ಧರ್ಮಗಳು ವಿನಹ, ಇತರ ಧರ್ಮ ಗಳಿಂದ ಜೀವನು ಪರಮಾತ್ಮನ ಸದೃಶನಾಗುವನು ಎಂದು ಹೇಳಿದರೆ ಯಾವ ದೋಷವೂ ಇರುವುದಿಲ್ಲ. ಮತ್ತು ಇತರ ಪ್ರಮಾಣಗಳೂ ಅನುಕೂಲವಾಗುವುವು.

3. ಕಿಂಚ ಆನಂದಮಯೋಽಭ್ಯಾಸಾತ್ ಎಂಬ ಬ್ರಹ್ಮಸೂತ್ರದಲ್ಲಿ ಪರ ಬ್ರಹ್ಮನು ಒಬ್ಬನು ಆನಂದಪೂರ್ಣನೆಂದು ಸೂತ್ರಕಾರರು ನಿರ್ಣಯ ಮಾಡಿರು ವರು. ಮುಕ್ತರೆಲ್ಲರೂ ಆನಂದಪೂರ್ಣರಾದರೆ ಅನಂತ ಆನಂದಮಯರು ಶ್ರುತಿ ಸಿದ್ಧವಾಗಬೇಕಾದೀತು! ಸಂಕೋಚದಿಂದ ಅರ್ಥಮಾಡುವುದಾದರೆ ಪ್ರಾಮಾ ಣಿಕವಾದ ಮಾರ್ಗಕ್ಕೇ ಬಂದಂತಾಯಿತು.

4. ವಸ್ತುತಃ ಶ್ರೀಭಾಷ್ಯಸೂಚಿತವಾದ ನ್ಯಾಯವನ್ನು ವಿಮರ್ಶೆಮಾಡಿ ದರೆ ವಿಷ್ಣುವಿಗಿಂತ ಮುಕ್ತರೇ ಹೆಚ್ಚು ಆನಂದಶಾಲಿಗಳಾಗಬೇಕು. ವಿಷ್ಣುವು ಸೃಷ್ಟ್ಯಾದಿ ಅನಂತ ನಾನಾ ವ್ಯಾಪಾರಗಳನ್ನು ಮಾಡುತ್ತಾ ಎಷ್ಟು ಆನಂದ ವನ್ನು ಅನುಭವಿಸುವನೋ **ಅಷ್ಟೇ ಆನಂದವನ್ನು** ನಿರ್ವ್ಯಾಪಾರರಾದ ಮು ಕ್ತರು ಅನುಭವಿಸುವರೆಂದು ಅವರ ಸಿದ್ಧಾಂತವು. ಅನಂತವಾದ, ಪ್ರತಿಕ್ಷಣದ ಲ್ಲಿಯೂ ಪ್ರಯತ್ನಾಪೇಕ್ಷಿಯಾದ ಜಗನ್ನಿರ್ಮಾಣಕಾರ್ಯವೂ ಇಲ್ಲದೆಯೇ, ನಿರತಿ ಶಯವಾದ ಬ್ರಹ್ಮನ ಆನಂದಕ್ಕೆ ಸಮಾನವಾದ ಸುಖಭೋಗವುಳ್ಳ ಮುಕ್ತರು ಅವನಿಗಿಂತ ಶ್ರೇಷ್ಠರೇ ಆದರು. ಸೇವೆಮಾಡಿ ನೂರಾರು ರೂಪಾಯಿಗಳನ್ನು ಹೊಂದುವ ಅಧಿಕಾರಿಗಿಂತ ಮನೆಯಲ್ಲಿಯೇ ಕುಳಿತು ನೂರು ರೂಪಾಯಿಗಳನ್ನು ಸಂಪಾದಿಸುವನು ಶ್ರೇಷ್ಠನು ಎಂದು ಲೋಕಾನುಭವಸಿದ್ಧವಾಗಿರುವುದು.

5. ಮುಕ್ತರು ಪೂರ್ಣರಾದರೂ ಇಚ್ಛಾಮಾತ್ರದಿಂದ ಪರಮಾತ್ಮನ ಅಧೀನರಾಗಿ ಕೈಂಕರ್ಯಭಾವವನ್ನು ಹೊಂದಿರುವರೆಂಬ ರಾಮಾನುಜತತ್ವವು ಅಪಹಸನೀಯ ಪ್ರಕ್ರಿಯೆಯು. ಹೇಗೆಂದರೆ, ಒಬ್ಬ ಪುರುಷನು ಸಮಾನನಾದ ತನ್ನ ಮಿತ್ರನಲ್ಲಿ ಬಹು ಪ್ರಿತಿಯುಕ್ತನಾಗಿರುವನು; ಆದರೆ ಕೈಂಕರ್ಯಧರ್ಮವನ್ನು ಅವಲಂಬಿಸಲಾರನು. **ಸಾಮ್ಯವು ಮೈತ್ರೀಭಾವಕ್ಕೆ ಕಾರಣವಾಗಿರುವುದು** ಮತ್ತು ಕೈಂಕರ್ಯಕ್ಕೆ ಪ್ರತಿಬಂಧಕವು. ಪ್ರೀತಿಯು ನಾನಾವಿಧವಾಗಿರುವುದು. ಗುರುಗಳಲ್ಲಿ ಪ್ರೀತಿಯು, ಮಿತ್ರನಲ್ಲಿ ಪ್ರೀತಿಯು, ಪತ್ನಿಯಲ್ಲಿ ಪ್ರೀತಿಯು ಮತ್ತು ನಂಬಿದ ಭೃತ್ಯನಲ್ಲಿ ಪ್ರೀತಿಯು ಇವು ನಾಲ್ಕು ಪರಸ್ಪರ ಅತ್ಯಂತ ವಿಲಕ್ಷಣವಾದ ಧರ್ಮಗಳು. ಭೃತ್ಯಾದಿಗಳಲ್ಲಿ ಮಾಡುವ ಪ್ರೀತಿಯು ಗುರುಗಳಲ್ಲಿ ಮಾಡಲ್ಪಟ್ಟರೆ ಅವಜ್ಞೆಯೆನ್ನಿಸುವುದು. ಹೀಗಿಯೇ ಒಬ್ಬರಲ್ಲಿ ತೋರಿಸುವ ಪ್ರೀತಿವಿಶೇಷವನ್ನು ಮತ್ತೊಬ್ಬರಲ್ಲಿ ತೋರಿಸುವುದು ಜೀವಸ್ವಾಭಾವಿಕವೂ ಅಲ್ಲ, ಲೋಕದಲ್ಲೂ ಹಾಸ್ಯಾಸ್ಪದವಾಗುವುದು. ಯಾವ ಪುರುಷನೂ ತನ್ನ ಮಿತ್ರನಲ್ಲಿ ಕೈಂಕರ್ಯವನ್ನು **ಮನಃಪೂರ್ವಕವಾಗಿ** ಮಾಡಲಾರನು. ಲೌಕಿಕಕಾರಣಗಳಿಂದ, ಲೋಕವಿಡಂಬನಾರ್ಥವಾಗಿಯೋ ಅಥವಾ ತನ್ನ ಮಿತ್ರನ ಪ್ರಯೋಜನಾರ್ಥವಾಗಿಯೋ, ಬಾಹ್ಯ ಕೈಂಕರ್ಯಧರ್ಮಗಳನ್ನು ಪ್ರಕಟನೆಮಾಡಬಹುದು. ಆದರೆ **ಮನಸ್ಸಿನಲ್ಲಿ** ಸರ್ವಥಾ ಮೈತ್ರೀಭಾವರೂಪವಾದ ಪ್ರೀತಿಯನ್ನು ಮಾಡುವನೇ ಹೊರತು ಉತ್ತಮವಾದ ಗುರ್ವಾದಿಗಳಲ್ಲಿ ಮಾಡುವ ಭಕ್ತ್ಯಾದಿರೂಪವಾದ ಪ್ರೀತಿಯನ್ನು ಮಾಡಲಾರನು. ಹೀಗಿರುವುದರಿಂದ ಶ್ರೀಭಾಷ್ಯಕಾರರು ಹೇಳುವಂತೆ, ಮುಕ್ತರೂ ಬ್ರಹ್ಮನ ಆನಂದಕ್ಕೆ ಸಮಾನವಾದ ಆನಂದ ಉಳ್ಳವರಾದರೆ ತಮ್ಮ ಸ್ವೇಚ್ಛೆಯಿಂದ **ಕೈಂಕರ್ಯ**ಭಾವವನ್ನು ಹೊಂದಿರುವರೆಂದು ಹೇಳುವುದು ಲೋಕವಿರುದ್ಧವಾದ ಪ್ರಕ್ರಿಯೆಯು. ಮುಕ್ತರು ಆನಂದದಿಂದ ಬ್ರಹ್ಮಸಾಮ್ಯವನ್ನು ಹೊಂದಿದರೂ ಜ್ಞಾನ, ಬಲ, ವೀರ್ಯ, ತೇಜಸ್ಸು ಮುಂತಾದ ಗುಣಗಳು ಪರಮಾತ್ಮನಿಗಿರುವಷ್ಟು ಇರುವುದಿಲ್ಲ ಎಂದು ಸಹ ಹೇಳಲಾಗುವುದಿಲ್ಲ. ರಾಮಾನುಜಾಚಾರ್ಯರು ಆನಂದ ಬೇರೆ ಜ್ಞಾನ ಬೇರೆ ಎಂದು ಹೇಳದೆ ಜ್ಞಾನವೇ (ವಸ್ತು ಸಾಕ್ಷಾತ್ಕಾರವೇ) ಆನಂದವೆಂದು ಹೇಳಿಬಿಟ್ಟಿರುತ್ತಾರೆ. ಆದುದರಿಂದ ಆನಂದಸಾಮ್ಯವನ್ನು ಒಪ್ಪಿದರೆ ಜ್ಞಾನಸಾಮ್ಯವನ್ನು ಒಪ್ಪಿದಹಾಗಾಯಿತು. ಬಲ ವೀರ್ಯಾದಿ ಸಕಲ ಗುಣಗಳೂ ಮುಕ್ತರಲ್ಲೂ ಪರಬ್ರಹ್ಮನಲ್ಲಿರುವಷ್ಟೇ ಇರುವುವು. ಹೇಗೆಂದರೆ ಆನಂದವು ಐಶ್ವರ್ಯಪ್ರಯೋಜ್ಯವಾದುದು. ಯಾವನಿಗೆ ಎಷ್ಟು ಐಶ್ವರ್ಯವೋ

ತದನುಗುಣವಾಗಿ ತನ್ನಿಮಿತ್ತಕವಾದ ಆನಂದವನ್ನು ಅಚೇತನನು ಅನುಭವಿಸುವನು ಎಂದು ಲೋಕಸಿದ್ಧವಾಗಿರುವುದು. ಮುಕ್ತರ ಆನಂದವು ಬ್ರಹ್ಮಾನಂದತುಲ್ಯ ವಾದರೆ ಮುಕ್ತರ ಬಲ, ವೀರ್ಯಾದಿಗಳೂ ಬ್ರಹ್ಮನ ವೀರ್ಯಾದಿಗಳಿಗೆ ಸಮಾನವೇ ಆಗಿರಬೇಕು. “ ಐಶ್ವರ್ಯಸಾಮ್ಯಾಭಾವೇ ಆನಂದಸಾಮ್ಯಾಭಾವಪ್ರಸಂಗಃ. ” ಆದುದರಿಂದ ಮುಕ್ತರೂ ಬ್ರಹ್ಮನೂ ಸರ್ವ ವಿಷಯದಲ್ಲಿಯೂ ಸಮಾನರೆಂದೂ ಪ್ರಾಪ್ತವಾಯಿತು. ಈ ಮತವು ನಿಜವಾದರೆ ಸರ್ವಕಾಮಾದಿಗಳಿಂದ ರಹಿತವಾದ ಮುಕ್ತಿಸ್ಥಾನದಲ್ಲಿ, ಮುಕ್ತರೆಲ್ಲರೂ ವಿಷ್ಣುವಿನಲ್ಲಿ ಮೈತ್ರೀಭಾವದಿಂದ ಪ್ರೀತಿಮಾ ಡುತ್ತಾ ಇರುವುದು ಉಚಿತವು; ಮತ್ತು ವಿಷ್ಣುವೂ ಅವರಲ್ಲಿ ಮೈತ್ರೀಭಾವದಿಂದ ಪ್ರೀತಿಮಾಡುವುದು ಉಚಿತವು. ಅಷ್ಟೇ ವಿನಃ ಮುಕ್ತರು ಮಾತ್ರ ವಿಷ್ಣುವನ್ನು ಧ್ಯಾನಮಾಡುವುದು ಮತ್ತು ವಿಷ್ಣುವು ಅವರ ಸೇವೆಯನ್ನು ಸ್ವಾಮಿಭಾವದಿಂದ ಸ್ವೀಕರಿಸುವುದೂ ಅನುಚಿತವಾಗುವುದು. ಸಾಮ್ಯವಿದ್ದರೆ **ಪರಸ್ಪರಧ್ಯಾನವು, ಪರಸ್ಪರ ಸೇವೆಯು** ಅವಶ್ಯಕವು. ವಿಷ್ಣುಧ್ಯಾನದಲ್ಲಿ ಮುಕ್ತರು ಆಸಕ್ತರಾದರೆ, ವಿಷ್ಣುವೂ ಮುಕ್ತರ ಪ್ರತಿಮಾದಿಗಳನ್ನು ಮಾಡಿಸಿಕೊಂಡು ಅವರನ್ನು ಕುರಿತು ಕೆಲವು ಕಾಲ ಧ್ಯಾನಮಾಡುತ್ತಾ, ಅವರಿಗೋಸ್ಕರ ಯಜ್ಞಾದಿಗಳನ್ನು ಅವರ ಸೇವೆಗೆ ಪ್ರತಿಯಾಗಿ ಮಾಡಬೇಕಾಗುವುದು. ಹೀಗೆ ವಿಷ್ಣುವು ಮೈತ್ರೀಭಾವ ದಿಂದ ಮುಕ್ತರ ಸೇವೆಯನ್ನು ಮಾಡುವನೆಂದು ಹೇಳುವಷ್ಟು ಧೈರ್ಯವು ರಾಮಾ ನುಜಾಚಾರ್ಯರಿಗೂ ಬರಲಿಲ್ಲ. ಆದುದರಿಂದ ಕೈಂಕರ್ಯಭಾವವನ್ನು ಮುಕ್ತಿ ಯಲ್ಲಿ ಒಪ್ಪಿರುವ ರಾಮಾನುಜಾಚಾರ್ಯರು (ಅದಕ್ಕೆ ವ್ಯಾಪಕವಾದ) ತಾರ ತಮ್ಯವನ್ನು ಅವರ ನ್ಯಾಯಾನುಸಾರವಾಗಿ ಒಪ್ಪಲೇಬೇಕು.

ಮುಕ್ತಿಯಲ್ಲೂ **ಸ್ವಭಾವಸಿದ್ಧವಾದ** ದಾಸ್ಯಭಾವವೇ (ಅಧಮತ್ವ ವೇ) ಜೀವರಿಗೂ ಇರುವುದೆಂದು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳುತ್ತಾನೆ :—

(1) ....**ಕೂಟಸ್ಥೋಽಕ್ಷರ ಉಚ್ಯತೇ ।**

ಉತ್ತಮಃಪುರುಷ ಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ॥

—(15. 17.)

........**ಕ್ಷರಮತೀತೋಽಹ ಮಕ್ಷರಾದಪಿಚೋತ್ತಮಃ ।**—(15. 18.)

ಸರ್ವಕಾರಳಾದ ಲಕ್ಷ್ಮೀದೇವಿಯು ಅಕ್ಷರಪುರುಷಳು. ಪರಮಾತ್ಮನು ಅವಳಿಗಿಂತ ಉತ್ತಮಪುರುಷನು. ನಾನು (ಶ್ರೀಕೃಷ್ಣನು) ಕ್ಷರಪುರುಷರಿಗಿಂ ತಲೂ ಅಧಿಕನು, ಅಕ್ಷರಚೇತನಳಾದ ಲಕ್ಷ್ಮೀದೇವಿಗಿಂತಲೂ ಅಧಿಕನು.

(2) **ಅಪರೇಯ ಮಿತಸ್ತ್ವನ್ಯಾಂ ಪ್ರಕೃತಿಂವಿದ್ಧಿಮೇಪರಾಂ ।**

ಚೇತನಾಚೇತನ ಸರ್ವ ಜಗತ್ತಿಗಿಂತಲೂ ಭಿನ್ನಳಾದ ಚೇತನ ಪ್ರಕೃತಿಯು ಇವುಗಳಿಗಿಂತ ಭಿನ್ನಳೆಂದೂ ನನ್ನ ಅಧೀನಳೆಂದೂ ತಿಳಿ.

ಇವೇ ಮುಂತಾದ ಅನೇಕ ವಾಕ್ಯಗಳಿಂದ ನಿತ್ಯಮುಕ್ತಳಾದುದರಿಂದಲೂ, ಭಗವಂತನಿಗೆ ಅತಿ ಸಮೀಪದಲ್ಲಿರುವುದರಿಂದಲೂ ಮುಕ್ತವರ್ಗದಲ್ಲೆಲ್ಲಾ ಶ್ರೇಷ್ಠಳಾದ ಲಕ್ಷ್ಮೀದೇವಿಯು ಸ್ವಾಭಾವಿಕವಾಗಿ ಭಗವದ್ದಾಸಿಯು ಎಂದು ಸಿದ್ಧವಾಯಿತು. ಲಕ್ಷ್ಮಿಗೂ ಪರಮಾತ್ಮನಿಗೂ ಆನಂದಸಾಮ್ಯಾದಿಗಳು ಇದ್ದರೆ ಮೈತ್ರೀಭಾವವು ಕೂಡುತ್ತಿತ್ತು. ಶ್ರೀಕೃಷ್ಣನು ನನ್ನ ಅಧೀನಳು ಲಕ್ಷ್ಮಿಯು, ನಾನು ಅಧ್ಯಕ್ಷನು, ನಾನು ಅವಳಿಗೆ ಆಧಾರಭೂತನು, ನಾನು ಅವಳಿಗಿಂತ ಉತ್ತಮನು ಇತ್ಯಾದಿ ರೀತಿಯಲ್ಲಿ ಅರ್ಜುನನಿಗೆ ಉಪದೇಶವನ್ನು ಮಾಡುತ್ತಿರಲಿಲ್ಲ. ಲಕ್ಷ್ಮಿಯು ಸ್ವಾಭಾವಿಕವಾಗಿ ತನ್ನ ಅಧೀನಳೆಂದೇ ಶ್ರೀಕೃಷ್ಣನು ಹೇಳಿರುತ್ತಾನೆ. ಕೈಮುತ್ಯನ್ಯಾಯದಿಂದ ಸಕಲ ಮುಕ್ತವರ್ಗವೂ ವಿಷ್ಣುವಿನ ಅಧೀನವೇ ಎಂದು ಸಿದ್ಧವಾಗುವುದು. ಶ್ರೀ ಕೃಷ್ಣನು ಹೇಳುತ್ತಾನೆ:—

(3) **ಬ್ರಹ್ಮಣೋಹಿಪ್ರತಿಷ್ಠಾಹಮಮೃತಸ್ಯಾವ್ಯಯಸ್ಯಚ ।**
ಶಾಶ್ವತಸ್ಯಚಧರ್ಮಸ್ಯಸುಖಸ್ಯೈಕಾಂತಿಕಸ್ಯಚ ॥—14. 27)

ನಾನು ಲಕ್ಷ್ಮೀದೇವಿಗೆ ಆಧಾರಭೂತನು. ಅವ್ಯಯವಾದ ಮುಕ್ತಿವರ್ಗಕ್ಕೆ ಆಧಾರಭೂತನು. ಶಾಶ್ವತಧರ್ಮಕ್ಕೆ ಮತ್ತೂ ಮುಕ್ತಿಸುಖಕ್ಕೂ ನಿಯಾಮಕನು.

ಇದರಿಂದ ಮುಕ್ತರ ಆನಂದವು ವಿಷ್ಣುವಿನ ಅಧೀನವಾಗಿಯೇ ಇರುವುದೆಂದು ಸಿದ್ಧವಾಗುವುದು. ವಿಷ್ಣುವಿಗೆ **ಅಧೀನ**ನಾದ ಮತ್ತೊಬ್ಬ ಚೇತನನ ಆನಂದವು ವಿಷ್ಣುವಿನ ಆನಂದಕ್ಕೆ ಸಮಾನವಾದುದೆಂದು ಹೇಳುವುದು ಲೋಕ ವಿರುದ್ಧವು. ರಾಜನ ಆನಂದಕ್ಕೆ ಭೃತ್ಯನ ಆನಂದವು ಎಂದೂ ಸಮಾನವಾಗಲಾರದು, ಮತ್ತು ವಿಲಕ್ಷಣವಾಗಿಯೂ ಇರುವುದು. ಸ್ವಾಮಿಭಾವಪ್ರಯುಕ್ತವಾದ ಭೃತ್ಯಸೇವಾದಿ ಜನಿತ ರಾಜನ ಆನಂದವು ವಿಲಕ್ಷಣವು; ಭೃತ್ಯಭಾವ ಪ್ರಯುಕ್ತ ಸ್ವಾಮಿಪ್ರೀತಿಜನಿತಭೃತ್ಯನ ಆನಂದವು ವಿಲಕ್ಷಣವು. ಹೀಗಿರುವುದರಿಂದ ಸ್ವಾಮಿಭೃತ್ಯನ್ಯಾಯೋಪೇತರಾದ ವಿಷ್ಣುವಿಗೂ ಮುಕ್ತರಿಗೂ ಇರುವ ಆನಂದವು ವಿಲಕ್ಷಣವಾಗಿಯೂ ತಾರತಮ್ಯೋಪೇತವಾಗಿಯೂ ಇರುವುದೆಂದೇ ಅಂಗೀಕರಿಸಬೇಕು.

ಅಧಿಕ ದೋಷೋದ್ಘಾಟನೆಯಿಂದೇನು? ಮುಕ್ತರ ಆನಂದವು ಬ್ರಹ್ಮಾನಂದಕ್ಕೆ ಸದೃಶವಾಗಿದ್ದರೆ, ಭಾಗವತಕಾರರು "ಅರ್ಥೇಷ್ವಭಿಜ್ಞಃಸ್ವರಾಟ್" ಎಂಬಲ್ಲಿ ಒಬ್ಬನನ್ನು ಸ್ವರಮಣನೆಂದು ಹೇಳದೆ, ಅನಂತಜನರು ಸ್ವರಮಣರೆಂದು ಹೇಳಬೇಕಾಗಿತ್ತು. ಹಾಗೆ ಹೇಳದೇ ವಿಷ್ಣುವು ಒಬ್ಬನೇ ಸ್ವರಮಣನೆಂದು ನಿರ್ಣಯಮಾಡಿರುವುದರಿಂದ ಮುಕ್ತರೆಲ್ಲರೂ ನಿರ್ದೋಷತ್ವ, ದುಃಖರಾಹಿತ್ಯ, ಅಪುನರಾವೃತ್ತಿತ್ವ, ಶಾಶ್ವತಸುಖಾನುಭವ ಇತ್ಯಾದಿ ಸಾಮಾನ್ಯಧರ್ಮಗಳಿಂದ ವಿಷ್ಣುಸಾಮ್ಯವನ್ನು ಹೊಂದುವರು; ಕೆಲವರು ವಿಷ್ಣುರೂಪಕ್ಕೆ ಸದೃಶವಾದ ರೂಪವನ್ನೂ ಹೊಂದುವರು ಎಂದು ಹೇಳಬಹುದು. ಇದೇ ಪರಮಸಾಮ್ಯವು. ಇದೇ ಸಾಧರ್ಮ್ಯಪ್ರಾಪ್ತಿಯು. ಇದಕ್ಕಿಂತ ಭಿನ್ನವಾದ ಪೂರ್ಣಾನಂದಸಾಮ್ಯವು ಬಹುಪ್ರಮಾಣವಿರುದ್ಧವಾದ ಕುಕಲ್ಪನೆಯು.

7 ಸಾಂಖ್ಯಮುಕ್ತಿಯು ಜನಮನೋರಂಜಕವಾದ ಪ್ರಕ್ರಿಯೆಯು.

"ಬಧ್ಯತೇ ಮುಚ್ಯತೇಚ........ಪ್ರಕೃತಿಃ"

ಎಂಬ ಸಾಂಖ್ಯಕಾರಿಕೆಯಲ್ಲಿ ಪ್ರಕೃತಿಗೇ ಬಂಧವು, ಪ್ರಕೃತಿಗೇ ಮೋಕ್ಷವು ಎಂದು ಹೇಳಲ್ಪಟ್ಟಿರುವುದು. ಆತ್ಮನು (ಪುರುಷನು) ಪ್ರಕೃತಿಸಂಬಂಧರಹಿತನಾದವನು. ಅವನಿಗೆ ಬಂಧವೂ ಇಲ್ಲ. ಮುಕ್ತಿಯೂ ಇಲ್ಲ. ಬಂಧನಾಗಿರುವೆನೆಂಬ ಭ್ರಮವೂ ಆತ್ಮನಿಗಿರುವುದಿಲ್ಲ. ಪ್ರಕೃತಿಯೇ ಭ್ರಮವನ್ನು ತನ್ನ ಪರಿಣಾಮವಿಶೇಷವಾದ ಅಂತಃಕರಣದಲ್ಲಿ ನಿರ್ಮಾಣಮಾಡಿ, ತಾನೇ ರಂಗಸ್ಥಳದಲ್ಲಿ ನಾಟ್ಯವು ಮುಗಿದನಂತರ ನರ್ತಕಿಯು ರಂಗಮಂಟಪವನ್ನು ಬಿಟ್ಟು ಹೊರಟುಹೋಗುವಂತೆ, ಪುರುಷಸನ್ನಿಧಾನದಿಂದ ದೂರಹೋಗುವುದು. ಪುರುಷನಿಗೆ ಪ್ರಕೃತಿಸಂಬಂಧಪ್ರಯುಕ್ತವಾಗಿ ದುಃಖಭೋಗವಾಗಲೀ, ಬಂಧನಿವೃತ್ತಿಯಿಂದ ದುಃಖಾಭಾವದ ಅಥವಾ ಸುಖದ ಅನುಭವವಾಗಲೀ ಇರುವುದಿಲ್ಲ.

ಈ ವಿಚಿತ್ರಕಲ್ಪನೆಯು ಅದ್ವೈತಮತದಲ್ಲಿ ಸನುಗ್ರವಾಗಿರುವುದು. ಅದ್ವೈತಬ್ರಹ್ಮನು ನಿಸ್ಸಂಗನು; ಆತ್ಮನಿಗೆ ಬಂಧವಿರುವುದಿಲ್ಲ, ಮುಕ್ತಿಯೂ ಇರುವುದಿಲ್ಲ. ಪ್ರಪಂಚವೆಲ್ಲವೂ ಅವಿದ್ಯಾಕಾರ್ಯವು, ಅಥವಾ ಪ್ರಕೃತಿಕಾರ್ಯವು. ನಾನು ಬದ್ಧನು ಎಂಬ ಭ್ರಮವೂ ಆತ್ಮನಿಗಿರುವುದಿಲ್ಲ; ನಿರ್ಧರ್ಮಕಬ್ರಹ್ಮಚೇತನನಿಗೆ ಭ್ರಮಉಳ್ಳೋಣವು ಎಲ್ಲಿಂದ ಬಂತು? ಆದುದರಿಂದ "ಅಹಂ" "ನಾನು" ಎಂಬ ಪದಾರ್ಥವು ಅಂತಃಕರಣವೆಂದೇ ಪ್ರಾಪ್ತವಾಯಿತು. ಅಂತಃಕರಣಕ್ಕೇ ಭ್ರಮವು, ಅಂತಃಕರಣದಿಂದಲೇ ಭ್ರಮನಿವೃತ್ತಿಯು; ಬಂಧಮುಕ್ತಿಗಳೆರಡೂ

ಅಂತಃಕರಣವಿವೇಕದಿಂದಲೇ ಹೊರತು ಅದ್ವೈತಾತ್ಮನು ಯಾವ ಪ್ರಕಾರದಿಂದಲೂ ಸಂಸಾರಕ್ಕೆ ಇಳಿಯತಕ್ಕವನಲ್ಲ. ಇದನ್ನು ಮನಸ್ಸಿನಲ್ಲಿಟ್ಟೇ ಪೂರ್ವಿಕರು "ಸಾಂಖ್ಯಸೌಗತಭಟ್ಟಾನಾಂ ಸಂಕರಾಚ್ಛಂಕರೋದಯಃ" ಎಂದು ಹೇಳಿರುವರು. ಸಾಂಖ್ಯರು ಅಂಗೀಕರಿಸಿರುವಂತೆ ನಿಷ್ಕ್ರಿಯನಾದ ಅಸಂಗನಾದ ಆತ್ಮನನ್ನೂ, ಸೌಗತರು ಹೇಳುವಂತೆ ಪ್ರತ್ಯಕ್ಷಾದಿ ಪ್ರಮಾಣಸಿದ್ಧವಾದ ಸಕಲ ಜಗತ್ತಿಗೂ ಅಸತ್ಯತ್ವವನ್ನೂ, ಭಾಟ್ಟರಿಂದ ಅಂಗೀಕೃತವಾದ ಕೆಲವು ಲೋಕನ್ಯಾಯಗಳನ್ನೂ ಒಟ್ಟುಗೂಡಿಸಿ ಅದ್ವೈತಮತವು ಪ್ರತಿಪಾದನೆ ಮಾಡುವುದು ಎಂದು ತಾತ್ಪರ್ಯಾರ್ಥವು. ಆದರೆ ಇಷ್ಟುಮಾತ್ರ ವೈಲಕ್ಷಣ್ಯವಿರುವುದು ; ಸಾಂಖ್ಯರು ಅನಂತ ಆತ್ಮರುಗಳನ್ನು ಒಪ್ಪಿರುವರು. ಅದ್ವೈತಿಗಳು ಒಂದೇ ಆತ್ಮವಸ್ತುವೆಂದು ಹೇಳುವರು. ವಸ್ತುತಃ ಇದು ಅಕಿಂಚಿತ್ಕರವಾದ ವಿಷಯವು. ಬಂಡೆಯಕಲ್ಲಿನಂತೆ ಸುಖದುಃಖಭೋಗರಹಿತನಾಗಿ "ನಾನು" ಎಂಬ ಜ್ಞಾನಕ್ಕೆ ಗೋಚರವಾಗದ ಬಂಧರಹಿತನಾದ ಮತ್ತು ಮೋಕ್ಷರಹಿತನಾದ ಆತ್ಮನು ಒಂದಾದರೇನು? ಹತ್ತಾದರೇನು? "ನಾನು" "ನಾನು" ಎಂಬ ನಾವುಗಳು ಬೇರೆಯಷ್ಟೇ! (ಅಂತಃಕರಣವಷ್ಟೆ!)

ಶ್ರೀಕೃಷ್ಣನು ಚೇತನನಿಗೇ ಬಂಧವೂ, ಚೇತನನಿಗೇ ಮುಕ್ತಿಯೂ, ಚೇತನನಿಗೇ ಬಂಧದಿಂದ ದುಃಖಭೋಗವೂ, ಚೇತನನಿಗೇ ಬಂಧನಿವೃತ್ತಿಯಿಂದ ದುಃಖಾಭಾವದ ಅನುಭವವೂ, ಸುಖಭೋಗವೂ ಉಂಟೆಂದು ಹೇಳುತ್ತಾನೆ. ಶ್ರೀಕೃಷ್ಣನು ಹೇಳುತ್ತಾನೆ:—

(1) **ಪುರುಷಃ ಪ್ರಕೃತಿಸ್ಥೋಹಿಭುಂಕ್ತೇಪ್ರಕೃತಿಜಾನ್ಗುಣಾನ್ ।**

—(13. 22.)

ಚೇತನನು ಪ್ರಕೃತಿನಿರ್ಮಿತ ಶರೀರದಲ್ಲಿ ಸ್ಥಿತನಾಗಿ ಪ್ರಕೃತಿನಿರ್ಮಿತ ಸುಖದುಃಖಾದಿಗಳನ್ನು ಭುಂಕ್ತೇ= ಭೋಗಿಸುತ್ತಾನೆ, ಅನುಭವಿಸುತ್ತಾನೆ.

(2) **ಭೂತಪ್ರಕೃತಿಮೋಕ್ಷಂಚಯೇವಿದುರ್ಯಾಂತಿತೇಪರಂ ।**

—(13. 15.)

ಭೂತಾನಾಂ= ಪ್ರಾಣಿಗಳಿಗೆ, ಪ್ರಕೃತಿರೂಪವಾದ ಬಂಧದ ದೆಸೆಯಿಂದ ಬಿಡುಗಡೆಯನ್ನೂ ಮತ್ತು ಬಿಡುಗಡೆಯ ಉಪಾಯವನ್ನೂ ಯಾರು ತಿಳಿಯುತ್ತಾರೆಯೋ ಅವರು ಪರಮಾತ್ಮನನ್ನು ಹೊಂದುತ್ತಾರೆ. ಪ್ರಾಣಿಗಳಿಗೆ ಬಂಧನಿವೃ

ತ್ತಿಗೆ ಬೇಕಾಗುವ ಸಾಧನೆಗಳನ್ನು ತಿಳಿದು, ಅನುಷ್ಠಾನಮಾಡಿ ಪರಮಾತ್ಮನನ್ನು ಹೊಂದುತ್ತಾರೆ ಎಂದು ಅರ್ಥವು.

(3) **ಬಹವೋಜ್ಞಾನತಪಸಾ ಪೂತಾಮದ್ಭಾವಮಾಗತಾಃ** ।—(4. 10.)

ಅನೇಕ ಜೇತನರು ಜ್ಞಾನದಿಂದಲೂ ತಪಸ್ಸಿನಿಂದಲೂ ಶುದ್ಧರಾಗಿ ಮುಕ್ತರಾದರು.

(4) **ಸಬ್ರಹ್ಮಯೋಗಯುಕ್ತಾತ್ಮಾಸುಖಮಕ್ಷಯ್ಯಮಶ್ನುತೇ** ।

—(5. 21.)

ಧ್ಯಾನಾರೂಢನಾದ ಯೋಗಿಜೇತನನು ಮುಕ್ತನಾಗಿ ನಾಶರಹಿತವಾದ ಸುಖವನ್ನು ಅನುಭವಿಸುತ್ತಾನೆ.

ಜಡವಾದ ಅಂತಃಕರಣವು ಅಥವಾ ಬುದ್ಧಿವಿಶೇಷವೇ "ನಾನು" ಎಂಬ ಅನುಭವಸಿದ್ಧನಾದ ಜೀವಪದಾರ್ಥವು ; ಜಡಕ್ಕೇ ಬಂಧವು, ಜಡಕ್ಕೇ ಮುಕ್ತಿಯು ಎಂದು ಅಭಿಪ್ರಾಯಪೂರ್ವಕವಾಗಿ ಪ್ರತಿಪಾದನೆ ಮಾಡುವ ವಾದವು ದೇಹಾತ್ಮವಾದ ವಾದ ಚಾರ್ವಾಕಮತದ ರೂಪಾಂತರವೆಂದೇ ನಿಶ್ಚಯಿಸಬಹುದು. ಅಥವಾ ಅನುಭವಸಿದ್ಧವಾದ ಪದಾರ್ಥಗಳನ್ನೆಲ್ಲಾ ಒಪ್ಪಿಕೊಂಡಿರುವುದರಿಂದ ಜೀವನಿಗೇ ಜಡವೆಂದು ಹೆಸರು ಇಟ್ಟ ಹಾಗಾಯಿತೇ ಹೊರತು ಜೇತನನಿಗೆ ಬಂಧಮೋಕ್ಷಗಳಿಲ್ಲವೆಂದು ಹೇಳಿದ ಹಾಗಾಗಲಿಲ್ಲ.

8 ಇನ್ನು ಬ್ರಹ್ಮೈಕ್ಯವು ಮುಕ್ತಿಯು ಎಂಬ ಅದ್ವೈತವಾದದ ಪರಿಶೀಲನೆಯು ಒಂದು ಉಳಿಯಿತು. ಸಿದ್ಧವಾದ ಬ್ರಹ್ಮಭಾವವನ್ನು ನೂತನವಾಗಿ ಹೊಂದುವುದು ಅಶಕ್ಯವಾದುದರಿಂದ ಬ್ರಹ್ಮೈಕ್ಯರೂಪವಾದ ಮುಕ್ತಿಯು ಅದ್ವೈತಮತದ ರೀತ್ಯಾ ದುರ್ನಿರೂಪವಾಗಿರುವುದೆಂದು ಹಿಂದೆಯೇ ನಿರೂಪಿಸಿರುತ್ತೇವೆ. ಮತ್ತು ಭೋಕ್ತೃಭೋಗ್ಯಭೋಗಗಳೆಂಬ ವಿವೇಕರಹಿತವಾದ ಅನುಸಂಧಾನರಹಿತವಾದ ಬ್ರಹ್ಮಭಾವವು ಜಡತ್ವಪ್ರಾಪ್ತಿಯೋಪಾದಿಯಲ್ಲಿ ಪುರುಷಾರ್ಥವೆನ್ನಿಸಲಾರದೆಂದೂ, ಹಾಗೆಯೇ "ನಾನು ನಾನು" ಎಂಬ ಜೀವಭಾವದ ನಾಶರೂಪವಾದುದರಿಂದ ಯಾರಿಂದಲೂ ಅಪೇಕ್ಷಿತವಾಗುವುದಿಲ್ಲವೆಂದೂ ನಿರೂಪಿಸಲ್ಪಟ್ಟಿತು. ಮುಖ್ಯವಾಗಿ ಜೀವಬ್ರಹ್ಮರು ಒಂದೇ ಎಂಬಲ್ಲಿ **ನಿರವಕಾಶವಾದ ಮುಖ್ಯಾರ್ಥದಿಂದಲೇ ಈ ಪ್ರಮೇಯವನ್ನು ಬೋಧಿಸುವ ಶ್ರುತಿಯು ಒಂದೂ ಇರುವುದಿಲ್ಲ**ವೆಂದು ಅದ್ವೈತಿಗಳೂ ಹೇಳುತ್ತಾರೆ. ನಾವೂ ಹೇಳುತ್ತೇವೆ. ಬೃಹದಾರಣ್ಯಕೋಪನಿಷಚ್ಛಾಂಕರಭಾಷ್ಯವು ಈ ವಿಷಯದಲ್ಲಿ ಸ್ಫುಟವಾಗಿರುತ್ತದೆ:—

" ನಕೇವಲಮುಪನಿಷದೋಬ್ರಹ್ಮೈಕತ್ವಂಪ್ರತಿಪಾದಯಂತ್ಯಃ ಸ್ವಾರ್ಥಪಿಘಾತಂ ಕರ್ಮಕಾಂಡವಿಘಾತಂಚಕುರ್ವಂತಿ । ಪ್ರತ್ಯಕ್ಷಾದಿನಿಶ್ಚಿತಭೇದಪ್ರತಿಪತ್ತ್ಯರ್ಥಪ್ರಮಾಣೈಶ್ಚವಿರುಧ್ಯಂತೇ। ತಸ್ಮಾದಪ್ರಾಮಾಣ್ಯಮೇವೋಪನಿಷದಾಂ ಆನ್ಯಾರ್ಥತಾವಾಸ್ತುನತ್ವೇವ ಬ್ರಹ್ಮೈಕತ್ವಪ್ರತಿಪತ್ತ್ಯರ್ಥತಾ ॥

ಅರ್ಥವು—(ತತ್ವಮಸ್ಯಾದಿ) ಉಪನಿಷತ್ತುಗಳು ಬ್ರಹ್ಮೈಕ್ಯವನ್ನು ಪ್ರತಿಪಾದನೆ ಮಾಡುವುವೆಂದು ಹೇಳಿದರೆ ಸೃಷ್ಟ್ಯಾದಿಗಳನ್ನು ಪ್ರತಿಪಾದಿಸುವ ಇತರ ಉಪನಿಷದ್ಭಾಗಗಳಿಗೂ ಮತ್ತು ಕರ್ಮಕಾಂಡರೂಪವಾದ ಸಕಲ ವೇದಭಾಗಗಳಿಗೂ ಮಾತ್ರವೇ ವಿರುದ್ಧವಾಗುವುದೆಂದಲ್ಲ. ಮತ್ತೇನೆಂದರೆ, ಭೇದಜ್ಞಾನವನ್ನೇ ಹುಟ್ಟಿಸುವುದೆಂದು ನಿಶ್ಚಿತವಾದ ಪ್ರತ್ಯಕ್ಷಪ್ರಮಾಣಗಳಿಗೂ ಮತ್ತು ಅನುಮಾನ ಪ್ರಮಾಣಗಳಿಗೂ ವಿರುದ್ಧವಾಗಿರುವುವು. ಆದುದರಿಂದ ಐಕ್ಯಬೋಧಕಶ್ರುತಿಗಳಿಗೆ ಅಪ್ರಾಮಾಣ್ಯವನ್ನಾಗಲೀ, ಅನ್ಯಾರ್ಥವನ್ನಾಗಲೀ ಯಾತಕ್ಕೆ ಹೇಳಬಾರದು ?

ಇದು ಶಂಕಾಗ್ರಂಥವು. ಇದರಿಂದ ಐಕ್ಯಬೋಧಕಪ್ರಮಾಣಗಳು ಇಷ್ಟೇ ಎಂದು ನಿರ್ಣಯಮಾಡಿ ಶಂಕರಾಚಾರ್ಯರು ಹೇಳಿದಂತಾಯಿತು. ಹೇಗೆಂದರೆ—

ಸಕಲ ಪ್ರತ್ಯಕ್ಷಪ್ರಮಾಣವು— ಜೀವಬ್ರಹ್ಮರ ಭೇದಬೋಧಕವು. ಅನುಮಾನಪ್ರಮಾಣವು— ಭೇದಬೋಧಕವು. ಮಂತ್ರಬ್ರಾಹ್ಮಣರೂಪವಾದ ವೇದಭಾಗಗಳು— ಭೇದಬೋಧಕಗಳು. ಸೃಷ್ಟ್ಯಾದಿಗಳನ್ನು ಹೇಳುವ ಉಪನಿಷದ್ಭಾಗಗಳು— ಭೇದಬೋಧಕಗಳು. ಪೂರ್ವೋಕ್ತ ಸಕಲ ಪ್ರಮಾಣಗಳಿಗೂ ವಿರುದ್ಧವಾದ ತತ್ವಮಸಿ, ಅಹಂಬ್ರಹ್ಮಾಸ್ಮಿ ಮುಂತಾದ ನಾಲ್ಕೈದು ವಾಕ್ಯಗಳು— ಐಕ್ಯಬೋಧಕಗಳು.

ಈ ರೀತಿಯಾಗಿ ಜೀವಬ್ರಹ್ಮರ ಐಕ್ಯವಿಷಯದಲ್ಲಿ ತತ್ವಮಸ್ಯಾದಿ ನಾಲ್ಕೈದುವಾಕ್ಯಗಳು ಹೊರತು ಇನ್ನು ಯಾವ ಪ್ರಮಾಣವೂ ಇರುವುದಿಲ್ಲ. ಅಷ್ಟೇ ಅಲ್ಲ. ಇರುವ ಪ್ರಮಾಣಗಳೆಲ್ಲಾ ಐಕ್ಯಾರ್ಥಕ್ಕೆ ವಿರುದ್ಧವಾಗಿಯೇ ಇರುವುವೆಂದು ಶಂಕರಾಚಾರ್ಯರೇ ಒಪ್ಪಿರುತ್ತಾರೆ. ಇನ್ನು ಈ ನಾಲ್ಕೈದು ವಾಕ್ಯಗಳ ಬಲವನ್ನು ವಿಮರ್ಶೆಮಾಡೋಣ.

1. ಅದ್ವೈತಿಗಳೇ ತತ್ವಮಸಿ ಮುಂತಾದ ಐದಾರು ವಾಕ್ಯಗಳು ಜೀವಬ್ರಹ್ಮರು ಅಭಿನ್ನರು ಎಂಬ ಅರ್ಥವನ್ನು ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಬರೆದಿರುತ್ತಾರೆ. ಹೇಗೆಂದರೆ ತತ್ವಮಸಿ ಎಂಬ ವಾಕ್ಯವನ್ನು ತತ್, ತ್ವಂ, ಅಸಿ ಎಂದು

ವಿಭಾಗಮಾಡಿ ಒಂದೊಂದು ಪದಕ್ಕೂ ಇರುವ ಅರ್ಥವನ್ನು ಯೋಜನೆಮಾಡಿದರೆ ಜೀವಪರಮಾತ್ಮರು ಅಭಿನ್ನರು ಎಂಬ ಅರ್ಥವು ಬರುವುದು. ಹೀಗೆ ವಿಭಾಗಮಾಡಿ ಅರ್ಥವನ್ನು ಮಾಡಬಾರದು ; ಮತ್ತೇನೆಂದರೆ ತತ್ವಮಸಿ ಎಂಬ ಅಖಂಡವಾಕ್ಯಕ್ಕೆ "ಚಿತ್" ಎಂದು ಅರ್ಥವು ಎಂದು ಅದ್ವೈತಿಗಳು ಹೇಳುತ್ತಾರೆ. ಏವಂಚ ತತ್ವ ಮಸಿ ಎಂದರೆ ಜೀವಬ್ರಹ್ಮರು ಅಭಿನ್ನರು ಎಂದು ಅರ್ಥವಲ್ಲ, **"ಬ್ರಹ್ಮ"** ಎಂದು ಇಷ್ಟೇ ಅಖಂಡಾರ್ಥವು ಎಂದು ಅವರ ಸ್ಪಷ್ಟಸಮ್ಮತಿಯು ಇರುವುದರಿಂದ ಮರಳಿನ ಮೇಲೆ ಕಟ್ಟಿದ ಮನೆಯಂತೆ ಐಕ್ಯಶಾಸ್ತ್ರವು ನಿರ್ಮೂಲವಾಯಿತು. ಜೀವಬ್ರಹ್ಮ ರು ಅಭಿನ್ನರು ಎಂಬಲ್ಲಿ ಪ್ರಮಾಣವನ್ನು ಕೇಳಿದಾಗ "ಬ್ರಹ್ಮ" ಎಂದು ಇಷ್ಟು ಮಾತ್ರವೇ ಬೋಧಿಸುವ ವಾಕ್ಯವು ಕೋಮಟಿಯ ಸಾಕ್ಷಿಯಂತೆ ಸಾಧಕವಾಗ ಲಾರದು. ಇದು ತತ್ವಮಸಿ ವಾಕ್ಯವು ಅಖಂಡಾರ್ಥಪರವೆಂದು ಹೇಳುವ ಅದ್ವೈ ತಿಗಳ ಮಾತು :—

ಸಂಸರ್ಗಾಸಂಗಿಸಮ್ಯಗ್ಧೀಹೇತುತಾಗಿರಾಮಿಯಂ ।
ಉಕ್ತಾಖಂಡಾರ್ಥತಾಯದ್ವಾತತ್ಪ್ರಾತಿಪದಿಕಾರ್ಥತಾ ॥

ಹೀಗೆ ಒಂದು ರೀತಿಯಲ್ಲಿ ಐಕ್ಯಶಾಸ್ತ್ರದ ನಿರಾಧಾರತೆಯು ಪ್ರಕಟಿಸಲ್ಪಟ್ಟಿತು.
2. ತತ್ವಮಸ್ಯಾದಿ ವಾಕ್ಯಗಳು ಅಖಂಡಾರ್ಥಪರವಲ್ಲ ಮತ್ತು ಸಂಸರ್ಗಜನಿತಬೋಧ ವನ್ನು (ಪದಗಳಿಗಿರುವ ಪ್ರತ್ಯೇಕ ಅರ್ಥಗಳ ಸಂಬಂಧಸಹಿತವಾದ ವಾಕ್ಯಾರ್ಥ ಜ್ಞಾನವನ್ನು) ಹುಟ್ಟಿಸುವುವು ಎಂದು ಹೇಳುವುದಾದರೂ ಅದ್ವೈತಿಗಳ ರೀತಿ ಯಿಂದಲೇ ಈ ವಾಕ್ಯಗಳು ಐಕ್ಯಕ್ಕೆ ಸಾಧಕವಾಗಲಾರವು ಎಂದು ತೋರಿಸ ಬಹುದು. ಅದು ಹೇಗೆಂದರೆ, ತತ್ವಮಸ್ಯಾದಿ ವಾಕ್ಯಗಳೂ **ಮುಖ್ಯಾರ್ಥದಿಂದ** ಜೀವಬ್ರಹ್ಮರ ಅಭೇದವನ್ನು ಪ್ರತಿಪಾದನೆ ಮಾಡುವುದಿಲ್ಲವೆಂದೂ ಶಂಕರಾಚಾ ರ್ಯರೇ ಹೇಳಿರುತ್ತಾರೆ. ಇದು ಅವರ ಮಾತು :—

ಐಕ್ಯಂತಯೋರ್ಲಕ್ಷಿತಯೋರ್ನವಾಚ್ಯಯೋರ್ನಿಗದ್ಯತೇಽನ್ಯೋ ನ್ಯವಿರುದ್ಧಧರ್ಮಿಣೋಃ॥

ತತ್‌ಪದಾರ್ಥವಾದ ಬ್ರಹ್ಮನೂ, ತ್ವಂಪದಾರ್ಥವಾದ ಜೀವನೂ ಒಂದು ಎಂದು **ಮುಖ್ಯವೃತ್ತಿ**ಯಿಂದ ಜೀವಬ್ರಹ್ಮರ ಅಭೇದವನ್ನು ತತ್ವಮಸ್ಯಾದಿ ಶ್ರುತಿ ಗಳು ಪ್ರತಿಪಾದಿಸುವುದಿಲ್ಲ. ಮತ್ತೇನೆಂದರೆ ಲಕ್ಷಣಾವೃತ್ತಿಯಿಂದ "ತತ್" ಪದದಿಂದ ಮತ್ತು "ತ್ವಂ" ಪದದಿಂದ **ಲಕ್ಷಿತವಾದ** ಚಿನ್ಮಾತ್ರಸು ಒಂದೇ ಎಂದು ಅರ್ಥಮಾಡಬೇಕು ಎಂದು ಹೇಳುತ್ತಾರೆ.

ಏವಂಚ ಜೀವಬ್ರಹ್ಮರ ಅಭೇದವನ್ನು **ಮುಖ್ಯವೃತ್ತಿಯಿಂದ** ಬೋಧಿಸುವ **ಒಂದು ಶ್ರುತಿಯೂ ಇರುವುದಿಲ್ಲ,** ಎಂದು ಶಂಕರಾಚಾರ್ಯರ ಸಮ್ಮತಿಯು ಪ್ರಾಪ್ತವಾಯಿತು.

ಲಕ್ಷಣಾವೃತ್ತಿಯಿಂದ ಜೀವಬ್ರಹ್ಮರ ಅಭೇದವನ್ನು ಪ್ರತಿಪಾದನೆ ಮಾಡುವ ವಾಕ್ಯಗಳಿರುತ್ತವೆ. ಇವು ಐಕ್ಯಾರ್ಥಕ್ಕೆ ಆಧಾರವು. ಇವುಗಳ ಬಲದಿಂದ ಮುಖ್ಯವೃತ್ತಿಯಿಂದಲೇ ಭೇದಬೋಧಕವಾದ ಸಕಲ ಪ್ರಮಾಣವನ್ನೂ ನಿರಾಕರಿಸುತ್ತೇವೆ ಎಂದು ಅದ್ವೈತವಾದಿಗಳ ಫಲಿತಸ್ಥಿತಿಯು.

ಇಲ್ಲಿ ಸ್ವಲ್ಪ ವಿಚಾರವು ಅವಶ್ಯಕವು. ಮುಖ್ಯವೃತ್ತಿಯಿಂದ ಬೇರೆ ಒಂದು ವಾಕ್ಯದಲ್ಲಿ ಜೀವಬ್ರಹ್ಮರ ಐಕ್ಯವನ್ನು ತಿಳಿದಿದ್ದರೆ ವಿವಾದಾಸ್ಪದವಾದ ತತ್ವಮಸಿ ಮುಂತಾದ ವಾಕ್ಯಗಳಲ್ಲಿ ಮುಖ್ಯಾರ್ಥಕ್ಕೆ ಬಾಧವನ್ನು ತೋರಿಸಿ ಶಕ್ಯಸಂಬಂಧವನ್ನು ಹೊಂದಿರುವ ಜೀವಬ್ರಹ್ಮೈಕ್ಯಪರವಾಗಿ ಲಕ್ಷಣಾವೃತ್ತಿಯಿಂದ ಅರ್ಥವನ್ನು ಮಾಡಬಹುದು. ಏವಂಚಲಕ್ಷಣಾವೃತ್ತಿಯಿಂದ ಐಕ್ಯವನ್ನು ತತ್ವಮಸಿ ಮುಂತಾದ ವಾಕ್ಯಗಳು ಪ್ರತಿಪಾದಿಸುವುವೆಂದು ಹೇಳುವುದಾದರೆ, 1. ಮುಖ್ಯವೃತ್ತಿಯಿಂದ ಹಿಂದೆಯೇ ಐಕ್ಯಜ್ಞಾನವು ಯಾವುದಾದರೂ ಒಂದು ವಾಕ್ಯದಿಂದ ಹುಟ್ಟಿರಬೇಕು. ಮತ್ತು 2. "ತತ್" "ತ್ವಂ" ಪದಾರ್ಥಗಳಾದ ಅಲ್ಪಜ್ಞಜೀವ, ಸರ್ವಜ್ಞ ಈಶ್ವರರಿಗೂ ಲಕ್ಷ್ಯವಾದ ಚೇತನೈಕ್ಯಕ್ಕೂ ಸಂಬಂಧವು ಇರಬೇಕು. ಪೂರ್ವದಲ್ಲಿ ಮುಖ್ಯವೃತ್ತಿಯಿಂದ ಅಜ್ಞಾತವಾದ ವಸ್ತುವು ಪ್ರಕೃತದಲ್ಲಿ ಲಕ್ಷಣಾವೃತ್ತಿಯಿಂದ ಬೋಧ್ಯವಾಗಲಾರದು.

ಅದ್ವೈತಮತದಲ್ಲಿ ತತ್ವಮಸ್ಯಾದಿ ವಾಕ್ಯಗಳಿಗೆ ಲಕ್ಷಣಾವೃತ್ತಿಯಿಂದ 'ಚಿನ್ಮಾತ್ರಬ್ರಹ್ಮನು' ಅಥವಾ ಐಕ್ಯವು ಎಂಬ ಅರ್ಥವನ್ನು ಹೇಳಿದರೆ, ಪೂರ್ವೋಕ್ತ ಎರಡು ತೊಂದರೆಗಳೂ ಪಾರ್ಶ್ವದ್ವಯದಲ್ಲಿರುವ ಎರಡು ಖಡ್ಗಗಳಂತೆ ಬಾಧಕವಾಗಿರುವುವು. ಐಕ್ಯಬೋಧಕವಾಗಿರುವ ವಾಕ್ಯಗಳು ಇವೈದು ವಿನಃ ಉಳಿದ ಸರ್ವವೇದಾದಿ ಪ್ರಮಾಣಗಳೂ ಭೇದಬೋಧಕಗಳೆಂದು ಶಂಕರಾಚಾರ್ಯರೇ ಒಪ್ಪಿಬಿಟ್ಟರು. ಈ ಐದು ವಾಕ್ಯಗಳೂ ಲಕ್ಷಣಾವೃತ್ತಿಯಿಂದಲೇ ಬ್ರಹ್ಮನನ್ನು ತಿಳಿಸುವುದಾದರೆ ಇನ್ನು ಯಾವ ಪ್ರಮಾಣದಿಂದ ಮುಖ್ಯವೃತ್ತಿಯಿಂದ ಚಿನ್ಮಾತ್ರಬ್ರಹ್ಮನನ್ನು ಅಥವಾ ಐಕ್ಯವನ್ನು ತಿಳಿಯುವುದು? ಆದುದರಿಂದ ಮುಖ್ಯವೃತ್ತಿಯಿಂದ ಅನ್ಯತ್ರ ಅಜ್ಞಾತವಾದ 'ಚಿನ್ಮಾತ್ರ'ವು ಅಥವಾ ಐಕ್ಯವು ಈ ತತ್ವಮಸ್ಯಾದಿ ವಿವಾದಾಸ್ಪದ ವಾಕ್ಯಗಳಲ್ಲಿ ಲಕ್ಷಣಾವೃತ್ತಿಯಿಂ

ದಲೂ ತಿಳಿಯಲ್ಪಡಲಾರದು. 2. ಮತ್ತು ಮುಖ್ಯಾರ್ಥವಾದ ಜೀವೇಶ್ವರರಿಗೂ ಲಕ್ಷ್ಯಾರ್ಥವಾದ ಚಿನ್ಮಾತ್ರನಿಗೂ ಅಥವಾ ಐಕ್ಯಕ್ಕೂ ಸಂಬಂಧವು ಯಾವುದು? ಅಸಂಬಂಧವೇ ಸಂಬಂಧವು. ಚಿನ್ಮಾತ್ರಬ್ರಹ್ಮನು ಅದ್ವೈತಮತದಲ್ಲಿ ಸರ್ವಸಂಬಂಧರಹಿತನು. ಐಕ್ಯವೂ ಬ್ರಹ್ಮಾತ್ಮಕವೆಂದೇ ಅದ್ವೈತಿಗಳು ಹೇಳುತ್ತಾರೆ. ಶಕ್ಯಾರ್ಥಕ್ಕೂ ಲಕ್ಷ್ಯಾರ್ಥಕ್ಕೂ ಸಂಬಂಧವಿಲ್ಲದಿರುವುದರಿಂದ ತತ್ವಮಸಿ ಮುಂತಾದ ವಾಕ್ಯಗಳಿಗೆ ಲಕ್ಷಣಾವೃತ್ತಿಯಿಂದಲೂ ಚಿನ್ಮಾತ್ರನೆಂದು ಅಥವಾ ಐಕ್ಯವೆಂದು ಅರ್ಥಮಾಡುವುದಕ್ಕೆ ಅವಕಾಶವಿರುವುದಿಲ್ಲ. 3. ಕಿಂಚ ಮುಖ್ಯಾರ್ಥವನ್ನು ಪರಿತ್ಯಾಗಮಾಡಿ ಲಾಕ್ಷಣಿಕಾರ್ಥವನ್ನು ಸ್ವೀಕಾರಮಾಡುವುದಾದರೆ, ಪ್ರಮಾಣಾಂತರದಲ್ಲಿ ಸಿದ್ಧವಾಗಿರುವ ಭೇದಪರವಾಗಿ ಅರ್ಥಮಾಡುವುದು ಉಚಿತವೇ ಹೊರತು, ಯಾವ ಒಂದು ಪ್ರಮಾಣದಲ್ಲೂ ಮುಖ್ಯವೃತ್ತಿಯಿಂದ ಸಿದ್ಧವಾಗದೇ ಇರುವ ಅಭೇದಪರವಾಗಿ ಅರ್ಥಮಾಡುವುದಕ್ಕೆ ಕಾರಣವಿರುವುದಿಲ್ಲ. 4. ಮತ್ತು ಭೇದಪರವಾಗಿ ಮುಖ್ಯವೃತ್ತಿಯಿಂದಲೇ ಈ ವಾಕ್ಯಕ್ಕೆ ಅರ್ಥಮಾಡಬಹುದು. ಸ-ಪಾಂಸುಲುಕ್ ಇತ್ಯಾದಿ ವ್ಯಾಕರಣಸೂತ್ರಾನುಸಾರವಾಗಿ **ತತ್** ಎಂಬ ಪದಕ್ಕೆ ಐದಾರು ವಿಭಕ್ತಿಗಳ ಅರ್ಥವೂ ಬರುವುದೆಂದು ಪಾಣಿನ್ಯಾಚಾರ್ಯರೇ **ವೈದಿಕ**ಪ್ರಕರಣದಲ್ಲಿ ನಿರೂಪಿಸಿರುತ್ತಾರೆ. ಇದರಿಂದ ಬ್ರಹ್ಮನಿಂದ ನೀನು ಇದ್ದೀ, ಬ್ರಹ್ಮನಿಗೋಸ್ಕರ ನೀನೂ ಇದ್ದೀ, ಬ್ರಹ್ಮನದೆಸೆಯಿಂದ ನೀನು ಹುಟ್ಟಿರುತ್ತೀ, ಬ್ರಹ್ಮನ ಭೃತ್ಯನು ನೀನು ಆಗಿರುತ್ತೀ. ಬ್ರಹ್ಮನ ಆಶ್ರಯದಲ್ಲಿ ನೀನು ಇರುತ್ತೀ ಇತ್ಯಾದಿ ರೀತಿಯಲ್ಲಿ ಪ್ರಾಮಾಣಿಕಗಳಾದ ಅನೇಕ ಮುಖ್ಯವೃತ್ತಿಯಿಂದಲೇ ಲಬ್ಧವಾದ ಅರ್ಥಗಳು ಸಂಭವಿಸುವುವು. "**ಸನ್ಮೂಲಾಃ ಸರ್ವಾ ಇಮಾಃ ಪ್ರಜಾಃ**" ಇತ್ಯಾದಿ ಶ್ರುತಿಗೆ ಅನುಗುಣವಾಗಿಯೂ ಇರುವುವು. ಐಕ್ಯಾರ್ಥವು ಅಮುಖ್ಯವೃತ್ತಿಯಿಂದ ಲಬ್ಧವಾದ ಅರ್ಥವಾಗಿಯೂ ಸರ್ವಪ್ರಮಾಣಗಳಿಗೂ ವಿರುದ್ಧವಾಗಿಯೂ ಇರುವುದು. 5. ಕಿಂಚ ಸ ಆತ್ಮಾ+ಅತತ್ವಮಸಿ ಎಂದೂ ಪದಚ್ಛೇದವು ಈ ಸ್ಥಳದಲ್ಲಿ ಸಂಭವಿಸುವುದು. ನೀನು ಬ್ರಹ್ಮನಿಂದ ಭಿನ್ನನಾಗಿದ್ದೀ ಎಂದು ಮುಖ್ಯಾರ್ಥವೇ ಲಭಿಸುವುದು. ಒಂಭತ್ತು ದೃಷ್ಟಾಂತಗಳೂ ಭೇದಪರವಾಗಿಯೇ ಇರುವುವೆಂದು ಅದ್ವೈತಿಗಳೂ ಒಪ್ಪಿರುತ್ತಾರಾದ್ದರಿಂದ ದೃಷ್ಟಾಂತಾನುಗುಣ್ಯರೂಪವಾದ ಉಪಪತ್ತಿಯೂ "ಭೇದ" ಪರವಾಗಿ ಅರ್ಥಮಾಡುವುದರಲ್ಲಿ ಸಹಾಯವಾಗಿರುವುದು.

ಈ ರೀತಿಯಾಗಿ **ಅಮುಖ್ಯವೃತ್ತಿಯಿಂದಲೂ ಜೀವಬ್ರಹ್ಮರು ಅಭಿನ್ನರು ಎಂದು ತೋರಿಸತಕ್ಕ ಒಂದು ಶ್ರುತಿಯೂ ಇರುವುದಿಲ್ಲ**

ಎಂದು ಸಿದ್ಧವಾಯಿತು. ಏವಂಚ ನಿರ್ಗುಣಬ್ರಹ್ಮನಾಗಲೀ, ಬ್ರಹ್ಮೈಕ್ಯವಾಗಲೀ ಪ್ರಮಾಣಗಳಿಂದ ಪ್ರಮಿತವಾಗಲಿಲ್ಲ. ಮತ್ತು ಗಗನಕುಸುಮದಂತೆ ಅಪ್ರಸಿದ್ಧವಾಗಿರುವುದರಿಂದ ಐಕ್ಯಾನುಭವವು ಮುಕ್ತಿಯೆಂಬ ತತ್ವವು ವಂಧ್ಯಾಪುತ್ರನ ಮದುವೆಯಂತೆ ಕಾದಂಬರೀಗ್ರಂಥಗಳಿಗೆ ಉಚಿತವಾದ ಪ್ರಮೇಯವಾಗಿಹೋಯಿತು.*

ಪ್ರಶ್ನೆ—ಸ್ವಾಮಿ! ಜೀವಬ್ರಹ್ಮರ ಐಕ್ಯವು ವೇದಾದಿ ಪ್ರಮಾಣಗಳಿಂದ ಸಿದ್ಧವಾಗತಕ್ಕದ್ದಲ್ಲ. ಬ್ರಹ್ಮನು ಸ್ವಪ್ರಕಾಶನು, ಐಕ್ಯವು ಬ್ರಹ್ಮಾತ್ಮಕವೇ, ಐಕ್ಯಾನುಭವವು ವೇದಾದಿಗಳಿಂದ ಬರಬೇಕಾದುದಿಲ್ಲ. ಅದು ವಿಲಕ್ಷಣವಾಗಿ ಬೇರೆ ರೀತಿಯಿಂದ ಬರುವುದು. ಆದುದರಿಂದ ಜೀವಬ್ರಹ್ಮರ ಐಕ್ಯದಲ್ಲಿ ಪ್ರಮಾಣವಿಲ್ಲವೆಂದಾಗಲೀ ಐಕ್ಯಾನುಭವವು ಮುಕ್ತಿಯಲ್ಲವೆಂದಾಗಲೀ ಹೇಗೆ ಹೇಳುವುದು ?

ಉತ್ತರ—ಇದು ಚಮತ್ಕಾರದ ಮಾತು. ನಿಜವಾಗಿಯೂ ಅದ್ವೈತಶಾಸ್ತ್ರಾಭಿಜ್ಞರೂ ಸಹ ಕೆಲವರು ಪದೇ ಪದೇ ಹೀಗೆಯೇ ಹೇಳುತ್ತಿರುತ್ತಾರೆ. ತತ್ವವಿಮರ್ಶೆಮಾಡದ ಜನರಿಗೆ ಈ ಮಾತಿನಲ್ಲಿ ಏನೋ ಅಗಾಧವಾದ ಪ್ರಮೇಯವಿರುವಂತೆ ಆಪಾತಭ್ರಮವೂ ಬರುವುದು. ಆದುದರಿಂದ ಈ ಪ್ರಶ್ನೆಯು ಸಮಯೋಚಿತವೇ ಆಗಿರುವುದು. ವಸ್ತುತತ್ವವೇನೆಂದರೆ, ಅದ್ವೈತಾತ್ಮನು (ಬ್ರಹ್ಮಾ

---

* ಬ್ರಹ್ಮನು ಅಜ್ಞೇಯನೆಂದು ಹೇಳುವ ತತ್ವವು ಸರ್ವ ಪ್ರಕಾರದಲ್ಲೂ ಅಬದ್ಧವೆಂದು ಸಯುಕ್ತಿಕವಾಗಿ ಒಬ್ಬ ಅಮೆರಿಕ ಗ್ರಂಥಕರ್ತನು ತೋರಿಸಿರುತ್ತಾನೆ :—

"It (the Adwaita Philosophy) tells us of an omnipresent, eternal, boundless and immutable principle on which all speculation is impossible since it is beyond the range of all thoughts and is both unthinkable and unspeakable. Then we have a right to say that we do not think that it is omnipresent or that it is eternal and immutable since such stuff is as bad as anything."

ಅರ್ಥವು :— ಈ ಅದ್ವೈತತತ್ವವು ವ್ಯಾಪ್ತವಾದ, ನಿತ್ಯವಾದ, ಅಪರಿಚ್ಛಿನ್ನವಾದ, ಅಕ್ಷರವಾದ, ಮತ್ತು ಮನಸ್ಸಿಗೂ ವಾಕ್ಕುಗಳಿಗೂ ಸರ್ವಥಾ ಅಗೋಚರವಾದ, ಆದುದರಿಂದಲೇ ವಿಚಾರಕ್ಕೂ ವಿಷಯವಾಗದ ಒಂದು ತತ್ವವನ್ನು ಹೇಳುತ್ತದೆ. (ಅದು ನಮಗೆ ಸರ್ವಥಾ ಅಜ್ಞೇಯವೆಂದು ಹೇಳಿ ಅದು ವ್ಯಾಪ್ತವು. ನಿತ್ಯವು, ಎಂದು ಹೇಳುವುದು ಹೇಗೆ?) ಅದು ವ್ಯಾಪ್ತವಲ್ಲ, ನಿತ್ಯವಲ್ಲ, ಅನಂತವಲ್ಲ ಎಂದು ಯಾತಕ್ಕೆ ನಾವು ಹೇಳಬಾರದು ? ಯಾತಕ್ಕೆಂದರೆ ಅಂಥಾ ಸುತರಾಂ ಅವೇದ್ಯವಾದ ಪದಾರ್ಥವು ಹೇಯ ಪದಾರ್ಥಗಳಲ್ಲೆಲ್ಲಾ ಅತ್ಯಂತ ಹೇಯವು.

ತ್ಮಕವಾದ ಜೀವಬ್ರಹ್ಮೈಕ್ಯವು) ಸ್ವಪ್ರಕಾಶನೆಂದರೆ ಅವೇದ್ಯನೆಂದರ್ಥವು. "ಅವೇದ್ಯತ್ವಂ ಸ್ವಪ್ರಕಾಶತ್ವಂ" ಎಂಬುದು ಅದ್ವೈತಿಗಳ ಪರಿಷ್ಕಾರವು. ಎಂದರೆ ಯಾರಿಗೂ ಯಾವ ಕಾಲದಲ್ಲೂ ಬ್ರಹ್ಮನಾಗಲೀ, ಬ್ರಹ್ಮೈಕ್ಯವಾಗಲೀ ಇರುವುದೆಂದು ತಿಳಿಯಲಾಗುವುದಿಲ್ಲ ಎಂದು ಇದರ ತಾತ್ಪರ್ಯವು. ಇಂಥಾ ಅವೇದ್ಯವಾದ ಬ್ರಹ್ಮೈಕ್ಯವು ಇರುವುದೆಂದು ಹೇಗೆ ಹೇಳುವುದು?

ಪ್ರಾಶ್ನಿಕರು—ಸ್ವಾಮಿ! ವೇದದಿಂದ ಬ್ರಹ್ಮೈಕ್ಯವು ಇರುವುದೆಂದು ಸಾಮಾನ್ಯವಾಗಿ ತಿಳಿದ ಮೇಲೆ ಬ್ರಹ್ಮಾನುಭವವು ತನ್ನಷ್ಟಕ್ಕೆ ತಾನೇ ಸ್ಫುರಿಸುವುದು. ಇದೇ ಅದ್ವೈತಾತ್ಮ ಸಾಕ್ಷಾತ್ಕಾರವು, ಇದೇ ಮುಕ್ತಿಯು ಎಂದು ಯಾತಕ್ಕೆ ಹೇಳಬಾರದು?

ಶ್ರೀ ಶ್ರೀಗಳವರು—ವೇದದಿಂದ ಜೀವಬ್ರಹ್ಮರು ಅಭಿನ್ನರೆಂಬ ಜ್ಞಾನವು ಸರ್ವಥಾ ಬರಲಾರದೆಂದು ನಾವು ನಿರೂಪಿಸಿದೆವು. ತತ್ವಮಸ್ಯಾದಿ ವಾಕ್ಯಗಳು ಹೊರತು ಉಳಿದ ಉಪನಿಷದಾದಿ ಸರ್ವ ವೇದಭಾಗಗಳೂ ಭೇದವನ್ನೇ ಬೋಧಿಸುತ್ತವೆ ಎಂದು ಶಾಂಕರಭಾಷ್ಯ ವಚನವೇ ಇರುತ್ತದೆ. ತತ್ವಮಸ್ಯಾದಿ ವಾಕ್ಯಗಳೂ ಸಹ ಲಕ್ಷಣಯಾ ಅಖಂಡಾರ್ಥಬೋಧಕವು (ಚಿತ್ ಎಂದು ಇಷ್ಟೇ ಬೋಧವನ್ನು ಹುಟ್ಟಿಸುವುವು) ಎಂದು ಅದ್ವೈತಿಗಳು ಅಂಗೀಕರಿಸಿರುವುದರಿಂದ ಜೀವಬ್ರಹ್ಮರು ಅಭಿನ್ನರು ಎಂಬ ಜ್ಞಾನವನ್ನು ಹುಟ್ಟಿಸತಕ್ಕ ಒಂದು ವಾಕ್ಯವೂ ಇಲ್ಲವೇ ಇಲ್ಲ ಎಂದು ನಾವು ತೋರಿಸಿರುತ್ತೇವೆ. 2. ಮತ್ತು ಲಕ್ಷಣಯಾ ಅಭೇದಜ್ಞಾನವು ಬರುವುದಕ್ಕೆ ಅವಕಾಶವಿರುವುದಿಲ್ಲವೆಂಬಲ್ಲಿ ಯುಕ್ತಿಯನ್ನೂ ನಿರೂಪಿಸಿರುತ್ತೇವೆ. ಪೂರ್ವದಲ್ಲಿ ಸರ್ವಥಾ ಅಜ್ಞಾತವಾದ ತತ್ವವು ಪ್ರಕೃತವಾಕ್ಯದಲ್ಲಿ ಲಕ್ಷಣಾವೃತ್ತಿಯಿಂದಲಾದರೂ ತಿಳಿಯಲ್ಪಡುವುದಿಲ್ಲ. ಆದುದರಿಂದ ಅದ್ವೈತಮತದರೀತ್ಯಾ "ಬ್ರಹ್ಮ" ಜ್ಞಾನವಾಗಲೀ "ಬ್ರಹ್ಮೈಕ್ಯ" ಜ್ಞಾನವಾಗಲೀ ಯಾವರೀತಿಯಿಂದಲೂ ವೇದದಿಂದ ಹುಟ್ಟದಿರುವುದರಿಂದ ಬ್ರಹ್ಮಸ್ಫುರಣವು ಅಥವಾ ಐಕ್ಯಾನುಭವವು ಮುಕ್ತಿಯೆಂದು ಹೇಳುವುದು ಅಸಂಭಾವಿತವು.

ಪ್ರಾಶ್ನಿಕರು—ಸ್ವಾಮಿ! ಇದು ನನ್ನ ಅಭಿಪ್ರಾಯವು. ವೇದವು ಐಕ್ಯಬೋಧಕವಾಗಬೇಕಾದುದಿಲ್ಲ. ಅಜ್ಞೇಯನಾದ ಬ್ರಹ್ಮನನ್ನು ವೇದವು ತಿಳಿಸುವುದೂ ಅಸಂಭಾವಿತವು. ಆದರೆ "ತತ್ವಮಸಿ ಅಹಂ ಬ್ರಹ್ಮಾಸ್ಮಿ" ಇತ್ಯಾದಿ ಉಪನಿಷದ್ವಾಕ್ಯಗಳನ್ನು ಶ್ರವಣಮಾಡಿದಾಗ ಅವುಗಳ ವಾಕ್ಯಾರ್ಥಪರ್ಯಾಲೋಚನೆಯನ್ನು ಮಾಡದೇ ಇದ್ದರೂ ಒಂದು ವಿಧವಾದ ಆನಂದದ ಪರವಶತೆಯು

ಬರುವುದು. ಆ ಉತ್ತಮಾವಸ್ಥೆಯಲ್ಲಿ ಅದ್ವೈತಾತ್ಮನು ಸ್ಫುರಿಸುವನು! ಅದೇ ಐಕ್ಯಾನುಭವವು. ಆಗ ಪ್ರಪಂಚವು ಒಂದೂ ಇರುವುದಿಲ್ಲ. ನಾನೂ ಬ್ರಹ್ಮಾನಂದದಲ್ಲಿ ವಿಲೀನನಾಗಿ ಹೋಗಿರುವೆನು. ಇಂಥಾ ಅನುಭವದಿಂದ ಅದ್ವೈತಾತ್ಮನು ಉಂಟೆಂದೂ, ಐಕ್ಯವು ಪ್ರಾಮಾಣಿಕವೆಂದೂ ತಿಳಿಯಬಹುದು.

ಈ ರೀತಿ ಶಂಕರಾಚಾರ್ಯರ ತತ್ವವನ್ನು ಉಪಪಾದನೆ ಮಾಡಿ ಹೇಳಿದರೆ ಒಂದು ವಿಧವಾಗಿ ಮನಸ್ಸಿಗೆ ಬರುವುದೆಂದು ಕೆಲವರು ಪಾಶ್ಚಾತ್ಯರೂ ಹೇಳುತ್ತಾರೆ.

ಶ್ರೀ ಶ್ರೀಗಳವರು—ಶಾಸ್ತ್ರಾನಭಿಜ್ಞರಾದ ಎಷ್ಟೋ ಜನ ಹಿಂದೂಗಳೂ ಹೀಗೆಯೇ ತಿಳಿದಿರುವರು. ಆದರೆ ನಿಮ್ಮ ಮಾತು ಇಷ್ಟಕ್ಕೆ ಇಳಿಯಿತು. ಬ್ರಹ್ಮಸ್ಫುರಣದಲ್ಲಿ ಅಥವಾ ಬ್ರಹ್ಮೈಕ್ಯಾನುಭವದಲ್ಲಿ ವೇದಶ್ರವಣವೇ ನಿಮಿತ್ತಕಾರಣವು. ವೇದಾರ್ಥ ಪರಿಜ್ಞಾನವು ಬೇಕಾಗಿಲ್ಲ.

ಪ್ರಾಶ್ನಿಕರು—ಹೌದು! ವೇದಾರ್ಥವಿಚಾರಮಾಡಿದರೆ ತಾವು ಹೇಳಿದ ಅನುಪಪತ್ತಿಗಳೆಲ್ಲಾ ತಲೆದೋರಿ ವಾಕ್ಯಾರ್ಥನಿರ್ಣಯವೇ ಉತ್ಪನ್ನವಾಗದೆ ವಿಚಾರಶಕ್ತಿಯು ಹೆಚ್ಚಿ ಅನುಭವಸಾಮರ್ಥ್ಯವು ಕುಂಠಿತವಾಗುವುದು. ಹೆಚ್ಚು ಬುದ್ಧಿಯು ಆತ್ಮಾನುಭವಕ್ಕೆ ಪ್ರತಿಬಂಧಕವೆಂದು ಕೆಲವರು ಪಾಶ್ಚಾತ್ಯರೂ ಹೇಳಿರುವರು.

ಶ್ರೀಶ್ರೀಗಳವರು—ಇದು ಶ್ರವಣಾನುಸ್ರೋತರೂಪವಾದ ಪ್ರಕ್ರಿಯೆಯು. ಸ್ವಲ್ಪ ವಿಚಾರವು ಅವಶ್ಯಕವು! "ಮಾನಾಧೀನಾಮೇಯಸಿದ್ಧಿಃ" ಎಂಬ ಸರ್ವಸಮ್ಮತವಾದ ನ್ಯಾಯವಿರುವುದು. ಒಂದು ವಸ್ತುವು ಇರುವುದೆಂದು ತಿಳಿಯಬೇಕಾದರೆ ಪ್ರತ್ಯಕ್ಷವೋ, ಅನುಮಾನವೋ, ಆಗಮವೋ ಯಾವುದಾದರೂ ಒಂದು ಪ್ರಮಾಣವಿರಬೇಕು. ಯಾವ ಪ್ರಮಾಣದಿಂದಲೂ ತಿಳಿಯಲ್ಪಡದೇ ಇರುವ ವಸ್ತುವು ಶಶವಿಷಾಣದಂತೆ ಅಸತ್ತೆನಿಸುವುದು. ವಸ್ತುಸದ್ಭಾವವನ್ನು ನಿಶ್ಚಯಿಸುವ ಪ್ರಮಾಣಗಳು ಆರು ಇರುವುವೆಂದು ಅದ್ವೈತಿಗಳು ಹೇಳಿರುತ್ತಾರೆ. ಪ್ರತ್ಯಕ್ಷ, ಅನುಮಾನ, ಆಗಮ, ಅರ್ಥಾಪತ್ತಿ, ಉಪಮಾನ, ಅನುಪಲಬ್ಧಿ ಎಂಬ ಆರು ಪ್ರಮಾಣಗಳಿರುವುವು. ಬ್ರಹ್ಮನು ಮತ್ತು ಐಕ್ಯವು ಈ ಆರು ಪ್ರಮಾಣಗಳಿಂದ ಗಮ್ಯವಲ್ಲ ಎಂದು ನೀವು ಒಪ್ಪಿದಮೇಲೆ ಅದು ಶಶವಿಷಾಣದಂತೆ 'ಅಸತ್' ಆಯಿತೆಂದೂ ನೀವು ಒಪ್ಪಲೇಬೇಕು. 2. ಈ ಆರಕ್ಕಿಂತ ಭಿನ್ನವಾದ ಅನುಭವವೆಂಬ ಒಂದು ಪ್ರಮಾಣವಿರುವುದು. ಅದರಿಂದ ನಾವು ಬ್ರಹ್ಮನನ್ನೂ ಐಕ್ಯವನ್ನೂ ತಿಳಿಯುವೆವು ಎಂದು ನೀವು ಹೇಳಬಹುದು. ಆದರೆ ಬ್ರಹ್ಮವು ಅಥವಾ ಐಕ್ಯವು ಎಂಬ

ಒಂದು ವಸ್ತುವು ಇರುವುದೆಂದು ವೇದದಿಂದ ನಿಶ್ಚಯಮಾಡಿಕೊಂಡು ಉಪಾಸನೆಮಾಡಿ ನಂತರ ಬಳಸೆಯುದಾದ ಅನುಭವಪ್ರಮಾಣದಿಂದ ವೇದೋಕ್ತತತ್ವವನ್ನು ತಿಳಿಯುವೆವು ಎಂದು ನೀವು ಹೇಳಲಾಗುವುದಿಲ್ಲ- ಹೇಗೆಂದರೆ ವೇದಾರ್ಥಜ್ಞಾನವು ಅನಾವಶ್ಯಕವೆಂದು ನೀವೇ ಹೇಳಿಬಿಟ್ಟಿರಿ. ಮತ್ತು ವೇದಾರ್ಥವಿಮರ್ಶೆ ಮಾಡಿದರೂ ಐಕ್ಯವು ಅಥವಾ ನಿರ್ಗುಣಬ್ರಹ್ಮವಸ್ತುವು ವೇದದಿಂದ ಸಿದ್ಧಿಸುವುದಿಲ್ಲವೆಂದು ನಾವೂ ತೋರಿಸಿರುತ್ತೇವೆ. ಆದುದರಿಂದ ವೇದದಿಂದ ಬ್ರಹ್ಮವಸ್ತುವು ಅಥವಾ ಐಕ್ಯವು ಇರುವುದೆಂದು ತಿಳಿಯದಿದ್ದರೂ, ಸಾಕ್ಷಾತ್ತಾಗಿ ಯಾವ ತೊಂದರೆಯೂ ಇಲ್ಲದೆ ಅನುಭವವೆಂಬ ಬಳಸೆಯ ಪ್ರಮಾಣದಿಂದ ಬ್ರಹ್ಮಾನುಭವವನ್ನು ಹೊಂದುವೆವು ಎಂದು ನೀವು ಹೇಳಿದರೆ, ನಿಮ್ಮ ಸಪ್ತಮಪ್ರಮಾಣದಿಂದ ಸಿದ್ಧವಾದ ಈ ನವೀನ ಮತವು ಅವೈದಿಕವಾಯಿತು. ಇದು ವೇದದಿಂದ ಪ್ರಾಪ್ತವಾದುದಲ್ಲ.

ಪ್ರಾಶ್ನಿಕರು—ಇದು ಏನು ಮಾತು ಮಹಾಸ್ವಾಮಿ! ನಮ್ಮ ಮತವು ಅವೈದಿಕಮತವಾದರೆ ಚಿಂತೆಯಿಲ್ಲ. ಮಿಥ್ಯಾಭೂತವಾದ ವೇದದಿಂದ ನಮಗೆ ಆಗತಕ್ಕ ಉಪಕಾರವು ಅಷ್ಟೇ ಇರುವುದು. ಆದರೂ ನಮ್ಮ ಮತವು **ಆನುಭಾವಿಕ ಮತವು.** ಪ್ರಮಾಣತಮವಾದ ಸಪ್ತಮಪ್ರಮಾಣದಿಂದಲೇ ಸಿದ್ಧವಾಗಿರುವುದು.

ಶ್ರೀ ಶ್ರೀಗಳವರು—1. ಕೇವಲ ಅನುಭವದಿಂದ ನಿರ್ಗುಣಬ್ರಹ್ಮವನ್ನೂ ಬ್ರಹ್ಮಾತ್ಮಕವಾದ ಐಕ್ಯವನ್ನೂ ತಿಳಿಯಬಹುದಾಗಿದ್ದರೆ, ದ್ವೈತಾದ್ವೈತ ಕಲಹವು ಹುಟ್ಟುತ್ತಲೇ ಇರಲಿಲ್ಲ. "ನಾನು" ಎಂಬ ಪದಾರ್ಥವು ಅನುಭವಸಿದ್ಧವಾಗಿರುವುದು. ಕಾಲ, ಆಕಾಶಾದಿಗಳೂ ಅನುಭವಸಿದ್ಧವಾಗಿರುವುವು. ನಾನು ಇದ್ದೇನೋ ಇಲ್ಲವೋ ಎಂಬ ಸಂಶಯವು ಯಾರಿಗೂ ಬರುವುದಿಲ್ಲ. ಈ ವಿಷಯಗಳಲ್ಲಿ ವಾದಿಗಳಿಗೆ ಕಲಹವೂ ಬರುವುದಿಲ್ಲ ಬ್ರಹ್ಮೈಕ್ಯವು ಸರ್ವಾನುಭವಸಿದ್ಧವಾಗಿದ್ದರೆ ಅದ್ವೈತಮತವು ಅಪ್ರಾಮಾಣಿಕವೆಂದು ದ್ವೈತಿಗಳು ಯಾರೂ ಹೇಳುತ್ತಿರಲಿಲ್ಲ. ಭಯಂಕರವಾದ ವಿವಾದವು ನಡೆಯುತ್ತಿರುವುದರಿಂದ ಬ್ರಹ್ಮೈಕ್ಯಾನುಭವವೆಂಬ ಪದಾರ್ಥವು ಅಪ್ರಸಿದ್ಧವೇ ಸರಿ!

2. ಸಾರ್ವಕಾಲಿಕವಾದ ಐಕ್ಯಾನುಭವವು ಇಲ್ಲದಿದ್ದರೆ ಹೋಗಲಿ! ಯಾರಿಗಾದರೂ ಯಾವುದಾದರೂ ಒಂದು ಕಾಲದಲ್ಲಿ ಐಕ್ಯಾನುಭವವು ಬಂದಿರುವುದೆಂಬಲ್ಲಿ ನಹ ಪ್ರಮಾಣವಿರುವುದಿಲ್ಲ. ವೇದವು ಪ್ರಮಾಣವಾದರೂ ವೇದವೆಂಬ ಪದಾರ್ಥ ಸದ್ಭಾವವನ್ನು ಶ್ರೋತ್ರೇಂದ್ರಿಯದಿಂದ **ನಾವು** ತಿಳಿಯಬೇಕು.

ಹೀಗೆಯೇ ಅನುಭವವು ಪ್ರಮಾಣವಾದರೂ ಅನುಭವವೆಂಬ ಪದಾರ್ಥಸದ್ಭಾವವನ್ನು **ನಾವು** ಪ್ರತ್ಯಕ್ಷಾನುಮಾನಾಗಮಗಳಲ್ಲಿ ಯಾವುದಾದರೂ ಒಂದು ಪ್ರಮಾಣದಿಂದ ತಿಳಿಯಬೇಕು. ಬ್ರಹ್ಮೈಕ್ಯಾನುಭವವೆಂಬ ಪದಾರ್ಥವು ಇರುವುದೆಂದು ಪ್ರತ್ಯಕ್ಷವಿರುವುದಿಲ್ಲ. ಅನುಮಾನವಿರುವುದಿಲ್ಲ. ಬ್ರಹ್ಮೈಕ್ಯವನ್ನೇ ಪ್ರತಿಪಾದನೆ ಮಾಡಲು ಅಸಮರ್ಥವಾಗಿರುವ ಆಗಮವು ಐಕ್ಯಾನುಭವವು ಇರುವುದೆಂದು ಹೇಗೆ ತಿಳಿಸಿಕೊಡುವುದು ? ಬ್ರಹ್ಮನೂ, ಬ್ರಹ್ಮೈಕ್ಯವೂ ಶಶವಿಷಾಣದಂತೆ ಅಪ್ರಸಿದ್ಧವಾದಂತೆ ಐಕ್ಯಾನುಭವವೂ ಶಶವಿಷಾಣದಂತೆ ಅಪ್ರಸಿದ್ಧವಾಯಿತು.

3. ಕಿಂಚ ಈ ತತ್ವವು ಮಹಾವಂಚನೋಪಾಯಗಳಿಗೆ ಆಕರವಾದ ಪ್ರಕ್ರಿಯೆಯು. ನಾನು ಮುಕ್ತನು, ನಾನು ಐಕ್ಯಾನುಭವವುಳ್ಳವನು ಎಂದು ಒಬ್ಬೊಬ್ಬರೂ ಆಕಾಶಕ್ಕೆ ತಲೆಯೆತ್ತಿ ಕಣ್ಣು ಮುಚ್ಚಿಕೊಂಡು ಕುಣಿಯುವುದಕ್ಕೆ ಆರಂಭಿಸಿದರೆ ಲೋಕದ ಸರ್ವಧರ್ಮಗಳೂ ವಿನಷ್ಟವಾಗುವುದರಲ್ಲಿ ಸಂಶಯವಿಲ್ಲ. 4. ಮತ್ತು ಮತ್ತೊಬ್ಬನು ನನಗೆ ಭೇದಾನುಭವವು ಬಂದಿರುವುದು. ನನಗೆ ಬ್ರಹ್ಮದರ್ಶನವಾಯಿತು. ಬ್ರಹ್ಮನು ಭಿನ್ನನು ಎಂದೂ ವಾದಿಸುವುದರಲ್ಲಿ ಸಂಶಯವೇ ಇಲ್ಲ. ಬೌದ್ಧನು ನನಗೆ ನಿರ್ವಾಣದ ಅನುಭವವಾಯಿತೆಂದೂ ಹೇಳುವನು. ಹೀಗೆಯೇ ಆಯಾಯ ವಾದಿಗಳು ತಮತಮಗೆ ಇಷ್ಟವಾದ ತತ್ವವು ಅನುಭವದಿಂದ ಸಿದ್ಧಿಸುವುದೆಂದು ವಾದಿಸುವುದಕ್ಕೆ ಯತ್ನಮಾಡಿ ಸ್ವಲ್ಪದಿವಸದಲ್ಲಿಯೇ ಈಗಿರುವುದಕ್ಕಿಂತ ಹೆಚ್ಚಾದ ಜಗದಾಂಧ್ಯವು ಪ್ರಾಪ್ತವಾಗುವುದರಲ್ಲಿ ಸಂಶಯವಿಲ್ಲ. 5. ಪರಂತು ಅದ್ವೈತಮತದಲ್ಲಿ ಯಾವ ಪುರುಷನೂ ನನಗೆ ಐಕ್ಯಾನುಭವವು ಬಂದಿರುವುದೆಂದು ಹೇಳಲಾರನು. ಐಕ್ಯಾನುಭವವುಳ್ಳವನು ತತ್ಕ್ಷಣದಲ್ಲಿ ದೇಹಾದಿಗಳಿಂದ ರಹಿತನಾಗಿ ವಿಲೀನನಾಗುವನು. ಯಾವನು ತನ್ನ ಅನುಭವವು ಇಂಥಾದ್ದೆಂದು ವರ್ಣಿಸುವುದಕ್ಕೆ ಸಮರ್ಥನೋ ಅವನು ವಿನಷ್ಟನಾಗಿಹೋಗುವನು. ಯಾವನು ವಾಗಾದಿ ಇಂದ್ರಿಯಗಳುಳ್ಳವನಾಗಿ ಉಪದೇಶ ಮಾಡುವುದಕ್ಕೆ ಸಮರ್ಥನೋ ಅವನು ಐಕ್ಯಾನುಭವವಿಲ್ಲದವನು.* ಆದುದರಿಂದ ಅದ್ವೈತಮತದಲ್ಲಿ ಐಕ್ಯಾನುಭವ ಸದ್ಭಾವಬೋಧಕವಾದ ಪ್ರಮಾಣವು ಇರುವುದಿಲ್ಲ.

---

* ಜಿ. ಡಾಂಡಾಯ್‌ನಾಮಕ ಗ್ರಂಥಕರ್ತನು ಅನುಭವದಿಂದ ಬ್ರಹ್ಮಾನುಭವವು ಬರುವುದು ಎಂದು ಹೇಳುವ ವಾದವನ್ನು ವಿನೋದೋಕ್ತಿಯಿಂದ ದೂಷಿಸಿರುತ್ತಾನೆ.—

As in the Eastern Apologue so in the Advaita, it is only the Moth who penetrated into the very heart of the fire who,

6. ಕಿಂಚ ವೇದದ ವಿಚಾರ ನಿರಪೇಕ್ಷವಾಗಿ ಕೇವಲ ಅನುಭವದಿಂದ ತತ್ವವನ್ನು ತಿಳಿಯುವುದು ಅಶಕ್ಯವು. ವೇದಶ್ರವಣ ಮಾತ್ರದಿಂದ ಐಕ್ಯಾನುಭವಪ್ರಾಪ್ತಿಯು ಅಸಂಭಾವಿತವು. ವೇದದಿಂದ ಪರಬ್ರಹ್ಮಸ್ವರೂಪವನ್ನು ಯಥಾರ್ಥವಾಗಿ ತಿಳಿದು ಬಹುಕಾಲ ಧ್ಯಾನಮಾಡಿದ ನಂತರ ಸಮಾಧಿ ಪರಿಪಾಕಾವಸ್ಥೆಯಲ್ಲಿ ಬ್ರಹ್ಮಸಾಕ್ಷಾತ್ಕಾರವಾಗುವುದು. ತದನಂತರ ಮುಕ್ತಿಯಾಗುವುದೆಂದು ಸರ್ವ ವೈದಿಕರೂ ಸಾಮಾನ್ಯವಾಗಿ ಒಪ್ಪಿರುತ್ತಾರೆ. ತತ್ವಮಸಿ ಮುಂತಾದ ವಾಕ್ಯಶ್ರವಣ ಮಾತ್ರದಿಂದ ಐಕ್ಯವು ಸ್ಫುರಿಸಬಹುದಾದರೆ ಮಂತ್ರದಿಂದ ಬ್ರಹ್ಮಸಾಕ್ಷಾತ್ಕಾರವಾಗುವುದೆಂದು ಹೇಳಿದಂತಾಯಿತು. ಆದರೆ "ಆತ್ಮಾ ವಾ ಅರೇ.... ಮಂತವ್ಯೋ ನಿಧಿಧ್ಯಾಸಿತವ್ಯಃ" ಎಂಬ ಶ್ರುತಿಯು ಮನನಧ್ಯಾನಾದಿಗಳನ್ನು ನಿರೂಪಿಸಿ ಯಂತ್ರಮಂತ್ರಾದಿಗಳಿಂದ ಮುಕ್ತಿಯಾಗಲೀ ಬ್ರಹ್ಮಜ್ಞಾನವಾಗಲೀ ಬರುವುದಿಲ್ಲವೆಂದು ಹೇಳಿರುತ್ತದೆ. ಶ್ರೀಕೃಷ್ಣನೂ ಸಹ:—

ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ |—(4. 34.)

"Folded its wings till it became
One colour and one substance with the Flame,
He only knew the fire who in it burn'd
And only he could tell who ne'er to tell returned."

(ಅನುಭವದಿಂದ ಐಕ್ಯವು ಇರುವುದೆಂದು ಮತ್ತೊಬ್ಬರಿಗೆ ತಿಳಿಸುವುದು ಹೇಗೆ? ಐಕ್ಯಾನುಭವವುಳ್ಳವನು ಮಾತಾಡಲಾರನು. ಮಾತಾಡುವವನು ಐಕ್ಯಾನುಭವರಹಿತನು. ಹೀಗಿರುವುದರಿಂದ) ಪ್ರಾಚೀನ ಪದ್ಯದಲ್ಲಿ ಹೇಳಿರುವ ಮೇರೆಗೆ ಐಕ್ಯಾನುಭವದಿಂದ ಐಕ್ಯಸದ್ಭಾವವನ್ನು ತಿಳಿಯುವುದು ಪತಂಗಚರಿತ್ರ ಸದೃಶವಾಯಿತು. ಬೆಂಕಿಯ ತತ್ವವು ಏನೆಂದು ತಿಳಿಯಬೇಕೆಂಬ ಕುತೂಹಲದಿಂದ ಕೆಲವು ಪತಂಗಗಳು ತಮ್ಮ ಮುಖಂಡನನ್ನು ಪ್ರಾರ್ಥಿಸಲು, ಆ ಪ್ರಧಾನ ಪತಂಗವು ಒಳ್ಳೆಯದು ನಾನು ತಿಳಿಸಿ ಕೊಡುತ್ತೇನೆ ಎಂದು ಒಪ್ಪಿ ಮುಂದುವರಿದು ಥಟ್ಟನೆ ಉರಿಯುತ್ತಿದ್ದ ಅಗ್ನಿಯ ಮಧ್ಯಪ್ರದೇಶದಲ್ಲಿಯೇ ಹೋಗಿ ಬಿತ್ತು. ಅದಕ್ಕೆ ರೆಕ್ಕೆಗಳು ಹತ್ತಿಕೊಂಡು ಉರಿಯಲು ಅದು ಕೆಂಪಾಯಿತು; ಅದು ಅಗ್ನಿಯೇ ಆಗಿಹೋಯಿತು (ಇದಲ್ಲವೇ ಐಕ್ಯಪ್ರಾಪ್ತಿಯು ಮತ್ತು ಐಕ್ಯಾನುಭವವು!). ಉರಿಯುವ ಬೆಂಕಿಯಿಂದ ಸುಟ್ಟುಹೋದ ಆ ಪತಂಗಕ್ಕೆ ಅಗ್ನಿಯು ಎಂಥಾದ್ದೆಂದು ತಿಳಿದಿತ್ತು. ಆದರೆ ಇತರರಿಗೆ ಅಗ್ನಿತತ್ವದ ಸ್ವರೂಪವನ್ನು ತಿಳಿಸಿ ಕೊಡಲು ಸಮರ್ಥನಾಗಲಿಲ್ಲ. ಯಾವುದು ಅಗ್ನಿಸ್ವರೂಪವನ್ನು ಬಲ್ಲದೋ ಅದು ಮಾತಾಡಲಾರದು. ಅದು ಮರಳಿಬಂದು ತನ್ನ ಮಿತ್ರಮಂಡಲಿಗೆ ಅಗ್ನಿಸ್ವರೂಪವನ್ನು ನಿರೂಪಣೆ ಮಾಡಲಾರದು. ಹೀಗೆಯೇ ಐಕ್ಯಾನುಭವವು ಉಂಟೆಂದು ನಾವು ಹೇಗೆ ನಂಬುವುದು. ಪ್ರಮಾಣಾಂತರಗಳಿಂದ ಸರ್ವಥಾ ತಿಳಿಯುವ ಹಾಗಿಲ್ಲ.

ಎಂದು ಹೇಳಿರುತ್ತಾನೆ. ಜ್ಞಾತನ್ಯವಾದ ತತ್ವವನ್ನು ಜ್ಞಾನಿಗಳು ಉಪದೇಶಮಾಡುತ್ತಾರೆ ಎಂದು ಭಗವದ್ಗೀತೆಯಲ್ಲಿ ಹೇಳಿರುವುದೇ ಹೊರತು ಮಂತ್ರ ಪಠನಮಾಡಿ ಐಕ್ಯಾನುಭವವನ್ನು ಹುಟ್ಟಿಸುವರೆಂದು ಹೇಳಿರುವುದಿಲ್ಲ.

ಪ್ರಶ್ನೆ—ಸ್ವಾಮಿ! ಸಂಗೀತಶ್ರವಣದಿಂದ ಒಂದು ವಿಧವಾದ ಸಕಲ ಲೌಕಿಕಸ್ಮೃತಿನಾಶವೂ ಆನಂದ ತಾದಾತ್ಮ್ಯವೂ ಬರುವಂತೆ ತತ್ವಮಸ್ಯಾದಿ ವಾಕ್ಯ ಶ್ರವಣದಿಂದ ಐಕ್ಯಾಪರೋಕ್ಷಾನುಭವವು ಬರುವುದೆಂದು ಯಾತಕ್ಕೆ ಹೇಳಬಾರದು?

ಉತ್ತರ—7. ಹಾಗಾದರೆ ಅದ್ವೈತಿಗಳು ಇನ್ನುಮೇಲೆ ವೇದಾಂತ ವ್ಯಾಸಂಗವನ್ನು ಬಿಟ್ಟು, ಸಂಗೀತಶಾಸ್ತ್ರವನ್ನು ಅಭ್ಯಾಸಮಾಡಿ ಐಕ್ಯಾನುಭವವನ್ನು ಹೊಂದಬೇಕು. ವೇದಘೋಷಕ್ಕಿಂತ ಸಂಗೀತಶ್ರವಣದಿಂದಲೂ ನರ್ತನಾದ್ಯವಲೋಕನದಿಂದಲೂ ಅಧಿಕವಾದ ಆನಂದೋದ್ರೇಕವು ಇರುವುದರಿಂದ ಐಕ್ಯಾನುಭವವನ್ನು ಇಚ್ಛಿಸುವವರು ಕಲಾವಿದ್ಯೆಗಳಲ್ಲಿ ಆಸಕ್ತರಾಗಿ ಕಾಮಿನೀ ಪರಿರಂಭಣದಿಂದ ಆನಂದಾತ್ಮತೆಯನ್ನು ಹೊಂದುವುದಕ್ಕೆ ಪ್ರಯತ್ನಿಸಬೇಕಾಯಿತು. 8. ಪರಂತು ಕಾಮಿನೀ ಪರಿರಂಭಣದಲ್ಲಿಯೂ ಭೋಕ್ತೃಭೋಗ್ಯಭೋಗ ವಿವೇಕವು ನಾಶವಾಗುವುದಿಲ್ಲ ಮತ್ತು ಆನಂದತಾದಾತ್ಮ್ಯವೂ ಬರುವುದಿಲ್ಲವೆಂದು ನಾವು ಪೂರ್ವದಲ್ಲಿಯೇ ನಿರೂಪಿಸಿರುತ್ತೇವೆ. ಇದೇ ರೀತಿಯಲ್ಲಿ ಸಂಗೀತಶ್ರವಣಜನಿತ ಆನಂದದಲ್ಲಿ ಮಗ್ನನಾದ ಮನಸ್ಸುಳ್ಳ ಜೀವನು ಬಾಹ್ಯಚಿಂತೆಗಳನ್ನು ತೊರೆದು ಮಧುರವಾದ ಗಾನಜನಿತ ಆನಂದವನ್ನು ಅನುಭವಿಸುತ್ತಲೇ ಇರುವನು. ಆದುದರಿಂದ ಯಾವ ವಿಧದಿಂದ ವಿಮರ್ಶೆಮಾಡಿದರೂ ಅದ್ವೈತಬ್ರಹ್ಮನು, ಬ್ರಹ್ಮೈಕ್ಯವು ಮತ್ತು ಬ್ರಹ್ಮೈಕ್ಯಾನುಭವವೂ ಸಹ ಇರುವುವೆಂದು ಪ್ರಮಾಣಗಳಿಂದ ಸಿದ್ಧವಾಗುವುದಿಲ್ಲ. ಮತ್ತು ಬಹುಪ್ರಮಾಣಗಳಿಂದ ಇವುಗಳು ಇಲ್ಲವೇ ಇಲ್ಲವೆಂದೂ ಸ್ಪಷ್ಟವಾಗಿ ಪ್ರಮಿತವಾಗಿರುತ್ತದೆ.

ಆದುದರಿಂದ ದ್ವೈತತತ್ವದಲ್ಲಿ ಪ್ರತಿಪಾದಿತವಾದ ಮುಕ್ತ್ಯನುಭವವೇ ಯಥಾರ್ಥವು ಮತ್ತು ಸರ್ವ ಪ್ರಮಾಣಗಳಿಗೂ ಸಮ್ಮತವಾಗಿರುವುದು. ಅದ್ವೈತ ಮತದ ಐಕ್ಯಾನುಭವವಾದವೂ, ವಿಶಿಷ್ಟಾದ್ವೈತದ ಆನಂದಸಾಮ್ಯವಾದವೇ ಮೊದಲಾದ ಸಕಲ ಮತಗಳೂ ಅಪ್ರಾಮಾಣಿಕವಾಗಿರುವುದರಿಂದಲೇ, ಶ್ರೀಮದಾಚಾರ್ಯರು **ಭ್ರಾಂತಿಮೂಲತಯಾ ಸರ್ವಸಮಯಾನಾಮಯುಕ್ತಿತಃ** ಎಂದರೆ ಸಕಲ ಮತಗಳೂ ಕೆಲವು ವಿಷಯಗಳಲ್ಲಿ ಭ್ರಾಂತಿಮೂಲಕವಾಗಿರುವುವು,

ಎಂದರೆ ವೇದಶಾಸ್ತ್ರ ತಾತ್ಪರ್ಯಾಪರಿಜ್ಞಾನದಿಂದ ಹುಟ್ಟಿರುವುವೆಂದು ನಿರೂಪಿಸಿರುತ್ತಾರೆ. ವೇದತಾತ್ಪರ್ಯ ವಿರುದ್ಧವಾದ ಶಾಸ್ತ್ರಗಳು ತಾಮಸವೆಂದು ಪ್ರಸಿದ್ಧವಾಗಿರುವುದರಿಂದ ಅವುಗಳು ಮುಮುಕ್ಷುಗಳಿಂದ ಅಂಗೀಕಾರಾರ್ಹವಲ್ಲವೆಂದು ನಾವು ನಿರೂಪಿಸಿರುತ್ತೇವೆ.

ಶ್ರೀಕೃಷ್ಣಾರ್ಪಣಮಸ್ತು.

ಜಯತ್ಯಾನಂದತೀರ್ಥೇಷ್ಟದೇವತಾನರಕೇಸರೀ ।
ವಿಪಾಟಿತಾಜ್ಞಾನತಮಃ ಕಪಾಟಾತ್ಯುರುಹುಂಕೃತಃ ।
ಜಯತ್ಯಮಿತಪೌರುಷಃ ಸ್ವಜನತೇಷ್ಟಚಿಂತಾಮಣಿಃ ।
ಅಜೇಶಮುಖವಂದಿತೋಗುಣಗಣಾರ್ಣವಃ ಶ್ರೀಪತಿಃ ॥



ಮಾಧ್ವಗ್ರಾಹಕರಿಗೆ ಮಾತ್ರ ಈ ಪುಸ್ತಕಗಳು ದೊರೆಯುತ್ತವೆ.

(1) ಸಭಾಸಾರಸಂಗ್ರಹ (Volume I)
ಪ್ರಶ್ನೋತ್ತರಗಳು (ಕನ್ನಡ) 0—8—0

(2) ಸಭಾಸಾರಸಂಗ್ರಹ (Volume II)
ಗೀತೋಪನ್ಯಾಸಗಳು (ಕನ್ನಡ) Part I
(ಕ್ಯಾಲಿಕೋಬೈಂಡ್) 1—8—0

(3) ಸಭಾಸಾರಸಂಗ್ರಹ (Volume III)
ಗೀತೋಪನ್ಯಾಸಗಳು (ಕನ್ನಡ) Part II (in preparation)

(4) Dwaita Siddhanta Vichara and what came of it
(English—in preparation.)

ವಿ. ಪಿ. ಚಾರ್ಜು ಪ್ರತ್ಯೇಕ.

ಗ್ರಂಥ ದೊರೆಯುವ ಸ್ಥಳ:—

(1) **ಎಚ್. ಶ್ರೀನಿವಾಸಾಚಾರ್ಯರು,**
222, ಉತ್ತರಾದಿಮಠದಬೀದಿ,
ಹಳೇ ಅಗ್ರಹಾರ, ಮೈಸೂರು.

(2) **ವಿ. ಎನ್. ದೇಶಿಕಾಚಾರ್ಯರು, ಬಿ.ಎ.,**
ಲೈಬ್ರರಿಯನ್
ಎಸ್. ಎಂ. ಎಸ್. ಎ. ಸಭಾ, ಉತ್ತರಾದಿಮಠ ಬಿಲ್ಡಿಂಗ್ಸ್,
ಬಸವನಗುಡಿ, ಬೆಂಗಳೂರು ಸಿಟಿ.